ರಾಮಾನುಜ ದರ್ಶನ

ವೇದಾಂತ ವಿದ್ವಾನ್

ಡಾ॥ ಎ. ಎಸ್. ಅನಂತರಂಗಾಚಾರ್ಯ

ಡಿ. ವಿ. ಕೆ. ಮೂರ್ತಿ
ಕೃಷ್ಣಮೂರ್ತಿಪುರಂ : ಮೈಸೂರು–೪

acharya.org

Rāmanuja Darsٍana by Dr. N. S. Anantharangacharya in Kannada. Published by D. V. K. Murthy, Mysore 4. Dy. 8Vo 272 pp. Price Rs. 7-50

© ಡಾ॥ ಎನ್. ಎಸ್. ಅನಂತರಂಗಾಚಾರ್ಯ

ಬೆಲೆ : ರೂ. ೭-೫೦

ಮುದ್ರಕರು :
ಜಿ. ಎಚ್. ರಾಮರಾವ್
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

acharya.org

ಅರಿಕೆ

ವೇದಾಂತದರ್ಶನದ ಪ್ರಕಾರಗಳಲ್ಲಿ ಒಂದಾದ ವಿಶಿಷ್ಟಾದ್ವೈತದರ್ಶನ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಚಿತ್ತು, ಅಚಿತ್ತು ಮತ್ತು ಈಶ್ವರ ಎಂಬ ತತ್ತ್ವತ್ರಯವನ್ನು ಅಂಗೀಕರಿಸುವ ಈ ದರ್ಶನ ಶರೀರ–ಶರೀರಿ ಭಾವದ ನಿರೂಪಣೆಯನ್ನು ಮಾಡಿ ಚಿದಚಿದ್ವಿಶಿಷ್ಟವಾದ ತತ್ತ್ವ ಒಂದೇ ಎಂದು ಸ್ಥಾಪಿಸಿದೆ. ಅನಾದಿಯಾದ ಈ ಸಿದ್ಧಾಂತವನ್ನು ಭಗವದ್ರಾಮಾನುಜರು ಪ್ರವರ್ತನಗೊಳಿಸಿದರು. ಮುಂದೆ ಇದು 'ರಾಮಾನುಜ ದರ್ಶನ' ವೆಂದೇ ಪ್ರಸಿದ್ಧವಾಯಿತು.

ರಾಮಾನುಜದರ್ಶನದ ಸ್ವರೂಪವನ್ನಿಲ್ಲಿ ಅತಿಸಂಗ್ರಹವಾಗಿ ನಿರೂಪಿಸುವ ಪ್ರಯತ್ನಮಾಡಿದೆ. ಈ ದರ್ಶನವನ್ನು ಪ್ರವರ್ತನ ಮಾಡಿದ ಮಹಾನುಭಾವರ ಸೂಕ್ಷ್ಮ ಪರಿಚಯವನ್ನೂ, ಭಗವದ್ರಾಮಾನುಜರ ದಿವ್ಯ ಜೀವನವನ್ನೂ ಹಿನ್ನೆಲೆಯಾಗಿ ಇಲ್ಲಿ ನಿರೂಪಿಸಿದೆ. ಪ್ರಕೃತಿ, ಕಾಲ, ಧರ್ಮಭೂತಜ್ಞಾನ, ನಿತ್ಯವಿಭೂತಿ, ಜೀವಾತ್ಮರು, ಪರಮಾತ್ಮಾ ಇವರ ಸ್ವರೂಪವನ್ನೂ, ಮೋಕ್ಷೋಪಾಯವಾದ ಭಕ್ತಿ ಮತ್ತು ಪ್ರಪತ್ತಿಗಳ ಸ್ವರೂಪವನ್ನೂ, ಮೋಕ್ಷಸ್ವರೂಪವನ್ನೂ, ವೈಷ್ಣವಧರ್ಮದ ಸ್ವರೂಪವನ್ನೂ ಸ್ಥೂಲವಾಗಿ ವಿವೇಚಿಸಿ ಈ ದರ್ಶನಕ್ಕೂ ಇತರ ದರ್ಶನಗಳಿಗೂ ಇರುವ ಸಾಮ್ಯ ವೈಷಮ್ಯಗಳನ್ನು ಗುರುತಿಸುವ ಪ್ರಯತ್ನ ಮಾಡಿದೆ. ಇದರಿಂದ ರಾಮಾನುಜ ದರ್ಶನದ ಸ್ಥೂಲ ಪರಿಚಯ ಆಗಬಹುದೆಂದು ಆಶಿಸಲಾಗಿದೆ. ಹೆಚ್ಚಿನ ವಿವರಗಳನ್ನು ಇಲ್ಲಿ ನಿರೂಪಿಸುವುದಕ್ಕಾಗದೆ ಹೋದರೂ ಪ್ರಾಯಃ ಎಲ್ಲಾ ಮುಖ್ಯಾಂಶಗಳನ್ನೂ ಸೂಚಿಸಲಾಗಿದೆ. ಸಹೃದಯರಾದ ಕನ್ನಡಿಗರು ಇದನ್ನು ವಿಶ್ವಾಸದಿಂದ ಸ್ವೀಕರಿಸುವರೆಂದು ನಂಬಿದ್ದೇನೆ.

ಈ ಪ್ರಯತ್ನಕ್ಕೆ ಪ್ರೇರಣೆ ಮಾಡಿದವರೂ ಇದನ್ನು ಪ್ರಕಾಶಪಡಿಸಿ ಉಪಕಾರ ಮಾಡಿರುವವರೂ ಆದ ನನ್ನ ಸನ್ಮಿತ್ರರಾದ ಮಾನ್ಯ ಶ್ರೀ ಡಿ. ವಿ. ಕೆ. ಮೂರ್ತಿಯವರಿಗೆ ನಾನು ಚಿರಋಣಿ. ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಶ್ರೀ ಜಿ. ಎಚ್. ರಾಮರಾವ್ ಅವರಿಗೆ ನನ್ನ ಅನಂತ ವಂದನೆಗಳು.

ಎ. ಎಸ್. ಅನಂತರಂಗಾಚಾರ್ಯ

acharya.org

ಪರಿವಿಡಿ

೧. ಹಿನ್ನೆಲೆ ೩

೨. ಭಗವದ್ರಾಮಾನುಜರ ದಿವ್ಯ ಜೀವನ ೩೯

೩. ರಾಮಾನುಜ ದರ್ಶನ ಸ್ವರೂಪ ೫೯

೪. ವಿಶಿಷ್ಟಾದ್ವೈತವೂ ಇತರ ದರ್ಶನಗಳೂ ೨೦೧

೫. ಉಪಸಂಹಾರ ೨೪೪

೬. ಅನುಬಂಧಗಳು ೨೪೬

acharya.org

ರಾಮಾನುಜ ದರ್ಶನ

ಯೋ ನಿತ್ಯಮಚ್ಯುತಪದಾಂಬುಜಯುಗ್ಮರುಕ್ಮ-
ವ್ಯಾಮೋಹತಃ ತದಿತರಾಣಿ ತೃಣಾಯ ಮೇನೇ ।
ಅಸ್ಮದ್ಗುರೋರ್ಭಗವತೋಽಸ್ಯ ದಯೈಕಸಿಂಧೋಃ
ರಾಮಾನುಜಸ್ಯ ಚರಣೌ ಶರಣಂ ಪ್ರಪದ್ಯೇ ॥

acharya.org

೧

ಹಿನ್ನೆಲೆ

ದರ್ಶನಗಳ ಸಂಕ್ಷಿಪ್ತ ಇತಿಹಾಸ

'ದರ್ಶನ'ವೆಂಬ ಶಬ್ದ 'ದೃಶ್' ಎಂಬ ಧಾತುವಿನಿಂದ ಬಂದಿದೆ. ಇದಕ್ಕೆ ನೋಡುವುದು ಎಂದರ್ಥ. ವೇದದಲ್ಲಿ 'ದ್ರಷ್ಟವ್ಯಃ ಶ್ರೋತವ್ಯಃ' ಎಂದೂ 'ಆತ್ಮಾನಂ ಪಶ್ಯೇತ್' ಎಂದೂ ಹೇಳಿರುವಂತೆ 'ಆತ್ಮನನ್ನು ಕಾಣುವುದು', 'ತತ್ತ್ವವನ್ನು ಅರಿಯುವುದು' ಎಂಬ ಅರ್ಥದಲ್ಲಿ ಈ ಶಬ್ದವನ್ನು ಬಳಸಿದ್ದಾರೆ. ತತ್ತ್ವವಿಚಾರ ಹಾಗೂ ಸಾಕ್ಷಾತ್ಕಾರವೇ ದರ್ಶನ. ಈ ತತ್ತ್ವವಿಚಾರವನ್ನು ಪ್ರತಿಪಾದಿಸುವ ಶಾಸ್ತ್ರಗಳಿಗೆ ದರ್ಶನಗಳೆಂಬ ಹೆಸರು ರೂಢಿಯಲ್ಲಿದೆ.

ಈ ಲೋಕದಲ್ಲಿ ಅನಂತಕೋಟಿ ಜೀವರುಗಳು ಬಗೆಬಗೆಯಾಗಿ ಹುಟ್ಟಿ ಸಾಯುತ್ತಲೇ ಇರುತ್ತಿದ್ದಾರೆ. ಈ ಮಾನವಜೀವನವಾದರೂ ವಿಚಿತ್ರವೂ ವಿವಿಧವೂ ಆಗಿದೆ. ಇದರ ಇಂದಿನ ಸ್ಥಿತಿಯು ಮಾತ್ರ ನಮಗೆ ಕಾಣಬರುತ್ತಿದೆ. ಇದರ ಹಿಂದಿನ ಅವಸ್ಥೆ ಏನಾಗಿತ್ತು ? ಮುಂದೆ ಏನಾಗುತ್ತದೆ ? ಇಲ್ಲಿ ಹುಟ್ಟುತ್ತಿರುವ ಜೀವರಾಶಿಯ ಗುರಿಯಾದರೂ ಯಾವುದು ? ಮಾನವನಿಗೂ ಇತರ ಜೀವರಾಶಿಗಳಿಗೂ ಇರುವ ಭೇದವೇನು ? ಇದಕ್ಕೆ ವ್ಯವಸ್ಥಿತವಾದ ಕಾರಣವಾದರೂ ಇದೆಯೇ ? ಇದೆಲ್ಲ ಕೇವಲ ವಸ್ತುಸ್ವಭಾವವೇ ? ಅಥವಾ ಸ್ಥಿರವಾದ ತತ್ತ್ವವೆಂಬುದೊಂದುಂಟೇ ? ಈ ಮಾನವ ಕೋಟಿಗೂ ಪ್ರಕೃತಿಗೂ ಸಂಬಂಧವೇನು ? ಪ್ರಕೃತಿಯು ಸ್ವತಂತ್ರವೇ ಅಥವಾ ಅಸ್ವತಂತ್ರವೇ ? ಅದೂ ಮತ್ತೆ ಯಾವುದಾದರೂ ನಿಯಮಕ್ಕೆ ಅಧೀನವಾಗಿದೆಯೋ ? ಈ ಪ್ರಪಂಚದ ಸಂಭಂಧ ವಾಸ್ತವವೇ ? ತೋರಿಕೆಯೋ ? ಸುಖವೇ ?ದುಃಖವೇ ? ಇಲ್ಲಿದ್ದು ಜೀವರು ಸಾಧಿಸಬೇಕಾದುದೇನು ? ಅದನ್ನು ಹೇಗೆ ಸಾಧಿಸಬೇಕು ? ಇಲ್ಲಿನ ಬಾಳ್ವೆಯನ್ನು ಹೇಗೆ ನಡೆಸಬೇಕು ? ಇವೇ ಮುಂತಾದ ಪುಂಖಾನುಪುಂಖವಾದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ತಿಳಿಸುವ ಶಾಸ್ತ್ರವೇ ದರ್ಶನ.

ಈ ಪ್ರಪಂಚದಲ್ಲಿ ಬಹಳ ಹಿಂದಿನ ಕಾಲದಿಂದಲೂ ಮಾನವನು ವಿಶ್ವರಹಸ್ಯವನ್ನು ಭೇದಿಸಿ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಹಿಡಿಯಲು ಪ್ರಯತ್ನಿಸಿದ್ದಾನೆ.

acharya.org

ಅನೇಕ ಅನುಭಾವಿಗಳು ತಾವು ಸಾಕ್ಷಾತ್ಕರಿಸಿಕೊಂಡ ತತ್ತ್ವವನ್ನು ಇತರರಿಗೆ ಉಪದೇಶಿಸಿದ್ದಾರೆ. ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಅವತರಿಸಿದ ಇಂಥ ತತ್ತ್ವಜ್ಞಾನಿಗಳು ತಮ್ಮ ಅನುಭವಪೂರ್ಣವಾದ ಜ್ಞಾನದಿಂದ ಮಾನವಜನಾಂಗದ ಒಳಗಣ್ಣನ್ನು ತೆರೆಸಲು ಯತ್ನಿಸಿದ್ದಾರೆ. ಹೀಗಾಗಿ ಅನಾದಿಯಾದ ಈ ವಿಶ್ವದಲ್ಲಿ ಅನೇಕ ದರ್ಶನಗಳು ಮೂಡಿಬಂದವು. ಒಂದೊಂದು ಕಾಲಕ್ಕೂ ಜನರ ಜ್ಞಾನ ಹೆಚ್ಚಿದಂತೆ, ಕಡಿಮೆಯಾದಂತೆ, ಅನುಭವ ವಿವಿಧವಾದಂತೆ ದರ್ಶನಗಳೂ ಬೆಳೆದವು, ಬದಲಾದವು ಮತ್ತು ಕಣ್ಮರೆಯಾದವು. ಕೆಲವು ದರ್ಶನಗಳು ಅಲ್ಪಾಯುಗಳಾದವು, ಮತ್ತೆ ಕೆಲವು ಚೈತನ್ಯಪೂರ್ಣವಾಗಿ ಇಂದಿಗೂ ಉಳಿದಿವೆ. ಒಂದೊಂದು ದರ್ಶನವನ್ನೂ ಇತರ ದಾರ್ಶನಿಕರು ನಿಷ್ಠುರವಾಗಿ ವಿಮರ್ಶಿಸಿದ ಕಾರಣ ಅವುಗಳ ಗುಣ ದೋಷಗಳು ಬೆಳಕಿಗೆ ಬಂದವು. ತಮ್ಮ ತಮ್ಮ ದರ್ಶನಗಳ ಪಾರಮ್ಯವನ್ನು ಆಯಾ ಪ್ರವರ್ತಕರು ಸಾರಿಹೇಳಿ ಅವುಗಳಲ್ಲಿ ಇತರರು ಶ್ರದ್ಧೆಯಿಡುವಂತೆ ಪ್ರಯತ್ನಮಾಡಿರುವುದನ್ನೂ ನಾವು ನೋಡುತ್ತೇವೆ. ಈ ಬಗೆಯ ಖಂಡನಮಂಡನಗಳು ತಮ್ಮ ತಮ್ಮ ಸಿದ್ಧಾಂತದಲ್ಲಿ ಶ್ರದ್ಧೆಯನ್ನುಂಟುಮಾಡುವುದಕ್ಕಾಗಿಯೇ ಬಂದಿವೆಯೇ ಹೊರತು ಇತರರ ಅವಹೇಳನಕ್ಕಾಗಿ ಅಲ್ಲವೆಂಬುದನ್ನು ನಾವು ಮನಗಾಣಬಹುದು. ದಾರ್ಶನಿಕನ ವೈಯಕ್ತಿಕ ಖಂಡನೆಗೆ ಇಲ್ಲಿ ಅವಕಾಶವಿಲ್ಲ. ಇಲ್ಲಿ ಖಂಡಿಸುವುದಾದರೂ ಅವರವರ ಅಭಿಪ್ರಾಯಗಳನ್ನು ಮಾತ್ರ. ಹೀಗಾಗಿ ಒಂದೊಂದು ದರ್ಶನದ ಇತಿಹಾಸವೂ ವಿಶಿಷ್ಟವಾದ ರೀತಿಯಲ್ಲಿ ಬೆಳೆದುಕೊಂಡು ಬಂದಿದೆ. ಒಂದೊಂದು ಕಾಲದಲ್ಲಿಯೂ ಜನ ತಮಗೆ ಶ್ರದ್ಧೆ ಯಾವ ದರ್ಶನದಲ್ಲಿದೆಯೋ ಅದನ್ನು ಅವಲಂಬಿಸಿದ್ದಾರೆ; ಬೆಳಕು ಕಾಣಲು ಹಂಬಲಿಸಿದ್ದಾರೆ. ತಮ್ಮ ಶ್ರದ್ಧೆ ಬದಲಾದಂತೆ ಇತರ ದರ್ಶನಗಳನ್ನನುಸರಿಸಿರುವುದೂ ಉಂಟು. ಹೀಗೆ ವಾದದಿಂದ, ಜಿಜ್ಞಾಸೆಯಿಂದ ಇತರರ ಹೃದಯ ಪರಿವರ್ತನೆಯನ್ನು ಸಾಧಿಸಿರುವ ನಿದರ್ಶನಗಳು ಅನೇಕವಾಗಿವೆ. ಒಂದೊಂದು ದರ್ಶನವನ್ನನುಸರಿಸುವವರ ಸಂಖ್ಯೆ ಕಾಲಕಾಲಕ್ಕೆ ಹೆಚ್ಚು ಕಡಿಮೆ ಆಗುತ್ತ ಬಂದಿದೆಯಾದರೂ ಆ ಮೂಲಪ್ರವರ್ತಕರು ಹಾಕಿಕೊಟ್ಟ ವಿಚಾರಮಾರ್ಗ ಮಾತ್ರ ಅಕ್ಷುಣ್ಣವಾಗಿ ಉಳಿದು ಬಂದಿದೆ. ಮಾನವನು ಈ ವಿಶ್ವರಹಸ್ಯವನ್ನರಿಯಲು ಹೇಗೆ ಅನಾದಿಕಾಲದಿಂದಲೂ ತಪಸ್ಸನ್ನಾಚರಿಸಿದ್ದಾನೆಂಬುದನ್ನೂ ಅವನು ಏನೇನನ್ನು ಸಾಧಿಸಿದ್ದಾನೆಂಬುದನ್ನೂ ನಮ್ಮ ದೇಶದಲ್ಲಿ ಹುಟ್ಟಿ ಬೆಳೆದ ವಿವಿಧ ದರ್ಶನಗಳ ಇತಿಹಾಸದ ಅಧ್ಯಯನ ತೋರಿಸುತ್ತದೆ. ಮಾನವನ ಅದಮ್ಯವಾದ ಆಧ್ಯಾತ್ಮಿಕ ಹಂಬಲದ ಪರಿಚಯ ನಮಗಾಗುತ್ತದೆ.

ವಿಶ್ವದಲ್ಲಿ ಇಂದು ಪ್ರಚಾರದಲ್ಲಿರುವ ಒಂದೊಂದು ಧರ್ಮವನ್ನೂ ನಾವು ವಿವೇಚಿಸಿದರೆ ಇವುಗಳಲ್ಲಿ ಮುಖ್ಯವಾಗಿ ನಾಲ್ಕು ಅಂಶಗಳಿರುವುದು ಕಂಡುಬರುತ್ತದೆ. ಈ ನಾಲ್ಕು ಅಂಶಗಳು ಯಾವುವೆಂದರೆ : ೧) ಆಚಾರಾಂಗ ೨) ಧರ್ಮಶಾಸ್ತ್ರಗಳು ೩) ಪೂಜಾ ಪ್ರಕ್ರಿಯೆಗಳು ಮತ್ತು ೪) ದರ್ಶನ. ಆಚಾರಾಂಗ ಕಾಲುಗಳಿದ್ದಂತೆ, ಧರ್ಮಶಾಸ್ತ್ರಗಳು

acharya.org

ಮತ್ತು ನೀತಿ ನಿಯಮಗಳು ಕೈಗಳಿದ್ದಂತೆ ; ಪೂಜಾಪ್ರಕ್ರಿಯೆಗಳು ಹೃದಯ ; ದರ್ಶನ ಮೂರ್ಧನ್ಯಪ್ರಾಯವಾದುದು. ಧರ್ಮದ ಬಾಹ್ಯಸ್ವರೂಪವನ್ನು ಪ್ರತಿಬಿಂಬಿಸುವ ಆಚಾರಾಂಗ ನಮ್ಮ ಅಜಾಗ್ರತ ಮನಸ್ಸಿನ ಮೇಲೆಯೂ, ಧರ್ಮಶಾಸ್ತ್ರಾದಿಗಳು ನಮ್ಮ ಜಾಗೃತ ಮನಸ್ಸಿನ ಮೇಲೆಯೂ, ಪೂಜಾಪ್ರಕ್ರಿಯೆಗಳು ನಮ್ಮ ರಸಭಾವಗಳ ಮೇಲೂ ಪ್ರಭಾವ ಬೀರಿದರೆ ದರ್ಶನ ನಮ್ಮ ಬುದ್ಧಿಯ ಮೇಲೆ ಪ್ರಭಾವ ಬೀರುತ್ತದೆ. ಮಾನವನು ತನ್ನ ಅಂತಃಸ್ಫೂರ್ತಿಯಿಂದ ಕಂಡ ಜ್ಞಾನವನ್ನು ಯುಕ್ತಿಯುಕ್ತವಾಗಿ ಸ್ಥಾಪಿಸಲು ಮಾಡಿದ ಪ್ರಯತ್ನವೇ ದರ್ಶನ.

ಈ ವಿಶ್ವದಲ್ಲಿ ಮೂಡಿಬಂದ ಬಗೆಬಗೆಯ ದರ್ಶನಗಳನ್ನು ನಾವು ಸ್ಥೂಲವಾಗಿ ಸೇಶ್ವರದರ್ಶನ ಮತ್ತು ನಿರೀಶ್ವರದರ್ಶನ ಎಂದು ವಿಭಾಗ ಮಾಡಬಹುದು. ಪ್ರಪಂಚದ ಹುಟ್ಟು, ಇರವು ಮತ್ತು ನಾಶಕ್ಕೆ ಈ ಪ್ರಪಂಚಕ್ಕಿಂತ ಭಿನ್ನವಾದ ಈಶ್ವರನು ಕಾರಣ ವೆಂದು ಸಾರುವ ದರ್ಶನ ಸೇಶ್ವರ ದರ್ಶನ. ಈಶ್ವರೋಪಾಸನೆ, ಈಶ್ವರಾನುಗ್ರಹ ಮತ್ತು ಈಶ್ವರಪ್ರಾಪ್ತಿಯೇ ಇವರ ದೃಷ್ಟಿಯಲ್ಲಿ ಪರಮ ಪುರಷಾರ್ಥ. ಕ್ರೈಸ್ತ. ಇಸ್ಲಾಂ ಮತ್ತು ಹಿಂದೂ ಧರ್ಮಗಳು ಸೇಶ್ವರವಾದವನ್ನು ಪುಷ್ಟೀಕರಿಸುತ್ತವೆ. ಪ್ರಪಂಚದ ವಿಚಿತ್ರ ಗಳಿಗೆ ಅದರ ಸ್ವಭಾವವೇ ಕಾರಣವೇ ವಿನಾ ಈಶ್ವರನಲ್ಲವೆಂದು ಪ್ರತಿಪಾದಿಸುವ ಸ್ವಭಾವವಾದ ನಿರೀಶ್ವರದರ್ಶನದ ಮೂಲ. ಆಧುನಿಕ ಪಾಶ್ಚಾತ್ಯದರ್ಶನಗಳಲ್ಲಿ ಅನೇಕ ಪಂಥಗಳು, ನಮ್ಮ ಪ್ರಾಚೀನವಾದ ಚಾರ್ವಾಕದರ್ಶನ ಹಾಗೂ ಸಾಂಖ್ಯ, ಬೌದ್ಧ ಮತ್ತು ಜೈನ ದರ್ಶನಗಳು ನಿರೀಶ್ವರದರ್ಶನಗಳು.

ಭಾರತೀಯ ದರ್ಶನಗಳನ್ನು ಮತ್ತೊಂದು ಬಗೆಯಾಗಿ ವಿಂಗಡಿಸಬಹುದು— ಆಸ್ತಿಕ ಮತ್ತು ನಾಸ್ತಿಕದರ್ಶನಗಳೆಂದು. ವೇದ ಪ್ರಮಾಣವೆಂದು ಅಂಗೀಕರಿಸುವ ದರ್ಶನಗಳು ಆಸ್ತಿಕ ದರ್ಶನಗಳು. ವೇದಪ್ರಾಮಾಣ್ಯವನ್ನು ಒಪ್ಪದ ದರ್ಶನಗಳು ನಾಸ್ತಿಕ ದರ್ಶನಗಳು. ಕಪಿಲರ ಸಾಂಖ್ಯ, ಪತಂಜಲಿಗಳ ಯೋಗ, ಗೌತಮರ ನ್ಯಾಯ, ಕಣಾದರ ವೈಶೇಷಿಕ, ಜೈಮಿನಿಗಳ ಪೂರ್ವಮೀಮಾಂಸೆ ಮತ್ತು ಬಾದರಾಯಣರ ವೇದಾಂತ ಅಥವಾ ಉತ್ತರಮೀಮಾಂಸೆ—ಇವು ಆರೂ ಆಸ್ತಿಕ ದರ್ಶನಗಳು. ಚಾರ್ವಾಕ, ಜೈನ ಮತ್ತು ಬೌದ್ಧ ದರ್ಶನಗಳು ನಾಸ್ತಿಕ ದರ್ಶನಗಳು. ಇವುಗಳಲ್ಲಿ ಚಾರ್ವಾಕದರ್ಶನ ಒಂದಲ್ಲ ಒಂದು ರೂಪದಲ್ಲಿ ಇಂದೂ ಇದೆ. ಜೈನ ಮತ್ತು ಭೌದ್ಧ ಧರ್ಮಗಳು ಚೈತನ್ಯಪೂರ್ಣವಾಗಿ ಅನೇಕರಿಗೆ ಇಂದೂ ಸ್ಫೂರ್ತಿ ಕೊಡುತ್ತಿವೆ. ಸಾಂಖ್ಯ, ನ್ಯಾಯ, ವೈಶೇಷಿಕ ಮತ್ತು ಮೀಮಾಂಸಾದರ್ಶನಗಳು ಇಂದು ಜೀವಂತ ವಾಗಿಲ್ಲ. ಯೋಗ ಅಲ್ಲಲ್ಲಿ ವಿರಳವಾಗಿ ಪ್ರಚಾರದಲ್ಲಿದೆ.

ವೇದಾಂತದರ್ಶನ ಆಸ್ತಿಕ ದರ್ಶನಗಳೆಲ್ಲದರ ಏಕೈಕ ಪ್ರತಿನಿಧಿಯಾಗಿ ಉಳಿದು ಬಂದಿದೆ. ಉಪನಿಷತ್ತುಗಳು, ಭಗವದ್ಗೀತೆ ಮತ್ತು ವೇದಾಂತಸೂತ್ರಗಳು ಇದಕ್ಕೆ

acharya.org

ಪರಮಾಧಾರಗಳಾಗಿವೆ.

ಅತಿ ಪ್ರಾಚೀನವಾದ ಋಗ್ವೇದದಲ್ಲಿಯೇ ಈಶ್ವರವಾದ ಅಡಗಿದೆ. ಆತ್ಮವು ಅವಿನಾಶಿಯಾದುದೆಂದೂ ಈಶ್ವರಾನುಗ್ರಹದಿಂದ ಅದು ಕಲ್ಮಷಗಳನ್ನೆಲ್ಲಾ ಕಿತ್ತೊಗೆದು ಶುದ್ಧವಾಗಿ ಈ 'ಅನೃತದ ಲೋಕ'ದಿಂದ 'ಋತದ ಸದನ'ಕ್ಕೆ ಹೋಗಬೇಕೆಂದೂ ಅಲ್ಲಿ ಸೂಚಿಸಿದೆ. ಯಾಗಾದಿಗಳಿಂದ ದೇವತೆಯ ಅನುಗ್ರಹವನ್ನು ಸಂಪಾದಿಸಿ ಐಹಿಕವನ್ನೂ ಚೆನ್ನಾಗಿ ಬಾಳಿ ಅದರ ಅಡಿಮಣೆಯ ಮೇಲೆ ಪಾರಲೌಕಿಕವನ್ನೂ ಪಡೆಯಬೇಕೆಂಬುದು ಅದರ ಉಪದೇಶ. ಋಗ್ವೇದಸಂಹಿತೆಯಲ್ಲಿ ಕ್ರಮಬದ್ಧವಾದ ದರ್ಶನಪದ್ಧತಿ ಯಾವುದೂ ದೊರಕದು. ಆದರೆ ವೇದಾಂತದರ್ಶನಕ್ಕೆ ಮೌಲಿಕವಾದ ಅನೇಕಾನೇಕ ಅಂಶಗಳ. ಅಲ್ಲಲ್ಲಿ ಹರಡಿಕೊಂಡಿವೆ. ಈ ಅರಿವಿನ ಸಾರಸರ್ವಸ್ವವನ್ನು ಉಪನಿಷತ್ತುಗಳು ಉದ್ಧರಿಸಿವೆ. ಉಪನಿಷತ್ತುಗಳು ಕಾಮ್ಯಕರ್ಮಗಳ ಖಂಡನೆಯನ್ನು ಮಾಡಿ ಕರ್ಮಮಾರ್ಗಕ್ಕಿಂತ ಬೇರೆಯಾದ ಜ್ಞಾನಮಾರ್ಗವನ್ನು ಉಪದೇಶಿಸುತ್ತವೆ. 'ಈ ಜಗತ್ತಿನ ಜನ್ಮ ಸ್ಥಿತಿ ನಾಶಗಳಿಗೆ ಬ್ರಹ್ಮ ಕಾರಣ. ಲೋಕದಲ್ಲಿ ಕಾಣುವ ವೈಚಿತ್ರ್ಯ ಮತ್ತು ವೈವಿಧ್ಯಕ್ಕೆ ಅವರವರ ಕರ್ಮ ಕಾರಣ. ಕರ್ಮ ಮತ್ತು ಅವಿದ್ಯೆಗಳ ಚಕ್ರದಿಂದ ತಪ್ಪಿಸಿಕೊಂಡು ಅಮೃತತತ್ವವನ್ನು ಪಡೆಯುವುದೇ ಪುರುಷಾರ್ಥ. ಈ ಬಂಧನಿವೃತ್ತಿಗೆ ಬ್ರಹ್ಮಜ್ಞಾನ ಮತ್ತು ಬ್ರಹ್ಮೋಪಾಸನೆಯೇ ಉಪಾಯ' ಎಂಬುದಾಗಿ ಉಪನಿಷತ್ತು ಉದ್ಘೋಷಿಸಿದೆ-

ಈ ವೈದಿಕಧರ್ಮಕ್ಕೆ ವಿರೋಧವಿಲ್ಲದಿರಲಿಲ್ಲ. ಇಲ್ಲಿ ಪ್ರತಿಪಾದಿಸಿರುವ ವಿಚಾರ ಅತೀಂದ್ರಿಯವಾದುದರಿಂದ ಇವುಗಳನ್ನರಿಯಲು ವೇದವೇ ನಮಗೆ ಪ್ರಮಾಣವೆಂಬುದನ್ನು ಕೆಲವರು ಅಲ್ಲಗಳೆದರು. ಅವರು ತಮ್ಮ ಅಂತಃಸ್ಫೂರ್ತಿ ಮತ್ತು ಅನುಭವಗಳಿಗನುಗುಣವಾಗಿ ವೇದವಿರುದ್ಧವಾದ ಮಾರ್ಗಗಳನ್ನೇ ಉಪದೇಶಿಸಿದರು. ವೇದಪ್ರಾಮಾಣ್ಯವನ್ನಾಗಲಿ, ಈಶ್ವರನನ್ನಾಗಲೀ ಅವರು ಒಪ್ಪಲಿಲ್ಲ. ಬೌದ್ಧದರ್ಶನ 'ಪ್ರತೀತ್ಯ ಸಮುತ್ಪಾದ'ವನ್ನು ಮುಂದಿಟ್ಟು ಜಗತ್ತಿನ ಸೃಷ್ಟ್ಯಾದಿಗಳನ್ನು ವಿವರಿಸಿತು. 'ಸರ್ವವೂ ದುಃಖ, ಸ್ವಲಕ್ಷಣ, ಕ್ಷಣಿಕ ಮತ್ತು ಶೂನ್ಯ' ಎಂದು ಘೋಷಿಸಿ ಇವರು ವೈರಾಗ್ಯೋಪದೇಶವನ್ನು ಮಾಡಿದರು. ಅಂತರಿಂದ್ರಿಯ ಹಾಗೂ ಬಹಿರಿಂದ್ರಿಯಗಳ ಸಂಯಮವನ್ನು ಒತ್ತಿ ಹೇಳಿದರು. 'ದುಃಖ, ಸಮುದಯ, ನಿರೋಧ, ಮಾರ್ಗ' ಎಂಬ ಆರ್ಯ ಸತ್ಯಚತುಷ್ಟಯಗಳನ್ನು ಸಾರಿದರು. ಇವರು ಸ್ಥಿರನಾದ ಆತ್ಮವನ್ನಾಗಲೀ ಪರಮಾತ್ಮನನ್ನಾಗಲೀ ಅಂಗೀಕರಿಸದ ಕಾರಣ ಇವರ ದರ್ಶನಕ್ಕೆ 'ನೈರಾತ್ಮ್ಯದರ್ಶನ' 'ಶೂನ್ಯವಾದ' ಎಂಬ ಹೆಸರುಗಳು ರೂಢಿಗೆ ಬಂದವು. ಜೈನದರ್ಶನ ಆತ್ಮರುಗಳನೇಕರು ಉಂಟೆಂದು ಒಪ್ಪಿದರೂ ಪರಮಾತ್ಮನನ್ನು ಪ್ರತ್ಯೇಕವಾಗಿ ಒಪ್ಪಲಿಲ್ಲ. ಜೀವ, ಅಜೀವ ಎಂದು ಪದಾರ್ಥವಿಭಾಗ ಮಾಡಿ ಜೀವರು ತಮ್ಮ ತಮ್ಮ ಕರ್ಮಗಳಿಗನುಸಾರವಾಗಿ ಇಲ್ಲಿ ಹುಟ್ಟಿರುವರೆಂದೂ, ಆ ಕರ್ಮದ ಆತ್ಯಂತಿಕ ನಿವೃತ್ತಿಯಿಂದಲೇ ಮೋಕ್ಷವೆಂದೂ, ಅದನ್ನು

acharya.org

ಸಾಧಿಸಲು ಸಮ್ಯಗ್ದರ್ಶನ, ಸಮ್ಯಗ್ಜ್ಞಾನ ಮತ್ತು ಸಮ್ಯಕ್ಚಾರಿತ್ರಗಳು ಉಪಾಯಗಳೆಂದೂ ಇವರು ಉಪದೇಶಿಸಿದರು.

ವೇದವಿರುದ್ಧವಾದ ಈ ಪಂಥಗಳು ರೂಪುಗೊಳ್ಳುವಷ್ಟರಲ್ಲಿ ಆರು ಆಸ್ತಿಕದರ್ಶನಗಳೂ ರೂಪುಗೊಂಡಿದ್ದವು. ಇವುಗಳಲ್ಲೆಲ್ಲಾ ಕಪಿಲರ ಸಾಂಖ್ಯದರ್ಶನ ಪ್ರಾಚೀನತಮವಾದುದು. ಇದೂ ನಿರೀಶ್ವರ ಸಿದ್ಧಾಂತವೇ. ಒಂದು ಬಗೆಯಲ್ಲಿ ಇದು ದ್ವೈತವಾದವನ್ನೇ ಪ್ರತಿಪಾದಿಸಿದರೂ ಮತ್ತೊಂದು ರೀತಿಯಲ್ಲಿ ಇದು ಅದ್ವೈತಸಿದ್ಧಾಂತಕ್ಕೆ ಸದೃಶವಾಗಿದೆ. ಅನಂತ ಜೀವಾತ್ಮರುಗಳಿಗಿಂತ ಬೇರೆಯಾದ ಪ್ರಕೃತಿಯುಂಟು. ಬಂಧ ಮೋಕ್ಷಾದಿಗಳು ಆ ಪ್ರಕೃತಿಗೇ ವಿನಾ ನಿರ್ಲಿಪ್ತನಾದ ಜೀವನಿಗಲ್ಲ. ಪ್ರಕೃತಿಯಲ್ಲಿ ನಡೆಯುವ ಬಂಧ ಮೋಕ್ಷಾದಿಗಳು ತನಗೇ ಎಂದು ಪುರುಷನು ಆರೋಪಮಾಡಿಕೊಳ್ಳುವುದೇ ಸಂಸಾರಕ್ಕೆ ಕಾರಣ. ಇದೂ ಒಂದು ಬಗೆಯ ಅವಿದ್ಯೆ, ಮಿಥ್ಯಾಜ್ಞಾನ. ಇದರ ನಿವಾರಣೋಪಾಯ ಯಥಾರ್ಥಜ್ಞಾನ ; ಪ್ರಕೃತಿಪುರುಷವಿವೇಕ. ಇದರಿಂದ ಬಂಧವಿಮೋಚನೆ. ಮುಕ್ತನಾದ ಜೀವ ಕೈವಲ್ಯವನ್ನು ಹೊಂದುತ್ತಾನೆ. ಈ ಸಿದ್ಧಾಂತವೇ ವೇದಪ್ರತಿಪಾದ್ಯವಾದುದೆಂಬುದು ಇವರ ಮತ. ಸಾಂಖ್ಯದರ್ಶನದ ಈ ಪ್ರಮೇಯಗಳನ್ನೇ ಇಟ್ಟುಕೊಂಡು ಈಶ್ವರನನ್ನೂ ಅಂಗೀಕರಿಸುವುದು ಯೋಗದರ್ಶನ. ಆದ್ದರಿಂದಲೇ ಇದನ್ನು 'ಸೇಶ್ವರ ಸಾಂಖ್ಯ' ಎನ್ನುತ್ತಾರೆ. ಈ ದರ್ಶನ ಅಷ್ಟಾಂಗಯೋಗದಿಂದ ಮೋಕ್ಷಪ್ರಾಪ್ತಿಯನ್ನು ಹೇಳುತ್ತದೆ. ಸಾಂಖ್ಯ ಮತ್ತು ಯೋಗದರ್ಶನಗಳ ಅನೇಕ ಪ್ರಮೇಯಗಳನ್ನು ವೇದಾಂತ ದರ್ಶನ ಅಂಗೀಕರಿಸಿದೆ. ಇವರು ಪ್ರತಿಪಾದಿಸಿರುವ ಇಪ್ಪತ್ತುನಾಲ್ಕು ತತ್ತ್ವಗಳು ಮತ್ತು ಅಷ್ಟಾಂಗಯೋಗ—ಇವುಗಳನ್ನು ಇತರರು ಮಾನ್ಯಮಾಡಿ ಅನುಸರಿಸಿದ್ದಾರೆ. ಮುಖ್ಯ ಸಿದ್ಧಾಂತಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳಿದ್ದರೂ ತಾರ್ಕಿಕದರ್ಶನ ಈಶ್ವರನನ್ನೂ ಒಪ್ಪಿ ಪರಮಾಣುಕಾರಣವಾದವನ್ನೂ ಪುರಸ್ಕರಿಸುತ್ತದೆ. 'ನಿರನುಗ್ರಹೇಶ್ವರವಾದಿ'ಗಳೆಂಬ ಖ್ಯಾತಿಗೆ ಇವರು ಒಳಗಾಗಿದ್ದಾರೆ. ಮೀಮಾಂಸಾದರ್ಶನವನ್ನು ಕಟ್ಟುನಿಟ್ಟಾಗಿ ಪರೀಕ್ಷಿಸಿದರೆ ಅದು ನಿರೀಶ್ವರವಾದವೇ ಎಂಬುದು ಗೊತ್ತಾಗುವುದು. ಆದರೆ ಈ ದರ್ಶನದ ವಿವರಣಕಾರರು ಈಶ್ವರನಿಗೂ ಅಲ್ಲಿ ಸ್ಥಾನವನ್ನು ಮಾಡಿಕೊಡಲು ಯತ್ನಿಸಿದ್ದಾರೆ.

ಈ ದರ್ಶನಗಳಲ್ಲಿ ಕೆಲವು ದಿಟ್ಟತನದ ಹೆಜ್ಜೆಯನ್ನಿಟ್ಟು ಈಶ್ವರನನ್ನೇ ಒಪ್ಪುವುದಿಲ್ಲ. ಮತ್ತೆ ಕೆಲವು ದರ್ಶನಗಳು ಈಶ್ವರನನ್ನು ಒಪ್ಪಿದರೂ ಅವನಿಗೆ ತಕ್ಕ ಸ್ಥಾನವನ್ನು ಕೊಟ್ಟಿಲ್ಲ. ಆದರೆ ಬಾದರಾಯಣರ ವೇದಾಂತ ಮಾತ್ರ ಈಶ್ವರನನ್ನು ಅಂಗೀಕರಿಸುವುದರ ಜೊತೆಗೆ ಅವನಿಗೆ ಪೂರ್ಣವಾದ ಮಹತ್ತ್ವವನ್ನೂ ಕೊಟ್ಟಿದೆ. ಉಪನಿಷತ್ತುಗಳು ವೇದಾಂತಕ್ಕೆ ಪ್ರಧಾನವಾದ ಆಧಾರಗಳು. ಉಪನಿಷತ್ತುಗಳಲ್ಲಿ ಬರುವ ಭೇದ, ಅಭೇದ ಮತ್ತು ಭೇದಾಭೇದ ಶ್ರುತಿಗಳಿಗೆ ಪ್ರಾಧಾನ್ಯಕೊಡುವುದಕ್ಕನುಗುಣವಾಗಿ ಭೇದದರ್ಶನ, ಅಭೇದದರ್ಶನ ಮತ್ತು ಭೇದಾಭೇದದರ್ಶನಗಳು ಮೂಡಿಬಂದಿವೆ. ಅಭೇದದರ್ಶನ

acharya.org

‘ಸರ್ವಂ ಖಲ್ವಿದಂ ಬ್ರಹ್ಮ’ ‘ತತ್ತ್ವಮಸಿ’ ‘ಅಯಮಾತ್ಮಾ ಬ್ರಹ್ಮ’ ಮುಂತಾದ ಅಭೇದ ವಾಕ್ಯಗಳಿಗೆ ಹೆಚ್ಚಿನ ಬೆಲೆಯನ್ನಿತ್ತು ಜೀವಬ್ರಹ್ಮೈಕ್ಯವನ್ನು ಪ್ರತಿಪಾದಿಸುತ್ತದೆ. ‘ಜ್ಞಾಜ್ಞೌ ದ್ವಾವಜಾವೀಶನೀಶೌ’, ‘ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ’, ‘ನಿತ್ಯೋ ನಿತ್ಯಾನಾಂ’ ಮುಂತಾದ ಭೇದಶ್ರುತಿಗಳಿಗೆ ಪ್ರಾಧಾನ್ಯ ಕೊಡುವ ಭೇದದರ್ಶನ ಭಗವಂತನಿಗೂ ಜೀವನಿಗೂ ಅತ್ಯಂತ ಭೇದವನ್ನು ಹೇಳಿ ಜೀವನು ಭಕ್ತಿ ಎಂಬ ಸಾಧನದಿಂದ ಭಗವಂತನನ್ನು ಪಡೆಯುವುದೇ ಪುರುಷಾರ್ಥವೆಂದು ಉದ್ಘೋಷಿಸುತ್ತದೆ. ಭೇದಾಭೇದಶ್ರುತಿಗಳೆರಡಕ್ಕೂ ಪ್ರಾಧಾನ್ಯ ಕೊಡುವ ಭೇದಾಭೇದದರ್ಶನಗಳು ಒಂದು ಅವಸ್ಥೆಯಲ್ಲಿ ಜೀವನಿಗೂ ಬ್ರಹ್ಮನಿಗೂ ಭೇದವನ್ನೂ, ಮತ್ತೊಂದು ಅವಸ್ಥೆಯಲ್ಲಿ ಅಭೇದವನ್ನೂ ಒಪ್ಪಿ ಕರ್ಮಜ್ಞಾನಸಮುಚ್ಚಯವಾದವನ್ನು ಮುಂದಿಟ್ಟು ಕರ್ಮದಿಂದ ಭೇದಜ್ಞಾನವನ್ನು ಕಳೆದು ಜ್ಞಾನದಿಂದ ಅಭೇದಜ್ಞಾನವನ್ನು ಪಡೆದುಕೊಂಡು ಮುಕ್ತರಾಗಬೇಕೆಂದು ಉಪದೇಶಿಸುತ್ತವೆ.

ವೇದಾಂತದರ್ಶನದಲ್ಲಿ ಹಲವಾರು ಶಾಖೆಗಳಿವೆ. ಅದ್ವೈತದರ್ಶನ ಅಭೇದದರ್ಶನ. ದ್ವೈತದರ್ಶನ ಭೇದದರ್ಶನ. ಶಕ್ತಿವಿಶಿಷ್ಟಾದ್ವೈತ, ಭಾಸ್ಕರಮತ ಮತ್ತು ಯಾದವಪ್ರಕಾಶರ ಮತಗಳು ಭೇದಾಭೇದದರ್ಶನಗಳು. ರಾಮಾನುಜರ ವಿಶಿಷ್ಟಾದ್ವೈತದರ್ಶನವೂ ಅಭೇದದರ್ಶನವೇ. ಈ ಅದ್ವೈತ ಸ್ವರೂಪಾದ್ವೈತವಲ್ಲ, ಆದರೆ ವಿಶಿಷ್ಟಾದ್ವೈತ. ಜೀವ ಮತ್ತು ಪ್ರಕೃತಿಗಳಿಂದೊಡಗೂಡಿದ ಬ್ರಹ್ಮವಸ್ತುವೊಂದೇ ತತ್ತ್ವವೆಂದು ಸಾರುವ ಈ ದರ್ಶನ ಜೀವರು ಈಶ್ವರನಿಗಿಂತ ಭಿನ್ನರಾಗಿದ್ದಾರೆಂದು ಹೇಳುತ್ತದೆ. ಭೇದಾಭೇದ ಶ್ರುತಿಗಳೆರಡಕ್ಕೂ ಪ್ರಾಧಾನ್ಯವನ್ನು ಈ ದರ್ಶನ ಕೊಟ್ಟರೂ ಅವುಗಳ ಅರ್ಥವಿವರಣೆಯನ್ನು ವಿಶಿಷ್ಟವಾದ ರೀತಿಯಲ್ಲಿ ಮಾಡುತ್ತದೆ. ಇಲ್ಲಿ ಭಗವಂತನ ನಿತ್ಯಕೈಂಕರ್ಯವೇ ಪರಮಪುರುಷಾರ್ಥ. ಇದರ ಪ್ರಾಪ್ತಿಗೆ ಭಕ್ತಿ ಪ್ರಪತ್ತಿಗಳು ಸಾಧನಗಳು. ಹೀಗೆ ವೇದಾಂತದರ್ಶನದಲ್ಲಿಯೇ ಅನೇಕ ಶಾಖೋಪಶಾಖೆಗಳು ಬೆಳೆದಿವೆ. ಒಂದೊಂದೂ ತನ್ನದೇ ಆದ ರೀತಿಯಲ್ಲಿ ತತ್ತ್ವ-ಹಿತ-ಪುರುಷಾರ್ಥಗಳ ವಿವೇಚನೆಯನ್ನು ಮಾಡುತ್ತದೆ. ಇವೆಲ್ಲವೂ ಮೊದಲೇ ಸೂಚಿಸಿದಂತೆ ಮಾನವನನ್ನು ಪೂರ್ಣತೆಯೆಡೆಗೆ ಕರೆದೊಯ್ಯಲು ಯತ್ನಿಸುತ್ತಿವೆ. ಕತ್ತಲೆಯಲ್ಲಿ ತಡವರಿಸುತ್ತಿರುವ ಮಾನವನಿಗೆ ಶ್ರೇಯಸ್ಸಿನ ಹಾದಿಯನ್ನು ತೋರಿಸುವ ಸ್ಥಿರವಾದ ಜ್ಞಾನಪ್ರದೀಪಗಳು ಇವು. ಆಗಾಗ್ಗೆ ಅವತರಿಸಿದ ಅನೇಕ ಮಹಾಪುರುಷರುಗಳು ಈ ದರ್ಶನಗಳ ಪ್ರವರ್ತಕರುಗಳಾಗಿ, ಉಪದೇಶಕರಾಗಿ, ಪ್ರಚಾರಕರಾಗಿ ಈ ಶಾಸ್ತ್ರಮಯವಾದ ಸ್ಥಿರಪ್ರದೀಪಗಳ ಕಾಂತಿಯನ್ನು ಉಳಿಸಿಕೊಂಡು ಬಂದಿದ್ದಾರೆ.

ಅಜ್ಞಾಃ ವಿಷಮಮಿಚ್ಛಂತಿ ಸಾಮ್ಯಮಿಚ್ಛಂತಿ ಸಾಧವಃ ।
ಏಕರೂಪೇಽಪಿ ಕಂಕಾಲೇ ದೃಶ್ಯಂತೇ ಬಹುಧಾ ಭಿದಾಃ ॥

ಎಂಬುದೊಂದು ಆರ್ಯೋಕ್ತಿ. ಸಾಧುಗಳಾದವರು ಒಂದಕ್ಕೊಂದು ವಿರುದ್ಧವಾಗಿರುವಂತೆ

acharya.org

ತೋರಿಬರುವ ಈ ದರ್ಶನಗಳೆಲ್ಲದರಲ್ಲಿ ಸಾಮ್ಯವನ್ನೇ ಕಾಣುತ್ತಾರೆಂಬುದು ಇದರ ಸಾರಾಂಶ. ಈ ಲೋಕದಲ್ಲಿರುವ ಜನ ಒಬ್ಬರಂತೆ ಒಬ್ಬರಿಲ್ಲ ನಿಜ. ಆದರೆ ಅವರೆಲ್ಲರ ದೇಹರಚನೆಯು ಮಾತ್ರ ಏಕರೂಪವಾಗಿರುವುದು. ಹಾಗೆಯೇ ಈ ದರ್ಶನಗಳೆಲ್ಲದರ ಹಿನ್ನೆಲೆಯಲ್ಲಿ ಏಕರೂಪತೆ ಇದೆ. ಇವೆಲ್ಲ ಮಾನವನ ಜೀವನಕ್ಕೆ ಸಾರ್ಥಕವಾದ ರೂಪವೊಂದನ್ನು ಕೊಡಲು ಪ್ರವೃತ್ತವಾಗಿವೆ. ಬಗೆಬಗೆಯಾದ ವಿಚಾರ ವಿವೇಚನೆಗಳಿಂದ ಇವು ಒಂದಕ್ಕೊಂದು ತೀರ ವಿರುದ್ಧವಾಗಿ ಕಂಡರೂ ವಿವಿಧವಾದ ಶಕ್ತಿ, ಸಾಮರ್ಥ್ಯಗಳನ್ನೂ, ಮನೋಭಾವವನ್ನೂ ಹೊಂದಿರುವ ವಿವಿಧರೀತಿಯ ಮಾನವರ ಆಧ್ಯಾತ್ಮಿಕಾಕಾಂಕ್ಷೆಗಳನ್ನು ಪೂರ್ಣಗೊಳಿಸಲು ಅವಶ್ಯಕವಾಗಿವೆ. ಒಂದೊಂದು ಬಗೆಯು ಜನರಿಗೆ ರುಚಿಸುವುದು ಮತ್ತೊಂದು ಬಗೆಯವರಿಗೆ ರುಚಿಸದು. ಬಗೆ ಬಗೆಯ ಸ್ವಭಾವದ ಜನರಿಗೆ ಹಿಡಿಸುವಂತಹ ಬಗೆಬಗೆಯ ವಿಚಾರ ವಿವೇಚನೆಗಳು ಅತ್ಯಂತ ಅವಶ್ಯಕ. ಇದರಿಂದ ವಿವಿಧ ಹಂತಗಳಲ್ಲಿರುವ ವಿವಿಧ ಮಾನವರಿಗೆ ಸಹಾಯವುಂಟು. ಈ ದೃಷ್ಟಿಯಿಂದ ನೋಡಿದಾಗ ಇವುಗಳಲ್ಲಿ ಪರಸ್ಪರ ವಿರೋಧ ಮಾಯವಾಗುವುದು. ಮಾನವನ ಆಧ್ಯಾತ್ಮಿಕ ಶ್ರೇಯಸ್ಸಾಧನೆಯೆಂಬ ಒಂದೇ ಗುರಿಗಾಗಿ ಶ್ರಮಿಸುವ ವಿವಿಧ ಶಾಖೆಗಳು ಇವು ಎಂದು ನಾವು ಮನಗಾಣುತ್ತೇವೆ.

ಈ ದೃಷ್ಟಿ ನಮ್ಮಲ್ಲಿ ಅರಳಿದಾಗ ಒಂದೊಂದು ದರ್ಶನವೂ ಹೇಗೆ ಈ ಒಂದೇ ಗುರಿಯನ್ನು ಸಾಧಿಸಬಲ್ಲದು, ಎಂಬುದನ್ನರಿಯುವ ಕುತೂಹಲ ಉಂಟಾಗುತ್ತದೆ. ಅದನ್ನರಿತಾಗ ಅವುಗಳಲ್ಲಿ ಗೌರವಭಾವನೆ ಮೂಡುತ್ತದೆ. 'ನನ್ನದು ಮಾತ್ರ ಮುಕ್ತಿ ಮಾರ್ಗ; ಮಿಕ್ಕದೆಲ್ಲಾ ಅಂಧಃತಮಸ್ಸಿಗೆ' ಎಂಬ ಭಾವನೆ ಜಾರುತ್ತದೆ. 'ಮುಕ್ತಿಮಾರ್ಗಗಳಲ್ಲಿ ನನ್ನದೂ ಒಂದು' ಎಂಬ ವಿಶ್ವಾಸ ಉಂಟಾಗುತ್ತದೆ. ಒಬ್ಬರನ್ನೊಬ್ಬರು ಗೌರವ ಸಹಾನುಭೂತಿಗಳಿಂದ ಕಾಣಲು ಸಾಧ್ಯವಾಗುತ್ತದೆ. ದರ್ಶನಗಳ ಧ್ಯೇಯವನ್ನು ನಾವೂ ಪಾಲಿಸಿದಂತಾಗುತ್ತದೆ.

ನಮ್ಮ ದರ್ಶನಕಾರರುಗಳು ತಮಗೆ ಸರಿ ಎಂದು ಕಂಡುದನ್ನು, ತಮ್ಮ ಅನುಭವ ತಮಗೆ ತೋರಿಕೊಟ್ಟಿದ್ದನ್ನು ನಿರ್ವಂಚನೆಯಿಂದಲೂ, ನಿರ್ಭೀತಿಯಿಂದಲೂ ಘೋಷಿಸಿದರು. ಇವರ ವಿಚಾರಸ್ವಾತಂತ್ರ್ಯ ಉನ್ನತಮಟ್ಟದಲ್ಲಿದ್ದು ತಮ್ಮ ಅನುಭವವನ್ನು ತಿಳಿಸುವಾಗ ಇತರರು ತಮ್ಮ ವಿಚಾರದಲ್ಲಿ ಏನೆನ್ನುವರೆಂದು ಇವರು ಭಯಪಟ್ಟವರೂ ಅಲ್ಲ. ಅತಿ ಪ್ರಾಚೀನ ಕಾಲದಲ್ಲೇ ವೇದ ಪ್ರಾಮಾಣ್ಯವನ್ನು ಅಂಗೀಕರಿಸಿದ್ದ ಸಾಂಖ್ಯರೂ ಮೀಮಾಂಸಕರೂ ಜಗತ್ಕಾರಣನಾದ ಈಶ್ವರನಿಲ್ಲವೆಂಬ ನಿರೀಶ್ವರವಾದವನ್ನು ಘಂಟಾಘೋಷವಾಗಿ ಹೇಳಬೇಕಾದರೆ ಅವರ ದಿಟ್ಟತನ ಎಷ್ಟಿರಬೇಕು! ಜಗನ್ಮಿಥ್ಯಾವಾದವನ್ನಾಗಲೀ, ಈಶ್ವರವಾದವನ್ನಾಗಲೀ, ಶೂನ್ಯವಾದವನ್ನಾಗಲೀ, ಸ್ಯಾದ್ವಾದವನ್ನಾಗಲೀ ಇಷ್ಟೇ ನಿರ್ಧಾರವಾಗಿ ಇಷ್ಟೇ ದಿಟ್ಟತನದಿಂದ ಪ್ರತಿಪಾದಿಸಿರು

acharya.org

ವುದು ಇವರ ವೈಶಿಷ್ಟ್ಯ. ತಮಗೆ ಗೋಚರವಾದಂತೆಯೇ ಆ ಪರಮ ಸತ್ಯವನ್ನು ತಿಳಿಸದೆ ಇರುವುದು ಸತ್ಯಕ್ಕೆ ಅಪಚಾರ, ಆತ್ಮವಂಚನೆ ಎಂದು ಇವರು ನೂರಕ್ಕೆ ನೂರುಪಾಲು ಮನಗಂಡಿದ್ದರು. ಆದರಿಂದಲೇ ಅವರ ಮಾತುಗಳು ಅಷ್ಟು ಓಜಸ್ವಿಯಾಗಿವೆ. ಹೃದಯದಾಳದಿಂದ ಒಡಮೂಡಿವೆ. ದರ್ಶನಗಳ ಇತಿಹಾಸವನ್ನು ಈ ದೃಷ್ಟಿಯಿಂದ ನಾವು ಅಧ್ಯಯನ ಮಾಡಿದಾಗ ಅವಿಚ್ಛಿನ್ನವಾದ ಆ ಆಧ್ಯಾತ್ಮಿಕ ಮಾರ್ಗದ ಪರಂಪರೆ ನಮಗೆ ಗೋಚರಿಸುವುದು. ಅಂದಿನಿಂದ ಇಂದಿನವರೆಗೆ ಜನ ತಮಗೆ ಸರಿ ಎಂದು ಕಂಡುಬಂದ ಮಾರ್ಗವನ್ನು ಶ್ರದ್ಧೆಯಿಂದ ಆರಿಸಿಕೊಂಡು ಬಾಳಿ ಬೆಳಕು ಕಂಡಹಾಗೆ ನಾವೂ ನಮ್ಮ ಆಧ್ಯಾತ್ಮಿಕ ಉನ್ನತಿಗಾಗಿ ಹಂಬಲಿಸಲೂ, ಯತ್ನಿಸಲೂ ತೊಡಗುತ್ತೇವೆ.

ರಾಮಾನುಜ ದರ್ಶನ

ವೇದಾಂತ ದರ್ಶನವಲ್ಲಿ ಅನೇಕ ಪ್ರಭೇದಗಳಿವೆ. ಎಂದು ಮೇಲೆ ಸೂಚಿಸಲಾಯಿತು. ಇವುಗಳಲ್ಲಿ ಮುಖ್ಯವಾದವು ಯಾವುವೆಂದರೆ :

೧. ಅದ್ವೈತ ದರ್ಶನ.
೨. ದ್ವೈತ ದರ್ಶನ.
೩. ವಿಶಿಷ್ಟಾದ್ವೈತ ದರ್ಶನ.
೪. ಶಕ್ತಿವಿಶಿಷ್ಟಾದ್ವೈತ ದರ್ಶನ.

ಶ್ರೀ ಶಂಕರಭಗವತ್ಪಾದರು ಅದ್ವೈತದರ್ಶನಪ್ರವರ್ತಕರು. ಅದ್ವೈತದರ್ಶನ ಜಗತ್ತಿನಲ್ಲಿರುವ ತತ್ತ್ವ ಒಂದೇ ಎಂದೂ ಅದು ಬ್ರಹ್ಮವೆಂದೂ ಸಾರುತ್ತದೆ. ನಮಗೆ ಗೋಚರಿಸುತ್ತಿರುವ ಪ್ರಪಂಚಕ್ಕೂ ಬ್ರಹ್ಮವಸ್ತುವಿಗೂ ಸಂಬಂಧವನ್ನು ಹೇಳುವಾಗ ಬಗೆಬಗೆಯಾಗಿ ವರ್ಣಿಸಲಾಗಿದೆ. ಭರ್ತೃಪ್ರಪಂಚರು 'ಅವಸ್ಥಾವಾದ'ವನ್ನು ಮುಂದಿಟ್ಟು ಪ್ರಪಂಚವೂ ಬ್ರಹ್ಮನ ಒಂದು ಅವಸ್ಥೆ ಎಂದು ಹೇಳಿ ಬ್ರಹ್ಮೈಕ್ಯವನ್ನು ಸಾರಿದರು. 'ವಿಕಾರವಾದ'ವನ್ನು ಮುಂದಿಟ್ಟು ಭಾಸ್ಕರರು ಪ್ರಪಂಚವು ಬ್ರಹ್ಮಪರಿಣಾಮವೆಂದು ಹೇಳಿ ಐಕ್ಯವನ್ನೇ ಹೇಳಿದರು. ಯಾದವಪ್ರಕಾಶರು 'ಶಕ್ತಿವಾದ'ವನ್ನು ಪುರಸ್ಕರಿಸಿ ಬ್ರಹ್ಮಶಕ್ತಿಯ ಪರಿಣಾಮದ ಫಲ-ಈ ಪ್ರಪಂಚವೆಂದು ಐಕ್ಯವನ್ನೇ ತಿಳಿಸಿದರು. ಶಂಕರಭಗವತ್ಪಾದರು ಈ ಮೇಲಿನ ವಾದಗಳನ್ನೆಲ್ಲಾ ತಳ್ಳಿಹಾಕಿ 'ವಿವರ್ತವಾದ'ವನ್ನು ಪ್ರತಿಪಾದನೆಮಾಡಿ ಈ ಜಗತ್ತು ಬ್ರಹ್ಮದಲ್ಲಿ ಅಧ್ಯಸ್ತವಾಗಿದೆಯೆಂದು ಘೋಷಿಸಿ ಏಕಮೇವಾದ್ವಿತೀಯವಾದ ನಿರ್ಗುಣಬ್ರಹ್ಮವೇ ತತ್ತ್ವವೆಂದು ಸಾರಿದರು. ಅದ್ವೈತ ದರ್ಶನ ಹೀಗೆ ಜೀವಬ್ರಹ್ಮೈಕ್ಯವನ್ನು ಸಾರಿ 'ಸೋಹಂ ಭಾವ' ವನ್ನು ಉಪದೇಶಿಸಿತು; ಹಾಗೂ ಸ್ವರೂಪೈಕ್ಯವನ್ನು ಹೇಳಿತು. ನಿರ್ಗುಣಬ್ರಹ್ಮ, ವಿವರ್ತವಾದ, ಜ್ಞಾನಯೋಗ

acharya.org

ಮತ್ತು ಜೀವನ್ಮುಕ್ತಿ ಇವು ಅದ್ವೈತ ದರ್ಶನದ ಮುಖ್ಯೋಪದೇಶಗಳು. ಮಧ್ವಾಚಾರ್ಯರ ದ್ವೈತಸಿದ್ಧಾಂತ ಇದಕ್ಕೆ ನೇರ ವಿರುದ್ಧವಾಗಿದೆ. ಜಗತ್ತಿಗೂ, ಬ್ರಹ್ಮಕ್ಕೂ, ಜೀವರುಗಳಿಗೂ ಅತ್ಯಂತ ಭೇದವನ್ನು ಈ ದರ್ಶನ ಪ್ರತಿಪಾದಿಸಿ ಇವೆಲ್ಲಾ ಸತ್ಯಭೂತವಾದವೆಂದು ಘೋಷಿಸುತ್ತದೆ ಈ ದರ್ಶನ. ಬಿಂಬ-ಪ್ರತಿಬಿಂಬ ಭಾವವನ್ನು ಉದಾಹರಿಸಿ ಜಗತ್ತು ಈಶ್ವರನಿಗೆ ಅತ್ಯಂತ ಪರತಂತ್ರವಾಗಿದೆಯೆಂದೂ ಭಗವಂತನಲ್ಲಿ ಭಕ್ತಿ ಮಾಡದೆ ಬಿಡುಗಡೆ ಆಗದೆಂದೂ ಹೇಳುತ್ತದೆ. ಶಕ್ತಿವಿಶಿಷ್ಟಾದ್ವೈತದರ್ಶನ ಕರ್ಮ ಮತ್ತು ಜ್ಞಾನಗಳಿಗೆ ಸಮಸಮವಾದ ಪ್ರಾಧಾನ್ಯವನ್ನು ಹೇಳುತ್ತದೆ. ಪ್ರಪಂಚದ ಸತ್ಯತ್ವವನ್ನು ಹೇಳುವ ಈ ದರ್ಶನ ಸಿದ್ಧಾವಸ್ಥೆಯಲ್ಲಿ ಅದ್ವೈತವನ್ನು ಹೇಳಿ ಶಿವತತ್ವವೊಂದೇ ತತ್ವವೆಂದು ಸ್ಥಾಪಿಸುತ್ತದೆ. ಸಗುಣಬ್ರಹ್ಮ, ಪರಿಣಾಮವಾದ, ಜ್ಞಾನಕರ್ಮಸಮುಚ್ಚಯ ಮೊದಲಾದುವನ್ನು ಈ ದರ್ಶನ ಹೇಳುತ್ತದೆ.

ಕಾಲದ ದೃಷ್ಟಿಯಲ್ಲಿ ದ್ವೈತಾದ್ವೈತದರ್ಶನಗಳಿಗೆ ವಿಶಿಷ್ಟಾದ್ವೈತ ದರ್ಶನ ಹೇಗೆ ಮಧ್ಯಸ್ಥವಾಗಿದೆಯೋ ಹಾಗೆಯೇ ತತ್ತ್ವವಿಚಾರದಲ್ಲಿಯೂ ಮಧ್ಯಸ್ಥದೃಷ್ಟಿಯನ್ನು ಹೊಂದಿದೆ. ಸ್ವರೂಪೈಕ್ಯದಿಂದ ಅದ್ವೈತವನ್ನು ಅದ್ವೈತದರ್ಶನ ಸಾಧಿಸಿದರೆ ಈ ದರ್ಶನ ವಿಶಿಷ್ಟಾದ್ವೈತದ ಮೂಲಕ ಏಕಮೇವಾದ್ವಿತೀಯವಾದ ಬ್ರಹ್ಮವನ್ನು ಸ್ಥಾಪಿಸುತ್ತದೆ. ಚಿದಚಿದ್ವಿಶಿಷ್ಟವಾದ ಬ್ರಹ್ಮವಸ್ತುವೊಂದೇ ತತ್ತ್ವ ಎಂಬುದು ಇದರ ಸಿದ್ಧಾಂತ. ವಿಶೇಷಣಗಳಲ್ಲಿ ಬಹುತ್ವವಿದ್ದರೂ ವಿಶಿಷ್ಟವಸ್ತು ಒಂದೇ. ಜೀವರುಗಳೂ, ಪ್ರಕೃತಿಯೂ ಬ್ರಹ್ಮವಸ್ತುವಿಗಿಂತ ಭಿನ್ನರಾದರೂ ಆ ಬ್ರಹ್ಮವಸ್ತುವಿಗೇ ವಿಶೇಷಣಗಳಾಗಿ ಅದರೊಡನೆ ಒಂದುಗೂಡಿದ್ದಾರೆ. ಪ್ರಕೃತಿಗೂ, ಜೀವರಿಗೂ, ಬ್ರಹ್ಮವಸ್ತುವಿಗೂ ಸ್ವರೂಪ ಸ್ವಭಾವಗಳಲ್ಲಿ ಭೇದವಿದೆ. ಆದರೆ ಜೀವರೂ. ಪ್ರಕೃತಿಯೂ ಬ್ರಹ್ಮವಸ್ತುವನ್ನು ಬಿಟ್ಟು ಇರಲಾರರು. ಇವರ ಸತ್ತೆ, ಸ್ಥಿತಿ ಮತ್ತು ಪ್ರವೃತ್ತಿಗಳು ಬ್ರಹ್ಮವಸ್ತುವಿಗೆ ಅತ್ಯಂತ ಅಧೀನವಾಗಿವೆ. ಇವು ಬ್ರಹ್ಮವಸ್ತುವಿಗೆ ಅಪೃಥಕ್ಸಿದ್ಧ ವಿಶೇಷಣಗಳು. ಪರಸ್ಪರ ಭೇದ ಇವರ ಸ್ವರೂಪ ಸ್ವಭಾವದಲ್ಲಿದ್ದರೂ ಇವು ಬ್ರಹ್ಮವಸ್ತುವಿನೊಡನೆ ಸರ್ವಾವಸ್ಥೆಗಳಲ್ಲಿಯೂ ಕೂಡಿಕೊಂಡಿರುವುದರಿಂದ 'ಚಿದಚಿದ್ವಿಶಿಷ್ಟಂ ಬ್ರಹ್ಮ ಏಕಮೇವ ತತ್ತ್ವಂ' ಎಂದು ಘೋಷಿಸಲಾಗಿದೆ. ಜೀವ, ಬ್ರಹ್ಮ, ಜಗತ್ತುಗಳಿಗೆ ಬೇರೆ ಬೇರೆ ಸ್ವರೂಪ ಸ್ವಭಾವಗಳನ್ನು ಹೇಳುವ ಕಾರಣ ಭೇದವೂ ಸಿದ್ಧಿಸಿತು. ಕಾರಣಾವಸ್ಥೆ ಕಾರ್ಯಾವಸ್ಥೆಗಳೆರಡರಲ್ಲಿಯೂ ಬ್ರಹ್ಮವಸ್ತುವಿನೊಡನೆ ಸೇರಿ ಒಂದಾಗಿರುವುದರಿಂದ 'ಏಕಮೇವಾದ್ವಿತೀಯವಾದ ಬ್ರಹ್ಮ'ವನ್ನೇ ಹೇಳುವ ಕಾರಣ ಅದ್ವೈತವೂ ಸಿದ್ಧಿಸಿತು. ಹೀಗೆ ಇದು ಮಧ್ಯಸ್ಥ ದೃಷ್ಟಿಯನ್ನು ಹೊಂದಿದೆ.

ಶ್ರುತಿಗಳಲ್ಲಿ ಬರುವ ಭೇದಶ್ರುತಿಗಳಿಗೂ ಅಭೇದಶ್ರುತಿಗಳಿಗೂ ಸಮನಾದ ಪ್ರಾಧಾನ್ಯವನ್ನು ಈ ದರ್ಶನ ಕೊಡುತ್ತದೆ. ಇದು ಇದರ ವೈಶಿಷ್ಟ್ಯ. ಭೇದವಾದಿಗಳು ಅಭೇದ ವಾಕ್ಯಗಳಿಗೂ, ಅಭೇದವಾದಿಗಳು ಭೇದವಾಕ್ಯಗಳಿಗೂ ಗೌಣಾರ್ಥವನ್ನೇ

acharya.org

ಬಾಧಾರ್ಥವನ್ನೋ ಹೇಳಬೇಕಾಗುತ್ತದೆ. ಈ ದರ್ಶನ ಎಲ್ಲ ಶ್ರುತಿವಾಕ್ಯಗಳಿಗೂ ಮುಖ್ಯಾರ್ಥವನ್ನು ಹೇಳುವುದರಿಂದ ಸರ್ವಶ್ರುತಿಸಾಮಂಜಸ್ಯವನ್ನು ಸಾಧಿಸಿದೆ. ಇದು ಇದರ ಮಹತ್ತ್ವ. ಭೇದವಾಕ್ಯಗಳು ವಿಶೇಷಣಗಳಿಗನ್ವಯಿಸುವುದೆಂದೂ ಅಭೇದವಾಕ್ಯ ವಿಶಿಷ್ಟವಸ್ತುವಿಗನ್ವಯಿಸುವುದೆಂದೂ ಸಾಮಾನಾಧಿಕರಣ್ಯದಿಂದ ಸಾಧಿಸಿ ಚಿತ್ತು, ಅಚಿತ್ತು ಮತ್ತು ಈಶ್ವರ ಇವೆಲ್ಲವೂ ಸತ್ಯವೆಂದೂ ಪಾರಮಾರ್ಥಿಕವಾದುದೆಂದೂ ಸಮರ್ಥಿಸುವುದು ಈ ದರ್ಶನ.

ಈ ದರ್ಶನ ಭೇದ ಮತ್ತು ಅಭೇದಶ್ರುತಿಗಳಿಗೆ ಸಾಮಂಜಸ್ಯವನ್ನು ಕಂಡುಹಿಡಿದಿರುವುದು ಶರೀರ-ಶರೀರಿಭಾವದ ಮೂಲಕ. ಆತ್ಮ ಮತ್ತು ದೇಹಗಳು ಬೇರೆಯಾದರೂ ಶರೀರದಿಂದೊಡಗೂಡಿದ ಆತ್ಮನನ್ನು ಒಬ್ಬನೆಂದೇ ವ್ಯವಹರಿಸುತ್ತಾರೆ. ಹಾಗೆಯೇ ಚಿತ್ತು. ಮತ್ತು ಅಚಿತ್ತುಗಳಿಂದ ಬೇರೆಯಾದ ಈಶ್ವರ ಅವೆರಡು ತತ್ತ್ವಗಳನ್ನೂ ನಿಯಮಿಸುವವನಾಗಿ, ಅವುಗಳಿಗೆ ನಿಯಮೇನ ಧಾರಕನಾಗಿ ಅವುಗಳ ಶೇಷಿಯಾಗಿ, ಹೀಗೆ ಅವುಗಳನ್ನು ಶರೀರವನ್ನಾಗಿ ಹೊಂದಿ, ಅವುಗಳಿಂದ ಸರ್ವಾವಸ್ಥೆಗಳಲ್ಲಿಯೂ ವಿಶಿಷ್ಟನಾಗಿ, ಅದ್ವಿತೀಯನಾಗಿದ್ದಾನೆ. ಈ ಶರೀರ-ಶರೀರಿಭಾವದ ನಿರೂಪಣೆಯೂ ಉಪನಿಷತ್ತಿನಲ್ಲಿಯೇ ಇದೆ. ಇಂಥ ಘಟಕ ಶ್ರುತಿಗಳ ಸಹಾಯದಿಂದ ಸರ್ವಶ್ರುತಿಸಾಮಂಜಸ್ಯವನ್ನು ಈ ದರ್ಶನ ಸಾಧಿಸಿದೆ.

ರಾಮಾನುಜದರ್ಶನಕ್ಕೆ ಮತ್ತೊಂದು ಬಗೆಯ ವೈಶಿಷ್ಟ್ಯವೂ ಉಂಟು. ದೇಶದಲ್ಲಿ ಒಮ್ಮೆ ಮಲಿನವಾಗಿ ಹೋಗುತ್ತಿದ್ದ ಭಕ್ತಿಪಂಥವನ್ನು ಪುನರುತ್ಥಾನಗೊಳಿಸಿದ ಯಶಸ್ಸು ಇದರದು. ಅದ್ವೈತದರ್ಶನ ಉಪದೇಶಿಸಿದ ಜ್ಞಾನಮಾರ್ಗ ಅತ್ಯಂತ ಕಠಿಣವಾಗಿ ಸರ್ವರಿಗೂ ಅಸಾಧ್ಯವಾಗಿತ್ತು. ಆ ದರ್ಶನ ಅಧಿಕಾರಿಗಳನ್ನು ಉತ್ತಮಾಧಿಕಾರಿಗಳೆಂದೂ ಮಂದಾಧಿಕಾರಿಗಳೆಂದೂ ವಿಭಾಗಮಾಡಿ, ಜ್ಞಾನಮಾರ್ಗ ಉತ್ತಮಾಧಿಕಾರಿಗಳಿಗೂ, ಕರ್ಮಮಾರ್ಗ ಮಂದಾಧಿಕಾರಿಗಳಿಗೂ ಸರಿಯೆಂದು ಬೋಧಿಸಿತು. ಆದಾಗ್ಗೂ ನಿರ್ಗುಣಬ್ರಹ್ಮನಿರೂಪಣೆಯನ್ನು ಕೇಳಿದ ಜನ ಸಗುಣಬ್ರಹ್ಮದಲ್ಲಿ ಶ್ರದ್ಧೆ ಕಳೆದುಕೊಂಡರು. ತಮಗೆ ಜ್ಞಾನಮಾರ್ಗವೇ ಉಪದಿಷ್ಟವಾದುದೆಂದು ತಿಳಿದುಕೊಂಡು ಭಕ್ತಿ ಮತ್ತು ಕರ್ಮಗಳಲ್ಲಿ ನಂಬಿಕೆ ಬಿಡುತ್ತಾ ಬಂದರು. ಹೀಗಾಗಿ ಜ್ಞಾನಮಾರ್ಗ ಸಿದ್ಧಿಸದೆ, ಭಕ್ತಿಮಾರ್ಗವೂ ದೂರವಾಗುತ್ತಾ ಬಂತು. ಇಂಥ ವಿಷಮಕಾಲದಲ್ಲಿ ರಾಮಾನುಜದರ್ಶನ ಮೂಡಿಬಂದು ಜನತೆಯಲ್ಲಿ ಮಸಕಾಗುತ್ತಿದ್ದ ಭಕ್ತಿಮಾರ್ಗವನ್ನು ಪ್ರಜ್ವಲಗೊಳಿಸಿ ಮತ್ತೆ ಮೊದಲಿನಂತೆಯೇ ಅದು ಉತ್ತಮವಾಗಿ ಬೆಳಗಲು ಸಹಾಯಮಾಡಿ ಬರಡಾದ ಜೀವನಕ್ಕೆ ಭಗವತ್ಪ್ರೇಮದ ಅಮೃತಸೇಚನವನ್ನುಂಟುಮಾಡಿತು.

ಭಕ್ತಿಮಾರ್ಗವನ್ನುಪದೇಶಿಸಿ ಎಲ್ಲರಿಗೂ ಕೃತಾರ್ಥತೆಯನ್ನು ತಂದುಕೊಟ್ಟಂತೆಯೇ ಎಲ್ಲರೂ ತಮ್ಮ ಉದ್ಧಾರವನ್ನು ಕಾಣಬಹುದೆಂಬ ಆಶಾಕಿರಣವನ್ನು ಬೆಳಗಿದ ದರ್ಶನ

acharya.org

ವಿದು. ಶಾಸ್ತ್ರೀಯಸರಣಿಯನ್ನನುಸರಿಸಿದ ಶಾಸ್ತ್ರಗಳು ವೇದಾಧಿಕಾರವಿರುವ ಉತ್ತಮ ವರ್ಣದವರಿಗೆ ಮಾತ್ರ ಬ್ರಹ್ಮವಿದ್ಯೆಯಲ್ಲಿ ಅಧಿಕಾರ ಉಂಟೆಂದು ಘೋಷಿಸಿವೆ. ಭಕ್ತಿ ಯೋಗ ಮೋಕ್ಷೋಪಾಯವಾದರೂ, ಜ್ಞಾನಯೋಗ ಮೋಕ್ಷೋಪಾಯವಾದರೂ ಇವುಗಳನ್ನನುಷ್ಠಿಸಲು ಶಾಸ್ತ್ರಾಧಿಕಾರನಿಯಮಗಳು ಅನೇಕವೇಳೆ ಅಡ್ಡಿಯಾಗುತ್ತವೆ. ಈ ಯೋಗಗಳನ್ನನುಷ್ಠಿಸಲು ಶಾಸ್ತ್ರತಃ ಅರ್ಹತೆಇಲ್ಲದವರು 'ಸ್ವಕರ್ಮಣಾ ತಮ- ಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ', 'ಸ್ವೇ ಸ್ವೇ ಕರ್ಮಣ್ಯಭಿರತಃ' ಎಂದು ಗೀತೆ ತಿಳಿಸಿದಂತೆ ತಮ್ಮ ತಮ್ಮ ವರ್ಣಾಶ್ರಮಧರ್ಮಗಳನ್ನು ಅನುಷ್ಠಿಸಿ ತನ್ಮೂಲಕ ಸತ್ತ್ವಸಂಪನ್ನರಾಗಿ ಉತ್ತಮ ವರ್ಣಗಳಲ್ಲಿ ಜನಿಸಿ ಕ್ರಮೇಣ ಮೋಕ್ಷವನ್ನು ಸಂಪಾದಿಸಬೇಕಾಗುತ್ತದೆ. ಹೀಗಾಗಿ ಮಾನವಕೋಟಿಯಲ್ಲಿ ಬಹುಭಾಗ ಆಧ್ಯಾತ್ಮಿಕ ಸಿದ್ಧಿಯನ್ನು ಈಗಲೇ ಪಡೆಯಲು ಸಾಧ್ಯವಿಲ್ಲವೆಂಬ ಕೊರತೆಗೆ ಪಾತ್ರರಾಗುವ ಸಂಭವ ವುಂಟು. ಈ ಕೊರತೆಯನ್ನು ನಿವಾರಿಸಿ ಕಠಿಣವಾದ ಈ ಯೋಗಗಳನ್ನನುಸರಿಸಲು ಶಾಸ್ತ್ರತಃ ಅರ್ಹತೆ ಇಲ್ಲದವರೂ ಸಹ ಜಾತಿ, ಲಿಂಗ, ಗುಣ ಭೇದಗಳಿಲ್ಲದೆ ಈ ಜನ್ಮ ದಲ್ಲಿಯೇ ಪ್ರಪತ್ತಿಮಾರ್ಗವನ್ನನುಸರಿಸಿ ಮೋಕ್ಷವನ್ನು ಪಡೆಯಬಹುದೆಂದು ಬೋಧಿಸಿದ ಮಹತ್ತ್ವ ಈ ದರ್ಶನಕ್ಕಿದೆ. ಶಾಸ್ತ್ರೀಯಸರಣಿಯನ್ನು ಎಳ್ಳಷ್ಟೂ ಬಿಡದೆ ಶಾಸ್ತ್ರಗಳಲ್ಲಿ ಹೇಳಿರುವಂತೆಯೇ ಭಕ್ತಿ ಮತ್ತು ಪ್ರಪತ್ತಿಗಳನ್ನು ಸಶಕ್ತಾಧಿಕಾರಿಗಳು ಮತ್ತು ಅಶಕ್ತಾ ಧಿಕಾರಿಗಳಿಗೆ ಅನ್ವಯಿಸುವಂತೆ ಪ್ರತಿಪಾದಿಸಿ, ಲೋಕದ ಜನತೆಗೇ ಮೋಕ್ಷದ್ವಾರವನ್ನು ತೆರೆದ ಭವ್ಯವಾದ ದರ್ಶನ ಇದು. ಹೀಗೆ ದರ್ಶನಗಳ ಸಮುದಾಯದಲ್ಲಿ ರಾಮಾನುಜ ದರ್ಶನ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ.

ರಾಮಾನುಜ ದರ್ಶನವೆಂದೇಕೆ ?

ಭಗವದ್ರಾಮಾನುಜರು ವಿಶಿಷ್ಟಾದ್ವೈತ ದರ್ಶನದ ಪ್ರವರ್ತಕರು. ಈ ದರ್ಶನ ಬಹಳ ಅನಾದಿಯಾದುದು. ವೇದಾಂತ ಸೂತ್ರಗಳಲ್ಲಿ ಅನೇಕ ಪ್ರಾಚೀನರಾದ ಆಚಾರ್ಯ ರುಗಳ ಅಭಿಪ್ರಾಯಗಳನ್ನು ಬಾದರಾಯಣರು ಉಲ್ಲೇಖಿಸಿದ್ದಾರೆ. ವೇದಾಂತ ದರ್ಶನದ ಬೇರೆ ಬೇರೆ ಮುಖಗಳನ್ನಿವರು ಪ್ರತಿಸಿಧಿಸುತ್ತಾರೆ. ರಾಮಾನುಜರು ತಮ್ಮ ಶ್ರೀಭಾಷ್ಯದ ಆರಂಭದಲ್ಲಿ ಈ ಸಂಪ್ರದಾಯದ ಪ್ರಾಚೀನಾಚಾರ್ಯರುಗಳನ್ನು ಹೆಸರಿಸಿ 'ತನ್ಮತಾನು- ಸಾರೇಣ ಸೂತ್ರಾಕ್ಷರಾಣಿ ವ್ಯಾಖ್ಯಾಸ್ಯಂತೇ' ಎಂದು ಘೋಷಿಸಿದ್ದಾರೆ. ಅತಿ ಪ್ರಾಚೀನ ರಾದ ಆಳ್ವಾರುಗಳ ತಮಿಳು ಪ್ರಬಂಧಗಳಲ್ಲಿಯೂ ಈ ದರ್ಶನದ ಮುಖ್ಯಾಂಶಗಳಡಗಿವೆ. ಇವುಗಳಿಂದ ರಾಮಾನುಜರಿಗೆ ಸ್ಫೂರ್ತಿ ದೊರಕಿತು. ರಾಮಾನುಜರಿಗಿಂತ ಹಿಂದಿನವ ರಾದ ನಾಥಮುನಿಗಳು ಯಾಮುನಾಚಾರ್ಯರು ಮುಂತಾದವರೂ ಈ ದರ್ಶನದ ಸ್ಥಾಪನಾಚಾರ್ಯರುಗಳಾಗಿದ್ದಾರೆ. ಶ್ರೀಮದ್ವಿಷ್ಣುಪುರಾಣ, ಪಾಂಚರಾತ್ರಾಗಮ,

acharya.org

ಶ್ರೀಮದ್ರಾಮಾಯಣ, ಮಹಾಭಾರತದ ನಾರಾಯಣೀಯ ಮುಂತಾದುವುಗಳೂ ತಮಿಳುಪ್ರಬಂಧಗಳಂತೆಯೇ ಈ ದರ್ಶನಕ್ಕೆ ಪರಮಾಧಾರಗಳಾಗಿವೆ. ಹೀಗೆ ಬಹಳ ಹಿಂದಿನ ಕಾಲದಿಂದಲೂ ಈ ಸಿದ್ಧಾಂತದ ಪ್ರಧಾನತತ್ತ್ವಗಳ ಪ್ರತಿಪಾದನೆಯನ್ನು ನಾವು ಕಾಣಬಹುದು. ರಾಮಾನುಜರೂ ತಮ್ಮ ಪರಮಾಚಾರ್ಯರಾದ ಯಾಮುನರ ಹೆಜ್ಜೆಗಳಲ್ಲಿಯೇ ನುಂದರಿದು ಉಪದೇಶಿಸಿದ್ದಾರೆ. ಹೀಗಿರಲು ಈ ದರ್ಶನಕ್ಕೆ ರಾಮಾನುಜ ದರ್ಶನ ಎಂಬ ಹೆಸರು ರೂಢಿಯಲ್ಲಿ ಬರಲು ಕಾರಣವೇನೆಂಬುದನ್ನು ನಾವು ವಿಚಾರಿಸ ಬಹುದು.

ವೇದೋಪನಿಷತ್ತುಗಳಲ್ಲಿಯೂ, ದ್ರಾವಿಡಪ್ರಬಂಧಗಳಲ್ಲಿಯೂ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಧಾನತತ್ತ್ವಗಳ ನಿರೂಪಣೆ ಇದ್ದರೂ ಅವುಗಳನ್ನೆಲ್ಲಾ ಕ್ರೋಢೀಕರಿಸಿ ಯುಕ್ತಿಯುಕ್ತವಾಗಿ ಪ್ರತಿಪಾದಿಸಿ ಸಿದ್ಧಾಂತಕ್ಕೆ ಒಂದು ನಿರ್ದಿಷ್ಟವಾದ ಆಕಾರವನ್ನು ಕೊಟ್ಟ ಯಶಸ್ಸು ರಾಮಾನುಜರದು. ವೇದಾಂತಸೂತ್ರಗಳಿಗೆ ಬೋಧಾಯನಾದಿಗಳ ಭಾಷ್ಯಗಳು ಈ ದೃಷ್ಟಿಯನ್ನೇ ಪೋಷಿಸಿ ವಿವರಣೆ ನೀಡಿದ್ದರೂ ತದುತ್ತರಕಾಲದಲ್ಲಿ ಪ್ರಚಾರಕ್ಕೆ ಬಂದಿದ್ದ ಅದ್ವೈತ ಹಾಗೂ ಭೇದಾಭೇದ ವಾದಗಳನ್ನು ಪರೀಕ್ಷಿಸಿ ಶಾಸ್ತ್ರಾಧಾರಗಳಿಂದ ಪ್ರಾಚೀನವಾದ ವಿಶಿಷ್ಟಾದ್ವೈತಸಿದ್ಧಾಂತದ ಪುನಸ್ಸಮರ್ಥನೆಯನ್ನು ಮಾಡಬೇಕಾದ ಅವಶ್ಯಕತೆ ಬಂದೊದಗಿತ್ತು. ಈ ಮಹತ್ಕಾರ್ಯವನ್ನು ನಡೆಸಲು ಮಹಾಪುರುಷನೊಬ್ಬನನ್ನು ಬಹಳ ಹಿಂದಿನ ಕಾಲದಿಂದಲೂ ನಿರೀಕ್ಷಿಸುತ್ತಿದ್ದರು. ಅತ್ಯಂತ ಮೇಧಾವಿಯೂ, ಶಾಸ್ತ್ರಸಂಪನ್ನನೂ, ಉದಾರಹೃದಯನೂ, ಭಗವದ್ಭಕ್ತನೂ ಆದ ಮಹಾಪುರುಷನೊಬ್ಬನು ಈ ಕಾರ್ಯಕ್ಕಾಗಿ ಅವತರಿಸಬೇಕಾಗಿತ್ತು. ಆ ಮಹಾಪುರುಷನೇ ರಾಮಾನುಜರು. ತಮ್ಮ ಅದ್ವಿತೀಯವಾದ ಶಾಸ್ತ್ರಜ್ಞಾನ, ಅಗಾಧವಾದ ಭಗವತ್ಪ್ರೇಮ ಮತ್ತು ಅಪಾರವಾದ ಅನುಕಂಪೆ—ಇವುಗಳ ಅಪೂರ್ವ ಸಮಾಯೋಗದಿಂದ ಇವರು ಈ ಮಹತ್ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದರು. ಬರಡಾದ ಜೀವಕ್ಕೆ ಭಕ್ತಿಸಂಜೀವಿನಿಯನ್ನೆರೆದು ತಂಪುಂಟುಮಾಡಿದರು. ಇತರರಿಗಿಂತ ಈ ಕಾರ್ಯವನ್ನು ಅತ್ಯಂತ ಪ್ರಭಾವಪೂರ್ಣವಾಗಿ ಇವರು ನಿರ್ವಹಿಸಿದ ಕಾರಣ ಈ ದರ್ಶನವನ್ನು 'ರಾಮಾನುಜ ದರ್ಶನ'ವೆಂದೇ ಕರೆಯುವುದು ವಾಡಿಕೆಯಾಯಿತು.

ಭಗವದ್ರಾಮಾನುಜರು ಈ ಬಗೆಯ ಸಮನ್ವಯವನ್ನು ಸಾಧಿಸಿರುವುದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ವಿಶಿಷ್ಟಾದ್ವೈತ ದರ್ಶನಕ್ಕೆ ಸೇರಿದ ಅನೇಕ ಗ್ರಂಥಗಳು ಲುಪ್ತವಾಗಿ ಹೋಗಿವೆ. ಅದರಲ್ಲೂ ರಾಮಾನುಜರಿಗಿಂತ ಹಿಂದಿನವರ ಕೃತಿಗಳಂತೂ ಬಹಳ ವಿರಳವಾಗಿವೆ. ಇವುಗಳಲ್ಲಿ ಎಲ್ಲಿಯೂ ಕಂಡುಬರದ ವಿವರಣೆಗಳು ಮೊಟ್ಟಮೊದಲಾಗಿ ರಾಮಾನುಜರಿಂದ ಆಗಿವೆ ಎಂಬುದು ಗಮನಿಸಬೇಕಾದ ವಿಚಾರ. ಈಗ ಶರೀರ–

acharya.org

ಶರೀರಿ ಭಾವವನ್ನು ತೆಗೆದುಕೊಳ್ಳೋಣ. ಉಪನಿಷತ್ತಿನಲ್ಲಿಯೇ 'ಯ ಆತ್ಮನಿ ತಿಷ್ಠನ್, ಆತ್ಮನೋಽಂತರೋ ಯಮಾತ್ಮಾನಂ ವೇದ ಯಸ್ಯಾತ್ಮಾ ಶರೀರಂ ಯ ಆತ್ಮಾನ-ಮಂತರೋ ಯಮಯತಿ ಸ ತೇ ಆತ್ಮಾ ಅಂತರ್ಯಾಮ್ಯಮೃತಃ' ಎಂದು ಭಗವಂತನು ಜೀವಾತ್ಮನಿಗೆ ಆತ್ಮನೆಂದು ಹೇಳಿದೆ. ಆಳ್ವಾರುಗಳೂ ಸಹ ಇದೇ ಅಂಶವನ್ನೇ 'ಉಯಿರಾಹಿನ್ರಾಯ್' 'ಅಡಿಯೇನುಳ್ಪುಹುಂದಾರ್,' 'ಉಯಿರುಕ್ಕುಂಉಯಿರಾಯ್' ಎಂದು ಅನುಭವಿಸಿದ್ದಾರೆ. ಭಗವಂತನು ಹೇಗೆ ಎಲ್ಲಕ್ಕೂ ಆತ್ಮನಾಗಿದ್ದಾನೆ ಎಂಬ ಅಂಶದ ವಿವರಣೆಯನ್ನೆ ಮೊಟ್ಟಮೊದಲಾಗಿ ರಾಮಾನುಜರು ನಿರೂಪಿಸಿದ್ದಾರೆ. ಭಗವಂತನು ಎಲ್ಲಕ್ಕೂ ನಿಯಮೇನ ಧಾರಕನಾಗಿ, ನಿಯಾಮಕನಾಗಿ ಶೇಷಿಯಾಗಿರುವುದರಿಂದ ಎಲ್ಲಕ್ಕೂ ಆತ್ಮನಾಗಿದ್ದಾನೆ ಎಂಬುದೇ ಈ ನಿರೂಪಣೆ. ಶರೀರ-ಶರೀರಿಭಾವದ ಪರಿಷ್ಕರಣದಂತೆಯೇ ಅಪೃಥಕ್‌ಸಿದ್ಧಿ ಮತ್ತು ಸಾಮಾನಾಧಿಕರಣ್ಯದ ನಿರೂಪಣೆಯೂ ರಾಮಾನುಜರದು. ಪರಸ್ಪರ ಅವಿರುದ್ಧವಾದ ಅನೇಕ ವಿಶೇಷಣಗಳು ಒಂದೇ ಪದಾರ್ಥದಲ್ಲಿರಬಲ್ಲವೆಂಬುದನ್ನು ಸಾಮಾನಾಧಿಕರಣ್ಯದಿಂದ ಸಮರ್ಥಿಸಿದ್ದಾರೆ. 'ಸತ್ಯಂ, ಜ್ಞಾನಂ, ಅನಂತಂ' ಎಂದು ಬ್ರಹ್ಮವಸ್ತುವನ್ನು ವೇದ ಕೊಂಡಾಡುವಾಗ ಈ ಎಲ್ಲ ಕಲ್ಯಾಣಗುಣಗಳಿಂದ ಬ್ರಹ್ಮವಸ್ತು ಕೂಡಿದೆ ಎಂಬುದನ್ನು ಸಮರ್ಥಿಸಲಾಗಿದೆ. ಹಾಗೆಯೇ ಚಿದಚಿದ್ವಿಶಿಷ್ಟವಾದ ಬ್ರಹ್ಮವಸ್ತುವೊಂದೇ ತತ್ತ್ವವೆಂಬುದನ್ನು ಸಮರ್ಥಿಸಿದವರೂ ರಾಮಾನುಜರೇ. ಕಾರಣಾವಸ್ಥೆಯಲ್ಲಿ ಸೂಕ್ಷ್ಮಾವಸ್ಥೆಯಲ್ಲಿರುವ .ಚೇತನಾಚೇತನಗಳಿಂದ ಬ್ರಹ್ಮ ಕೂಡಿದೆಯೆಂದೂ ಕಾರ್ಯಾವಸ್ಥೆಯಲ್ಲಿ ಸ್ಥೂಲ ಚಿದಚಿದ್ವಿಶಿಷ್ಟವಾಗಿದೆಯೆಂದೂ ಸಮರ್ಥಿಸಿದವರಿವರು. ಅಚೇತನಕ್ಕೆ ವಿಕಾರವನ್ನೂ, ಚೇತನಕ್ಕೆ ಜ್ಞಾನಸಂಕೋಚವಿಕಾಸಗಳನ್ನೂ ನಿರೂಪಿಸಿ ಬ್ರಹ್ಮವಸ್ತು ನಿರ್ವಿಕಾರವಾಗಿಯೇ ಉಳಿಯುವುದೆಂದು ಸಮರ್ಥಿಸಿ ಬ್ರಹ್ಮವಸ್ತುವಿನ ಅವಿಕಾರತ್ವವನ್ನು ನಿರೂಪಿಸಲಾಗಿದೆ. 'ತತ್ತ್ವಮಸಿ' ವಾಕ್ಯಕ್ಕೆ ಅರ್ಥವಿವರಣೆ ಮಾಡಿರುವುದರಲ್ಲಿಯೂ ರಾಮಾನುಜರು ನಿಷ್ಕೃಷ್ಟವಾಗಿ ನಿರೂಪಣೆ ಮಾಡಿದ್ದಾರೆ. ಸಾಮಾನಾಧಿಕರಣ್ಯದಿಂದ 'ತತ್' ಪದಾರ್ಥಕ್ಕೂ 'ತ್ವಮ್' ಪದಾರ್ಥಕ್ಕೂ ಅಭೇದವನ್ನು ಹೇಳುವಾಗ 'ಆ ಪ್ರಸಿದ್ಧ ಜಗತ್ಕಾರಣವಸ್ತುವೇ ನಿನಗೂ ಅಂತರ್ಯಾಮಿಯಾಗಿದೆ' ಎಂಬ ಅರ್ಥವನ್ನಿವರು ತೆಗೆದು ವಿವರಿಸಿದ್ದಾರೆ. ಧರ್ಮಭೂತಜ್ಞಾನದ ನಿರೂಪಣೆಯಲ್ಲಿಯೂ ರಾಮಾನುಜರ ಪ್ರಭಾವವನ್ನು ಕಾಣಬಹುದು. ಸಿದ್ಧಾಂತದಲ್ಲಿ ಪ್ರಧಾನವಾದ ಸಾಮಾನಾಧಿಕರಣ್ಯ, ಪ್ರಕಾರ–ಪ್ರಕಾರಿಭಾವ, ಸತ್ಕಾರ್ಯವಾದ, ಶರೀರ–ಶರೀರಿಭಾವ, ಶೇಷಶೇಷಿಭಾವ, ಉಭಯಲಿಂಗತ್ವ, ಉಭಯವಿಭೂತಿತ್ತ್ವ, ವಿಗ್ರಹಗುಣವತ್ತ್ವ ಮುಂತಾದ ಅನೇಕಾನೇಕ ವಿಚಾರಗಳನ್ನು ಶಾಸ್ತ್ರಪದ್ಧತಿಗೂ ಸಂಪ್ರದಾಯಾನುಷ್ಠಾನಗಳಿಗೂ ಪ್ರಮಾಣಗಳಿಗೂ ಅನುಸಾರವಾಗಿ ಸಮಗ್ರವಾಗಿ ನಿರೂಪಣೆ ಮಾಡಿದ ಯಶಸ್ಸು ರಾಮಾನುಜರದೇ. ಅದ್ವೈತಸಿದ್ಧಾಂತದ ನಿರಾಕರಣ

acharya.org

ಮಾಡುವಾಗ ಆಚಾರ್ಯರು ತೋರಿಸಿರುವ ಏಳು ಬಗೆಯ ಅನುಪಪತ್ತಿಗಳು ಇವರ ಪ್ರತಿಭೆಗೆ ಸಾಕ್ಷಿಯಂತಿವೆ. ಈ ಆಕ್ಷೇಪಗಳಿಗೆ ತೃಪ್ತಿಕರವಾದ ಸಮಾಧಾನ ಇನ್ನೂ ಬಂದಿಲ್ಲವೆಂದರೆ ತಪ್ಪಾಗದು. ಹಾಗೆಯೇ ಉಪಾಯನಿರೂಪಣೆಯಲ್ಲಿಯೂ ರಾಮಾನುಜರ ಪ್ರಭಾವವನ್ನು ಕಾಣಬಹುದು. ಇದರಲ್ಲಿ ಅವರ ಹೃದಯವೈಶಾಲ್ಯ ಮತ್ತು ಅಪಾರವಾದ ಅನುಕಂಪೆಯ ಪರಿಚಯವಾಗುತ್ತದೆ. 'ಏಕಸ್ಯ ಮರಣಂ ಮೇಽಸ್ತು ಮಾ ಭೂತ್ಸರ್ವವಿನಾಶನಂ' ಎಂದು ಬುದ್ಧನು ಹೇಳಿದಂತೆಯೇ ಆಚಾರ್ಯರೂ ಸಹ 'ನನಗೆ ನರಕವಾದರೂ ಆಗಲಿ, ಅನೇಕ ಕೋಟಿ ಜನರ ಉದ್ಧಾರವಾದರೆ ಸಾಕು' ಎಂದು ತಮ್ಮ ಆಚಾರ್ಯರೊಡನೆ ಹೇಳಿದರು. ಗೂಢವಾದ ಮಂತ್ರವನ್ನು ಗೋಪುರದ ಮೇಲಿಂದ ಅಖಂಡವಾದ ಜನಸ್ತೋಮಕ್ಕೆ ಉಪದೇಶಿಸಿದಾಗ ಅವರ ಅಪಾರವಾದ ಈ ಅನುಕಂಪೆಯ ಕಾರಣವೇ ಅವರು ಸಕಲಚೇತನರಿಗೂ ಉದ್ಧಾರಕ್ಕೆ ಸಾಧ್ಯವಾಗುವ ಮಾರ್ಗವನ್ನು ತೋರಿಕೊಟ್ಟರು. ಅವರ ಆಚಾರ್ಯರು 'ಎಂಬೆರುಮಾನಾರ್' ಎಂದು ಅವರನ್ನು ಅಭಿನಂದಿಸಿದಂತೆಯೇ ಅವರು ವಿಶ್ವಾಚಾರ್ಯರು. ಹಿಂದಿನಿಂದ ಸಂಪ್ರದಾಯದಲ್ಲಿ 'ಪ್ರಪತ್ತಿ' ಅಥವಾ 'ಶರಣಾಗತಿ'ಯು ಮಾನ್ಯವಾಗಿದ್ದರೂ, ಅದು ಶಾಸ್ತ್ರೀಯವೆಂಬ ನಂಬಿಕೆ ಇದ್ದರೂ, ಸಂಪ್ರದಾಯದ ಶೃಂಖಲೆಗಳನ್ನು ಕಿತ್ತೊಗೆದು ಎಲ್ಲ ಜನರಿಗೂ ಮೋಕ್ಷಾಧಿಕಾರವನ್ನು ದೊರಕಿಸಿಕೊಡಲು ಅಂದಿನ ಆಚಾರ್ಯಪರಂಪರೆ ಧೈರ್ಯ ಮಾಡಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ವೇದಾಂತಮಾರ್ಗದಲ್ಲಿ ಹಿಂದಿನಿಂದ ರೂಢಿಯಲ್ಲಿದ್ದು ಬಳಿಕ ತಪ್ಪಿದ್ದ 'ಶರಣಾಗತಿ' ಎಂಬ ಮುಕ್ತಿಘಂಟಾಪಥವೊಂದನ್ನು ಪುನಸ್ಸಮರ್ಥನೆ ಮಾಡಿ ವಿಚಾರಕ್ರಾಂತಿಯನ್ನು ಮೂಡಿಸಿದ ಯಶಸ್ಸೂ ರಾಮಾನುಜರದೇ. ಪ್ರಪತ್ತಿ ವೇದಪ್ರತಿಪಾದ್ಯವಾಗಿ ಪ್ರಾಚೀನರೆಲ್ಲ ಅನುಷ್ಠಿಸುತ್ತಿದ್ದ ಧರ್ಮ. ಈ ಉಪಾಯದಿಂದ ಮೋಕ್ಷಪ್ರಾಪ್ತಿಯನ್ನು ನಿರೂಪಿಸಿದಂತೆಯೇ ಭಕ್ತಿಯೋಗದಿಂದಲೂ ಸಿದ್ಧಿಯನ್ನು ಪಡೆಯಬಹುದೆಂದು ಇವರು ತಿಳಿಸಿವರು. ತಮ್ಮ ಶ್ರೀಭಾಷ್ಯಾದಿ ಗ್ರಂಥಗಳಲ್ಲಿ ಭಕ್ತಿಯೋಗವನ್ನೂ, ಗದ್ಯತ್ರಯಗಳಲ್ಲಿ ಪ್ರಪತ್ತಿಯನ್ನೂ ಪ್ರತಿಪಾದಿಸಿ ಭಕ್ತಿಯೋಗವನ್ನನುಷ್ಠಿಸಲು ಅಸಮರ್ಥರಾದವರು ಪ್ರಪತ್ತಿಯಿಂದ ಭಗವಂತನ ನಿತ್ಯಕೈಂಕರ್ಯವನ್ನು ಪಡೆಯಬಹುದೆಂದು ಆಶ್ವಾಸನೆ ನೀಡಿವರು. ಪುರುಷಾರ್ಥನಿರೂಪಣೆಯಲ್ಲಿಯೂ ನಿಷ್ಕೃಷ್ಟವಾದ ವಿವರಣೆಯನ್ನು ರಾಮಾನುಜರು ನೀಡಿದರು. ಭಗವತ್ಪ್ರಾಪ್ತಿಪೂರ್ವಕವಾದ ನಿತ್ಯ ಕೈಂಕರ್ಯವೇ ಚೇತನರ ಪರಮಪುರುಷಾರ್ಥವೆಂಬುದನ್ನು ಇವರು ಸಂಶಯಕ್ಕೆಡೆ ಬಾರದಂತೆ ನಿರೂಪಿಸಿದರು. ಹೀಗೆ ರಾಮಾನುಜರು ಈ ಸಿದ್ಧಾಂತವನ್ನು ಸರ್ವತೋಭದ್ರವಾಗಿ ಸಂರಕ್ಷಣೆ ಮಾಡಿದುದರ ಕಾರಣವೇ ಈ ದರ್ಶನಕ್ಕೆ 'ರಾಮಾನುಜ ದರ್ಶನ' ಎಂಬ ಹೆಸರೇ ರೂಢಿಯಲ್ಲಿ ಬಂದಿದೆ.

acharya.org

ಸಂಪ್ರದಾಯ ಪರಂಪರೆ

ಈ ಸಂಪ್ರದಾಯವನ್ನು ಮೊಟ್ಟಮೊದಲು ಉಪದೇಶಿಸಿದವನು ಶ್ರೀಮನ್ನಾರಾಯಣನೇ ಆದ ಕಾರಣ ಅವನೇ ಪ್ರಥಮಾಚಾರ್ಯನಾಗಿದ್ದಾನೆ. 'ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ' ಎಂಬಂತೆ ಚತುರ್ಮುಖಬ್ರಹ್ಮನಿಗೆ ಪ್ರಥಮತಃ ಆ ಸರ್ವೇಶ್ವರನೇ ಉಪದೇಶ ಮಾಡಿದವನು. 'ನಾರಾಯಣೋ ಗುರುಃ' 'ತ್ವಮೇವ ಬಂಧುಶ್ಚ ಗುರುಸ್ತ್ವಮೇವ' ಎಂಬುದಾಗಿ ಆತನನ್ನು ಪರಮಾಚಾರ್ಯನೆಂದು ವರ್ಣಿಸಿದ್ದಾರೆ. ಅಧ್ಯಾತ್ಮಸಂಪ್ರದಾಯವನ್ನು ಅಯಾ ಸಮಯಗಳಲ್ಲಿ ಉಪದೇಶ ಮಾಡಿರುವುದಲ್ಲದೆ ಅವುಗಳಿಗೆ ಅಪಾಯ ಸಂಭವಿಸಿದಾಗ ಅವುಗಳನ್ನು ಕಾಪಾಡಿಕೊಟ್ಟಿರುವವನೂ ಅವನೇ. ತನ್ನ ಪರಮಭಕ್ತರ ಮುಖಾಂತರ ಅವುಗಳ ಪ್ರವರ್ತನವನ್ನು ಮಾಡಿಸಿರುವವನೂ ಅವನೇ. ಭಗವಂತನ ಸಂಕಲ್ಪವಿಲ್ಲದೆ, ಅವನ ಕರುಣಾಕಟಾಕ್ಷವಿಲ್ಲದೆ ಯಾವ ಬಗೆಯ ಅರಿವೂ ಮೂಡದು ; ಬೆಳೆಯದು. ಭಗವಂತನು ಹೀಗೆ ಜ್ಞಾನಪ್ರವರ್ತಕನೂ ಜ್ಞಾನೋಪದೇಶಕನೂ ಆಗಿರುವುದರಿಂದ ಪರಮಾಚಾರ್ಯನೆನಿಸಿದ್ದಾನೆ. ಧರ್ಮಕ್ಕೆ ಗ್ಲಾನಿಯುಂಟಾದ ಸಮಯದಲ್ಲಿ ಅವತಾರಮಾಡಿ ಧರ್ಮೋದ್ಧರಣವನ್ನು ಮಾಡುವುದಾಗಿ ತಾನೇ ಹೇಳಿಕೊಂಡಿದ್ದಾನೆ. ತಾನು ಅವತರಿಸುವಂತೆಯೇ ತನ್ನೊಡನಿರುವ ನಿತ್ಯಸೂರಿಗಳನ್ನೂ ಇಲ್ಲಿಗೆ ಕಳುಹಿಸಿಕೊಟ್ಟು ವೇದಾರ್ಥಗಳಲ್ಲಿ ಸಾರತಮವಾದ ಅಂಶಗಳನ್ನು ಎಲ್ಲರಿಗೂ ತಿಳಿಯುವಂತೆ ಉಪದೇಶಮಾಡಿಸಿದ್ದಾನೆ. ಆಯುಧಗ್ರಹಣಮಾಡಿ ಉದ್ಧಾರಮಾಡುವುದಕ್ಕಿಂತ മಿಗಿಲಾಗಿ ಪರಮಾತ್ಮನು ದಯಾಮಯನಾಗಿ ಅವತರಿಸಿ ಶಾಸ್ತ್ರೋಪದೇಶವನ್ನು ಮಾಡಿ ಸಂಸಾರಮಗ್ನರನ್ನು ಉದ್ಧರಿಸುವನು.

> "ಸಾಕ್ಷಾನ್ನಾರಾಯಣೋ ದೇವಃ ಕೃತ್ವಾ ಮರ್ತ್ಯಮಯೀಂ ತನುಮ್ ।
> ಮಗ್ನಾನುದ್ಧರತೇ ಲೋಕಾನ್ ಕಾರುಣ್ಯಾಚ್ಛಾಸ್ತ್ರಪಾಣಿನಾ ॥

ಎಂದು ಈ ರಹಸ್ಯವನ್ನು ಹಿರಿಯರು ಹೇಳಿದ್ದಾರೆ. ದಯಾಮಯನಾದ ಭಗವಂತನು ಅನಾದಿಕಾಲದಿಂದಲೂ ಹೀಗೆ ಜ್ಞಾನಾಧಿಕರಾದ ಆಚಾರ್ಯರುಗಳನ್ನು ಇಲ್ಲಿಗೆ ಕಳುಹಿಸುತ್ತಾ ಪರಮೋಪಕಾರ ಮಾಡುತ್ತಿದ್ದಾನೆ.

ಸಕಲಲೋಕಗಳಿಗೂ ಹಿತೈಷಿಯಾದ ಭಗವಂತನು ಲೋಕೋದ್ಧಾರಕ್ಕಾಗಿ ವೇದವೇದಾಂಗಗಳೇ ಮೊದಲಾದ ಜ್ಞಾನಪ್ರದೀಪಗಳನ್ನು ಬೆಳಗಿಸಿದನು. ಕುರುಡರಿಗೆ ದೀಪವು ಹೇಗೆ ಪ್ರಯೋಜನವಾಗುವುದಿಲ್ಲವೋ ಹಾಗೆ ಭಕ್ತಿಯ ಸಿದ್ಧಾಂಜನದಿಂದ ಒಳಗಣ್ಣಿನ ಕುರುಡನ್ನು ಕಳೆದುಕೊಳ್ಳದಿದ್ದ ಸಂಸಾರಿಗಳಿಗೆ ಆ ದೀಪದ ಉಪಯೋಗ ಆಗಲಿಲ್ಲ. ಇದನ್ನು ಕಂಡ ಕರುಣಾಕರನಾದ ದೇವನು ತಾನೇ ಇಲ್ಲಿ ಬಂದು ರಾಮಕೃಷ್ಣಾದಿರೂಪದಿಂದ ಅವತರಿಸಿ ತನ್ನ ಪರತ್ವವನ್ನು ಮರೆಸಿ ಸೌಲಭ್ಯವನ್ನು ಪ್ರಕಾಶಿಸಿ ತನ್ನ ಸ್ವರೂಪ ಗುಣ ಚೇಷ್ಟಿತಗಳಿಂದ ಲೋಕವನ್ನು ವಶಪಡಿಸಿಕೊಳ್ಳಲು ಯತ್ನಿಸಿದನು. ಅನಾದಿ

acharya.org

ಕರ್ಮವಾಸನೆಯು ಕಾರಣ ಕೊಳೆಯಿನ್ನೂ ಹೋಗಿರದ ಕಾರಣ ಈ ಲೋಕ ಭಗವಂತ ನನ್ನೂ ಸಾಮಾನ್ಯಮನುಷ್ಯನೆಂದು ಕಂಡು ಅವನು ತೋರಿದ ದಿವ್ಯಚೇಷ್ಟಿತಗಳನ್ನೂ ಐಂದ್ರಜಾಲಿಕಗಳೆಂದು ಅನಾದರಿಸಿದ ಕಾರಣ ಉತ್ತಮಗತಿಯನ್ನು ಹೊಂದಲಾಗಲಿಲ್ಲ. 'ಅವಜಾನಂತಿ ಮಾಂ ಮೂಢಾಃ ಮಾನುಷೀಂ ತನುಮಾಶ್ರಿತಂ' ಎಂದು ಶ್ರೀಕೃಷ್ಣನೇ ಇದನ್ನು ಹೊರಗೆಡಹಿದ್ದಾನೆ. ಇಂಥ ಪರಿಸ್ಥಿತಿಯನ್ನು ಕಂಡ ಭಗವಂತನು ಈ ಭೂಮಂಡಲ ದಲ್ಲಿನ ಅನೇಕ ವ್ಯಕ್ತಿಗಳ ಮೇಲೆ ತನ್ನ ವಿಶೇಷಕಟಾಕ್ಷವನ್ನು ಬೀರಿದನು. ಈ ಸಂಸಾರಿ ಗಳನ್ನು ಅವರ ಮುಖಾಂತರ ಉದ್ಧಾರಮಾಡಲು ಸಂಕಲ್ಪಿಸಿದನು. ಹೀಗೆ ಭಗವತ್ಕ ಟಾಕ್ಷಕ್ಕೆ ಪಾತ್ರರಾದ ಮಹನೀಯರುಗಳೇ ಆಳ್ವಾರರುಗಳೂ ಆಚಾರ್ಯರುಗಳೂ ಆಗಿದ್ದಾರೆ.

ಆಳ್ವಾರರುಗಳಿಗೂ ಆಚಾರ್ಯರುಗಳಿಗೂ ಇರುವ ವೈಶಿಷ್ಟ್ಯವನ್ನು ನಾವು ಗಮನಿ ಸಬೇಕು. ಭಗವಂತನ ಕಲ್ಯಾಣಗುಣಗಳೆಂಬ ಅಮೃತಸಾಗರದಲ್ಲಿ ಅಂತರ್ನಿಮಗ್ನರಾದ ವರು ಆಳ್ವಾರರುಗಳು. ಆ ಅಮೃತಪ್ರವಾಹದಲ್ಲಿ ಆಳವಾಗಿ ಇವರು ಮುಳುಗಿದವರು. ಭಗವತ್ಪ್ರೇಮದ ಸುಳಿಯಲ್ಲಿ ಸಿಕ್ಕಿಹೋದ ಇವರಲ್ಲಿ ಸ್ವಾನುಭವ ಅತ್ಯಂತ ಪ್ರಧಾನ ವಾದುದು. ಭಗವಂತನೇ ಬಂದು ತನ್ನ ಸಂಶ್ಲೇಷವನ್ನಿವರಿಗೆ ಕೊಟ್ಟಿರುವುದುಂಟು. ಸ್ವಪ್ರಯತ್ನದಿಂದ ತತ್ತ್ವಜ್ಞಾನಸಂಪಾದನೆಯಲ್ಲಿ ತೊಳಲುವವರಿವರಲ್ಲ. ಭಗವಂತನನ್ನು ತಮ್ಮ ಅಗಾಧವಾದ ಪ್ರೇಮದಿಂದ ಇವರು ಸಾಕ್ಷಾತ್ಕಾರಮಾಡಿಕೊಂಡರು. ಇತರರ ಗೊಡವೆಗೆ ಹೋಗದೆ ತಮ್ಮ ಆ ದಿವ್ಯಾನುಭವದಲ್ಲಿ ತಮ್ಮನ್ನೇ ಮರೆತವರಿವರು. ತಮ್ಮ ದಿವ್ಯಾನುಭವವನ್ನು ಸಹಜವಾದ ತಮ್ಮ ಮಧುರವಾಣಿಯಲ್ಲಿ ಇವರು ಉದ್ಗಾರ ಹೊರಡಿ ಸಿದ್ದಾರೆ. ತಮಗೆ ತಿಳಿದುಬಂದ ಸಕಲ ವೇದ ವೇದಾಂಗ ರಹಸ್ಯಗಳನ್ನೂ, ಪರಾಪರ ತತ್ತ್ವಜ್ಞಾನವನ್ನೂ, ಬ್ರಹ್ಮಾನುಭವಪ್ರಕಾರಗಳನ್ನೂ ಉದ್ವೇಲವಾದ ಭಗವತ್ಪ್ರೇಮವನ್ನೂ ಸ್ವೈಮರೆತು ಹಾಡಿದ್ದಾರೆ ಇವರು. ಭಗವನ್ನಾಮವನ್ನು ಕೇಳುವಾಗಲೇ ಮೈಮರೆಯುವ ಇವರು ಅವನ ದಿವ್ಯಚೇಷ್ಟಿತಗಳನ್ನೂ ಲೀಲೆಗಳನ್ನೂ ನೆನೆದು ತನ್ಮಯರಾಗಿದ್ದಾರೆ. ಇವರು ಹಾಡಿದ ಪ್ರಬಂಧಗಳು ತೀವ್ರವಾದ ಭಗವತ್ಪ್ರೇಮದ ಮೂರ್ತಸ್ವರೂಪಗಳಾಗಿವೆ. ಹೀಗೆ ತಮ್ಮ ಅನುಭವವಿಶೇಷಗಳನ್ನು ಆರ್ತಿಯಿಂದ ಹಾಡಿ ಹಾಡಿ ಇತರರ ಹೃದಯ ವನ್ನು ಸೂರೆಗೊಂಡು ಲೋಕೋಜ್ಜೀವನ ಮಾಡಿದ್ದಾರೆ ಮಹನೀಯರಾದ ಆಳ್ವಾರರು ಗಳು.

ಆಚಾರ್ಯರುಗಳ ಉಪಕಾರ ಮತ್ತೊಂದು ಬಗೆಯಲ್ಲಿ ಆಗುತ್ತಿದೆ. ಆಚಾರ್ಯ ಶಬ್ದಕ್ಕೆ—'ಆಚಿನೋತಿ ಹಿ ಶಾಸ್ತ್ರಾರ್ಥಾನ್ ಆಚಾರೇ ಸ್ಥಾಪಯತ್ಯಪಿ। ಸ್ವಯಮಾಚ- ರತೇ ಯಸ್ಮಾತ್ತಸ್ಮಾದಾಚಾರ್ಯ ಉಚ್ಯತೇ ॥' ಎಂದು ವಿವರಣೆ ನೀಡಿದ್ದಾರೆ. ಉಪದೇಶ ಆಚಾರ್ಯರಲ್ಲಿ ಪ್ರಧಾನವಾದ ಅಂಶ. ಶಾಸ್ತ್ರಾರ್ಥಗಳನ್ನು ಉಪದೇಶಿಸುವವನೂ, ಲೋಕ

acharya.org

ವನ್ನು ಸದಾಚಾರದಲ್ಲಿ ನೆಲೆ ನಿಲ್ಲಿಸುವವನೂ, ತಾನು ಉಪದೇಶಿಸಿದಂತೆ ತಾನೇ ನಡೆದು ತೋರಿಸುವವನೂ ಆಚಾರ್ಯನು. ತತ್ತ್ವಜ್ಞಾನವನ್ನು ಸಂಪಾದಿಸಿದ ಆಚಾರ್ಯರು ಅದನ್ನು ಸಚ್ಛಿಷ್ಯರಿಗೆ ಉಪದೇಶಿಸಿ ಅವರ ಉಜ್ಜೀವನವನ್ನು ಸಾಧಿಸುತ್ತಾರೆ. "ಆಚಾರ್ಯಃ ಶ್ರೇಷ್ಠೋ ಗುರೂಣಾಮ್" ಎಂದು ಹೇಳಿರುವಂತೆ ಗುರುಗಳಿಗೂ ಆಚಾರ್ಯರಿಗೂ ಸ್ವಲ್ಪ ವ್ಯತ್ಯಾಸವಿದೆ. ಜ್ಞಾನಪ್ರದರೆಲ್ಲರೂ ಗುರುಗಳಾದರೂ ಬ್ರಹ್ಮವಿದ್ಯಾಪ್ರದಾನ ಮಾಡಿದವರು ಆಚಾರ್ಯರು. ಆತ್ಮೋಜ್ಜೀವನಕ್ಕೆ ಕಾರಣವಾದ ಅಧ್ಯಾತ್ಮವಿದ್ಯೆಯನ್ನು ರಹಸ್ಯಾರ್ಥ ಗಳೊಡನೆ ಉಪದೇಶ ಮಾಡುವವನು ಆಚಾರ್ಯನು. ಆಚಾರ್ಯರುಗಳು ತಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿಯೇ ತೃಪ್ತರಾಗದೆ ಕೃಪಾಪೂರ್ಣರಾಗಿ ಲೋಕೋದ್ಧಾರಕ್ಕಾಗಿ ಶ್ರಮಿಸುತ್ತಾರೆ. ತಾವು ಪಡೆದುಕೊಂಡ ಶಾಸ್ತ್ರಜ್ಞಾನವನ್ನು ಲೋಕಕ್ಕೇ ಉಪದೇಶ ಮಾಡಿ ಲೋಕದಲ್ಲಿ ಹರಡಿರುವ ಅಜ್ಞಾನಾಂಧಕಾರವನ್ನು ಕಳೆಯುತ್ತಾರೆ. ಆದ್ದರಿಂದಲೇ ಮಾನವನ ಆಧ್ಯಾತ್ಮಿಕ ಜೀವನದ ವಿಕಾಸಕ್ಕೆ (ಪ್ರಕಾಶಕ್ಕೆ) ಆಚಾರ್ಯ ಪರಿಗ್ರಹ ಅರುಣೋದಯದಂತೆ. ಹೀಗೆ ಭಗವದನುಭವವೇ ಆಳ್ವಾರರುಗಳ ನಿಷ್ಠೆಯಾದರೆ ಅದ ರೊಡನೆ ಜ್ಞಾನೋಪದೇಶವೂ ಆಚಾರ್ಯರುಗಳ ವೈಶಿಷ್ಟ್ಯವಾಗಿದೆ.

ಶ್ರೀವೈಷ್ಣವ ಸಂಪ್ರದಾಯದಲ್ಲಿ ಮಹಾಭಕ್ತರುಗಳೆನಿಸಿ ಪ್ರಸಿದ್ಧರಾದ ಹತ್ತು ಮಂದಿ ಆಳ್ವಾರ್ರುಗಳು ಕ್ರಮವಾಗಿ ಹೀಗಿದ್ದಾರೆ—ಪೊಯ್‌ಹೈ ಆಳ್ವಾರ್, ಪೂದತ್ತಾರ್, ಪೇಯಾಳ್ವಾರ್, ತಿರುಮಳಿಶೈಪಿರಾನ್ ಆಳ್ವಾರ್, ನಮ್ಮಾಳ್ವಾರ್, ಶ್ರೀಕುಲಶೇಖರಾಳ್ವಾರ್, ಪೆರಿಯಾಳ್ವಾರ್, ತೊಂಡರಡಿಪ್ಪೊಡಿ ಆಳ್ವಾರ್, ತಿರುಪ್ಪಾ ಣಾಳ್ವಾರ್, ತಿರುಮಂಗೈಯಾಳ್ವಾರ್. ಈ ಆಳ್ವಾರುಗಳ ಗುಂಪಿಗೆ ಮಧುರಕವಿ ಯಾಳ್ವಾರ್ರು ಮತ್ತು ಆಂಡಾಳ್ ಸೇರಿ ಒಟ್ಟು ಹನ್ನೆರಡು ಮಂದಿಗಳಾಗಿದ್ದಾರೆ.

ಸರ್ವೇಶ್ವರನ 'ಅಭಿನವ ದಶಾವತಾರವೋ' ಎಂಬಂತಿರುವ ವೈಭವವಿಶೇಷ ವನ್ನುಳ್ಳ ಈ ಆಳ್ವಾರುಗಳಲ್ಲಿ ನಮ್ಮಾಳ್ವಾರ್‌ರವರು ಪ್ರಧಾನತಮರೆಂದು ಎಣಿಸಲ್ಪಟ್ಟಿ ದ್ದಾರೆ. ಇತರ ಆಳ್ವಾರರುಗಳು ಇವರಿಗೆ ಅವಯವಭೂತರಾದವರೆಂದು ಪ್ರಾಚೀನರು ನಿರೂಪಿಸಿದ್ದಾರೆ. ಈ ಮಹಾ ಪ್ರಭಾವಶಾಲಿಗಳಾದ ಆಳ್ವಾರರುಗಳು ಹೇಳಿದ ದಿವ್ಯ ಪ್ರಬಂಧಗಳು ತಮಿಳು ವೇದವೆಂದು ಪ್ರಸಿದ್ಧವಾಗಿವೆ. ಇವುಗಳ ಗ್ರಂಥ ಸಂಖ್ಯೆ ೪೦೦೦ ಪಾಶುರಗಳು ಅಥವಾ ಪದ್ಯಗಳು.

ಪೊಯ್‌ಹೈ ಆಳ್ವಾರ್ರವರು ಪುಣ್ಯಕ್ಷೇತ್ರವಾದ ಕಾಂಚೀ ನಗರದಲ್ಲಿ ಶ್ರೀ ಯಥೋಕ್ತಕಾರಿ ಸ್ವಾಮಿಯ ಸನ್ನಿಧಿಯ ಉತ್ತರಭಾಗದಲ್ಲಿ ಪ್ರಕಾಶಿಸುವ ಪದ್ಮಸರೋವರ ದಲ್ಲಿ ಅರಳಿದ ನಲ್ದಾವರೆಯೋ ಎಂಬಂತೆ ಅವತರಿಸಿದರು. ಇವರು ಮಹಾ ಪ್ರಭಾವಶಾಲಿ ಗಳು. ಪಾಂಚಜನ್ಯಾಂಶ ಸಂಭೂತರೆಂದು ಪ್ರಸಿದ್ಧರಾಗಿದ್ದಾರೆ. ಇವರು ಸರೋವರದಲ್ಲಿ ಅವತರಿಸಿದರಾದ ಕಾರಣ ಇವರಿಗೆ ಪೊಯ್‌ಹೈ ಆಳ್ವಾರ್ರೆಂಬ ಬಂದಿತು ಅಭಿಧಾನ.

acharya.org

[ಪೊಯ್‌ಹೈ=ತಟಾಕ] **ಪೂದತ್ತಾಳ್ವಾರ್‌ರವರು** ಮಹಾಬಲಿಪುರದಲ್ಲಿ ಅವತರಿಸಿದರು. ಇವರು ಭಗವಂತನ ಕೌಮೋದಕೀ ಎಂಬ ಗದಾಂಶಸಂಭೂತರೆಂದು ಪ್ರಸಿದ್ಧರಾಗಿದ್ದಾರೆ. ಬ್ರಹ್ಮಜ್ಞಾನದಿಂದಲೇ ಆತ್ಮಸದ್ಭಾವವನ್ನು ಪಡೆದವರೀಗ 'ಭೂತ' ಎಂಬ ಶಬ್ದವ್ಯವಹಾರಕ್ಕೆ ಅರ್ಹರು. ಇಂಥವರಲ್ಲಿ ಇವರು ಅಗ್ರಗಣ್ಯರಾದ ಕಾರಣ ಇವರಿಗೆ 'ಪೂದತ್ತಾಳ್ವಾರ್' ಎಂಬ ಹೆಸರು ರೂಢಿಗೆ ಬಂದಿತು. **ಪೇಯಾಳ್ವಾರ್‌ರವರು** ತಿರುವಲ್ಲಿಕ್ಕೇಣಿ ದಕ್ಷಿಣ ಭಾಗದಲ್ಲಿನ ಮಯಿಲೈ ಮಾನಗರಿಯ ಒಂದು ಕೂಪದಲ್ಲಿ ಅವತರಿಸಿದರು. ಇವರು ಭಗವಂತನ ನಂದಕವೆನ್ನುವ ದಿವ್ಯಾಯುಧಾಂಶಸಂಭೂತರೆಂದು ಪ್ರಸಿದ್ಧರಾಗಿದ್ದಾರೆ. ಅಪ್ರತಿಮವಾದ ಭಗವದ್ಭಕ್ತಿಯುಳ್ಳ ಇವರು ಭಗವಂತನಿಗಾಗಿ ಅತ್ತು, ಕರೆದು ಹಾಡಿಪಾಡಿ, ನಕ್ಕು ನಲಿದು, ಕಂಡವರೆಲ್ಲಾ 'ಇವರು ಪಿಶಾಚಗ್ರಸ್ತರು' ಎನ್ನುವಂತೆ ಹೊತ್ತು ಕಳೆದ ಕಾರಣ ಪೇಯಾಳ್ವಾರ್ರೆಂದು ಪ್ರಸಿದ್ಧರಾದರು. ಮಹದಾಹ್ವಯರೆಂದೂ ಇವರು ಹೆಸರು ಪಡೆದರು. ಪರಮಭಕ್ತಿಯ ಅತಿಶಯದಿಂದ ಇತರರಿಗಿಂತ ಇವರು ಮಿಗಿಲಾಗಿ ಈ ಹೆಸರಿಗೆ ಪಾತ್ರರಾದರು.

ಈ ಮೂವರು ಆಳ್ವಾರರುಗಳು ಮಹಾಮಹಿಮಾಶಾಲಿಗಳು. ರಜಸ್ಸು, ತಮಸ್ಸುಗಳ ಸೋಂಕಿಲ್ಲದ ಶುದ್ಧ ಸತ್ವಗುಣಪೂರ್ಣರು. ಭಗವತ್ಕೈಂಕರ್ಯವೇ ತಮ್ಮ ಪರಮ ಪುರುಷಾರ್ಥವೆಂದು ತಿಳಿದವರು. 'ವಾಸುದೇವಸ್ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ' ಎಂಬ ಗೀತಾವಚನಕ್ಕನುಸಾರವಾಗಿದ್ದವರು. ಭಗವದ್ಗುಣಾನುಭವವೇ ಇವರಿಗೆ ಧಾರಕ ಪೋಷಕ ಭೋಗ್ಯಗಳಾಗಿದ್ದವು. ಸಂಸಾರಿಗಳೊಡನೆ ಬೆರೆಯದೆ ಒಂದು ಕಡೆಯಿಂದ ಮತ್ತೊಂದೆಡೆಗೆ ಸಂಚಾರ ಮಾಡುತ್ತಲೇ ಇದ್ದ ಯೋಗಿಗಳಿವರು. ಇವರು ಮೂವರೂ ಒಬ್ಬರನ್ನೊಬ್ಬರು ತಿಳಿಯದೆ ಸಂಚಾರ ಮಾಡಿಕೊಂಡಿದ್ದರು. ಇವರನ್ನು ಒಂದೆಡೆ ಕೂಡಿಸಬೇಕೆಂದೂ ಇವರ ಮೂಲಕ ಲೋಕೋಜ್ಜೀವನ ಮಾಡಿಸಬೇಕೆಂದೂ ಭಗವಂತನಿಗೆ ಇಚ್ಛೆಯುಂಟಾಯಿತು. ಅದು ಬಹುಬೇಗ ಒಂದು ಸಂಜೆ ಫಲಿಸಿತು.

ಒಂದು ದಿನ ಸೂರ್ಯಾಸ್ತವಾದ ನಂತರ ತಿರುಕ್ಕೋವಿಲೂರ್ ಎಂಬಲ್ಲಿ ಪೊಯ್‌ಹೈ ಆಳ್ವಾರ್‌ರವರು ಒಂದು ಮನೆಯ ಜಗಲಿಯ ಮೇಲೆ ವಿಶ್ರಮಿಸಿಕೊಂಡಿದ್ದರು. ಅಲ್ಲಿಗೆ ಆಗ ಪೂದತ್ತಾಳ್ವಾರ್‌ರವರೂ ಬಂದು ಸೇರಿದರು. 'ಇಲ್ಲಿ ಒಬ್ಬರು ಮಲಗಬಹುದು. ಇಬ್ಬರು ಕುಳಿತುಕೊಳ್ಳಬಹುದು ; ಮೂವರು ನಿಲ್ಲಬಹುದು' ಎಂದು ಅವರು ಹೇಳಿ ಪೂದತ್ತಾಳ್ವಾರ್‌ರವರನ್ನು ಸ್ವಾಗತಿಸಿ ಬರಮಾಡಿಕೊಂಡರು. ಇಬ್ಬರೂ ಪರಸ್ಪರ ಕಲೆತು ಭಗವದ್ಗುಣಾನುಭವ ಮಾಡುತ್ತಿದ್ದಾಗ ಪೇಯಾಳ್ವಾರ್‌ರವರೂ ಅಲ್ಲಿಗೇ ಬಂದರು. ಆಗ ಅವರನ್ನೂ ಇವರು ಸ್ವಾಗತಿಸಿ ಮೂವರೂ ನಿಂತುಕೊಂಡು 'ಮಚ್ಚಿತ್ತಾ ಮದ್ಗತಪ್ರಾಣಾಃ ಬೋಧಯಂತಃ ಪರಸ್ಪರಮ್' ಎಂಬಂತೆ ಭಗವದ್ಗುಣಾನುಭವದಲ್ಲಿ ಮಗ್ನರಾದರು.

ಆಗ ಕತ್ತಲೆ ಸಾಂದ್ರವಾಯಿತು, ಜೋರಾದ ಮಳೆ ಸುರಿಯಿತು. ಭಗವಂತನು

acharya.org

ತನ್ನ ಭಕ್ತೋತ್ತಮರೊಡನೆ ಕೂಡಿಕೊಳ್ಳುವ ಸಂತಸದಿಂದ ಆ ಮೂವರ ನಡುವೆ ಅದೃಶ್ಯನಾಗಿ ತಾನೂ ಬಂದು ನಿಂತನು. ಅದುವರೆಗೂ ಇಲ್ಲದ ಆ ಸಂಘರ್ಷದಿಂದ ಯಾರಾದರೂ ಮತ್ತೊಬ್ಬರು ಅಲ್ಲಿ ಬಂದು ಸೇರಿದರೋ ಎಂದು ಶಂಕಿಸಿದರು. ಭಗವಂತನು ತಮ್ಮ ನಡುವೆ ಪರಮಕೃಪಾಶಾಲಿಯಾಗಿ ಬಂದು ಸೇರಿದುದನ್ನವರೇ ಸಾಕ್ಷಾತ್ಕರಿಸಿಕೊಂಡರು. ಆಗ ಪೊಯ್‌ಹೈ ಆಳ್ವಾರ್‌ರವರು 'ವೈಯಮ್ ತಹಳಿಯಾಹ' ಎಂದು ಆರಂಭಿಸಿ ನೂರು ಪಾಶುರಗಳನ್ನು ಹಾಡಿದರು. ಪೂದತ್ತಾಳ್ವಾರ್‌ರವರು 'ಅನ್ಬೇ ತಹಳಿಯಾಹ' ಎಂದು ಆರಂಭಿಸಿ ನೂರು ಪಾಶುರಗಳನ್ನೂ, ಪೇಯಾಳ್ವಾರ್‌ರವರು 'ತಿರುಕ್ಕಣ್ಡೇನ್' ಎಂದು ಆರಂಭಿಸಿ ನೂರು ಪಾಶುರಗಳನ್ನೂ ಹಾಡಿದರು.

'ಭೂಮಿಯೇ ಹಣತೆಯಾಗಿ ತುಂಬುಗಡಲೇ ತುಪ್ಪವಾಗಿ/ಸೂರ್ಯನೇ ಬೆಳಕಾಗಲು ಚಕ್ರಪಾಣಿಯ ಪಾದಕ್ಕೆ ಈ ನುಡಿಮಾಲೆಯನ್ನರ್ಪಿಸಿದ್ದೇನೆ, ಎಡರುಗಳೆಲ್ಲಾ ನೀಗಲಿ ಎಂದು' ಎಂಬುದು 'ವೈಯಮ್ ತಹಳಿಯಾಹ' ಎಂಬ ಪದ್ಯದ ಅಭಿಪ್ರಾಯ. ಪೂದತ್ತಾಳ್ವಾರ್‌ರವರ ಹಾಡುಗಳ ಮೊದಲ ಪಾಶುರವಾದ 'ಅನ್ಬೇತ ಹಳಿಯಾಹ' ಎಂಬುದರ ಅರ್ಥ ಹೀಗಿದೆ—'ಭಕ್ತಿಯೇ ಹಣತೆ; ಆಸೆಯೇ ತುಪ್ಪ. ಆನಂದದಿಂದ ಕರಗಿದ ಚಿಂತೆಯೇ ಇಡುವ ಬತ್ತಿ. ಹೀಗೆ ನನ್ನ ಆತ್ಮವು ಕರಗಿ ಜ್ಞಾನಜ್ಯೋತಿಯನ್ನು ಹತ್ತಿಸಿದೆನು ನಾರಣನಿಗೆ.'

'ಶ್ರೀದೇವಿಯನ್ನು ಕಂಡೆ; ಹೊನ್ನೊಡಲ ಕಂಡೆ. ಬೆಳಗುವ ಸೂರ್ಯನ ಅಣಿಹೊಗರ ಕಂಡೆ, ಯುದ್ಧದಲ್ಲಿ ಕೆರಳುವ ಚಕ್ರವನ್ನು ಕಂಡೆನು. ಅಂದವಾದ ಬಲಮುರಿ ಶಂಖಹಸ್ತವನ್ನು ಕಂಡೆನು. ನನ್ನ ಕಡಲ್ವಣ್ಣನ ಬಳಿಯಲ್ಲಿ' ಎಂಬುದು ಪೇಯಾಳ್ವಾರ್‌ರವರ ಅನುಭವ.

ಈ ಮೂವರು ಆಳ್ವಾರರುಗಳೂ ತಿರುಕ್ಕೋವಲೂರಿನ ಸ್ವಾಮಿಯನ್ನು ಸೇವಿಸಿ ಸಹಸ್ರಾರು ವರ್ಷಗಳು ಬಾಳಿ ಲೋಕೋಜ್ಜೀವನವನ್ನು ಮಾಡಿದರು.

ತಿರುಮಳಿಶೈಪಿರಾನ್ ಆಳ್ವಾರ್ ಎಂಬುವರು ಶ್ರೀ ಸುದರ್ಶನಾಂಶಸಂಭೂತರೆಂದು ಪ್ರಸಿದ್ಧರಾಗಿದ್ದಾರೆ. ಮಹೀಸಾರ ಕ್ಷೇತ್ರದಲ್ಲಿ ತಪಸ್ಸು ಮಾಡುತ್ತಿದ್ದ ಭಾರ್ಗವರೆಂಬ ಋಷಿಗಳು ಇವರ ತಂದೆ. ಕನಕಾಂಗಿ ಎಂಬ ಅಪ್ಸರೆ ಇವರ ತಾಯಿ. ಶಿಶುವಾದಾಗಲೇ ಭಗವಂತನ ಕಟಾಕ್ಷಕ್ಕೆ ಈ ಶಿಶು ಪ್ರಾಪ್ತವಾಯಿತು. ತಿರುವಾಳರ್ ಎಂಬ ವೇಳಾಳರು ಈ ಶಿಶುವನ್ನು ತೆಗೆದುಕೊಂಡು ಹೋಗಿ ಸಾಕಿದರು. ಶಿಶು ಬಾಲಸೂರ್ಯನಂತೆ ತೇಜಸ್ವಿಯೂ ಪರಿಶುದ್ಧನೂ ಆಗಿ ಅಭಿವೃದ್ಧಿಯಾಗುತ್ತಾ ಬಂದಿತು. ಭಗವದ್ಗುಣಾನುಭವವೇ ಇವರಿಗೆ ಧಾರಕ ಪೋಷಕ ಭೋಗ್ಯಗಳಾಗಿದ್ದವು. ಬಾಲ್ಯದಲ್ಲಿಯೇ ಸರ್ವಮತಗಳ ಸಾರವನ್ನೂ ಪರಿಶೋಧಿಸುತ್ತಾ ಬಂದ ಇವರು 'ಶಿವವಾಕ್ಕಿಯರ್' ಎಂಬ ಹೆಸರನ್ನು ಹೊಂದಿ ಶೈವಮತವನ್ನು ಅನುಸರಿಸಿದರು. ಮೊದಲಾಳ್ವಾರರುಗಳಲ್ಲಿ ಒಬ್ಬರಾದ

acharya.org

ಪೇಯಾಳ್ವಾರ್ರವರು ಇವರನ್ನು ವೈಷ್ಣವರನ್ನಾಗಿ ಮಾಡಿದರು. ಇವರಿಗೆ ಶ್ರೀಮನ್ನಾರಾಯ ಣನಲ್ಲಿ ಉಂಟಾದ ಅಪಾರವಾದ ಭಕ್ತಿಯ ಕಾರಣ ಇವರನ್ನು 'ಭಕ್ತಿಸಾರ'ರೆಂದು ಕೊಂಡಾಡಿದರು. ಯೋಗಯುಕ್ತರಾದ ಇವರು ಮಹಾನುಭಾವರಾದ ಮೊದಲಾಳ್ವಾರರು ಗಳೊಡನೆ ಕೂಡಿ ಕೆಲಕಾಲ ಭಗವದ್ಗುಣಾನುಭವದಲ್ಲಿ ಮಗ್ನರಾದರು. ಕಾಂಚಿಯೇ ಮೊದಲಾದ ದಿವ್ಯಕ್ಷೇತ್ರಗಳಿಗೆ ಇವರು ಯಾತ್ರೆ ಮಾಡಿದರು. 'ತಿರುಕ್ಕುಡಂದೈ' ಎಂದು ಪ್ರಖ್ಯಾತವಾದ ಕುಂಭಕೋಣದಲ್ಲಿ ಭಗವತ್ಸೇವೆಯ ಮಹದಾನಂದದಲ್ಲಿ ಇವರು ಮಗ್ನ ರಾದರು. 'ತಿರುಚ್ಚಂದವಿರುತ್ತಮ್' 'ನಾನ್ಮುಹನ್ ತಿರುವಂದಾದಿ' ಎಂಬ ಪ್ರಬಂಧಗಳನ್ನು ಇವರು ಹಾಡಿದರು.

ನಮ್ಮಾಳ್ವಾರ್ರವರು ಆಳ್ವಾರರುಗಳಲ್ಲಿ ಅಪ್ರತಿಮವಾದ ವೈಭವವನ್ನು ಹೊಂದಿ ದವರು. ಪಾಂಡ್ಯ ದೇಶದಲ್ಲಿ ತಾಮ್ರಪರ್ಣೀ ತೀರದಲ್ಲಿ ಇವರು ಅವತರಿಸಿದರು. ಆ ಊರಿಗೆ 'ತಿರುನಗರಿ' 'ತಿರುಕ್ಕುರುಹೂರ್' ಎಂದು ಹೆಸರು. ಕಾರಿಯಾರ್ ಎಂಬ ಮಹಾನುಭಾವರು ಇವರ ತಂದೆಗಳು. ಇವರು ಭಗವಂತನ ಶ್ರೀಕೌಸ್ತುಭದ ಮತ್ತು ವಿಷ್ವಕ್ಸೇನರ ಅಂಶಗಳಿಂದ ಕೂಡಿದವರೆಂದು ಪ್ರಸಿದ್ಧರಾಗಿದ್ದಾರೆ. ವೇಳಾಳವರ್ಣದಲ್ಲಿ ಇವರ ಜನ್ಮವಾಯಿತು. ಈ ಶಿಶು ಹುಟ್ಟಿದ ಕೂಡಲೆ ಅಳುವುದು ಹಾಲುಣ್ಣುವುದು ಮುಂತಾದ ಲೌಕಿಕ ವ್ಯಾಪಾರಗಳನ್ನೊಂದನ್ನೂ ಮಾಡಲಿಲ್ಲವಂತೆ. ಪರಿಪೂರ್ಣವಾಗಿ ಅತಿಶಯವನ್ನು ತೋರಿಸಿತ್ತು ಇದು. ತಾಯಿತಂದೆಗಳು ಭಗವದ್ಭಕ್ತರಾದ ಕಾರಣ ಭಗವಂತನ ಮೇಲೆ ಭಾರವನ್ನು ಹಾಕಿ ಮಗು ಹುಟ್ಟಿದ ಹನ್ನೆರಡನೆಯ ದಿನವೇ ತಿರುನಗರಿ ಯಲ್ಲಿದ್ದ ದೇವಮಂದಿರಕ್ಕೆ ಮಗುವನ್ನು ಕರೆದುಕೊಂಡು ಹೋಗಿ ದೇವರ ಸಂದರ್ಶನ ಮಾಡಿಸಿ ಶಿಶುವಿಗೆ 'ಮಾರನ್' ಎಂದು ನಾಮಕರಣ ಮಾಡಿದರು. ಲೋಕರೀತಿಗೆ ವಿರುದ್ಧವಾಗಿದ್ದ ಕಾರಣ ಮಾರನ್ ಎಂಬ ಹೆಸರು ಅನ್ವರ್ಥವಾಯಿತು. ಅಲ್ಲಿಯೇ ಸಮೀಪದಲ್ಲಿದ್ದ ಹುಣಸೇಮರದ ಅಡಿಯಲ್ಲಿ ಚಿನ್ನದ ತೊಟ್ಟಿಲಿನಲ್ಲಿ ಮಲಗಿಸಿ ಮಗು ವನ್ನು ಬೆಳಸಿದರು ಅವರು.

ಇವರಿಗೆ ಶಠಕೋಪ, ನಮ್ಮಾಳ್ವಾರ್ ಎಂಬ ಹೆಸರುಗಳೂ ಅನ್ವರ್ಥವಾಗಿ ಬಂದವು, ಜನಿಸಿದ ಕೂಡಲೇ ಜೀವಿಯನ್ನು ಶಠ ಎಂಬುವ ವಾಯು ಸ್ಪರ್ಶಿಸಿ ಅಜ್ಞಾನ ಕ್ಕೊಳಪಡಿಸುವುದು. ಈ ವಾಯು ಇವರನ್ನೂ ಆಕ್ರಮಿಸಲು ಬಂದಾಗ ಹುಂಕಾರ ದಿಂದಲೇ ಅವನ್ನು ಓಡಿಸಿದರಂತೆ ಇವರು. ಆದ್ದರಿಂದ ಇವರು ಶಠಕೋಪರಾದರು. ಎಂದರೆ ಇವರು ಎಂದೂ ನಿರವಧಿಕಜ್ಞಾನಶಾಲಿಗಳಾಗಿಯೆ ಇದ್ದರು ಎಂದು ತಿಳಿಯ ಬಹುದು. ಭಗವಂತನಿಗೆ ಬಹಳ ಪ್ರಿಯರಾಗಿ ಅವನ ವಿಶೇಷಕಟಾಕ್ಷಕ್ಕೆ ಇವರು ಪಾತ್ರರಾದ ಕಾರಣ ಇತರ ಆಳ್ವಾರ್ರುಗಳಿಗಿಂತ ಅತಿಶಯವನ್ನು ಹೊಂದಿದವರಾಗಿ 'ನಮ್ಮ ಆಳ್ವಾರ್ರು' ಎಂಬ ಪ್ರಸಿದ್ಧಿಯನ್ನು ಹೊಂದಿದರು. ಆದ್ದರಿಂದ ನಮ್ಮಾಳ್ವಾರ್ರು

acharya.org

ಎಂಬ ಹೆಸರೂ ಅನ್ವರ್ಥವಾಯಿತು. ಇವರು ಶಿಶುವಾಗಿದ್ದಾಗಲೇ ವಿಷ್ವಕ್ಸೇನರು ದಯಮಾಡಿ ಏಕಾಂತವಾಗಿ ಇವರಿಗೆ ಮಂತ್ರಾರ್ಥಗಳನ್ನೆಲ್ಲಾ ಉಪದೇಶಿಸಿದರಂತೆ. ಹೀಗೆ ಬೆಳೆದ ನಮ್ಮಾಳ್ವಾರ್ರವರು ಪದ್ಮಾಸನಸ್ಥರಾಗಿ ಜ್ಞಾನಮುದ್ರಾನ್ವಿತರಾಗಿ ಪರತತ್ತ್ವ ಧ್ಯಾನಮಗ್ನರಾಗಿದ್ದಾಗ ಮಧುರಕವಿಯಾಳ್ವಾರ್ರವರು ಅಲ್ಲಿಗೆ ಬಂದು ಇವರ ಪ್ರಭಾವ ವನ್ನು ಅರಿತರು. ಮಧುರಕವಿಯಾಳ್ವಾರ್ರವರಿಗೆ ತತ್ವಹಿತಪುರುಷಾರ್ಥಗಳನ್ನಿವರು ಉಪದೇಶಿಸಿದರು. ಭಗವಂತನಲ್ಲಿದ್ದ ನಿರತಿಶಯವಾದ ಪ್ರೇಮದ ಪರೀವಾಹವೋ ಎಂಬಂತಿರುವ ತಿರುವಾಂಯ್ಮೊಳಿಯನ್ನು ಹಾಡಿ ಇವನ್ನು ಶ್ರೀಮಧುರಕವಿಗಳಿಗೆ ಉಪ ದೇಶಿಸಿದರು. ಈ ಪ್ರಬಂಧಗಳಲ್ಲಿ ಅರ್ಥಪಂಚಕಗಳನ್ನೂ ಮಂತ್ರರತ್ನವಾದ ದ್ವಯ ಮಂತ್ರದ ಸಾರಾರ್ಥವಾದ ಶರಣಾಗತಿಯನ್ನೂ, ವಿಶಿಷ್ಟಾದ್ವೈತಸಿದ್ಧಾಂತಸಾರಾರ್ಥ ಗಳನ್ನೂ ಬಹಳ ಸುಗಮವಾಗಿ ತಿಳಿಯುವಂತೆ ಉಪದೇಶಿಸಿದ್ದಾರೆ. ಇವರು ಪರಭಕ್ತಿ, ಪರಜ್ಞಾನ ಮತ್ತು ಪರಮಭಕ್ತಿಯುಕ್ತರಾಗಿ ಮೂವತ್ತೈದು ವರ್ಷಗಳು ಇದ್ದು ಲೋಕೋಜ್ಜೀವನ ಮಾಡಿ ಪರಮಪದವನ್ನು ಸೇರಿದರು. ಯಾಮುನಾಚಾರ್ಯರು.

> ಮಾತಾ ಪಿತಾ ಯುವತಯಸ್ತನಯಾ ವಿಭೂತಿಃ
> ಸರ್ವಂ ಯದೇವ ನಿಯಮೇನ ಮದನ್ವಯಾನಾಂ ।
> ಆದ್ಯಸ್ಯ ನಃ ಕುಲಪತೇರ್ವಕುಳಾಭಿರಾಮಂ
> ಶ್ರೀಮತ್ತದಂಘ್ರಿಯುಗಳಂ ಪ್ರಣಮಾಮಿ ಮೂರ್ಧ್ನಾ ॥

ಎಂದು ಇವರ ವೈಭವಪ್ರಭಾವಗಳನ್ನು ಕೊಂಡಾಡಿದ್ದಾರೆ. ಪ್ರಪನ್ನಜನಕೂಟಸ್ಥರೆಂಬ ಹಿರಿಮೆ ಇವರದು.

ಶ್ರೀಕುಲಶೇಖರಾಳ್ವಾರ್ರವರು 'ಕೋಟಿಕ್ಕೊಕ್ಕೋಡು' ಎಂಬಲ್ಲಿ ರಾಜನಾಗಿದ್ದ ದೃಢವ್ರತ ಎಂಬುವರ ಕುಮಾರರು. ತಂದೆಯ ನಂತರ ಇವರು ಆ ರಾಜ್ಯದಲ್ಲಿ ಪಟ್ಟಾಭಿ ಷಿಕ್ತರಾದರು. ವಿದ್ವಾಂಸರೊಡನೆ ವಿಚಾರವಿನಿಮಯ ಮಾಡುತ್ತಿರುವಲ್ಲಿ ಭಗವಂತನ ದಯೆಯಿಂದ 'ಮಹಾವಿಷ್ಣುವೇ ಪರದೈವ' ಎಂಬ ಸತ್ಯ ಇವರ ಜ್ಞಾನದೃಷ್ಟಿಗೆ ಗೋಚರಿಸಿತು. ಭಗವಂತನಲ್ಲಿ ಇವರ ಭಕ್ತಿ ಉಕ್ಕೇರಿತು. ಶ್ರೀರಾಮ ಮತ್ತು ಶ್ರೀಕೃಷ್ಣಾವತಾರಗಳಲ್ಲಿ ಇವರ ಪ್ರೇಮ ಅಪಾರವಾದುದು. ಇವರ ಭಕ್ತಿ ಎಷ್ಟಿತ್ತೆಂದರೆ ರಾಮಾಯಣ ಪ್ರವಚನವನ್ನು ಕೇಳುವಾಗ ಸೀತಾಪಹರಣದ ವಾರ್ತೆ ಬಂದಾಗ ಸೈನ್ಯ ಸಮೇತರಾಗಿ ಲಂಕಾಭಿಮುಖವಾಗಿ ಪ್ರಯಾಣವನ್ನೇ ಬೆಳಸಿಬಿಟ್ಟರಂತೆ ರಾವಣ ಮರ್ದನಕ್ಕಾಗಿ ! ಶ್ರೀರಾಮ ಸೀತಾಲಕ್ಷ್ಮಣರೊಡನೆ ಇವರಿಗೆ ಸಂದರ್ಶನವನ್ನಿತ್ತು ಹಿಂದಿರುಗಿಸಿದನಂತೆ ! ಭಾಗವತರಲ್ಲಿ ಇವರ ಭಕ್ತಿ ಅಪಾರವಾಗಿತ್ತು. ಪರಮ ವೈರಾಗ್ಯ ಮೂರ್ತಿಗಳಾದ ಇವರು ರಾಜ್ಯಭಾರವನ್ನು ತಮ್ಮ ಕುಮಾರನಿಗೆ ವಹಿಸಿ ಶ್ರೀರಂಗ ಕ್ಷೇತ್ರಕ್ಕೆ ಬಂದು ನಿಂತರು. ಇವರ 'ಮುಕುಂದ ಮಾಲಾ ಸ್ತೋತ್ರ' ಇವರ

acharya.org

ಭಕ್ತ್ಯತಿಶಯಕ್ಕೆ ಕನ್ನಡಿಯಂತಿದೆ. ತಮಿಳಿನಲ್ಲಿ ಇವರು 'ಪೆರುಮಾಳ್ ತಿರುಮೊಳಿ' ಎಂಬ ಪ್ರಬಂಧವನ್ನು ಅನುಗ್ರಹಿಸಿದ್ದಾರೆ. ಶ್ರೀರಾಮನ ಸುಖದುಃಖವನ್ನೇ ತಮ್ಮ ಸುಖ ದುಃಖವೆಂದು ಇವರು ತಿಳಿದ ಕಾರಣದಿಂದಲೇ ಇವರನ್ನು 'ಕುಲಶೇಖರಪ್ಪೆರುಮಾಳ್' ಎಂದು ಕರೆದರು. ಇವರು 'ಪಡಿಯಾಯ್ ಕ್ಕಿಡಂದ್ ಉನ್ ಪವಳವಾಯ್ ಕಾಣ್ಬೇನೇ' ಎಂದು ಹಂಬಲಿಸಿದ ಕಾರಣ ದೇವಾಲಯದ ಒಳಗೆ ಇರುವ ಗರ್ಭಗುಡಿಯ ಹೊಸಲಿಗೆ 'ಕುಲಶೇಖರ್‌ಪಡಿ' ಎಂಬೇ ವ್ಯವಹಾರವಿದೆ. ತಮ್ಮ ಅರವತ್ತೇಳನೇ ವಯಸ್ಸಿನಲ್ಲಿ ಇವರು ಪರಮಪದವನ್ನು ಸೇರಿದರು.

ಪೆರಿಯಾಳ್ವಾರ್ರವರು

ಈ ಮಹಾನುಭಾವರು ಪಾಂಡ್ಯಮಂಡಲದ ಶ್ರೀ ವಿಲ್ಲಿಪುತ್ತೂರ್‌ಎಂಬಲ್ಲಿ ಜನಿಸಿದರು. ವಿಷ್ಣುಚಿತ್ತರೆಂಬ ಮತ್ತೊಂದು ಹೆಸರು ಇವರಿಗುಂಟು. ಪುಷ್ಪಮಾಲಿಕೆಗಳನ್ನು ಕಟ್ಟಿ ಭಗವಂತನಿಗೆ ಅರ್ಪಿಸಿ ಸೇವೆಯನ್ನಿವರು ಸಲ್ಲಿಸುತ್ತಿದ್ದರು. ಭಗವಂತನ ಕಟಾಕ್ಷ ವಿಶೇಷದಿಂದ ಸರ್ವಜ್ಞರಾದ ಇವರು ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಗಳಿಂದ ಅನೇಕ ಪ್ರಮಾಣಗಳನ್ನು ಉದಾಹರಿಸಿ ಶ್ರೀಮನ್ನಾರಾಯಣನೇ ಪರತತ್ತ್ವವೆಂದು ಪಾಂಡ್ಯರಾಜನ ಸಭೆಯಲ್ಲಿ ಸ್ಥಾಪನೆ ಮಾಡಿದರು. ಆ ರಾಜನು ಇದಕ್ಕಾಗಿ ಮೇಲೆತ್ತಿ ಕಟ್ಟಿಸಿದ್ದ ಬಹುಮಾನ ನಿಧಿ ತಾನಾಗಿ ಇವರ ಬಳಿ ಬಂದು ಬಿದ್ದಿತಂತೆ. ಭಕ್ತನ ಈ ಉತ್ಕರ್ಷವನ್ನು ಕಂಡು ನಲಿಯಲು ಭಗವಂತನು ಶ್ರೀದೇವಿಯೊಡನೆ ಗರುಡಾರೂಢನಾಗಿ ಅಲ್ಲಿಗೆ ಬಂದು ಸೇರಿದನಂತೆ. ಆಗ ಆ ದೇವಾಧಿದೇವನ ಸಂದರ್ಶನದಿಂದ ರೋಮಾಂಚಿತರಾದ ಆಳ್ವಾರ್ರವರು ಆನಂದಾತಿಶಯದಿಂದ ಕೂಡಿ ತಿರುಪ್ಪಲ್ಲಾಂಡು ಎಂಬ ಹಾಡುಗಳನ್ನು ಹಾಡಿದರು. ಅಲ್ಲಿಂದ ಮುಂದೆ ಅವರು ತಮ್ಮ ಸ್ಥಳವಾದ ಶ್ರೀವಿಲ್ಲಿಪುತ್ತೂರಿಗೇ ದಯಮಾಡಿ ಅಲ್ಲಿ ನಿರಂತರವೂ ಭಗವತ್ಸೇವೆ ಹಾಗೂ ಚಿಂತನೆಯಲ್ಲಿ ಕಾಲವನ್ನು ಕಳೆದರು. ಇವರಿಗೆ ಭಗವಂತನ ಕೃಷ್ಣಾವತಾರ ಹೆಚ್ಚು ಪ್ರಿಯವಾಗಿತ್ತು. ಶ್ರೀಕೃಷ್ಣನ ದಿವ್ಯಚೇಷ್ಟಿತಗಳನ್ನೂ, ದಯಾಕಾರ್ಯಗಳನ್ನೂ ಇವರು ಅನುಭವಪೂರ್ಣವಾಗಿ ಹಾಡಿದ್ದಾರೆ. 'ಪೆರಿಯಾಳ್ವಾರ್ ತಿರುಮೊಳಿ' ಎಂಬ ಪ್ರಸಿದ್ಧವಾದ ಪ್ರಬಂಧ ಇವರು ಹಾಡಿದ್ದು. ಇದು ರಸಮಯವಾದ ನಾನ್ನೂರ್ರೈವತ್ತು ಪಾಶುರಗಳನ್ನೊಳಗೊಂಡಿದೆ.

ತೊಂಡರಡಿಪ್ಪೊಡಿಯಾಳ್ವಾರ್

'ಮಂಡಂಗುಡಿ' ಎಂಬುವ ಚೋಳಮಂಡಲದ ದಿವ್ಯನಗರಿಯಲ್ಲಿ ಇವರು ಜನಿಸಿದರು. ವೈದಿಕೋತ್ತಮರಾದ ವಿಪ್ರರ ಕುಮಾರರಿವರು. ವಿಪ್ರನಾರಾಯಣರೆಂಬ ಹೆಸರು ತಂದೆ ತಾಯಿಗಳಿಂದ ಇವರಿಗೆ ಇಡಲ್ಪಟ್ಟಿತು. ಸಕಲವಿದ್ಯಾಪಾರಂಗತರಾಗಿ ಜ್ಞಾನಾನುಷ್ಠಾನಸಂಪದ್ಯುಕ್ತರಾಗಿ ಪರಮ ಸತ್ತ್ವನಿಧಿಗಳಾಗಿ ಇವರು ಬೆಳಗಿದರು. ಸರ್ವೋತ್ತುಂಗ

acharya.org

ವಾದ ಶ್ರೀರಂಗಕ್ಷೇತ್ರವನ್ನು ಸೇರಿ ಶ್ರೀರಂಗನಾಥನ ನಿತ್ಯಕೈಂಕರ್ಯದಲ್ಲಿ ನಿರತರಾದರು. ಈ ಮಹಾನುಭಾವರು ಒಂದು ಸುಂದರವಾದ ಪುಷ್ಪನಂದನವನ್ನು ಬೆಳೆಸಿ ಅನರ್ಘ್ಯವಾದ ತುಳಸೀ ಮತ್ತು ಪುಷ್ಪಗಳ ಮಾಲಿಕೆಗಳನ್ನು ದೇವರಿಗೆ ಸಮರ್ಪಿಸುವ ಸೇವೆಯನ್ನು ಕೈಕೊಂಡು ನಡೆಸಿಕೊಂಡುಬಂದರು.

ಹೀಗೆಯೇ ಇರುತ್ತಿರಲು ದೇವದೇವಿ ಎಂಬ ಮಹಾ ಸುಂದರಿಯಾದ ನರ್ತಕಿ ಯೊಬ್ಬಳ ಸಂಬಂಧ ಇವರಿಗೆ ಸಂಭವಿಸಿಬಿಟ್ಟಿತು. ಸದಾಚಾರಸಂಪನ್ನರಾಗಿದ್ದ ಇವರು ಆ ಸುಂದರಿಯ ಮನೆಬಾಗಿಲಿನಲ್ಲಿ ಕಾಯುವಂತಾಯ್ತು. ತನ್ನ ಭಕ್ತನನ್ನು ತಿದ್ದಿ ಸರಿ ಪಡಿಸಿ ಅವನಿಂದ ಸೇವೆಯನ್ನು ಪಡೆಯಲು ಸಂಕಲ್ಪಿಸಿದ ಭಗವಂತನು ಒಂದು ದಿನ ತಾನು ದೇವಾಲಯದಲ್ಲಿದ್ದ ಸ್ವರ್ಣಪಾತ್ರೆಯೊಂದನ್ನು ತೆಗೆದುಕೊಂಡು ಹೋಗಿ ದೇವ ದೇವಿಗೆ ವಿಪ್ರನಾರಾಯಣರು ಕೊಟ್ಟು ಕಳುಹಿಸಿದರೆಂದು ಕೊಟ್ಟುಬಿಟ್ಟನು. ಮುಂದೆ ಸ್ವರ್ಣಪಾತ್ರೆ ದೇವಾಲಯದಲ್ಲಿ ಕಾಣೆಯಾಗಲು ವಿಚಾರಣೆ ನಡೆದು ಅದಕ್ಕೆ ಕಾರಣ ರೆಂದು ಹೇಳಲಾದ ವಿಪ್ರನಾರಾಯಣರಿಗೆ ಕಾರಾಗೃಹವಾಸ ಪ್ರಾಪ್ತಿಯಾಯಿತು. ಭಗವಂತನ ದಿವ್ಯಲೀಲೆಗೆ ವಿಷಯವಾಗಿ ಈ ಭಕ್ತನು ಹೀಗೆ ಕಷ್ಟಕ್ಕೊಳಗಾಗಿರಲು ಈಶ್ವರಾನುಗ್ರಹದಿಂದ ಇವರಿಗೆ ಅಷ್ಟೇ ಸುಲಭವಾಗಿ ವಿಮೋಚನೆಯೂ ಆಯಿತು. ದಾಸಿಯಲ್ಲಿ ಕಾಮಿಸಿದ ಇವರ ಕರ್ಮವನ್ನು ಕಳೆಯಲು ತಾನೇ ಸ್ವರ್ಣಪಾತ್ರೆಯನ್ನು ದೇವದೇವಿಗೆ ಕೊಟ್ಟು ಬಂದುದಾಗಿ ಭಗವಂತನು ಅರಸನಿಗೆ ಸ್ವಪ್ನದಲ್ಲಿ ತಿಳಿಯಪಡಿಸಿ ಅವರನ್ನು ಬಿಡುಗಡೆ ಮಾಡಲು ಸೂಚಿಸಿದನಂತೆ.

ತಮ್ಮ ಅನುಷ್ಠಾನಾದಿಗಳನ್ನು ಮರೆತು ನಡೆದ ನಡವಳಿಕೆಗಾಗಿ ಬಹಳ ಲಜ್ಜಿತರಾದ ವಿಪ್ರನಾರಾಯಣರು ಪಶ್ಚಾತ್ತಾಪದಿಂದ ಶುದ್ಧರಾಗಿ ಭಾಗವತರ ಅನುಗ್ರಹ ದಿಂದ ಮೊದಲಿನಂತೆ ಭಗವತ್ಕೈಂಕರ್ಯದಲ್ಲಿ ನಿರತರಾದರು. ಶ್ರೀವೈಷ್ಣವರ ಶ್ರೀಪಾದ ಧೂಳಿಯಾಗಿ ಅವರಿಗೆ ದಾಸಾನುದಾಸರಾಗಿ ವ್ಯವಹರಿಸುತ್ತಾ ಬಂದ ಇವರಿಗೆ 'ತೊಂಡರಡಿಪ್ಪೊಡಿ', 'ಭಕ್ತಾಂಘ್ರಿರೇಣು' ಎಂಬ ಹೆಸರು ಬಂದಿತು. ಭಗವಂತನ ಅರ್ಚಾವತಾರದಲ್ಲಿ ಅದರಲ್ಲಿಯೂ ಶ್ರೀರಂಗನಾಥನಲ್ಲಿ ಅತ್ಯಂತವಾದ ಭಕ್ತಿಯನ್ನುಳ್ಳ ಈ ಮಹಾನುಭಾವರು ತಿರುಮಾಲೈ, ತಿರುಪ್ಪಳ್ಳಿಯೆಬುಚ್ಚಿ ಎಂಬ ಪ್ರಬಂಧಗಳನ್ನು ರಚಿಸಿ ಹಾಡಿದ್ದಾರೆ.

ತಿರುಪ್ಪಾಣಾಳ್ವಾರ್

'ಭಗವತ್ಪ್ರಾಪ್ತಿಗೆ ಜಾತಿ ಅನುಕೂಲವೂ ಅಲ್ಲ, ಪ್ರತಿಕೂಲವೂ ಅಲ್ಲ, ಭಕ್ತಿ ಯೊಂದೇ ಸಾಕು' ಎಂಬುದಕ್ಕೆ ಪ್ರತ್ಯಕ್ಷ ನಿದರ್ಶನರಾದವರು ಈ ಮಹಾನುಭಾವರು. ಉರೈಯೂರೆಂಬಲ್ಲಿ ಇವರು ಅಂತ್ಯಜಜಾತಿಯಲ್ಲಿ ಜನಿಸಿ ಬೆಳೆದರು. ಶ್ರೀವತ್ಸಾಂಶರಾಗಿ

acharya.org

ಭತ್ತದ ಗದ್ದೆಯಲ್ಲಿ ಇವರು ಜನಿಸಿದರೆಂದೂ ಇವರನ್ನು ಪಾಣರ್ ಕುಲದವನು ಪೋಷಿಸಿದನೆಂದೂ ಹೇಳುತ್ತಾರೆ. ಲೋಕವ್ಯಾಸಂಗರಹಿತರಾಗಿ ಇವರು ಭಗವಂತನ ಪಾದಾರವಿಂದಗಳಲ್ಲೇ ನೆಟ್ಟ ಮನಸ್ಸುಳ್ಳವರಾಗಿದ್ದರು. ವೀಣಾಗಾನದಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಸಹಜವಾಗಿಯೇ ಪಡೆದಿದ್ದರು. ನಾರದರಂತೆ ಇವರಲ್ಲಿ ಜ್ಞಾನವೈರಾಗ್ಯಗಳೂ ಸಂಗೀತಸಾಮರ್ಥ್ಯವೂ ಕೂಡಿಕೊಂಡಿದ್ದವು.

ಮಹಾಭಾಗವತರಾದ ಇವರು ಶ್ರೀರಂಗನಾಥನಿಗೆ ಸಂಗೀತಗಾನ ಕೈಂಕರ್ಯವನ್ನು ಸಮರ್ಪಿಸಲಿಚ್ಛಿಸಿ ತಾವು ಅಂತ್ಯಜರೊಡನೆ ಇದ್ದ ಕಾರಣ ಆ ದಿವ್ಯಕ್ಷೇತ್ರಕ್ಕೆ ಹೋಗದೆ ಕಾವೇರೀ ತೀರದಲ್ಲಿ ಶ್ರೀರಂಗನಾಥನ ಮಂದಿರಕ್ಕಭಿಮುಖವಾಗಿ ನಿಂತು ವೀಣಾಪಾಣಿಯಾಗಿ ಭಗವಂತನ ಮನ ಕರಗುವಂತೆ ಅನೇಕ ದಿವ್ಯ ಕೀರ್ತನಗಳನ್ನು ಹಾಡುತ್ತಿದ್ದರು.

> ಆಹ್ಲಾದಶೀತನೇತ್ರಾಂಬುಃ ಪುಲಕೀಕೃತಗಾತ್ರವಾ<ನ್>।
> ಸದಾ ಪರಗುಣಾವಿಷ್ಟಃ....।

ಎಂಬುದು ಇವರ ಅನುಭವವಾಯಿತು.

ಇವರ ಸತ್ವೋತ್ಕರ್ಷವೂ, ಭಕ್ತ್ಯತಿಶಯವೂ ಲೋಕವಿಶ್ರುತವಾದವು. ಹೀಗಿರಲು ಒಮ್ಮೆ ಶ್ರೀರಂಗನಾಥನ ಸನ್ನಿಧಿಯ ಕೈಂಕರ್ಯಪರರಾದ ಲೋಕಸಾರಂಗ ಮುನಿಗಳು ಅಭಿಷೇಕತೀರ್ಥವನ್ನು ತರುತ್ತಿದ್ದಾಗ ಭಗವದ್ಧ್ಯಾನದಲ್ಲಿ ಮೈಮರೆತು ಕುಳಿತಿದ್ದ ಆಳ್ವಾರ್ರವರನ್ನು ದಾರಿಬಿಡಲು ಸೂಚಿಸಿದರು. ಆದರೆ ಭಗವದ್ಗುಣಾನುಭವದದಲ್ಲಿ ಮೈಮರೆತಿದ್ದ ಆಳ್ವಾರ್ರವರಿಗೆ ಎಚ್ಚರವಾಗಲಿಲ್ಲ. ಇದರಿಂದ ಕೋಪಗೊಂಡ ಅವರು ಇವರನ್ನು ಕಲ್ಲಿನಿಂದ ಹೊಡೆದುಬಿಟ್ಟರು. ಆಗ ಸ್ವಲ್ಪವೂ ಕ್ಲೇಶವನ್ನಾಗಲೀ ಕೋಪವನ್ನಾಗಲೀ ಪಡಲಿಲ್ಲ ಆ ಮಹಾನುಭಾವರು. ಇದನ್ನು ಕಂಡ ಆ ಕೈಂಕರ್ಯಪರರು ಅಂಜಿ ದೂರ ಹೋದರು. ಶ್ರೀರಂಗನಾಥನಿಗೆ ಇದರಿಂದ ಬಹಳ ಮನನೊಂದಿತು. ರಂಗನಾಥನ ಮೂರ್ತಿಯ ತಲೆಯಿಂದ ನೆತ್ತರಿನ ಪ್ರವಾಹ ಹರಿಯುತ್ತಿದ್ದುದನ್ನು ಅರ್ಚಕರು ಕಂಡು ಅಧಿಕಾರಿಗಳಿಗೆ ತಿಳಿಸಿದರು. ಆಗ ಲೋಕಸಾರಂಗಮುನಿಗಳಿಗೆ ಕನಸಿನಲ್ಲಿ ಶ್ರೀರಂಗನಾಥನು ಕಾಣಿಸಿಕೊಂಡು 'ನನ್ನ ಪರಮಭಕ್ತನಾದ ಪಾಣರನ್ನು ನೀವು ಗೌರವಾದರಗಳೊಡನೆ ಭುಜದ ಮೇಲೆ ಎತ್ತಿಕೊಂಡು ನನ್ನಲ್ಲಿಗೆ ಕರೆದು ತನ್ನಿ' ಎಂದು ಬೆಸಸಿದನು. ಹಾಗೆಯೇ ಆ ಮಹಾನುಭಾವರು ಪಾಣರನ್ನು ಅವರು ಬೇಡ ಬೇಡವೆಂದರೂ ಕೇಳದೆ ತಮ್ಮ ತೋಳಿನ ಮೇಲೆ ಭಗವನ್ನಿಯಮನದಂತೆ ಎತ್ತಿಕೊಂಡು ಶ್ರೀರಂಗನಾಥನ ದಿವ್ಯ ಸಾನ್ನಿಧ್ಯಕ್ಕೆ ಬಂದರು. ಆಗ ಅವರು ಮುನಿವಾಹನರೆಂದು ಪ್ರಸಿದ್ಧರಾದರು. ಶ್ರೀರಂಗನಾಥನ ದಿವ್ಯ ಮಂಗಳ ವಿಗ್ರಹವನ್ನು ಸಂದರ್ಶಿಸಿ ತನ್ಮಯರಾಗಿ ಹಾಡಿದರು. ಆಳ್ವಾರ್ರವರು 'ನನ್ನ ಅಮೃತನನ್ನು ಕಂಡ ಕಣ್ಣುಗಳು ಮತ್ತೊಂದನ್ನೂ

acharya.org

ಕಾಣುವುದು ಬೇಡ' ಎಂದು ತೀವ್ರವಾದ ಅಭಿನಿವೇಶವನ್ನು ತೋರಿ ಅಂತೆಯೇ ಆ ದಿವ್ಯಮಂಗಳ ಮೂರ್ತಿಯಲ್ಲಿಯೇ ತಾವೂ ಸೇರಿಹೋದರು. ಇವರು ಹಾಡಿರುವ 'ಅಮಲನಾದಿ ಪಿರ್ರಾ' ಪ್ರಬಂಧ ಪರಮತತ್ತ್ವದ ಸಾರವಾಗಿ ಬೆಳಗಿದೆ.

ತಿರುಮಂಗೈಯಾಳ್ವಾರ್ ಅವರು

ಇವರು ಚೋಳಮಂಡಲದ ತಿರುನಗರಿ ಎಂಬಲ್ಲಿ ಚತುರ್ಥವರ್ಣದಲ್ಲಿ ಜನಿಸಿದರು. ಇವರ ತಂದೆಗಳು ಚೋಳದೇಶಾಧಿಪತಿಗೆ ಸೇನಾಪತಿಯಾಗಿದ್ದವರು. ಇವರಿಗೆ ನೀಲನೆಂಬ ಹೆಸರನ್ನು ಅವರಿಟ್ಟರು. ಕತ್ತಿ ಹಿಡಿದು ಕಾದುವುದರಲ್ಲಿ ಇವರು ಕಲಿಗಳಾದರು. ಅಮಿತ ವಾದ ಪರಾಕ್ರಮವುಳ್ಳ ಇವರನ್ನು ಆ ನಾಡಿನ ದೊರೆ ತಿರುಮಂಗೈದೇಶಕ್ಕೆ ಅಧಿಪನನ್ನಾಗಿ ಮಾಡಿದರು. ತಿರುಮಂಗೈಮನ್ನನ್ ಎಂದು ಆಗ ಪ್ರಸಿದ್ಧರಾದರು ಇವರು. ಇವರಿಗೆ ಕುಮುದವಲ್ಲಿ ಎಂಬ ದಿವ್ಯಕನ್ನಿಕೆಯಲ್ಲಿ ಪ್ರೇಮ ಉಂಟಾಯಿತು. ಅವಳನ್ನು ಮದುವೆ ಯಾಗಲು ಇವರು ಚಕ್ರಾಂಕನ, ಊರ್ಧ್ವಪುಂಡ್ರಧಾರಣ ಮುಂತಾದ ಪಂಚಸಂಸ್ಕಾರ ಗಳನ್ನು ಮಾಡಿಸಿಕೊಂಡು ಪರಮವೈಷ್ಣವರಾದರು. ಕುಮುದವಲ್ಲಿಯ ಪ್ರೇರಣೆಯಂತೆ ಇವರು ಪ್ರತಿದಿನವೂ ಸಹಸ್ರಾರು ಶ್ರೀವೈಷ್ಣವರಿಗೆ ಸಂತರ್ಪಣೆ ಮಾಡಿಸಿ ಭಾಗವತ ಸೇವೆಯಲ್ಲಿ ಮಗ್ನರಾದರು. ರಾಜದ್ರವ್ಯವನ್ನೆಲ್ಲಾ ಇದಕ್ಕಾಗಿ ಇವರು ವಿನಿಯೋಗಿ ಸುತ್ತಾ ಬಂದರು. ರಾಜನು ಇದರಿಂದ ಕುಪಿತನಾಗಿ ದ್ರವ್ಯವನ್ನೆಲ್ಲಾ ತೆಗೆದುಕೊಂಡು ಬರಲು ಸೇವಕರನ್ನು ಕಳುಹಿಸಿದನು. ಇವರು ಹೀಗೆ ತೊಂದರೆಗೆ ಸಿಕ್ಕಿದಾಗ ಭಗವಂತನೇ ಸ್ವಪ್ನದಲ್ಲಿ ಬಂದು ಗುಪ್ತನಿಧಿಯೊಂದಿರುವ ಜಾಗವನ್ನು ತೋರಿದನು. ಅದನ್ನು ತೆಗೆದು ಕೊಂಡು ರಾಜದ್ರವ್ಯವನ್ನು ಸಲಿಸಿ ಉಳಿದುದನ್ನು ಭಾಗವತಾರಾಧನಕ್ಕೆ ಉಪಯೋಗಿ ಸುತ್ತಿದ್ದರು. ಇವರ ನಿಷ್ಠೆಯನ್ನೂ ವೈಭವವನ್ನೂ ಅರಿತುಕೊಂಡ ರಾಜನೂ ಭಾಗವತ ಸೇವೆಯಲ್ಲಿ ತತ್ಪರನಾದನು. ಭಾಗವತಸೇವೆಯನ್ನೇ ಪರಮಧರ್ಮವನ್ನಾಗಿ ಎಣಿಸಿದ ಆಳ್ವಾರ್‌ರವರು ಅದಕ್ಕೆ ಬೇಕಾದ ದ್ರವ್ಯವನ್ನು ಎಲ್ಲ ಬಗೆಯಿಂದಲೂ ಆರ್ಜಿಸಲು ಸಿದ್ಧ ರಾದರು. ದಾರಿಹೋಕರನ್ನು ಅಡ್ಡಗಟ್ಟಿ ಸುಲಿಗೆಮಾಡಲೂ ಹಿಂಜರಿಯಲಿಲ್ಲ. ಇದರಲ್ಲಿ ಸ್ವಾರ್ಥದ ಅಂಶ ಎಳ್ಳಷ್ಟೂ ಇರಲಿಲ್ಲ. ಕೇವಲ ಭಾಗವತಸೇವೆಯೇ ಅವರ ಪರಮ ಉದ್ದೇಶವಾಗಿತ್ತು. ಈ ಬಗೆಯಲ್ಲಿ ಕೈಂಕರ್ಯ ನಡೆಸಿಕೊಂಡು ಬರುತ್ತಿದ್ದ ಆಳ್ವಾರ್‌ರವರಿಗೆ ಭಗವಂತನು ವಿಶೇಷವಾಗಿ ಅನುಗ್ರಹಿಸಲು ಸಂಕಲ್ಪಿಸಿ ಇವರು ಸುಲಿಗೆ ನಡೆಸುತ್ತಿದ್ದ ಮಾರ್ಗದಲ್ಲಿಯೇ ಒಮ್ಮೆ ಶ್ರೀದೇವಿಯೊಡನೆ ಬ್ರಾಹ್ಮಣದಂಪತಿಗಳ ರೂಪದಲ್ಲಿ ಬಂದರು. ಅನೇಕಾನೇಕ ಆಭರಣಗಳನ್ನು ಧರಿಸಿದ್ದ ಇವರನ್ನು ಸುಲಿಗೆ ಮಾಡಲು ತಿರುಮಂಗೈಯಾಳ್ವಾರ್‌ರವರು ಮುಂದಾದರು. ಇತರ ಆಭರಣಗಳನ್ನು ಕಳಚಿಕೊಂಡ ಮೇಲೆ ಪಾದದಲ್ಲಿ ಧರಿಸಿದ್ದ ಸ್ವರ್ಣಕಡಗವನ್ನು ಕಿತ್ತುಕೊಳ್ಳಲಾಗದೆ ಭಗವಂತನ

acharya.org

ಪಾದಗಳನ್ನು ಕೈಯ್ಯಾರೆ ಹಿಡಿದುಕೊಂಡು ಹಲ್ಲಿನಿಂದ ಅದನ್ನು ಕೀಳಲು ಯತ್ನಿಸಿದರಂತೆ. ಪರನುದಯಾಳುವಾದ ಭಗವಂತನು ಹೀಗೆ ಶರಣಾದ ಅವರಿಗೆ ತಾನೇ ತಿರುಮಂತ್ರವನ್ನುಪ ದೇಶಿಸಿದನು. ಭಗವಂತನನ್ನು ಸಾಕ್ಷಾತ್ತಾಗಿ ಸೇವಿಸಿ ಪಾದಗ್ರಹಣ ಮಾಡಿ ಅವನಿಂದ ನೇರವಾಗಿ ಮಂತ್ರೋಪದೇಶವನ್ನು ಪಡೆದ ಮಹಾನುಭಾವರು ಇವರು. ಕೂಡಲೇ ಇವರಿಗೆ ಜ್ಞಾನೋದಯವಾಯಿತು. ಭಗವಂತನನ್ನು ಪೂರ್ಣವಾಗಿ ಅನುಭವಿಸಿದ ಆನಂದಾತಿಶಯ ಉತ್ತುಂಗಭಾವನಾಪೂರ್ಣವಾದ ಸ್ತೋತ್ರಧಾರೆಯಾಗಿ ತಾನೇ ತಾನಾಗಿ ಹೊರಹೊಮ್ಮಿತು. ಆಶು, ಮಧುರ, ಚಿತ್ರ, ವಿಸ್ತಾರ ಎಂಬ ನಾಲ್ಕು ಬಗೆಯ ಕವಿತೆಯಲ್ಲಿಯೂ, ಪಾಂಡಿತ್ಯ ಉಂಟಾಯಿತು. ಇವರು ಅಗ ವೈಮರೆತು 'ವಾಡಿನೇ‌ೞ ವಾಡಿ ವರುಂದಿನೇನ್ ಎಂಡು ಆರಂಭಿಸಿ ಹಾಡಿದರು. ನಮ್ಮಾಳ್ವಾರ್ರವರು ಅನುಗ್ರಹಿಸಿದ ನಾಲ್ಕು ದಿವ್ಯ ಪ್ರಬಂಧಗಳಿಗೆ ಆರು ಅಂಗಗಳೋ ಎಂಬಂತಿರುವ ಆರು ದಿವ್ಯ ಪ್ರಬಂಧಗಳನ್ನು ಇವರು ಅನುಗ್ರಹಿಸಿದರು. ಅವು : (೧) ಪೆರಿಯತಿರುವೊಳಿ (೨) ತಿರುಕ್ಕುಱುನ್ದಾಣ್ಡಹಮ್ (೩) ತಿರುವೇಳು ಕೂತ್ತಿರುಕ್ಕೈ (೪) ಶಿಱಿಯ ತಿರು ಮಡಲ್ (೫) ಪೆರಿಯ ತಿರುಮಡಲ್ (೬) ತಿರುನೆಡುನ್ದಾಂಡಹಮ್ ಎಂಬುವುಗಳಾಗಿವೆ.

ಇವರು ಶ್ರೀರಂಗದಲ್ಲಿ ಶ್ರೀರಂಗನಾಥನ ಮಂದಿರಕ್ಕೆ ವಿಮಾನ, ಗೋಪುರ, ಮಂಟಪ ಪ್ರಾಕಾರ ಮುಂತಾದುವುಗಳನ್ನು ನಿರ್ಮಿಸಿ ಸೇವೆ ಸಲ್ಲಿಸಿದರು.

ಮಧುರಕವಿಯಾಳ್ವಾರ್ರವರು

ಆಳ್ವಾರ್ ತಿರುನಗರಿಯ ಸಮೀಪದಲ್ಲಿನ ತಿರುಕ್ಕೋಳೂರಿನಲ್ಲಿ ಇವರು ಉತ್ತಮ ವಾದ ಬ್ರಾಹ್ಮಣ ಕುಲದಲ್ಲಿ ಅವತರಿಸಿದರು. ಬಾಲ್ಯದಲ್ಲಿಯೇ ವೇದ ಶಾಸ್ತ್ರಾದಿಗಳನ್ನು ಅಭ್ಯಾಸ ಮಾಡಿದರು ಇವರು. ಕಿವಿಗಿಂಪಾಗುವಂತೆ ಹಾಡಬಲ್ಲ ಸಾಮರ್ಥ್ಯ ಇವರಿಗಿತ್ತು. ಒಮ್ಮೆ ಇವರು ದೇವಾಲಯದ ಕಡೆ ತಿರುಗಿ ನಮಿಸಲು ದಕ್ಷಿಣ ದಿಕ್ಕಿನ ಕಡೆ ತಿರುಗಿದಾಗ ಅಪ್ರತಿಮ ದಿವ್ಯತೇಜಸ್ಸನ್ನು ಕಂಡರು. ಸೂರ್ಯ ಚಂದ್ರಾಗ್ನಿಗಳ ತೇಜಸ್ಸಿಗಿಂತ ಉಜ್ವಲ ವಾಗಿದ್ದ ಆ ಪ್ರಭಾಪುಂಜವನ್ನು ಕಂಡು ಆಶ್ಚರ್ಯಗೊಂಡು ಅದನ್ನು ಸಮೀಪಿಸಲು ಹೊರಟರು. ಆಗ ಆಳ್ವಾರ್ರು ತಿರುನಗರಿಗೆ ಬಂದು ಆ ತೇಜಸ್ಸು ನಮ್ಮಾಳ್ವಾರ್ರವರ ಶರೀರ ಕಾಂತಿ ಎಂದು ತಿಳಿದರು. ಆಗ ನಮ್ಮಾಳ್ವಾರ್ರವರು ಕಣ್ತೆರೆದು ನೋಡಿ ಇವರನ್ನು ಕಟಾಕ್ಷಿಸಿ ಇವರ ಸಂಶಯಗಳನ್ನೆಲ್ಲಾ ಕಳೆದುಹಾಕಿದರು. ಮಧುರಕವಿಗಳು ಆಳ್ವಾರ್ರ ವರ ಜ್ಞಾನವೈಭವಕ್ಕೆ ಮಾರುಹೋದರು. ಅವರನ್ನೇ ತಮ್ಮ ಆಚಾರ್ಯರನ್ನಾಗಿ ಪರಿಗ್ರಹಿಸಿ ಅವರಲ್ಲಿ ಶರಣುಹೋದರು ಮಧುರಕವಿಗಳು.

ನಮ್ಮಾಳ್ವಾರ್ರವರು ದ್ರಾವಿಡ ದಿವ್ಯಪ್ರಬಂಧಗಳನ್ನು ಮಧುರಕವಿಗಳಿಗೆ ಉಪದೇಶಿ ಸಿದರು. ಇವರು ತಾಳವನ್ನು ಹಾಕುತ್ತಾ ಮಧುರವಾಗಿ ಆ ಪ್ರಬಂಧಗಳನ್ನು ಯಾವಾಗಲೂ

acharya.org

ಪಾರಾಯಣ ಮಾಡುತ್ತಾ ಬಂದರು. 'ಕಣ್ಣಿನುಣ್ ಶಿಱುತ್ತಾಂಬು' ಎಂಬ ಪ್ರಬಂಧ ವನ್ನು ರಚಿಸಿ ಮಧುರಕವಿಗಳು ನಮ್ಮಾಳ್ವಾರ್ರವರನ್ನು ಕೊಂಡಾಡಿದರು. ನಮ್ಮಾಳ್ವಾ ರ್ರವರು ಪರಮಪದಕ್ಕೆ ಸಾರಿದ ನಂತರ ಅವರ ವಿಶ್ಲೇಷದಿಂದ ನಿರ್ವೇದಗೊಂಡ ಮಧುರ ಕವಿಗಳು ಆ ತಿರುನಗರಿಯಲ್ಲಿ ನಮ್ಮಾಳ್ವಾರ್ರವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಿಸಿದರು.

ಆಂಡಾಳ್

ಶ್ರೀದೇವಿ ಭೂದೇವಿಯರ ಅಂಶಗಳಾದ ಈ ದೇವಿ ಶ್ರೀವಿಲ್ಲಿಪುತ್ತೂರಿನ ಪೆರಿ ಯಾಳ್ವಾರ್ರವರಿಗೆ ಅವರ ನಂದನವನದಲ್ಲಿ ಲಭಿಸಿದಳು. ಅವರೂ ಇವಳನ್ನು ಮಗಳಂತೆ ಸಲಹುತ್ತಾ ಬಂದರು. ಬ್ರಹ್ಮಜ್ಞಾನವನ್ನು ಆಳ್ವಾರ್ರವರು ಅವಳಿಗೆ ಬೋಧಿಸಿದರು. ಅತಿಶಯವಾದ ಭಗವದ್ಭಕ್ತಿಯುಳ್ಳ ಆಂಡಾಳ್ ಬಾಲ್ಯದಿಂದಲೂ ಭಗವಂತನನ್ನೇ ವಿವಾಹ ವಾಗುವುದಾಗಿ ನಿಶ್ಚಯಿಸಿದಳು. ಭಗವನ್ಮಹಿಮೆಯನ್ನು ಚಿಂತಿಸುವುದು, ಸ್ತುತಿಸುವುದು —ಇವೇ ಅವಳಿಗೆ ಪ್ರತಿದಿನದ ಕೆಲಸವಾಗಿತ್ತು. ತಂದೆಯವರಾದ ವಿಷ್ಣುಚಿತ್ತರು ದೇವರಿ ಗೋಸ್ಕರ ಕಟ್ಟಿಟ್ಟ ಪೂಮಾಲೆಯನ್ನು ಅವರಿಲ್ಲದಾಗ ತಾನೇ ಅಲಂಕರಿಸಿಕೊಂಡು 'ಆ ಭಗವಂತನಿಗೆ ತಾನು ಒಪ್ಪಾಗಿರುವೆನೋ ಇಲ್ಲವೋ' ಎಂದು ಕನ್ನಡಿಯಲ್ಲಿ ನೋಡಿ ಕೊಳ್ಳುತ್ತಾ ಆ ಮಾಲೆಗಳನ್ನು ಮೊದಲಿನ ಹಾಗೆಯೇ ತೆಗೆದಿಡುತ್ತಿದ್ದಳು. ಹೀಗೆ ನಿತ್ಯವೂ ರಹಸ್ಯವಾಗಿ ನಡೆಯುತ್ತಿರಲು ಇದನ್ನರಿಯದ ಆಳ್ವಾರ್ರವರು ಆ ಮಾಲೆಯನ್ನೇ ದೇವರಿಗೆ ಸಮರ್ಪಿಸುತ್ತಾ ಬಂದರು. ಭಗವಂತನೂ ಅದನ್ನು ಪ್ರೀತಿಯೊಡನೆ ಅಂಗೀಕರಿ ಸುತ್ತಿದ್ದನು. ಹೀಗಿರಲು ಒಂದು ದಿನ ಇದನ್ನು ಆಳ್ವಾರ್ರು ನೋಡಿಬಿಟ್ಟರು. 'ನೀನು ಮಾಡುವುದು ಅಪಚಾರ, ಹೀಗಿನ್ನು ಮಾಡಲೂ ನೆನೆಯದಿರು' ಎಂದು ಕೋಪಿಸಿದರು. ಅವರಿಂದ ಅಂದು ವಟಪತ್ರಶಾಯಿಗೆ ಮಾಲೆಯ ಸೇವೆಯು ಸಲ್ಲಲಿಲ್ಲ. ಅಂದು ಕನಸಿನಲ್ಲಿ ದೇವರು ಬಂದು 'ಆಂಡಾಳ್ ಮುಡಿದುಕೊಟ್ಟ ಮಾಲೆಯೇ ನಮಗೆ ಪ್ರಿಯವಾದುದು; ಇನ್ನು ಅಂಥ ಮಾಲೆಯನ್ನೇ ನೀವು ತರಬೇಕು' ಎಂದು ಬೆಸಸಲು ವಿಷ್ಣುಚಿತ್ತರು ಮಗ ಳನ್ನು ಲಕ್ಷ್ಮೀದೇವಿಯೆಂದೇ ಭಾವಿಸಿ ಅವಳಿಗೆ 'ಶೂಡಿ ಕೊಡುತ್ತ ನಾಚ್ಚಿಯಾರ್' ಎಂದು ಹೆಸರಿಟ್ಟರು. ಜ್ಞಾನಭಕ್ತಿಗಳು ಉಕ್ಕೇರಿದಂತೆ ಆಂಡಾಳ್ ಭಗವಂತನಲ್ಲಿ ತೀವ್ರ ವಾದ ಅಭಿನಿವೇಶವನ್ನು ಹೊಂದಿ, ಅವನ ವಿರಹವನ್ನು ಸಹಿಸಲಾಗದೆ ತಿರುಪ್ಪಾವೈ, ನಾಚ್ಚಿಯಾರ್ ತಿರುಮೊಳಿ ಎಂಬ ಪ್ರಬಂಧಗಳಿಂದ ಭಗವಂತನಲ್ಲಿ ತನ್ನನ್ನು ನಿವೇದಿಸಿ ಕೊಂಡಳು.

ಶ್ರೀರಂಗನಾಥನಲ್ಲಿ ಮನವಿಟ್ಟು ಅವನನ್ನೇ ಕರವಿಡಿಯಲು ಹಂಬಲಿಸುತ್ತಿರಲು ರಂಗನಾಥನ ಅಪ್ಪಣೆಯಂತೆ ಆಳ್ವಾರ್ರವರು ಆಂಡಾಳ್‌ದೇವಿಯನ್ನು ಶ್ರೀರಂಗದ

acharya.org

ಶ್ರೀರಂಗನಾಥನ ಸಾನ್ನಿಧ್ಯಕ್ಕೆ ದೇವಾಲಯದಿಂದ ಬಂದ ಸಕಲ ಮರ್ಯಾದೆಗಳೊಡನೆ ನವರತ್ನ ಪಲ್ಲಕ್ಕಿಯಲ್ಲಿ ಕರೆದುಕೊಂಡು ಹೋದರು. ದೇವಾಲಯದಲ್ಲಿ ಭಗವಂತನ ದಿವ್ಯಸೌಂದರ್ಯದಿಂದ ಆಕರ್ಷಿತಳಾದ ಆಂಡಾಳ್ ನಾಗಪರ್ಯಂಕವನ್ನೇರಿ ಓಡಿಹೋಗಿ ಭಗವಂತನನ್ನು ಸೇರಿ ಅವನೊಡನೆ ಅಂತರ್ಭವಿಸಿಬಿಟ್ಟಳು.

ಹೀಗೆ ಈ ಆಳ್ವಾರರುಗಳು ಭಗವಂತನಲ್ಲಿ ಅಪಾರವಾದ ಪ್ರೇಮದ ಹೊನಲನ್ನೇ ಹರಿಸಿದ್ದಾರೆ. ಭಗವತ್ಪ್ರೇಮದ ದಿವ್ಯಾನಂದದಲ್ಲಿ ಮೈಮರೆತು ತಮ್ಮ ಹೃದಯವನ್ನು ಸೂರೆಗೊಂಡ ಭಾವನೆಗಳನ್ನು ಹೇಳಿಕೊಂಡಿದ್ದಾರೆ. ತಿರುವಾಯ್ ಮೊಳಿ ಅಥವಾ ಸಿರಿಬಾಯನುಡಿ ಎಂದು ಈ ಸೂಕ್ತಿಗಳು ವಿಶ್ರುತವಾಗಿವೆ. ಆಳ್ವಾರರುಗಳಲ್ಲಿ ಪ್ರಧಾನರಾದ ನಮ್ಮಾಳ್ವಾರ್ರವರು ಶ್ರೀವೈಷ್ಣವ ಮತವನ್ನು ಪರಿಪೋಷಿಸಿ ಪ್ರಪತ್ತಿಮಾರ್ಗವನ್ನು ಹರಡಿ ಪ್ರಪನ್ನ-ಜನ-ಕೂಟಸ್ಥರೆಂಬ ಬಿರುದಿಗೆ ಪಾತ್ರರಾಗಿದ್ದಾರೆ. ಈ ವಿಷ್ಣುಭಕ್ತಿಯನ್ನೇ ಹರಡಿದವರು ಇತರ ಆಳ್ವಾರರುಗಳು. ಅವರಲ್ಲಿ ಕೆಲವರು ನಮ್ಮಾಳ್ವಾರ್ರರಿಗಿಂತ ಹಿಂದಿನವರು. ಮತ್ತೆ ಕೆಲವರು ಈಚಿನವರು. ಇವರಲ್ಲಿ ನಮ್ಮಾಳ್ವಾರ್ರವರು ಕಲಿಯುಗ ಹುಟ್ಟಿದ ೪೩ ನೇ ದಿವಸದಲ್ಲಿ ಅವತರಿಸಿದರೆಂದು ಗುರುಪರಂಪರೆಯ ಗ್ರಂಥಗಳಲ್ಲಿ ಹೇಳಿದೆ. ಇವರಲ್ಲಿ ತಿರುಮಂಗೈ ಆಳ್ವಾರ್ರವರು ಕೊನೆಯವರು. ಇವರು ಕಲಿಯುಗ ಹುಟ್ಟಿದ ಮೇಲೆ ೩೯೮ನೇ ವರ್ಷದಲ್ಲಿ ಅವತರಿಸಿದರೆಂದು ಪ್ರಸಿದ್ಧಿ ಇದೆ. (ಕ್ರಿ. ಪೂ. ೨೭೦೪). ಹೀಗೆ ಸಂಪ್ರದಾಯಕ್ಕನುಸಾರವಾಗಿ ಆಳ್ವಾರರುಗಳ ಕಾಲ ಕ್ರಿ. ಪೂ. ೩೦೦೦ ವರ್ಷಗಳಿಗೂ ಹಿಂದಿನದಾಗುತ್ತದೆ. ಇತ್ತೀಚಿನ ಚರಿತ್ರಕಾರರು ತಿರುಮಂಗೈ ಆಳ್ವಾರ್ರವರ ಕಾಲವು ಕ್ರಿ.ಶ. ಏಳನೇ ಶತಮಾನವೆಂದು ಅಭಿಪ್ರಾಯಪಡುತ್ತಾರೆ. ಅಲ್ಲಿಗೆ ಇವರ ಅಭಿಪ್ರಾಯದಂತೆ ಕ್ರಿ.ಶ. ಮೂರನೇ ಶತಮಾನದಿಂದ ಕ್ರಿ.ಶ. ಏಳನೇ ಶತಮಾನದ ಮಧ್ಯಕಾಲ ಆಳ್ವಾರರುಗಳ ಕಾಲವೆಂದ ಹಾಗಾಗುತ್ತದೆ.

ಆಳ್ವಾರರುಗಳಿಂದ ಈಚೆಗೆ ಬಂದ ಆಚಾರ್ಯರುಗಳು ಈ ಸಂಪ್ರದಾಯಕ್ಕೊಂದು ರೂಪವನ್ನಿತ್ತು ಪ್ರಚಾರಪಡಿಸುತ್ತಾ ಬಂದರು. ಈ ಆಚಾರ್ಯರುಗಳಲ್ಲಿ ನಾಥಮುನಿಗಳು ಮೊದಲಿಗರಾಗಿದ್ದಾರೆ. ಶ್ರೀಭಾಷ್ಯದ ಆರಂಭದಲ್ಲಿ ರಾಮಾನುಜರು ಭಗವದ್ಬೋಧಾಯನರನ್ನು ಈ ಸಂಪ್ರದಾಯಕ್ಕೆ ಸೇರಿದವರೆಂದು ಉಲ್ಲೇಖಿಸಿದ್ದಾರೆ.

'ಭಗವದ್ಬೋಧಾಯನಕೃತಾಂ ವಿಸ್ತೀರ್ಣಾಂ ಬ್ರಹ್ಮಸೂತ್ರವೃತ್ತಿಂ ಪೂರ್ವಾಚಾರ್ಯಾಃ ಸಂಚಿಕ್ಷಿಪುಃ, ತನ್ಮತಾನುಸಾರೇಣ ಸೂತ್ರಾಕ್ಷರಾಣಿ ವ್ಯಾಖ್ಯಾಸ್ಯಂತೇ'

ಎಂದು ಉದ್ಘೋಷಿಸಿ ತಮಗೂ ಹಿಂದೆ ಅನೇಕ ಆಚಾರ್ಯರುಗಳು ಬ್ರಹ್ಮಸೂತ್ರಗಳಿಗೆ ವೃತ್ತಿ ಭಾಷ್ಯಾದಿಗಳನ್ನು ರಚಿಸಿದ್ದರೆಂದು ತಿಳಿಸಿದ್ದಾರೆ. ವೇದಾರ್ಥಸಂಗ್ರಹದಲ್ಲಿ— 'ಭಗವದ್ಬೋಧಾಯನ ಟಂಕ ದ್ರಮಿಡ ಗುಹದೇವ ಕಪರ್ದಿ ಭಾರುಚಿ ಪ್ರಭೃತ್ಯವಿಗೀತಶಿಷ್ಟಪರಿಗೃಹೀತ' ಎಂದು ಸೂಚಿಸಿರುವುದರಿಂದ ಈ ಸಂಪ್ರದಾಯದ ಪ್ರಾಚೀನತೆ

acharya.org

ಸುವ್ಯಕ್ತವಾಗುತ್ತದೆ. ಟಂಕರನ್ನು ವಾಕ್ಯಕಾರರೆಂದೂ ದ್ರಮಿಡರನ್ನು ಭಾಷ್ಯಕಾರರೆಂದೂ ವ್ಯವಹರಿಸಿ ಅವರ ಗ್ರಂಥಗಳಿಂದ ಅಲ್ಲಲ್ಲಿ ವಾಕ್ಯಖಂಡಗಳನ್ನು ಉದ್ಧರಿಸಿ ರಾಮಾನುಜರು ತಮ್ಮ ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ. ಗುಹದೇವ, ಕಪರ್ದಿ, ಭಾರುಚಿ ಮುಂತಾದವರ ಹೆಸರು ಹೊರತು ಮತ್ತೆ ಯಾವುದೂ ತಿಳಿದುಬಂದಿಲ್ಲ. ಟಂಕ ಮತ್ತು ದ್ರಮಿಡರ ಕೃತಿಗಳಾಗಲೀ ಬೋಧಾಯನರ ವೃತ್ತಿಯಾಗಲೀ ಇಂದು ಉಪಲಬ್ಧವಾಗಿಲ್ಲ. ಇವರೆಲ್ಲರೂ ಈ ಸಂಪ್ರದಾಯವನ್ನು ಪ್ರತಿನಿಧಿಸುವ ಪ್ರಾಚೀನಾಚಾರ್ಯರಾಗಿದ್ದಾರೆ. ಬೋಧಾಯನರು ಶಂಕರಾಚಾರ್ಯರಿಗಿಂತ ಹಿಂದಿನವರು. ಉಳಿದವರ ಕಾಲವನ್ನು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ಗುರುಪರಂಪರೆಯನ್ನು ಅನುಸಂಧಾನಮಾಡುವಾಗ ಈ ಸಿದ್ಧಾಂತದ ಸ್ಥಾಪನಾಚಾರ್ಯರೆಂದು ಶ್ರೀಮನ್ನಾಥಮುನಿ, ಶ್ರೀಮದ್ಯಾಮುನಮುನಿ ಮತ್ತು ಶ್ರೀಮದ್ರಾಮಾನುಜ ಮುನಿಗಳನ್ನು ಇಂದಿಗೂ ಸ್ಮರಿಸಲಾಗುವುದು.

'ನಾಥೋಪಜ್ಞಂ ಪ್ರವೃತ್ತಂ ಬಹುಭಿರುಪಚಿತಂ ಯಾಮುನೇಯೈಃ ಪ್ರಬಂಧೈಃ ತ್ರಾತಂ ಸಮ್ಯಗ್ಯತೀಂದ್ರೈಃ

ಎಂದು ಶ್ರೀಮನ್ನಿಗಮಾಂತ ದೇಶಿಕರೂ ಹೇಳುತ್ತಾರೆ. ಹೀಗೆ ಸಿದ್ಧಾಂತಸ್ಥಾಪನಾಚಾರ್ಯರಲ್ಲಿ ಮೊಟ್ಟಮೊದಲಿಗರು ಶ್ರೀಮನ್ನಾಥಮುನಿಗಳು. ಇವರು ಕ್ರಿ.ಶ. ಎಂಟನೇ ಶತಮಾನದ ಕೊನೆಯ ಭಾಗಕ್ಕೆ ಸೇರಿದವರು (ಕ್ರಿ. ಶ. ೮೦೦–೯೨೩). ಇವರ ತಂದೆ ಈಶ್ವರ ಮುನಿಗಳೆಂಬುವರು. ಇವರು ಅವತರಿಸುವ ಕಾಲಕ್ಕೆ ತಿರುವಾಯ್ಮೊಳಿ ಪ್ರಬಂಧಗಳೆಲ್ಲಾ ಲುಪ್ತವಾಗಿದ್ದವು. ಕೇವಲ ಹತ್ತು ಪಾಶುರಗಳು ಮಾತ್ರ ಉಪಲಬ್ಧವಾಗಿದ್ದವು. ಮಧುರಕವಿಗಳಿಂದ ರಚಿತವಾದ 'ಕಣ್ಣಿನುಣ್ ಶಿಱುತ್ತಾಂಬು' ಎಂಬ ಪ್ರಬಂಧವನ್ನು ೧೨೦೦೦ ಸಲ ಪಠಿಸಿ ನಮ್ಮಾಳ್ವಾರ್ರವರ ಚರಣಕಮಲಗಳಲ್ಲಿ ನೆಟ್ಟ ಮನಸ್ಸುಳ್ಳವರಾಗಿ ಧ್ಯಾನಿಸಿದುದಾಗಿಯೂ ಆಗ ಪ್ರಸನ್ನರಾದ ನಮ್ಮಾಳ್ವಾರ್ರವರಿಂದ ಅವರು ನಾಲ್ಕು ಸಹಸ್ರ ದಿವ್ಯಪ್ರಬಂಧಗಳನ್ನೂ ರಹಸ್ಯತ್ರಯವನ್ನೂ, ಅಷ್ಟಾಂಗಯೋಗರಹಸ್ಯವನ್ನೂ ಪಡೆದುದಾಗಿಯೂ ಪ್ರಸಿದ್ಧಿ ಇದೆ. ಆದ್ದರಿಂದಲೇ ಯೋಗದೆಶೆಯಲ್ಲಿ ಸಾಕ್ಷಾತ್ಕೃತರಾದ ನಮ್ಮಾಳ್ವಾರ್ರವರು ಆ ನಾಥಮುನಿಗಳಿಗೆ ಆಚಾರ್ಯರೆನಿಸಿದ್ದಾರೆ. ನಾಥಮುನಿಗಳು ರಚಿಸಿದ ಗ್ರಂಥಗಳು ಎರಡು—ನ್ಯಾಯತತ್ತ್ವ ಮತ್ತು ಯೋಗರಹಸ್ಯ ಎಂದು.

ನಾಥಮುನಿಗಳಿಗೆ ಅನೇಕ ಶಿಷ್ಯರಿದ್ದರು. ಅವರಲ್ಲಿ ಮುಖ್ಯರಾದವರು ಉಯ್ಯಕ್ಕೊಂಡಾರ್, ಕುರು ಹೈ ಕಾವಲಪ್ಪನ್, ನಂಬಿ ಕರುಣಾಕರದಾಸರ್, ಏಱು ತಿರುವುಡೈಯಾರ್, ತಿರುಕ್ಕಣ್ಣಮಂಗೈಯಾಂಡಾನ್, ವಾನಮಾದೇವಿಯಾಂಡಾನ್, ಉರುಪ್ಪಟ್ಟೂರಾಚ್ಚಾನ್ಪಿಳ್ಳೈ, ಶೋಕತ್ತೂರಾಟ್ಟಾನ್ ಎಂಬ ಎಂಟು ಮಂದಿ. ಇವರಲ್ಲಿ ಒಬ್ಬೊಬ್ಬರೂ ಮಹಾನುಭಾವರಾಗಿ ಯೋಗಸಿದ್ಧಿ ಹೊಂದಿ ಯೋಗನಿರತರಾಗಿದ್ದ

acharya.org

ವರು. ಇವರಲ್ಲಿ ಉಯ್ಯಕ್ಕೊಂಡಾರ್ (ಪುಂಡರೀಕಾಕ್ಷರೆಂದು ಇವರಿಗೆ ಮತ್ತೊಂದು ಹೆಸರು) ರವರನ್ನು ಮಣಕ್ಕಾಲ್‌ನಂಬಿ (ಶ್ರೀರಾಮ ಮಿಶ್ರರು) ತಿರುವಲ್ಲಿಕ್ಕೇಣಿ ಪಾಣ್ಪೆರು ಮಾಳಿಗೈಯರ್, ಶೆಟ್ಟಲೂರ್ ಶೆಂಡಲಂಗಾರರ್, ಪುಂಡರೀಕದಾಸರ್ ಮತ್ತು ಉಲ ಹಪ್ಪೆರುಮಾಳ್ ನಂಗೈ ಎಂಬ ಐವರು ಮಹಾನುಭಾವರು ಆಶ್ರಯಿಸಿದರು.

ಈ ಗುರುಪರಂಪರೆಯಲ್ಲಿ ಉಜ್ವಲ ತಾರೆಯಂತೆ ರಾರಾಜಿಸುವ ಮತ್ತೊಬ್ಬರು ಮಹಾಪ್ರಭಾವಶಾಲಿಗಳಾದ ಶ್ರೀ ಯಾಮುನಾಚಾರ್ಯರು. ಈ ಸಿದ್ಧಾಂತಸ್ಥಾಪನಾ ಚಾರ್ಯರಲ್ಲಿ ಇವರೂ ಒಬ್ಬರು. ಶ್ರೀ ಯಾಮುನರು ಈ ಸಿದ್ಧಾಂತವನ್ನು ಸಮೃದ್ಧವನ್ನಾಗಿ ಮಾಡಿದ ಮಹಾನುಭಾವರು. ಇವರು ಶ್ರೀಮನ್ನಾಥಮುನಿಗಳ ಮೊಮ್ಮಕ್ಕಳು. ನಾಥ ಮುನಿಗಳ ಮಕ್ಕಳಾದ ಈಶ್ವರ ಭಟ್ಟಾಳ್ವಾನ್ ಎಂಬುವರ ಸುಪುತ್ರರಾಗಿ ಇವರು ಅವತರಿಸಿದರು. ಇವರಿಗೆ 'ಆಳವಂದಾರ್' ಎಂದರೆ ರಕ್ಷಿಸಲು ಬಂದವರು ಎಂಬ ಅರ್ಥದ ನಾಮಧೇಯವಿದೆ. ಕ್ರಿ.ಶ. 916ರಲ್ಲಿ ಇವರು ಅವತರಿಸಿದರು. ಆ ಕಾಲದಲ್ಲಿ ಶ್ರೀ ಶಂಕರರ ಅದ್ವೈತ ಸಿದ್ಧಾಂತವು ಪ್ರಭಾವಪೂರ್ಣವಾಗಿ ಹರಡಿತ್ತು. ವೈಷ್ಣವ ಸಂಪ್ರ ದಾಯಗಳೂ ವಿಶಿಷ್ಟಾದ್ವೈತ ಸಿದ್ಧಾಂತವೂ ಖಿಲವಾಗುತ್ತಾ ಬರುತ್ತಿದ್ದವು. ಅಂಥ ಸಮಯದಲ್ಲಿ ತಮ್ಮ ಅದ್ಭುತವಾದ ಸಾಮರ್ಥ್ಯ, ಪ್ರತಿಭೆ ಮತ್ತು ಶಾಸ್ತ್ರಪಾಂಡಿತ್ಯ ಗಳಿಂದ ಶ್ರೀವೈಷ್ಣವ ಮತವನ್ನು ಪ್ರಚಾರ ಮಾಡಿದರಿವರು. ಮಹಾಭಾಷ್ಯಭಟ್ಟರಲ್ಲಿ ಅಧ್ಯಯನ ಮಾಡುತ್ತಿದ್ದ ಕಾಲದಲ್ಲೇ ಇವರು ತಮ್ಮ ಅಪೂರ್ವ ಸಾಮರ್ಥ್ಯವನ್ನು ತೋರಿ 'ಆಕ್ಕಿ ಆಳ್ವಾನ್' ಎಂಬುವನನ್ನು ಪರಾಭವಗೊಳಿಸಿದರು. ಲೌಕಿಕ ವಿಷಯ ದಲ್ಲಾಗಲೀ ವೈದಿಕ ವಿಷಯದಲ್ಲಾಗಲೀ ಯಾಮುನರು ಪ್ರತಿಪಾದನೆ ಮಾಡಿದುದನ್ನು ತಾನು ಅಲ್ಲಗಳೆಯುವುದಾಗಿ ಪ್ರತಿಜ್ಞೆ ಮಾಡಿದ ಆಕ್ಕಿ ಆಳ್ವಾನಿಗೆ ಯಾಮುನರು ತಮ್ಮ ಪ್ರತಿಭೆಯಿಂದ ಹೇಳಿದ ಮೂರು ಲೌಕಿಕ ವಾಕ್ಯಗಳು–(೧) ರಾಜಾ ಸಾರ್ವಭೌಮಃ (೨) ರಾಜಪತ್ನೀ ಪತಿವ್ರತಾ (೩) ರಾಜಮಾತಾ ನ ವಂಧ್ಯಾ' ಎಂಬುವೇ ಆದವು. ಇದನ್ನು ಕೇಳಿ ಆಕ್ಕಿ ಆಳ್ವಾನ್ ಅವಾಕ್ಕಾದನು. ಇದಕ್ಕೆ ವಿರೋಧವಾಗಿ ಅವನು ಹೇಳಲಾರದೆ ಹೋದನು. ಹೀಗೆ ಲೌಕಿಕ ವಿಷಯದಲ್ಲಿ ಗೆದ್ದಂತೆ ವೇದಾಂತಾರ್ಥ ವಿಚಾರದಲ್ಲಿಯೂ ಯಾಮುನರು ಆಕ್ಕಿಯೊಡನೆ ವಾದಮಾಡಿ ಅವನನ್ನು ಸೋಲಿಸಿದರು. ರಾಜನು ಪಣ ಹೂಡಿದಂತೆ ತನ್ನ ರಾಜ್ಯದ ಅರ್ಧವನ್ನು ಯಾಮುನರಿಗೆ ಕೊಡಬಂದನು. ಯಾಮುನರು ತಮ್ಮ ಪ್ರಭಾವದಿಂದ ಆ ರಾಜನಿಗೆ ವೈಷ್ಣವದೀಕ್ಷೆಯನ್ನು ಕೊಡಿಸಿದರು. ಗೃಹಸ್ಥಾ ಶ್ರಮವನ್ನಂಗೀಕರಿಸಿದ್ದ ಯಾಮುನರು ಐಶ್ವರ್ಯದಲ್ಲಿ ಓಲಾಡುತ್ತಾ ಇದ್ದರು.

ನಾಥಮುನಿಗಳ ಶಿಷ್ಯರಾದ ಉಯ್ಯಕ್ಕೊಂಡಾರವರು ತಮಗೆ ಗುರುಗಳು ಉಪದೇಶಿಸಿದ ರಹಸ್ಯಗಳನ್ನೆಲ್ಲಾ ಗುರುಪುತ್ರರಿಗೆ ಧಾರೆಯೆರೆಯಲು ತವಕಗೊಂಡಿದ್ದರು. ಆದರೆ ಅನುಕೂಲ ಸನ್ನಿವೇಶವೇ ಒದಗದೆ ಹೋದ ಕಾರಣ ತಮ್ಮ ಶಿಷ್ಯರಾದ

acharya.org

ಮಣಕ್ಕಾಲ್ ನಂಬಿಗಳಿಗೆ ಆ ಕಾರ್ಯವನ್ನು ವಹಿಸಿದರು. ರಾಜಭೋಗದಲ್ಲಿದ್ದ ಯಾಮುನರಲ್ಲಿ ಹೇಗೆ ಪರಿವರ್ತನೆಯನ್ನುಂಟುಮಾಡುವುದೆಂದು ಯೋಚಿಸಿ ಮಣಕ್ಕಾಲ್ ನಂಬಿಗಳು ದೀರ್ಘವಾದ ಪ್ರಯತ್ನವನ್ನು ಮಾಡಿ ಅವರ ಸಂದರ್ಶನವನ್ನು ಪಡೆದರು. ಮಣಕ್ಕಾಲ್ ನಂಬಿಗಳು ಯಾಮುನರಿಗೆ ಅವರ ಪಿತಾಮಹರಾದ ನಾಥಮುನಿಗಳು ರಕ್ಷಿಸಿಟ್ಟಿರುವ ನಿಧಿಯೊಂದನ್ನು ತೋರುವುದಾಗಿ ತಿಳಿಸಿ ಅವರನ್ನು ಶ್ರೀರಂಗಕ್ಕೆ ಕರೆ ಕರೆದೊಯ್ದರು. ನಾಥಮುನಿಗಳ ವೈಭವವನ್ನೂ, ಐಹಿಕ ಫಲಭೋಗವಿರಕ್ತಿಯನ್ನೂ ಪರಮಾತ್ಮನಲ್ಲಿ ಅನುರಕ್ತಿಯನ್ನೂ ತಿಳಿಯಪಡಿಸಿ ಅವರಿಗೆ ಮಂತ್ರೋಪದೇಶಾದಿಗಳನ್ನು ಮಾಡಿದರು. ತಮ್ಮ ಜ್ಞಾನ ಭಕ್ತಿ ವೈರಾಗ್ಯಗಳಿಂದಲೂ, ದರ್ಶನ ಪ್ರವಚನಾದಿಗಳಿಂದಲೂ ಸಿದ್ಧಾಂತಪ್ರತಿಪಾದಕ ಗ್ರಂಥಗಳ ನಿರ್ಮಾಣದಿಂದಲೂ ಯಾಮುನರು ದರ್ಶನ ಪ್ರತಿಪಾದಕರೂ ಪ್ರವರ್ತಕರೂ ಆದರು. ತಮ್ಮ ೮ನೆಯ ವಯಸ್ಸಿನಲ್ಲಿ ಯಾಮುನರು ಸಂನ್ಯಾಸ ಸ್ವೀಕಾರ ಮಾಡಿದರು.

ಶ್ರೀಮನ್ನಾಥಮುನಿಗಳ ಪ್ರಶಿಷ್ಯರಾದ ಮಣಕ್ಕಾಲ್ ನಂಬಿಗಳನ್ನು ಆಶ್ರಯಿಸಿದ ಶಿಷ್ಯೋತ್ತಮರಲ್ಲಿ ಯಾಮುನರು ಮುಖ್ಯರು. ಇವರಲ್ಲದೆ ದೈವತ್ತುಕ್ಕರಶುನಂಬಿ, ನಂಬಿ ಗೋಮಠತ್ತು ತಿರುವಣ್ಣಹರಪ್ಪನ್, ಶಿಱುಪ್ಪುಳ್ಳೂರಾವುಡೈಯ ಪಿಳ್ಳೈ ಮತ್ತು ಆಚ್ಚಿ ಎಂಬುವರೂ ಮಣಕ್ಕಾಲ್ ನಂಬಿಗಳ ಶಿಷ್ಯರು. ಶ್ರೀಮದ್ಯಾಮುನರು ರಚಿಸಿದ ಗ್ರಂಥಗಳು ಹೀಗಿವೆ—(೧) ಆಗಮ ಪ್ರಾಮಾಣ್ಯ (೨) ಮಹಾಪುರುಷನಿರ್ಣಯ (೩) ಆತ್ಮಸಿದ್ಧಿ (೪) ಈಶ್ವರ ಸಿದ್ಧಿ (೫) ಸಂವಿತ್ಸಿದ್ಧಿ (೬) ಗೀತಾರ್ಥಸಂಗ್ರಹ (೭) ಸ್ತೋತ್ರರತ್ನ (೮) ಚತುಃಶ್ಲೋಕೀ.

ಸಿದ್ಧಿತ್ರಯವು ವಾದಗ್ರಂಥ. ಬಹಳ ಪ್ರಭಾವಶಾಲಿಯಾಗಿ ಆತ್ಮ, ಈಶ್ವರ ಮತ್ತು ಧರ್ಮಭೂತ ಜ್ಞಾನವನ್ನು ಸ್ಥಾಪಿಸುವುದಿದು. ಇಲ್ಲಿ ಬಂದಿರುವ ವಾದಗಳ ಸರಣಿಯನ್ನೇ ಅನುಸರಿಸಿ ರಾಮಾನುಜರು ತಮ್ಮ ಶ್ರೀಭಾಷ್ಯದಲ್ಲಿ ಸಿದ್ಧಾಂತ ವಿವರಣೆಯನ್ನು ಮಾಡಿದ್ದಾರೆ ; ಅದ್ವೈತ ಸಿದ್ಧಾಂತ ನಿರಾಕರಣೆಯನ್ನು ಸಾಧಿಸಿದ್ದಾರೆ. ಗೀತಾರ್ಥ ಸಂಗ್ರಹ ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳ ಸಾರಾರ್ಥವನ್ನೂ ಸಂಗ್ರಹಿಸಿ ನಿರೂಪಿಸುತ್ತದೆ. ಇದಕ್ಕನುಸಾರವಾಗಿಯೇ ರಾಮಾನುಜರು ತಮ್ಮ ಗೀತಾಭಾಷ್ಯವನ್ನು ರಚಿಸಿದ್ದಾರೆ. ಪಾಂಚರಾತ್ರಾಗಮದ ಪ್ರಾಮಾಣ್ಯವನ್ನು ಆಗಮಪ್ರಾಮಾಣ್ಯ ಸ್ಥಾಪಿಸುತ್ತದೆ. ಚತುಃಶ್ಲೋಕೀ ಮತ್ತು ಸ್ತೋತ್ರರತ್ನಗಳು ಯಾಮುನರು ರಚಿಸಿರುವ ಸುಂದರವಾದ ಸ್ತೋತ್ರಗಳು. ಅವರ ಭಗವತ್ಪ್ರೇಮದ ಪರೀವಾಹಗಳು ಇವು. ಅವರ ಹೃದಯಾಂತರಾಳದಿಂದ ಉಕ್ಕಿಬಂದ ಭಗವತ್ಪ್ರೇಮವೇ ಈ ರೂಪವಾಗಿ ಅಭಿವ್ಯಕ್ತವಾಗಿದೆ. ಈ ಸ್ತೋತ್ರರತ್ನವನ್ನನುಸರಿಸಿಯೋ ಎಂಬಂತೆ ಗದ್ಯತ್ರಯಗಳು ಆತ್ಮನಿವೇದನ ರೂಪವಾಗಿ ಹೊಮ್ಮಿಬಂದಿವೆ. ಹೀಗೆ ಬಹುಮುಖವಾಗಿ ಈ ಸಿದ್ಧಾಂತದ ರಕ್ಷಣೆ

acharya.org

ಮತ್ತು ಪ್ರಚಾರ ಯಾಮುನರಿಂದಾಯಿತು.

ಶ್ರೀರಂಗದಲ್ಲಿ ಆಚಾರ್ಯಪೀಠವನ್ನಲಂಕರಿಸಿದ್ದ ಯಾಮುನರು ತಮ್ಮ ಅನಂತರ ತಕ್ಕ ಸಿದ್ಧಾಂತಪ್ರವರ್ತಕರನ್ನು ನೇಮಿಸಬೇಕಾಗಿತ್ತು. ಅವರು ಕಾಂಚೀಪುರಕ್ಕೆ ಹೋಗಿ ಅಲ್ಲಿ ಯಾದವಪ್ರಕಾಶರಲ್ಲಿ ಅಧ್ಯಯನ ಮಾಡುತ್ತಿದ್ದ ರಾಮಾನುಜರನ್ನು ಕಂಡು ಅವರೇ ಮುಂದಿನ ತಮ್ಮ ಉತ್ತರಾಧಿಕಾರಿಗಳಾಗಲೆಂದು ಆಶಿಸಿದರು. ಮುಂದೆ ಹಾಗೆಯೇ ಅತ್ಯಂತ ಪ್ರತಿಭಾನ್ವಿತರಾದ ರಾಮಾನುಜರು ಯಾಮುನರು ಬೆಳಸಿದ ಸಿದ್ಧಾಂತದ ರಕ್ಷಣೆ ಮತ್ತು ಪ್ರಚಾರವನ್ನು ಕೈಗೊಂಡರು.

ಆಚಾರ್ಯ ಯಾಮುನರಿಗೆ ಅನೇಕ ಶಿಷ್ಯರುಗಳಾದರು. ಅವರಲ್ಲಿ ಮುಖ್ಯ ರಾದವರು ಇವರು—ಪೆರಿಯನಂಬಿ (ಮಹಾಪೂರ್ಣರು), ತಿರುಕ್ಕೋಟ್ಟಿಯೂರ್ ನಂಬಿ (ಗೋಷ್ಠೀಪೂರ್ಣರು), ತಿರುಮಾಲೈಯಾಣ್ಡಾನ್ (ಮಾಲಾಧರರು), ಆಳವಂದಾರಾಳ್ವಾನ್, ತಿರುಮಲೈನಂಬಿ (ಶ್ರೀಶೈಲಪೂರ್ಣರು), ಈಶಾಣ್ಡಾನ್, ದೈವವಾರಿಯಾಣ್ಡಾನ್, ಶಿಱಿಯಾಣ್ಡಾನ್, ತಿರುಮೋಕೂರಪ್ಪನ್, ತಿರುಮೋಕೂರ್ನಿನ್ರಾರ್, ದೆಯ್ವಪ್ಪೆರುಮಾಳ್, ತಿರುಮಂಗೈಯಾಳಿಯಾರ್, ಪಿಳ್ಳೈ ತಿರುಮಾಲಿರುಂಶೋಲೈದಾಸರ್, ಮಾಱನೇರ್ ನಂಬಿ, ಆಳ್ಕೊಂಡಿ.

ಇವರಲ್ಲಿ ಮಹಾನುಭಾವರಾದ ಪೆರಿಯನಂಬಿಗಳನ್ನು ಆಶ್ರಯಸಿದವರು ಆರುಮಂದಿ. ಇವರು ಯಾರೆಂದರೆ—(೧) ಎಂಬೆರುಮಾನಾರ್ ಎಂದು ಪ್ರಸಿದ್ಧರಾದ ರಾಮಾನುಜರು, ಮಲೈಕುನಿಯ ನಿನ್ರಾರ್, ಆರ್ಯಶಠಕೋಪದಾಸರ್, ಅಣಿಯ ರಂಗತ್ತುಮುಧನಾರ್, ತಿರುವಾಯ್ಕ್ಕುಲ ಮುಡೈಯಾನ್ಭಟ್ಟರ್ ಮತ್ತು ತಿರುಕ್ಕಚ್ಚಿನಂಬಿ.

ಈ ದರ್ಶನದ ಮೂವರು ಸ್ಥಾಪನಾಚಾರ್ಯರಲ್ಲಿ ನಾಥಮುನಿ ಮತ್ತು ಯಾಮುನ ಮುನಿಗಳೊಡನೆ ಶ್ರೀರಾಮಾನುಜರೂ ಸೇರಿದ್ದಾರೆ. ಇವರು ಯಾಮುನರ ಅನುಗ್ರಹಕ್ಕೆ ಪೂರ್ಣವಾಗಿ ಪಾತ್ರರಾಗಿದ್ದರಿಂದ ಅವರೇ ಒಂದು ದೃಷ್ಟಿಯಲ್ಲಿ ಇವರಿಗೆ ಆಚಾರ್ಯ ರೆನ್ನಬಹುದು. ಇವರು ಮಹಾಪೂರ್ಣರನ್ನು ಸಮಾಶ್ರಯಣ ಮಾಡಿದರು. ತಾವು ಕೈಕೊಳ್ಳಬೇಕಾದ ಮಹತ್ಕಾರ್ಯಕ್ಕೆ ತಕ್ಕಂತೆ ಅನೇಕ ಮಹಾನುಭಾವರಿಂದ ಇವರು ಉಪದೇಶ ಪಡೆದರು. ಗೋಷ್ಠೀಪೂರ್ಣರಿಂದ ಮಂತ್ರರತ್ನಗಳ ರಹಸ್ಯಾರ್ಥಗಳನ್ನೆಲ್ಲಾ ಪಡೆದುಕೊಂಡರು. ಮಾಲಾಧರರಲ್ಲಿ ತಿರುವಾಯ್ಮೊಳಿಯ ಅರ್ಥಾನುಸಂಧಾನಮಾಡಿದರು. ಆಳವಂದಾಳ್ವಾರ್ ಅವರಲ್ಲಿ ತಿರುವಾಯ್ಮೊೞಿಯನ್ನೋದಿ ಸ್ತೋತ್ರಾದಿಗಳಲ್ಲಿನ ಶ್ರೀಸೂಕ್ತಿಗಳನ್ನು ಕೇಳಿದರು. ಶ್ರೀಶೈಲಪೂರ್ಣರಲ್ಲಿ ಶ್ರೀಮದ್ರಾಮಾಯಣವನ್ನೂ ಅದರ ತತ್ವಾರ್ಥಗಳನ್ನೂ ಕೇಳಿದರು.

ಆಚಾರ್ಯ ರಾಮಾನುಜರು ಒಂಭತ್ತು ಗ್ರಂಥಗಳನ್ನು ರಚಿಸಿದ್ದಾರೆ. ಶ್ರೀಭಾಷ್ಯ, ವೇದಾಂತದೀಪ, ವೇದಾಂತಸಾರ ಎಂಬುವು ಮೂರೂ ಬ್ರಹ್ಮಸೂತ್ರಗಳಿಗೆ ಅತಿ ಸಂಗ್ರಹ

acharya.org

ವಾಗಿ, ಮತ್ತು ವಿಸ್ತಾರವಾಗಿ ರಚಿಸಿರುವ ವ್ಯಾಖ್ಯಾನಗಳು. ವೇದಾರ್ಥಸಂಗ್ರಹವು ವೇದಗಳೆಲ್ಲದರ ಸಾರಾರ್ಥವನ್ನು ಮಥಿಸಿ ನಿರ್ಣಯಿಸಿರುವ ಉತ್ತಮವಾದ ಸಿದ್ಧಾಂತ ಪರವಾದ ಸ್ವತಂತ್ರಗ್ರಂಥ. ಉಪನಿಷದ್ಭಾಷ್ಯವನ್ನು ಬರೆಯುವುದಕ್ಕೆ ಬದಲಾಗಿ ಉಪನಿಷತ್ತುಗಳಲ್ಲಿ ಬರುವ ವಿವಾದಾತ್ಮಕವಾದ ಮಂತ್ರಗಳೆಲ್ಲದರ ಸಾರಾಂಶವನ್ನು ಸಮಗ್ರ ದೃಷ್ಟಿಯಿಂದ ನಿರೂಪಿಸುವ ಪ್ರಕರಣಗ್ರಂಥ. ಭಗವದ್ಗೀತಾಭಾಷ್ಯವು ಗೀತೆಗೆ ವಿರಚಿಸಿರುವ ಭಾಷ್ಯ. ಶರಣಾಗತಿಗದ್ಯ, ಶ್ರೀರಂಗಗದ್ಯ ಮತ್ತು ವೈಕುಂಠಗದ್ಯ ಎಂಬ ಗದ್ಯತ್ರಯಗಳು ಭಗವಂತನಲ್ಲಿ ಅನನ್ಯಭಾವದಿಂದ ಪ್ರಪದನವನ್ನು ಮಾಡುವ ಉತ್ತಮ ಗದ್ಯಗಳು. ಭಗವದಾರಾಧನ ಕ್ರಮವನ್ನು ನಿರೂಪಿಸಿರುವ ಗ್ರಂಥ ನಿತ್ಯಗ್ರಂಥ. ಹೀಗೆ ಈ ಒಂಭತ್ತು ಗ್ರಂಥಗಳೂ ರಾಮಾನುಜರವು. ಇವುಗಳಲ್ಲಿ ಆಚಾರ್ಯರು ಈ ಸಿದ್ಧಾಂತದ ತತ್ತ್ವ- ಹಿತ-ಪುರುಷಾರ್ಥ ಸ್ವರೂಪವನ್ನು ಬಹಳ ಮಾರ್ಮಿಕವಾಗಿ ನಿರೂಪಿಸಿದ್ದಾರೆ. ಅನಾದಿಯಾದ ಈ ಸಿದ್ಧಾಂತಕ್ಕೆ ಯಾವ ಬಗೆಯ ದೋಷವೂ ಸಂಭವಿಸದೆಂಬುದನ್ನು ಸ್ಥಾಪಿಸಿ ನೆಲೆಗೊಳಿಸಿದ್ದಾರೆ.

ರಾಮಾನುಜ ದರ್ಶನದ ಪರಮಾಧಾರಗಳು

ಭಗವದ್ರಾಮಾನುಜರು ಪ್ರವರ್ತನಗೊಳಿಸಿದ ಈ ವಿಶಿಷ್ಟಾದ್ವೈತದರ್ಶನ ಬಹಳ ಅನಾದಿಯಾದುದೆಂದೂ ಸಾಕ್ಷಾತ್ ಶ್ರೀಮನ್ನಾರಾಯಣನೇ ಇದನ್ನು ಮೊದಲು ಉಪದೇಶಿಸಿದನೆಂದೂ ಪ್ರಸಿದ್ಧಿ ಇದೆ. ವೇದಾಂತದರ್ಶನದ ಒಂದು ಶಾಖೆಯಾದ ಇದು ಉಪನಿಷತ್ತಿನ ಪರಮಸಾರವೇ ಆಗಿರುವುದು ಸಹಜವಾಗಿದೆ. ಈ ದರ್ಶನದಲ್ಲಿಯೂ ಇತರ ದರ್ಶನಗಳಲ್ಲಿರುವಂತೆ ಆಚಾರಾದ್ಯನುಷ್ಠಾನಗಳಿಗೂ ಧಾರ್ಮಿಕ ಜೀವನದ ಪರಿಪೋಷಣೆಗೂ ಭಗವದರ್ಚಾದಿಮುಖೇನ ಭಗವತ್ಪರವಾದ ಜೀವನದ ವಿಕಾಸಕ್ಕೂ ಹಾಗೂ ಶಾಸ್ತ್ರವಿವೇಚನೆಯಿಂದ ಉನ್ನತವಾದ ತತ್ತ್ವಜಿಜ್ಞಾಸೆಗೂ ಅವಕಾಶವಿದೆ.

ಈ ದರ್ಶನದ ಪರಮಾಧಾರಗಳನ್ನು ನಾವು ಮೂರು ಬಗೆಯಾಗಿ ವಿಂಗಡಿಸಬಹುದು :—

೧. ವೇದ ವೇದಾಂತಗಳು ಮತ್ತು ಅವುಗಳ ಉಪಬೃಂಹಣಗಳಾದ ಸ್ಮೃತಿ, ಪುರಾಣ, ಇತಿಹಾಸ ಮುಂತಾದವು ಹಾಗೂ ಮುಖ್ಯವಾಗಿ ಪ್ರಸ್ಥಾನತ್ರಯಗಳು.

೨. ದ್ರಾವಿಡ ಪ್ರಬಂಧಗಳೆಂದು ಪ್ರಸಿದ್ಧವಾದ ತಮಿಳು ಸಂತರ ದಿವ್ಯಸೂಕ್ತಿಗಳು.

೩. ಪಾಂಚರಾತ್ರಾದಿ ಆಗಮಗಳು.

ಈ ದರ್ಶನ ಸಮಗ್ರವಾಗಿ ಶ್ರುತಿಪ್ರಾಮಾಣ್ಯವನ್ನು ಅಂಗೀಕರಿಸುತ್ತದೆ. ವೇದಗಳು ಕರ್ಮಕಾಂಡ ಮತ್ತು ಜ್ಞಾನಕಾಂಡ ಎಂದು ಎರಡು ಬಗೆಯಾಗಿವೆ. ಇವುಗಳೆರಡೂ

acharya.org

ಒಂದಕ್ಕೊಂದು ಕೂಡಿಕೊಂಡು ಒಂದೇ ಶಾಸ್ತ್ರವಾಗಿದೆ, ಎಂಬುದು ಈ ದರ್ಶನದ ತೀರ್ಮಾನವಾಗಿದೆ. ಪೂರ್ವಕಾಂಡವು ವಿವೇಚಿಸುವ ಕರ್ಮವಿಚಾರ ಭಗವಂತನನ್ನು ಸೇವಿಸುವ ಆರಾಧನಾವಿಶೇಷಗಳೆಂದೂ ಬ್ರಹ್ಮವಿಚಾರವನ್ನು ಮಾಡುವ ಉತ್ತರಕಾಂಡ ಆರಾಧ್ಯವಸ್ತುವಿಶೇಷವನ್ನು ತಿಳಿಸುವುದೆಂದೂ ಇಲ್ಲಿ ವಿವರಿಸಲಾಗಿದೆ. ಒಂದೇ ಶಾಸ್ತ್ರದ ಬೇರೆ ಬೇರೆ ಕಾಂಡಗಳಂತೆ, ಒಂದೇ ಕೃತಿಯ ಅಧ್ಯಾಯಗಳಂತೆ ಇವೆರಡೂ ಪರಸ್ಪರ ಪೂರಕವಾಗಿವೆಯೇ ವಿನಾ ಒಂದಕ್ಕೊಂದು ವಿರುದ್ಧವಾಗಿಲ್ಲವೆಂಬುದು ಈ ದರ್ಶನದ ನೆಲೆ. ಇದಕ್ಕೆ 'ಶಾಸ್ತ್ರೈಕ್ಯಸಮರ್ಥನೆ' ಎಂದು ಹೆಸರು. ರಾಮಾನುಜರು ಇದನ್ನು ಪ್ರತಿಪಾದಿಸಿ ಪೂರ್ವಾಚಾರ್ಯರ ವಾಕ್ಯಗಳನ್ನೂ ಸಹ ಇದಕ್ಕೆ ಪ್ರಮಾಣವಾಗಿ ಉದಾಹರಿಸಿದ್ದಾರೆ. 'ಸಂಹಿತಮೇತಚ್ಛಾರೀರಕಂ ಜೈಮಿನೀಯೇನ ಷೋಡಶಲಕ್ಷಣೇನೇತಿ ಶಾಸ್ತ್ರೈಕತ್ವ-ಸಿದ್ಧಿಃ' ಎಂದು. ಇದು ಒಂದು ಮುಖ್ಯವಾದ ಅಂಶ. ಹೀಗೆ ಪೂರ್ವಮೀಮಾಂಸೆ ಮತ್ತು ಉತ್ತರಮೀಮಾಂಸೆ ಇವೆರಡೂ ಒಂದೇ ಶಾಸ್ತ್ರದ ಎರಡು ಭಾಗಗಳು. ಪೂರ್ವ ಮೀಮಾಂಸಾ ಶಾಸ್ತ್ರದ ಹನ್ನೆರಡು ಅಧ್ಯಾಯಗಳೂ ದೇವತಾಕಾಂಡವೆಂದು ಪ್ರಸಿದ್ಧವಾದ ಸಂಕರ್ಷಣಕಾಂಡದ ನಾಲ್ಕು ಅಧ್ಯಾಯಗಳೂ ಅದನಂತರ ಉತ್ತರಮೀಮಾಂಸೆ ಎಂದು ಪ್ರಸಿದ್ಧವಾದ ಬ್ರಹ್ಮಸೂತ್ರಗಳ ನಾಲ್ಕು ಕಾಂಡಗಳು ಬರುವುವೆಂದು ಸಮರ್ಥಿಸಲಾಗಿದೆ.

ಹೀಗೆ ಈ ದರ್ಶನಕ್ಕನುಸಾರ ವೇದಗಳು ಪರಮಪ್ರಮಾಣಗಳಾಗಿ ಪರಮಾಧಾರಗಳಾಗಿವೆ. ಈ ವೇದವಾಕ್ಯಗಳಲ್ಲಿಯೂ ಪರಸ್ಪರ ವಿರೋಧಕ್ಕೆ ಅವಕಾಶವಿಲ್ಲ. ಶರೀರ-ಶರೀರಿಭಾವದ ಮೂಲಕ ವಿಚಾರಿಸಿದಾಗ ಭೇದ, ಅಭೇದ ವಾಕ್ಯಗಳಿಗಿರುವ ಆಪಾತ ಪ್ರತೀತವಾದ ವಿರೋಧವೂ ಜಾರಿಹೋಗಿ ಎಲ್ಲ ವಾಕ್ಯಗಳಿಗೂ ಮುಖ್ಯಾರ್ಥವನ್ನೇ ಕಲ್ಪಿಸಲು ಸಾಧ್ಯವಾಗುತ್ತದೆ. ಸಂಹಿತೆ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತುಗಳೆಂದು ಪ್ರಸಿದ್ಧವಾಗಿರುವ ಅಖಂಡ ವೇದರಾಶಿ ಈ ಸಿದ್ಧಾಂತಕ್ಕೆ ಹೀಗೆ ಪರಮಾಧಾರವಾಗಿದೆ. ಈ ವೇದದ ಉಪದೇಶಸಾರವನ್ನೇ ಪೋಷಿಸಿ ವಿವರಿಸುವ ಇತಿಹಾಸ, ಪುರಾಣ, ಸ್ಮೃತಿಗಳೂ, ಪರಮಪ್ರಮಾಣಗಳಾಗಿ ಇದಕ್ಕೆ ಆಧಾರಗಳಾಗಿವೆ. ರಾಮಾಯಣ, ಮಹಾಭಾರತ, ಧರ್ಮಶಾಸ್ತ್ರಗಳು, ವೇದಾಂಗಗಳು, ಪುರಾಣಗಳು ಇವಕ್ಕೆಲ್ಲಾ ವೇದದೊಡನೆ ನಿಕಟವಾದ ಸಂಬಂಧವಿರುವುದರಿಂದಲೂ, ಇವುಗಳಲ್ಲಿ ಆ ವೇದಕ್ಕೆ ಅವಿರುದ್ಧವಾಗಿರುವ ಅಂಶಗಳಿರುವುದರಿಂದಲೂ ಪರಮಪ್ರಮಾಣಗಳಾಗಿವೆ. ಪುರಾಣಗಳನ್ನು ಸಾತ್ತ್ವಿಕ, ರಾಜಸ, ತಾಮಸ ಎಂದು ಮೂರುಬಗೆಯಾಗಿ ವಿಂಗಡಿಸಿ ಅವುಗಳಲ್ಲಿ ಸಾತ್ತ್ವಿಕ ಪುರಾಣಗಳು ಪರಮಪ್ರಮಾಣಗಳೆಂದೂ, ಉಳಿದವುಗಳಲ್ಲಿ ಯಾವ ಯಾವ ಅಂಶಗಳು ವೇದಕ್ಕೆ ವಿರುದ್ಧವಾಗಿಲ್ಲವೋ ಅವು ಪ್ರಮಾಣಗಳೆಂದೂ ಘೋಷಿಸಲಾಗಿದೆ. ಒಂದು ಶಾಸ್ತ್ರದ ಅಥವಾ ಪುರಾಣದ ಅಥವಾ ಸಿದ್ಧಾಂತದ ಪ್ರಾಮಾಣ್ಯವನ್ನು ನಿರ್ಧರಿಸುವಾಗ ಅದು ವೇದದ ಉಪದೇಶಕ್ಕೆ ವಿರುದ್ಧವಾಗಿಲ್ಲವೇ ಎಂಬುದನ್ನು ಪರೀಕ್ಷಿಸಬೇಕು.

acharya.org

ವಿರುದ್ಧವಾಗಿದ್ದರೆ ಅದು ಪ್ರಮಾಣವಲ್ಲ. ಹೀಗೆ ವೇದಕ್ಕೆ ವಿರೋಧವಾಗಿಲ್ಲದಿರುವುದೇ ಅದರ ಪ್ರಾಮಾಣ್ಯವನ್ನು ನಿರ್ಧರಿಸುವ ಅಳತೆಗೋಲಾಗಿದೆ. ಇತರ ದರ್ಶನಗಳಲ್ಲಿಯೂ, ಪ್ರಕ್ರಿಯೆ ಗಳಲ್ಲಿಯೂ ಹೀಗೆಯೇ ನಮಗೆ ಸಮ್ಮತವಾದ ಅಂಶಗಳೂ, ನಮಗೆ ಅಸಮ್ಮತವಾದ ಅಂಶ ಗಳೂ ಇರಬಹುದು. ಯಾವ ಯಾವ ಅಂಶಗಳು ವೇದಕ್ಕೆ ವಿರೋಧವಾಗಿಲ್ಲವೋ ಅವೆ ಲ್ಲವೂ ಪ್ರಮಾಣವೆಂದು ಅಂಗೀಕರಿಸಬಹುದು. ಸಮಗ್ರವಾದ ವೇದರಾಶಿಯನ್ನೂ ಅವುಗಳ ಉಪಬೃಂಹಣವನ್ನೂ ಪ್ರಮಾಣವೆಂದು ಅಂಗೀಕರಿಸಿದ್ದರೂ ಅವುಗಳಲ್ಲಿ ವಿಶೇಷವಾಗಿ ಶ್ರೀಮನ್ನಾರಾಯಣನ ಪರಾತ್ಪರತ್ವವನ್ನು ಬೋಧಿಸುವ ನಾರಾಯಣೋಪನಿಷತ್ತು, ನಾರಾಯಣಸೂಕ್ತ, ಪುರುಷಸೂಕ್ತ, ವಿಷ್ಣುಪುರಾಣ, ನಾರಾಯಣೀಯ, ಸನತ್ಸು- ಜಾತೀಯ, ಭಗವದ್ಗೀತೆ ಮುಂತಾದವು ಹೆಚ್ಚಿನ ವೈಶಿಷ್ಟ್ಯವನ್ನು ಹೊಂದಿ ಈ ದರ್ಶನದ ವಿಕಾಸಕ್ಕೆ ಆಧಾರಗಳಾಗಿವೆ. ವೇದಾಂತದರ್ಶನಕ್ಕೇ ಆಧಾರವಾಗಿರುವ ಉಪನಿಷತ್ತು, ಗೀತೆ, ಬ್ರಹ್ಮಸೂತ್ರಗಳೆಂಬ ಪ್ರಸ್ಥಾನತ್ರಯಗಳು ಪ್ರಧಾನವಾದ ಆಧಾರಗಳು ಇದಕ್ಕೂ ಸಹ.

ಈ ವೇದೋಪನಿಷತ್ತುಗಳಂತೆ ದ್ರಾವಿಡ ವೇದಗಳೂ ಈ ಸಿದ್ಧಾಂತಕ್ಕೆ ಆಧಾರ ಗಳಾಗಿವೆ. ನಮ್ಮಾಳ್ವಾರ್‌ರವರೇ ಮುಂತಾದ ಭಕ್ತೋತ್ತಮರಾದ ದಿವ್ಯಸೂರಿಗಳು ತಮ್ಮ ಜ್ಞಾನಚಕ್ಷುಸ್ಸಿನಿಂದ ಸಾಕ್ಷಾತ್ಕರಿಸಿಕೊಂಡ ಪರಮತತ್ವವನ್ನು ತಮ್ಮ ಸೂಕ್ತಿಗಳಲ್ಲಿ ಉಪ ದೇಶಿಸಿದ್ದಾರೆ. ವೇದವನ್ನು ತಮಿಳಿನಲ್ಲಿ ಇವರು ಹೇಳಿದರೆಂಬ ಪ್ರಸಿದ್ಧಿಯೂ ಇದೆ. ಹೀಗಾಗಿ ಈ ದ್ರಾವಿಡಪ್ರಬಂಧಗಳು ವೇದಸಾರವನ್ನೊಳಗೊಂಡಿವೆ ಹಾಗೂ ಅನೇಕಶಃ ವೇದದಲ್ಲಿ ಗೂಢವಾಗಿರುವ ತತ್ತ್ವಗಳನ್ನು ಸರಳವಾಗಿ ತಿಳಿಸಿಕೊಡುತ್ತವೆ. ಪರಮಸಾತ್ತ್ವಿಕರೂ, ಭಕ್ತಶಿರೋಮಣಿಗಳೂ, ಪರಮಾಪ್ತರುಗಳೂ, ಬಹಳ ದಯಾಮಯರೂ ಆದ ಆಳ್ವಾ ರ್‌ರವರುಗಳ ಶ್ರೀಸೂಕ್ತಿಗಳು ಎಲ್ಲಿಯೂ ವೇದಕ್ಕೆ ವಿರೋಧವನ್ನೇ ಹೊಂದಿರದ ಕಾರಣ ಸಮಗ್ರವಾಗಿ ಪ್ರಮಾಣಗಳಾಗಿ ಈ ಸಿದ್ಧಾಂತಕ್ಕೆ ಪರಮಾಧಾರಗಳಾಗಿವೆ. ಸಿದ್ಧಾಂತದಲ್ಲಿ ಪ್ರಧಾನವಾದ ಅನೇಕಾನೇಕ ಅಂಶಗಳು ಈ ದ್ರಾವಿಡಪ್ರಬಂಧಗಳಲ್ಲಿ ಅತ್ಯಂತ ರಸಮಯ ವಾಗಿ ನಿರೂಪಿತವಾಗಿವೆ. ಈ ಸಿದ್ಧಾಂತ ಈ ದಿವ್ಯಸೂಕ್ತಿಗಳಿಗೆ ವೇದಗಳಿಗೆ ಸಮನಾದ ಪ್ರಾಮಾಣ್ಯವನ್ನು ಕೊಡುತ್ತದೆ. ತಮಿಳು ವೇದಗಳ ಮತ್ತು ಸಂಸ್ಕೃತ ವೇದಗಳ `ಸಾರ ಸರ್ವಸ್ವವನ್ನು ಈ ಸಿದ್ಧಾಂತ ಪ್ರತಿಪಾದಿಸುವ ಕಾರಣವೇ ಇದಕ್ಕೆ 'ಉಭಯ ವೇದಾಂತ' ವೆಂಬ ಹೆಸರು ಪ್ರಸಿದ್ಧವಾಗಿದೆ.

ಇವುಗಳಂತೆಯೇ ಆಗಮಗಳೂ ಈ ಸಿದ್ಧಾಂತಕ್ಕೆ ಪರಮಾಧಾರಗಳಾಗಿವೆ. ಆಗಮ ಗಳು ವೇದಪ್ರತಿಪಾದ್ಯವಾದ ಅಂಶಗಳನ್ನೆ ವಿಶದೀಕರಿಸುತ್ತವೆ. ಈ ಆಗಮಗಳು ತಂತ್ರ ಪ್ರಧಾನವಾದುವು. ಈ ಸಿದ್ಧಾಂತದಲ್ಲಿ ಪ್ರತಿಪಾದಿತವಾಗಿರುವ ಭಗವಂತನ ಪಂಚವ್ಯೂಹ ಗಳು, ಷಾಡ್ಗುಣ್ಯ, ಆರಾಧನ ಪ್ರಕ್ರಿಯೆಗಳು, ಭಗವತ್ಪ್ರಾಪ್ತಿಗೆ ಉಪಾಯವಾದ ಪ್ರಪ್ರ

acharya.org

ತ್ತಿಯ ಸ್ವರೂಪ, ವಿಭಾಗ, ಪರಿಕರಾದಿಗಳು, ಪ್ರಪತ್ತ್ಯಂಗಗಳು ಮುಂತಾದುವೆಲ್ಲಾ ಆಗಮ ಗಳಿಂದ ತೆಗೆದುಕೊಂಡವಾಗಿವೆ. ಈ ಸಿದ್ಧಾಂತದ ಪೋಷಣೆಗೆ ಹೀಗೆ ಆಗಮುಗಳು ಬಹಳ ವಿಶಿಷ್ಟರೀತಿಯಲ್ಲಿ ನೆರವಾಗಿವೆ· ವೇದದಲ್ಲಿ ಪ್ರಪತ್ತಿಯ ಉಲ್ಲೇಖವೇನೋ ಇದೆ. ಆದರೆ ಅದರ ವಿಸ್ತಾರವಾದ ಸ್ವರೂಪವಿವರಣೆ ಮತ್ತು ಅಂಗಸಂಚಕಾದಿಗಳ ನಿರೂಪಣೆ ಆಗಮ ಗಳಿಂದ ಆಗಿದೆ. ಈ ಆಗಮುಗಳಲ್ಲಿ ಶ್ರೀಮನ್ನಾರಾಯಣನ ಪರತ್ವವನ್ನು ಸಮಗ್ರವಾಗಿ ಪ್ರತಿಪಾದಿಸುವ ವೈಖಾನಸಾಗಮ, ಪಾಂಚರಾತ್ರಾಗಮ, ಲಕ್ಷ್ಮೀತಂತ್ರ ಮುಂತಾದುವು ಈ ಸಿದ್ಧಾಂತಕ್ಕೆ ಪರಮಾಧಾರಗಳಾಗಿವೆ. ವೇದಗಳಿಗೆ ಎಲ್ಲಿಯೂ ವಿರೋಧವೇ ಇಲ್ಲದ ಕಾರಣ ಪಾಂಚರಾತ್ರಾಗಮ ಪರಮಪ್ರಮಾಣವಾದುದೆಂಬುದನ್ನು ರಾಮಾನುಜರು ಉತ್ಪತ್ತ್ಯಸಂಭವಾಧಿಕರಣದಲ್ಲಿ ಮಾರ್ಮಿಕವಾಗಿ ಪ್ರತಿಪಾದಿಸಿದ್ದಾರೆ.

ಹೀಗೆ ಈ ದರ್ಶನದ ಪ್ರಮೇಯಾಂಶಗಳಿಗೆ ಉಪನಿಷತ್ತುಗಳು, ದ್ರಾವಿಡಪ್ರಬಂಧ ಗಳು ಮತ್ತು ಪಾಂಚರಾತ್ರಾದಿ ಆಗಮುಗಳು ಅತಿಮುಖ್ಯವಾದ ಆಧಾರಗಳಾಗಿವೆ.

acharya.org

೨

ಭಗವದ್ರಾಮಾನುಜರ ದಿವ್ಯ ಜೀವನ

ಅವತಾರ ಕಾಲ

ಭರತವರ್ಷದ ಇತಿಹಾಸದಲ್ಲಿ ಕ್ರಿ. ಶ. ೧೨ನೇ ಶತಮಾನ ಒಂದು ಪರ್ವಕಾಲ. ಪ್ರಾಬಲ್ಯ ತಪ್ಪಿಹೋಗಿ ಕಳೆಗುಂದುತ್ತಿದ್ದ ಬೌದ್ಧ ಜೈನ ಧರ್ಮಗಳೊಂದು ಕಡೆ, ನಿತ್ಯ ಜೀವನದಿಂದ ದೂರವಾಗುತ್ತಿದ್ದ ಕರ್ಮಮಾರ್ಗವಿನ್ನೊಂದು ಕಡೆ, ಜನರ ಮನಸ್ಸನ್ನು ಸೂರೆಗೊಂಡ ಅದ್ವೈತವಾದ ಮತ್ತೊಂದು ಕಡೆ, ರಾಜಕೀಯ ಪ್ರಾಬಲ್ಯದ ಕಾರಣ ಬಲಪ್ರಯೋಗದಿಂದ ಮತಪ್ರಚಾರಕ್ಕೆಳಸಿದ ಮುಸಲರ ಸಂಘರ್ಷಣೆಯಿನ್ನೊಂದು ಕಡೆ—ಹೀಗೆ ಹಲವಾರು ವಿರುದ್ಧ ಶಕ್ತಿಗಳ ತಾಕಲಾಟದಿಂದ ಈಶ್ವರವಾದ ಮತ್ತು ಭಕ್ತಿಪಂಥಗಳು ಮಲಿನವಾಗಿ ಹೋಗುತ್ತಿದ್ದ ಕಾಲವದು. ಭಾರತದೇಶದ ಸ್ವಾತಂತ್ರ್ಯಕ್ಕೆ ವಿಪತ್ಪರಂಪರೆಗಳು ತಲೆದೋರಲಾರಂಭಿಸಿದ ಕಾಲವದು. ಭಾರತದೇಶದಾದ್ಯಂತ ಸಂಚರಿಸಿ ಅತ್ಯಪೂರ್ವವಾದ ತಮ್ಮ ವಾದಸರಣಿಯಿಂದ ಸರ್ವಶೂನ್ಯವಾದವನ್ನು ಖಂಡಿಸಿ ಅದಕ್ಕೆ ಪ್ರತಿಯಾಗಿ ಬ್ರಹ್ಮವಾದವನ್ನು ಶ್ರೀಮಚ್ಛಂಕರಭಗವತ್ಪಾದರು ಸ್ಥಾಪಿಸಿದ್ದರು. ಹಾಗೂ ವೈದಿಕಧರ್ಮದ ಸಂರಕ್ಷಣೆಯನ್ನು ಪ್ರಭಾವಪೂರ್ಣವಾಗಿ ಮಾಡಿದ್ದರು. ಇದರ ಪರಿಣಾಮವಾಗಿ ಬೌದ್ಧಧರ್ಮ ಅವನತಿಯನ್ನು ಹೊಂದಿತ್ತು. ಭಾರತದಾದ್ಯಂತ ಜನಪ್ರಿಯತೆಯನ್ನು ಅದ್ವೈತವಾದ ಗಳಿಸಿತ್ತು. ಆದರೆ ಕಠಿಣವಾದ ಅದ್ವೈತದರ್ಶನದ ನಿರೂಪಣೆ ಜನಸಾಮಾನ್ಯರ ಬುದ್ಧಿಗೆ ನಿಲುಕಲಿಲ್ಲ. ಶಂಕರಭಗವತ್ಪಾದರ ನಂತರ ಈ ಅದ್ವೈತವಾದವೂ ಬಗೆಬಗೆಯಾಗಿ ಬೆಳೆಯಿತು. ಭಾಸ್ಕರರು, ಯಾದವಪ್ರಕಾಶರು ಮುಂತಾದವರು ಬೇರೆ ಬೇರೆ ರೀತಿಗಳಲ್ಲಿ ಅದ್ವೈತವಾದವನ್ನು ಸಮರ್ಥಿಸಲು ಯತ್ನಿಸಿದರು.

ಅದ್ವೈತದರ್ಶನಕ್ಕನುಸಾರವಾಗಿ ನಿರ್ಗುಣಬ್ರಹ್ಮವೊಂದೇ ಸತ್ಯವಾಗಿ, ಉಳಿದುದೆಲ್ಲಾ ಮಿಥ್ಯೆಯಾಗಿದೆ. 'ಅಹಂ ಬ್ರಹ್ಮಾಸ್ಮಿ' ಎಂಬಂಥ ಬ್ರಹ್ಮಾತ್ಮೈಕ್ಯಜ್ಞಾನದಿಂದ ಮೋಕ್ಷ ಲಭಿಸುವುದು. ಈ ಜ್ಞಾನಯೋಗ ಎಲ್ಲರಿಗೂ ಸಾಧ್ಯವಾಗದ ಕಾರಣ ಕರ್ಮ ಭಕ್ತಿಗಳ ಮೂಲಕ ಈ ನೆಲೆಯನ್ನು ಸಾಧಿಸಬೇಕೆಂದು ಅಲ್ಲಿ ವಿಧಿಸಿದೆ. ವ್ಯವಹಾರ ಮಾರ್ಗದ ಮೂಲಕವೇ ಪರಮಾರ್ಥವನ್ನು ಮುಟ್ಟಬೇಕೆಂಬುದು ಇದರ ಕಟ್ಟಾಣತಿ.

acharya.org

ಆದರೆ ಜನಸಾಮಾನ್ಯರು ತಾವು ನಿರ್ಗುಣಬ್ರಹ್ಮವಾದಿಗಳೆಂಬ ಕಾರಣ ಕರ್ಮಭಕ್ತಿಗಳಲ್ಲಿ ಶ್ರದ್ಧೆಯನ್ನು ಕಳೆದುಕೊಳ್ಳುತ್ತಾ ಬಂದರು. ಜನರ ಧಾರ್ಮಿಕಜೀವನದಲ್ಲಿ ಇದರ ಪರಿಣಾಮವಾಗಿ ಭಾವಪೋಷಣೆಗೆ ಅವಕಾಶವೇ ಕಡಿಮೆಯಾಗುತ್ತಾ ಬಂದಿತು. ಭಕ್ತಿಪಂಥ ಕಣ್ಮರೆಯೇ ಆಗಿಬಿಡುವುದೋ ಎಂಬ ಪರಿಸ್ಥಿತಿ ಬಂದೊದಗಿತ್ತು.

ಶ್ರೀವೈಷ್ಣವಧರ್ಮದ ಇತಿಹಾಸದಲ್ಲಿಯಂತೂ ಆ ಕಾಲ ಬಹಳ ಕಷ್ಟದ ಕಾಲವಾಗಿತ್ತು. ಹಿಂದಿನ ಆಚಾರ್ಯರುಗಳು ಬಹಳ ಕಷ್ಟದಿಂದ ಸಂರಕ್ಷಿಸಿಕೊಂಡುಬಂದಿದ್ದ ಅನಾದಿಯಾದ ಸಂಪ್ರದಾಯಕ್ಕೆ ಒಂದು ನಿಷ್ಕೃಷ್ಟವಾದ ರೂಪವನ್ನು ಕೊಡಬೇಕಾಗಿತ್ತು. ದೇಶದಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ಮಹನೀಯರು ಈ ಧರ್ಮದ ಸಂರಕ್ಷಣೆಯನ್ನು ಮಹತ್ಪ್ರಯತ್ನದಿಂದ ಮಾಡುತ್ತಿದ್ದರು. ದಕ್ಷಿಣದ ಶ್ರೀರಂಗದಲ್ಲಿ ಆಚಾರ್ಯ ಯಾಮುನರು ತತ್ತ್ವೋಪದೇಶಾದಿಗಳಲ್ಲಿ ನಿರತರಾಗಿದ್ದರು. ಅಲ್ಲಲ್ಲಿ ಹರಡಿಕೊಂಡಿದ್ದ ವೈಷ್ಣವಾಲಯಗಳು ಈ ಧರ್ಮದ ಕೇಂದ್ರಗಳಾಗಿದ್ದವು. ಶ್ರೀವೈಷ್ಣವರೆಲ್ಲರನ್ನೂ ಒಂದುಗೂಡಿಸಿ ಸರಿಯಾದ ಮಾರ್ಗದಲ್ಲಿ ಅವರನ್ನು ಕರೆದೊಯ್ಯುವ ಸಮರ್ಥನಾದ ನಾಯಕನೊಬ್ಬನನ್ನು ನಿರೀಕ್ಷಿಸಲಾಗಿತ್ತು. ಅನಾದಿಯಾದ ಈ ದರ್ಶನವನ್ನು ಸರ್ವತೋಭದ್ರವಾಗಿ ಪ್ರತಿಪಾದಿಸಬಲ್ಲ ಮಹಾತ್ಮನೊಬ್ಬನ ಅವಶ್ಯಕತೆ ಅಂದು ಅಪಾರವಾಗಿ ಇತ್ತು. ಈ ಮಹತ್ಕಾರ್ಯವನ್ನು ನಿರ್ವಹಿಸುವುದಕ್ಕಾಗಿಯೇ ಅವತರಿಸಿದ ಮಹಾನುಭಾವರು ಭಗವದ್ರಾಮಾನುಜರು. ಮಲಿನವಾಗುತ್ತಿದ್ದ ಭಕ್ತಿಮಾರ್ಗವನ್ನು ಉಜ್ಜೀವನಗೊಳಿಸಿ ಅನಾದಿಯಾದ ವಿಶಿಷ್ಟಾದ್ವೈತ ಸಂಪ್ರದಾಯವನ್ನು ಪುನಶ್ಚೇತನಗೊಳಿಸಿ ಶ್ರೀವೈಷ್ಣವರ ಸಂಘಟನೆಯನ್ನು ಸಾಧಿಸಿದವರು ರಾಮಾನುಜರು.

ಒಂದು ದೃಷ್ಟಿಯಲ್ಲಿ ನೋಡಿದರೆ ರಾಮಾನುಜರ ಕಾರ್ಯಭಾರ ಶಂಕರರ ಕಾರ್ಯಭಾರದಷ್ಟೇ ಗುರುತರವಾಗಿತ್ತು. ಶಂಕರರು ಅವೈದಿಕ ದರ್ಶನಗಳು ತಲೆ ಎತ್ತದಂತೆ ಮಾಡಿದರು. ಪ್ರಸ್ಥಾನತ್ರಯಕ್ಕೆ ಭಾಷ್ಯಗಳನ್ನು ಬರೆದು ಅದ್ವೈತದರ್ಶನ ಪ್ರತಿಷ್ಠಾಪನಾಚಾರ್ಯರಾದರು. ಶಂಕರರ ಪಾಂಡಿತ್ಯ, ವಾಗ್ಮಿತೆ, ತರ್ಕಸರಣಿ ಹಾಗೂ ಪ್ರತಿಭೆಗಳಿಗೆ ಸಾಟಿಯಾಗಿ ಯಾರೂ ನಿಲ್ಲದಾದರು. ಇದರ ಪರಿಣಾಮ ಎಷ್ಟು ಗಾಢವಾಗಿ ಆಯಿತೆಂದರೆ ಅನೇಕ ಶತಮಾನಗಳ ನಂತರವೂ ಜನರ ಮನಸ್ಸನ್ನು ಈಶ್ವರವಾದದ ಕಡೆ ಒಲಿಸಿಕೊಳ್ಳುವುದು ಬಹಳ ಕಠಿಣವಾಗಿತ್ತು. ಇಂಥ ಕಠಿಣತಮವಾದ ಕಾರ್ಯದಲ್ಲಿ ಅದ್ಭುತವಾದ ಯಶಸ್ಸನ್ನು ಪಡೆದವರು ರಾಮಾನುಜರು. ತಮ್ಮ ರಸಮಯವೂ ಭಕ್ತಿಪೂರ್ಣವೂ ಗಂಭೀರವೂ ಆದ ವಾಕ್ಪ್ರವಾಹದಿಂದ ರಾಮಾನುಜರು ಎಲ್ಲರ ಮನಸ್ಸನ್ನೂ ಕರಗಿಸಿ ಭಗವತ್ಪ್ರವಣವನ್ನಾಗಿ ಮಾಡಿದ ಪವಾಡಪುರುಷರು. ಇತರ ವೇದಾಂತಿಗಳು ಅಂಗೀಕರಿಸಿದ್ದ ಶ್ರುತಿ ಸ್ಮೃತಿ ಪುರಾಣೇತಿಹಾಸಗಳ ಪ್ರಮಾಣಗಳಿಂದಲೇ ಸಗುಣಬ್ರಹ್ಮವಾದವನ್ನು ಸ್ಥಾಪಿಸಿದರಿವರು. ಇಂಥ ಅಸಾಧಾರಣವಾದ ವ್ಯಕ್ತಿತ್ವ ಇವರದು.

acharya.org

ಭಗವದ್ರಾಮಾನುಜರು ಶ್ರೀ ಪೆರಂಬೂದೂರಿನ ಆಸೂರಿ ಕೇಶವ ಸೋಮಯಾಜಿ ಮತ್ತು ಕಾಂತಿಮತಿಯರ ಸುಪುತ್ರರಾಗಿ (ಕ್ರಿ. ಶ. ೧೦೧೭ರಲ್ಲಿ) ಶಕರ್ವರ್ಷ ನೇ ಪಿಂಗಳ ಸಂವತ್ಸರ ಚೈತ್ರಶುದ್ಧ ಪಂಚಮೀ ಗುರುವಾರ ಆದ್ರಾರ್ ನಕ್ಷತ್ರದ ಶುಭದಿನ ಜನಿಸಿದರು. ಪರಮಾನಂದಭರಿತರಾದ ತಂದೆ ಶಿಶುವಿಗೆ ಜಾತಕರ್ಮಾದಿ ಸಂಸ್ಕಾರಗಳನ್ನು ನೇರವೇರಿಸಿದರು. ಎಲ್ಲ ಶಿಶುವಿನಂತೆಯಲ್ಲದೆ ಅಪೂರ್ವವಾದ ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದ ಮಗುವಿಗೆ ಶ್ರೀಶೈಲಪೂರ್ಣರ (ರಾಮಾನುಜರ ಸೋದರಮಾವನವರು) ಸಲಹೆಯಂತೆ 'ರಾಮಾನುಜ' ಎಂಬ ಹೆಸರನ್ನು ಇಡಲಾಯಿತು. ರಾಮನ ಕೈಂಕರ್ಯವನ್ನು ಲಕ್ಷ್ಮಣನು ನಡೆಸಿದಂತೆ ಈ ಶಿಶುವೂ ಭಗವಂತನಲ್ಲಿ ಅನನ್ಯಭಾವದಿಂದ ಸೇವೆ ನಡೆಸುವುದೆಂಬುದನ್ನು ಹಿರಿಯರು ಆಗಲೇ ಕಂಡುಕೊಂಡರು. ಶಿಶುವಿನಲ್ಲಿ ಮಹಾಪುರುಷಲಕ್ಷಣಗಳಿರುವುದನ್ನು ಅವರು ಅರಿತುಕೊಂಡರು.

ಕಾಲಕ್ರಮದಲ್ಲಿ ಚೌಲೋಪನಯನಾದಿಗಳೂ ವೇದವೇದಾಂತಗಳ ಅಧ್ಯಯನವೂ ಆದವು. ರಾಮಾನುಜರ ಮನಸ್ಸು ಬಾಲ್ಯದಿಂದಲೂ ಸತ್ಸಂಗ ಮತ್ತು ಸತ್ಕಾಲಕ್ಷೇಪದಲ್ಲಿ ಆಸಕ್ತಿಯನ್ನು ಹೊಂದಿತ್ತು. ಭಕ್ತರೊಡನೆ, ಸಾತ್ತ್ವಿಕರೊಡನೆ, ಧಾರ್ಮಿಕರೊಡನೆ ಇರುವುದರಲ್ಲಿ ಅವರಿಗೆ ಅಪಾರವಾದ ಸಂತೋಷವಾಗುತ್ತಿತ್ತು. ಅತ್ಯಪೂರ್ವವಾದ ಬುದ್ಧಿಶಕ್ತಿ ಹಾಗೂ ಅನಿರ್ವಚನೀಯವಾದ ಭಗವತ್ಪ್ರೇಮ ಆಗಲೇ ಇವರಲ್ಲಿ ತುಂಬಿ ತುಳುಕುತ್ತಿತ್ತು. ನಿಷ್ಕಪಟವಾದ ವರ್ತನೆ, ಇತರರಲ್ಲಿ ಗೌರವಬುದ್ಧಿ, ಸನ್ಮಾರ್ಗದಲ್ಲಿ ವಿಚಾರಪ್ರವೃತ್ತಿ, ಪವಿತ್ರವಾದ ಶೀಲ—ಇವೆಲ್ಲದರಿಂದ ಇವರು ಆಚಾರ್ಯಪೀಠವನ್ನಲಂಕರಿಸಿ ದರ್ಶನಸ್ಥಾಪನಾಚಾರ್ಯರಾಗಲು ಬೇಕಾದ ಸಲ್ಲಕ್ಷಣಗಳನ್ನೆಲ್ಲಾ ತಮ್ಮ ಬಾಲ್ಯದಿಂದಲೇ ತೋರಿದರು.

ಹದಿನಾರನೆಯ ವಯಸ್ಸಿನಲ್ಲಿ ರಾಮಾನುಜರು ಹಿರಿಯರ ಆಶಯದಂತೆ ಗೃಹಸ್ಥಾಶ್ರಮವನ್ನು ಸ್ವೀಕರಿಸಿದರು. ಇವರ ವಿವಾಹವಾದ ಒಂದು ತಿಂಗಳೊಳಗೆ ಇವರಿಗೆ ಪಿತೃವಿಯೋಗವಾಯಿತು. ಆ ದುಃಖವನ್ನು ಹೇಗೋ ಸಹಿಸಿಕೊಂಡು ತಾಯಿಯನ್ನೂ ಸಮಾಧಾನಪಡಿಸಿದವರಾಗಿ ಇವರು ತಮ್ಮ ವಾಸವನ್ನು ಶ್ರೀಪೆರಂಬೂದೂರಿನಿಂದ ಕಾಂಚೀಪುರಕ್ಕೆ ಬದಲಾಯಿಸಿದರು.

ಯಾದವಪ್ರಕಾಶರಲ್ಲಿ ವೇದಾಂತಾಭ್ಯಾಸ

ಕಾಂಚಿಯ ಬಳಿ ತಿರುಪುಟ್ಕುಳಿ ಗ್ರಾಮದಲ್ಲಿ ಯಾದವಪ್ರಕಾಶರೆಂಬ ಪ್ರಸಿದ್ಧ ವಿದ್ವಾಂಸರಿದ್ದರು. ಇವರು ಅದ್ವೈತವೇದಾಂತವನ್ನು ಪ್ರವಚನ ಮಾಡುತ್ತಿದ್ದರು. ರಾಮಾನುಜರು ಯಾದವಪ್ರಕಾಶರಲ್ಲಿ ವೇದಾಂತಾಭ್ಯಾಸವನ್ನಾರಂಭಮಾಡಿದರು.

ಯಾದವಪ್ರಕಾಶರು ಅದ್ವೈತಸಿದ್ಧಾಂತದ ಪ್ರಕಾರವೊಂದನ್ನು ಪ್ರತಿಪಾದಿಸುತ್ತಿ

acharya.org

ದ್ದರು. ಇವರ ವಿಚಾರಸರಣಿಯ ಪರಿಚಯು ನಮಗೆ ರಾಮಾನುಜರ ಕೃತಿಗಳಿಂದಲೇ ಆಗ ಬೇಕಾಗಿದೆ. ರಾಮಾನುಜರು ತಮ್ಮ ವೇದಾರ್ಥಸಂಗ್ರಹದಲ್ಲಿ ಮತ್ತು ಶ್ರೀಭಾಷ್ಯದಲ್ಲಿ ಯಾದವಪ್ರಕಾಶರ ಮತವನ್ನು ನಿರೂಪಿಸಿದ್ದಾರೆ. ಯಾದವಪ್ರಕಾಶರಲ್ಲಿ ರಾಮಾನುಜರು ಅದೇ ಮೊದಲಾಗಿ ಶಿಷ್ಯವೃತ್ತಿಗೆ ಸೇರಿದಾಗ ಅವರಿಗೆ ಇನ್ನೂ ವಿಶಿಷ್ಟಾದ್ವೈತ ಸಂಪ್ರದಾಯದ ಪರಿಚಯವಾಗಿರಲಿಲ್ಲ. ಅತ್ಯಂತ ಪ್ರತಿಭಾನ್ವಿತರಾದ ರಾಮಾನುಜರು ಯಾದವಪ್ರಕಾಶರೊಡನೆ ಕಲಿಯುತ್ತಿದ್ದಾಗ ಅನೇಕ ಬಾರಿ ಅವರಲ್ಲಿ ಭಿನ್ನಾಭಿಪ್ರಾಯಗಳು ಉಂಟಾದುವು. ಯಾದವಪ್ರಕಾಶರು ಶ್ರುತಿವಾಕ್ಯಗಳಿಗೆ ಹೇಳುತ್ತಿದ್ದ ಅರ್ಥಗಳು ರಾಮಾನುಜರಿಗೆ ಸರಿಯೆಂದು ಕಾಣುತ್ತಿರಲಿಲ್ಲ. 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಮತ್ತು 'ತಸ್ಯ ಯಥಾ ಕಪ್ಯಾಸಂ ಪುಂಡರೀಕಮೇವಮಕ್ಷಿಣೀ' ಎಂಬ ವಾಕ್ಯಗಳ ಅರ್ಥ ನಿರೂಪಣೆಯ ವಿಚಾರದಲ್ಲಿ ಇಂಥ ಭಿನ್ನಾಭಿಪ್ರಾಯ ಬೆಳೆಯಿತು. ಸತ್ಯ, ಜ್ಞಾನ ಮತ್ತು ಅನಂತವೆಂಬ ಗುಣಗಳು ಒಂದೇ ವಸ್ತುವಿನಲ್ಲಿ ಒಟ್ಟಿಗೆ ಇರಲಾರವು ಎಂದು ಯಾದವ ಪ್ರಕಾಶರು ವಿವರಿಸಿ ನಿರ್ಗುಣಬ್ರಹ್ಮವಸ್ತುವನ್ನು ಪ್ರತಿಪಾದಿಸಿದರು. ಈ ವಿವರಣೆ ರಾಮಾನುಜರಿಗೆ ಸರಿತೋರಲಿಲ್ಲ. ಅವರು ಈ ವಾಕ್ಯದ ಅರ್ಥ ಬೇರೆಯಾಗಿರಬೇಕು ಎಂದು ವಿನಯವಾಗಿ ಸೂಚಿಸಿದರು. ಯಾದವಪ್ರಕಾಶರು ಅದನ್ನು ವಿವರಿಸುವಂತೆ ಹೇಳಿದಾಗ ರಾಮಾನುಜರು ಪರಸ್ಪರವಾಗಿ ಅವಿರುದ್ಧವಾಗಿರುವ ಅನೇಕ ಗುಣಗಳು ಒಂದೇ ವಸ್ತುವಿನಲ್ಲಿರಬಲ್ಲವೆಂದು ಪ್ರತಿಪಾದಿಸಿ ಬ್ರಹ್ಮವಸ್ತು ತ್ರಿಕಾಲಾಬಾಧಿತವಾದುದು, ಅಸಂಕುಚಿತವಾದ ಜ್ಞಾನಾಕಾರವುಳ್ಳುದು ಮತ್ತು ದೇಶಕಾಲವಸ್ತುಗಳ ಪರಿಚ್ಛೇದವಿಲ್ಲದಿರುವುದು ಎಂಬ ಅರ್ಥವನ್ನು ಹೇಳಿದರು. ಆಗ ರಾಮಾನುಜರು ತಮ್ಮ ಅಂತಃಸ್ಫೂರ್ತಿಯಿಂದ ವಿವರಿಸಿದ ಈ ವಿವರಣೆ ಸಾಮಾನಾಧಿಕರಣ್ಯದ ಸೂತ್ರವಾಗಿ ಮುಂದೆ ಅವರಿಂದ ವಿವರಿಸಲ್ಪಟ್ಟ ವಿಶಿಷ್ಟಾದ್ವೈತಸಿದ್ಧಾಂತದ ಮುಖ್ಯಸೂತ್ರವಾಯಿತು. ಇನ್ನೂ ವಿಶಿಷ್ಟಾದ್ವೈತಸಂಪ್ರದಾಯದ ಸಂಪರ್ಕವಾಗಲೀ ಪರಿಚಯವಾಗಲೀ ಉಂಟಾಗದೇ ಇರುವಾಗಲೇ, ಇನ್ನೂ ಆಗತಾನೇ ವೇದಾಂತಾಭ್ಯಾಸವನ್ನು ಆರಂಭಿಸಿದಾಗಲೇ, ರಾಮಾನುಜರು ನೀಡಿದ ಈ ವಿವರಣೆ ಅವರ ದಿವ್ಯದೃಷ್ಟಿಯನ್ನೂ ಅನುಪಮವಾದ ವಿವೇಚನಾ ಶಕ್ತಿಯನ್ನೂ ತೋರುವುದು. ಅವರು ಕಾರಣಪುರುಷರೆಂಬುದನ್ನೂ ಇದು ಸಮರ್ಥಿಸುತ್ತದೆ. ಈ ಸೂತ್ರದ ವಿವರಣೆಯನ್ನು ಅವರು ಮುಂದೆ, 'ಭಿನ್ನಪ್ರವೃತ್ತಿನಿಮಿತ್ತಾನಾಂ ಶಬ್ದಾನಾಂ ಏಕಸ್ಮಿನ್ ಅರ್ಥೇ ವೃತ್ತಿಃ ಸಾಮಾನಾಧಿಕರಣ್ಯಂ' ಎಂಬ ಪ್ರಮಾಣಪುರಸ್ಪರವಾಗಿ ಪ್ರತಿಪಾದಿಸಿದರು.

ಹಾಗೆಯೇ ಮತ್ತೊಂದು ಸಂದರ್ಭದಲ್ಲಿ 'ತಸ್ಯ ಯಥಾಕಪ್ಯಾಸಂ ಪುಂಡರೀಕಮೇವ-ಮಕ್ಷಿಣೀ' ಎಂಬ ವಾಕ್ಯಕ್ಕೂ ಯಾದವರು ಹೇಳಿದ ಅರ್ಥವನ್ನು ಅಂಗೀಕರಿಸದೆ 'ಸೂರ್ಯ ಕಿರಣಗಳಿಂದ ಅರಳಿದ ಕಮಲದಂತೆ ಕಣ್ಣುಳ್ಳವನು' ಎಂಬ ಅರ್ಥವನ್ನು ಇವರು ಪ್ರತಿ

acharya.org

ಪಾದಿಸಿದರು. ಇದನ್ನೇ ವೇದಾರ್ಥಸಂಗ್ರಹದಲ್ಲಿ 'ಗಂಭೀರಾಂಭಸ್ಸಮುದ್ಭೂತ ಸುಮೃಷ್ಟ ನಾಲ ರವಿಕರವಿಕಸಿತ ಪುಂಡರೀಕದಲಾಮಲಾಯತೇಕ್ಷಣಃ' ಎಂದು ವರ್ಣಿಸಿದ್ದಾರೆ. ಸ್ವತಂತ್ರವಾಗಿ ವಿಚಾರ ಮಾಡಬಲ್ಲ ಇಂಥ ಪ್ರತಿಭಾಪೂರ್ಣನಾದ ಶಿಷ್ಯನೊಡನೆ ನಿರ್ವ ಹಿಸುವುದಕ್ಕೆ ಯಾದವರಿಗೆ ಸಹಜವಾಗಿಯೇ ಸಾಧ್ಯವಾಗಲಿಲ್ಲ. ಹೀಗಾಗಿ ರಾಮಾನುಜರು ಯಾದವರಲ್ಲಿ ವೇದಾಂತಾಭ್ಯಾಸ ಮಾಡುವುದು ಅಷ್ಟಕ್ಕೇ ನಿಂತುಹೋಯಿತು.

ಕಾಂಚೀಪೂರ್ಣರ ಉಪಕಾರ

ಆಧ್ಯಾತ್ಮಿಕ ವಿಚಾರಗಳಲ್ಲಿ ತತ್ತ್ವಜಿಜ್ಞಾಸುಗಳಿಗೆ ಉಂಟಾಗತಕ್ಕ ಸಂದೇಹಗಳು ರಾಮಾನುಜರಿಗೂ ಉಂಟಾಗಿದ್ದವು. ಇವುಗಳ ನಿರ್ಣಯ ಮಾಡಿಕೊಳ್ಳಲು ಅವರು ಕಾತರರಾಗಿದ್ದರು. ಅದಕ್ಕಾಗಿ ಆಚಾರ್ಯಸಮಾಶ್ರಯಣ ಮಾಡಲು ಅವರು ಆತುರ ಪಡುತ್ತಿದ್ದರು. ತಮ್ಮ ಸಂದೇಹವನ್ನು ಪರಿಹರಿಸಿ ಸರಿಯಾದ ಮಾರ್ಗದರ್ಶನವನ್ನು ಮಾಡ ಬಲ್ಲವರು ಯಾರು ಎಂದು ಇವರು ಅನ್ವೇಷಿಸುತ್ತಿದ್ದರು. ಯಾದವಪ್ರಕಾಶರು ಇಂಥ ಆಚಾರ್ಯರಾಗಲು ಸಾಧ್ಯವಾಗಲಿಲ್ಲ. ಅವರ ವಿವರಣೆಗಳು ಮತ್ತು ಉಪದೇಶಗಳು ಯುಕ್ತವಲ್ಲವೆಂದು ಇವರ ಅಂತರ್ವಾಣಿ ಹೇಳುತ್ತಿತ್ತು. ಅವರ ಉಪದೇಶಗಳು ಇವರ ತಪ್ತಹೃದಯವನ್ನು ಆಪ್ಯಾಯನಗೊಳಿಸಲಿಲ್ಲ. ಹೀಗೆ ತೊಳಲಾಡುತ್ತಿದ್ದ ಇವರ ಮನ ಸ್ಸಿನ ಮೇಲೆ ಅಮಿತವಾದ ಪ್ರಭಾವವನ್ನು ಬೀರಿದವರು ಕಾಂಚೀಪೂರ್ಣರು. ರಾಮಾ ನುಜರ ಸಂಶಯಗಳು ನಿವೃತ್ತಿಯಾಗುವಂತೆ ಮಾಡಿ ಅವರ ಮನಸ್ಸಿನಲ್ಲಿ ತತ್ತ್ವನಿಶ್ಚಯ ಉಂಟಾಗುವಂತೆ ಉಪಕರಿಸಿದವರು ಈ ಮಹಾನುಭಾವರು. ರಾಮಾನುಜರ ವ್ಯಕ್ತಿತ್ವ ವನ್ನು ಇವರೇ ಒಂದು ರೀತಿಯಲ್ಲಿ ರೂಪುಗೊಳಿಸಿದರೆಂದು ಹೇಳಬಹುದು. ವಿಶಿಷ್ಟಾ ದ್ವೈತ ಸಂಪ್ರದಾಯದಲ್ಲಿ ಪ್ರವೇಶವಾಗುವುದಕ್ಕೂ ಮೊದಲೇ ಇವರಲ್ಲಿ ಆ ಸಿದ್ಧಾಂತದ ಮೂಲತತ್ತ್ವಗಳ ನಿಶ್ಚಯವನ್ನುಂಟುಮಾಡಿದವರು ಕಾಂಚೀಪೂರ್ಣರು.

ಕಾಂಚೀಪೂರ್ಣರು ಭಗವತ್ಸೇವೆಯಲ್ಲಿ ಅನನ್ಯಭಾವದಿಂದ ನಿರತರಾಗಿದ್ದವರು. ಈ ಮಹಾನುಭಾವರ ಪರಿಚಯ ರಾಮಾನುಜರಿಗೆ ಮೊದಲಿಂದಲೂ ಇದ್ದಿತು. ಶ್ರೀಪೆರಂಬೂದೂರಿನಲ್ಲಿ ಇವರು ಇರುತ್ತಿದ್ದಾಗಲೇ ಇವರ ಪರಿಚಯ ರಾಮಾನುಜರಿ ಗಾಯಿತು. ಜನ್ಮತಃ ಇವರು ವೈಶ್ಯರಾದರೂ ಅಂಥ ಪುಣ್ಯಶಾಲಿಗಳೂ ಭಗವದ್ಭಕ್ತರೂ ಆದವರನ್ನು ಗೌರವಿಸಿ ಸೇವಿಸಬೇಕೆಂದು ರಾಮಾನುಜರ ಆಶಯವಾಗಿತ್ತು. ಶ್ರೀಮತ್ಕಾಂಚೀಪೂರ್ಣರು ದೈವಾನುಗ್ರಹಸಂಪನ್ನರಾಗಿದ್ದರು. ಅವರು ವರದರಾಜ ಸ್ವಾಮಿಯೊಡನೆ ಸಾಕ್ಷಾತ್ತಾಗಿ ಸಂಭಾಷಣೆ ನಡೆಸುತ್ತಿದ್ದರೆಂದು ಎಲ್ಲರೂ ಹೇಳುತ್ತಿ ದ್ದರು. ಇಂಥ ಪರಮಜ್ಞಾನಿಗಳ ಮಾರ್ಗದರ್ಶನ ರಾಮಾನುಜರಿಗೆ ಲಭಿಸಿದ್ದಿತು. ಯಾದವಪ್ರಕಾಶರ ಸಂಪರ್ಕ ತಪ್ಪಿದ ಮೇಲೆ ಕಾಂಚೀಪೂರ್ಣರನ್ನು ಆಶ್ರಯಿಸಲು

acharya.org

ರಾಮಾನುಜರು ಇಚ್ಛಿಸಿದರು. ಆದರೆ ಇದಕ್ಕೆ ಅವರು ಒಪ್ಪಲಿಲ್ಲ. ಇದಕ್ಕೆ ಕಾರಣ ತಾವು ದ್ವಿಜರಲ್ಲವೆಂಬುದೇ ಆಗಿತ್ತು. ವಿನಯಶೀಲರೂ, ಸರಳರೂ, ಅಪರೋಕ್ಷಜ್ಞಾನಿಗಳೂ, ಭಗವತ್ಕೃಪಾಪಾತ್ರರೂ ಆದ ಕಾಂಚೀಪೂರ್ಣರ ಪ್ರೇರಣೆಯಂತೆ ರಾಮಾನುಜರು ವರದರಾಜಸ್ವಾಮಿಯ ತೀರ್ಥಕೈಂಕರ್ಯದಲ್ಲಿ ನಿರತರಾಗಿದ್ದರು. ಹೆಚ್ಚುಹೆಚ್ಚಾಗಿ ರಾಮಾನುಜರು ಕಾಂಚೀಪೂರ್ಣರೊಡನೆ ಕಾಲ ಕಳೆಯುತ್ತಿದ್ದರು. ರಾಮಾನುಜರು ತಮ್ಮ ಸಂಶಯಗಳನ್ನು ಭಗವಂತನಲ್ಲಿ ನಿವೇದಿಸಿ ಅವುಗಳಿಗೆ ಉತ್ತರಗಳನ್ನು ಪಡೆದು ಹೇಳಬೇಕೆಂದು ಕಾಂಚೀಪೂರ್ಣರನ್ನು ಬೇಡಿದರು. ರಾಮಾನುಜರ ಕೋರಿಕೆಯನ್ನು ಕಾಂಚೀಪೂರ್ಣರು ಮನ್ನಿಸಿ ಭಗವಂತನಲ್ಲಿ ನಿವೇದಿಸಿದರಂತೆ. ರಾಮಾನುಜರ ಸಂಶಯಗಳಿಗೆ ಭಗವಂತನ ಉತ್ತರಗಳನ್ನು ಕಾಂಚೀಪೂರ್ಣರು ತಿಳಿದುಬಂದು ರಾಮಾನುಜರಿಗೆ ತಿಳಿಸಿದರು. ಆ ಉತ್ತರಗಳು ಹೀಗಿವೆ:

> ಅಹಮೇವ ಪರಂ ತತ್ತ್ವಂ ಜಗತ್ಕಾರಣಕಾರಣಂ ।
> ಕ್ಷೇತ್ರಜ್ಞೇಶ್ವರಯೋರ್ಭೇದಃ ಸಿದ್ಧ ಏವ ಮಹಾಮತೇ ॥
> ಮೋಕ್ಷೋಪಾಯೋ ನ್ಯಾಸ ಏವ ಜನಾನಾಂ ಮುಕ್ತಿಮಿಚ್ಛತಾಂ ।
> ಮದ್ಭಕ್ತಾನಾಂ ಜನಾನಾಂ ಚ ನಾಂತಿಮಸ್ಮೃತಿರಿಷ್ಯತೇ ॥
> ದೇಹಾವಸಾನೇ ಭಕ್ತಾನಾಂ ದದಾಮಿ ಪರಮಂ ಪದಂ ।
> ಪೂರ್ಣಾಚಾರ್ಯಮಹಾತ್ಮಾನಂ ಸಮಾಶ್ರಯ ಗುಣಾಶ್ರಯಂ ॥

ಇಲ್ಲಿ ಆರು ಅಂಶಗಳಿವೆ—(೧) ನಾನೇ ಪರತತ್ತ್ವ; (೨) ಜೀವೇಶ್ವರರಿಗೆ ಭೇದ ಸಿದ್ಧವಾದುದು; (೩) ಶರಣಾಗತಿಯೇ ಮೋಕ್ಷಕ್ಕೆ ಉಪಾಯ; (೪) ಭಗವದ್ಭಕ್ತರಿಗೆ ಅಂತಿಮ ಸ್ಮೃತಿಯ ನಿರ್ಬಂಧವಿಲ್ಲ; (೫) ದೇಹಾವಸಾನವಾದ ಮೇಲೆ ಮೋಕ್ಷ; (೬) ಮಹಾಪೂರ್ಣರನ್ನು ಗುರುಗಳಾಗಿ ಆಶ್ರಯಿಸು.

ಭಗವದ್ರಾಮಾನುಜರ ಮನಸ್ಸಿನಲ್ಲಿದ್ದ ಸಂದೇಹಗ್ರಂಥಿಗಳೆಲ್ಲಾ ಇದರಿಂದ ಮಾಯವಾದವು. ತತ್ತ್ವವು ಅದ್ವೈತವೋ ದ್ವೈತವೋ ಎಂಬ ಹೊಯ್ದಾಟ ಬಹಳ ಕಾಲ ಅವರ ಮನಸ್ಸಿನಲ್ಲಿ ನಡೆದಿದ್ದಿರಬೇಕು. ಅದು ಕಾಂಚೀಪೂರ್ಣರ ಅನುಗ್ರಹದಿಂದ ಶಮನವಾಗಿ ದ್ವೈತವೇ ತತ್ತ್ವವೆಂಬುದೂ, ಜೀವೇಶ್ವರರಿಗೆ ಸಹಜವಾದ ಭೇದವಿದೆಯೆಂಬುದೂ ಖಚಿತವಾಯಿತು. ಶ್ರೀಮನ್ನಾರಾಯಣನೇ ಪರದೈವವೆಂಬ ಸತ್ಯವೂ ಮನದಲ್ಲಿ ದೃಢವಾಯಿತು. ಮೋಕ್ಷಕ್ಕೆ ಉಪಾಯವಾವುದೆಂದು ಚಿಂತಿಸುತ್ತಿದ್ದ ಅವರಿಗೆ ನಿಶ್ಚಿತವಾದ ಉತ್ತರ ದೊರೆಯಿತು. ಪ್ರಪತ್ತಿ ಮೋಕ್ಷಕ್ಕೆ ಉಪಾಯವೆಂಬುದನ್ನು ರಾಮಾನುಜರು ಮನವರಿಕೆ ಮಾಡಿಕೊಂಡರು. ಗೀತೆಯಲ್ಲಿ ಹೇಳಿದಂತೆ ಅಂತಿಮ ಸ್ಮರಣೆ ಬೇಕೇ ಅಥವಾ ಭಕ್ತರಿಗೆ ಅದರ ಅವಶ್ಯಕತೆ ಇಲ್ಲವೇ ಎಂಬ ಪ್ರಶ್ನೆಯೂ ಪರಿಹರಿಸಲ್ಪಟ್ಟಿತು. ಮನಸ್ಸು ಸ್ಥಿರವಾಗಿದ್ದಾಗ ದೇಹ ದೃಢವಾಗಿದ್ದಾಗ ಮಾಡಿದ

acharya.org

ಭಗವತ್ಸ್ಮರಣೆಯ ಫಲವಾಗಿ ಭಗವಂತನು ಅಂಥ ಭಕ್ತನನ್ನು ಅವನ ಅಂತ್ಯಕಾಲದಲ್ಲಿ ನೆನೆಸಿಕೊಂಡು ಅನುಗ್ರಹಿಸಿ, ಪರಮಪದಕ್ಕೆ ತಾನೇ ಒಯ್ಯುವನೆಂಬ ವರಾಹ ಚರಮ ಶ್ಲೋಕದ ಅಭಿಪ್ರಾಯ ದೃಢೀಕೃತವಾಯಿತು. ಅದ್ವೈತದರ್ಶನದಲ್ಲಿ ಹೇಳುವಂತೆ ಜೀವನ್ಮುಕ್ತಿ ಸಂಭವಿಸುವುದೇ ಎಂಬ ಸಂದೇಹಕ್ಕೂ ಉತ್ತರ ದೊರೆಯಿತು. ಹೀಗಾಗಿ ವಿಶಿಷ್ಟಾದ್ವೈತ ಸಿದ್ಧಾಂತದ ಮೂಲತತ್ತ್ವಗಳನ್ನು ರಾಮಾನುಜರು ಕಾಂಚೀಪೂರ್ಣ ರಿಂದ ಪಡೆದುಕೊಂಡರು. ತಮಗೆ ತಕ್ಕ ಗುರು ಯಾರೆಂದು ಅವರು ಹಂಬಲಿಸುತ್ತಿದ್ದಾಗ ತಕ್ಕ ಆಚಾರ್ಯರನ್ನೂ ಕಾಂಚೀಪೂರ್ಣರು ತೋರಿಸಿಕೊಟ್ಟರು. ಮುಂದೆ ತಾವು ಯಾವ ಸಿದ್ಧಾಂತವನ್ನು ಸರ್ವತೋಭದ್ರವಾಗಿ ಸ್ಥಾಪಿಸಲು ಶ್ರಮಿಸಬೇಕಾಗಿತ್ತೋ ಆ ಸಿದ್ಧಾಂತದ ಸಾರತಮವಾದ ಪ್ರಮೇಯಗಳನ್ನು ರಾಮಾನುಜರು ಆಗಲೇ ಪಡೆದು ಕೊಂಡಂತಾಯಿತು. ಅದುವರೆಗೆ ತಾವು ಇತರರಿಂದ ಕೇಳಿದ್ದಂತಹ ವಿವಿಧವಾದ ಸಿದ್ಧಾಂತಗಳ ಬಗೆಗೆ ತಮಗೆ ಉಂಟಾಗಿದ್ದ ಸಂಶಯಗಳು ಪರಿಹಾರವಾಗಿ ಅವುಗಳು ತತ್ತ್ವವಲ್ಲವೆಂಬ ದೃಢನಿಶ್ಚಯ ಒಡಮೂಡಿತು. ಈ ಉತ್ತರಗಳು ಭಗವಂತನ ಅಂತರಂಗ ಭಕ್ತರಾದ ಕಾಂಚೀಪೂರ್ಣರಿಂದ ತಮಗೆ ಲಭ್ಯವಾದುದು ತಮ್ಮ ಭಾಗ್ಯವೆಂದು ಅವರು ತಿಳಿದರು. ಹೀಗೆ ಭಗವದ್ರಾಮಾನುಜರು ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರವರ್ತನ ಗೊಳಿಸುವ ಮಹಾಕಾರ್ಯದಲ್ಲಿ ಶ್ರೀಮತ್ಕಾಂಚೀಪೂರ್ಣರ ಪಾತ್ರ ವಿಶಿಷ್ಟವಾದ ಮಹತ್ವವನ್ನು ಹೊಂದಿದೆ.

ಸಂನ್ಯಾಸ ಸ್ವೀಕಾರ

ಬಾಲ್ಯದಿಂದಲೂ ಆಧ್ಯಾತ್ಮಿಕ ವಿಚಾರಗಳಲ್ಲಿಯೇ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದ ರಾಮಾನುಜರ ಜೀವನದ ಒಂದೊಂದು ಘಟನೆಯೂ ಅವರನ್ನು ಅವರ ಗುರಿಯತ್ತ ಕರೆದೊಯ್ಯುತ್ತಿದ್ದಿತು. ಅವರು ನಿರ್ವಹಿಸಬೇಕಾಗಿದ್ದ ಮಹತ್ಕಾರ್ಯವನ್ನು ಮಾಡಲು ಅವರು ಸಮರ್ಥರಾಗುವಂತೆ ಅವರನ್ನು ಬಲಪಡಿಸುತ್ತಿದ್ದಿತು. ಎಳೆಯ ವಯಸ್ಸಿನಿಂದಲೂ ಅವರಲ್ಲಿ ತುಂಬಿ ತುಳುಕುತ್ತಿದ್ದ ಭಗವತ್ಪ್ರೇಮ ಮತ್ತು ವಿಶ್ವಪ್ರೇಮ ವನ್ನು ಈ ಘಟನೆಗಳು ಪುಟಗೊಳಿಸಿದವು; ಉಜ್ವಲವಾಗುವಂತೆ ಮಾಡಿದವು. ಲೋಕದ ಮಂಗಳವನ್ನು ಸೂಚಿಸುವ ಉಜ್ವಲ ತಾರೆಯೊಂದರ ಉದಯವನ್ನು ಜನರು ನಿರೀಕ್ಷಿಸು ವಂತೆ ಇವರ ಅಭಿವೃದ್ಧಿಯನ್ನು ಸಾಧಕವರ್ಗ ನಿರೀಕ್ಷಿಸುತ್ತಿತ್ತು. ಇವರಲ್ಲಿದ್ದ ಮಹಾ ಪುರುಷಲಕ್ಷಣಗಳನ್ನು ಕಂಡು ಸಂತೋಷಿಸಿದ ಜನರು ಈ ಮಹಾನುಭಾವ ತಮಗೆ ಮಾರ್ಗದರ್ಶಕನಾಗುವ ಸುಯೋಗ ಲಭಿಸೀತೇ ಎಂದು ಕಾತರರಾಗಿದ್ದರು.

ರಾಮಾನುಜರು ಯಾದವಪ್ರಕಾಶರಲ್ಲಿ ಅಧ್ಯಯನ ಮಾಡುತ್ತಿದ್ದಾಗಲೇ ಇವರ ಕೀರ್ತಿ ಎಲ್ಲೆಡೆ ಹರಡಿತ್ತು. ಇವರ ತತ್ತ್ವಾರ್ಥವಿವರಣೆಗಳು ಶ್ರೀರಂಗದ ಆಚಾರ್ಯ

acharya.org

ವರ್ಗದವರನ್ನು ಮುಗ್ಧಗೊಳಿಸಿದವು. ಯಾಮುನಾಚಾರ್ಯರೇ ಒಮ್ಮೆ ರಾಮಾನುಜ ರನ್ನು ಕಾಣಲು ಕಾಂಚಿಗೆ ಬಂದರು. ಯಾದವಪ್ರಕಾಶರ ಶಿಷ್ಯವೃಂದದಲ್ಲಿದ್ದ ರಾಮಾ ನುಜರ ಮೇಲೆ ತಮ್ಮ ಅನುಗ್ರಹಪೂರ್ಣವಾದ ಕಟಾಕ್ಷವನ್ನು ಬೀರಿದರು. ಶ್ರೀವೈಷ್ಣವ ಸಂಪ್ರದಾಯಕ್ಕೆ ರಾಮಾನುಜರು ದೀಪಕರಾಗುವಂತಾಗಲಿ ಎಂದು ಭಗವಂತನಲ್ಲಿ ಬೇಡಿದರು. ಇದಾವುದೂ ರಾಮಾನುಜರಿಗೆ ತಿಳಿಯದು. ಯಾಮುನರು ಪ್ರತ್ಯಕ್ಷವಾಗಿ ರಾಮಾನುಜರೊಡನೆ ಮಾತಾಡುವ ಅವಕಾಶವೂ ಆಗಲಿಲ್ಲ.

ಮುಂದೆ ಕೆಲವು ದಿನಗಳಲ್ಲಿ ಯಾಮುನರು ತಮ್ಮ ಶಿಷ್ಯರಾದ ಮಹಾಪೂರ್ಣರೆಂಬು ವರನ್ನು ಕಾಂಚಿಗೆ ಕಳುಹಿಸಿ ಯಾದವರಿಂದ ಬೇರೆಯಾಗಿ ಬಂದ ರಾಮಾನುಜರನ್ನು ಶ್ರೀರಂಗಕ್ಕೆ ಕರೆತರಲು ತಿಳಿಸಿದರು. ಮಹಾಪೂರ್ಣರು ಯಾಮುನರ ಸ್ತೋತ್ರರತ್ನವನ್ನು ವರದರಾಜಸ್ವಾಮಿಯ ಸನ್ನಿಧಿಯಲ್ಲಿ ಹಾಡುತ್ತಿದ್ದುದನ್ನು ರಾಮಾನುಜರು ಕೇಳಿ ಅದಕ್ಕೆ ಪರವಶರಾದರು. ಆ ಸ್ತೋತ್ರವನ್ನು ರಚಿಸಿದವರು ಯಾಮುನರು ಎಂಬುದನ್ನು ತಿಳಿದ ರಾಮಾನುಜರು ಆ ಮಹಾನುಭಾವರನ್ನು ಸಂದರ್ಶಿಸಲು ಉತ್ಸುಕರಾಗಿ ಮಹಾಪೂರ್ಣ ರೊಡನೆ ಶ್ರೀರಂಗಕ್ಕೆ ಹೊರಟರು. ಇವರು ಶ್ರೀರಂಗಕ್ಕೆ ಬಂದಾಗ ಇವರಿಗೆ ನಿರಾಶೆಯೇ ಕಾದಿದ್ದಿತು. ಇವರು ಬರುವುದರೊಳಗೆ ಯಾಮುನರು ಪರಂಧಾಮವನ್ನೈದಿದ್ದರು. ಯಾಮುನರ ಅಂತ್ಯದರ್ಶನ ರಾಮಾನುಜರಿಗೆ ಲಭಿಸಿತು. ಯಾಮುನರ ಕಳೇಬರದಲ್ಲಿ ಬಲಗೈಯ ಮೂರು ಬೆರಳುಗಳು ಮಡಿಸಿದ್ದುದನ್ನು ರಾಮಾನುಜರು ಕಂಡು ಅವರ ಮೂರು ಇಚ್ಛೆಗಳಾದ ಬ್ರಹ್ಮಸೂತ್ರಭಾಷ್ಯರಚನೆ, ದ್ರಾವಿಡಪ್ರಬಂಧವ್ಯಾಖ್ಯಾನ ರಚನೆ ಮತ್ತು ವ್ಯಾಸಪರಾಶರರಿಗೆ ಗೌರವ ತರುವಂಥ ರಚನೆ ಇವುಗಳನ್ನು ತಾವು ಸಾಧಿಸುವುದಾಗಿ ಪ್ರತಿಜ್ಞೆ ಮಾಡಿದರು. ವಿಶಿಷ್ಟಾದ್ವೈತ ಸಂಪ್ರದಾಯದ ಪ್ರವರ್ತನ ದಲ್ಲಿ ಮಹತ್ಪಾತ್ರವನ್ನು ವಹಿಸುವ ದೀಕ್ಷೆಯನ್ನು ಅಂದು ರಾಮಾನುಜರು ಗುರುಶ್ರೇಷ್ಠ ರಾದ ಯಾಮುನರ ಸಾನ್ನಿಧ್ಯದಲ್ಲಿ ವಹಿಸಿದರು. ಯಾಮುನರ ಸಾಕ್ಷಾತ್ತಾದ ಶಿಷ್ಯತ್ವವೂ ಈ ಒಂದು ಘಟನೆಯಿಂದ ಇವರಿಗೆ ಲಭಿಸಿತು. ಈ ಸಿದ್ಧಾಂತದ ಪ್ರವರ್ತನ ಕ್ಕಾಗಿ ರಾಮಾನುಜರು ತಮ್ಮನ್ನು ನಿವೇದಿಸಿಕೊಳ್ಳುವ ಸಂಕಲ್ಪವನ್ನಾಗಲೇ ಮಾಡಿದರು. ಇದುವರೆಗೂ ರಾಮಾನುಜರು ವಿಶಿಷ್ಟಾದ್ವೈತ ಸಂಪ್ರದಾಯದ ದೀಕ್ಷೆಯನ್ನು ಇನ್ನೂ ಹೊಂದಿರಲಿಲ್ಲವೆಂಬುದನ್ನು ನಾವು ಗಮನಿಸಬೇಕು. ಇವರ ಅಸಾಮಾನ್ಯಪ್ರತಿಭೆ, ಅವರ್ಣನೀಯವಾದ ಭಗವತ್ಪ್ರೇಮ, ಅಪಾರವಾದ ಅನುಕಂಪೆ ಇವುಗಳೆಲ್ಲದರಿಂದ ಇವರ ಮಾರ್ಗದರ್ಶನವನ್ನು ಅಂದಿನ ಶ್ರೀವೈಷ್ಣವಸಮಾಜ ಉನ್ಮುಖವಾಗಿ ನಿರೀಕ್ಷಿಸು ತ್ತಿತ್ತು. ರಾಮಾನುಜರ ಮಹತ್ತ್ವವನ್ನು ಯಾಮುನರು ಮನಗಂಡಿದ್ದರು. ಅವರ ಅಭೀಷ್ಟಗಳನ್ನು ಪೂರೈಸಲು ರಾಮಾನುಜರೂ ಬದ್ಧಕಂಕಣರಾದರು. ಹೀಗೆ ರಾಮಾ ನುಜರು ಶ್ರೀವೈಷ್ಣವಸಂಪ್ರದಾಯಪ್ರವರ್ತಕರಾಗುವಂತಾಯಿತು.

acharya.org

ಆಚಾರ್ಯ ಯಾಮುನರ ಅಂತ್ಯದರ್ಶನ ರಾಮಾನುಜರ ಮೇಲೆ ಮಹತ್ತರವಾದ ಪ್ರಭಾವವನ್ನು ಬೀರಿತು. ತಮ್ಮ ಅಂತಃಸ್ಫೂರ್ತಿಗೆ ಸಮಾಧಾನವನ್ನುಂಟುಮಾಡುವ ತತ್ತ್ವಹಿತ ಪುರುಷಾರ್ಥಗಳ ಸ್ವರೂಪವನ್ನು ಅನಾದಿಕಾಲದಿಂದ ಉಪದೇಶಿಸುತ್ತಿರುವ ಸಂಪ್ರದಾಯವೊಂದರ ಗಾಢವಾದ ಪರಿಚಯ ಅವರಿಗಾಯಿತು. ತಮ್ಮ ಮನಸ್ಸಿಗೆ ಪೂರ್ಣವಾಗಿ ಒಪ್ಪತಕ್ಕ ದರ್ಶನಸಂಪ್ರದಾಯದ ಆಚಾರ್ಯರುಗಳ ಮತ್ತು ಆಳ್ವಾರರುಗಳ ಉಪದೇಶದ ಲಾಭ ಅವರಿಗೊದಗಿತು. ಇದರಿಂದ ಅವರಿಗಾದ ಆನಂದ ಅಪಾರ.

ಯಾಮುನರು ದಿವಂಗತರಾದ ಮೇಲೆ ಆ ಸ್ಥಾನವನ್ನಲಂಕರಿಸಿ ತತ್ತ್ವೋಪದೇಶ ಮಾಡಬಲ್ಲವರು ಯಾರೂ ಇರಲಿಲ್ಲ. ಆ ಸ್ಥಾನಕ್ಕೆ ರಾಮಾನುಜರನ್ನು ಕರೆದು ತರಬೇಕೆಂದು ಎಲ್ಲ ಭಕ್ತರ ಹೆಬ್ಬಯಕೆಯಾಗಿದ್ದಿತು. ರಾಮಾನುಜರ ಮೇಲೆ ಯಾಮುನರ ಅನುಗ್ರಹ ಕಟಾಕ್ಷ ಪೂರ್ಣವಾಗಿದ್ದಿತು. ಅಲ್ಲಿ ಹಿರಿಯರಾಗಿದ್ದ ತಿರುವರಂಗರು ರಾಮಾನುಜರನ್ನು ಕರೆತರಲು ಮಹಾಪೂರ್ಣರನ್ನು ಕಾಂಚೀಪುರಕ್ಕೆ ಕಳುಹಿಸಿದರು. ಮಹಾಪೂರ್ಣರನ್ನು ಆಶ್ರಯಿಸಲು ಉತ್ಸುಕರಾಗಿದ್ದ ರಾಮಾನುಜರೂ ಸಹ ಅದೇ ಕಾಲಕ್ಕೆ ಕಾಂಚಿಯಿಂದ ಶ್ರೀರಂಗದತ್ತ ಹೊರಟು ಪ್ರಯಾಣ ಮಾಡುತ್ತಾ ಮಧುರಾಂತಕಕ್ಕೆ ಬಂದಾಗ ಅಲ್ಲಿ ಶ್ರೀರಂಗದಿಂದ ಇವರನ್ನೇ ಹುಡುಕಿಕೊಂಡು ಬರುತ್ತಿದ್ದ ಮಹಾಪೂರ್ಣರನ್ನು ಸಂಧಿಸಿದರು. ರಾಮಾನುಜರು ಅಲ್ಲಿಯೇ ಮಹಾಪೂರ್ಣರನ್ನು ಗುರುಗಳನ್ನಾಗಿ ವಿಧಿವತ್ತಾಗಿ ಆಶ್ರಯಿಸಿದರು. ಅನಂತರ ಮಹಾಪೂರ್ಣರು ಸ್ವಲ್ಪಕಾಲ ರಾಮಾನುಜರೊಡನೆ ಕಾಂಚಿಯಲ್ಲಿ ನಿಂತರು.

ರಾಮಾನುಜರ ಒಲವು ತತ್ತ್ವಜಿಜ್ಞಾಸೆಯ ಕಡೆ ಅಧಿಕವಾಗುತ್ತಾ ಬಂದಿತು. ಆಧ್ಯಾತ್ಮಿಕ ಜೀವನಕ್ಕೆ ಬಂದೊದಗುವ ಅಡ್ಡಿ ಆತಂಕಗಳನ್ನವರು ಸಹಿಸದಾದರು. ಸಾಂಸಾರಿಕ ಸುಖಸಂಪತ್ತುಗಳಲ್ಲಿ ಅವರಿಗೆ ಎಳ್ಳಷ್ಟೂ ಆಸಕ್ತಿ ಇರಲಿಲ್ಲ. ಪರಮಾತ್ಮ ಚಿಂತನೆಯಲ್ಲಿ ಅವರು ಹೆಚ್ಚು ಹೆಚ್ಚಾಗಿ ಮುಳುಗುತ್ತಿದ್ದಂತೆ ಸಾಂಸಾರಿಕ ಜೀವನದಲ್ಲಿ ಅವರ ವಿರಕ್ತಿಯೂ ಹೆಚ್ಚಾಗುತ್ತಿದ್ದಿತು. ಗೃಹಸ್ಥಜೀವನದಲ್ಲಿದ್ದುಕೊಂಡು ಆಧ್ಯಾತ್ಮಿಕ ಸಾಧನೆಯನ್ನು ಮುಂದುವರಿಸುವುದು ಅಸಾಧ್ಯವೆಂದು ಮನಗಂಡಾಗ ರಾಮಾನುಜರು ಯತಿಗಳಾಗಲು ನಿರ್ಧರಿಸಿದರು. ಸಂಸಾರದ ನಿಸ್ಸಾರತೆಯನ್ನು ಕಂಡ ರಾಮಾನುಜರು ಆತ್ಮೋಜ್ಜೀವನಕ್ಕಾಗಿ ಹಾಗೂ ಲೋಕೋಜ್ಜೀವನಕ್ಕಾಗಿ ಸಂನ್ಯಾಸಸ್ವೀಕಾರ ಮಾಡಿದರು. ಕಾಂಚಿಯ ವರದರಾಜಸ್ವಾಮಿಯ ಸಾನ್ನಿಧ್ಯದಲ್ಲಿ ರಾಮಾನುಜರು ಯತಿಗಳಾಗಿ ಕಾಷಾಯತ್ರಿದಂಡಗಳನ್ನು ಧರಿಸಿಕೊಂಡು ಯತಿರಾಜರಾದರು. ಹೀಗೆ ರಾಮಾನುಜರು ಸಣ್ಣ ಕುಟುಂಬವೊಂದರಿಂದ ಹೊರಬಂದು ವಿಶ್ವಕುಟುಂಬಿಗಳಾದರು. ರಾಮಾನುಜರು ಯತಿರಾಜರಾದಮೇಲೆ ಅವರ ಕೀರ್ತಿ ಎಲ್ಲೆಡೆ ಹಬ್ಬಲಾರಂಭಿಸಿತು. ಮಳೆಯನ್ನೇ ಕಾಯುತ್ತಿರುವ ಚಾತಕಪಕ್ಷಿಯ ಮೇಲೆ ಸುವೃಷ್ಟಿಯಾದಂತೆ ಆಚಾರ್ಯರಿಗಾಗಿ

acharya.org

ಹಂಬಲಿಸುತ್ತಿದ್ದ ಶಿಷ್ಯಕೋಟಿಯ ನಿರೀಕ್ಷೆಗಳು ಸಫಲವಾಗುವ ಕಾಲ ಬಂದಿತ್ತು.

ಆಚಾರ್ಯ ಪೀಠಾರೋಹಣ

ರಾಮಾನುಜರು ಪರಿವ್ರಾಜಕರಾದ ಮೇಲೆ ಅನೇಕ ಸಜ್ಜನರು ಅವರ ಶಿಷ್ಯರುಗಳಾಗಿ ಅವರನ್ನು ಆಶ್ರಯಿಸಿದರು. ಇವರಲ್ಲಿ ಕೂರನಾಥರು ಮತ್ತು ದಾಶರಥಿಗಳು ಮುಖ್ಯರಾದವರು. ಕೂರನಾಥರು ಅತ್ಯಂತ ಪ್ರತಿಭಾನ್ವಿತರಾಗಿ ಏಕಸಂಧಿಗ್ರಾಹಿಗಳಾಗಿದ್ದರು. ದಾಶರಥಿಗಳು ರಾಮಾನುಜರ ಸೋದರಳಿಯ. ವೇದವೇದಾಂಗಗಳಲ್ಲಿ ಪ್ರಸಿದ್ಧ ಪಂಡಿತರು. ಇವರಿಬ್ಬರೂ ಭಕ್ತಾಗ್ರೇಸರರು. ಹೀಗೆ ಇನ್ನೂ ಅನೇಕ ಸುಕೃತಿಗಳು ಆಚಾರ್ಯರನ್ನು ಆಶ್ರಯಿಸಿ ಧನ್ಯರಾದರು. ಹಿಂದೆ ಆಚಾರ್ಯರಿಗೆ ಗುರುಗಳಾಗಿದ್ದ ಯಾದವಪ್ರಕಾಶರೂ ರಾಮಾನುಜರ ಸಿದ್ಧಾಂತವೇ ಸರಿಯೆಂದು ಮನವರಿಕೆ ಮಾಡಿಕೊಂಡವರಾಗಿ ರಾಮಾನುಜರನ್ನು ಆಶ್ರಯಿಸಿದರು. ಶ್ರೀವೈಷ್ಣವದೀಕ್ಷೆಯನ್ನು ವಹಿಸಿದ ಯಾದವಪ್ರಕಾಶರು 'ಗೋವಿಂದ ಜೀಯರ್' ಎಂಬ ಹೆಸರಿನಿಂದ ವಿಶ್ರುತರಾದರು. ತಮ್ಮ ಅಪ್ರತಿಮವಾದ ಭಕ್ತಿನಿಷ್ಠೆಗಳಿಂದ ಆಚಾರ್ಯರು ಯಾದವಪ್ರಕಾಶರ ಮನಸ್ಸನ್ನು ಪರಿವರ್ತನಗೊಳಿಸಿದುದು ಒಂದು ಪವಾಡವೇ ಸರಿ. ಆಧ್ಯಾತ್ಮಿಕ ವಿಚಾರಗಳಲ್ಲಿ ಕೇವಲ ಪ್ರತಿಷ್ಠೆಗೆ ಅವಕಾಶವಿಲ್ಲವೆಂಬುದನ್ನೂ, ತನಗೆ ಸರಿ ಎಂದು ಕಂಡುಬಂದ ಮಾರ್ಗವನ್ನನುಸರಿಸುವುದೇ ಶ್ರೇಯಸ್ಕರವೆಂಬುದನ್ನೂ ಯಾದವಪ್ರಕಾಶರ ಈ ನಡತೆ ಪ್ರಮಾಣೀಕರಿಸುತ್ತದೆ.

ರಾಮಾನುಜರು ಪರಿವ್ರಾಜಕರಾದ ಸುದ್ದಿ ಶ್ರೀರಂಗಕ್ಕೆ ಮುಟ್ಟಿ ಅಲ್ಲಿನ ವೈಷ್ಣವಾಗ್ರೇಸರರಿಗೆ ಬಹಳ ಸಂತೋಷವನ್ನುಂಟುಮಾಡಿತು. ಭಗವದ್ರಾಮಾನುಜಾಚಾರ್ಯರ ಸ್ಥಾನವನ್ನಲಂಕರಿಸಲು ರಾಮಾನುಜ ಮುನಿಗಳೇ ತಕ್ಕವರೆಂದು ಅವರು ನಿಶ್ಚಯಿಸಿದರು. ಮತ್ತು ಅವರನ್ನು ಶ್ರೀರಂಗದ ಆಚಾರ್ಯಪೀಠಕ್ಕೆ ಕರೆತರಲು ಉತ್ಸುಕರಾದರು. ಹಾಗೆಯೇ ತಿರುವಂಗ ಪ್ಪೆರುಮಾಳ್ ಅರೆಯರ್ ಎಂಬುವರನ್ನು ಕಾಂಚೀಪುರಕ್ಕೆ ಕಳುಹಿಸಲಾಯಿತು. ರಾಮಾನುಜರು ಅವರೆಲ್ಲರ ಕೋರಿಕೆಯನ್ನು ಮನ್ನಿಸಿ ಶ್ರೀರಂಗಕ್ಕೆ ಬಂದು ಅಲ್ಲಿ ತಮ್ಮ ಮಠವನ್ನು ಸ್ಥಾಪಿಸಿ ಆಚಾರ್ಯಪೀಠವನ್ನಲಂಕರಿಸಿದರು. ಶ್ರೀರಂಗನಾಥನ ದೇವಾಲಯದ ಧರ್ಮದರ್ಶಿತ್ವದ ಕಾರ್ಯಭಾರವನ್ನೂ ಇವರು ಯಾಮುನರಂತೆಯೇ ವಹಿಸತೊಡಗಿದರು. ದೇವಾಲಯದ ಸೇವಾಕಾರ್ಯವನ್ನೂ ವ್ಯವಸ್ಥೆಗೊಳಿಸಿ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತೃತಗೊಳಿಸಿದರು, ಹಾಗೂ ಶ್ರೀವೈಷ್ಣವಶ್ರೀಯನ್ನು ಹೊಮ್ಮಿಸಿದರು. ಅತ್ಯಪೂರ್ವವಾದ ಜ್ಞಾನ ಭಕ್ತಿ ವೈರಾಗ್ಯಗಳೇನು, ಭವ್ಯವೂ ಉದಾರವೂ ಆದ ಸಮನ್ವಯ ದೃಷ್ಟಿಯೇನು, ನೋಡಿದವರೆಲ್ಲರನ್ನೂ ಸಲಹಬೇಕೆಂಬ ಕರುಣಾರ್ದ್ರ ಹೃದಯವೇನು, ತತ್ತ್ವಸ್ವರೂಪವನ್ನುಪದೇಶಿಸುವುದರ ಮೂಲಕ ಜನರ ವಿಪರೀತ ಪ್ರವೃತ್ತಿಯನ್ನು ತಡೆಯಬೇಕೆಂಬ ಉತ್ಕಟೇಚ್ಛೆಯೇನು, ಶಿಥಿಲವಾಗುತ್ತಿದ್ದ ಶ್ರೀವೈಷ್ಣವ

acharya.org

ಸಮಾಜವನ್ನು ಸಂಘಟನೆ ಮಾಡಬೇಕೆಂಬ ದೃಢನಿರ್ಧಾರವೇನು, ಎಂಥವರ ಹೃದಯವನ್ನೂ ಪರಿವರ್ತನಗೊಳಿಸಬಲ್ಲ ಸಹಜಸುಂದರವೂ ಗಂಭೀರವೂ ಯಥಾವಸ್ಥಿತವೂ ಆದ ವಾಕ್ಸಂಪತ್ತೇನು ಪರಿಶುದ್ಧವೂ ಭಾವಪೂರ್ಣವೂ ನಿಷ್ಕಪಟವೂ ಸಂತೋಷಜನಕವೂ ಆದ ವ್ಯಕ್ತಿಜೀವನವೇನು—ಇವೆಲ್ಲವುಗಳಿಂದ ಯತಿರಾಜರು ವಿಶಿಷ್ಟಾದ್ವೈತ ದರ್ಶನಸ್ಥಾಪನಾಚಾರ್ಯರಾಗಿ ಪ್ರಕಾಶಿಸಿದರು. ರಾಮಾನುಜರು ಶ್ರೀರಂಗದಲ್ಲಿ ಆಚಾರ್ಯರಾಗಿ ನಿಂತಮೇಲೆ ವಿಶಿಷ್ಟಾದ್ವೈತ ಸಂಪ್ರದಾಯಕ್ಕೆ ಒಂದು ಹೊಸಕಳೆ ಬಂದಂತಾಯಿತು.

ಸಿದ್ಧಾಂತ ಪ್ರವರ್ತನಕ್ಕೆ ಸಿದ್ಧತೆ

ವಿಶ್ವಾಚಾರ್ಯರಾಗತಕ್ಕ ಮಹಾತ್ಮರು ಅದಕ್ಕೆ ತಕ್ಕ ಸಾಧನೆಗಳನ್ನು ಕೈಗೊಂಡು ಅನೇಕಕಾಲ ತಪಸ್ಸನ್ನಾಚರಿಸಿ ಅಂಥ ಶಕ್ತಿಯನ್ನು ಸಂಪಾದಿಸಿಕೊಂಡಿರುತ್ತಾರೆ. ಕಾರಣ ಪುರುಷರಾದ ಈ ಮಹಾಶಯರು ತಮ್ಮಲ್ಲಿ ಜನ್ಮತಃ ಸಿದ್ಧವಾದ ಶಕ್ತಿಯನ್ನು ಸಾಧನಾನುಷ್ಠಾನಗಳಿಂದಲೂ ಆಚಾರ್ಯೋಪಾಸನೆಯೇ ಮೊದಲಾದುವುಗಳಿಂದಲೂ ನಿಶಿತಗೊಳಿಸಿ ಲೋಕಕಲ್ಯಾಣಕ್ಕಾಗಿ ಉಪಯೋಗಿಸುತ್ತಾರೆ. ಈಶ್ವರನ ಪರಮಕೃಪೆಗೆ ಪಾತ್ರರಾಗಿ ಹುಟ್ಟುವಾಗಲೇ ದಿವ್ಯಜ್ಞಾನದಿಂದ ಯುಕ್ತರಾಗಿದ್ದರೂ ಲೋಕಮರ್ಯಾದೆಗನುಸಾರವಾಗಿ ಗುರುಕುಲವಾಸ, ಶಾಸ್ತ್ರಾಭ್ಯಾಸ ಮೊದಲಾದುವನ್ನು ನಡೆಸುತ್ತಾರೆ. ಇವುಗಳಿಂದ ಇನ್ನೂ ಉಜ್ವಲವೂ ದೃಢವೂ ಆದ ತಮ್ಮ ಜ್ಞಾನ ಶಕ್ತಿಗಳಿಂದ ಇತರರಿಗೆ ಮಾರ್ಗದರ್ಶನ ಮಾಡುವವರಾಗಿ ಲೋಕೋಜ್ಜೀವನವನ್ನು ಸಾಧಿಸುತ್ತಾರೆ.

ಶ್ರೀರಂಗದಲ್ಲಿ ನೆಲೆಸಿದ ರಾಮಾನುಜಮುನಿಗಳು ವಿಶಿಷ್ಟಾದ್ವೈತ ಸಂಪ್ರದಾಯದ ರಹಸ್ಯಗಳನ್ನು ಅನೇಕ ಆಚಾರ್ಯರುಗಳಿಂದ ಅನೇಕ ರೀತಿಗಳಲ್ಲಿ ಸಂಪಾದಿಸಿಕೊಂಡು ಅದರ ಸಾರಸರ್ವಸ್ವವನ್ನೂ ಅರಿತರು. ಶಾಸ್ತ್ರಹೃದಯವನ್ನು ಆ ಹಿರಿಯ ಆಚಾರ್ಯರುಗಳೂ ದರ್ಶನಪ್ರವರ್ತನಾಚಾರ್ಯರಾಗುವ ಇವರಿಗೆ ಮನಃಪೂರ್ವಕವಾಗಿ ಧಾರೆಯೆರೆದರು; ತಮ್ಮ ಸಿದ್ಧಾಂತವನ್ನು ಸರ್ವತೋಭದ್ರವಾಗಿ ಪ್ರತಿಷ್ಠಾಪನಗೊಳಿಸುವ ಮಹತ್ಕಾರ್ಯದಲ್ಲಿ ರಾಮಾನುಜರ ಶಕ್ತಿಸಾಮರ್ಥ್ಯಗಳನ್ನು ದೃಢಪಡಿಸಿದರು.

ಶ್ರೀರಂಗಕ್ಕೆ ರಾಮಾನುಜರು ಬಂದು ನಿಂತಮೇಲೆ ಅವರು ಸ್ವಲ್ಪವೂ ವಿರಾಮವಿಲ್ಲದಂತೆ ಜ್ಞಾನಸಂಪಾದನೆಯಲ್ಲಿ ಹಾಗೂ ಶಾಸ್ತ್ರಚಿಂತನೆಯಲ್ಲಿ ತೊಡಗಿದರು. ಶ್ರೀರಂಗನಾಥನ ದೇವಾಲಯದ ವ್ಯವಸ್ಥೆ ಅವರ ಹೊಣೆಯೇ ಆಗಿತ್ತು. ಅವರನ್ನು ಆಶ್ರಯಿಸಲು ಬರುತ್ತಿದ್ದ ಅಸಂಖ್ಯರಾದ ಶಿಷ್ಯರುಗಳ ಆಧ್ಯಾತ್ಮಿಕ ಜೀವನವನ್ನು ರೂಪುಗೊಳಿಸುವುದೂ ಅವರ ಕೆಲಸವಾಗಿತ್ತು. ಇದರ ಜೊತೆಗೆ ಈ ಸಿದ್ಧಾಂತದ ಸಕಲ ಸಂಪ್ರದಾಯಗಳನ್ನೂ ಯಾವುದನ್ನೂ ಬಿಡದಂತೆ ಉಪದೇಶದ ಮೂಲಕ ಪಡೆದುಕೊಳ್ಳಲು ಕಾತರರಾಗಿದ್ದರು.

acharya.org

ಒಬ್ಬೊಬ್ಬರು ಆಚಾರ್ಯರಿಂದ ಒಂದೊಂದು ರಹಸ್ಯವನ್ನು ಪಡೆದುಕೊಂಡು ತಮ್ಮ ಅನುಷ್ಠಾನಾದಿಗಳಿಂದ ಅವುಗಳನ್ನು ದೃಢಪಡಿಸಿಕೊಂಡವರಾಗಿ ಸಿದ್ಧಾಂತಸಂರಕ್ಷಣೆಯ ಹಾಗೂ ಪ್ರವರ್ತನದ ಮಹತ್ಕಾರ್ಯವನ್ನು ಕೈಗೊಳ್ಳಲು ಆವಶ್ಯಕವಾದ ಶಕ್ತಿಯನ್ನು ಸಂಪಾದಿಸಿದರು.

ರಾಮಾನುಜರು ಮೊದಲಾಗಿ ಕಾಂಚೀಪೂರ್ಣರ ಮಾರ್ಗದರ್ಶನದಲ್ಲಿ ಮುಂದುವರಿದು ತಮ್ಮ ಗುರಿಯನ್ನು ರೂಪಿಸಿಕೊಂಡರು. ಮಹಾಪೂರ್ಣರನ್ನಾಶ್ರಯಿಸಿ ಅವರಿಂದ ದ್ವಯ ಮಂತ್ರೋಪದೇಶವನ್ನು ಪಡೆದುಕೊಂಡು ಅದರ ಮಹತ್ವವನ್ನು ಅರಿತರು. ಗೋಷ್ಠೀಪೂರ್ಣರಿಂದ ತಿರುಮಂತ್ರೋಪದೇಶವನ್ನು ಪಡೆಯುವುದಕ್ಕಾಗಿ ಸ್ವಲ್ಪವೂ ಬೇಸರವಿಲ್ಲದೆ ರಾಮಾನುಜರು ಹದಿನೆಂಟು ಬಾರಿ ತಿರುಕ್ಕೋಟಿಯೂರಿಗೆ ಓಡಾಡಬೇಕಾಯಿತು. ರಾಮಾನುಜರ ಶ್ರದ್ಧೆ ಹಾಗೂ ಆಸಕ್ತಿಗಳನ್ನು ಕಂಡು ಬೆರಗಾದ ಗೋಷ್ಠೀಪೂರ್ಣರು ಕೊನೆಗೊಮ್ಮೆ ಅವರಿಗೆ ಆ ರಹಸ್ಯಮಂತ್ರವನ್ನುಪದೇಶಿಸಿದರು. ತಮ್ಮ ಅಪ್ಪಣೆಯಿಲ್ಲದೆ ಆ ಮಂತ್ರವನ್ನು ಮತ್ತಾರಿಗೂ ಉಪದೇಶಿಸಕೂಡದೆಂದು ರಾಮಾನುಜರಿಗೆ ಅಪ್ಪಣೆಯನ್ನು ಮಾಡಿದರು. ವಿಶ್ವಾಚಾರ್ಯರಿಗೆ ಸಹಜವಾಗಿರುವ ಅಪಾರವಾದ ಅನುಕಂಪೆಯಿಂದ ರಾಮಾನುಜರು ಮಾರನೆಯ ದಿನ ಆ ಊರಿನ ಜನಸ್ತೋಮಕ್ಕೆ ಆ ರಹಸ್ಯ ಮಂತ್ರವನ್ನು ದೇವಾಲಯದ ಗೋಪುರದಿಂದ ಉದ್ಘೋಷಿಸಿಬಿಟ್ಟರು. ಎಲ್ಲರೂ ಆ ಮಂತ್ರವನ್ನನುಸಂಧಾನ ಮಾಡಿ ಉದ್ಧಾರವಾಗಬೇಕೆಂದು ಹಾರೈಸಿದರು. ಇದನ್ನು ಕೇಳಿ ಕುಪಿತರಾದ ಗುರುಗಳಿಗೆ ರಾಮಾನುಜರು ವಂದಿಸಿ, ತಮ್ಮ ತಪ್ಪನ್ನು ಒಪ್ಪಿಕೊಂಡು, ಆ ಮಂತ್ರದ ಮಹಿಮೆಯಿಂದ ಎಲ್ಲರಿಗೂ ಶ್ರೇಯಸ್ಸಾಗಲೆಂಬ ಆಶಯದಿಂದ ಉಪದೇಶಿಸಿದುದಾಗಿ ತಿಳಿಸಿದರು. ಅನೇಕರಿಗೆ ಮೋಕ್ಷವೇ ಲಭಿಸುವುದಾದರೆ ತನಗೊಬ್ಬನಿಗೆ ನರಕವಾದರೂ ಆಗಲಿ ಎಂಬ ಪರಾರ್ಥಬುದ್ಧಿಯಿಂದ ರಾಮಾನುಜರು ಮಂತ್ರೋಪದೇಶ ಮಾಡಿದುದಾಗಿ ತಿಳಿಸಿ ತಮ್ಮ ಅಪಾರವಾದ ಅನುಕಂಪೆಯನ್ನೂ ಮಹತ್ತಮವಾದ ಔದಾರ್ಯವನ್ನೂ ತೋರಿದರು. ಇವರ ಔದಾರ್ಯಕ್ಕೆ ಬೆರಗಾದ ಗೋಷ್ಠೀಪೂರ್ಣರು ಆನಂದ ಬಾಷ್ಪಗಳನ್ನು ಸುರಿಸುವವರಾಗಿ ತಮ್ಮ ದರ್ಶನಸ್ಥಾಪನಾಚಾರ್ಯನನ್ನು ಹಾರ್ದಿಕವಾಗಿ ಅಭಿನಂದಿಸಿ ಆಶೀರ್ವದಿಸಿ ಇತರ ರಹಸ್ಯಗಳನ್ನು ಚರಮಶ್ಲೋಕವನ್ನೂ ಉಪದೇಶಿಸಿದರು. ಹೀಗೆ ಗೋಷ್ಠೀಪೂರ್ಣರಿಂದ ಮಂತ್ರೋಪದೇಶಗಳನ್ನು ರಾಮಾನುಜರು ಪಡೆದುಕೊಂಡರು.

ದಿವ್ಯಪ್ರಬಂಧಗಳ ಅರ್ಥವಿಶೇಷಗಳನ್ನು ರಾಮಾನುಜರಿಗೆ ಯಾಮುನರ ಶಿಷ್ಯರಾದ ಮಾಲಾಧರರು ಉಪದೇಶಿಸಿದರು. ರಾಮಾನುಜರು ಇಲ್ಲಿಯೂ ತಮ್ಮ ಸ್ಫೂರ್ತಿಯಿಂದ ಅನೇಕ ಸಂದರ್ಭಗಳಲ್ಲಿ ಬೇರೆಯ ರೀತಿಯಲ್ಲಿ ಆ ಪ್ರಬಂಧಗಳಿಗೆ ಅರ್ಥ ನಿರೂಪಣೆ ಮಾಡುತ್ತಿದ್ದರು. ಹೀಗಾಗಿ ಗುರು ಶಿಷ್ಯರಲ್ಲಿ ಭಿನ್ನಾಭಿಪ್ರಾಯಗಳು ಆಗಾಗ ತಲೆ

acharya.org

ದೋರುತ್ತಿದ್ದವು. ರಾಮಾನುಜರು ಅಂಶಪುರುಷರಾದುದರಿಂದಲೂ ನೇರವಾಗಿ ರಹಸ್ಯಾರ್ಥಗಳು ಅವರಿಗೆ ಪ್ರಕಾಶಿಸುತ್ತಿದ್ದುದರಿಂದಲೂ ಅವರ ಪ್ರತಿಭೆ ಅಸದೃಶವಾಗಿದ್ದುದರಿಂದಲೂ ಇತರರಿಗೆ ಹೊಳೆಯದ ದಿವ್ಯಾರ್ಥಗಳನ್ನವರು ತಟ್ಟನೆ ಹೇಳುತ್ತಿದ್ದರು. ಮಾಲಾಧರರಲ್ಲಿ ಪ್ರಬಂಧಾರ್ಥಗಳನ್ನು ಕೇಳಿದಂತೆ ತಮ್ಮ ಸೋದರಮಾವಂದಿರಾದ ಶ್ರೀಶೈಲಪೂರ್ಣರಿಂದ ಶ್ರೀಮದ್ರಾಮಾಯಣದ ರಹಸ್ಯಾರ್ಥಗಳನ್ನು ಕೇಳಿ ತಿಳಿದುಕೊಂಡರು. ಹಾಗೆಯೇ ತಿರುವರಂಗರಿಂದ ಆಚಾರ್ಯನಿಷ್ಠೆಯನ್ನರಿತರು. ಹೀಗೆ ಕಾಂಚೀಪೂರ್ಣರು, ಮಹಾಪೂರ್ಣರು, ಗೋಷ್ಠೀಪೂರ್ಣರು, ಮಾಲಾಧರರು, ತಿರುವರಂಗರು ಮತ್ತು ಶ್ರೀಶೈಲಪೂರ್ಣರು ಇವರುಗಳಿಂದ ಈ ಸಿದ್ಧಾಂತದ ವೈಶಿಷ್ಟ್ಯ, ರಹಸ್ಯಾರ್ಥಗಳು, ಸಂಪ್ರದಾಯಗಳು ಮೊದಲಾದವನ್ನೆಲ್ಲಾ ಯಥಾವತ್ತಾಗಿ ತಿಳಿದುಕೊಂಡು ಸಿದ್ಧಾಂತದ ಸಂರಕ್ಷಣೆ ಹಾಗೂ ಪ್ರವರ್ತನವನ್ನು ಮಾಡಲು ಇವರು ಸನ್ನದ್ಧರಾದರು.

ಗ್ರಂಥ ನಿರ್ಮಾಣ ಮತ್ತು ಸಿದ್ಧಾಂತ ಪ್ರವರ್ತನ

ಯಾಮುನರ ಐವರು ಮುಖ್ಯ ಶಿಷ್ಯರುಗಳಿಂದ ಸಂಪ್ರದಾಯದ ರಹಸ್ಯಗಳನ್ನು ಪಡೆದುಕೊಂಡ ಮೇಲೆ ರಾಮಾನುಜರು ತಾವು ನಿರ್ವಹಿಸಬೇಕಾದ ಮಹತ್ಕಾರ್ಯವನ್ನು ಕೈಗೊಂಡರು. ಕಾರಣಪುರುಷರಾದ ಇವರು ಎಳೆಯತನದಿಂದಲೇ ತಮ್ಮ ಅಗಾಧವಾದ ಪ್ರತಿಭೆ ಮತ್ತು ಭಗವನ್ನಿಷ್ಠೆಗಳ ಕಾರಣ ಇತರರಿಗೆ ಹೊಳೆಯದಂಥ ರಹಸ್ಯಾರ್ಥಗಳನ್ನು ಶ್ರುತಿವಾಕ್ಯಗಳಿಗೆ ಹೇಳುತ್ತಿದ್ದರು. ಗುರುಪರಂಪರೆಯಿಂದ ಬರುತ್ತಿದ್ದ ಸಾಂಪ್ರದಾಯಿಕವಾದ ರಹಸ್ಯಗಳನ್ನೂ ಅರ್ಥವಿಶೇಷಗಳನ್ನೂ ಆಚಾರ್ಯರುಗಳಿಂದ ಪಡೆದುಕೊಂಡ ಮೇಲೆ ರಾಮಾನುಜ ಮುನಿಗಳು ತಮ್ಮ ಭಾವನೆಗಳಿಗೆ ಒಂದು ರೂಪನ್ನು ಕೊಟ್ಟರು. ಅನಾದಿಯಾದ ಸಂಪ್ರದಾಯಕ್ಕೆ ಅನುಗುಣವಾದ ತಮ್ಮ ಭಾವನಾನುಭವಗಳನ್ನು ಯುಕ್ತಿಯುಕ್ತವಾದ ರೀತಿಯಲ್ಲಿ ನಿರೂಪಿಸಿದರು. ಯಾಮುನರ ಅಪೇಕ್ಷೆಗಳಲ್ಲಿ ಒಂದಾದ ಬ್ರಹ್ಮಸೂತ್ರಭಾಷ್ಯವನ್ನು ರಚಿಸಲು ಸಿದ್ಧರಾದರು.

ಆಚಾರ್ಯರು ಶ್ರೀರಂಗದಲ್ಲಿ ತಮ್ಮ ಉಪದೇಶವನ್ನಾರಂಭಿಸಿದರು. ಶ್ರೀರಂಗನಾಥನ ದಿವ್ಯಮೂರ್ತಿಯನ್ನು ಸೇವಿಸುತ್ತಾ, 'ಸಾರಸ್ವತಂ ಶಾಶ್ವತಂ' ಎಂಬಂಥ ಶರಣಾಗತಿಗದ್ಯ ಶ್ರೀರಂಗಗದ್ಯ ಮತ್ತು ವೈಕುಂಠಗದ್ಯಗಳನ್ನು ರಚಿಸಿದರು. ಭಗವದ್ಗೀತೆಗೆ ಭಾಷ್ಯವನ್ನು ನಿರ್ಮಾಣ ಮಾಡಿದರು. ಬ್ರಹ್ಮಸೂತ್ರಗಳಿಗೆ ಶ್ರೀಭಾಷ್ಯವನ್ನು ರಾಮಾನುಜರು ರಚಿಸತೊಡಗಿದರು. ಶಿಷ್ಯೋತ್ತಮರಾದ ಕೂರೇಶರು ಗುರು ಹೇಳಿದುದನ್ನು ಬರೆಯುತ್ತಿದ್ದರು. ಸಂದೇಹವುಂಟಾಗುವಲ್ಲಿ ಅವರು ಬರೆಯುವುದನ್ನು ನಿಲ್ಲಿಸಿಬಿಡುತ್ತಿದ್ದರು. ವಿಚಾರಮಥನವಾದ ಮೇಲೆ ಮುಂದೆ ಬರವಣಿಗೆ ಸಾಗುತ್ತಿತ್ತು. ಪೂರ್ವಾಪರವಿರೋಧವಿಲ್ಲದಂತೆ ಯಥಾರ್ಥವಾದ ಅರ್ಥಗಳನ್ನು ಶ್ರೀಭಾಷ್ಯದಲ್ಲಿ ರಾಮಾನುಜರು ವಿವರಿಸಿದ್ದಾರೆ. ತಿರುಪತಿ

acharya.org

ಕ್ಷೇತ್ರದಲ್ಲಿ ಶ್ರೀನಿವಾಸನ ಮುಂದೆ ಆಚಾರ್ಯರು ಮಾಡಿದ ಉಪನ್ಯಾಸವೇ ವೇದಾರ್ಥ ಸಂಗ್ರಹವೆಂಬ ಗ್ರಂಥದ ರೂಪವನ್ನು ಹೊಂದಿತು. ವಿಸ್ತಾರವಾದ ಶ್ರೀಭಾಷ್ಯದ ಸಂಗ್ರಹ ರೂಪಗಳಾದ ವೇದಾಂತಸಾರ, ವೇದಾಂತದೀಪ ಮೊದಲಾದ ಸಂಕ್ಷಿಪ್ತಾತಿಸಂಕ್ಷಿಪ್ತವಾದ ಬ್ರಹ್ಮಸೂತ್ರ ವಿವರಣೆಗಳು ಸಿದ್ಧವಾದವು. ಇವು ಒಂಭತ್ತು ಕೃತಿಗಳೂ ಸಾರತಮವಾಗಿ ಸಿದ್ಧಾಂತದ ಸಕಲಾಂಶಗಳನ್ನೂ ಸಮಗ್ರವಾಗಿ ಸಮರ್ಥಿಸುತ್ತವೆ. ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುವ ಬ್ರಹ್ಮಸೂತ್ರಭಾಷ್ಯವಿಲ್ಲವೆಂಬ ಕೊರತೆಯನ್ನು ಆಚಾರ್ಯರು ಹೋಗಲಾಡಿಸಿ ಇವರು ಶ್ರೀಭಾಷ್ಯಕಾರರಾದರು. ತಮ್ಮ ಅನುಪಮವಾದ ಶೈಲಿಯಲ್ಲಿ ವೇದಾಂತಾರ್ಥಗಳನ್ನೆಲ್ಲಾ ರಸಮಯವಾಗಿ ನಿರೂಪಿಸಿ ರಸಸ್ವರೂಪನಾದ ಪರ ಮಾತ್ಮನಲ್ಲಿ ನಿರತಿಶಯವಾದ ಭಕ್ತಿಯ ಹೊನಲನ್ನೇ ಇವರು ಹರಿಸಿದ್ದಾರೆ. ಶ್ರೀಭಾಷ್ಯಾದಿ ಗಳಲ್ಲಿ ಭಕ್ತಿಯನ್ನೂ ಗದ್ಯತ್ರಯಗಳಲ್ಲಿ ಪ್ರಪತ್ತಿಯನ್ನೂ ಪ್ರತಿಪಾದಿಸಿ ಇವೆರಡೂ ಮೋಕ್ಷಕ್ಕೆ ಉಪಾಯಗಳೆಂಬುದನ್ನು ಮನಗಾಣಿಸಿದ್ದಾರೆ.

ರಾಮಾನುಜರ ಶ್ರೀಭಾಷ್ಯ ಗುಣದಲ್ಲಿಯೂ ಗಾತ್ರದಲ್ಲಿಯೂ ಹಿರಿದೆನಿಸಿ ಅನಾದಿ ಯಾದ ವಿಶಿಷ್ಟಾದ್ವೈತ ಸಂಪ್ರದಾಯಕ್ಕೆ ನಿಷ್ಕೃಷ್ಟವಾದ ರೂಪವನ್ನು ಕೊಟ್ಟಿತು. ಸಂಪ್ರದಾಯದ ಅರ್ಥಗಳನ್ನು ರಾಮಾನುಜರು ಶಾಸ್ತ್ರ ಮತ್ತು ಅನುಭವಗಳಿಗನುಸಾರ ವಾಗಿ ಯುಕ್ತಿಯುಕ್ತವಾಗಿ ವಿವರಿಸಿದರು. ಸೂತ್ರಗಳಿಗೆ ಇತರರು ಮಾಡಿರುವ ವಿವರಣೆ ಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಅವುಗಳಲ್ಲಿರುವ ದೋಷಗಳನ್ನು ಇವರು ತೋರಿಸಿ ಕೊಟ್ಟಿದ್ದಾರೆ. ಸೂತ್ರಗಳ ವಿವರಣೆಯಲ್ಲಿ ಇವರು ಇತರರು ಅಂಗೀಕರಿಸಿರುವ ಪ್ರಮಾಣ ಗಳನ್ನೇ ಬಳಸಿರುವುದೂ ಒಂದು ವೈಶಿಷ್ಟ್ಯವಾಗಿದೆ. ಪೂರ್ವಾಚಾರ್ಯರ ಅಭಿಪ್ರಾಯ ಕ್ಕನುಸಾರವಾಗಿ ವ್ಯಾಖ್ಯಾನ ಮಾಡಿದ್ದರೂ ಸ್ವತಂತ್ರವಾದ ವಿವೇಚನೆಯನ್ನು ಬಿಟ್ಟು ಕೊಟ್ಟಿಲ್ಲ. ಇತರಮತಪರೀಕ್ಷಣದಲ್ಲಿ ಇವರು ಅವರ ಮೇಲೆ ಹಾಕಿರುವ ಆಕ್ಷೇಪಗಳು ಉತ್ತರಿಸಲಶಕ್ಯವಾಗಿವೆ. ಸಾರತಮವಾದ ಈ ಕೃತಿಗಳ ರಚನೆಯಿಂದ ರಾಮಾನುಜರು ಈ ಸಿದ್ಧಾಂತದ ಪ್ರವರ್ತನವನ್ನು ನಿರ್ವಹಿಸಿ ಯಾಮುನರ ಮುಂದೆ ಮಾಡಿದ್ದ ಪ್ರತಿಜ್ಞೆ ಯನ್ನು ಪೂರ್ಣಗೊಳಿಸಿದರು.

ದೇಶಾಟನ ಮತ್ತು ಶಿಷ್ಯಸಂಗ್ರಹ

ರಾಮಾನುಜರು ಶ್ರೀರಂಗದಲ್ಲಿ ಆಚಾರ್ಯಪೀಠವನ್ನಲಂಕರಿಸಿದ ಮೇಲೆ ಅವರ ಕೀರ್ತಿ ಎಲ್ಲೆಲ್ಲಿಯೂ ಹರಡಿತು. ಅನೇಕಾನೇಕ ಸಾಧಕರು ಆಚಾರ್ಯರನ್ನು ಆಶ್ರಯಿ ಸಲು ಅಲ್ಲಿಗೆ ಬರತೊಡಗಿದರು. ತಮ್ಮ ಸರಳ ಸ್ವಭಾವ ಹಾಗೂ ಕರುಣೆಯಿಂದ ಆಚಾ ರ್ಯರು ಎಲ್ಲರನ್ನೂ ಪವಿತ್ರಗೊಳಿಸಿದರು. ತಮ್ಮ ಉಪದೇಶಾಮೃತದಿಂದ ತಣಿಸಿದರು. ಹಿರಿಯರು, ಕಿರಿಯರು, ಧನಿಕರು, ದರಿದ್ರರು, ವಿದ್ಯಾವಂತರು ಅವಿದ್ಯಾವಂತರು ಎಂಬ

acharya.org

ಭೇದವನ್ನೇ ಕಾಣದೆ ಆಚಾರ್ಯರು ತಮ್ಮನ್ನಾಶ್ರಯಿಸಿದವರ ಮೇಲೆಲ್ಲಾ ಅನುಗ್ರಹ ಮಾಡಿದರು. ಬತ್ತಿಹೋಗಿದ್ದ ಅವರ ಹೃದಯಸರಸ್ಸಿನಲ್ಲಿ ಭಕ್ತಿಯ ಬುಗ್ಗೆಯನ್ನು ಚಿಮ್ಮಿಸಿದರು. ತಮ್ಮೊಡನೆ ಸಂಪರ್ಕ ಹೊಂದಿದವರನ್ನೆಲ್ಲಾ ಸ್ಪರ್ಶಮಣಿಯೋಪಾದಿಯಲ್ಲಿ ಕ್ಷಣಾರ್ಧದಲ್ಲಿ ಪರಿವರ್ತನಗೊಳಿಸಿ ದೈವಿಕತೆ, ದರ್ಮಶ್ರದ್ಧೆ, ಭಗವದ್ಭಕ್ತಿ, ಆಸ್ತಿಕ್ಯ ಮುಂತಾದವುಗಳನ್ನು ಅವರಲ್ಲಿ ಮೂಡಿಸುವವರಾಗಿ ಪವಾಡಪುರುಷರಾದರು. ಆಚಾರ್ಯರ ದಿವ್ಯ ತೇಜಸ್ಸಿನ ಹಾಗೂ ಆಧ್ಯಾತ್ಮಿಕಶಕ್ತಿಯ ಪ್ರಭಾವಕ್ಕೆ ಒಳಗಾಗದವರಿರಲಿಲ್ಲ. ಇಂಥ ಮಹಾನುಭಾವರ ಕಾರ್ಯಕ್ಷೇತ್ರ ಶ್ರೀರಂಗದಂತಹ ಒಂದು ಕ್ಷೇತ್ರಕ್ಕೇ ಸೀಮಿತವಾಗಿರುವುದು ಅಸಾಧ್ಯವಾಯಿತು. ಶ್ರೀರಂಗವನ್ನು ಮೀರಿ ಇತರ ಭಾಗಗಳೂ ಇವರ ಕಾರ್ಯಕ್ಷೇತ್ರಗಳಾದವು.

ಆಚಾರ್ಯರು ಅನುಪಮಭಕ್ತರಾದ ಕಾರಣ ಪ್ರಸಿದ್ಧವಾದ ತೀರ್ಥಕ್ಷೇತ್ರಗಳ ಸಂದರ್ಶನಕ್ಕಾಗಿಯೂ ಭಗವತ್ಸೇವೆಗಾಗಿಯೂ ಸಂಚಾರ ಕೈಗೊಂಡರು. ಅಂತಹ ಬೇರೆ ಬೇರೆ ಕ್ಷೇತ್ರಗಳಲ್ಲಿದ್ದ ಶಿಷ್ಯಕೋಟಿಯ ಮೇಲಿನ ಕನಿಕರದಿಂದ ಅವರಿರುವ ಜಾಗಕ್ಕೇ ಹೋಗಿ ಅನುಗ್ರಹಿಸಿದರು. ಸಿದ್ಧಾಂತದ ಸ್ವಾರಸ್ಯವನ್ನು ಎಲ್ಲರಿಗೂ ತಿಳಿಸಿಕೊಟ್ಟು ಅವರೆಲ್ಲರೊಡನೆ ಸಂತೋಷವನ್ನು ಅನುಭವಿಸಿದರು. ಶಿಷ್ಯರಲ್ಲಿದ್ದ ದೋಷಗಳನ್ನು ಹೋಗಲಾಡಿಸಿ ಅವರನ್ನು ಸತ್ಪಾತ್ರರನ್ನಾಗಿ ಮಾಡಿ ಉಪದೇಶ ಕೊಟ್ಟು ಮಾರ್ಗ ತೋರಿಸಿದರು. ಈ ಕಾಲದಲ್ಲಿ ಸಹಜವಾಗಿ ಇತರರೊಡನೆ ಆಗಾಗ ವಾದವಿವಾದಗಳು ಸಂಭವಿಸುತ್ತಿದ್ದವು. ಇತರ ಸಿದ್ಧಾಂತಗಳನ್ನನುಸರಿಸುವವರೂ, ಉಪದೇಶಿಸುವವರೂ ಇವರೊಡನೆ ವಾದಿಸಿದುದೂ ಉಂಟು. ಅಂಥ ಸಂದರ್ಭಗಳಲ್ಲಿ ರಾಮಾನುಜರು ತಮ್ಮ ವಾದವೈಖರಿಯಿಂದ ಅವರನ್ನು ಬೆರಗುಗೊಳಿಸಿ ಅವರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡು ಉಪದೇಶ ನೀಡಿದುದುಂಟು. ಭಾರತಾದ್ಯಂತ ಆಚಾರ್ಯರು ಸಂಚಾರ ಮಾಡಿ ತಮ್ಮ ಸಿದ್ಧಾಂತದ ಪ್ರಚಾರವನ್ನು ಬಹುಮುಖವಾಗಿ ಮಾಡಿದರು. ಕಾಶ್ಮೀರದಲ್ಲಿ ಬೋಧಾಯನ ವೃತ್ತಿಯನ್ನು ನೋಡಿ ಅವರ ಅಭಿಪ್ರಾಯಗಳನ್ನು ಆಚಾರ್ಯರು ಸಂಗ್ರಹಿಸಿದರು. ಹೋದ ಕಡೆಯಲ್ಲೆಲ್ಲಾ ಇವರು ತಮ್ಮ ಬಿಚ್ಚುಮನಸ್ಸಿನ ಮಾತುಗಳಿಂದಲೂ, ನಿರತಿಶಯವಾದ ಭಗವದ್ಭಕ್ತಿಯಿಂದಲೂ ಜನರೆಲ್ಲರ ಮನಸ್ಸನ್ನು ಸೂರೆಗೊಂಡರು. ಭಗವದ್ಭಕ್ತಿ ಎಂಬ ಸಂದೇಶವನ್ನು ಕೊಂಡೊಯ್ಯುವ ದೇವದೂತನಾಗಿ ಮನೆಮನೆಗೂ ಅದನ್ನು ಮುಟ್ಟಿಸಿದರು. ದೇಶದಾದ್ಯಂತ ಭಕ್ತಿಮಾರ್ಗ ಉಜ್ಜೀವನಗೊಳ್ಳುವಂತೆ ಮಾಡಿದರು. ಇವರು ನಿರ್ಗುಣ ಬ್ರಹ್ಮವಾದಕ್ಕೆ ಮನಸೋತಿದ್ದ ಜನತೆಯನ್ನು ಭಕ್ತಿಮಾರ್ಗದ ಕಡೆಗೆ, ಸಗುಣ ಬ್ರಹ್ಮವಾದದ ಕಡೆಗೆ ಆಕರ್ಷಿಸುವ ಮಹತ್ಕಾರ್ಯದಲ್ಲಿ ಯಶಸ್ವಿಗಳಾದರು. ಹೀಗೆ ಶ್ರೀಮದಾಚಾರ್ಯರು ಭಾರತದೇಶಾದ್ಯಂತ ಸಂಚಾರ ಮಾಡಿ ತಮ್ಮ ಸಿದ್ಧಾಂತವನ್ನೆಲ್ಲರಿಗೂ ಬೋಧಿಸಿ ಅಪಾರವಾದ ಶಿಷ್ಯಕೋಟಿ

acharya.org

ಯನ್ನು ಪಡೆದವರಾಗಿ ಶ್ರೀರಂಗಕ್ಕೆ ಹಿಂತಿರುಗಿ ತಮ್ಮ ಅಪೂರ್ವವಾದ ತೇಜಸ್ಸು ಮತ್ತು ವೈಭವದಿಂದ ಆಚಾರ್ಯಪೀಠವನ್ನು ಬೆಳಗಿದರು.

ಯಾಮುನರ ಮೂರು ಅಭೀಷ್ಟಗಳಲ್ಲಿ ಒಂದಾದ ಬ್ರಹ್ಮಸೂತ್ರಭಾಷ್ಯರಚನೆ ಯನ್ನು ಆಚಾರ್ಯರು ರಚಿಸಿದುದಾಯಿತು. ಕೂರೇಶರ ಮಕ್ಕಳಾದ ಪರಾಶರಭಟ್ಟರ ಮೂಲಕ ಶ್ರೀಮದ್ವಿಷ್ಣುಸಹಸ್ರನಾಮದ ಭಾಷ್ಯವನ್ನು ಬರೆಸಿದರು. ತಿರುಕ್ಕುರುಹೈಪಿ ರಾನ್ ಪಿಳ್ಳಾನ್ ಎಂಬುವವರ ಮೂಲಕ ದ್ರಾವಿಡ ಪ್ರಬಂಧಗಳಿಗೆ 'ಆರಾಯಿರಪ್ಪಡಿ' ಎಂಬ ವ್ಯಾಖ್ಯಾನವನ್ನು ಬರೆಸಿದರು. ಹೀಗೆ ಯಾಮುನರ ಮೂರು ಅಭೀಷ್ಟಗಳೂ ನೆರವೇರಿದವು. ಇದಲ್ಲದೆ ತಮ್ಮ ಶಿಷ್ಯರ ಮೂಲಕ ಈ ಸಿದ್ಧಾಂತದ ತತ್ತ್ವಗಳನ್ನು ಜನ ಸಾಮಾನ್ಯರಲ್ಲಿ ಪ್ರಚಾರ ಮಾಡಿಸಿದರು. ವಿಶಿಷ್ಟಾದ್ವೈತ ಸಿದ್ಧಾಂತವು ಭಾವುಕರ ಹೃನ್ಮನಗಳನ್ನಾಕರ್ಷಿಸಿತು. ಅನೇಕರು ಈ ಸಿದ್ಧಾಂತದ ಅನುಯಾಯಿಗಳಾದರು. ದೇಶದ ಧಾರ್ಮಿಕ ಜೀವನದಲ್ಲಿ ಮಹತ್ತರವಾದ ಪರಿವರ್ತನೆ ಆಯಿತು. ರಾಮಾನುಜರ ದಿವ್ಯಜೀವನ ಮತ್ತು ಉಪದೇಶಗಳಿಂದ ಭಕ್ತಿಪಂಥ ಬಹುಮುಖವಾದ ಪ್ರೇರಣೆಯನ್ನು ಪಡೆದು ಸಮೃದ್ಧವಾಯಿತು.

ಅಂದಿನ ರಾಜಕೀಯಪರಿಸ್ಥಿತಿಯಲ್ಲಿ ವೈಷ್ಣವಧರ್ಮದ ಅನುಷ್ಠಾನಕ್ಕೂ ತೊಂದರೆಗಳಿಲ್ಲದಿರಲಿಲ್ಲ. ಶೈವಧರ್ಮಾನುಯಾಯಿಯಾದ ಚೋಳರಾಜನ ಧರ್ಮಾಂಧ ತೆಯ ಕಾರಣ ರಾಮಾನುಜರು ಕೆಲವಾರು ವರ್ಷಗಳು ತಮ್ಮ ಕಾರ್ಯಕ್ಷೇತ್ರವನ್ನೇ ಬದಲಾಯಿಸಬೇಕಾಯಿತು. ಕನ್ನಡ ದೇಶಕ್ಕೆ ಇದರಿಂದ ಮಹದ್ಭಾಗ್ಯ ಉಂಟಾಯಿತು. ರಾಮಾನುಜರು ಶ್ರೀರಂಗದಿಂದ ಹೊರಟು ಬಂದು ಮೈಸೂರಿನ ಮೇಲುಕೋಟೆಯಲ್ಲಿ ಹದಿನೆಂಟು ವರ್ಷಗಳ ಕಾಲ ನಿಂತರು. ಆ ಕಾಲದಲ್ಲಿ ಇಲ್ಲಿ ಮೇಲುಕೋಟೆ ಬೇಲೂರು ಗಳಲ್ಲಿ ದೇವಾಲಯವನ್ನು ನಿರ್ಮಾಣ ಮಾಡಿಸಿ ಶ್ರೀಮನ್ನಾರಾಯಣನ ಪ್ರತಿಷ್ಠೆಯನ್ನು ಮಾಡಿಸಿದರು. ಆಗ ಇಲ್ಲಿ ರಾಜನಾಗಿದ್ದ ಬಿಟ್ಟಿದೇವನು ಆಚಾರ್ಯರ ಶಿಷ್ಯನಾದನು. ಅಸಂಖ್ಯರಾದ ಶಿಷ್ಯರು ಆಚಾರ್ಯರ ಉಪದೇಶಾದಿಗಳಿಂದ ಧನ್ಯರಾದರು. ತಮಿಳುನಾಡು ಮತ್ತು ಕರ್ಣಾಟಕಗಳಲ್ಲಿ ಸಿದ್ಧಾಂತದ ಪ್ರಚಾರ ಬೆಳೆಯಿತು. ರಾಮಾನುಜರು ಹೋದ ಲ್ಲೆಲ್ಲಾ ದೇವಾಲಯ ಜೀರ್ಣೋದ್ಧಾರ, ಪೂಜಾವ್ಯವಸ್ಥೆ ಮೊದಲಾದುವನ್ನು ಕೈಗೊಂಡು ಧರ್ಮಪ್ರಚಾರವು ಸುಲಲಿತವಾಗಿ ಆಗುವಂತೆ ಮಾಡುತ್ತಿದ್ದರು. ಮೇಲುಕೋಟೆ ಮತ್ತು ಬೇಲೂರಿನಲ್ಲಿ ದೇವಾಲಯ ನಿರ್ಮಾಣವೇ ಮೊದಲಾದುವಕ್ಕೆ ವಿಶೇಷವಾಗಿ ಸಹಾಯಮಾಡಿದ ಹರಿಜನರಿಗೆ ಅಂದಿನ ಕಾಲದಲ್ಲಿಯೇ ಕ್ಲೃಪ್ತಕಾಲದಲ್ಲಿ ಆಲಯ ಪ್ರವೇಶದ ಅವಕಾಶವನ್ನು ಒದಗಿಸಿಕೊಟ್ಟು ತಮ್ಮ ಹೃದಯವೈಶಾಲ್ಯವನ್ನು ಇವರು ತೋರಿದರು.

acharya.org

ಅವತಾರ ಸಮಾಪ್ತಿ

ಶ್ರೀರಂಗದಲ್ಲಿ ಅನುಕೂಲ ಪರಿಸ್ಥಿತಿ ಉಂಟಾಗಿದ್ದ ಕಾರಣ ರಾಮಾನುಜರು ಕರ್ಣಾಟಕದಿಂದ ಅಲ್ಲಿಗೆ ಮತ್ತೆ ಪ್ರಯಾಣ ಮಾಡಲನುವಾದರು. ಶ್ರೀರಂಗನಾಥನ ದರ್ಶನಕ್ಕಾಗಿ ಅವರು ಕಾತರರಾಗಿದ್ದರು. ಈ ಮಧ್ಯಕಾಲದಲ್ಲಿ ಅಲ್ಲಿನ ಅತ್ಯಂತ ಹಿರಿಯರಾಗಿದ್ದ ಮಹಾಪೂರ್ಣರು, ಗೋಷ್ಠೀಪೂರ್ಣರು, ಶ್ರೀಶೈಲಪೂರ್ಣರು, ಕಾಂಚೀಪೂರ್ಣರು, ತಿರುವರಂಗರು ಮೊದಲಾದವರೆಲ್ಲಾ ಪರಂಧಾಮವನ್ನೈದಿಬಿಟ್ಟಿದ್ದರು. ಅಲ್ಲಿಯ ಭಾಗವತರು ರಾಮಾನುಜರ ಆಗಮನವನ್ನು ಚಾತಕಪಕ್ಷಿಯಂತೆ ನಿರೀಕ್ಷಿಸುತ್ತಿದ್ದರು. ರಾಮಾನುಜರೂ ಅವರ ಶಿಷ್ಯರಾದ ಕೂರೇಶರೂ ಪರಸ್ಪರ ಸಮಾಗಮದಿಂದ ಧನ್ಯರಾದರು. ತಮ್ಮ ಜೀವಿತಕಾಲದ ಉಳಿದ ಭಾಗವನ್ನು ಭಗವತ್ಸೇವೆ, ವೇದಾಂತೋಪದೇಶ ಹಾಗೂ ಶಿಷ್ಯಾನುಗ್ರಹಮಾಡುವುದರಲ್ಲಿ ಆಚಾರ್ಯರು ವಿನಿಯೋಗಿಸಿದರು.

ಆಚಾರ್ಯರು ನೂರಿಪ್ಪತ್ತು ವರ್ಷಗಳ ಕಾಲ ಜೀವಿಸಿದ್ದರು. ತಮ್ಮ ನಂತರ ಸಿದ್ಧಾಂತದ ಸಂರಕ್ಷಣೆ ಮತ್ತು ಪ್ರಚಾರಕ್ಕಾಗಿ ಶ್ರೀ ಪರಾಶರಭಟ್ಟರನ್ನು ನೇಮಿಸಿದರಿವರು. ಶಿಷ್ಯಕೋಟಿಗೆ ಸದುಪದೇಶ ಮಾಡಿ ಶ್ರೀರಂಗದ ದೇವಾಲಯದ ಬಗೆಗೆ ತಕ್ಕ ವ್ಯವಸ್ಥೆಯನ್ನು ಏರ್ಪಡಿಸಿದರು. ತಾವು ನಿರ್ವಹಿಸಬೇಕಾಗಿದ್ದ ಮಹತ್ಕಾರ್ಯವು ಪೂರ್ಣವಾದುದನ್ನು ಕಂಡು ಸಮಾಧಾನಚಿತ್ತರಾದ ರಾಮಾನುಜರು ಕ್ರಿ.ಶ. ೧೧೩೭ ರಲ್ಲಿ ಭಗವಂತನ ಪರಮಪದವನ್ನು ಸೇರಿದರು. ಲೋಕೋದ್ಧಾರಕನಾದ ಈ ವಿಭೂತಿಪುರುಷನು ಅಜ್ಞಾನದಲ್ಲಿ ತೊಳಲುತ್ತಿದ್ದ ಜನತೆಯ ಹೃದಯ ಗುಹೆಯಲ್ಲಿ ಜ್ಞಾನದ ಪ್ರಕಾಶವನ್ನು ಬೆಳಗಿಸಿ ಕಣ್ಮರೆಯಾದನು.

ರಾಮಾನುಜರದು ಭಗವತ್ಪರವಾದ ಪೂರ್ಣಜೀವನ. ಮಹಾಮಹಿಮರೂ ಪರಮಜ್ಞಾನಿಗಳೂ ಆದ ಅವರ ಕಾರುಣ್ಯ ಅಭೂತಪೂರ್ವವಾದುದು. ಅನೇಕರನ್ನವರು ತಮ್ಮಂಥ ಅನನ್ಯಭಕ್ತರನ್ನಾಗಿ ಮಾಡಿದರು. ಜ್ಞಾನ ಭಕ್ತಿ ವೈರಾಗ್ಯಗಳನ್ನು ನೆಲೆನಿಲ್ಲಿಸಿದರು. ಅನಾದಿಯಾದ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಸರ್ವತೋಭದ್ರವಾಗಿ ಸಂರಕ್ಷಿಸಿ ದರ್ಶನಸ್ಥಾಪನಾಚಾರ್ಯರಾದರವರು.

ಈ ಸಿದ್ಧಾಂತದ ಪ್ರಚಾರ ಮತ್ತು ರಕ್ಷಣೆ ಪ್ರಭಾವಶಾಲಿಯಾಗಿ ಅವರಿಂದ ಆದ ಕಾರಣವೇ ಈ ದರ್ಶನಕ್ಕೆ ಮುಂದೆ ರಾಮಾನುಜ ದರ್ಶನವೆಂಬ ಹೆಸರು ಬಂದಿತು. ಎಪ್ಪತ್ತು ನಾಲ್ಕು ಸಿಂಹಾಸನಾಧಿಪತಿಗಳೂ ಅಸಂಖ್ಯರಾದ ಪರಿವ್ರಾಜಕರೂ, ಏಕಾಂತಿಗಳೂ, ಕೈಂಕರ್ಯಪರರೂ ಅವರ ಶಿಷ್ಯಕೋಟಿಯಲ್ಲಿದ್ದರು. ಹೀಗೆ ಅಸಂಖ್ಯರಾದ ಸಾಧಕರಿಗೆ ಆಧ್ಯಾತ್ಮಿಕ ಸಾಧನೆಯ ಮಾರ್ಗವನ್ನುಪದೇಶಿಸಿದ ಭಗವದ್ರಾಮಾನುಜರು ಶ್ರೀಮನ್ನಾಥಮುನಿಗಳು ಮತ್ತು ಯಾಮುನಮುನಿಗಳಂತೆ ತಾವೂ ದರ್ಶನಸ್ಥಾಪನಾಚಾರ್ಯರೆನಿಸಿದರು.

acharya.org

ಮುಂದಿನ ಆಚಾರ್ಯಪರಂಪರೆ

ರಾಮಾನುಜರ ಕಾಲವಾದ ಮೇಲೆ ಅವರಿಂದ ನೇಮಿತರಾದ ಸಿಂಹಾಸನಾಧಿಪತಿಗಳು ಬಹುಮುಖವಾಗಿ ಈ ಸಿದ್ಧಾಂತದ ಪ್ರಚಾರ ಮಾಡುತ್ತಾ ಬಂದರು. ರಾಮಾನುಜರ ಶಿಷ್ಯಪರಂಪರೆ ಮುಂದಿನ ಕಾಲದಲ್ಲಿ ಎರಡು ಮುಖ್ಯವಾದ ಪರಂಪರೆಯಲ್ಲಿ ಬೆಳೆದು ಬಂದಿತು. ರಾಮಾನುಜರ ಶಿಷ್ಯರಾದ ಕಿಡಾಂಬಿ ಆಚ್ಚಾರ್ಯರವರ ಪರಂಪರೆಯಲ್ಲಿ ವಾತ್ಸ್ಯ ವರದಾಚಾರ್ಯರು, ಆತ್ರೇಯ ರಾಮಾನುಜರು ಇವರ ಮೂಲಕ ಶ್ರೀಮನ್ನಿಗಮಾಂತ ದೇಶಿಕರು (ಕ್ರಿ.ಶ. ಹದಿಮೂರೆನೇ ಶತಮಾನದ ಉತ್ತರಾರ್ಧ) ಈ ಸಿದ್ಧಾಂತದ ಮುಖ್ಯ ಪ್ರವರ್ತಕರಲ್ಲೊಬ್ಬರಾಗಿ ಬಂದರು. ಶ್ರೀಮದ್ವೇಂಕಟನಾಥರು ತಮ್ಮ ಬಹುಮುಖವಾದ ಗ್ರಂಥಗಳಿಂದಲೂ ಉಪದೇಶಗಳಿಂದಲೂ ಈ ಸಿದ್ಧಾಂತದ ಸ್ವರೂಪವನ್ನು ನಿಖರಗೊಳಿಸಿದರು. ರಾಮಾನುಜರ ನಂತರ ಬಂದ ಆಚಾರ್ಯರ ಕೃತಿಗಳು ಪ್ರಾಯಃ ಲುಪ್ತವಾಗಿ ಹೋಗಿರುವ ಕಾರಣ ನಮಗೆ ಮುಂದೆ ಈ ದರ್ಶನಸಂಪ್ರದಾಯ ಹೇಗೆ ಬೆಳೆಯಿತೆಂಬುದನ್ನು ನಿರ್ಧರಿಸುವುದಕ್ಕಾಗುವುದಿಲ್ಲ. ಆದರೆ ದೇಶಿಕರಿಗೂ, ರಾಮಾನುಜರಿಗೂ ಮಧ್ಯ ಕಾಲದಲ್ಲಿ ಅಪಾರವಾದ ಗ್ರಂಥನಿರ್ಮಾಣವಾಗಿತ್ತೆಂಬುದನ್ನು, ಬಹುಮುಖರಾದ ಆಚಾರ್ಯರುಗಳಿದ್ದರೆಂಬುದನ್ನೂ ದೇಶಿಕರವರ ಕೃತಿಗಳಿಂದ ನಾವರಿಯುತ್ತೇವೆ. ರಾಮಾನುಜರು ಸಾಧಿಸಿದ ಮೂರು ಮಹತ್ಕಾರ್ಯಗಳು : (೧) ಪಾಂಚರಾತ್ರದ ಪ್ರಮಾಣಸ್ಥಾಪನೆ (೨) ದೇವಾಲಯದಲ್ಲಿ ಪೂಜಾಕ್ರಮ ವ್ಯವಸ್ಥೆ ಮತ್ತು (೩) ಪ್ರಪತ್ತಿಯ ಮೂಲಕ ಎಲ್ಲರಿಗೂ ಮೋಕ್ಷೋಪದೇಶ—ಮುಂದಿನ ಕಾಲದಲ್ಲಿ ಚೆನ್ನಾಗಿ ದೃಢವಾದವು. ರಾಮಾನುಜರ ಕೃತಿಗಳಲ್ಲಿ ನಮಗೆ ಗೊತ್ತಾಗದ ವಿವರಗಳು ಮುಂದಿನ ಕೃತಿಗಳಲ್ಲಿ ಸ್ಪಷ್ಟವಾಗಿ ಮೂಡಿರುವುದು ಈ ದರ್ಶನಕ್ಕೆ ಒಂದು ನಿರ್ದಿಷ್ಟವಾದ ಆಕಾರ ಬಂದುದನ್ನು ಸೂಚಿಸುತ್ತವೆ. ರಾಮಾನುಜರ ನಂತರ ಬಂದವರು ರಾಮಾನುಜರ ಅಭಿಪ್ರಾಯಗಳನ್ನು ಪರೀಕ್ಷಿಸಿ ವಿಮರ್ಶಿಸಿರಬೇಕು. ಅವುಗಳ ಪರೀಕ್ಷಣ ಮುಂದಿನವರ ಕೃತಿಗಳಲ್ಲಿ ನಮಗೆ ಗೋಚರಿಸುತ್ತದೆ. ಹೀಗಾಗಿ ಖಂಡನ ಮಂಡನಗಳಿಂದೊಡಗೂಡಿದ ವಿವರಣೆ ಬೆಳೆದು ದೇಶಿಕರವರ ಕಾಲಕ್ಕೆ ಈ ದರ್ಶನದ ವೈಶಾಲ್ಯ ಮತ್ತು ನಿಷ್ಕೃಷ್ಟತೆಗಳು ನಮಗೆ ಗೊತ್ತಾಗುತ್ತವೆ. ದೇಶಿಕರವರು ಅನೇಕಾನೇಕ ಭಾಷ್ಯಗಳನ್ನೂ, ಸ್ವತಂತ್ರ ಗ್ರಂಥಗಳನ್ನೂ ರಚಿಸಿ ವಿಶಿಷ್ಟಾದ್ವೈತದರ್ಶನದ ಪ್ರಮಾಣ ಪ್ರಮೇಯ ಸ್ವರೂಪವನ್ನು ಖಚಿತಪಡಿಸಿದರು. ಮುಖ್ಯವಾಗಿ ಪ್ರಪತ್ತಿಯ ವಿಚಾರದಲ್ಲಿ ನಿಷ್ಕೃಷ್ಟವಾದ ನಿರೂಪಣೆಯನ್ನು ಮಾಡಿ ಅದರ ಮಹತ್ವವನ್ನು ತಿಳಿಯಪಡಿಸಿದರು. ಇಲ್ಲಿಂದ ಮುಂದೆ ದೇಶಿಕಸಂಪ್ರದಾಯ ಮೊದಲಾಗುತ್ತದೆ. ದೇಶಿಕರ ಅಭಿಪ್ರಾಯಗಳನ್ನು ವಿವರಿಸಿ ಅನುಷ್ಠಿಸಿ ಗೌರವಿಸುವವರ ಶಾಖೆಯೊಂದು ಗಮನಾರ್ಹವಾಗಿ ಬೆಳೆಯಿತು. ಈ ಶಾಖೆಯು ಅವರ ಅನೇಕಾನೇಕ ಶಿಷ್ಯರ ಮುಖಾಂತರ ಶಾಖಾಂತರಗಳಾಗಿ ಬೆಳೆದು ಬಂದಿದೆ. ಹೀಗೆ ಇಂದೂ ಇರುವ ಶ್ರೀ ಪರಕಾಲ ಮಠದ

acharya.org

ಶಾಖೆ, ಶ್ರೀ ಅಹೋಬಿಲ ಮಠದ ಶಾಖೆ ಈ ಸಂಪ್ರದಾಯದ ಎರಡು ಮುಖ್ಯವಾದ ಆಸ್ಥಾನಗಳಾಗಿವೆ. ಅನೇಕ ವಿರಕ್ತ ಸಂನ್ಯಾಸಿಗಳೂ ಈ ಧರ್ಮದ ಪ್ರಚಾರದಲ್ಲಿ ಇತರರಿಗೆ ಹಿಂದಿಲ್ಲದೆ ಶ್ರಮಿಸಿದ್ದಾರೆ. ಇವುಗಳಲ್ಲಿ ಶ್ರೀರಂಗದಲ್ಲಿರುವ ಮುನಿತ್ರಯ ಸಂಪ್ರದಾಯದ ಆಚಾರ್ಯ ಪರಂಪರೆ ಮುಖ್ಯವಾದುದು. ಇವೊಂದೊಂದು ಶಾಖೆಯೂ ಬಹಳ ಹಿಂದಿನ ಕಾಲದಿಂದ ತನ್ನದೇ ಆದ ಆಚಾರ್ಯಪರಂಪರೆಯನ್ನು ಹೊಂದಿ ದೇಶಿಕ ಸಂಪ್ರದಾಯದ ಪ್ರವರ್ತನದಲ್ಲಿ ತೊಡಗಿದೆ. ಇಂದು ಸಹಸ್ರಾರು ಮಂದಿ ಶ್ರದ್ಧಾವಂತರಾದ ಶಿಷ್ಯೋತ್ತಮರು ಈ ಆಚಾರ್ಯರುಗಳನ್ನು ಆಶ್ರಯಿಸಿ ಆತ್ಮೋದ್ಧಾರವನ್ನು ಮಾಡಿಕೊಳ್ಳುತ್ತಿದ್ದಾರೆ. ಈ ಸಂಪ್ರದಾಯದಂತೆಯೇ ಇನ್ನೊಂದು ಪ್ರಮುಖ ಶಾಖೆಯು ರಾಮಾನುಜರ ಕಾಲದಿಂದಲೇ ಬೆಳೆದು ಬಂದಿದೆ. ರಾಮಾನುಜರ ಶಿಷ್ಯರಾದ ಕೂರತ್ತಾಳ್ವಾನ್‌ರವರು, ಪರಾಶರಭಟ್ಟರು, ನಂಜೀಯರವರು, ನಂಬಿಳ್ಳೈಗಳು, ಪೆರಿಯವಾಚ್ಚಾನ್‌ಪಿಳ್ಳೈಗಳು, ವಡಕ್ಕು ತಿರುವೀಧಿಪಿಳ್ಳೈಗಳು, ಪಿಳ್ಳೈ ಲೋಕಾಚಾರ್ಯರು, ತಿರುಮಲೈಯಾಳ್ವಾರ್‌ನರು ಆದಮೇಲೆ ಬಂದ ಶ್ರೀಮದ್ವರವರ ಮುನಿಗಳು ಈ ಸಂಪ್ರದಾಯದ ಮತ್ತೊಬ್ಬ ಪ್ರಮುಖ ಪ್ರವರ್ತಕರಾಗಿದ್ದಾರೆ. ಇವರನ್ನು ಪರಮಾಚಾರ್ಯರನ್ನಾಗಿ ಹೊಂದಿರುವ ಜೀಯರ್ ಸಂಪ್ರದಾಯವೂ ಪ್ರಸಿದ್ಧವೇ ಆಗಿದೆ. ಪಿಳ್ಳೈಲೋಕಾಚಾರ್ಯರು ದೇಶಿಕರವರ ಹಿರಿಯ ಸಮಕಾಲೀನರಾಗಿದ್ದರು. ಅವರಿಂದ ಈ ಜೀಯರ್ ಸಂಪ್ರದಾಯ ಮೊದಲಾಯಿತು ಎಂದು ಹೇಳಬಹುದು. ಈ ಸಂಪ್ರದಾಯಕ್ಕೆ ಸೇರಿದಂತೆ ಪರಿವ್ರಾಜಕರನೇಕರು ಇಂದೂ ಈ ಸಂಪ್ರದಾಯಶ್ರೀಯನ್ನು ಹೊಮ್ಮಿಸುತ್ತಿದ್ದಾರೆ. ವಾನಮಾಮಲೈ ಮಠ, ತಿರುನಾರಾಯಣಪುರದ ಯತಿರಾಜಮಠ, ಶ್ರೀರಂಗದ ಶ್ರೀರಂಗನಾರಾಯಣ ಜೀಯರ್‌ಮಠ, ತಿರುಪತಿಯ ಜೀಯರ್ ಮಠ, ತಿರುಮಾಲಿರಂ ಶೋಲೈಜೀಯರ್ ಮಠ, ತಿರುಕ್ಕುರಂಗುಡಿಯ ಜೀಯರ್‌ಮಠ, ಕಾಂಚಿಯ ಅಳಹಿಯಮಣವಾಳ ಜೀಯರ್‌ಮಠ ಈ ಶಾಖೆಗಳು ಈ ಸಂಪ್ರದಾಯದ ಪ್ರಸಿದ್ಧವಾದ ಶಾಖೆಗಳಾಗಿವೆ. ಹೀಗೆ ಜೀಯರ್ ಸಂಪ್ರದಾಯವೂ ದೇಶಿಕ ಸಂಪ್ರದಾಯವೂ ದೇಶದಲ್ಲಿ ಎರಡು ಕಣ್ಣುಗಳೋಪಾದಿಯಲ್ಲಿ ಬೆಳದು ಬಂದು ಈ ದರ್ಶನದ ಪ್ರವರ್ತನದಲ್ಲಿ ತೊಡಗಿವೆ. ಸಂನ್ಯಾಸ ಸ್ವೀಕಾರ ಮಾಡಿದ ಆಚಾರ್ಯರು ಈ ಮೇಲೆ ಹೇಳಿದ ಮಠಗಳಲ್ಲಿ ಮತ್ತು ಆಶ್ರಮಗಳಲ್ಲಿರುತ್ತಾ ರಾಮಾನುಜ ಸಂಪ್ರದಾಯದ ಶ್ರೀಯನ್ನು ಬೆಳಗಿಸುತ್ತಿದ್ದಾರೆ. ಇವರಂತೆಯೇ ಈ ಎರಡೂ ಸಂಪ್ರದಾಯಗಳಿಗೆ ಸೇರಿದ ಅನೇಕಾನೇಕ ಗೃಹಸ್ಥಾಚಾರ್ಯರುಗಳೂ ಆಚಾರ್ಯರುಗಳಾಗಿ ಬಹಳ ಹಿಂದಿನ ಕಾಲದಿಂದ ಉಪದೇಶಮಾಡುತ್ತಾ ಬಂದಿದ್ದಾರೆ. ಇವರಿಗೆ ಸ್ವಯಂ ಆಚಾರ್ಯ ಪುರುಷರೆಂಬ ಹೆಸರು ಪ್ರಸಿದ್ಧವಾಗಿದೆ. ಇವರಲ್ಲಿ ಜೀಯರ್ ಸಂಪ್ರದಾಯಕ್ಕೆ ಸೇರಿದ ಕಂದಾಡೆಯರ್, (ಮೊದಲಿಯಾಂಡಾನ್ ಮೊದಲಾದವರು) ಆನಂದಾಂಬಿಳ್ಳೈಯವರು ಮೊದಲಾದವರೂ ದೇಶಿಕ ಸಂಪ್ರದಾಯಕ್ಕೆ ಸೇರಿದ ತಾತಾಚಾರ್ಯರವರೂ, ತಿರುಮಲೈ

acharya.org

ನಲ್ಲಾನ್ ಚಕ್ರವರ್ತಿಗಳೂ ಮುಖ್ಯರಾದವರು. ಇವರೂ ಸಹ ಶಿಷ್ಯರುಗಳಿಗೆ ಸಮಾಶ್ರಯಣ, ಪ್ರಪತ್ತಿ, ತತ್ತ್ವೋಪದೇಶ ಮೊದಲಾದುವನ್ನು ಮಾಡುತ್ತಾ ಈ ಸಂಪ್ರದಾಯದ ಸಂವರ್ಧಕರಾಗಿದ್ದಾರೆ. ಇವೆರಡು ಸಂಪ್ರದಾಯಗಳಿಗೆ ಸೇರಿದಂತೆ ಇರುವ ಮತ್ತೊಂದು ಸಂಪ್ರದಾಯ ದೇಶಿಕರ ಕಾಲಕ್ಕಿಂತ ಮೊದಲಿಂದಲೂ ಬೆಳೆದು ಬರುತ್ತಿದೆ. ಇದು ಸೋಮಾಷಿಯಾಂಡಾನ್‌ರವರ ಪರಂಪರೆ. ದೇಶಿಕರಿಗೆ ಪ್ರಾಚೀನರಾದ ಶ್ರೀ ರಾಮ ಮಿಶ್ರರು ಈ ಸಂಪ್ರದಾಯದವರು. ಅವರ ಸಂತತಿಯಲ್ಲಿ ಬಂದ ಮೇಘನಾದಾರಿಸೂರಿಗಳು ದೇಶಿಕರವರ ಸಮಕಾಲೀನರಾಗಿದ್ದರೆಂದು ಕಂಡುಬರುತ್ತದೆ. ಈ ಪರಂಪರೆಯಲ್ಲಿ ಬಂದ ಆಚಾರ್ಯರುಗಳೂ ಸ್ವಯಂ ಆಚಾರ್ಯಪುರುಷರಾಗಿದ್ದಾರೆ. ಪ್ರಪತ್ತಿಯ ವಿಚಾರದಲ್ಲಿ ಮೇಘನಾದಾರಿ ಸೂರಿಗಳು ಮುಮುಕ್ಷೂಪಾಯಸಂಗ್ರಹದಲ್ಲಿ ಹೇಳಿರುವ ಅಭಿಪ್ರಾಯಗಳು ದೇಶಿಕರ ಅಭಿಪ್ರಾಯಕ್ಕೂ ಪಿಳ್ಳೈಲೋಕಾಚಾರ್ಯರ ಅಭಿಪ್ರಾಯಕ್ಕೂ ಬೇರೆಯಾಗಿರುವುವು. ಈಗಿನ ಕಾಲದಲ್ಲಿ ಈ ಸಂಪ್ರದಾಯದವರು ಪ್ರಾಯಶಃ ದೇಶಿಕ ಸಿದ್ಧಾಂತವನ್ನೇ ಅನುಸರಿಸುವವರಾಗಿದ್ದಾರೆ.

ಹೀಗೆ ಇಂದು ಶ್ರೀವೈಷ್ಣವಧರ್ಮ ನಮ್ಮ ದೇಶದಲ್ಲಿ ಅನೇಕಾನೇಕ ಶಾಖೆಗಳಲ್ಲಿ ಪ್ರಚಾರದಲ್ಲಿದೆ. ರಾಮಾನುಜರು ಒಂಭೈನೂರು ವರ್ಷಗಳ ಹಿಂದೆ ಮಾಡಿದ ಉಪದೇಶಾಮೃತದ ಸಾರವನ್ನು ಇವರು ಇಂದಿಗೂ ಆಸಕ್ತರಾದ ಮುಮುಕ್ಷುಗಳಿಗೆ ಪರಮಕೃಪೆಯಿಂದ ಧಾರೆಯೆರದು ಉದ್ಧಾರದ ಮಾರ್ಗವನ್ನು ತೋರುತ್ತಿದ್ದಾರೆ.

acharya.org

೩

ರಾಮಾನುಜ ದರ್ಶನ ಸ್ವರೂಪ

ಪದಾರ್ಥವಿಭಾಗ

ವಿಶಿಷ್ಟಾದ್ವೈತ ದರ್ಶನಕ್ಕನುಸಾರವಾಗಿ ತಿಳಿಯಬೇಕಾದ ವಿಚಾರಗಳನ್ನೆಲ್ಲಾ ಪ್ರಾಚೀನಾಚಾರ್ಯರಗಳು ಐದು ಬಗೆಯಾಗಿ ವಿಭಾಗಿಸಿದ್ದಾರೆ.

> 'ಪ್ರಾಪ್ಯಸ್ಯ ಬ್ರಹ್ಮಣೋ ರೂಪಂ ಪ್ರಾಪ್ತುಶ್ಚ ಪ್ರತ್ಯಗಾತ್ಮನಃ ।
> ಪ್ರಾಪ್ತ್ಯುಪಾಯಂ ಫಲಂ ಚೈವ ತಥಾ ಪ್ರಾಪ್ತಿವಿರೋಧಿ ಚ ।
> ವದಂತಿ ಸಕಲಾ ವೇದಾಸ್ಸೇತಿಹಾಸಪುರಾಣಕಾಃ ॥'

ಎಂದು ಇವುಗಳನ್ನು ನಿರೂಪಿಸಿದ್ದಾರೆ.

ಈ ದರ್ಶನ ಜೀವ ಬ್ರಹ್ಮರುಗಳಿಗೆ ಭೇದವನ್ನು ಸಮರ್ಥಿಸುವುದರಿಂದಲೂ, ಬ್ರಹ್ಮಪ್ರಾಪ್ತಿಯೇ ಜೀವನ ಪುರುಷಾರ್ಥವೆಂದೂ ಪ್ರತಿಪಾದಿಸುವುದರಿಂದಲೂ ಜೀವಾತ್ಮನ ಸ್ವರೂಪಜ್ಞಾನಕ್ಕೂ ಬ್ರಹ್ಮಸ್ವರೂಪಜ್ಞಾನದಂತೆಯೇ ಪ್ರಾಧಾನ್ಯವನ್ನಿತ್ತಿದೆ. ಆದುದರಿಂದ ಜೀವನು ತಾನು ಪಡೆಯಬೇಕೆಂದು ಹಂಬಲಿಸುತ್ತಿರುವ ಪರಬ್ರಹ್ಮವಸ್ತುವಿನ ಸ್ವರೂಪವನ್ನು ಅರಿಯಬೇಕಾದಂತೆ ಆ ಪರಬ್ರಹ್ಮವಸ್ತುವನ್ನು ಪಡೆಯಬಲ್ಲ ತನ್ನ ಸರೂಪವನೂ ಅರಿಯಬೇಕು. ಬ್ರಹ್ಮಪ್ರಾಪ್ತಿಗೆ ಸಾಧನವನ್ನೂ, ಬ್ರಹ್ಮಪ್ರಾಪ್ತಿಯಿಂದ ಲಭಿಸುವ ಫಲಸ್ವರೂಪವನ್ನೂ ಆ ಪ್ರಾಪ್ತಿಗೆ ಇರುವ ವಿರೋಧವನ್ನೂ ಹಾಗೆಯೇ ತಿಳಿಯಬೇಕು. ಈ ಐದು ಅಂಶಗಳಿಗೆ ಅರ್ಥಪಂಚಕವೆಂಬ ಹೆಸರಿದೆ. ಉಪಾಸನೆಗನುಕೂಲವಾಗುವಂತೆ ತಿಳಿಯಬೇಕಾದ ವಿಚಾರಗಳನ್ನೆಲ್ಲಾ ಈ ಐದು ವಿಭಾಗಗಳು ತಿಳಿಸಿಕೊಡುತ್ತವೆ. ಇದನ್ನೇ ಶ್ರುತಿಯಲ್ಲಿ ಹೇಳಿರುವುದಕ್ಕನುಸಾರವಾಗಿ 'ಭೋಕ್ತಾ', 'ಭೋಗ್ಯಂ', 'ಪ್ರೇರಿತಾ' ಎಂದು ಮೂರು ವಿಧವಾಗಿ ವಿಭಾಗಿಸಬಹುದು. ಭೋಕ್ತಾ ಎಂಬುವನು ಜೀವಾತ್ಮನಾಗಿದ್ದಾನೆ. ಭೋಗ್ಯವು ಪ್ರಕೃತಿ. ಪ್ರೇರಿತಾ ಎಂಬುವನು ಇವೆರಡರೊಳಗೇ ಇರುತ್ತಾ ಅವುಗಳನ್ನೆಲ್ಲಾ ನಿಯಮಿಸಿ ಪ್ರೇರಿಸುವ ಪರಮಾತ್ಮನಾಗಿದ್ದಾನೆ.

ಮತ್ತೆ ಕೆಲವರು ತತ್ತ್ವ ವಿಭಾಗಮಾಡುವಾಗ ಅದನ್ನು ಪ್ರಧಾನ, ಪುರುಷ, ವ್ಯಕ್ತ ಮತ್ತು ಕಾಲ ಎಂದು ನಾಲ್ಕು ಬಗೆಯಾಗಿ ವಿಭಾಗಿಸಿದ್ದಾರೆ. ಪುರುಷ ತತ್ತ್ವದಲ್ಲಿ ಪರಮಪುರುಷನನ್ನು ಅವರು ಅಂತರ್ಗತಮಾಡಿದ್ದಾರೆ. ರಾಮಾನುಜರಿಗಿಂತ ಹಿಂದಿನ

acharya.org

ಆಚಾರ್ಯರು ತತ್ತ್ವಸ್ವರೂಪವನ್ನು ಚಿತ್, ಅಚಿತ್ ಮತ್ತು ಈಶ್ವರ ಎಂದು ಮೂರು ಬಗೆಯಾಗಿ ವಿಭಾಗಿಸಿದ್ದಾರೆ. ಚೇತನ ತತ್ವ ಜೀವಾತ್ಮರು. ಅಚೇತನವೇ ಪ್ರಕೃತಿ. ಈವೆರಡಕ್ಕೂ ಧಾರಕನಾಗಿ, ನಿಯಾಮಕನಾಗಿ, ಶೇಷಿಯಾಗಿರುವವನು ಈಶ್ವರ. ಅಚೇತನ ತತ್ತ್ವವನ್ನು ಸಾಂಖ್ಯರ ಕ್ರಮದಂತೆ ಪ್ರಕೃತಿ, ಮಹತ್ತು, ಅಹಂಕಾರ, ಹನ್ನೊಂದು ಇಂದ್ರಿಯಗಳು, ಪಂಚತನ್ಮಾತ್ರೆಗಳು, ಪಂಚಭೂತಗಳು ಎಂದು ಇಪ್ಪತ್ತನಾಲ್ಕು ವಿಧವಾಗಿ ವಿಭಾಗಿಸಲಾಗುವುದು. ಇವುಗಳ ಮುಂದಿನ ಇಪ್ಪತ್ತೈದನೆಯ ತತ್ತ್ವವೇ ಜೀವಾತ್ಮಾ. ಇಪ್ಪತ್ತಾರನೆಯ ತತ್ತ್ವ ಈಶ್ವರ. ಈ ಇಪ್ಪತ್ತಾರು ತತ್ವಗಳೊಡನೆ ಕಾಲವನ್ನೂ ಸೇರಿಸಿದರೆ ಇಪ್ಪತ್ತೇಳು ತತ್ವಗಳಾಗುತ್ತವೆ.

ಹೀಗೆ ವಿಧವಿಧವಾಗಿ ಪದಾರ್ಥವಿಭಾಗವನ್ನು ಮಾಡಿರುವುದರಿಂದ ತತ್ತ್ವಸ್ವರೂಪದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಏಕೆಂದರೆ ಈ ಸಿದ್ಧಾಂತಕ್ಕನುಗುಣವಾಗಿ ತತ್ತ್ವವು ಒಂದೇ ಒಂದು. ಅದು ಚೇತನಾಚೇತನವಿಶಿಷ್ಟವಾದ ಪರಬ್ರಹ್ಮವಸ್ತು. 'ಅಶೇಷಚಿದಚಿತ್ಪ್ರಕಾರಂ ಬ್ರಹ್ಮೈಕಮೇವ ತತ್ತ್ವಮ್' ಎಂದು ಶ್ರೀಮದ್ವೇಂಕಟನಾಥರು ಇದನ್ನು ಸಮರ್ಥಿಸಿದ್ದಾರೆ. ವಿಶೇಷ್ಯಕ್ಕೂ ವಿಶೇಷಣಗಳಿಗೂ ಭೇದವಿದ್ದರೂ, ವಿಶೇಷಣಗಳಲ್ಲಿಯೇ ಪರಸ್ಪರ ಭೇದವಿದ್ದರೂ, ಆ ವಿಶೇಷಣಗಳೆಲ್ಲದರಿಂದ ಕೂಡಿರುವ ವಸ್ತು ಒಂದೇ ಆದ ಕಾರಣ ತತ್ವವು ಒಂದೇ ಎಂದು ಹೇಳಿ ತದಿತರವಾದುದನ್ನು ನಿಷೇಧಿಸಲಾಗಿದೆ. ಪದಾರ್ಥವಿಭಾಗವನ್ನು ಬೇರೆಬೇರೆಯಾಗಿ ಮಾಡಿರುವುದಾದರೂ ಸಾಧಕರಿಗೆ ಬೇರೆ ಬೇರೆ ಅಂಶಗಳನ್ನು ಮನಗಾಣಿಸುವುದಕ್ಕಾಗಿಯೇ ಆಗಿದೆ. ಚೇತನಾಚೇತನಗಳ ಸ್ವರೂಪ ಸ್ವಭಾವಗಳು ಬೇರೆ ಬೇರೆಯಾಗಿದ್ದು ಈಶ್ವರನ ಸ್ವರೂಪ ಸ್ವಭಾವಗಳು ಬೇರೆಬೇರೆಯಾಗಿದ್ದರೂ ಈ ಚೇತನಾಚೇತನಗಳಿಂದ ಕೂಡಿದ ಈಶ್ವರತತ್ತ್ವ ಒಂದೇ ಆಗಿದೆ. ಸ್ವರೂಪೈಕ್ಯವನ್ನಿಲ್ಲಿ ಹೇಳಿಲ್ಲ. ಆದರೆ ವಿಶಿಷ್ಟೈಕ್ಯವನ್ನು ಸಮರ್ಥಿಸಲಾಗಿದೆ. ಹೀಗಾಗಿ ಸರ್ವಕಾರಣಕಾರಣನೂ ಸರ್ವಚೇತನಾಚೇತನವಿಶಿಷ್ಟನೂ ಆದ ಶ್ರೀಮನ್ನಾರಾಯಣನೇ ಈ ದರ್ಶನದಲ್ಲಿ ಪ್ರಮೇಯ. ಯಾವುದೊಂದನ್ನು ತಿಳಿದರೆ ಸಂಸಾರದಿಂದ ವಿಮುಕ್ತಿಯೋ, ಯಾವುದೊಂದನ್ನು ತಿಳಿಯದಿದ್ದರೆ ಸಂಸಾರದಿಂದ ವಿಮೋಚನೆ ಇಲ್ಲವೋ ಅದೇ ಪ್ರಮೇಯವೆನಿಸುವುದು ಎಂಬುದನ್ನು ಶ್ರೀಮನ್ನಿಗಮಾಂತ ದೇಶಿಕರವರು

'ಯದ್ವಿಷಯೇಣ ಭ್ರಮೇಣ ಸಂಸರಾಮಃ
ಯದ್ವಿಷಯೇಣ ತತ್ತ್ವಜ್ಞಾನೇನ ಅಪವರ್ಜ್ಯೇಮಹಿ
ತದಿಹ ನಃ ಪ್ರಕರ್ಷೇಣ ಮೇಯಂ ಪ್ರಮೇಯಂ'

ಎಂದು ನ್ಯಾಯಪರಿಶುದ್ಧಿಯಲ್ಲಿ ತಿಳಿಸಿದ್ದಾರೆ. ಆದುದರಿಂದ ಈ ದರ್ಶನಕ್ಕೆ ಪ್ರಮೇಯ ಶ್ರೀಮನ್ನಾರಾಯಣನೇ. ಉಪನಿಷತ್ತುಗಳಲ್ಲಿಯೂ 'ತಮೇವಂ ವಿದ್ವಾನಮೃತ ಇಹ ಭವತಿ' ಎಂದೇ ಹೇಳಿದೆ. ಭಗವದ್ರಾಮಾನುಜರು ಆದ್ದರಿಂದಲೇ 'ತಾಪತ್ರಯಾತುರೈ-

acharya.org

ರಮೃತತ್ವಾಯ ಸ ಏವ ಜಿಜ್ಞಾಸ್ಯಃ' ಎಂದು ಸಾರಿ ಹೇಳಿದ್ದಾರೆ.

ಚೇತನಾಚೇತನವಿಶಿಷ್ಟನಾದ ಈಶ್ವರನೊಬ್ಬನೇ ತತ್ತ್ವವೆಂದು ಮೇಲೆ ಹೇಳಲಾಯಿತು. ಈ ಚೇತನನ ಸ್ವರೂಪಸ್ವಭಾವಗಳೇನು, ಅಚೇತನದ ಸ್ವರೂಪ ಸ್ವಭಾವಗಳೇನು ಈಶ್ವರನ ಸ್ವರೂಪ ಸ್ವಭಾವಗಳೇನು, ಅಚೇತನನಲ್ಲಿನ ಅಂತರ್ಭಾಗಗಳಾವುವು, ಅವು ಹೇಗೆ ಕಾರ್ಯಕರವಾಗುವುವು, ಮೊದಲಾದುವನ್ನು ಮನಗಾಣಿಸಲು ಇವುಗಳ ಅವಾಂತರ ವಿಭಾಗಗಳನ್ನು ಸೂಚಿಸಿದ್ದಾರೆ. ಇತರ ದರ್ಶನಗಳವರು ಮಾಡುವ ಪದಾರ್ಥವಿಭಾಗಗಳನ್ನು ಈ ದರ್ಶನದ ಪದಾರ್ಥವ್ಯವಸ್ಥೆಯಲ್ಲಿ ಯುಕ್ತವಾಗಿ ಅಂತರ್ಭಾವ ಮಾಡಲಾಗಿದೆ. ಈ ವಿಭಾಗ ಮಾಡುವಾಗ ವೇದಪ್ರಾಮಾಣ್ಯಕ್ಕೆ ಅತ್ಯಂತವಾದ ಪ್ರಾಧಾನ್ಯ ಕೊಡಲಾಗಿದೆ. ವೇದೋಕ್ತವಾದುದಕ್ಕೆ ಸ್ವಲ್ಪವೂ ವಿರೋಧ ಬರದಂತೆ ಇವುಗಳ ನಿರೂಪಣೆ ಆಗಿದೆ. ಹೀಗೆ ಪದಾರ್ಥಗಳ ವಿಭಾಗಕ್ರಮ ನಮಗೆ ಅತ್ಯಂತ ಸ್ಪಷ್ಟವಾಗಿಯೂ ನಿಖರವಾಗಿಯೂ ಗೊತ್ತಾಗುವುದು ಶ್ರೀಮನ್ನಿಗಮಾಂತ ದೇಶಿಕರ ಕೃತಿಗಳಲ್ಲಿ. ಅವರಿಗಿಂತ ಹಿಂದಿನ ಆಚಾರ್ಯರುಗಳ ಕೃತಿಗಳು ನಮಗೆ ಉಪಲಬ್ಧವಾಗಿಲ್ಲ. ಆದರೆ ಈ ವಿವೇಚನೆ ಇನ್ನೂ ಹಿಂದಿನ ಕಾಲದಲ್ಲಿ ನಡೆದಿತ್ತೆಂಬುದಕ್ಕೆ ದೇಶಿಕರ ಕೃತಿಗಳಲ್ಲಿ ಪ್ರಾಚೀನಾಚಾರ್ಯರುಗಳ ಉಲ್ಲೇಖವಿರುವುದು ಸಾಕ್ಷಿಯಾಗಿದೆ. ದೇಶಿಕರವರು ಮಾಡಿರುವ ಪದಾರ್ಥವಿಭಾಗಕ್ರಮ ೬೨ನೆಯ ಪುಟದಲ್ಲಿ ಕಂಡಂತಿದೆ.

ಈ ಬಗೆಯ ಪದಾರ್ಥವಿಭಾಗಕ್ರಮ ವ್ಯಾಪಕವಾಗಿದೆ. ವೈಶೇಷಿಕರು ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ, ಅಭಾವ ಎಂದು ಏಳು ಪದಾರ್ಥಗಳನ್ನು ಹೇಳುವರು. ಇವುಗಳಲ್ಲಿ ಸಾಮಾನ್ಯ, ವಿಶೇಷ, ಸಮವಾಯ ಅಭಾವಗಳು ಅತಿರಿಕ್ತವಾದ ಪದಾರ್ಥಗಳಲ್ಲವೆಂದು ಈ ಸಿದ್ಧಾಂತ ಸಾಧಿಸುವ ಕಾರಣ ಮೂರು ಪದಾರ್ಥಗಳು ಮಾತ್ರ ಉಳಿಯುತ್ತವೆ. ಅವುಗಳಲ್ಲಿಯೂ ಕರ್ಮವನ್ನು ಗುಣಪಕ್ಷದೊಳಗೇ ಅಂತರ್ಭಾವ ಮಾಡಬಹುದು. ಇನ್ನುಳಿದ ಎರಡು ಪದಾರ್ಥಗಳಲ್ಲಿ ಗುಣ ದ್ರವ್ಯವನ್ನು ಬಿಟ್ಟಿರಲಾರದ ಕಾರಣ ದ್ರವ್ಯ ಮತ್ತು ಅದ್ರವ್ಯ ಎಂದು ವಿಭಾಗ ಮಾಡುವುದೇ ಯುಕ್ತವೆಂದು ದೇಶಿಕರ ಮತ. ಈ ಸಿದ್ಧಾಂತಕ್ಕನುಸಾರವಾಗಿ ಗುಣಗಳು ಅದ್ರವ್ಯದಲ್ಲಿ ಸೇರುತ್ತವೆ. ಸಾಮಾನ್ಯವನ್ನು ಈ ಸಿದ್ಧಾಂತ ಒಪ್ಪುವುದಿಲ್ಲ. ಅವಯವಗಳಿಂದ ಬೇರೆಯಾದ ಅವಯವಿಯನ್ನು ಈ ಸಿದ್ಧಾಂತ ಒಪ್ಪುವುದಿಲ್ಲವಾದ ಕಾರಣ ಸಾಮಾನ್ಯವೆಂಬ ಅತಿರಿಕ್ತಪದಾರ್ಥವಿಲ್ಲ. ಅದು ಅದ್ರವ್ಯದಲ್ಲಿಯೇ ಸೇರಿಹೋಗುತ್ತದೆ. ಚಿದಚಿದೀಶ್ವರರುಗಳಲ್ಲಿ ಸ್ವರೂಪತಃ ಭೇದವಿರುವ ಕಾರಣ ಇವುಗಳಿಗೆ ಭೇದವನ್ನು ಸಾಧಿಸಲು ವಿಶೇಷವೆಂಬ ಪದಾರ್ಥವನ್ನು ಅಂಗೀಕರಿಸಬೇಕಾಗಿಲ್ಲವೆಂಬುದು ಈ ದರ್ಶನದ ನೆಲೆ. ದ್ರವ್ಯಕ್ಕೂ ಗುಣಕ್ಕೂ ಇರುವ ಸಂಬಂಧವೇ ಮೊದಲಾದುವನ್ನು ತಿಳಿಸಲು ಸಮವಾಯವೆಂಬ ಪದಾರ್ಥವನ್ನು ತಾರ್ಕಿಕರು ಅಂಗೀಕರಿಸಿದ್ದಾರೆ. ಇದನ್ನೂ ಈ ದರ್ಶನ ಒಪ್ಪುವುದಿಲ್ಲ. ಗುಣಕ್ಕೂ ದ್ರವ್ಯಕ್ಕೂ

acharya.org


ಪ್ರಮೇಯ
ದ್ರವ್ಯ
ಅದ್ರವ್ಯ
ಸತ್ವ
ರಜಸ್ಸು
ತಮಸ್ಸು
ಶಬ್ದ
ಸ್ಪರ್ಶ
ರೂಪ
ರಸ
ಗಂಧ
ಶಕ್ತಿ
ಸಂಯೋಗ
ಜಡ
ಅಜಡ
ಅವ್ಯಕ್ತ
ಕಾಲ
ಪ್ರತ್ಯಕ್
ಪರಾಕ್
ಜೀವ
ಈಶ್ವರ
ನಿತ್ಯವಿಭೂತಿ
ಮತಿ

acharya.org

ಇರುವ ಸಂಬಂಧ ಅಪೃಥಕ್ಸಿದ್ಧಸಂಬಂಧವೆಂದು ಈ ದರ್ಶನ ಸಮರ್ಥಿಸಿ ಸಮವಾಯ ವನ್ನು ತಳ್ಳಿಹಾಕಿದೆ. ಅಭಾವವೆಂಬ ಪದಾರ್ಥ ತಾತ್ವಿಕವಾಗಿ ಇಲ್ಲವೇ ಇಲ್ಲವಾದ ಕಾರಣ ಅದು ಒಂದು ಪ್ರತ್ಯೇಕ ಪದಾರ್ಥವೆಂಬುದನ್ನು ಈ ದರ್ಶನ ಒಪ್ಪುವುದಿಲ್ಲ. ಶೈವಸಿದ್ಧಾಂತ ದವರು ಪದಾರ್ಥಗಳು ಮೂವತ್ತಾರು ಎಂದು ವಿವೇಚಿಸಿದ್ದಾರೆ. ಪ್ರಕೃತಿ, ಮಹತ್ತು, ಅಹಂಕಾರ, ಏಕಾದಶೇಂದ್ರಿಯಗಳು, ಪಂಚತನ್ಮಾತ್ರೆಗಳು, ಪಂಚಭೂತಗಳು ಎಂಬ ಇಪ್ಪತ್ತ ನಾಲ್ಕು ತತ್ವಗಳ ಜೊತೆಗೆ ಮಾಯಾ, ಪುರುಷ ಎಂಬ ಎರಡು ತತ್ವಗಳನ್ನೂ ಶಿವತತ್ವ, ಶಕ್ತಿತತ್ವ, ಸದಾಶಿವತತ್ವ, ಈಶ್ವರತತ್ವ ಮತ್ತು ವಿದ್ಯಾತತ್ವ ಎಂಬ ಐದು ಶುದ್ಧ ತತ್ವ ಗಳನ್ನೂ ಕಾಲ, ನಿಯತಿ, ಕಲಾ, ವಿದ್ಯಾ, ರಾಗ ಎಂಬ ಐದು ತತ್ವಗಳನ್ನೂ ನಿರೂಪಿಸು ವರು. ಇವುಗಳನ್ನೂ ಮೇಲೆ ಹೇಳಿದ ಈ ಸಿದ್ಧಾಂತದ ತತ್ವಗಳೊಳಗೆ ಅಡಕಮಾಡಬಹು ದೆಂದು ದೇಶಿಕರು ಸಮರ್ಥಿಸಿದ್ದಾರೆ. ಮಾಯೆಯನ್ನು ತ್ರಿಗುಣದಲ್ಲಿಯೂ ಪುರುಷನನ್ನು ಜೀವ ತತ್ವದಲ್ಲಿಯೂ ಪ್ರಕೃತ್ಯಾದಿ ಇಪ್ಪತ್ತನಾಲ್ಕು ತತ್ವಗಳನ್ನು ಅಚಿತ್ತತ್ವದಲ್ಲಿಯೂ ಅಡಕಮಾಡಬಹುದು. ಹೀಗಾಗಿ ಈ ಮೂವತ್ತೊಂದು ತತ್ವಗಳು ತತ್ವತ್ರಯದಲ್ಲಿ ಸೇರಿ ಹೋಗುತ್ತವೆ. ರಾಗವೆಂಬುದು ಆತ್ಮನ ಜ್ಞಾನಾವಸ್ಥೆಯ ಪ್ರಕಾರವಾದ ಕಾರಣ ಪ್ರತ್ಯೇಕ ತತ್ವವಲ್ಲ. ವಿದ್ಯಾತತ್ವ ಜ್ಞಾನೋತ್ಪತ್ತಿಗೆ ಕಾರಣವಾದ ತತ್ವವೆಂದು ಹೇಳಿದೆ. ಇದು ಮನಸ್ಸು ಮತ್ತು ಇಂದ್ರಿಯಗಳಿಂದ ಆಗುವ ಕಾರಣ ಈ ತತ್ವವನ್ನು ಬೇರೆಯಾಗಿ ಹೇಳಬೇಕಾದುದಿಲ್ಲ. ಕಲಾ ಎಂಬುದು ಕರ್ತೃಶಕ್ತಿವ್ಯಂಜಕವಾಗಿರುವುದರಿಂದ ಪ್ರಕೃತಿಯ ಅಕ್ಷರಾವಸ್ಥೆಗಿಂತ ಬೇರೆಯಾದುದಲ್ಲ. ನಿಯತಿತತ್ವವೂ ಪ್ರತ್ಯೇಕವಾದ ಪದಾರ್ಥವಲ್ಲ. ಈಶ್ವರನ ನಿಯಂತೃತ್ವ ಶಕ್ತಿಯಲ್ಲಾಗಲೀ ಕರ್ಮದಲ್ಲಾಗಲೀ ಇದನ್ನು ಸೇರಿಸಬಹುದು. ಹೀಗಾಗಿ ಈ ದರ್ಶನದಲ್ಲಿ ಮಾಡಿರುವ ಪದಾರ್ಥವಿಭಾಗಕ್ರಮ ವ್ಯಾಪಕವಾಗಿದೆ.

ಜಡದ್ರವ್ಯವು ಅವ್ಯಕ್ತ ಮತ್ತು ಕಾಲ ಎಂದು ಎರಡು ಬಗೆ. ಅದರಲ್ಲಿ ಅವ್ಯಕ್ತವು ಪ್ರಕೃತಿ ತತ್ವಕ್ಕೆ ಅನ್ವಯಿಸುತ್ತದೆ. ಇದರಿಂದಲೇ ಈ ಪ್ರಪಂಚದ ಶರೀರ ರೂಪಿಸಲ್ಪ ಟ್ಟಿದೆ. ಕಾಲತತ್ವವೂ ಜಡವಾದುದೇ ಆಗಿದೆ. ತನಗೆ ತಾನೇ ಪ್ರಕಾಶಿಸಬಲ್ಲ ಸ್ವಭಾವ ವುಳ್ಳ ಪ್ರತ್ಯಕ್‌ತತ್ವ ಜೀವ ಮತ್ತು ಈಶ್ವರ ಎಂದು ಎರಡು ಬಗೆಯಾಗಿದೆ. ಮತ್ತೊಬ್ಬ ರಿಗೇ ಪ್ರಕಾಶಿಸುವ ನಿತ್ಯವಿಭೂತಿ ಮತ್ತು ಬುದ್ಧಿ ಇವೆರಡೂ ಈ ಸಿದ್ಧಾಂತಕ್ಕೆ ಅಸಾಧಾ ರಣವಾದ ತತ್ವಗಳು. ಇವುಗಳೆಲ್ಲಾ ಸ್ವತಂತ್ರವಾಗಿ ಇರಬಲ್ಲವು. ಇವು ಉಪಾದಾನ ಕಾರಣವಾಗಬಲ್ಲವು. ಬೇರೆ ಬೇರೆ ಅವಸ್ಥೆಗಳನ್ನು ಹೊಂದಬಲ್ಲವು. 'ತತ್ರ ದ್ರವ್ಯಂ ದಶಾವತ್' ಎಂಬಂತೆ ಇವು ದ್ರವ್ಯಗಳೆಂದು ಪರಿಗಣಿತವಾಗಿವೆ. ಇವುಗಳಂತೆ ಅಲ್ಲದೆ ದ್ರವ್ಯವನ್ನೇ ಆಶ್ರಯಿಸಿರುವುವು ಅದ್ರವ್ಯಗಳು. ಅವು ಹತ್ತು ಬಗೆಯಾಗಿರುತ್ತವೆ.

ಈ ಬಗೆಯ ಪದಾರ್ಥವಿವೇಚನೆಯಿಂದ ಈ ದರ್ಶನ ಪದಾರ್ಥಗಳೆಲ್ಲದರ ಸ್ವರೂಪ ಸ್ವಭಾವಗಳನ್ನು ಪರಾಮರ್ಶಿಸುತ್ತದೆ. ಇವುಗಳಲ್ಲಿ ಪ್ರಥಮತಃ ಜಡದ್ರವ್ಯದ ವಿಚಾರ

acharya.org

ವನ್ನು ನಾವು ವಿವೇಚಿಸೋಣ.

ಪ್ರಕೃತಿ-ಜಡದ್ರವ್ಯ

ಅವ್ಯಕ್ತವೆಂಬುದಕ್ಕೆ ಅಕ್ಷರ, ಮೂಲ ಪ್ರಕೃತಿ, ಅವಿದ್ಯಾ, ಮಾಯಾ, ಎಂಬ ಹೆಸರುಗಳಿವೆ. ಇದು ಮೂರು ಗುಣಗಳಿಗೆ ಆಶ್ರಯವಾಗಿದೆ. ಇದು ನಿತ್ಯ ಅಥವಾ ಅಕ್ಷರವಾದುದು. ಸತತವಾಗಿ ಪರಿಣಾಮವನ್ನು ಹೊಂದುವುದೇ ಇದರ ಸ್ವಭಾವ. ಈಶ್ವರಸಂಕಲ್ಪಕ್ಕಧೀನವಾದುದು ಇದರ ಸ್ಥಿತಿ. ಹಾಗೆಯೇ ಇದು ವಿಕಾರ ಹೊಂದುವುದಾದರೂ ಈಶ್ವರನ ಸಂಕಲ್ಪಕ್ಕನುಸಾರವಾಗಿಯೇ. ಸಾಂಖ್ಯರು ಹೇಳುವಂತೆ ಪ್ರಕೃತಿಗೆ ಸ್ವತಂತ್ರವಾದ ಕರ್ತೃತ್ವವನ್ನು ಈ ಸಿದ್ಧಾಂತ ಒಪ್ಪುವುದಿಲ್ಲ. ಯಥಾರ್ಥಜ್ಞಾನನ್ನು ಇದು ಮರೆಮಾಡುವುದರಿಂದ ಅವಿದ್ಯೆ ಎಂದೂ ಸೃಷ್ಟಿವೈಚಿತ್ರ್ಯವನ್ನು ಪ್ರದರ್ಶಿಸುವುದರಿಂದ ಮಾಯಾ ಎಂದೂ ಇದನ್ನು ಕರೆಯುತ್ತಾರೆ. 'ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ' ಎಂದು ಗೀತೆಯಲ್ಲಿ ಇದನ್ನು ಹೇಳಿದೆ. ವಿಚಿತ್ರವಾದ ಪದಾರ್ಥಗಳ ಸೃಷ್ಟಿಗೆ ಉಪಕರಣವಾದುದು ಎಂಬ ಅರ್ಥದಲ್ಲಿ ಮಾಯಾ ಎನ್ನುತ್ತಾರೆಯೇ ವಿನಾ ಇದು ತೋರಿಕೆ ಅಥವಾ ಸುಳ್ಳಾದುದು ಎಂಬ ಅರ್ಥ ಇದಕ್ಕಿಲ್ಲ.

> ಅಚೇತನಾ ಪರಾರ್ಥಾ ಸಾ ನಿತ್ಯಾ ಸತತವಿಕ್ರಿಯಾ ।
> ತ್ರಿಗುಣಾ ಕರ್ಮಿಣಾಂ ಕ್ಷೇತ್ರಂ ಪ್ರಕೃತೇ ರೂಪಮುಚ್ಯತೇ ॥

ಎಂದು ಇದನ್ನು ಹೇಳಿದೆ. ಪ್ರಕೃತಿಯಲ್ಲಿನ ಮೂರು ಗುಣಗಳಲ್ಲಿ ಸತ್ತ್ವವು ಸುಖಕ್ಕೆ ಕಾರಣವಾಗಿಯೂ, ರಾಗ ಮತ್ತು ದುಃಖಕ್ಕೆ ರಜಸ್ಸು ಕಾರಣವಾಗಿಯೂ, ಪ್ರಮಾದ ನಿದ್ರೆ ಆಲಸ್ಯಕ್ಕೆ ತಮಸ್ಸು ಕಾರಣವಾಗಿಯೂ ಇದೆ. ಪ್ರಳಯಕಾಲದಲ್ಲಿ ಪ್ರಕೃತಿ ಅವಿಭಕ್ತ ರೂಪದಲ್ಲಿರುತ್ತದೆ. ಗುಣಗಳು ಈಶ್ವರಸಂಕಲ್ಪಾನುಸಾರವಾಗಿ ಸಾಮ್ಯಾವಸ್ಥೆಯಲ್ಲಿರುತ್ತವೆ. ಇದಕ್ಕೆ ಅವ್ಯಕ್ತ, ಅಕ್ಷರ, ತಮಸ್ಸು ಎಂದು ಹೆಸರಿದೆ. ಸತ್ತ್ವರಜಸ್ತಮಸ್ಸುಗಳ ಗುಣವೈಷಮ್ಯದ ಕಾರಣ ಆಗುವ ಪರಿಣಾಮ ಸೃಷ್ಟಿ. ಈ ಮೂಲಪ್ರಕೃತಿ ಅನಂತವಾಗಿದೆ. 'ತದನಂತಮಸಂಖ್ಯಾತಂ' ಎಂದು ಇದನ್ನು ಹೇಳುವರು. ಈ ತ್ರಿಗುಣಪ್ರದೇಶದ ಆಚೆ ನಿತ್ಯವಿಭೂತಿ ಇದೆ. ಗುಣತ್ರಯಸಾಮ್ಯ ಮೂಲಪ್ರಕೃತಿಯಲ್ಲೆಲ್ಲಾ ಇದ್ದರೂ ಅಲ್ಲಿ ಸಂಭವವಿಸುವ ಪರಿಣಾಮ ವಿಶೇಷಗಳಿಗನುಸಾರವಾಗಿ ಅದನ್ನೂ ಅವಿಭಕ್ತತಮಸ್ಸು, ವಿಭಕ್ತತಮಸ್ಸು, ಅಕ್ಷರ, ಅವ್ಯಕ್ತ ಎಂದು ನಾಲ್ಕು ಭಾಗ ಮಾಡಿದೆ. ಕಣಜದಲ್ಲಿರುವ ಕಾಳಿನಂತೆ ಅವಿಭಕ್ತ ತಮಸ್ಸು. ಭೂಮಿಯ ಮೇಲೆ ಮೊಳಕೆ ಬರುವಂತಿರುವ ಕಾಳಿನಂತೆ ವಿಭಕ್ತ ತಮಸ್ಸು. ನೀರಿನಲ್ಲಿ ನೆನೆದ ಕಾಳಿನಂತೆ ಇರುವುದು ಅಕ್ಷರ. ಅಂಕುರಿಸಲು ಸಿದ್ಧವಾಗಿ ನೀರಿನಲ್ಲಿ ನೆನೆದು ಊದಿರುವ ಕಾಳಿನಂತೆ ಅವ್ಯಕ್ತ. ಮಹತ್ತತ್ತ್ವದಿಂದ ಹಿಡಿದು ಪೃಥಿವಿಯವರೆಗೆ ಆಗುವ ೨೩ ರೂಪಗಳು ವ್ಯಕ್ತವೆನಿಸುವುವು. ಸಾಂಖ್ಯರು ಹೇಳುವಂತೆ

acharya.org

ಮೂಲಪ್ರಕೃತಿಗೆ ಕ್ರಿಯಾಶಕ್ತಿಯನ್ನು ಈ ಸಿದ್ಧಾಂತ ಒಪ್ಪುವುದಿಲ್ಲ. ನ್ಯಾಯವೈಶೇಷಿಕರು ಹೇಳುವಂತೆ ಅದು ಪರಮಾಣುಪುಂಜವೂ ಅಲ್ಲ ; ವಿಶಿಷ್ಟಾದ್ವೈತಕ್ಕನುಸಾರವಾಗಿ ಪ್ರಕೃತಿ ಸತ್ಯವಾದ ಪದಾರ್ಥವಾಗಿ ಈಶ್ವರನಿಗೆ ಪ್ರಕಾರವಾಗಿದೆ. ಅದೂ ಬ್ರಹ್ಮಾತ್ಮಕವಾಗಿದೆ. ಈ ಮೂಲಪ್ರಕೃತಿ ಈಶ್ವರಸಂಕಲ್ಪಕ್ಕನುಸಾರವಾಗಿ ಮಹತ್ತತ್ತ್ವವಾಗಿ ಪರಿಣಮಿಸುವುದು. ಈ ಮಹತ್ತತ್ತ್ವವೂ ಗುಣಗಳ ಆಧಿಕ್ಯ ನ್ಯೂನತೆಗಳಿಗನುಸಾರವಾಗಿ ಸಾತ್ವಿಕ, ರಾಜಸ, ತಾಮಸ ಎಂದಿರುವುದು. ಸಾಂಖ್ಯರು ಹೇಳುವಂತೆ ಇದು ಅಧ್ಯವಸಾಯವಲ್ಲ. ಇದು ಯಥಾರ್ಥವಾದ ದ್ರವ್ಯವೊಂದರ ಯಥಾರ್ಥವಾದ ಅವಸ್ಥೆಯಾಗಿದೆ. ಈ ಮಹತ್ತತ್ತ್ವ ಈಶ್ವರಸಂಕಲ್ಪದಂತೆ ಅಹಂಕಾರವಾಗಿ ಪರಿಣಾಮ ಹೊಂದುತ್ತದೆ. ಇದೂ ಸಾತ್ವಿಕ, ರಾಜಸ ಮತ್ತು ತಾಮಸ ಎಂದು ಮೂರು ಬಗೆ. ಆತ್ಮವಲ್ಲದ ದೇಹದಲ್ಲಿ ಅಹಂಭಾವನನ್ನು ಹುಟ್ಟಿಸುವುದಕ್ಕೆ ಇದು ಕಾರಣಮಾತ್ರವಾಗುವುದರಿಂದ ಇದಕ್ಕೆ ಅಹಂಕಾರವೆಂಬ ಹೆಸರು ಕೊಡಲಾಗಿದೆ. ಗರ್ವ ಅಥವಾ ಅಹಂಕಾರ ಇದಲ್ಲ. ಆ ಅಹಂಕಾರವನ್ನು ಬಿಡಬೇಕೆಂದು ಶಾಸ್ತ್ರದಲ್ಲಿ ಉಪದೇಶಿಸಿದೆ. ಆದರೆ ಈಶ್ವರಾನುಗ್ರಹವಿಲ್ಲದೆ ಅಹಂಕಾರತತ್ವದ ಸಂಬಂಧವನ್ನು ಕಡಿದುಹಾಕುವುದಕ್ಕಾಗುವುದಿಲ್ಲ.. ಸಾತ್ವಿಕಾಹಂಕಾರವನ್ನು ವೈಕಾರಿಕವೆಂದೂ, ರಾಜಸಾಹಂಕಾರವನ್ನು ತೈಜಸವೆಂದೂ, ತಾಮಸಾಹಂಕಾರವನ್ನು ಭೂತಾದಿ ಎಂದೂ ಹೇಳುತ್ತಾರೆ ಸಾತ್ವಿಕಾಹಂಕಾರದಿಂದ ಹನ್ನೊಂದು ಇಂದ್ರಿಯಗಳು ಹುಟ್ಟುತ್ತವೆ. ತಾಮಸಾಹಂಕಾರದಿಂದ ಪಂಚಭೂತಗಳ ಸೃಷ್ಟಿ ಆಗುತ್ತದೆ. ರಾಜಸಾಹಂಕಾರ ಇವೆರಡಕ್ಕೂ ಸಹಾಯಕವಾಗಿರುತ್ತದೆ. ಇಂದ್ರಿಯಗಳು ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ಎಂದು ಎರಡು ಬಗೆ. ಅಂತರವಾದ ಜ್ಞಾನೇಂದ್ರಿಯ ಮನಸ್ಸು. ಚಕ್ಷುಸ್ಸು, ಶ್ರೋತ್ರ, ನಾಸಿಕಾ, ರಸನಾ, ತ್ವಕ್ ಎಂಬುವು ಬಾಹ್ಯೇಂದ್ರಿಯಗಳು.

ಮನಸ್ಸು ಕರ್ಮೇಂದ್ರಿಯವೆಂದು ಸಾಂಖ್ಯರ ಮತ. ಆದರೆ ಇದು ಜ್ಞಾನದ ಮೂಲಕವೇ ಕ್ರಿಯಾತ್ಮಕವಾಗಿರುವುದರಿಂದ ಇದು ಜ್ಞಾನೇಂದ್ರಿಯವೇ ಎಂದು ವಿಶಿಷ್ಟಾದ್ವೈತದ ಸಿದ್ಧಾಂತ. ಜ್ಞಾನೇಂದ್ರಿಯಗಳಿಂದ ಉಂಟಾಗುವ ಜ್ಞಾನವನ್ನು ರೂಪಿಸುವ ಇಂದ್ರಿಯ ಮನಸ್ಸು. ಸಾಂಖ್ಯರು ಅಂತಃಕರಣವನ್ನು ಅಹಂಕಾರ, ಚಿತ್ತ ಮತ್ತು ಬುದ್ಧಿ ಎಂದು ಮೂರು ಬಗೆಯಾಗಿ ವಿಭಾಗಿಸುವರು. ಈ ವಿಭಾಗವನ್ನು ಈ ದರ್ಶನ ಒಪ್ಪುವುದಿಲ್ಲ. ಒಂದೇ ಮನಸ್ಸು ಈ ಪ್ರಕಾರಗಳಲ್ಲಿಯೂ ಪ್ರವರ್ತಿಸುವುದೆಂದೂ ಅದೇ ಬಂಧನಕ್ಕಾಗಲೀ ಮೋಕ್ಷಕ್ಕಾಗಲೀ ಹೇತುವೆಂದೂ ಹೇಳಲಾಗಿದೆ. ದೇಹವೇ ಆತ್ಮವೆಂದು ತಿಳಿದಾಗ ಅದು ಅಹಂಕಾರವಾಗುತ್ತದೆ. ಏನನ್ನಾದರೂ ಅದು ಬಯಸುವ ಸಂದರ್ಭದಲ್ಲಿ ಚಿತ್ತವೆನಿಸುವುದು. ನಿತ್ಯಾನಿತ್ಯವಿವೇಕ ಮಾಡಿದಾಗ, ಸತ್ಯ ಮಿಥ್ಯೆಯನ್ನು ಪೃಥಕ್ಕರಿಸಿದಾಗ ಅದು ಬುದ್ಧಿ ಎನ್ನಿಸುವುದು. 'ಸಂಕಲ್ಪಾಧ್ಯವಸಾಯಾದಯಃ ತದ್ವ್ಯಾಪಾರಭೇದಾದೇವ

acharya.org

ಜಾಯಂತೇ ಇತಿ ನಾಂತಃಕರಣವೈವಿಧ್ಯಮ್’ ಎಂದು ಇದನ್ನು ದೇಶಿಕರು ನಿರೂಪಿಸುತ್ತಾರೆ.

ಮನಸ್ಸಿಗೆ ವಿವಿಧವಾದ ವ್ಯಾಪಾರಗಳಿರುವಂತೆ ,ಒಂದೇ ಇಂದ್ರಿಯ ವೃತ್ತಿಭೇದದಿಂದ ಬಗೆಬಗೆಯಾಗಿ ವ್ಯಾಪಾರ ಮಾಡುತ್ತಿದೆ ಎಂದು ಹೇಳುವ ಏಕೇಂದ್ರಿಯವಾದ ಅನುಭವ ಮತ್ತು ಶ್ರುತಿಗಳಿಗೆ ವಿರೋಧವಾಗಿರುವ ಕಾರಣ ನಿರಾಕೃತವಾಗಿದೆ. ಶರೀರವೇ ಇಂದ್ರಿಯದ ರೂಪವನ್ನು ಹೊಂದಲಿ ಎಂದು ಹೇಳುವುದಕ್ಕಾಗದು. ಶರೀರಕ್ಕೂ ಇಂದ್ರಿಯಗಳಿಗೂ ಭೇದ ಹೇಳಲಾಗಿದೆ. ಶರೀರ ಭೌತಿಕವಾದರೆ ಇಂದ್ರಿಯಗಳು ಅಹಂಕಾರದಿಂದ ಹುಟ್ಟಿದವು.

ಕೆಲವರು ಮನಸ್ಸು ನಿತ್ಯವೆನ್ನುವರು. ಮನಸ್ಸು ಸಾತ್ವಿಕಾಹಂಕಾರಜನ್ಯವಾದ ಕಾರಣ ಅದು ನಿತ್ಯವಲ್ಲವೆಂದು ಈ ದರ್ಶನ ಸಾರುತ್ತದೆ. ಮನಸ್ಸು ವಿಭು ಎಂಬುದನ್ನೂ ಈ ಸಿದ್ಧಾಂತ ಅಂಗೀಕರಿಸುವುದಿಲ್ಲ. ಈ ಇಂದ್ರಿಯಗಳು ಬಹಳ ಸೂಕ್ಷ್ಮವಾದವು. ದೇಹದಿಂದ ಆತ್ಮ ನಿರ್ಗಮಿಸಿದಾಗ ಈ ಇಂದ್ರಿಯಗಳೂ ಸೂಕ್ಷ್ಮರೂಪದಲ್ಲಿ ಆತ್ಮನೊಡನೇ ಹೋಗುತ್ತವೆಂದು ಹೇಳಿದೆ. ಈ ಇಂದ್ರಿಯಗಳೆಲ್ಲಾ ಸಮನಾಗಿ ಉಪಕರಣಗಳಾದ ಕಾರಣ ‘ಸಮಾಃ’ ಎಂದು ಹೇಳಿದೆ. ಇಂದ್ರಿಯಗಳ ವೃತ್ತಿಗಳು ಅನೇಕವಾಗಿರುವ ಕಾರಣ ಇವುಗಳನ್ನು ‘ಅನಂತಾಃ’ ಎಂದು ಹೇಳಿದೆ. ಇವುಗಳ ವ್ಯಾಪಕತ್ವವನ್ನು ‘ಸಮಾಃ’, ‘ಅನಂತಾ’ಃ ಎಂಬ ಶಬ್ದಗಳು ಸೂಚಿಸುವುದಿಲ್ಲ. ಈ ಇಂದ್ರಿಯಗಳು ಈಶ್ವರಸಂಕಲ್ಪಕ್ಕನುಸಾರವಾಗಿ ವಿಚಿತ್ರವಾಗಿ ಪರಿಣಮಿಸಿ ಜೀವರುಗಳ ಕರ್ಮಾನುಸಾರ ಅವರೊಡನೆ ಸಂಬಂಧವನ್ನು ಹೊಂದುವುವು. ಇಂದ್ರಿಯಗಳು ಸ್ವರೂಪತಃ ದೋಷವಿಶಿಷ್ಟವಾದವಲ್ಲ. ಆದರೆ ಅವು ಎಲ್ಲಿ ಆಶ್ರಯವನ್ನು ಪಡೆಯುವುವೋ ಅವುಗಳ ದೋಷವನ್ನು ಇವೂ ಹೊಂದುವುವು. ಜೀವರುಗಳ ಅದೃಷ್ಟವಿಶೇಷಕ್ಕನುಸಾರವಾಗಿ ಇಂದ್ರಿಯಗಳು ಪಟುಗಳಾಗಿಯೂ ಜಡವಾಗಿಯೂ ಆಗುತ್ತವೆ. ಜೀವರುಗಳು ತಮ್ಮೊಡನೆ ಸಂಬಂಧಿಸಿರುವ ಇಂದ್ರಿಯಗಳ ದ್ವಾರಾ ಸುಖದುಃಖಗಳ ಅನುಭವವನ್ನು ಹೊಂದಿರುತ್ತಾರೆ. ಈ ಇಂದ್ರಿಯಗಳಿಗೆ ಆಪ್ಯಾಯಕವಾದ ಪಾಂಚಭೌತಿಕಾಂಶಗಳು (ಶರೀರ ನಾಶದ ಕಾಲದಲ್ಲಿ) ಶರೀರವನ್ನು ಬಿಟ್ಟುಬಿಟ್ಟಾಗ ಈ ಇಂದ್ರಿಯಗಳ ಶಕ್ತಿ ಕುಂಠಿತವಾಗುತ್ತದೆ. ಮತ್ತೊಂದು ಶರೀರವನ್ನು ಸೇರಿದಾಗ ಅವು ಮತ್ತೆ ಶಕ್ತಿಯುಕ್ತವಾಗುತ್ತವೆ. ಹೀಗೆ ಈ ಹನ್ನೊಂದು ಇಂದ್ರಿಯಗಳೂ ಶರೀರದಿಂದ ಶರೀರಕ್ಕೆ ಆತ್ಮನೊಡನೆ ಅನುವರ್ತಿಸುತ್ತವೆ.

ಶರೀರದೊಡನೆ ಇಂದ್ರಿಯಗಳು ಹುಟ್ಟಿ ಆ ಶರೀರದೊಡನೇ ನಾಶವಾಗುವುವೆಂದೂ ಕೆಲವರು ವಾದಿಸುತ್ತಾರೆ. ಆದರೆ ಈ ಅಭಿಪ್ರಾಯವನ್ನು ಈ ಸಿದ್ಧಾಂತ ಒಪ್ಪುವುದಿಲ್ಲ. ಶರೀರ ನಾಶವಾದಾಗಲೆಲ್ಲಾ ಅಹಂಕಾರತತ್ವ ನಾಶವಾಗದ ಕಾರಣ ಆ ಅಹಂಕಾರದಿಂದ ಜನ್ಯವಾದ ಇಂದ್ರಿಯಗಳು ನಾಶವಾಗುವುದಿಲ್ಲವೆಂಬುದು ಇವರ ಅಭಿಪ್ರಾಯ. ಪ್ರಲಯ

acharya.org

ಕಾಲದವರೆಗೂ ಹೀಗೆಯೇ ಅವು ಇರುವುವೆಂದು ಹೇಳಲಾಗಿದೆ. ಈ ಹನ್ನೊಂದು ಇಂದ್ರಿಯಗಳೂ ಅನುಗ್ರಾಹಕವಾಗಿ ಬಗೆಬಗೆಯ ಜ್ಞಾನವನ್ನುಂಟುಮಾಡಿಕೊಡುತ್ತವೆ. ಜೀವಾತ್ಮನಿಗೆ ವಿಶೇಷಣವಾದ ಧರ್ಮಭೂತಜ್ಞಾನವು ಇಂದ್ರಿಯಗಳ ಮೂಲಕ ಪ್ರವಹಿಸಿ ಸಂಬಂಧಪಟ್ಟ ವಿಷಯಗಳನ್ನು ಪ್ರಕಾಶಪಡಿಸುತ್ತದೆ. ಜ್ಞಾನವಿಷಯವಾದ ಪದಾರ್ಥಗಳನ್ನು ಇಂದ್ರಿಯಗಳೇ ಪ್ರಕಾಶಪಡಿಸುವುದಿಲ್ಲ. ಧರ್ಮಭೂತಜ್ಞಾನ ಈ ಪ್ರಕಾಶಕತ್ವವನ್ನು ಹೊಂದಿದೆ.

> 'ಜ್ಞಾನಮೇವ ಹಿ ಸರ್ವಸ್ಯ ಪ್ರಕಾಶಕಂ। ಬಾಹ್ಯಾನಿ ತು
> ಜ್ಯೋತೀಂಷಿ ವಿಷಯೇಂದ್ರಿಯಸಂಬಂಧವಿರೋಧಿತಮೋನಿರಸನ-
> ದ್ವಾರೇಣ ಉಪಕಾರಕಾಣಿ' (ಗೀ. ಭಾ. 15-6)

ಎಂದು ರಾಮಾನುಜರು ಈ ಅಂಶವನ್ನು ಹೇಳಿದ್ದಾರೆ.

ತನ್ಮಾತ್ರೆಗಳು ಪಂಚಭೂತಗಳ ಪೂರ್ವಾವಸ್ಥೆಯನ್ನುಳ್ಳ ಸೂಕ್ಷ್ಮದ್ರವ್ಯವಾಗಿವೆ. 'ಭೂತಾನಾಂ ಅವ್ಯವಹಿತಸೂಕ್ಷ್ಮಾವಸ್ಥಾವಿಶಿಷ್ಟಂ ದ್ರವ್ಯಂ ತನ್ಮಾತ್ರಂ' ಎಂದು ದೇಶಿಕರು ಹೇಳುತ್ತಾರೆ. ಅಹಂಕಾರದ್ರವ್ಯಕ್ಕೂ ಪಂಚಭೂತಗಳಿಗೂ ನಡುವಣ ಅವಸ್ಥೆ ತನ್ಮಾತ್ರೆ. ಅಹಂಕಾರತ್ವಾವಸ್ಥೆಗೂ ಭೂತತ್ವಾವಸ್ಥೆಗೂ ಮಧ್ಯದ ಸ್ಥಿತಿ ತನ್ಮಾತ್ರೆಯಾಗಿದೆ. ಇದು ಭೂತಗಳಿಗೆ ಉಪಾದಾನಕಾರಣವಾಗಿದೆ. ಭೂತಗಳು ಶಬ್ದ ಮೊದಲಾದ ಗುಣಗಳಿಗೆ ಆಶ್ರಯವಾಗಿರುವ ಉತ್ಕಟಾವಸ್ಥೆಯನ್ನುಳ್ಳ ದ್ರವ್ಯ. ಇವುಗಳಿಗೆ ಶಾಂತತ್ವ ಘೋರತ್ವ ಮತ್ತು ಮೂಢತ್ವ ಎಂದು ಮೂರು ದೆಶೆಗಳಿವೆ. ತಿಳಿಯಲನುಕೂಲವಾಗಿರುವಿಕೆ ಶಾಂತತ್ವ. ತದ್ವಿರುದ್ಧವಾಗಿರುವಿಕೆ ಘೋರತ್ವ. ಇವೆರಡೂ ಇಲ್ಲದಿರುವಿಕೆ ಮೂಢತ್ವ. ಈ ಅವಸ್ಥೆಗಳು ಪಂಚಭೂತಗಳಿಗಿವೆಯೇ ವಿನಾ ತನ್ಮಾತ್ರೆಗಳಿಗಿಲ್ಲ.

ತನ್ಮಾತ್ರೆಗಳೂ ಮಹಾಭೂತಗಳೂ ಐದು ವಿಧವಾಗಿವೆ. ಇವು ಶಬ್ದ, ಸ್ಪರ್ಶ. ರೂಪ, ರಸ, ಗಂಧತನ್ಮಾತ್ರೆಗಳೆಂದೂ ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವೀ ಎಂದೂ ಪ್ರಸಿದ್ಧವಾಗಿವೆ.

ಪಂಚಭೂತಗಳ ಮತ್ತು ತನ್ಮಾತ್ರೆಗಳ ವಿಕಾಸ ಕೆಳಗೆ ಕಂಡಂತೆ ಆಗುತ್ತದೆ :

ತಾಮಸಾಹಂಕಾರದಿಂದ—ಶಬ್ದ ತನ್ಮಾತ್ರೆ
ಶಬ್ದ ತನ್ಮಾತ್ರೆಯಿಂದ—ಆಕಾಶ
ಆಕಾಶದಿಂದ—ಸ್ಪರ್ಶತನ್ಮಾತ್ರೆ
ಸ್ಪರ್ಶತನ್ಮಾತ್ರೆಯಿಂದ—ವಾಯು
ವಾಯುವಿನಿಂದ—ರೂಪತನ್ಮಾತ್ರೆ
ರೂಪ ತನ್ಮಾತ್ರೆಯಿಂದ—ತೇಜಸ್ಸು
ತೇಜಸ್ಸಿನಿಂದ—ರಸ ತನ್ಮಾತ್ರೆ

acharya.org

ರಸ ತನ್ಮಾತ್ರೆಯಿಂದ—ಜಲ
ಜಲದಿಂದ— ಗಂಧತನ್ಮಾತ್ರೆ
ಗಂಧತನ್ಮಾತ್ರೆಯಿಂದ—ಪೃಥ್ವೀ

ಈ ಸೃಷ್ಟಿಕ್ರಮ ಶ್ರುತಿಯಲ್ಲಿ 'ಆಕಾಶಾದ್ವಾಯುಃ। ವಾಯೋರಗ್ನಿಃ। ಅಗ್ನೇರಾಪಃ। ಅದ್ಭ್ಯಃ ಪೃಥಿವೀ !' ಎಂದು ಹೇಳಿರುವುದಕ್ಕೆ ಅನುಗುಣವಾಗಿದೆ. ಪಾಂಚರಾತ್ರಾಗಮದಲ್ಲಿಯೂ ವಿಷ್ಣುಪುರಾಣದಲ್ಲಿಯೂ ಹೇಳಿರುವ ಕ್ರಮಕ್ಕೆ ಇದು ಸರಿ ಹೋಗುತ್ತದೆ. ಆದುದರಿಂದ ಈ ದರ್ಶನ ಸಾಂಖ್ಯರು ಹೇಳುವಂತೆ ತಾಮಸಾಹಂಕಾರದಿಂದ ಶಬ್ದ ಸ್ಪರ್ಶ ರೂಪ ರಸ ಗಂಧವೆಂಬ ಐದು ತನ್ಮಾತ್ರೆಗಳ ಸೃಷ್ಟಿಯನ್ನೂ , ಮುಂದೆ ಶಬ್ದ ತನ್ಮಾತ್ರೆಯಿಂದ ಆಕಾಶದ ಸೃಷ್ಟಿಯನ್ನು ಮುಂದೆ ಕ್ರಮವಾಗಿ ಮತ್ತಿತರ ತನ್ಮಾತ್ರೆಗಳಿಂದ ಪೂರ್ವಪೂರ್ವ ತನ್ಮಾತ್ರೆಗಳ ಸಹಕಾರದಿಂದ ಮುಂದಿನ ತತ್ವಗಳ ಸೃಷ್ಟಿಯನ್ನೂ ಅಂಗೀಕರಿಸುವುದಿಲ್ಲ.

ಆಕಾಶ

ತಾಮಸಾಹಂಕಾರದಿಂದ ಶಬ್ದತನ್ಮಾತ್ರೆಯೂ ಆ ಶಬ್ದತನ್ಮಾತ್ರೆಯಿಂದ ಆಕಾಶವೂ ಉತ್ಪನ್ನವಾಗುವುದೆಂದು ಹೇಳಲಾಯಿತು. ಆಕಾಶದ ಸ್ವರೂಪವನ್ನು ಈಗ ಸೂಕ್ಷ್ಮವಾಗಿ ವಿವೇಚಿಸೋಣ. ಅಸ್ಪರ್ಶತ್ವವನ್ನು ಹೊಂದಿದ್ದು ವಿಶಿಷ್ಟವಾದ ಶಬ್ದಕ್ಕೆ ಆಧಾರವಾಗಿದ್ದು ಶ್ರೋತ್ರಾಪ್ಯಾಯಿಕತ್ವವನ್ನು ಹೊಂದಿರುವುದು ಆಕಾಶ. ಇದು ಅವಕಾಶ ಪ್ರದಾನಾದಿಗಳಿಂದ ಸಹಾಯಮಾಡುತ್ತಿದೆ. ಎರಡು ಪದಾರ್ಥಗಳಿಗೆ ನಡುವೆ ಇದ್ದು ಅವುಗಳ ಸಂಘರ್ಷವಾಗದಂತೆಯೂ ಅವುಗಳು ಸುಕರವಾಗಿ ಚಲಿಸುವಂತೆಯೂ ಆಕಾಶ ಅವಕಾಶವನ್ನು ನೀಡುತ್ತದೆ. ಆಕಾಶಕ್ಕೆ ಉತ್ಪತ್ತಿಯಾಗಲೀ ನಾಶವಾಗಲೀ ಇಲ್ಲವೆಂದೂ ಅದೂ ಆತ್ಮನಂತೆಯೇ ನಿತ್ಯವಾದುದೆಂದೂ ನಯ್ಯಾಯಿಕರು ಹೇಳುತ್ತಾರೆ. ಇದನ್ನು ವೇದಾಂತಿಗಳು ಒಪ್ಪುವುದಿಲ್ಲ. ಆಕಾಶದ ಉತ್ಪತ್ತಿಯನ್ನು ಶ್ರುತಿ ಹೇಳುತ್ತಿದೆ—'ತಸ್ಮಾದ್ವಾ ಏತಸ್ಮಾತ್ ಆತ್ಮನ ಆಕಾಶಸ್ಸಂಭೂತಃ' ಎಂದು. ಆಕಾಶ ಆದಕಾರಣ ನಿತ್ಯವೂ ಅಲ್ಲ ; ವ್ಯಾಪಿಯೂ ಅಲ್ಲ. ಆಕಾಶವು ಪ್ರತ್ಯಕ್ಷಗೋಚರವೂ ಹೌದು. ಆಕಾಶವು ನೀಲವಾಗಿದೆ ಎಂದು ಗೊತ್ತಾಗುತ್ತದೆ. ಹಕ್ಕಿಗಳು ಅಲ್ಲಿ ಹಾರಾಡುತ್ತವೆ. ಒಂದು ಕಡೆ ಒಂದು ಬಾವಿ ಇದೆ. ಪಂಚೀಕರಣದ ಕಾರಣ ಆಕಾಶಾದಿಗಳಿಗೂ ರೂಪವಿದೆ. ರೂಪವಿಲ್ಲದಿದ್ದರೂ ಕಾಲದಂತೆ ಪ್ರತ್ಯಕ್ಷ ಗೋಚರವಾಗಲಿಕ್ಕೆ ಅಡ್ಡಿಯಿಲ್ಲ. ಬೇರೆ ಬೇರೆ ದಿಕ್ಕುಗಳ ಭಾಗಗಳು ಆಕಾಶದಲ್ಲಿಯೇ ಅಂತರ್ಭಾವವನ್ನು ಹೊಂದುತ್ತವೆ. ಆಕಾಶವು ಭಾವಪದಾರ್ಥವಾಗಿ ಗೋಚರವಾಗುವುದರಿಂದಲೇ ಇದು ಕೇವಲ ಆವರಣಾಭಾವವೆಂಬ ಬೌದ್ಧಾದಿಗಳ ವಾದವೂ ಸರಿಯಲ್ಲ. 'ಷದ್ರೂಪೇಣೈವ ಭಾನಾನ್ನ ಭವತಿ ವರಣಾಭಾವಮಾತ್ರಂ

acharya.org

ವಿಹಾಯಃ' ಎಂದು ದೇಶಿಕರು ತತ್ತ್ವಮುಕ್ತಾಕಲಾಪದಲ್ಲಿ (೧–೪೬) ಇದನ್ನು ನಿರೂಪಿಸಿದ್ದಾರೆ.

ಈ ಆಕಾಶದಿಂದ ಸ್ಪರ್ಶತನ್ಮಾತ್ರೆಯೂ ಅದರಿಂದ ವಾಯುವೂ ಉತ್ಪನ್ನವಾಗುತ್ತದೆ. ವಾಯುವಿಗೆ ರೂಪವಿಲ್ಲದ ಕಾರಣ ಸ್ಪರ್ಶಗೋಚರವಾಗುವುದಿಲ್ಲವೆಂಬುದು ನೈಯ್ಯಾಯಿಕರ ಮತ. ಆದರೆ ಇದು ಸರಿಯಲ್ಲವೆಂಬುದು ಎಲ್ಲರಿಗೂ ಪ್ರತ್ಯಕ್ಷವಾಗಿದೆ. ವಾಯು ಬೀಸಿದಾಗ ನಮಗೆ ನೇರವಾಗಿ ಸ್ಪರ್ಶದಿಂದಲೇ ಗೊತ್ತಾಗುತ್ತದೆ. ಸ್ಪರ್ಶದಿಂದ ನಾವು ವಾಯುವನ್ನು ಅನುಮಾನ ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ಏಕೆಂದರೆ ಗಂಧದಂತೆಯೇ ಸ್ಪರ್ಶಗುಣವೂ ಸ್ವತಂತ್ರವಾಗಿರಲಾರದು. ಆದುದರಿಂದ ಇತರ ಇಂದ್ರಿಯಗಳು ಗ್ರಹಿಸುವ ಗುಣಗಳನ್ನು ಹೊಂದಿರದಿದ್ದರೂ ವಾಯುವು ಸ್ಪರ್ಶೇಂದ್ರಿಯಕ್ಕೆ ಪ್ರತ್ಯಕ್ಷವಾಗಿ ಗೋಚರವಾಗುವುದು. ತಿರ್ಯಗ್ಗಮನ ವಾಯುವಿನ ಲಕ್ಷಣ. ಮತ್ತೇನಾದರೂ ಪ್ರತಿಬಂಧಕ ಉಂಟಾದಾಗ ಬೇರೆ ಕಡೆ ಗಮನವಾಗುತ್ತದೆ. ವಾಯು ಬೇರೆಬೇರೆಯಾಗಿ ಅನೇಕವಾಗಿದೆ. 'ಏತೇನ ವಾಯೋರ್ನಾನಾತ್ವಮಪಿ ಸಿದ್ಧಮ್' ಎಂದು ನ್ಯಾಯಸಿದ್ಧಾಂಜನದಲ್ಲಿ ದೇಶಿಕರು ಇದನ್ನು ಹೇಳುತ್ತಾರೆ. ಎಲ್ಲ ಕಡೆಯಿಂದಲೂ ಅಡ್ಡಿಗಳೊದಗಿದಾಗ ವಾಯು 'ಸ್ತಂಭೀಭಾವ'ವನ್ನು ಹೊಂದುತ್ತದೆ. ವಾಯುವು ಮನುಷ್ಯರಿಗೆ ನಾಲ್ಕು ಬಗೆಯಾಗಿ ಉಪಕಾರ ಮಾಡುತ್ತಿದೆ. ಮೊದಲಾಗಿ ಚರ್ಮೇಂದ್ರಿಯಕ್ಕೆ ಸೇರಿದಂತೆ ಇರುತ್ತಾ ಇದು ಉಪಕಾರಕವಾಗಿದೆ. ವಾಯು ಪ್ರಾಣಗಳ ರೂಪವನ್ನು ಧರಿಸಿ ಎಲ್ಲ ಜೀವಿಗಳೂ ಜೀವಿಸುವಂತೆ ಸಹಾಯ ಮಾಡುತ್ತದೆ. ಪ್ರಾಣಗಳಿಗಿಂತ ಬೇರೆಯಾದ ಶುದ್ಧವಾದ ವಾಯು ಇತರ ಭೂತಗಳೊಡನೆ ಸೇರಿ ವಾಯುಶರೀರಕ್ಕೆ ಉಪಾದಾನಕಾರಣವಾಗುತ್ತದೆ. ವಾಯುಲೋಕದಲ್ಲಿ ಇಂಥ ಶರೀರಗಳಿವೆಯೆಂದು ಹೇಳಿದೆ. ನಾಲ್ಕನೆಯ ರೂಪ ವಿಷಯವಾಯು ಎಂಬುದು. ಭಯಂಕರವಾದ ಬಿರುಗಾಳಿಗಳು ತಾಲವೃಂತಪವನಾದಿಗಳು ಇವು. ಹೀಗೆ ವಾಯುವು ತ್ವಗಿಂದ್ರಿಯಾಪ್ಯಾಯಕ, ಪ್ರಾಣ, ಶರೀರ ಮತ್ತು ವಿಷಯವಾಯು ಎಂಬ ನಾಲ್ಕು ರೂಪದಲ್ಲಿ ಮಾನವಕೋಟಿಗೆ, ಉಪಕಾರಕವಾಗಿದೆ.

ಪ್ರಾಣ

ಪ್ರಾಣವೆಂಬುದು ಒಂದು ಬಗೆಯ ವಾಯುವಿಶೇಷವೇ ವಿನಾ ಗಾಳಿಯಲ್ಲ. ವಾಯುವಿನ ಜೊತೆಗೆ ಪ್ರಾಣವನ್ನೂ ಸೇರಿಸಿ ಶ್ರುತಿಯು 'ಏತಸ್ಮಾಜ್ಜಾಯತೇ ಪ್ರಾಣೋ ಮನಸ್ಸರ್ವೇಂದ್ರಿಯಾಣಿ ಚ । ಖಂ ವಾಯುರ್ಜ್ಯೋತಿರಾಪಃ' ಎಂದು ಉಲ್ಲೇಖಿಸಿ ಸಾಮಾನ್ಯವಾಯುವಿಗಿಂತ ಪ್ರಾಣವು ಬೇರೆ ಎಂಬುದನ್ನು ತೋರಿಸುತ್ತದೆ. ಪ್ರಾಣವೂ ಒಂದು ದ್ರವ್ಯ. ಆದಕಾರಣ ವಾಯುವಿನ ಕ್ರಿಯೆಯಲ್ಲ. ವಾಯುವಿಗಿಂತ ಅತ್ಯಂತ

acharya.org

ಭಿನ್ನವಾದ ದ್ರವ್ಯವೂ ಇದಲ್ಲ. ಇದಕ್ಕೂ ಪ್ರಾಣವಾಯು ಎಂದೇ ಹೆಸರಿದೆ. ಶರೀರಕ್ಕಿಂತ ಪ್ರಾಣವಾಯು ಭಿನ್ನವಾದುದು. ಇದು ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ, ದೇವದತ್ತ ಮತ್ತು ಧನಂಜಯ ಎಂದು ಹತ್ತು ಬಗೆಯಾಗಿದೆ. ಇದನ್ನರಿಯಬೇಕೆಂದೇ ಯೋಗಶಾಸ್ತ್ರ ಹೇಳುತ್ತದೆ. ಅಪಾನ, ವ್ಯಾನ, ಉದಾನ ಮತ್ತು ಸಮಾನಗಳು ಒಂದೇ ಪ್ರಾಣದ ಬೇರೆ ಬೇರೆ ವೃತ್ತಿಗಳೆಂದೂ ಮಹಾ ಪ್ರಾಣವು ಪಂಚಭೂತಗಳಲ್ಲಿ ಎರಡನೆಯ ವಾಯುವಾಗಲೀ ಅಥವಾ ಅದರ ಸ್ಪಂದ ರೂಪ ಕ್ರಿಯೆಯಾಗಲೀ ಆಗಿಲ್ಲವೆಂದೂ ಬ್ರಹ್ಮಸೂತ್ರಕಾರರು ಸಮರ್ಥಿಸಿದ್ದಾರೆ. (II-4-11), (II-4-8).

ಈ ಪ್ರಾಣವಾಯು ಶರೀರ, ಇಂದ್ರಿಯಗಳನ್ನು ಧರಿಸಿ ಎಲ್ಲ ಜೀವಿಗಳಿಗೂ ಉಪಕಾರಕವಾಗಿದೆ. ಚಲಿಸುವ ಪದಾರ್ಥಗಳಲ್ಲಿ ಹೇಗೋ ಹಾಗೆ ಸ್ಥಾವರಗಳಾದ ವೃಕ್ಷಾದಿಗಳಲ್ಲಿಯೂ ಈ ಪ್ರಾಣವಾಯು ಇದೆ. ಇಲ್ಲದಿದ್ದರೆ ವೃಕ್ಷ ನೀರನ್ನು ಹೀರಿ ವಿವಿಧ ಭಾಗಗಳಿಗೆ ಒಯ್ಯುತ್ತಿರಲಿಲ್ಲ. ಆದರೆ ಸ್ಥಾವರ ಶರೀರಗಳಲ್ಲಿಯೂ ವಾಯು ತನ್ನ ಪಂಚ ರೂಪದಲ್ಲಿರುವುದಿಲ್ಲ. ಈ ಪ್ರಾಣವಾಯುವನ್ನೇ ರೇಚಕ, ಪೂರಕ, ಕುಂಭಕಗಳಿಂದ ಸ್ವಾಧೀನಪಡಿಸಬೇಕೆಂದು ಅಷ್ಟಾಂಗಯೋಗದ ಪ್ರಾಣಾಯಾಮದ ಅಂಶ ಹೇಳುತ್ತದೆ.

ವಾಯುವಿನಿಂದ ರೂಪತನ್ಮಾತ್ರೆಯೂ ಅದರಿಂದ ತೇಜಸ್ಸೂ ಉತ್ಪನ್ನವಾಗುವುವು. 'ವಾಯೋರಗ್ನಿಃ' ಎಂದು ಹೇಳಿರುವುದು ತೇಜಸ್ಸಿಗೇ ಅನ್ವಯಿಸುತ್ತದೆ. ಲಯ ಪ್ರಕರಣದಲ್ಲಿ ತೇಜಸ್ಸು ವಾಯುವಿನಲ್ಲಿ ಏಕೀಭವಿಸುವುದೆಂದು ಹೇಳಿರುವುದು ಇದನ್ನೇ ಸಮರ್ಥಿಸುತ್ತದೆ. ಅನೇಕ ಪದಾರ್ಥಗಳಲ್ಲಿ ಗೂಢವಾಗಿರುವ ತೇಜಸ್ಸಿನ ಅಂಶಗಳು ಅನುಕೂಲ ಪರಿಸ್ಥಿತಿ ಒದಗಿದಾಗ ಬಾಹ್ಯಾಗ್ನಿಯ ರೂಪವನ್ನು ಹೊಂದುತ್ತವೆ. ಸಮಷ್ಟಿಸೃಷ್ಟಿಯ ಕಾಲದಲ್ಲಿ ತೇಜಸ್ಸಿಗೆ ವಾಯುವೇ ಉಪಾದಾನಕಾರಣವಾಗಿರುತ್ತದೆಂದು ತಿಳಿಯಬೇಕು. ಉಷ್ಣಸ್ಪರ್ಶತ್ವ, ಭಾಸ್ವರರೂಪತ್ವ ಮೊದಲಾದುವನ್ನು ಹೊಂದಿರುವುದು ತೇಜಸ್ಸಿನ ಲಕ್ಷಣ. ಕತ್ತಲೆಯನ್ನುಳಿದು ಉಳಿದ ಪದಾರ್ಥಗಳ ಪ್ರಕಾಶಕ್ಕೆ ಇದು ಅವಶ್ಯಕ. ಬೆಳಕಿನ ಸಹಾಯವಿಲ್ಲದೆಯೇ ಕತ್ತಲೆ ಗೋಚರಿಸುತ್ತದೆ. ಸೂಕ್ಷ್ಮ ಪದಾರ್ಥಗಳನ್ನು ಗ್ರಹಿಸಲು ಪ್ರಖರವಾದ ಬೆಳಕು ಅವಶ್ಯಕ. ಪದಾರ್ಥಗಳನ್ನು ಗ್ರಹಿಸಲು ಸಹಾಯ ಮಾಡುವ ತೇಜಸ್ಸು ಇಂದ್ರಿಯಾಪ್ಯಾಯಕವಾದ ತೇಜಸ್ಸಿಗಿಂತ ಬೇರೆಯಾದುದು. ನೇತ್ರವು ಪಟುವಾಗಿರುವವರೆಗೆ ಈ ಇಂದ್ರಿಯಾಪ್ಯಾಯಕವಾದ ತೇಜಸ್ಸು ಕಣ್ಣಿನಲ್ಲಿರುವುದು, ಕತ್ತಲೆಯಲ್ಲಿ ಇದರಿಂದಲೇ ಪದಾರ್ಥಗ್ರಹಣ ಸಾಧ್ಯವಾಗುವುದಿಲ್ಲ. ಆದುದರಿಂದ ಅದಕ್ಕಿಂತ ಬೇರೆಯಾದ ತೇಜಸ್ಸು ಅವಶ್ಯಕ. ಈ ತೇಜಸ್ಸೂ ಸಹ (೧) ಇಂದ್ರಿಯಾಪ್ಯಾಯಕ (೨) ವೈಶ್ವಾನರ (೩) ಶರೀರ ಮತ್ತು (೪) ವಿಷಯ ಎಂದು ನಾಲ್ಕು ಬಗೆಯಾಗಿರುವುದು. ಕಣ್ಣಿನಲ್ಲಿರುವ ಶಕ್ತಿ ಇಂದ್ರಿಯಾಪ್ಯಾಯಕ

acharya.org

ತೇಜಸ್ಸು. ಶರೀರದೊಳಗಿರುತ್ತಾ ಆಹಾರಪಚನಕ್ಕೆ ಸಹಾಯವೆಸಗುವುದು ವೈಶ್ವಾನರ ತೇಜಸ್ಸು. ಶರೀರಭೂತವಾದ ತೇಜಸ್ಸಾದರೋ ಇತರ ನಾಲ್ಕು ಭೂತಗಳೊಡನೆ ಸೇರಿ ಶರೀರಕ್ಕೆ ಉಪಾದಾನಕಾರಣವಾಗಿದೆ. ತೇಜೋಲೋಕದಲ್ಲಿರುವ ಸೂರ್ಯ, ಅಗ್ನಿಗಳು ತೇಜಸ್ಸಿನ ಶರೀರರೂಪಗಳಾಗಿವೆ. ವಿಷಯತೇಜಸ್ಸು ಸೂರ್ಯನ ಪ್ರಕಾಶ, ವಿದ್ಯುತ್ತು ಭೌಮ್ಯಾಗ್ನಿ, ಚಂದ್ರನ ಬೆಳಕು ಮೊದಲಾದುವು ಆಗಿವೆ.

ದೀಪ ಮತ್ತು ಪ್ರಕಾಶದ ವಿಚಾರ ಇಲ್ಲಿ ವಿವೇಚಿಸಬೇಕು. ತೇಜಸ್ಸು ಪ್ರಭೆ ಮತ್ತು ಪ್ರಭಾವತ್ ಎಂದು ಎರಡು ಬಗೆ. ಆವರಣಭೇದಕ್ಕನುಗುಣವಾಗಿ ವಿಕಾಸವನ್ನೋ ಸಂಕೋಚವನ್ನೋ ಹೊಂದುವುದಾಗಿ ಅಧಿಷ್ಠಾನದ ಶಕ್ತಿ ಮತ್ತು ವೇಗಕ್ಕನುಸಾರವಾಗಿ ದೂರ ಅಥವಾ ಸಮೀಪದಲ್ಲಿ ಹರಡುವ ದ್ರವ್ಯವಿಶೇಷವು ಪ್ರಭೆ. ಇದು ಅದರ ಆಶ್ರಯದೊಡನೆಯೇ ಉತ್ಪನ್ನವಾಗುತ್ತದೆ. ಹಾಗೂ ನಾಶವಾಗುತ್ತದೆ. ಇದು ಮೂಲದಲ್ಲಿ ಸೂಕ್ಷ್ಮವಾಗಿದ್ದು ಹರಡಿಕೊಂಡಂತೆಲ್ಲಾ ವಿಸ್ತಾರವನ್ನು ಹೊಂದುತ್ತದೆ. ಪ್ರಭೆಯು ಪ್ರಭಾವತ್ ದ್ರವ್ಯದ ಭಾಗಗಳಾಗಲೀ ಅವಯವಗಳಾಗಲೀ ಅಲ್ಲ. ಪ್ರಭಾವತ್ ದ್ರವ್ಯಕ್ಕಿಂತ ಬೇರೆಯಾದುದೂ. ಆದರೆ ಆ ಆಶ್ರಯದಲ್ಲಿರುವುದೂ ಆದ ನಿಜವಾದ ದ್ರವ್ಯ ಪ್ರಭೆ.

ಈ ತೇಜಸ್ಸಿನಿಂದ ರಸತನ್ಮಾತ್ರೆಯೂ ಅದರಿಂದ ಜಲವೂ ಉತ್ಪನ್ನವಾಗುತ್ತದೆ. ಶೀತಸ್ಪರ್ಶವತ್ತ್ವ ಜಲದ ವಿಶಿಷ್ಟ ಲಕ್ಷಣ. ಬೇರೆ ಬೇರೆ ಆಶ್ರಯಗಳ ಸಂಪರ್ಕಕ್ಕನುಸಾರ ಇದು ಬೇರೆ ಬೇರೆ ವರ್ಣಗಳನ್ನೂ ರುಚಿಯನ್ನೂ ಶಾಖಗಳನ್ನೂ ಹೊಂದುತ್ತದೆ. ಜಲದ ಸ್ವಭಾವ ದ್ರವತ್ತ್ವ. ಇದು ಪ್ರಾಣಕ್ಕೆ ಆಪ್ಯಾಯಕವಾದುದು. ರಸನೆಯಿಂದ ಇದು ಗ್ರಹಿಸಲ್ಪಡುತ್ತದೆ. ವರುಣಲೋಕಾದಿಗಳಲ್ಲಿ ಜಲಶರೀರಗಳಿವೆ. ನದಿಗಳು, ಸಾಗರಗಳು ವಿಷಯಜಲವಾಗಿವೆ. ಹೀಗೆ ಇದು ಪ್ರಾಣಾಪ್ಯಾಯಕ, ರಸನಾಪ್ಯಾಯಕ ಶರೀರ, ವಿಷಯ ಎಂದು ನಾಲ್ಕು ಬಗೆಯಾಗಿರುತ್ತದೆ.

ಈ ಜಲತತ್ತ್ವದಿಂದ ಗಂಧತನ್ಮಾತ್ರೆಯೂ ಅದರಿಂದ ಪೃಥ್ವಿಯೂ ಹುಟ್ಟುತ್ತದೆ. ವಿಶಿಷ್ಟಗಂಧವತ್ತ್ವ ಪೃಥ್ವಿಯ ಲಕ್ಷಣ. 'ಸುರಭಿ ಮಧುರ ಕೃಷ್ಣಾನುಷ್ಣಾಶೀತಸ್ಪರ್ಶಾ ಸಾ ಪ್ರಥಮಂ ಜಾತಾ' ಎಂದು (ನ್ಯಾ. ಸಿ. ಪು ೨೦೧) ಹೇಳಿಸಂತೆ ಪೃಥ್ವಿಯು ಸ್ವಾಭಾವಿಕವಾಗಿ ಸುರಭಿಯೂ, ಮಧುರವಾದುದೂ ಉಷ್ಣಶೀತ ಸ್ಪರ್ಶಗಳೆರಡೂ ಇಲ್ಲದುದೂ ಆಗಿದೆ. ಉಷ್ಣಸ್ಪರ್ಶವಾಗಲೀ ಶೀತಸ್ಪರ್ಶವಾಗಲೀ ಬೆಂಕಿ ಅಥವಾ ಜಲದೊಡನೆ ಸಂಪರ್ಕದಿಂದ ಬರುತ್ತದೆ. ಪರಿಪಾಕದ ಭೇದಗಳ ಕಾರಣ ಪೃಥ್ವಿಗೆ ಅನೇಕ ವರ್ಣಗಳು ಉಂಟಾಗುವುದುಂಟು.

ತಮಸ್ಸು ಒಂದು ಪಾರ್ಥಿವದ್ರವ್ಯ. ಇದು ನೀಲವರ್ಣವಾಗಿದೆ. ಯಾವ ಬೆಳಕಿನ ಸಹಾಯವೂ ಇಲ್ಲದೆ ನಮ್ಮ ಕಣ್ಣುಗಳಿಂದಲೇ ನಾವು ಕತ್ತಲೆಯನ್ನು ಕಾಣಬಹುದು.

acharya.org

ತಮಸ್ಸು ಬೆಳಕಿನ ಅಭಾವ ಮಾತ್ರವಲ್ಲ. ತಮಸ್ಸಿಗೆ ನೀಲವರ್ಣ ಸ್ವಾಭಾವಿಕವೇ ವಿನಾ ಆರೋಪಿತವಾದುದಲ್ಲ. ತಮಸ್ಸು ಮತ್ತು ಜ್ಯೋತಿಗಳೆರಡನ್ನೂ ಶ್ರುತಿ ಬೇರೆ ಬೇರೆಯಾದ ವಾಸ್ತವಿಕ ಪದಾರ್ಥಗಳೆಂದು 'ನಾಸೀತ್ತಮೋ ಜ್ಯೋತಿರಭೂನ್ನ ಚಾನ್ಯತ್' ಎಂದು ಸಮರ್ಥಿಸುತ್ತದೆ. 'ಯಸ್ಯ ತಮಶ್ಶರೀರಮ್' ಎಂದು ಶ್ರುತಿ ತಮಸ್ಸೂ ಪರಮಾತ್ಮನಿಗೆ ಶರೀರವಾಗಿದೆಯೆಂದು ಸಾರುತ್ತಿದೆ. ಹೀಗೆ ತಮಸ್ಸು ಪಾರ್ಥಿವವಾದ ದ್ರವ್ಯವೆಂದು ಸಮರ್ಥಿಸಿದ್ದಾರೆ.

ಕಾಲ

ಇಪ್ಪತ್ತುನಾಲ್ಕು ತತ್ತ್ವಗಳನ್ನುಳ್ಳ ಅವ್ಯಕ್ತದ ವಿಚಾರವನ್ನು ಇದುವರೆಗೆ ನಿರೂಪಿಸಲಾಯಿತು. ಈಗ ಕಾಲತತ್ತ್ವದ ವಿಚಾರವನ್ನು ತಿಳಿಯೋಣ.

ಕಾಲ ನಿತ್ಯವಾದುದು. ಅದಕ್ಕೆ ಮೊದಲೂ ಇಲ್ಲ ಕೊನೆಯೂ ಇಲ್ಲ. ಕಾಲ ಮಾಯಾತತ್ತ್ವದಿಂದ ಹುಟ್ಟುವುದೆಂದು ಹೇಳುವ ವಾದ ಸರಿಯಲ್ಲ. ಪ್ರಳಯದ ನಂತರ ಕಾಲವಿರುವುದೇ ಇಲ್ಲವೇ ? ಸೃಷ್ಟಿಗೂ ಮೊದಲು ಅದು ಇತ್ತೋ ಇಲ್ಲವೋ ? ಅದು ಇರುವುದಾದರೆ ಮಾಯಾತತ್ತ್ವದಿಂದ ಅದರ ಸೃಷ್ಟಿಯಾಗಬೇಕಾದುದಿಲ್ಲ. ಸೃಷ್ಟಿ ಎಂಬುದು ಅವಸ್ಥಾಂತರಾಪತ್ತಿಯೇ. ಸೂಕ್ಷ್ಮಾವಸ್ಥೆಯಿಂದ ಸ್ಥೂಲಾವಸ್ಥೆಗೆ ಬರುವುದೇ ಸೃಷ್ಟಿ. ಇದು ಕಾಲಕ್ಕೆ ಅನ್ವಯಿಸುವಂಥದಲ್ಲ. ಸೃಷ್ಟಿಗೆ ಮೊದಲು ಅನಂತರ ಎಂಬ ಉಲ್ಲೇಖಗಳೇ ಕಾಲದ ಸಾರ್ವಕಾಲಿಕತ್ವವನ್ನು ಸಮರ್ಥಿಸುತ್ತವೆ. ಈ ಉಲ್ಲೇಖಗಳು ಅರ್ಥಪೂರ್ಣವಾಗಿರುವುದಾದರೆ ಕಾಲದ ನಿತ್ಯತ್ವ ಮತ್ತು ಸತ್ಯತ್ವ ದೃಢವಾಗುತ್ತವೆ. ದೇಶಕ್ಕನ್ವಯಿಸಿದಂತೆ ಕಾಲದ ಭೂತ ಭವ್ಯತ್ವವನ್ನು ನಿಷೇಧಿಸಿದೆ ಎಂದೂ ಹೇಳುವುದಕ್ಕಾಗುವುದಿಲ್ಲ. ದೇಶಕ್ಕೆ ಸಂಬಂಧಿಸಿದಂತೆ ಭೂತಭವ್ಯತ್ವಗಳನ್ನು ಹೇಳಬೇಕಾದರೆ ಕಾಲಕ್ಕನ್ವಯಿಸಿದಂತೆಯೇ ಹೇಳಬೇಕು.

ಇಲ್ಲಿನ ಪ್ರಪಂಚದಲ್ಲಿ ಕಾಲ ಹೇಗೆ ನಿತ್ಯವಾಗಿ ಸಂಬಂಧಿಸಿದೆಯೋ ಹಾಗೆಯೇ ಕಾಲ ನಿತ್ಯವಿಭೂತಿಯೊಡನೆ ಸಂಬಂಧಿಸಿದೆ. ಆದರೆ ಅಲ್ಲಿ ಅದು ಇತರ ಪದಾರ್ಥಗಳಿಗೆ ಅಧೀನವಾಗಿರುತ್ತದೆ. 'ನಿತ್ಯವಿಭೂತಾವಪಿ ಕಾಲಸ್ಯಾಹೇತುತ್ವಮಾತ್ರಮ್ । ನ ತ್ವಭಾವಃ ।' ಎಂದು ದೇಶಿಕರು ನ್ಯಾಯಸಿದ್ಧಾಂಜನದಲ್ಲಿ ಹೇಳಿದ್ದಾರೆ. 'ಕಾಲಂ ಸ ಪಚತೇ ತತ್ರ ನ ಕಾಲಃ ತತ್ರ ವೈ ಪ್ರಭುಃ' ಎಂದು ಹೇಳಲಾಗಿದೆ. 'ಸದಾ ಪಶ್ಯಂತಿ ಸೂರಯಃ' ಎಂಬ ಶ್ರುತಿಗೆ ಬೇರೆ ಬಗೆಯಾಗಿ ಅರ್ಥ ಹೇಳುವುದಕ್ಕಾಗುವುದಿಲ್ಲ.

ಅನೇಕಾನೇಕ ಪದಾರ್ಥಗಳನ್ನು ಬೇರೆ ಬೇರೆ ಇಂದ್ರಿಯಗಳಿಂದ ಗ್ರಹಿಸುವಾಗಲೇ ಕಾಲವು ಪ್ರತ್ಯಕ್ಷ ಗೋಚರವಾಗುತ್ತದೆ. ಕಾಲವು ಪದಾರ್ಥಗಳಿಗೆ ವಿಶೇಷಣವಾಗಿಯೇ ಉಪಲಬ್ಧವಾಗುತ್ತದೆಯೇ ವಿನಾ ಸ್ವತಂತ್ರವಾಗಿರುವುದಿಲ್ಲ. 'ಕಾಲಸ್ಯ ಪದಾರ್ಥ-

acharya.org

ವಿಶೇಷಣತಯೈವ ಪ್ರತೀತೇಸ್ತಸ್ಯ-ಪೃಥಗಸ್ಥಿತ್ವನಾಸ್ತಿತ್ವಾದಂಯೋ ನ ವಕ್ತವ್ಯಾಃ' ಎಂದು ಭಗವಾನ್ ಭಾಷ್ಯಕಾರರು (II-2-31) ಹೇಳಿದ್ದಾರೆ. ಕಾಲವು ವಿಭು ಮತ್ತು ಏಕ ವೆಂಬುದನ್ನು ಇದು ಸೂಚಿಸುತ್ತದೆ. ಕಾಲವು ಮಹಾಕಾಲ ಮತ್ತು ಖಂಡಕಾಲ ಎಂದು ಎರಡು ರೂಪದಲ್ಲಿದೆ. ಮಹಾಕಾಲವು ಎಲ್ಲ ಲೋಕಗಳ ಎಲ್ಲ ಪದಾರ್ಥಗಳನ್ನೂ ವಿಶೇಷಿ ಸುತ್ತದೆ ಮತ್ತು ವಿಭುವಾಗಿರುತ್ತದೆ. ಹಾಗೆಯೇ ಖಂಡಕಾಲವು ಕಣ, ಲವ, ದಿನ, ಪಕ್ಷ ಮಾಸದ ರೂಪದಲ್ಲಿರುತ್ತದೆ. ಇದೂ ಸಹ ವಿಭುವಾಗಿರುತ್ತದೆ. ಕಾಲಕ್ಕೆ ಕ್ಷಣತ್ವ, ದಿನತ್ವ ಮೊದಲಾದ ಜನ್ಯಧರ್ಮಗಳಿವೆ. ಈ ಬೇರೆ ಬೇರೆ ಅವಸ್ಥೆಗಳೆಲ್ಲಾ ಕಾಲದ ವಿಕಾರ ವೆಂದು ಹೇಳಬಹುದು.

ಕಾಲವು ಪ್ರಕೃತಿ ಪುರುಷರಿಗಿಂತ ಬೇರೆಯಾದುದು. ಇದು ಪರಮಾತ್ಮನಿಗಿಂತ ಬೇರೆಯಾದ ತತ್ತ್ವ. ಈ ತತ್ತ್ವವೂ ಭಗವದ್ವಿಭೂತಿಯೇ ಆದುದೆಂದು ಮತ್ತೆ ಹೇಳಬೇಕಾ ದುದಿಲ್ಲ. ಇದಿಷ್ಟೂ ಅವ್ಯಕ್ತ ಮತ್ತು ಕಾಲತತ್ತ್ವಗಳ ನಿರೂಪಣೆ ಆಯಿತು. ಈಗ ಪರಾಕ್ ತತ್ವವೆಂದು ಹೇಳಲಾಗಿರುವ ನಿತ್ಯವಿಭೂತಿ ಮತ್ತು ಧರ್ಮಭೂತ ಜ್ಞಾನದ ವಿಚಾರವನ್ನು ತಿಳಿಯೋಣ.

ನಿತ್ಯವಿಭೂತಿ

ತ್ರಿಗುಣ ಅಥವಾ ಪ್ರಕೃತಿಯು ಸತ್ವರಜಸ್ತಮೋಗುಣಗಳೊಡನೆ ಕೂಡಿದುದಾದರೆ ನಿತ್ಯವಿಭೂತಿಯು ರಜಸ್ಸು ತಮಸ್ಸುಗಳ ಸಂಪರ್ಕವಿಲ್ಲದೆ ಇರುವ ಶುದ್ಧ ಸತ್ವವಾಗಿರು ತ್ತದೆ. ಈ ನಿತ್ಯವಿಭೂತಿಯು ವೈಕುಂಠ ಅಥವಾ ಪರಮಪದವಾಗಿರುತ್ತದೆ. ನಿತ್ಯರೂ ಮುಕ್ತರೂ ಭಗವಂತನ ನಿತ್ಯಕೈಂಕರ್ಯದ ಮಹದಾನಂದವನ್ನು ಹೊಂದುವ ಸ್ಥಳ ಇದು. ಇದೂ ನಿತ್ಯವಾದುದು. ಅಪರಿಚ್ಛಿನ್ನವಾದುದು. ಅಪ್ರಾಕೃತವಾದ ಈ ದಿವ್ಯಲೋಕ ಭಗವಂತನ ನಿತ್ಯವಾಸಸ್ಥಾನವಾಗಿದೆ. ಪ್ರಕೃತಿತತ್ವದಂತೆಯೇ ಇದೂ ಸರ್ವಶೇಷಿಯಾದ ಶ್ರೀಮನ್ನಾರಾಯಣನ ಸಂಕಲ್ಪಕ್ಕನುಸಾರವಾಗಿ ವಿವಿಧವಾದ ಪರಿಣಾಮಗಳನ್ನು ಹೊಂದಿ ನಿತ್ಯಮುಕ್ತರ ಹಾಗೂ ಈಶ್ವರನ ಶರೀರಾದಿಗಳಾಗುತ್ತವೆ. ಮಂಟಪ ಗೋಪುರ ಮೊದಲಾದುವೂ ಆಗುತ್ತದೆ. ತ್ರಿಗುಣ ಮತ್ತು ಕಾಲಗಳು ಹೇಗೆ ಅಚೇತನಗಳೋ ಹಾಗೆಯೇ ಈ ಶುದ್ಧಸತ್ವವೂ ಅಚೇತನವೇ ಆದುದು. ಸೂರಿಗಳು ಸದಾ ಕಾಣುವಂತಹ ವಿಷ್ಣುವಿನ ಪರಮಪದ ಇದು ಎಂದು ಶ್ರುತಿ ಸಾರುತ್ತದೆ. 'ರಜಸಃ ಪರಾಕೇ', 'ತಮಸಃ ಪರಸ್ತಾತ್' ಎಂದು ಶ್ರುತಿ ಸಾರಿ ಹೇಳುತ್ತಾ ಈ ಶುದ್ಧ ಸತ್ವ ರಜಸ್ತಮಸ್ಸುಗಳಿಂದ ದೂರವಾಗಿ 'ಪರಮವ್ಯೋಮ' ಎಂದು ಕರೆಯಲ್ಪಡುತ್ತದೆ. ಶ್ರುತಿಗಳು ಈ ಪರಮ ವ್ಯೋಮವುಂಟೆಂದು ಸಮರ್ಥಿಸುವುವು. ರಾಮಾನುಜರು ತಮ್ಮ ವೇದಾರ್ಥಸಂಗ್ರಹ ದಲ್ಲಿ ಇದರ ಬಗೆಗೆ ವಿವೇಚಿಸಿದ್ದಾರೆ. ಇದು 'ಅಕ್ಷರ' ಅಥವಾ ವಿನಾಶರಹಿತವಾದದ್ದು.

acharya.org

'ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ' ಎಂದು ಹೇಳಿರುವುದು ಇದಕ್ಕೇ ಅನ್ವಯಿಸುತ್ತದೆ. ಈ ನಿತ್ಯವಿಭೂತಿ ಜಡವಾದುದೇ ಅಥವಾ ಸ್ವಯಂಪ್ರಕಾಶವಾದುದೇ ಎಂಬ ವಿಚಾರದಲ್ಲಿ ಚರ್ಚೆ ನಡೆದಿದೆ. ಇದು ತನ್ನನ್ನು ತಾನೇ ತೋರಿಸಿಕೊಳ್ಳಲಾಗದ ಕಾರಣ ಜಡದ್ರವ್ಯವೇ ಎಂದು ಕೆಲವರು ಹೇಳುತ್ತಾರೆ. ಅದನ್ನು ಸ್ವಯಂಪ್ರಕಾಶವೆಂದು ಹೇಳಿರುವುದನ್ನು ಗೌಣಾರ್ಥದಲ್ಲಿ ತೆಗೆದುಕೊಳ್ಳಬೇಕೆಂದು ಇವರ ಅಭಿಪ್ರಾಯ. ವೇದಾಂತದೇಶಿಕರು ಶ್ರುತಿಪ್ರಾಮಾಣ್ಯಕ್ಕನುಸಾರವಾಗಿ ನಿತ್ಯವಿಭೂತಿಯು ಸ್ವಯಂಪ್ರಕಾಶವಾದುದೆಂದು ಸಮರ್ಥಿಸಿದ್ದಾರೆ. ಇದು ಸ್ವಯಂಪ್ರಕಾಶವಾದರೂ ನಿತ್ಯಮುಕ್ತರಿಗೆ ತೋರುತ್ತಿರುವಂತೆ ಬದ್ಧರಿಗೆ ತೋರುವುದಿಲ್ಲ. ನಿತ್ಯಮುಕ್ತರು ತಮ್ಮ ಧರ್ಮಭೂತಜ್ಞಾನದಿಂದ ಈ ನಿತ್ಯವಿಭೂತಿಯನ್ನು ಗ್ರಹಿಸಿದ ಮಾತ್ರಕ್ಕೆ ಇದರ ಸ್ವಯಂಪ್ರಕಾಶತ್ವಕ್ಕೆ ಕುಂದಿಲ್ಲ. ಏಕೆಂದರೆ ಸ್ವಯಂಪ್ರಕಾಶವಾದ ಆತ್ಮವನ್ನು ಧರ್ಮಭೂತಜ್ಞಾನದ ಮೂಲಕ ತಿಳಿಯಬಹುದಾಗಿದೆಯಷ್ಟೇ? ಇದರಿಂದ ಆತ್ಮನ ಸ್ವಯಂಪ್ರಕಾಶತ್ವಕ್ಕೆ ಹೇಗೆ ಕುಂದಿಲ್ಲವೋ ಹಾಗೆಯೇ ನಿತ್ಯಮುಕ್ತರು ಧರ್ಮಭೂತಜ್ಞಾನದ ಮೂಲಕ ನಿತ್ಯವಿಭೂತಿಯನ್ನು ಗ್ರಹಿಸಿದರೂ ಅದರ ಸ್ವಯಂಪ್ರಕಾಶತ್ವಕ್ಕೆ ಕುಂದಿಲ್ಲ. ಈಶ್ವರನ ಧರ್ಮಭೂತಜ್ಞಾನಕ್ಕೆ ವಿಷಯವಾದ ದಿವ್ಯಾತ್ಮಸ್ವರೂಪದ ಸ್ವಯಂಪ್ರಕಾಶತ್ವಕ್ಕೆ ಹಾನಿಯಿಲ್ಲ. ಹಾಗೆಯೇ ಈಶ್ವರ, ನಿತ್ಯರು ಮೊದಲಾದವರ ಧರ್ಮಭೂತಜ್ಞಾನಕ್ಕೆ ಸ್ವಯಂಪ್ರಕಾಶವಾದ ನಿತ್ಯವಿಭೂತಿ ವಿಷಯವಾಗುತ್ತದೆ. ಸ್ವಯಂಪ್ರಕಾಶವಾದ ಧರ್ಮಭೂತಜ್ಞಾನವೂ ಕರ್ಮದ ಕಾರಣ ಸಂಕುಚಿತವಾಗಿ ಹೇಗೆ ಆಶ್ರಯನಾದ ಆತ್ಮನಿಗೆ ವಿಷಯಪ್ರಕಾಶನ ಮಾಡಲಾರದೋ ಹಾಗೆಯೇ ನಿತ್ಯವಿಭೂತಿಯು ಸ್ವಯಂಪ್ರಕಾಶವೂ ಬದ್ಧಾವಸ್ಥೆಯಲ್ಲಿರುವವರಿಗೆ ತೋರುವುದಿಲ್ಲ. ಹೀಗೆ ನಿತ್ಯವಿಭೂತಿಯೂ ಸ್ವಯಂಪ್ರಕಾಶವಾದುದೆಂದು ದೇಶಿಕರ ಮತ. ಭಗವಂತನು ಅವತಾರ ಮಾಡಿದಾಗ ಅವರ ಶರೀರಗಳು ಶುದ್ಧಸತ್ವಮಯವಾದವು. ಈ ನಿತ್ಯವಿಭೂತಿಯು ಭಗವಂತನ ಸ್ವರೂಪವನ್ನು ಪ್ರಕೃತಿಯಂತೆ ಮರೆಸುವುದಿಲ್ಲ; ವಿಪರೀತಜ್ಞಾನವನ್ನುಂಟುಮಾಡುವುದಿಲ್ಲ. ಅದಕ್ಕೆ ಪ್ರತಿಯಾಗಿ ಭಗವಂತನ ಜ್ಞಾನವನ್ನು ಬೆಳಗುತ್ತದೆ. ಹೀಗೆ ಈ ಸಿದ್ಧಾಂತಕ್ಕನುಸಾರವಾಗಿ ಶಾಶ್ವತವಾದ ಈ ನಿತ್ಯ ವಿಭೂತಿ ಶ್ರೀಮನ್ನಾರಾಯಣನ ದಿವ್ಯಧಾಮವಾಗಿದೆ.

ಧರ್ಮಭೂತಜ್ಞಾನ

ಆತ್ಮನು ಜ್ಞಾನಸ್ವರೂಪನೆಂದು ಶ್ರುತಿ ಹೇಳುವಂತೆಯೇ ಅವನು ಜ್ಞಾನವಿಶಿಷ್ಟನಾಗಿದ್ದಾನೆಂದೂ ಹೇಳುತ್ತದೆ. ಆತ್ಮನು ಹೀಗಾಗಿ ಜ್ಞಾನಸ್ವರೂಪನೂ ಜ್ಞಾನಗುಣಕನೂ ಆಗಿದ್ದಾನೆ. ಜ್ಞಾನವನ್ನು ಎರಡು ಬಗೆಯಾಗಿ ಈ ಸಿದ್ಧಾಂತದಲ್ಲಿ ವಿಭಾಗಿಸಿದೆ. ಧರ್ಮಿಜ್ಞಾನ ಮತ್ತು ಧರ್ಮಭೂತಜ್ಞಾನ, ಎಂದು. ಧರ್ಮಿಜ್ಞಾನವೆಂಬುದು ಆತ್ಮಸ್ವರೂಪವೇ.

acharya.org

ಇದು ತನ್ನನ್ನು ಮಾತ್ರ ಪ್ರಕಾಶಪಡಿಸುತ್ತದೆ. ಅವರವರಿಗೇ ಅವರವರ ಆತ್ಮನ ಪ್ರಕಾಶವುಂಟು ಇದನ್ನೇ 'ಸ್ವಸ್ಮೈ ಭಾಸಮಾನತ್ವ' ಅಥವಾ ತನಗೇ ತನ್ನನ್ನು ತೋರಿಸಿಕೊಳ್ಳುವುದು ಎಂದು ಹೇಳುತ್ತಾರೆ ಸ್ವಯಂಪ್ರಕಾಶವಾದ ಆತ್ಮನನ್ನು ತಿಳಿಯಲು ಮತ್ತೊಂದು ಜ್ಞಾನದ ಅವಶ್ಯಕತೆ ಇಲ್ಲವಷ್ಟೇ ? ಈ ಆತ್ಮಸ್ವರೂಪಕ್ಕೆ ಸಂಕೋಚವಿಕಾಸಗಳಿಲ್ಲ. ಎಲ್ಲ ಕಾಲದಲ್ಲಿಯೂ ಏಕರೂಪವಾದ ಪ್ರಕಾಶವನ್ನಿದು ಹೊಂದಿರುತ್ತದೆ. ತನ್ನನ್ನು ತಾನೇ ತೋರಿಸಿಕೊಳ್ಳುವುದಿದು. ಆದರೆ ಇದಕ್ಕಿಂತ ಬೇರೆಯಾದ ಮತ್ತೊಂದು ಧರ್ಮಭೂತ ಜ್ಞಾನ ತನ್ನನ್ನಿಳಿದು ಮತ್ತೆಲ್ಲವನ್ನೂ ತೋರಿಸುವುದು. ಎಲ್ಲ ಆತ್ಮರುಗಳಿಗೂ ಈ ಧರ್ಮಭೂತಜ್ಞಾನವುಂಟು. ಇವರ ಮೂಲಕವೇ ಇತರ ವಿಷಯುಗಳನ್ನವರು ತಿಳಿಯುವರು. ವಿಷಯಪ್ರಕಾಶನದ ಕಾಲದಲ್ಲಿ ಇದು ತನ್ನ ಆಶ್ರಯಕ್ಕೆ ಸ್ವಯಂಪ್ರಕಾಶವಾಗಿರುತ್ತದೆ. ಇದಕ್ಕೆ ಸಂಕೋಚ ವಿಕಾಸಗಳುಂಟು. ಬದ್ಧಾವಸ್ಥೆಯಲ್ಲಿ ಇದು ಸಂಕುಚಿತವಾಗಿದ್ದು ಮುಕ್ತ್ಯವಸ್ಥೆಯಲ್ಲಿ ತನ್ನ ಸ್ವೈಜಸ್ವಭಾವವನ್ನು ಹೊಂದುವುದು. ಮತ್ತೊಬ್ಬರ ಆತ್ಮಸ್ವರೂಪವನ್ನು ನಮ್ಮ ಧರ್ಮಭೂತಜ್ಞಾನದಿಂದ ನಾವರಿಯುವೆವು. ನಮ್ಮ ಧರ್ಮಭೂತಜ್ಞಾನವನ್ನು ಜ್ಞಾನಾಂತರದಿಂದ ಅರಿಯುವುದು ಸಾಧ್ಯ. ಹೀಗೆ ಇವು ಜ್ಞಾನಾಂತರವೇದ್ಯಗಳಾಗಿವೆ. ಈ ಧರ್ಮಭೂತಜ್ಞಾನವು ವಿಭುವಾಗಿರುತ್ತದೆ. ಇದಕ್ಕೆ ಅರ್ಥಪ್ರಕಾಶಕತ್ವವಿದೆ.

ಆತ್ಮರುಗಳಿಗೆ ಹೀಗೆ ಎರಡುಬಗೆಯಾದ ಜ್ಞಾನವನ್ನು ಈ ಸಿದ್ಧಾಂತದಲ್ಲಿ ಹೇಳಿರುವುದರಿಂದ ಇತರರು ಅನುವ್ಯವಸಾಯ ಮೊದಲಾದುವನ್ನು ಹೇಳುವಂತೆ ಇಲ್ಲಿ ಹೇಳಬೇಕಾಗಿಲ್ಲ. ಈ ಜ್ಞಾನದ ವಿಸ್ತಾರವೇ ಜೀವನಿಗೆ ಉಂಟಾಗುವುದಾಗಿದೆ. ಸುಖ, ದುಃಖ, ಇಚ್ಛೆ, ರಾಗ, ದ್ವೇಷ ಮೊದಲಾದುವುಗಳೆಲ್ಲಾ ಈ ಧರ್ಮಭೂತಜ್ಞಾನದ ಬೇರೆ ಬೇರೆ ಪ್ರಕಾರಗಳೆಂದು ಈ ಸಿದ್ಧಾಂತ ಹೇಳುವುದು. ಹೇಗೆ ಆತ್ಮರುಗಳಿಗೋ ಹಾಗೆಯೇ ಈಶ್ವರನಿಗೂ ಧರ್ಮಭೂತಜ್ಞಾನವುಂಟು. ಈಶ್ವರನ ಅನುಗ್ರಹಾದಿಗಳೆಲ್ಲಾ ಧರ್ಮಭೂತಜ್ಞಾನದ ಪ್ರಕಾರಗಳಾಗಿವೆ. ಈ ಧರ್ಮಭೂತಜ್ಞಾನಕ್ಕೂ ಧರ್ಮಿಜ್ಞಾನಕ್ಕೂ ಸ್ವಯಂಪ್ರಕಾಶತ್ವವೂ ಜ್ಞಾನತ್ವವೂ ಸಮಾನವಾಗಿವೆ. ಅದ್ವೈತಸಿದ್ಧಾಂತದಲ್ಲಿ ಕೇವಲ ಧರ್ಮಿಜ್ಞಾನವನ್ನು ಮಾತ್ರ ಒಪ್ಪಲಾಗಿದೆ. ಆದುದರಿಂದ ವಿಷಯಿತ್ವ ಅದಕ್ಕಿರುವುದಿಲ್ಲ. ಇಲ್ಲಿಯಾದರೋ, ಧರ್ಮಿಯೊಡನೆ ಧರ್ಮಭೂತಜ್ಞಾನವನ್ನು ಒಪ್ಪಿರುವುದರಿಂದ ವ್ಯವಹಾರವನ್ನು ಯುಕ್ತಿಯುಕ್ತವಾಗಿ ಸಮರ್ಥನೆ ಮಾಡಬಹುದಾಗಿದೆ. ಈ ಜ್ಞಾನಕ್ಕೂ ಆತ್ಮನಿಗೂ ಅಪೃಥಕ್ಸಿದ್ಧಸಂಬಂಧವಿದೆಯೆಂದು ಶ್ರುತಿ 'ನ ವಿಜ್ಞಾತುರ್ವಿಜ್ಞಾತೇರ್ವಿಪರಿಲೋಪೋ ವರ್ತತೇ' ಎಂದು ಹೇಳುತ್ತದೆ. ಹೀಗೆ ಧರ್ಮಭೂತಜ್ಞಾನವನ್ನು ಪ್ರತ್ಯೇಕವಾದ ಪದಾರ್ಥವೆಂದು ಈ ಸಿದ್ಧಾಂತ ಸ್ಥಾಪಿಸಿರುತ್ತದೆ. ಆದುದರಿಂದ ಇದು ದ್ರವ್ಯವೂ ಹೌದು, ಗುಣವೂ ಹೌದು.

ಇದುವರೆಗೆ ಪ್ರಕೃತಿ, ಕಾಲ, ನಿತ್ಯವಿಭೂತಿ ಮತ್ತು ಧರ್ಮಭೂತಜ್ಞಾನದ ಬಗೆಗೆ

acharya.org

ವಿವೇಚಿಸಲಾಯಿತು. ಇನ್ನುಳಿದ ಎರಡು ತತ್ತ್ವಗಳಾದ ಜೀವ ಮತ್ತು ಪರಮಾತ್ಮರ ವಿಷಯವನ್ನು ಈಗ ನಾವು ತಿಳಿಯಬಹುದು.

ಜೀವಾತ್ಮನು

ಜೀವಾತ್ಮನ ಸ್ವರೂಪವನ್ನು ಶ್ರೀಮದ್ಯಾಮುನರು ತಮ್ಮ ಸಿದ್ಧಿತ್ರಯದಲ್ಲಿ-

ದೇಹೇಂದ್ರಿಯಮನಃಪ್ರಾಣಧೀಭ್ಯೋಽನ್ಯೋಽನನ್ಯಸಾಧನಃ ।
ನಿತ್ಯೋ ವ್ಯಾಪೀ ಪ್ರತಿಕ್ಷೇತ್ರಮಾತ್ಮಾ ಭಿನ್ನಃ ಸ್ವತಃ ಸುಖೀ ॥

ಎಂದು ಹೇಳಿದ್ದಾರೆ. ಜೀವಾತ್ಮರು ಪ್ರಕೃತಿಗಿಂತ ವಿಲಕ್ಷಣರಾದವರು. ದೇಹಕ್ಕಿಂತ, ಇಂದ್ರಿಯಗಳಿಗಿಂತ, ಮನಸ್ಸಿಗಿಂತ, ಪ್ರಾಣಕ್ಕಿಂತ, ಮತ್ತು ಬುದ್ಧಿಗಿಂತ ಬೇರೆಯಾದವರು. ಇವರು ನಿತ್ಯರು, ಇವರಿಗೆ ಆದಿಯೂ ಇಲ್ಲ ಅಂತ್ಯವೂ ಇಲ್ಲ. ಒಂದೊಂದು ಶರೀರದಲ್ಲಿಯೂ ಬೇರೆ ಬೇರೆಯಾಗಿರುವವರು ಇವರು, ಅನಾದಿಯಾದ ಕರ್ಮಕ್ಕನುಸಾರವಾಗಿ ಇವರಿಗೆ ಪ್ರಕೃತಿಸಂಬಂಧವೇರ್ಪಟ್ಟಿರುತ್ತದೆ. ಕರ್ಮಬಂಧದಿಂದ ಮುಕ್ತರಾದಾಗ ಆತ್ಮನ ಸ್ವಸ್ವರೂಪವು ಪ್ರಕಾಶಿಸುತ್ತದೆ.

ಚಾರ್ವಾಕರು ಶರೀರಕ್ಕಿಂತ ಬೇರೆಯಾದ ಆತ್ಮನನ್ನು ಅಂಗೀಕರಿಸುವುದಿಲ್ಲ. ಪೃಥಿವ್ಯಪ್ತೇಜಸ್ಸು ವಾಯುಗಳ ಸಂಯೋಗದಿಂದ ಚೈತನ್ಯವುಂಟಾಗುವುದೆಂದು ಇವರ ಮತ. ದೇಹದಲ್ಲಿ ಅನೇಕ ಅವಯವಗಳಿವೆ. ಇವುಗಳೊಂದೊಂದಾಗಲೀ ಇವುಗಳ ಸಮುದಾಯವಾಗಲೀ ಆತ್ಮನಾಗಲಾಗರದು. ಶರೀರದಲ್ಲಿ ಅನೇಕ ಆತ್ಮರುಗಳಿದ್ದಿದ್ದರೆ ಏಕರೂಪತೆ ಇರುತ್ತಿರಲಿಲ್ಲ. ಆದುದರಿಂದಲೇ ಚೈತನ್ಯ ಶರೀರದ ವಿಶೇಷಗುಣವಲ್ಲ. ಒಂದು ಅವಯವದ ನಷ್ಟವಾದರೂ ಆತ್ಮನಿಗೇನೂ ಹಾನಿಯಿಲ್ಲ. ಆದುದರಿಂದ ಅವಯವವೇ ಆತ್ಮನಾಗದು. ದೇಹದ ಯಾವ ಅವಯವವಾದರೂ 'ನಾನು' ಎಂದು ತಿಳಿಯಲಾರದು. ಯಾವ ಅವಯವ ನಷ್ಟವಾದರೂ ಸುಖ ಅಥವಾ ದುಃಖದ ಅನುಭವ ಅವ್ಯಾಹತವಾಗಿರುತ್ತದೆ. ಇದು ನನ್ನ ಕೈ, ನನ್ನ ತಲೆ, ನನ್ನ ಕಾಲು ಎಂಬಂತೆ ದೇಹಕ್ಕಿಂತ ಭಿನ್ನವಾಗಿ ಆತ್ಮನು ಪ್ರಕಾಶಿಸುತ್ತಿರುತ್ತಾನೆ. ಅವಯವಗಳ ಸಮುದಾಯವನ್ನೂ ಆತ್ಮನೆಂದು ಹೇಳುವುದಕ್ಕಾಗುವುದಿಲ್ಲ. ಬಾಹ್ಯೇಂದ್ರಿಯಗಳಿಗೆ ವಿಷಯವಾಗುವ ಸಂಘಾತ ಆತ್ಮನಾದರೆ ಅದು ಅಚಿತ್ತೇ ಆದೀತು ! ಚೈತನ್ಯವಾಗಲಾರದು. ಸಂಪೂರ್ಣಾವಯವ ಸಮುದಾಯವೇ ಆತ್ಮನೆಂದರೆ ಅನೇಕ ತೊಂದರೆಗಳು ಸಂಭವಿಸುವುವು. ಒಂದು ಬೆರಳೇ ಆಗಲಿ ಅಥವಾ ಇನ್ನಾವುದಾದರೂ ಸೂಕ್ಷ್ಮವಾದ ಅವಯವವಾಗಲೀ ನಾಶವಾದಾಗ ಚೈತನ್ಯ ಇರದೆ ಹೋಗಬೇಕಾಗುತ್ತದೆ. ಆದರೆ ನಮ್ಮ ಅನುಭವವು ಆ ರೀತಿ ಇಲ್ಲ. ಅವಯವಕ್ಕಿಂತ ಬೇರೆಯಾದ ಅವಯವಿಯೇ ಇಲ್ಲದ ಕಾರಣ ಅವಯವಿಯಲ್ಲಿ ಚೈತನ್ಯವಿರುವುದೆಂದು ಹೇಳುವುದು ಸಾಧ್ಯವೇ ಇಲ್ಲ. ಹಾಗೆ ಅವಯವಾತಿರಿಕ್ತವಾದ ಅವಯವಿ ಇದೆ ಎಂದು ಒಪ್ಪಿಕೊಂಡರೂ

acharya.org

ಅವಯವದ ಗುಣಗಳೇ ಅವಯವಿಯಲ್ಲಿಯೂ ಕಂಡಬರುವುವೇ ವಿನಾ ಅವಯವಗಳಲ್ಲಿಲ್ಲದಂಥ ಚೈತನ್ಯ ಅವಯವಿಯಲ್ಲಿರಲಾರದು. ಮದಶಕ್ತಿ ನೂತನವಾಗಿ ಹುಟ್ಟುವುದೆಂದು ಹೇಳಿದ ಉದಾಹರಣೆಯೂ ಅಸಂಗತವೇ. ಏಕೆಂದರೆ ಆ ಮದ್ಯಕ್ಕೆ ಸೇರಿಸಿದ ಪದಾರ್ಥಗಳಲ್ಲಿ ಆ ಶಕ್ತಿ ಉತ್ಪನ್ನವಾಗಿ ಒಟ್ಟಿನಲ್ಲಿ ಅಭಿವ್ಯಕ್ತವಾಗುತ್ತದೆ. ಸಂಘಾತದಶೆಯಲ್ಲಿ ಒಂದೊಂದು ಭಾಗದಲ್ಲಿಯೂ ಈ ಮದಶಕ್ತಿ ಉಂಟಾಗಿ ಒಟ್ಟಾರೆ ಕಾಣಿಸಿಕೊಳ್ಳುತ್ತದೆ. ಈ ಭೂತಗಳ ಸಂಯೋಗದಿಂದ ತದತಿರಿಕ್ತವಾದ ಭೂತಾವಯವ ವಿಶೇಷವೊಂದು ಹುಟ್ಟುವುದೆಂದೂ ಅದನ್ನೇ ಆತ್ಮನೆಂದು ಹೇಳಬಹುದೆಂದೂ ಕೆಲವರು ಹೇಳಬಹುದು. ಈ ಧಾತುವಿಶೇಷ ಪಂಚಭೂತಗಳ ಪರಿಣಾಮವಾಗಿ, ಅಣುವಾಗಿ, ಶರೀರದಲ್ಲೆಲ್ಲೋ ಇರುವುದೆಂದು ಹೇಳಬಹುದು. ಶರೀರದಲ್ಲಿ ಶೀಘ್ರ ಸಂಚಾರಿತ್ವವನ್ನು ಇದಕ್ಕೇ ಹೇಳಿದರೆ ಸುಖದುಃಖಾದ್ಯನುಭವಕ್ಕೂ ಕಡಿಮೆ ಇಲ್ಲದ ಕಾರಣ ಇದನ್ನೇ ಏಕೆ ಆತ್ಮನೆನ್ನಬಾರದೆಂದು ಕೆಲವರು ವಾದಿಸುವರು. ಈ ವಾದ ಶರೀರಾತಿರಿಕ್ತವಾದ ತತ್ತ್ವವನ್ನು ಆತ್ಮವೆಂದು ಒಪ್ಪುವುದರಿಂದ ಆತ್ಮವಾದವನ್ನು ಅರ್ಧಾಂಗೀಕಾರ ಮಾಡಿದೆ. ಆದರೆ ಅದಕ್ಕೆ ಜ್ಞಾನಾನಂದಾತ್ಮಕತ್ವವನ್ನು ತಪ್ಪಿಸಿದೆ; ಭೌತಿಕವಾದ ಧಾತುವಿಶೇಷ ಅದು ಎನ್ನುತ್ತದೆ. ಶರೀರಕ್ಕಿಂತ ಬೇರೆಯಾದ ಆತ್ಮ ಇದೆ ಎಂದು ಅಂಗೀಕರಿಸುವ ಕಾರಣ ಅಂಥ ಆತ್ಮಕ್ಕೆ ನಿತ್ಯತ್ವ, ಜ್ಞಾನತ್ವ, ಆನಂದತ್ವಗಳನ್ನೂ ಒಪ್ಪಿದಂತೆಯೇ ಆಯಿತು. ಪಂಚಭೂತಾತಿರಿಕ್ತವಾದ ಅಂಥಹ ತತ್ತ್ವ ನಿತ್ಯವೂ ಜ್ಞಾನಾನಂದಾತ್ಮಕವೂ ಆಗಿರುವುದರಲ್ಲಿ ಸಂದೇಹವೇ ಇಲ್ಲ. ಆದ್ದರಿಂದ ಆತ್ಮನು ಶರೀರಕ್ಕಿಂತ ಭಿನ್ನನಾದವನು ಎಂಬ ವಾದ ಸುಸ್ಥಿತವಾಗಿದೆ.

ಆತ್ಮನು ಇಂದ್ರಿಯಗಳಿಗಿಂತಲೂ ಬೇರೆಯಾದವನು. ದೇಹಾತ್ಮವಾದದಲ್ಲಿ ಹೇಳಿದ ವಾದ ಇದಕ್ಕೂ ಸಮಾನವಾಗಿಯೇ ಇದೆ. ಇಂದ್ರಿಯಗಳು ಅನೇಕವಾಗಿವೆ. ಅವುಗಳೊಂದೊಂದೇ ಆಗಲೀ, ಅವುಗಳ ಸಮುದಾಯವೇ ಆಗಲೀ ಆತ್ಮನಾಗಲಾರದು. ಆತ್ಮನು ಜ್ಞಾತಾ ಆಗಿದ್ದಾನೆ. ಇವನು ಜ್ಞಾನಸಾಧನಗಳಿಗಿಂತ ಭಿನ್ನನಾಗಿದ್ದಾನೆ. ಇಂದ್ರಿಯಗಳೆಲ್ಲಾ ಜ್ಞಾನಕ್ಕೆ ಮಾರ್ಗಗಳಾಗಿವೆ. ಇವೇ ಜ್ಞಾತೃಗಳಾಗಲಾರವು. ಅನೇಕಾನೇಕ ಇಂದ್ರಿಯಗಳ ಸಮೂಹವನ್ನೊಳಗೊಂಡ ಶರೀರವು ಏಕಮುಖವಾಗಿ ಕೆಲಸಮಾಡುವುದರಿಂದಲೇ ಆತ್ಮವಸ್ತು ಶರೀರಾತಿರಿಕ್ತವೂ ಇಂದ್ರಿಯಾತಿರಿಕ್ತವೂ ಆಗಿದೆ ಎಂದು ತಿಳಿಯಬಹುದು. ಒಂದೊಂದು ಇಂದ್ರಿಯಕ್ಕೂ ನಿರ್ದಿಷ್ಟವಾದ ಕೆಲಸವಿದೆ. ಇವುಗಳಿಗಿಂತ ಬೇರೆಯಾದ ಆತ್ಮನು ಈ ಒಂದೊಂದು ಇಂದ್ರಿಯದ ಮೂಲಕವೂ ಜ್ಞಾನವನ್ನು ಪಡೆಯುತ್ತಾನೆ. ಇಂದ್ರಿಯಗಳ ಸಮುದಾಯವೂ ಆತ್ಮನಾಗದು. ನಿದ್ರಾವಸ್ಥೆಯಲ್ಲಿ ಇಂದ್ರಿಯಗಳೂ ಶರೀರವೂ ನಿಷ್ಕ್ರಿಯವಾಗಿರುವುವು. ಅವು ಕನಸನ್ನು ಕಾಣಲಾರವು. ಸ್ವಪ್ನದಲ್ಲಿ 'ನಾನು' ಎಂದು ಜಾಗ್ರತಶರೀರ ತಿಳಿಯಲಾರದು. ಈ ಸ್ವಪ್ನವನ್ನು ಕಾಣುವ ಆತ್ಮನು ಶರೀರೇಂದ್ರಿಯಗಳಿಗಿಂತ ಬೇರೆಯಾದವನೆಂದು ತಿಳಿಯಬೇಕು.

acharya.org

ಮನಸ್ಸು ಎಲ್ಲಾ ಇಂದ್ರಿಯಗಳನ್ನೂ ಪ್ರೇರಿಸುವುದಾಗಿ ಅನುಭವವನ್ನು ಹೊಂದುತ್ತಿರುತ್ತದೆ. ಇದು ಏಕರೂಪವಾಗಿರುತ್ತದೆ. ಸ್ಮೃತಿ ಅಥವಾ ಪ್ರತ್ಯಭಿಜ್ಞೆಯು ಮನಸ್ಸಿನಿಂದ ಸಾಧ್ಯವಾಗುತ್ತದೆ. ಎಲ್ಲಾ ಇಂದ್ರಿಯಗಳ ದ್ವಾರಾ ಮನಸ್ಸೇ ಎಲ್ಲವನ್ನೂ ಅನುಭವಿಸುವುದು. ಆದಕಾರಣ ಮನಸ್ಸೇ ಆತ್ಮವೆಂದು ಕೆಲವರು ಹೇಳುವರು. ಈ ವಾದ ಸರಿಯಲ್ಲ. ಮನಸ್ಸೂ ಸಹ ಜ್ಞಾನವನ್ನು ಹೊಂದಲು ಕಣ್ಣು, ಕಿವಿ ಮೊದಲಾದವುಗಳಂತೆ ಒಂದು ಇಂದ್ರಿಯವಾಗಿದೆ, ಸಾಧನವಾಗಿದೆ. ಮನಸ್ಸಿನ ವ್ಯಾಪಾರ ಧರ್ಮಭೂತ ಜ್ಞಾನಕ್ಕೆ ಅನ್ವಯಿಸುತ್ತದೆ. ಆದುದರಿಂದಲೇ ಮನಸ್ಸೇ ಆತ್ಮನಾಗಲಾರದು. 'ಮನಸಾ ಹ್ಯೇವ ಪಶ್ಯತಿ' ಎಂಬ ಶ್ರುತಿ ಮನಸ್ಸೂ ಒಂದು ಜ್ಞಾನಸಾಧನವೆಂದೇ ಹೇಳುತ್ತದೆ. ಆಂತರವಾದ ಮತ್ತು ಬಾಹ್ಯವಾದ ಜ್ಞಾನವನ್ನುಂಟುಮಾಡುವುದರಲ್ಲಿ ಮನಸ್ಸು ಒಂದು ಸಾಧನವಾಗಿರುತ್ತದೆ. ಸುಖದುಃಖಾದ್ಯನುಭವಗಳಿಗೆ ಕಾರಣ ವಾದುದು ಮನಸ್ಸು. ಜ್ಞಾನಕರಣವಾದ ಮನಸ್ಸು ಆ ಕಾರಣದಿಂದಲೇ ಕರ್ತೃವಾಗಲೀ ಜ್ಞಾತೃವಾಗಲೀ ಆಗಿಲ್ಲ. ಮನಸ್ಸೂ ಅನಿತ್ಯವಾದುದೇ ಸರಿ. ಜ್ಞಾನವನ್ನು ಪಡೆಯು ವವನೂ ಸುಖದುಃಖಾದಿಗಳನ್ನು ಹೊಂದುವವನೂ ಈ ಮನಸ್ಸಿಗಿಂತ ಭಿನ್ನವಾದ ಆತ್ಮನಾಗಿದ್ದಾನೆಂದು ತಿಳಿಯಬೇಕು.

ಪ್ರಾಣಗಳೇ ಆತ್ಮನೆಂಬ ವಾದವೂ ಸರಿಯಲ್ಲ. ಪ್ರಾಣವೆಂಬುದು ವಾಯು ವಿಶೇಷವಾಗಿದೆ. ಈ ವಾಯುವೂ ಜಡದ್ರವ್ಯವಾಗಿ ಸ್ಪರ್ಶತನ್ಮಾತ್ರೆಯಿಂದ ಉತ್ಪನ್ನ ವಾದುದಾಗಿದೆ. ದೇಹಾತ್ಮವಾದದ ದೋಷಗಳು ಇದಕ್ಕೂ ಸಮಾನವಾಗಿವೆ. ಒಂದೊಂದು ಪ್ರಾಣವೂ ಆತ್ಮನೇ ? ಅಥವಾ ಆ ಪ್ರಾಣಗಳ ಸಮೂಹ ಆತ್ಮನೇ ? ಪ್ರಾಣಗಳೊಂದ ಕ್ಕಾಗಲೀ, ಅವುಗಳ ಸಮೂಹಕ್ಕಾಗಲೀ ಚೈತನ್ಯವನ್ನು ಹೇಳುವುದಕ್ಕಾಗುವುದಿಲ್ಲ. 'ನನ್ನ ದೇಹ' ಎಂದಂತೆ 'ನನ್ನ ಪ್ರಾಣಗಳು' ಎಂದು ಹೇಳುವುದೂ ರೂಢಿಯಲ್ಲಿದೆ.

ನಿದ್ರಿಸಿದವನು ಎಚ್ಚೆತ್ತಮೇಲೆ 'ನಾನು ಇಲ್ಲಿಯವರೆಗೂ ಸುಖವಾಗಿ ನಿದ್ರಿಸಿದೆ' ಎಂದು ಹೇಳುವನು. ನಿದ್ರೆಯಲ್ಲಿಯೂ ಅವನು ಎಚ್ಚೆತ್ತಿದ್ದನೆಂಬುದನ್ನು ಇದು ತೋರಿಸು ತ್ತದೆ. ನಿದ್ರೆಯಲ್ಲಿ ಪ್ರಾಣಗಳು ಕೆಲಸಮಾಡುತ್ತಿದ್ದರೂ ಜಡವಾದ ಕಾರಣ ಸುಖಾನುಭವ ವನ್ನು ಹೊಂದಲಾರವು. ಆದುದರಿಂದ ಈ ಪ್ರಾಣಗಳಿಗಿಂತ ಆತ್ಮನು ಬೇರೆಯಾದವ ನಾಗುತ್ತಾನೆ.

ಆತ್ಮನು ಬುದ್ಧಿಗಿಂತ ಬೇರೆಯಾದವನು. ಕೆಲವರು ದಾರ್ಶನಿಕರು ಬುದ್ಧಿಯನ್ನೇ ಆತ್ಮನೆಂದು ವರ್ಣಿಸುವರು. ಬುದ್ಧಿ ಎಂದರೆ ಜ್ಞಾನ ಅಥವಾ ಮತಿ ಅಥವಾ ವಿಜ್ಞಾನ. ಇದು ಒಂದು ವಿಶೇಷಣಮಾತ್ರವಾಗಿದೆ. ಇದು ಅನಿತ್ಯವಾದುದು. ಇದಕ್ಕೆ ಉತ್ಪತ್ತಿ ವಿನಾಶಗಳುಂಟು. ಈ ಜ್ಞಾನಕ್ಕೆ ಆಶ್ರಯವಾಗಿರುವ ಆತ್ಮನು ನಿತ್ಯನಾದವನು. 'ಅವನೇ ನಾನು' ಎಂಬ ರೀತಿಯ ಪ್ರತ್ಯಭಿಜ್ಞೆ ಆತ್ಮನ ನಿತ್ಯತ್ವವನ್ನು ಸಮರ್ಥಿಸುತ್ತದೆ. ಆತ್ಮನು

acharya.org

ಜ್ಞಾನಸ್ವರೂಪನಾಗಿರುವಂತೆ ಜ್ಞಾನಗುಣಕನೂ ಆಗಿದ್ದಾನೆ. ಶುದ್ಧ ವಿಜ್ಞಾನವೇ ಆತ್ಮನಾಗದು. ಅದು ತನ್ನನ್ನು ತಾನೇ ತಿಳಿಯಲಾರದು. ಅದು ತೋರಿಸಬಲ್ಲದೇ ವಿನಾ ತಿಳಿಯಲಾರದು. ಜ್ಞಾನವು ನಿರ್ವಿಷಯಕವಾಗಿಯಾಗಲೀ ನಿರಾಶ್ರಯವಾಗಿಯಾಗಲೀ ಇರಲಾರದು. ಜ್ಞಾನವೂ ಒಂದು ಧರ್ಮವಾದ ಕಾರಣ ಒಂದು ಆಶ್ರಯವನ್ನು ಅದು ಸೂಚಿಸುತ್ತದೆ. ಧರ್ಮ ಧರ್ಮಿಗಳೆರಡೂ ಪರಸ್ಪರ ಭಿನ್ನವಾಗಿರುತ್ತವೆ. ಇವೆರಡೂ ಒಂದನ್ನೊಂದು ಕೂಡಿಕೊಂಡೇ ಇರುತ್ತವೆ. ಒಂದರ ನಿಷೇಧ ಮತ್ತೊಂದರ ನಿಷೇಧದಲ್ಲಿ ಪರ್ಯವಸಾನವಾಗುತ್ತದೆ. ಬೌದ್ಧರು ಕ್ಷಣಿಕವಿಜ್ಞಾನವನ್ನೇ ಆತ್ಮನೆಂದು ಹೇಳುವರು. ಆದರೆ ಅದ್ವೈತ ದರ್ಶನದಲ್ಲಿ ವಿಜ್ಞಾನವನ್ನೇ ನಿತ್ಯವೆಂದು ಹೇಳಿ ಆತ್ಮನೆನ್ನುವರು. ಇವೆರಡು ಸಿದ್ಧಾಂತಗಳನ್ನೂ ಈ ದರ್ಶನ ಒಪ್ಪುವುದಿಲ್ಲ. ಆತ್ಮನ ಜ್ಞಾತೃತ್ವ ಸತ್ವಃಸಿದ್ಧವೆಂದು ಈ ದರ್ಶನ ನಂಬುತ್ತದೆ. ಯಾವುದಾದರೂ ಒಂದು ವಿಷಯದ ಬಗೆಗೆ ಜ್ಞಾನ ಆತ್ಮನಿಗೆ ಉಂಟಾಗುವುದೆಂಬುದು ಈ ದರ್ಶನದ ನಿರ್ಣಯ. 'ಸ್ವಸತ್ತಯೈವ ಸ್ವಾಶ್ರಯಂ ಪ್ರತಿ ಕಸ್ಯಚಿದ್ವಿಷಯಸ್ಯ ಪ್ರಕಾಶನಂ ಹಿ ಸಂವೇದನಂ' ಎಂದು ರಾಮಾನುಜರು ಹೇಳುತ್ತಾರೆ. ಆದುದರಿಂದ ಕೇವಲ ಜ್ಞಾನವೇ ಆತ್ಮನಲ್ಲ. ಆತ್ಮನು ಜ್ಞಾನಕ್ಕೆ ಆಶ್ರಯನಾದವನು ಎಂದು ಇದರಿಂದ ಸಿದ್ಧವಾಗುತ್ತದೆ.

ಈ ಅಂಶ ಶ್ರುತಿ ಸ್ಮೃತ್ಯಾದಿಗಳಿಂದ ದೃಢವಾಗುತ್ತದೆ. ಅಹಮರ್ಥವು 'ನಾನು' ಎಂಬುದಾಗಿ ತನಗೆ ತಾನೇ ಪ್ರಕಾಶಿಸುತ್ತದೆ. ಈ ಅಹಮರ್ಥ ಜ್ಞಾತೃವಾಗಿರುವುದರಿಂದ ಜ್ಞಾನವು ಸಾಧ್ಯವಾಗಿರುವುದು. 'ಅಹಂತ್ವ' ಮತ್ತು 'ಜ್ಞಾತೃತ್ವ'ಗಳು ಒಂದೇ ಆಶ್ರಯದಲ್ಲಿವೆ. ಅಹಮರ್ಥ ಎಲ್ಲ ಕಾಲಕ್ಕೂ ಇರುವುದರಿಂದಲೇ ಸಂಸಾರದಿಂದ ಮುಕ್ತರಾಗಬೇಕೆಂಬ ಅಪೇಕ್ಷೆ ತೋರುತ್ತದೆ. ನಿದ್ರೆಯಿಂದೆದ್ದವನು ಮೊದಲು ಮಾಡುತ್ತಿದ್ದ ಕೆಲಸವನ್ನು ಮುಂದುವರಿಸುವನು. ಇವೆಲ್ಲ ಆತ್ಮನ ನಿತ್ಯತ್ವವನ್ನು ಸಮರ್ಥಿಸುವುವು. 'ನನ್ನನ್ನು ನಾನು ತಿಳಿಯಲಿಲ್ಲ' ಎಂದು ಸ್ವಪ್ನಾನುಭವವನ್ನು ಹೇಳುವುದಾದರೂ ಧರ್ಮಿಜ್ಞಾನದ ನಿರಾಕರಣೆಯಾಗಿಲ್ಲ. ಶರೀರಕೃತವಾದ, ಕಾಲದೇಶಕೃತವಾದ ಉಪಾಧಿಗಳು ಸ್ವಪ್ನಕಾಲದಲ್ಲಿ ಗೋಚರವಾಗುತ್ತಿರಲಿಲ್ಲವೆಂಬುದನ್ನು ಇದು ಸೂಚಿಸುತ್ತದೆ. ಏಕೆಂದರೆ ಆಗಲೂ ಆತ್ಮನು ಪ್ರಕಾಶಿಸುತ್ತಲೇ ಇರುತ್ತಾನೆ. ಹೀಗೆ ಆತ್ಮತತ್ವವು ದೇಹ ಇಂದ್ರಿಯ, ಮನಸ್ಸು, ಪ್ರಾಣ, ಜ್ಞಾನಗಳಿಗಿಂತ ಬೇರೆಯಾಗಿ ವಿಲಕ್ಷಣವಾದುದಾಗಿದೆ.

ಆತ್ಮನಿಗೆ ಕರ್ತೃತ್ವವುಂಟು

ಈಶ್ವರನ ಸಂಕಲ್ಪಕ್ಕನುಸಾರವಾಗಿ ಜೀವರಿಗೆ ಕರ್ತೃತ್ವವುಂಟು. ತಾನು ಮಾಡುವ ಒಳ್ಳೆಯ ಅಥವಾ ಕೆಟ್ಟ ಕೆಲಸಗಳಿಗೆಲ್ಲಾ ಜೀವನು ತಾನೇ ಜವಾಬ್ದಾರನಾಗಿದ್ದಾನೆ. ವಿಧಿನಿಷೇಧಾತ್ಮಕವಾದ ಶಾಸ್ತ್ರಗಳಿಗೆ ಅರ್ಥವತ್ತ್ವವಿರುವ ಕಾರಣ ಜೀವನು

acharya.org

ಕರ್ತೃತ್ವವನ್ನು ಹೊಂದಿದ್ದಾನೆಂದೂ ಆ ಕರ್ತೃತ್ವ ಅವನಿಗೆ ಪರಮಾತ್ಮನಿಂದ ದತ್ತವಾಗಿದೆ ಯೆಂದೂ ಸೂತ್ರಗಳು ಹೇಳುತ್ತವೆ. ಪರಮೇಶ್ವರನು ಪಕ್ಷಪಾತರಹಿತನಾಗಿದ್ದಾನೆ. ಜೀವರೇ ಮಾಡುವ ಶುಭಾಶುಭ ಕರ್ಮಗಳಿಗನುಗುಣವಾಗಿ ಫಲಪ್ರದಾನಮಾಡುವವ ನಾಗಿದ್ದಾನೆ.

ಸಾಮಾನ್ಯವಾಗಿ ಜೀವನ ಕರ್ತೃತ್ವ ಈಶ್ವರನಿಗಧೀನವಾಗಿದೆ. ಆದರೂ ಜೀವನ ಕರ್ಮವಾಸನೆಯು ಜೀವನ ಬಗೆಬಗೆಯಾದ ಕರ್ಮಗಳಿಗೆ ಕಾರಣವಾಗಿದೆ. ಕರ್ಮವು ಅನಾದಿಯಾದುದರಿಂದಲೂ ಅವರವರ ಕರ್ಮವಾಸನೆಗನುಸಾರವಾಗಿ ಅವರವರು ಪ್ರವೃತ್ತಿಸುವುದರಿಂದಲೂ ಅವರವರಿಗೆ ತಕ್ಕ ಫಲಗಳನ್ನೊದಗಿಸುವ ಈಶ್ವರನಿಗೆ ವೈಷಮ್ಯ ವಾಗಲೀ ನೈರ್ಘೃಣ್ಯವಾಗಲೀ ಇಲ್ಲವೆಂಬುದು ಸೂತ್ರಕಾರರ ಮತ.

ಆತ್ಮನು ಸ್ವಯಂಪ್ರಕಾಶ

ಆತ್ಮನು ಜ್ಞಾನಸ್ವರೂಪನಾದ ಕಾರಣ ಸ್ವಯಂವೇದ್ಯನಾಗಿದ್ದಾನೆ. ಆತ್ಮನನ್ನು ತಿಳಿಯಲು ಮತ್ತೊಂದು ವಿಜ್ಞಾನದ ಅವಶ್ಯಕತೆ ಇಲ್ಲ. ಶ್ರುತಿ 'ಸ್ವಯಂ ಜ್ಯೋತಿ' ಎಂದು ಆತ್ಮನ ಸ್ವಯಂಪ್ರಕಾಶತ್ವವನ್ನು ಹೇಳುತ್ತದೆ. ಸ್ವಯಂಪ್ರಕಾಶನೆಂದರೆ ಆತ್ಮನು ತನಗೆ ತನ್ನನ್ನು ತೋರಿಸಿಕೊಳ್ಳುವನೆಂದು ಅರ್ಥ. ಎಲ್ಲಾ ಕಾಲದಲ್ಲಿಯೂ ಎಲ್ಲರಿಗೂ ತೋರಿಸಿ ಕೊಳ್ಳುವುದಲ್ಲ. ನಮ್ಮ ಧರ್ಮಭೂತಜ್ಞಾನದ ಮೂಲಕ ಮತ್ತೊಬ್ಬರ ಆತ್ಮವನ್ನು ನಾವರಿಯುವುದರಿಂದ ಆ ಆತ್ಮನ ಸ್ವಯಂಪ್ರಕಾಶತ್ವಕ್ಕೆ ಕುಂದಿಲ್ಲ. ಆತ್ಮನು ಅಣುತ್ವ ನಿತ್ಯತ್ವ ಶೇಷತ್ವಗಳೆಲ್ಲದರೊಡನೆ ಪ್ರಕಾಶಿಸುವನೇ ಎಂದರೆ ಇಲ್ಲವೆಂದು ಹೇಳಬೇಕು. ಈ ಧರ್ಮಗಳು ಧರ್ಮಭೂತ ಜ್ಞಾನದಿಂದ ವೇದ್ಯವಾಗುತ್ತವೆ. ಆದುದರಿಂದ ಯಾವಾಗಲೂ ತೋರುವುದಿಲ್ಲ. ಆದರೆ ಆತ್ಮಸ್ವರೂಪಭೂತಜ್ಞಾನ ಏಕತ್ವ, ಅನುಕೂಲತ್ವ ಪ್ರತ್ಯಕ್ತ್ವಗಳೊಡನೆ ಭಾಸವಾಗಿದೆ. ಈ ಲಕ್ಷಣಗಳು ಆತ್ಮನಿಗೆ ಅಪೃಥಕ್ಸಿದ್ಧವಾಗಿರು ವುದರಿಂದ ಧರ್ಮಿಜ್ಞಾನದ ಪ್ರಕಾಶದಲ್ಲಿಯೇ ಪ್ರಕಾಶಿಸುವುವು.

'ಅಹಮಿತಿ ಪ್ರತ್ಯಕ್ತ್ವೈಕತ್ವ ವಿಶಿಷ್ಟತಯಾ ತು ಸ್ವಪ್ರಕಾಶತಾ ಸರ್ವದಾ' ಎಂದು ದೇಶಿಕರವರು ನ್ಯಾಯಸಿದ್ಧಾಂಜನದಲ್ಲಿ ಇದನ್ನು ಹೇಳಿದ್ದಾರೆ. ಆತ್ಮನು ಜಾಗ್ರತ್ ಸ್ವಪ್ನ ಸುಷುಪ್ತ್ಯವಸ್ಥೆಗಳಲ್ಲಿ ಹೀಗೆಯೇ ಸ್ವಯಂಪ್ರಕಾಶವಾಗಿರುವುದು. ಯೋಗಾಭ್ಯಾಸ ದಿಂದ ಲಭಿಸುವ ಸಮಾಧಿಯಲ್ಲಿ ಆತ್ಮನು ಸಕಲಾಕಾರವಿಶಿಷ್ಟವಾಗಿ ಸಾಕ್ಷಾತ್ಕಾರ ಕ್ಕೊಳಗಾಗುವನು.

ಸ್ವರೂಪಜ್ಞಾನ ಅಥವಾ ಧರ್ಮಿಜ್ಞಾನಕ್ಕೆ ಮೂರು ಬಗೆಯ ಆಕಾರಗಳಿವೆ. ಏಕತ್ವ, ಪ್ರತ್ಯಕ್ತ್ವ ಮೊದಲಾದುವುಗಳಿಂದ ವಿಶಿಷ್ಟವಾದ ತನ್ನನ್ನು ತಾನು ಸ್ವತಂತ್ರವಾಗಿ ತಿಳಿಯುವುದರಿಂದಲೂ ಧರ್ಮಭೂತಜ್ಞಾನದಿಂದ ಸ್ವೇತರ ವಿಷಯಗಳನ್ನು ಅರಿಯುವುದ

acharya.org

ರಿಂದಲೂ ಆತ್ಮನು **ಪ್ರಮಾತಾ** ಆಗಿದ್ದಾನೆ. ಆತ್ಮನ ಸ್ವರೂಪವು ಧರ್ಮಭೂತಜ್ಞಾನಕ್ಕೆ ವಿಷಯವಾಗುವುದರಿಂದ ಅವನು **ಪ್ರಮೇಯವೂ** ಆಗುವನು. ಸ್ವರೂಪಜ್ಞಾನವೇ ಆಗಿರುವ ಅವನು **ಪ್ರಮಾಣವೂ** ಆಗಿದ್ದಾನೆ.

ಆತ್ಮನು ಜ್ಞಾನಸ್ವರೂಪ

ಆತ್ಮನಲ್ಲಿ ಜ್ಞಾನವು ಪ್ರಧಾನವಾಗಿರುವುದೆಂದು 'ವಿಜ್ಞಾನಂ ಯಜ್ಞಂ ತನುತೇ' ಎಂಬ ಶ್ರುತಿ ಹೇಳುವುದು. ಸೂತ್ರಕಾರರೂ ಸಹ 'ತದ್ಗುಣಸಾರತ್ವಾತ್ತು ತದ್ವ್ಯಪದೇಶಃ ಪ್ರಾಜ್ಞವತ್' ಎಂದು ಇದನ್ನು ಸಮರ್ಥಿಸಿದ್ದಾರೆ. ಇದನ್ನೇ ಮುಖ್ಯವಾಗಿಟ್ಟುಕೊಂಡು ಆತ್ಮನು ಜ್ಞಾನಾಶ್ರಯನೇ ವಿನಾ ಜ್ಞಾನಸ್ವರೂಪನಲ್ಲವೆಂದು ಕೆಲವರು ಹೇಳುವರು. ಪ್ರಶ್ನೋಪನಿಷತ್ತಿನ 'ಏಷ ಹಿ ದ್ರಷ್ಟಾ ಶ್ರೋತಾ ಘ್ರಾತಾ ರಸಯಿತಾ ಮಂತಾ ಬೋದ್ಧಾ ಕರ್ತಾ ವಿಜ್ಞಾನಾತ್ಮಾ ಪುರುಷಃ' ಎಂಬ ನುಡಿ ಈ ಸಂದೇಹವನ್ನು ನಿವಾರಿಸುತ್ತದೆ. ಇಲ್ಲಿ **ಬೋದ್ಧಾ** ಎಂಬುದರಿಂದ ಜ್ಞಾತೃತ್ವವನ್ನು ಹೇಳಿ ತಿಳಿಯುವ ಆರು ಪ್ರಕಾರಗಳನ್ನು ಹಿಂದಿನ ಆರು ಪದಗಳಿಂದ ತಿಳಿಸಿ **ವಿಜ್ಞಾನಾತ್ಮಾ** ಎಂಬ ಶಬ್ದದಿಂದ ಆತ್ಮನು ಜ್ಞಾನಸ್ವರೂಪನೂ ಆಗಿದ್ದಾನೆಂದು ಶ್ರುತಿ ಹೇಳಿದೆ. ಹೇಗೆ ಧರ್ಮಭೂತಜ್ಞಾನವು ಜ್ಞಾನವಾದುದರಿಂದ ಸ್ವಯಂಪ್ರಕಾಶವೋ ಹಾಗೆಯೇ ಆತ್ಮನೂ ಜ್ಞಾನಸ್ವರೂಪಿಯಾದ ಕಾರಣ ಸ್ವಯಂಪ್ರಕಾಶನೆಂಬ ವಿಷ್ಣುಚಿತ್ತರ ಅನುಮಾನಪ್ರಕಾರವನ್ನು ದೇಶಿಕರು ಉದಾಹರಿಸಿದ್ದಾರೆ. ಜ್ಞಾನತ್ವಕ್ಕೂ ಸ್ವಯಂಪ್ರಕಾಶತ್ವಕ್ಕೂ ವ್ಯಾಪ್ತಿ ಇದೆ ಎಂಬುದನು ಇಲ್ಲಿ ತೋರಿದ್ದಾರೆ. ಧರ್ಮಿಜ್ಞಾನವೂ ಸ್ವಯಂಪ್ರಕಾಶವಾಗಿದೆ. ಧರ್ಮಭೂತಜ್ಞಾನವೂ ಹಾಗೆಯೇ ಸ್ವಯಂಪ್ರಕಾಶವಾಗಿದೆ. ಆದರೆ ಒಂದು ತನ್ನನ್ನು ತಾನೇ ತೋರಿಸಿಕೊಳ್ಳುತ್ತದೆ. ಮತ್ತೊಂದು ತನ್ನನ್ನೂ ಇತರ ಪದಾರ್ಥಗಳನ್ನೂ ತೋರಿಸುತ್ತದೆ. ದೀಪ ತನ್ನನ್ನು ತೋರುತ್ತದೆ. ಪ್ರಭೆ ತನ್ನನ್ನೂ ಇತರ ಪದಾರ್ಥವನ್ನೂ ತೋರಿಸುತ್ತದೆ. ಇವೂ ಸಹ ಹಾಗೆಯೇ. ಸ್ವರೂಪಭೂತಜ್ಞಾನಕ್ಕೆ ಧರ್ಮಭೂತಜ್ಞಾನಕ್ಕಿರುವಂತೆ ಕರ್ತೃ ಕರ್ಮ ಸಂಬಂಧವಿಲ್ಲದುದು ಹೇಗೆಂದು ಅಕ್ಷೇಪ ಬರಬಹುದು. ಕರ್ಮಕರ್ತೃ ಸಂಬಂಧದ ಅರಿವು ಜ್ಞಾನತ್ವಕ್ಕೆ ಮುಖ್ಯವಾದುದಲ್ಲ. ವ್ಯವಹಾರಕ್ಕೆ ಯಾವುದು ಸ್ವತಂತ್ರವಾಗಿಯೂ ನೇರವಾಗಿಯೂ ಕಾರಣವಾಗುವುದೋ ಅದು ಜ್ಞಾನ ಎನ್ನಿಸುವುದು. ವ್ಯವಹಾರಾರ್ಹತೆಗೆ ಧರ್ಮಿಜ್ಞಾನ ಕಾರಣ. ವಿಷಯವನ್ನು ಕುರಿತ ವೈಶಿಷ್ಟ್ಯ ನಿಬಂಧ ಧರ್ಮಭೂತಜ್ಞಾನದಿಂದಾಗುತ್ತದೆ. ಇಲ್ಲಿ ಹೇಳುವ ಸ್ವರೂಪಜ್ಞಾನ ಅಥವಾ ಧರ್ಮಿ ಜ್ಞಾನ ಅಥವಾ ಆತ್ಮಸ್ವರೂಪ ನಿರ್ವಿಶೇಷವಾದುದಲ್ಲ. ಜ್ಞಾನತ್ವ, ಜ್ಞಾನದ್ರವ್ಯತ್ವ, ಜ್ಞಾನದ್ರವ್ಯಾಶ್ರಯತ್ವ, ನಿತ್ಯತ್ವ, ಅಣುತ್ವ, ನಿಯಾಮ್ಯತ್ವ, ಆದೇಯತ್ವ, ಶೇಷತ್ವ, ಆನಂದತ್ವ ಮೊದಲಾದ ವಿಶೇಷಣಗಳನ್ನು ಇದು ಹೊಂದಿರುತ್ತದೆ.

acharya.org

ಆತ್ಮನ ನಿತ್ಯತ್ವ

ಆತ್ಮನು ನಿತ್ಯನು. ಅವಿನಾಶಿಯಾದವನು. ಇವನು ಆಕಸ್ಮಿಕವಾಗಿ ತೋರಿ ಮರೆಯಾಗುವವನಲ್ಲ. ಆತ್ಮನ ನಿತ್ಯತ್ವವನ್ನು ಕುರಿತು ಗೀತೆಯೂ ಹೇಳುತ್ತದೆ. ಇವನು ನಿತ್ಯನಾಗಿಲ್ಲದಿದ್ದರೆ 'ಅಕೃತಾಭ್ಯಾಗಮ' ಮತ್ತು 'ಕೃತಪ್ರಣಾಶ'ದ ದೋಷಗಳು ಬರುತ್ತವೆ. ಎಂದರೆ ಮಾಡದೆ ಇರುವುದನ್ನನುಭವಿಸುವುದು ಮಾಡಿದುದರ ವಿನಾಶವಾಗುವುದೂ ಸಂಭವಿಸುವುವು. 'ಅಜೋ ಭಾಗಃ' ಎಂದು ಋಗ್ವೇದಸಂಹಿತೆಯೂ ಹಾಗೆಯೇ ಅಥರ್ವವೇದ. ಶತಪಥ ಬ್ರಾಹ್ಮಣ, ಕಠೋಪನಿಷತ್ತು ಮೊದಲಾದವೂ ಆತ್ಮನ ನಿತ್ಯತ್ವವನ್ನು ಸಮರ್ಥಿಸುತ್ತವೆ. ಜೀವನು ಅಣುಸ್ವರೂಪಿಯೆಂದು ರಾಮಾನುಜರು ಶ್ರುತಿಗಳಿಗನುಸಾರವಾಗಿ ಸಾಧಿಸಿದ್ದಾರೆ. ಜೀವನು ವಿಭುವಾಗಿದ್ದರೆ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳತಕ್ಕವನೆಂಬುದಕ್ಕೆ ಅರ್ಥವೇ ಇರುವುದಿಲ್ಲ. ಅಂಥ ಸಂದರ್ಭದಲ್ಲಿ ಇವನಿಗೆ ಸಂಭವಿಸುವ ಪುನರ್ಜನ್ಮ, ಉತ್ಕ್ರಾಂತಿ, ಗತಿ ಮೊದಲಾದವು ಸಂಭವಿಸುತ್ತಿರಲಿಲ್ಲ.. ಶರೀರಕ್ಕನುಗುಣವಾದ ಪ್ರಮಾಣವನ್ನು ಆತ್ಮನು ಹೊಂದಿರುವನೆಂಬುದನ್ನು ಈ ಸಿದ್ಧಾಂತ ಒಪ್ಪುವುದಿಲ್ಲ. ಧರ್ಮಭೂತಜ್ಞಾನದ ದ್ವಾರಾ ಆತ್ಮನು ವ್ಯಾಪಿಯಾಗಿದ್ದಾನೆಂಬುದು ಈ ಸಿದ್ಧಾಂತದ ನಿಶ್ಚಯ. 'ಅಂಗುಷ್ಠಮಾತ್ರಃ ಪುರುಷಃ ಮಧ್ಯ ಆತ್ಮನಿ ತಿಷ್ಠತಿ' ಎಂಬ ಕಠೋಪನಿಷತ್ತಿನ ಶ್ರುತಿ ಆತ್ಮನು ಹೃದಯದಲ್ಲಿರುವನೆಂದು ಸಮರ್ಥಿಸುತ್ತದೆ. ಹೃದಯ ಗುಹೆಯೊಳಗೆ ಆತ್ಮನೊಡನೆ ಪರಮಾತ್ಮನು ಪ್ರವೇಶಿಸಿದ್ದಾನೆಂಬ ಸೂತ್ರಕಾರರ ನುಡಿ ಇದನ್ನೇ ಸಮರ್ಥಿಸುತ್ತದೆ. ಯಾಮುನರು ಆತ್ಮನನ್ನು ವ್ಯಾಪೀ ಎಂದು ಹೇಳಿರುವುದಕ್ಕೆ ರಾಮಾನುಜರು ವಿವರಣೆ ಕೊಡುತ್ತಾ ಅತಿಸೂಕ್ಷ್ಮವಾಗಿರುವ ಕಾರಣ ಆತ್ಮನು ಎಲ್ಲಾ ಅಚೇತನಗಳೊಳಗೆ ಪ್ರವೇಶಿಸುವ ಸ್ವಭಾವವನ್ನು ಹೊಂದಿರುವುದರಿಂದ ವ್ಯಾಪೀ ಎಂಬುದಾಗಿ ನಿರೂಪಿಸುತ್ತಾರೆ. ಸರ್ವಗತಃ ಎಂಬ ಶಬ್ದ ಆತ್ಮರು ಅಸಂಖ್ಯರಾಗಿ ಎಲ್ಲೆಲ್ಲೂ ಇದ್ದಾರೆಂಬ ಅರ್ಥವನ್ನಾಗಲೀ ಅಥವಾ ಆತ್ಮನ ಧರ್ಮಭೂತಜ್ಞಾನ ಸಹಜಾವಸ್ಥೆಯಲ್ಲಿ ಸರ್ವವ್ಯಾಪಕವಾಗಿದೆ ಎಂಬುದನ್ನಾಗಲೀ ಸೂಚಿಸುವುದೆಂಬುದು ದೇಶಿಕರ ಅಭಿಪ್ರಾಯ.

ಆತ್ಮನು ದೇಹದ ಯಾವುದೋ ಭಾಗದಲ್ಲಿರುತ್ತಿದ್ದರೂ ತನ್ನ ಧರ್ಮಭೂತಜ್ಞಾನದ ಮೂಲಕ ಸಮಸ್ತ ವ್ಯಾಪಾರಗಳನ್ನೂ ಮಾಡಲು ಶಕ್ತನಾಗಿದ್ದಾನೆ. ಶರೀರವನ್ನೆಲ್ಲಾ ಆತ್ಮಜ್ಞಾನದ ಮೂಲಕ ವ್ಯಾಪಿಸಿರುತ್ತಾನೆ. ಧರ್ಮಭೂತಜ್ಞಾನದ ಮೂಲಕ ಆತ್ಮನು ಅನೇಕ ಶರೀರಗಳನ್ನೂ ವ್ಯಾಪಿಸಬಲ್ಲನೆಂಬುದನ್ನು ಸೂತ್ರಕಾರರು 'ಪ್ರದೀಪವದಾವೇಶಸ್ತಥಾ ಹಿ ದರ್ಶಯತಿ' ಎಂದು ನಿರೂಪಿಸುತ್ತಾರೆ. ಇದೇ ರೀತಿಯಲ್ಲಿ ಸರ್ವಗತಮ್, ಸರ್ವಮಾವೃತ್ಯ ತಿಷ್ಠತಿ ಮುಂತಾದವುಗಳಿಗೂ ಅರ್ಥವೆಂದರಿಯಬೇಕು.

acharya.org

ಆತ್ಮರುಗಳು ಅನಂತರು

ಈ ಸಿದ್ಧಾಂತಕ್ಕನುಗುಣವಾಗಿ ಆತ್ಮರು ಅನೇಕರಾಗಿ ಅನಂತರಾಗಿದ್ದಾರೆ. ಒಬ್ಬರಿಗಿಂತ ಒಬ್ಬರು ಭಿನ್ನರಾಗಿದ್ದಾರೆ. ಒಬ್ಬೊಬ್ಬರಿಗೂ ಅವರವರದೇ ಆದ ಸುಖ ದುಃಖಾದಿಗಳು ಜ್ಞಾನಶಕ್ತ್ಯಾದಿಗಳು ಇರುವುದು ನಮಗೆ ಗೋಚರವಾಗಿದೆ. ಸಂಸಾರ ದೆಶೆಯಲ್ಲಿ ಜೀವನೊಬ್ಬನ ಜ್ಞಾನ ಮತ್ತೊಬ್ಬನ ಜ್ಞಾನದಂತಿಲ್ಲ. ಆತ್ಮನು ಒಬ್ಬನೇ ಇದ್ದಿದ್ದ ಪಕ್ಷದಲ್ಲಿ ಒಬ್ಬನ ಜ್ಞಾನ ಮತ್ತೆಲ್ಲರಿಗೂ ಆಗಬೇಕಾಗಿದ್ದಿತು; ಒಬ್ಬನ ಸುಖದುಃಖಾನುಭವ ಮತ್ತೆಲ್ಲರಿಗೂ ಅನುಭವಗೋಚರವಾಗಬೇಕಾಗಿತ್ತು; ಒಬ್ಬನ ಜನನ ಅಥವಾ ಮರಣ ಮತ್ತೆಲ್ಲರ ಜನನ ಮರಣದಲ್ಲಿ ಪರಿಣಮಿಸಬೇಕಾಗಿತ್ತು. ಆದರೆ ಇವು ಯಾವುವೂ ಸಂಭವಿಸುತ್ತಿಲ್ಲ. ಆದುದರಿಂದಲೇ ಜೀವನಾನಾತ್ವ ಸಿದ್ಧವಾಗಿದೆ. ಸಾಂಖ್ಯರೂ ನಯ್ಯಾಯಿಕರೂ ಹೀಗೆಯೇ ಜೀವನಾನಾತ್ವವನ್ನು ಒಪ್ಪುತ್ತಾರೆ. ಹೀಗಾದರೆ ಆತ್ಮವು ಏಕಮಯನೆಂದು ಹೇಳಿರುವ ಮಾತುಗಳ ಪಾಡೇನು? ಇಂಥ ಮಾತುಗಳಿಗೆ ಆತ್ಮರುಗಳೆಲ್ಲ ಒಂದೇ ಸ್ವಭಾವವುಳ್ಳವರು ಎಂದು ಹೇಳುವುದು ತಾತ್ಪರ್ಯ. ಆತ್ಮರುಗಳಿಗೆಲ್ಲಾ ಸ್ವರೂಪತಃ ಸಾಮ್ಯವಿದೆಯೆಂದು ಈ ದರ್ಶನ ಹೇಳುತ್ತದೆ. ಮುಕ್ತಾವಸ್ಥೆಯಲ್ಲಿ ಅವರ ಧರ್ಮಭೂತ ಜ್ಞಾನದಲ್ಲಿಯೂ ಸಾಮ್ಯವಿರುತ್ತದೆ. ಆತ್ಮರೆಲ್ಲರೂ ಜ್ಞಾನಾನಂದಮಯರಾಗಿದ್ದಾರೆ. ಸಂಸಾರದೆಶೆಯಲ್ಲಿ ಅವರ ಧರ್ಮಭೂತಜ್ಞಾನ ಅವರವರ ಕರ್ಮಾನುಗುಣವಾಗಿ ಸಂಕುಚಿತವಾಗಿರುವ ಕಾರಣ ಆತ್ಮರುಗಳು ಅಸಮರಾಗಿದ್ದಾರೆ. ಪ್ರತ್ಯಕ್ಷವಾಗಿ ಗೋಚರಿಸುವ ಈ ಜೀವವೈಷಮ್ಯಕ್ಕೆ ಅವರವರ ಕರ್ಮ ಕಾರಣ. ಜೀವರುಗಳು ಕೇವಲ ತೋರಿಕೆಯಲ್ಲ; ನಿಜವಾಗಿರುವವರು. ಇವರು ಅನೇಕವಾಗಿರುವವರು. ಹಾಗಿಲ್ಲದೆ ಇದ್ದಿದ್ದರೆ ಸಂಸಾರ ಮತ್ತು ಮೋಕ್ಷಗಳನ್ನೂ ನಾವು ಸಮರ್ಪಕವಾಗಿ ನಿರೂಪಿಸುವುದಕ್ಕಾಗುವುದಿಲ್ಲ.

ಜೀವ ವಿಭಾಗ

ಜೀವರುಗಳನ್ನು ಕೆಳಗೆ ಕಂಡಂತೆ ವಿಭಾಗ ಮಾಡಬಹುದು.

- ಜೀವರು
  - ಸಂಸಾರಿ
    - ನಿತ್ಯಸಂಸಾರಿ
    - ಭಾವಿಸಂಸಾರವಿರಹಃ
  - ಅಸಂಸಾರಿ
    - ನಿತ್ಯ
    - ಮುಕ್ತ

ಭಾವಿಸಂಸಾರ ವಿರಹನೆಂಬುವನು ಸಾಧನಾನುಷ್ಠಾನಗಳನ್ನು ಮಾಡಿ ಈಶ್ವರಾನುಗ್ರಹದ ಕಾರಣ, ಸಂಸಾರದಿಂದ ಬಿಡುಗಡೆ ಹೊಂದುವವನು. ನಿತ್ಯಸಂಸಾರಿಗಳು ಎಲ್ಲ

acharya.org

ಕಾಲವೂ ಕರ್ಮದಿಂದ ಬದ್ಧರಾಗಿ ಹೋಗುವವರು. ಸತತವಾಗಿ ಪಾಪಾಚರಣೆಯನ್ನೇ ಮಾಡಿ ಈಶ್ವರನ ನಿಗ್ರಹಕ್ಕೆ ಪಾತ್ರರಾಗುವವರಿವರು. ಆದರೂ ಪ್ರತಿಯೊಬ್ಬ ಜೀವನೂ ಮೋಕ್ಷವನ್ನು ಪಡೆಯಲರ್ಹನಾಗಿದ್ದಾನೆಂದೂ ಈ ಸಿದ್ಧಿ ಜೀವನ ಮನೋಭಾವ, ಸಂಸ್ಕಾರ ಮತ್ತು ಸಾಧನಗಳನ್ನವಲಂಬಿಸಿದೆಯೆಂದೂ ಈ ದರ್ಶನದ ಅಭಿಪ್ರಾಯ. ಮೋಕ್ಷೋಪಾಯವನ್ನನುಷ್ಠಿಸದೇ ಹೋದರೆ ಮುಕ್ತಿ ದೊರಕದು. ಅಂಥವನು ಅನೇಕ ಕಾಲ ಸಂಸಾರದಲ್ಲಿಯೇ ಇರಬೇಕಾಗುವುದು. ಇವರಿಬ್ಬರೂ ಲೀಲಾವಿಭೂತಿಯನ್ನು ಪ್ರತಿನಿಧಿಸುವರು. ನಿತ್ಯರೂ ಮುಕ್ತರೂ ಪರಮಪದದಲ್ಲಿ ಈಶ್ವರನ ಮಹದಾನಂದವನ್ನು ಅನುಭವಿಸುತ್ತಿರುವವರಾಗಿದ್ದಾರೆ. ನಿತ್ಯರಿಗೆ ಸಂಸಾರದ ಸೋಂಕೇ ಇರದು. ಸಂಸಾರದ ಬಂಧನದಿಂದ ಬಿಡುಗಡೆ ಹೊಂದಿ ಪರಮಾತ್ಮನನ್ನು ಸೇರಿದವರು ಮುಕ್ತರು. ಇವರೆಲ್ಲರೂ ಸಮಾನವಾದ ಆನಂದವನ್ನನುಭವಿಸುವವರಾಗಿದ್ದಾರೆ.

ಜೀವರು ಈಶ್ವರನಿಗೆ ಪ್ರಕಾರಭೂತರು

ಜೀವರುಗಳು ಪ್ರಕೃತಿಗಿಂತ ವಿಲಕ್ಷಣರಾದವರು. ಈಶ್ವರನಿಗಿಂತ ಬೇರೆಯಾದವರು. ಆದರೂ ಇವರು ಸ್ವತಂತ್ರವಾಗಿರುವವರಲ್ಲ. ಪ್ರಕೃತಿಯನ್ನು ಶರೀರವನ್ನಾಗಿ ಹೊಂದಿ ಅದನ್ನು ಜೀವರು ನಿಯಮಿಸುವವರಾಗಿದ್ದಾರೆ. ಹಾಗೆಯೇ ಈಶ್ವರನ ನಿಯಮನಕ್ಕೆ ಇವರು ಒಳಗಾಗಿದ್ದಾರೆ. ಈಶ್ವರನು ಈ ಜೀವರಿಗೂ ಆ ಪ್ರಕೃತಿಗೂ ಒಂದೇ ರೀತಿಯಾಗಿ ಅಂತರ್ಯಾಮಿಯಾಗಿದ್ದಾನೆಂದು ಶ್ರುತಿಗಳು ಹೇಳುತ್ತವೆ. 'ಅನೇನ-ಜೀವೇನಾತ್ಮನಾ ಅನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' ಎಂಬ ಶ್ರುತಿ ಇದನ್ನು ಸಮರ್ಥಿಸುತ್ತದೆ. ಇದಕ್ಕನುಸಾರವಾಗಿ ರಾಮಾನುಜರು ಜೀವನನ್ನು ಈಶ್ವರನ ಪ್ರಕಾರ, ಅಂಶ, ಶರೀರ ಎಂದು ಹೇಳುತ್ತಾರೆ. ಚೇತನ ಮತ್ತು ಅಚೇತನ ತತ್ತ್ವಗಳೆರಡೂ ಬ್ರಹ್ಮಪ್ರಕಾರಗಳು. ಪ್ರಕಾರವೆಂದರೆ ವಿಶೇಷಣ. ಈ ಎರಡು ತತ್ತ್ವಗಳೂ ಎಲ್ಲಾ ಅವಸ್ಥೆಗಳಲ್ಲಿಯೂ ಬ್ರಹ್ಮವಸ್ತುವನ್ನು ಕೂಡಿಕೊಂಡೇ ಇರುತ್ತವೆ. ಈ ಅಂಶಾಂಶಿಭಾವವನ್ನು 'ಯಸ್ಯಾತ್ಮಾ ಶರೀರಂ' ಎಂದು ಶ್ರುತಿ ಉದ್ಘೋಷಿಸುತ್ತಿದೆ. ಹೀಗಾಗಿ ಜೀವರುಗಳೂ ಪರಮಾತ್ಮನ ಶರೀರಗಳು. ಯಾವನಾದರೂ ಒಬ್ಬ ಚೇತನ ಒಂದು ದ್ರವ್ಯಕ್ಕೆ ನಿಯಮೇನ ಧಾರಕನಾಗಿ, ನಿಯಾಮಕನಾಗಿ ಶೇಷಿಯಾಗಿದ್ದರೆ ಅವನು ಅದಕ್ಕೆ ಆತ್ಮನೆಂದು ತಿಳಿಯಬೇಕು. ನಮ್ಮ ಶರೀರಕ್ಕೆ ನಾವು ಹೀಗೆ ಆತ್ಮರುಗಳಾಗಿದ್ದೇವೆ. ಶರೀರವನ್ನು ಆತ್ಮಾ ಧರಿಸುತ್ತದೆ. ನಿಯಮಿಸುತ್ತದೆ. ಮತ್ತು ಶರೀರದಿಂದ ಆತ್ಮಾ ಅತಿಶಯವನ್ನು ಹೊಂದುತ್ತದೆ. ಹೀಗೆಯೇ ಬ್ರಹ್ಮವಸ್ತು ಜೀವರುಗಳಿಗೂ ಆತ್ಮನು. ಜೀವರುಗಳ ಇರವು ಬ್ರಹ್ಮವಸ್ತುವಿಗಧೀನ. ಜೀವರುಗಳ ವ್ಯಾಪಾರ ಬ್ರಹ್ಮಕ್ಕೆ ಅಧೀನ. ಜೀವರುಗಳಿಂದಾಗುವ ಪ್ರಯೋಜನವೂ ಬ್ರಹ್ಮವಸ್ತುವಿನದೇ. ಹೀಗೆ ಬ್ರಹ್ಮವಸ್ತು ಎಲ್ಲಕ್ಕೂ ಆತ್ಮವಾಗಿದೆ; ಅಂತರ್ಯಾಮಿಯಾಗಿದೆ.

acharya.org

ಈ ಶರೀರ–ಶರೀರಿ ಭಾವದ ಮೂಲಕ ಆಪಾತತಃ ಭಿನ್ನ ಭಿನ್ನವಾಗಿ ವಿರುದ್ಧವಾಗಿ ಕಾಣುತ್ತಿರುವ ಶ್ರುತಿವಾಕ್ಯಗಳಿಗೆಲ್ಲಾ ಸಮಂಜಸವಾದ ಅರ್ಥವನ್ನು ಮಾಡಬಹುದು. ಹೀಗೆ ಜೀವಾತ್ಮರು ಅನೇಕರಾಗಿ ಜ್ಞಾನಾನಂದಮಯರಾಗಿ ಬ್ರಹ್ಮವಸ್ತುವಿನ ಶರೀರ ಗಳಾಗಿ ಆತನಿಗೆ ಅತ್ಯಂತ ಪರತಂತ್ರರಾಗಿದ್ದಾರೆಂದು ಈ ದರ್ಶನ ನಿರೂಪಿಸುತ್ತದೆ. ಇದು ಜೀವಾತ್ಮ ಸ್ವರೂಪ.

ಈಶ್ವರ ಸ್ವರೂಪ

ತಮ್ಮ ಶ್ರೀಭಾಷ್ಯದ ಮಂಗಳ ಶ್ಲೋಕದಲ್ಲಿ ಭಗವದ್ರಾಮಾನುಜರು ಬ್ರಹ್ಮ ಸ್ವರೂಪವನ್ನು ನಿರೂಪಿಸಿದ್ದಾರೆ. ಈ ಶ್ಲೋಕದಲ್ಲಿ ಆಚಾರ್ಯರು ಕೆಳಗೆ ಕಂಡ ಅಂಶಗಳನ್ನು ಸಮರ್ಥಿಸಿದ್ದಾರೆ :

೧. ಸಮಸ್ತವಾದ ಲೋಕಗಳ ಹುಟ್ಟು, ಇರವು ಮತ್ತು ಅಳಿವುಗಳಿಗೆ ಅವನು ಏಕೈಕ ಕಾರಣ

೨. ಸೃಷ್ಟ್ಯಾದಿಗಳು ಅವನ ಲೀಲೆ

೩. ಸರ್ವಕಾರಣವಾದ ಈ ಈಶ್ವರನೇ ಸರ್ವರಕ್ಷಕನಾಗಿದ್ದಾನೆ.

೪. ಈ ಈಶ್ವರನನ್ನು ವೇದಾಂತಗಳಿಂದಲೇ ತಿಳಿಯಬೇಕು.

೫. ಈತನೇ ಭಕ್ತರನ್ನನುಗ್ರಹಿಸುವುದಕ್ಕಾಗಿ ಶ್ರೀನಿವಾಸನಾಗಿ ಅರ್ಚಾರೂಪ ದಲ್ಲಿದ್ದಾನೆ.

೬. ಆ ಈಶ್ವರನನ್ನು ಪಡೆಯಲು ಸಾಧನ ಭಕ್ತಿ ಅಥವಾ ಉಪಾಸನೆ.

ರಾಮಾನುಜರ ಈ ಮಂಗಳಶ್ಲೋಕದಿಂದ ಈ ಸಿದ್ಧಾಂತದ ಕೆಲವು ಮುಖ್ಯಾಂಶ ಗಳು ಗೊತ್ತಾಗುತ್ತವೆ. ಅವು ಯಾವುವೆಂದರೆ :—

೧. ಬ್ರಹ್ಮವು ಸತ್ಯ ಮತ್ತು ಜ್ಞೇಯ.

೨. ಪ್ರಕೃತಿಯೂ ಸತ್ಯ. ಅಸಂಖ್ಯರಾದ ಜೀವರುಗಳೂ ಸತ್ಯ. ಇವರು ಈಶ್ವರನ ಪ್ರಕಾರಗಳಾಗಿದ್ದಾರೆ. ಅವನನ್ನುಳಿದು ಇವರು ಇರಲಾರರು, ಪ್ರವೃತ್ತಿಸಲಾರರು.

೩. ವ್ಯಾವಹಾರಿಕ ಪ್ರಪಂಚವೂ ಸತ್ಯವಾದುದೇ.

೪. ಸಾದನಗಳೂ ಸತ್ಯವಾದವು. ಆತ್ಮನ ಉನ್ನತಿಯನ್ನು ಸಾಧಿಸಲು ಇವು ಅತ್ಯಂತ ಅವಶ್ಯಕವಾದವು.

೫. ಆ ಪರಮಾತ್ಮನ ಪ್ರಾಪ್ತಿಯೇ ಜೀವನ ಪರಮಪುರುಷಾರ್ಥ.

ಬ್ರಹ್ಮಸತ್ಯತ್ವವನ್ನು ಅಂಗೀಕರಿಸದವರನ್ನೂ ಬ್ರಹ್ಮವಸ್ತುವಿನ ವಿಭೂತಿಯನ್ನಂಗೀ ಕರಿಸದವರನ್ನೂ ರಾಮಾನುಜರು ವಿರೋಧಿಸಿ ಸಮಸ್ತ ಪ್ರಪಂಚಕ್ಕೂ ಆಧಾರವಾಗಿ ನಿಯಾಮಕನಾಗಿ ಶೇಷಿಯಾಗಿರುವ ಪರವಸ್ತುವಿನ ಸ್ವರೂಪವನ್ನು ಸ್ಥಾಪಿಸಿದ್ದಾರೆ.

acharya.org

ಬ್ರಹ್ಮವಸ್ತು ವೇದ್ಯವೂ ವಾಚ್ಯವೂ ಆಗಿದೆ.

ಬ್ರಹ್ಮವು ಮಾತಿಗೂ ಮನಸ್ಸಿಗೂ ಎಟುಕುವುದಿಲ್ಲವೆಂಬುದನ್ನು 'ಯತೋ ವಾಚೋ ನಿರ್ವತಂತೇ ಅಪ್ರಾಪ್ಯ ಮನಸಾ ಸಹ', 'ಯದ್ವಾಚಾ ಅನಭ್ಯುದಿತಮ್' ಮೊದಲಾದ ಶ್ರುತಿಗಳು ಹೇಳುವ ಕಾರಣ, 'ಬ್ರಹ್ಮವಸ್ತು ಅವಿಜ್ಞೇಯ'ವೆಂದು ಕೆಲವರು ವಾದಿಸುತ್ತಾರೆ. ಬ್ರಹ್ಮವಸ್ತು ಅವಿಜ್ಞೇಯವೆಂಬ ವಾದವನ್ನು ಈ ಸಿದ್ಧಾಂತ ಅಂಗೀಕರಿಸುವುದಿಲ್ಲ. 'ಯೋ ವೇದ ನಿಹಿತಂ ಗುಹಾಯಾಂ', 'ತದ್ವಿಜಿಜ್ಞಾಸಸ್ವ', 'ಯೇನಾಕ್ಷರಂ ಪುರುಷಂ ವೇದ ಸತ್ಯಂ' ಮೊದಲಾದ ಶ್ರುತಿಗಳು ಬ್ರಹ್ಮವಸ್ತುವನ್ನರಿಯಬೇಕೆಂದೂ ಹಾಗೆ ಅರಿತರೇ ವಿಮುಕ್ತಿಯೆಂದೂ ಸಾರುತ್ತಿದೆ. ಹಾಗಾದರೆ 'ಯದ್ವಾಚಾ ಅನಭ್ಯುದಿತಮ್' ಮೊದಲಾದ ಶ್ರುತಿಗಳ ಪಾಡೇನು ಎಂದರೆ, ಶ್ರುತಿಗಳಲ್ಲಿ ಪರಸ್ಪರ ವಿರೋಧವಿಲ್ಲದ ಕಾರಣ, ಇವೆರಡು ಶ್ರುತಿಗಳನ್ನೂ ಸಮನ್ವಿತವಾಗಿ ಅರ್ಥಮಾಡಿಕೊಳ್ಳಬೇಕು ಎನ್ನಲಾಗಿದೆ. ಮನಸ್ಸಿಗೂ ಮಾತಿಗೂ ಬ್ರಹ್ಮವಸ್ತು ಮೀರಿದೆ ಎಂದರೆ ಬ್ರಹ್ಮವಸ್ತುವನ್ನು ಪೂರ್ಣವಾಗಿ ಮನಸ್ಸಿನಿಂದಾಗಲೀ ಮಾತಿನಿಂದಾಗಲೀ ತಿಳಿಯಲೂ ಹೇಳಲೂ ಸಾಧ್ಯವಿಲ್ಲವೆಂಬುದು ಅಭಿಪ್ರಾಯ. ನಮ್ಮ ಅರಿವು ಅಪೂರ್ಣವಾದುದು. ನಮ್ಮ ನುಡಿಯಲ್ಲಿ ಅದನ್ನು ಪೂರ್ಣವಾಗಿ ವರ್ಣಿಸಲಾಗುವುದಿಲ್ಲ ಇಷ್ಟರಿಂದಲೇ ಬ್ರಹ್ಮವಸ್ತುವಿಗೆ 'ಅವೇದ್ಯತ್ವ'ವನ್ನೂ 'ಅವಾಚ್ಯತ್ವ' ವನ್ನೂ ಹೇಳಲಾಗುವುದಿಲ್ಲ. 'ವಚಸಾಂ ವಾಚ್ಯಮುತ್ತಮಂ' 'ಸರ್ವೈಶ್ಚ ವೇದ್ಯೈಃ ಅಹಮೇವವೇದ್ಯಃ' ಎಂಬುವು ಈ ಅಂಶವನ್ನು ಸಮರ್ಥಿಸುತ್ತವೆ. ಆದುದರಿಂದ ಈ ಸಿದ್ಧಾಂತಕ್ಕನುಗುಣವಾಗಿ ಬ್ರಹ್ಮವಸ್ತು ವೇದ್ಯವೂ ಹೌದು ; ವಾಚ್ಯವೂಹೌದು. ಆದರೆ ಅದನ್ನು ಪೂರ್ಣವಾಗಿ ತಿಳಿಯಲೂ ಹೇಳಲೂ ಶಕ್ಯವಿಲ್ಲದಷ್ಟು ಅಪಾರವಾದ ಮಹಿಮೆಯನ್ನುಳ್ಳದಾಗಿದೆ ಅದು.

ಸಗುಣ—ನಿರ್ಗುಣ ಬ್ರಹ್ಮ

ಸಗುಣ ನಿರ್ಗುಣ ಬ್ರಹ್ಮಗಳ ಭೇದವನ್ನು ರಾಮಾನುಜರು ಅಂಗೀಕರಿಸುವುದಿಲ್ಲ. ಉಪನಿಷತ್ಪ್ರತಿಪಾದ್ಯವಾದ ಪರಬ್ರಹ್ಮವೇ ಈಶ್ವರನಾಗಿದ್ದಾನೆಂಬುದು ಈ ಸಿದ್ಧಾಂತದ ನಿಶ್ಚಯ. ಇವನು ವಾಸುದೇವ. ಸಂರ್ವಾಂತರ್ಯಾಮಿಯಾಗಿರುವವನೂ ಇವನೇ. ನಿರ್ಗುಣಬ್ರಹ್ಮ ವಸ್ತುವೆಂಬುದೊಂದಿಲ್ಲವೇ ಇಲ್ಲವೆಂಬುದು ಈ ಸಿದ್ಧಾಂತದ ನಿಲುವು. ಬ್ರಹ್ಮವಸ್ತು ಜ್ಞಾನಸ್ವರೂಪನಾಗಿ ಸತ್ಯವಾಗಿದ್ದು ಉಳಿದುದೆಲ್ಲವೂ ಸುಳ್ಳೆಂಬುದನ್ನು ರಾಮಾನುಜರು ಅಂಗೀಕರಿಸುವುದಿಲ್ಲ. ಶ್ರುತಿಗಳು ಪ್ರಮಾಣವಾಗಿದ್ದಲ್ಲಿ ಆ ಶ್ರುತಿಯಲ್ಲಿ ಪ್ರತಿಪಾದಿಸುವಂತೆ ಬ್ರಹ್ಮಸ್ವರೂಪವನ್ನು ತಿಳಿಯಬೇಕು. ಬ್ರಹ್ಮವಸ್ತು ಕೇವಲ ಜ್ಞಾನವಲ್ಲ. ಅನಂತವಾದ ಜ್ಞಾನಕ್ಕೆ ಆಶ್ರಯ. ಜ್ಞಾನವು ಬ್ರಹ್ಮವಸ್ತುವಿನ ಲಕ್ಷಣಗಳಲ್ಲಿ ಮುಖ್ಯವಾದುದು. ಆದುದರಿಂದ ಅದನ್ನು ಔಪಚಾರಿಕವಾಗಿ ಜ್ಞಾನವೆಂದು ವ್ಯವಹರಿ

acharya.org

ಸಿದೆ. 'ತದ್ಗುಣಸಾರತ್ವಾತ್ತು ತದ್ವ್ಯಪದೇಶಃ' ಎಂದು ಸೂತ್ರಕಾರರು ಈ ಅಂಶವನ್ನು ಪ್ರತಿಪಾದಿಸಿದ್ದಾರೆ. ಜ್ಞಾನವು ಒಂದು ಧರ್ಮವಾಗಿದೆ. ಕೇವಲ ಧರ್ಮವಾದುದೇ ಬ್ರಹ್ಮವಸ್ತುವಾಗಲಾರದು. ಆದುದರಿಂದ ಕೇವಲಜ್ಞಾನವೇ ಬ್ರಹ್ಮವಲ್ಲವೆಂಬುದು ಈ ದರ್ಶನದ ಸಿದ್ಧಾಂತ. ಏವಂಚ ನಿರ್ಗುಣಬ್ರಹ್ಮವೆಂಬುದು ಅಂಥ ಶುದ್ಧಚೈತನ್ಯಮಾತ್ರವಲ್ಲ ವೆಂದಾಯಿತು. ಹಾಗಾದರೆ ನಿರ್ಗುಣ, ನಿರಂಜನ ಮೊದಲಾದ ಶಬ್ದಗಳ ಅರ್ಥವೇನೆಂದು ಕೇಳಬಹುದು. ಇವು ಬ್ರಹ್ಮದಲ್ಲಿ ಯಾವ ಹೇಯಗುಣವೂ ಇಲ್ಲವೆಂಬುದನ್ನು ಸಮರ್ಥಿ ಸುತ್ತವೆ. ಬ್ರಹ್ಮವಸ್ತು ಅನಂತವಾದ ಕಲ್ಯಾಣಗುಣಗಳಿಗೆ ಆಕರವೆಂದು ಸಮರ್ಥಿಸಿ ಅಂಥ ವಸ್ತುವಿನಲ್ಲಿ ಯಾವ ದೋಷವೂ ಇಲ್ಲವೆಂಬುದನ್ನು ಈ ಶಬ್ದಗಳಿಂದ ಪ್ರತಿಪಾದಿಸಿದೆ.

'ಅಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕಃ ವಿಜಿಘತ್ಸೋಽಪಿಪಾಸಃ' ಎಂಬು ವುದರಿಂದ ಹೇಯಗುಣಗಳಿಲ್ಲವೆಂದು ಸಾಧಿಸಿ 'ಸತ್ಯಕಾಮ, ಸತ್ಯಸಂಕಲ್ಪ' ಎಂದು ಕಲ್ಯಾಣಗುಣಗಳನ್ನು ಹೇಳಿದೆ. 'ಮಹಾನ್ ಅನೂನಂ' ಎಂಬ ವೇದವಾಕ್ಯಕ್ಕೂ ಇದೇ ತಾತ್ಪರ್ಯ. ಹೀಗೆ ಈ ದರ್ಶನ ನಿಗುಣಬ್ರಹ್ಮವಸ್ತುವನ್ನಂಗೀಕರಿಸುವುದಿಲ್ಲ. ಬ್ರಹ್ಮವು ಈ ದರ್ಶನದ ಅಭಿಪ್ರಾಯದಂತೆ ಸಗುಣವೇ. ಇದನ್ನು 'ಬ್ರಹ್ಮಶಬ್ದೇನ ಸ್ವಭಾವತೋ ನಿರಸ್ತನಿಖಿಲದೋಷೋ ಅನವಧಿಕಾತಿಶಯಾಸಂಖ್ಯೇಯಕಲ್ಯಾಣಗುಣಗಣಃ ಪುರುಷೋ-ತ್ತಮೋ ಅಭಿಧೀಯತೇ' ಎಂದು ರಾಮಾನುಜರು ವಿವರಿಸಿದ್ದಾರೆ. ಉಪನಿಷತ್ತುಗಳು ಯಾವ ಜಗತ್ಕಾರಣನನ್ನು 'ಸತ್', ಬ್ರಹ್ಮ, ಆತ್ಮಾ, ಪ್ರಾಣ, ಜ್ಯೋತಿ ಎಂದು ಬಗೆಬಗೆ ಯಾಗಿ ಕೊಂಡಾಡುವುದೋ ಅವನು ಶ್ರೀಮನ್ನಾರಾಯಣಶಬ್ದವಾಚ್ಯನಾಗಿದ್ದಾನೆ. ಈತನೇ ಸರ್ವೇಶ್ವರನೂ, ಸರ್ವಶೇಷಿಯೂ, ಸರ್ವಕರ್ಮಸಮಾರಾಧ್ಯನೂ, ಸರ್ವಫಲ ಪ್ರದನೂ, ಸರ್ವಾಧಾರನೂ, ಸರ್ವಕಾರ್ಯೋತ್ಪಾದಕನೂ, ಸ್ವತಃ ಸತ್ಯಸಂಕಲ್ಪತ್ವಾದಿ ಗಳನ್ನುಳ್ಳವನೂ ಆಗಿದ್ದಾನೆ. ಈತನು ಜೀವರುಗಿಂತಲೂ ಪ್ರಪಂಚಕ್ಕಿಂತಲೂ ಬೇರೆಯಾಗಿ ಅವುಗಳನ್ನು ನಿಯಮೇನ ನಿಯಮಿಸುವವನಾಗಿ ಅವುಗಳಿಗೆ ಆಧಾರನಾಗಿದ್ದಾನೆ. ಇವುಗಳೆರಡರ ಸ್ವರೂಪ–ಸ್ಥಿತಿ–ಪ್ರವೃತ್ತಿಗಳು ಈಶ್ವರನಿಗೆ ಅಧೀನವಾಗಿವೆ. ಇದನ್ನೇ ರಾಮಾನುಜರು 'ಸ್ವಾಧೀನತ್ರಿವಿಧಚೇತನಾಚೇತನಸ್ವರೂಪಸ್ಥಿತಿಪ್ರವೃತ್ತಿಭೇದಮ್' ಎಂದು ವರ್ಣಿಸಿದ್ದಾರೆ. ಬ್ರಹ್ಮಲಕ್ಷಣವನ್ನು 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂದು ಶ್ರುತಿ ವರ್ಣಿಸುತ್ತದೆ. ಸತ್ಯಪದದಿಂದ ಇದಕ್ಕೆ ನಿರುಪಾಧಿಕಸತ್ತೆಯನ್ನು ಹೇಳಿದೆ. ವಿಕಾರ ಕ್ಕೊಳಗಾಗುವ ಅಚೇತನವನ್ನೂ, ಆ ಅಚೇತನದೊಡನೆ ಸಂಬಂಧಿಸಿರುವ ಚೇತನವನ್ನೂ ಇದರಿಂದ ವ್ಯಾವೃತ್ತಿಪಡಿಸಿದೆ. ಜ್ಞಾನಶಬ್ದ ಯಾವಾಗಲೂ ಸಂಕೋಚಕ್ಕೊಳಗಾಗದ ಜ್ಞಾನೈಕಾಕಾರವನ್ನದು ಹೊಂದಿದೆ ಎಂದು ತಿಳಿಸುವುದು ಇದರಿಂದ ಮುಕ್ತರನ್ನು ವ್ಯಾವೃತ್ತಿಮಾಡಿದೆ. ಅನಂತಶಬ್ದ ಅದಕ್ಕೆ ದೇಶ ಕಾಲ ವಸ್ತುಪರಿಚ್ಛೇದವಿಲ್ಲವೆಂಬು ದನ್ನು ಸೂಚಿಸುತ್ತದೆ. ಇದು ನಿತ್ಯರನ್ನು ವ್ಯಾವೃತ್ತಿಪಡಿಸುತ್ತದೆ. ಇದರಿಂದ ಬ್ರಹ್ಮವಸ್ತು

ವಿನ ಸಗುಣತ್ವವನ್ನು ಸಮರ್ಥಿಸಿದೆ. ಶುದ್ಧ ಚೈತನ್ಯವೇ ಬ್ರಹ್ಮವೆಂಬ ಅದ್ವೈತಸಿದ್ಧಾಂತವನ್ನು ರಾಮಾನುಜರು ಅಂಗೀಕರಿಸುವುದಿಲ್ಲ. ಸತ್ಯಂ, ಜ್ಞಾನಂ, ಅನಂತಂ ಎಂಬ ವಿಶೇಷಣಗಳು ಪರಸ್ಪರ ವಿರುದ್ಧವಲ್ಲದ ಕಾರಣ ಒಂದೇ ವಸ್ತುವನ್ನು ವಿಶೇಷಿಸುವುದೆಂದು ಇವರು ಸಮರ್ಥಿಸಿದ್ದಾರೆ. ಅದ್ವಿತೀಯವಾದ ಬ್ರಹ್ಮವಸ್ತುವಿಗೆ ವಿಶೇಷಣಬಹುತ್ವವುಂಟೆಂಬುದು ಇವರ ಸಿದ್ಧಾಂತ. ಬ್ರಹ್ಮಲಕ್ಷಣವನ್ನು ಸೂತ್ರಕಾರರು ಎರಡನೆಯದಾದ 'ಜನ್ಮಾದ್ಯಸ್ಯ ಯತಃ' ಎಂಬ ಸೂತ್ರದಲ್ಲಿ ಪ್ರತಿಪಾದಿಸಿದ್ದಾರೆ. ಜಗತ್ತಿನ ಸೃಷ್ಟಿ, ಸ್ಥಿತಿ, ಮತ್ತು ನಾಶಗಳಿಗೆ ಕಾರಣವಾದುದು ಬ್ರಹ್ಮ ಎಂದು ಇದರ ತಾತ್ಪರ್ಯ. ಇವು ಮೂರಕ್ಕೂ ಬೇರೆ ಬೇರೆ ಮೂರು ಕಾರಣಗಳಿಲ್ಲವೆಂಬುದನ್ನು ಸಮರ್ಥಿಸಿ, ಇವು ಮೂರಕ್ಕೂ ಕಾರಣವು ಒಂದೇ ಎಂಬುದನ್ನು ಈ ಸೂತ್ರ ಸಮರ್ಥಿಸುತ್ತದೆ. ಹೀಗೆ ಬ್ರಹ್ಮವಸ್ತು ಜಗತ್ಕಾರಣವಾಗಿ ಸಕಲಕಲ್ಯಾಣಗುಣವಿಶಿಷ್ಟವಾದುದೆಂಬುದು ಈ ಸಿದ್ಧಾಂತದ ನೆಲೆ.

ಉಭಯ ಲಿಂಗತ್ವ

ಉಭಯಲಿಂಗ ಎಂಬ ಶಬ್ದವನ್ನು ಸೂತ್ರಕಾರರು 'ನ ಸ್ಥಾನತೋಽಪಿ ಪರಸ್ಯೋಭಯಲಿಂಗಂ ಸರ್ವತ್ರ ಹಿ' ಎಂಬ ಸೂತ್ರದಲ್ಲಿ ಪ್ರಯೋಗಿದ್ದಾರೆ. ಈ ಸಿದ್ಧಾಂತಕ್ಕನುಗುಣವಾಗಿ ಉಭಯಲಿಂಗವೆಂದರೆ ದೋಷಗಳಿಲ್ಲದಿರುವುದೂ ಮತ್ತು ಮಂಗಳಗುಣಗಳನ್ನು ಹೊಂದಿರುವುದೂ ಆಗಿದೆ. ಬ್ರಹ್ಮದಲ್ಲಿ ದೋಷವಿಲ್ಲವೆಂದು ಸಮರ್ಥಿಸಿದುದರಿಂದಲೇ ಅದು ಕಲ್ಯಾಣಗುಣಗಳನ್ನು ಹೊಂದಿದೆ ಎಂಬುದನ್ನೂ ಸಮರ್ಥಿಸಿದೆ. ಅದು ಸತ್ಯಂ, ಜ್ಞಾನಂ, ಅನಂತಂ ಆಗಿರುವಂತೆ ಅಮಲವೂ ಸುಂದರವೂ ಆನಂದಮಯವೂ ಆಗಿದೆ. ಉಭಯಲಿಂಗಶಬ್ದಕ್ಕೆ ಸಗುಣನಿರ್ಗುಣ ಪರನಾಗಿ ಇತರ ವೇದಾಂತಿಗಳು ಅರ್ಥಮಾಡುವುದನ್ನೂ ಈ ಸಿದ್ಧಾಂತ ಒಪ್ಪುವುದಿಲ್ಲ. ನಿರ್ಗುಣ ಬ್ರಹ್ಮವಾದವು ಸಂಭವಿಸುವುದಿಲ್ಲವೆಂದು ಈ ಸಿದ್ಧಾಂತದ ನೆಲೆ. 'ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ','ಯಃ ಸರ್ವಜ್ಞಃ ಸರ್ವವಿತ್, ಸತ್ಯಕಾಮಃ, ಸತ್ಯಸಂಕಲ್ಪಃ' ಮೊದಲಾದವು ಬ್ರಹ್ಮವಸ್ತುವಿನ ಸಗುಣತ್ವವನ್ನೇ ಸ್ಥಾಪಿಸುತ್ತವೆ. ನಿರ್ಗುಣಶಾಸ್ತ್ರ ಸಗುಣಶಾಸ್ತ್ರವನ್ನು ಬಾಧಿಸುವುದೆಂದು ಅದ್ವೈತದರ್ಶನ ಸಾಧಿಸುವುದನ್ನು ಈ ಸಿದ್ಧಾಂತ ಒಪ್ಪದು. ಪರಸ್ಪರ ಪೌರ್ವಾಪರ್ಯವೂ, ಪರಸ್ಪರವಿರೋಧವೂ ನಿಯತವಾಗಿರುವೆಡೆಯಲ್ಲಿ ಮಾತ್ರ ಅಪಚ್ಛೇದನ್ಯಾಯ ಪ್ರವರ್ತಿಸಬಲ್ಲದು. ಆದರೆ ಅಂತಹ ಪೌರ್ವಾಪರ್ಯ ಅಥವಾ ವಿರೋಧ ಸಗುಣ ನಿರ್ಗುಣ ಶಾಸ್ತ್ರಗಳಿಗಿಲ್ಲ. ಉತ್ಸರ್ಗಾಪವಾದನ್ಯಾಯದಂತೆ ಗುಣನಿಷೇಧಶಾಸ್ತ್ರ ಮೊದಲೇ ವಿಧಿಸಿರುವ ಮಂಗಳಗುಣಗಳಿಗಿಂತ ಬೇರೆಯಾದ ಹೇಯಗುಣಗಳಿಗೆ ಅನ್ವಯಿಸುವುದು. ಆದುದರಿಂದ ಇವೆರಡೂ ಸರಿಯಾಗಿಯೇ ಇವೆ. ಹೀಗಾಗಿ ಬ್ರಹ್ಮವಸ್ತು ಸಕಲ

acharya.org

ಮಂಗಳಗುಣಗಳಿಗೆ ಏಕಾಶ್ರಯವಾಗಿದ್ದು ದೋಷದ ಸೋಂಕೂ ಇಲ್ಲದೆ ಇದೆ. ಆದುದರಿಂದ 'ಉಭಯಲಿಂಗತ್ವ' ಬ್ರಹ್ಮವಸ್ತುವಿಗೆ ಎಲ್ಲ ಅವಸ್ಥೆಗಳಲ್ಲಿಯೂ ಅನ್ವಯಿಸುತ್ತದೆ.

ಬ್ರಹ್ಮ ವಸ್ತು ನಿರ್ವಿಶೇಷ ಚೈತನ್ಯವಲ್ಲ

ಅದ್ವೈತದರ್ಶನ ಬ್ರಹ್ಮವಸ್ತುವನ್ನು 'ನಿರ್ವಿಶೇಷ ಚಿನ್ಮಾತ್ರ'ವೆಂದು ಪ್ರತಿಪಾದಿಸುತ್ತದೆ. ಇದನ್ನು ಈ ದರ್ಶನ ಅಂಗೀಕರಿಸುವುದಿಲ್ಲ. 'ಸತ್ಯಂ ಜ್ಞಾನಂ ಅನಂತಂ' ಎಂಬ ಶ್ರುತಿಗನುಸಾರ ಬ್ರಹ್ಮವಸ್ತು ಸವಿಶೇಷ ಮತ್ತು ಸಗುಣವೆಂದೇ ಸಿದ್ಧವಾಗುತ್ತದೆ. ನಿರ್ಗುಣವಸ್ತು ತಥ್ಯವೇ ಅಲ್ಲ. ಯಾವ ಪ್ರಮಾಣವೂ ನಿರ್ಗುಣವಸ್ತುವನ್ನು ಸ್ಥಾಪಿಸಲಾರದು. ಪ್ರತ್ಯಕ್ಷವಾಗಲೀ, ಶಬ್ದವಾಗಲೀ, ಸಗುಣವಸ್ತುವನ್ನೇ ಬೋಧಿಸುತ್ತದೆ. ನಿರ್ವಿಕಲ್ಪ ಪ್ರತ್ಯಕ್ಷವೆಂಬುದೂ ನಿರ್ಗುಣವಸ್ತುವನ್ನು ಬೋಧಿಸುವುದಿಲ್ಲ. ಆದರೆ ಆ ಜಾತಿಯ ಮೊಟ್ಟಮೊದಲನೆದು ವ್ಯಕ್ತಿಯ ಪ್ರತ್ಯಕ್ಷವನ್ನು ಅದು ಸೂಚಿಸುತ್ತದೆ. ಚೈತನ್ಯವೇ ಬ್ರಹ್ಮವೆಂಬ ವಾದವೂ ಸರಿಯಲ್ಲ. ಚೈತನ್ಯವೆಂಬುದು ಜ್ಞಾನ. ಇದೂ ಸಗುಣವೇ. ಇದು ಚೇತನತ್ವ ಮತ್ತು ಸ್ವಯಂಪ್ರಕಾಶತ್ವ ಎಂಬ ಗುಣಗಳನ್ನು ಹೊಂದಿಯೇ ಇದೆ. ಚೈತನ್ಯ ಯಾವಾಗಲೂ ಒಂದು ವಿಷಯವನ್ನು ಕುರಿತದ್ದು. ಒಂದು ಆಶ್ರಯಕ್ಕೆ ಉಂಟಾಗತಕ್ಕದ್ದು. ಆದ್ದರಿಂದಲೇ ರಾಮಾನುಜರು 'ನ ಚ ನಿರ್ವಿಷಯಂ ಕಾಚಿತ್ ಸಂವಿದಸ್ತಿ ಅನುಪಲಬ್ಧೇಃ' ಎಂದು ಹೇಳುತ್ತಾರೆ. ಬ್ರಹ್ಮವು ಚಿದ್ರೂಪವೂ ಹೌದು, ಚೈತನ್ಯವನ್ನು ಗುಣವನ್ನಾಗಿ ಹೊಂದಿರುವುದೂ ಹೌದು. ಪರಮಾತ್ಮನ ಧರ್ಮಭೂತಜ್ಞಾನ ಅಸಂಕುಚಿತವಾಗಿ ಸರ್ವವ್ಯಾಪಕವಾಗಿರುತ್ತದೆ. ಭಗವಂತನ ಕಲ್ಯಾಣಗುಣಗಳು ಸ್ವರೂಪನಿರೂಪಕ ಧರ್ಮಗಳು ಮತ್ತು ನಿರೂಪಿತಸ್ವರೂಪವಿಶೇಷಣಗಳು ಎಂದು ಎರಡು ಬಗೆ. ಸತ್ಯತ್ವ, ಜ್ಞಾನತ್ವ, ಆನಂದತ್ವ, ಅನಂತತ್ವ ಅಮಲತ್ವ ಮೊದಲಾದುವು ಸ್ವರೂಪನಿರೂಪಕಧರ್ಮಗಳು. ರಕ್ಷಕತ್ವ, ಮೋಕ್ಷಪ್ರದತ್ವ ಮೊದಲಾದುವು ನಿರೂಪಿತಸ್ವರೂಪವಿಶೇಷಣಗಳು. ಬ್ರಹ್ಮವಸ್ತು ಸ್ವರೂಪತಃ ವಿಭು. ಈ ಪರವಸ್ತು ಲೋಕೋತ್ತರವಾಗಿದ್ದರೂ ಜಗದಂತರ್ಯಾಮಿಯಾಗಿ ಇರುವುದಾಗಿದೆ. ಬ್ರಹ್ಮವಸ್ತು ಅನಂತಜ್ಞಾನಸ್ವರೂಪವೆಂಬುದರಿಂದ ಅದರ ವಿಭುತ್ವ ಸಿದ್ಧವಾಗುತ್ತದೆ. ಪ್ರಭೆಗಿಂತ ದೀಪ ಹೇಗೆ ಬೇರೆಯಾದ ಪದಾರ್ಥವೋ ಹಾಗೆಯೇ ಭಗವಂತನ ದಿವ್ಯಾತ್ಮಸ್ವರೂಪವು ಅವನ ಧರ್ಮಭೂತಜ್ಞಾನಕ್ಕಿಂತ ಭಿನ್ನವಾದುದು.

ಬ್ರಹ್ಮವು ಅಖಿಲ ಜಗತ್ಕಾರಣ

ಛಾಂದೋಗ್ಯೋಪನಿಷತ್ತಿನ ಸದ್ವಿದ್ಯೆ ಜಗತ್ಕಾರಣವಿಚಾರವನ್ನು ವಿವರಿಸುತ್ತದೆ. ಗುರುಕುಲವಾಸದಿಂದ ಹಿಂತಿರುಗಿದ ಮಗನನ್ನು ಕುರಿತು ಉದ್ದಾಲಕರು ಪ್ರಶ್ನೆ ಮಾಡುತ್ತಾರೆ : 'ಯಾವ ಆ ಒಂದನ್ನು ತಿಳಿದರೆ ಎಲ್ಲವನೂ ತಿಳಿದಂತಾಗುವುದೋ, ಯಾವ ಆ

acharya.org

ಒಂದನ್ನು ತಿಳಿಯದಿದ್ದರೆ ಯಾವುದನ್ನೂ ತಿಳಿದಂತಾಗುವುದಿಲ್ಲವೋ. ಅಂಥ ಆದೇಶವನ್ನು ನೀನು ಕೇಳಿ ತಿಳಿದೆಯಾ' ಎಂದು. ಆ ಶ್ವೇತಕೇತುವಿಗೆ ಅದು ತಿಳಿದಿರಲಿಲ್ಲ. ಅವನ ಕೋರಿಕೆಯಂತೆ ತಂದೆ ಆ ತತ್ತ್ವವನ್ನವನಿಗೆ ಉಪದೇಶಿಸಿದರು—'ಸದೇವ ಸೋಮ್ಯೇದಂ ಅಗ್ರ ಆಸೀತ್ ಏಕಮೇವಾದ್ವಿತೀಯಂ' ಎಂದು ಆರಂಭಿಸಿ, ಬ್ರಹ್ಮವಸ್ತು ಜಗತ್ತಿಗೆ ನಿಮಿತ್ತ ಕಾರಣವೂ ಆಗಿ ಉಪಾದಾನಕಾರಣವೂ ಆಗಿದೆ ಎಂದು ಅವರು ತಿಳಿಸಿದರು. ಕಾರಣವನ್ನು ತಿಳಿದರೆ ಅದರಿಂದಾದ ಕಾರ್ಯವನ್ನೆಲ್ಲಾ ತಿಳಿಯಬಹುದು. ಹಾಗೆಯೇ ಮೂಲ ಕಾರಣವಾದ ಬ್ರಹ್ಮವಸ್ತುವೊಂದನ್ನರಿತರೆ ಅದರ ಕಾರ್ಯವಿಸ್ತಾರವಾದ ಜಗತ್ತನ್ನೆಲ್ಲಾ ಅರಿಯಬಹುದೆಂದು—'ಯಥಾ ಸೋಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃನ್ಮಯಂ ವಿಜ್ಞಾತಂ ಸ್ಯಾತ್ ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ' ಎಂದು ನಿರೂಪಿಸಿದರು. ಕಾರಣಕ್ಕೂ ಕಾರ್ಯಕ್ಕೂ ಅಭೇದವನ್ನು ಈ ಉದಾಹರಣೆ ಸೂಚಿಸುತ್ತದೆ. ಘಟಶರಾವಾದಿಗಳಿಗೆ ಮಣ್ಣು ಉಪಾದಾನ ಕಾರಣ. ಮಣ್ಣಿನ ಸ್ವರೂಪ ಸ್ವಭಾವಗಳನ್ನರಿಯುವುದರಿಂದ ಅದರಿಂದಾದ ಕಾರ್ಯಜಾತದ ಸ್ವರೂಪಸ್ವಭಾವವನ್ನೂ ಅರಿಯಬಹುದು. ಹೀಗೆ ಏಕವಿಜ್ಞಾನದಿಂದ ಸರ್ವವಿಜ್ಞಾನವನ್ನು ಈ ಪ್ರಕರಣದಲ್ಲಿ ಬೋಧಿಸಿರುವ ಕಾರಣ 'ಸರ್ವ' ಪದಾರ್ಥಗಳ ಸತ್ಯತ್ವವೂ ಇದರಿಂದ ಸಮರ್ಥಿತವಾಗುತ್ತದೆ. ಕಾರಣವು ಬೇರೊಂದು ಅವಸ್ಥೆಯನ್ನು ಹೊಂದುವುದೇ ಕಾರ್ಯವೆನಿಸುವುದು. ರೂಪ, ನಾಮ ಮತ್ತು ಪ್ರಯೋಜನಗಳಲ್ಲಿ ಭೇದವಿದ್ದರೂ ಮೂಲವಸ್ತು ಒಂದೇ ಆಗಿರುವುದು. ಕಾರ್ಯ ಕಾರಣದಲ್ಲಿಸೂಕ್ಷ್ಮಾವಸ್ಥೆಯಲ್ಲಿರುತ್ತದೆ. ಕಾರಣದಲ್ಲಿ ಸೂಕ್ಷ್ಮಾವಸ್ಥೆಯಲ್ಲಿರುವುದು ಸ್ಥೂಲಾವಸ್ಥೆಯನ್ನು ಹೊಂದುವುದೇ ಕಾರ್ಯವೆನಿಸುವುದು. ಇಲ್ಲದೇ ಇರುವ ಕಾರ್ಯ ನೂತನವಾಗಿ ಉತ್ಪನ್ನವಾಗುವುದಿಲ್ಲ.

ವ್ಯವಹಾರದಲ್ಲಿ ಉಪಾದಾನಕಾರಣವೇ ನಿಮಿತ್ತಕಾರಣವಾಗಲಾರದು. ಆದರೆ ಜಗತ್ಕಾರಣವಾದ ಬ್ರಹ್ಮವಸ್ತು ಉಪಾದಾನಕಾರಣವೂ ಹೌದು ನಿಮಿತ್ತ ಕಾರಣವೂ ಹೌದು. 'ಏಕಮೇವ', 'ಅದ್ವಿತೀಯಂ' ಎಂಬ ಪದಗಳಿಂದ ಈ ಅಂಶವನ್ನು ಒತ್ತಿ ಹೇಳಲಾಗಿದೆ. ಸರ್ವಶಕ್ತವಾದುದರಿಂದ ಬ್ರಹ್ಮವಸ್ತು ಮತ್ತೊಂದರ ಅಪೇಕ್ಷೆ ಇಲ್ಲದೆ ತಾನೇ ಜಗತ್ತನ್ನು ಸೃಜಿಸುವುದು. 'ಅದ್ವಿತೀಯ' ಎಂಬ ಪದ ಉಪಾದಾನಕಾರಣವಾಗಿರುವ ಬ್ರಹ್ಮಕ್ಕೆ ಸಹಾಯಕವಾದ ಮತ್ತೊಂದು ನಿಮಿತ್ತಕಾರಣವಿಲ್ಲವೆಂಬುದನ್ನು ಸಮರ್ಥಿಸುತ್ತದೆಯೇ ವಿನಾ ಬ್ರಹ್ಮವನ್ನುಳಿದು ಎರಡನೆಯ ಪದಾರ್ಥವೇ ಇಲ್ಲವೆಂಬುದನ್ನು ಸಾಧಿಸುವುದಿಲ್ಲ. ಬ್ರಹ್ಮವಸ್ತುವಿಗೆ ಅಧೀನವಾದ, ಶೇಷವಾದ ಅನೇಕಾನೇಕ ಪ್ರಕಾರಗಳನ್ನು ಶ್ರುತಿ ಸಮರ್ಥಿಸುತ್ತದೆ. ಆದಕಾರಣ ಇಲ್ಲಿ, ನಿಷೇಧ ಬ್ರಹ್ಮಕ್ಕಿಂತ ಬೇರೆಯಾದ ನಿಮಿತ್ತ ಕಾರಣಕ್ಕೆ ಅನ್ವಯಿಸುತ್ತದೆ. 'ಏಕಂ' ಎಂಬ ಶಬ್ದ ಅವ್ಯಕ್ತಾವಸ್ಥೆಯಲ್ಲಿದ್ದ ಚಿದಚಿತ್ತುಗಳಿಂದೊಡಗೂಡಿದ ಬ್ರಹ್ಮವಸ್ತುವನ್ನು ಬೋಧಿಸುತ್ತದೆ. 'ಬಹುಸ್ಯಾಂ ಪ್ರಜಾಯೇಯ'

acharya.org

ಎಂಬುದರಿಂದ ಇದು ಸಮರ್ಥಿತವಾಗುತ್ತದೆ. 'ತದೈಕ್ಷತ. ತತ್ತೇಜೋಽಸೃಜತ್' ಎಂಬ ವಾಕ್ಯವೂ ಬ್ರಹ್ಮವಸ್ತು ಅಭಿನ್ನನಿಮಿತ್ತೋಪಾದಾನ ಕಾರಣವೆಂಬುದನ್ನು ಸಾಧಿಸುತ್ತದೆ. 'ಅಗ್ರೇ' ಎಂಬ ಶಬ್ದದಿಂದ ಸಜಾತೀಯ-ವಿಜಾತೀಯ-ಸ್ವಗತ-ಭೇದಶೂನ್ಯತ್ವವನ್ನು ಹೇಳಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಕಾರಣಾವಸ್ಥೆಯಲ್ಲಾಗಲೀ ಕಾರ್ಯಾವಸ್ಥೆಯಲ್ಲಾಗಲೀ ಪ್ರಪಂಚವು ಸುಳ್ಳೇ ಆಗಿರುವುದಾದರೆ 'ಅಗ್ರೇ' ಎಂಬ ಪದದ ಪ್ರಯೋಗ ವ್ಯರ್ಥವಾಗುತ್ತದೆ. 'ಅಗ್ರೇ' ಎಂಬುದು ಅವಿಭಕ್ತನಾಮರೂಪತ್ವಾವಸ್ಥೆಯನ್ನು ಸೂಚಿಸುತ್ತದೆ. ಇದರಿಂದ ಜೀವರು ಅನಂತರೆಂಬುವುದೂ, ಅದರಂತೆಯೇ ಕರ್ಮಪ್ರವಾಹವು ವಿಚಿತ್ರವೂ ಅನಾದಿಯೂ ಆದುದೆಂಬುದೂ ಸಿದ್ಧವಾಗುತ್ತದೆ. ಬ್ರಹ್ಮವಸ್ತು ತನ್ನ ವಿಚಿತ್ರಶಕ್ತಿಯೋಗದಿಂದ ಹೀಗೆ ಜಗತ್ಕಾರಣವಾಗಿದೆ ಎಂಬುದೂ ಸಿದ್ಧವಾಗುತ್ತದೆ. ಬ್ರಹ್ಮವಸ್ತು ಇತರ ಎಲ್ಲ ಪದಾರ್ಥಗಳಿಗಿಂತ ವಿಲಕ್ಷಣವಾದುದು. ಅದಕ್ಕೆ ವಿಚಿತ್ರವೂ ಅನಂತವೂ ಆದ ನಾನಾ ರೂಪಗಳುಂಟು. ಇತರ ವಸ್ತುಗಳಂತೆ ಇದೂ ಒಂದು ವಸ್ತುವಾಗಿರುವುದರಿಂದಲೇ ಅವುಗಳಿಗೆ ಇದು ಸಮವೆಂದು ಹೇಳುವುದಕಾಗುವುದಿಲ್ಲ. ಇತರ ಸಮಸ್ತವನ್ನೂ ಅತಿಶಯಿಸಿರುವುದು ಈ ವಸ್ತು.

ಪ್ರಳಯಾವಸ್ಥೆಯಲ್ಲಿ ಸೂಕ್ಷ್ಮರೂಪದಲ್ಲಿರುವ ಚಿದಚಿತ್ತುಗಳೊಡನೆ ಬ್ರಹ್ಮವಸ್ತು ಇರುತ್ತದೆ. ಇದು ಕಾರಣಾವಸ್ಥೆ. ಆಗ ನಾಮರೂಪಗಳ ಭೇದವಿರುವುದಿಲ್ಲ. ಸೃಷ್ಟಿಕಾಲದಲ್ಲಿ ಬ್ರಹ್ಮವಸ್ತು ಅನೇಕವಾಗಲು ಸಂಕಲ್ಪಿಸುತ್ತದೆ. ನಾಮರೂಪಾತ್ಮಕವಾದ ಜಗತ್ತನ್ನು ಅದು ಉಂಟುಮಾಡುತ್ತದೆ. ಇದೇ ಕಾರ್ಯಾವಸ್ಥೆ. ಚೇತನಾಚೇತನಗಳು ಈಗ ಸ್ಥೂಲರೂಪದಲ್ಲಿರುವುವು. ಈ ಅವಸ್ಥೆಯಲ್ಲಿಯೂ ಅವು ಬ್ರಹ್ಮವಸ್ತುವಿನ ಪ್ರಕಾರಗಳಾಗಿಯೇ ಇರುವುವು. ಪ್ರಕಾರಗಳಾದ ಚೇತನಾಚೇತನಪದಾರ್ಥಗಳ ಅವಸ್ಥೆಯಲ್ಲಿ ವ್ಯತ್ಯಾಸಗಳಾದವೇ ವಿನಾ ಬ್ರಹ್ಮವಸ್ತುವಿನಲ್ಲಿ ಯಾವ ವಿಕಾರವೂ ಆಗದ ಕಾರಣ ಅದು ಸ್ವರೂಪತಃ ನಿರ್ವಿಕಾರವಾಗಿಯೇ ಉಳಿಯುತ್ತದೆ. 'ಸರ್ವಂ ಖಲ್ವಿದಂ ಬ್ರಹ್ಮ' 'ಆತ್ಮೈವೇದಂ ಸರ್ವಂ' 'ನೇಹ ನಾನಾಸ್ತಿ ಕಿಂಚನ' ಮೊದಲಾದ ಶ್ರುತಿವಾಕ್ಯಗಳು ಈ ಬಗೆಯಾದ ಬ್ರಹ್ಮೈಕತ್ವವನ್ನೇ ಸಮರ್ಥಿಸುತ್ತವೆ. ಹೀಗೆ ಎಲ್ಲಾ ಶಬ್ದಗಳೂ ಸರ್ವದಾ ಬ್ರಹ್ಮವಸ್ತುವನ್ನೇ ಬೋಧಿಸುತ್ತವೆ. ಈ ಅಂಶವನ್ನು ರಾಮಾನುಜರು 'ಚಿದಚಿತ್ಪ್ರಕಾರತಯಾ ತತ್ಪ್ರಕಾರಂ ಬ್ರಹ್ಮೈವ ಸರ್ವದಾ ಸರ್ವಶಬ್ದಾಭಿಧೇಯಮ್' ಎಂದು ಹೇಳುತ್ತಾರೆ. ಜಗತ್ಕಾರಣವಾದ ಈ ಬ್ರಹ್ಮವಸ್ತು ಚೇತನಾಚೇತನಪದಾರ್ಥಗಳಲ್ಲಿ ಅಂತರ್ಯಾಮಿಯಾಗಿದೆಯೆಂಬುದನ್ನು ಅಂತರ್ಯಾಮಿ ಬ್ರಾಹ್ಮಣವೂ ಸಮರ್ಥಿಸುತ್ತದೆ

ಸೃಷ್ಟಿವಿಚಾರವನ್ನು ವೇದಾಂತಿಗಳೆಲ್ಲರೂ ವಿಮರ್ಶಿಸಿದ್ದಾರೆ. ಅದ್ವೈತದರ್ಶನಕ್ಕನುಸಾರ ಪ್ರಪಂಚವು ಮಿಥ್ಯೆಯಾಗಿದೆ. ಸೃಷ್ಟಿಯು ವಾಸ್ತವಿಕವಾದುದಲ್ಲ. ಬ್ರಹ್ಮವೊಂದೇ ಸತ್ಯವಾಗಿದೆ. ಭೇದದರ್ಶನ ಭ್ರಾಂತಿಯಾಗಿದೆ. ಹಾಗಾದರೆ ಈ ಶ್ರುತಿವಾಕ್ಯಗಳು ವ್ಯಾವ

acharya.org

ಹಾರಿಕಸತ್ತೆಯನ್ನು ವಿವೇಚಿಸುತ್ತವೆಯಷ್ಟೆ. ಅವಿದ್ಯಾವಿಶಿಷ್ಟವಾದ ಬ್ರಹ್ಮ ಜಗತ್ಕಾರಣವೆಂದು ಇವರು ಹೇಳುತ್ತಾರೆ. ಅವಿದ್ಯೆಯೂ ಅನಿರ್ವಚನೀಯವಾದುದು. ಸತ್ಯವಾದುದಲ್ಲ. ಭಾಸ್ಕರರ ಭೇದಾಬೇದದರ್ಶನ ಬ್ರಹ್ಮವಸ್ತುವಿನೊಡನೆ ವಾಸ್ತವವಾದ ಉಪಾಧಿಯೊಂದನ್ನೂ ಅಂಗೀಕರಿಸಿ ಆ ಉಪಾಧಿಯ ಕಾರಣ ಬ್ರಹ್ಮವಸ್ತು ಜಗದಾತ್ಮನಾ ಪರಿಣಮಿಸಿದೆಯೆಂದು ಸಮರ್ಥಿಸುತ್ತದೆ. ಇವರ ದೃಷ್ಟಿಯಲ್ಲಿ ಬ್ರಹ್ಮವೂ ಸತ್ಯ, ಜಗತ್ತೂ ಸತ್ಯ. ಎರಡಾಗಿರುವುದು ಒಂದಾಗುವುದೂ ಸತ್ಯ. ಸಂಸಾರಾವಸ್ಥೆಯಲ್ಲಿ ಭೇದವೂ ಮುಕ್ತ್ಯವಸ್ಥೆಯಲ್ಲಿ ಅಭೇದವೂ ಸಿದ್ಧಿಸುವುದು. ಯಾದವಪ್ರಕಾಶರ ಮತದಲ್ಲಿ ಬ್ರಹ್ಮವಸ್ತುವಿನಿಂದ ಚಿತ್ತು, ಅಚಿತ್ತು ಮತ್ತು ಈಶ್ವರ ತತ್ತ್ವಗಳು ಉದ್ಭವಿಸುವುವು. ಬ್ರಹ್ಮವಸ್ತು ಮತ್ತು ಜೀವಾತ್ಮರು ಬೇರೆ ಬೇರೆಯಾಗಿದ್ದರೂ ಒಂದೇ ಆಗಿದ್ದಾರೆ. ಈ ದಾರ್ಶನಿಕರ ಅಭಿಪ್ರಾಯಗಳನ್ನು ರಾಮಾನುಜರು ತಮ್ಮ ಶ್ರೀಭಾಷ್ಯದಲ್ಲಿ ಹಾಗೂ ವೇದಾರ್ಥಸಂಗ್ರಹದಲ್ಲಿ ವಿಮರ್ಶಿಸಿದ್ದಾರೆ. ಶ್ರುತಿಯಲ್ಲಿ ಸೃಷ್ಟಿವಿಷಯವಾಗಿ ಕೊಟ್ಟಿರುವ ಉದಾಹರಣೆಗಳೆಲ್ಲಾ ಅವಸ್ಥಾಂತರವನ್ನು ಹೊಂದುವುದನ್ನೇ ಘೋಷಿಸುತ್ತವೆ. ಈ ಪ್ರಕರಣದಲ್ಲಿ ಮಿಥ್ಯಾತ್ವವನ್ನು ಸೂಚಿಸುವ ನಿದರ್ಶನವೊಂದೂ ಇಲ್ಲ. ಸತ್ಕಾರ್ಯವಾದವನ್ನು ಸದ್ವಿದ್ಯೆ ಪ್ರತಿಪಾದಿಸಿ ಇಲ್ಲದುದು ಹೊಸದಾಗಿ ಉಂಟಾಗುವುದಿಲ್ಲವೆಂದು ಸಾರುತ್ತದೆ. ಎಲ್ಲ ಪದಾರ್ಥಗಳ ಮೂಲವೂ, ಆಶ್ರಯವೂ, ಸ್ಥಿತಿಯೂ ಸಚ್ಛಬ್ದವಾಚ್ಯವಾದ ಪರವಸ್ತುವೇ ಎಂಬುದು ಈ ಪ್ರಕರಣದ ನಿಶ್ಚಯ. ಬ್ರಹ್ಮವಸ್ತುವನ್ನುಳಿದು ಯಾವುದೂ ಇರಲಾರದು. 'ನ ತದಸ್ತಿ ವಿನಾ ಯತ್ಸ್ಯಾನ್ಮಯಾ ಭೂತಂ ಚರಾಚರಂ" ಎಂದು ಹೇಳಿರುವಂತೆ ಬ್ರಹ್ಮವಸ್ತುವನ್ನು ಬಿಟ್ಟು ಯಾವುದೂ ಸ್ವತಂತ್ರವಾಗಿರಲಾರದು. ಪದಾರ್ಥ ಎಂದು ಹೇಳಿಸಿಕೊಳ್ಳಬೇಕಾದರೆ, ನಾಮರೂಪಗಳುಂಟಾಗಬೇಕಾದರೆ, ಅಚಿದ್ವಸ್ತುವಿನೊಳಗೆ ಜೀವಪ್ರವೇಶ ಆಗಬೇಕು. ಆ ಜೀವನಿಗೆ ಪರಮಾತ್ಮ ಅಂತರ್ಯಾಮಿಯಾಗಿರಬೇಕು. ಇದನ್ನು ಭಾಷ್ಯಕಾರರು 'ಬ್ರಹ್ಮಾತ್ಮಕಜೀವಾನು-ಪ್ರವೇಶಾದೇವ ಕೃತ್ಸ್ನಸ್ಯ ಅಚಿದ್ವಸ್ತುನಃ ಪದಾರ್ಥತ್ವಮ್, ಏವಂಭೂತ ಸ್ಯೈವ ಅಚಿದ್ವಸ್ತುನೋ ನಾಮರೂಪಭಾಕ್ತ್ವಮಿತಿ ಚ ದರ್ಶಯಂತಿ' ಎಂದು ವೇದಾರ್ಥಸಂಗ್ರಹದಲ್ಲಿ ತಿಳಿಸಿದ್ದಾರೆ.

ಈ ವಿವೇಚನೆಯಿಂದ ಸಿದ್ಧವಾಗುವ ಮತ್ತೊಂದು ಅಂಶವೆಂದರೆ ಬ್ರಹ್ಮವಸ್ತುವಿನ ಸಗುಣತ್ವ. ಬ್ರಹ್ಮವಸ್ತುವಿನ ಸರ್ವಶಕ್ತಿತ್ವ, ಸರ್ವಜ್ಞತ್ವ, ಸರ್ವಾಂತರತ್ವ, ಸರ್ವನಿಯಂತೃತ್ವ, ಮೊದಲಾದ ಅನೇಕ ಕಲ್ಯಾಣಗುಣಗಳೂ ಇದರಿಂದ ಬೆಳಕಿಗೆ ಬರುತ್ತವೆ. ಸೃಷ್ಟಿ ಮತ್ತು ಸ್ಥಿತಿಗಳು ಬ್ರಹ್ಮವಸ್ತುವಿನ ವೈಭವವನ್ನು ಪ್ರಕಾಶಪಡಿಸುತ್ತವೆ. ಆದುದರಿಂದಲೇ ಸರ್ವವಸ್ತುಗಳಿಗೂ ಬ್ರಹ್ಮವಸ್ತು ಅಂತರ್ಯಾಮಿಯೆಂದು ತಿಳಿದರೆ ಸರ್ವವಸ್ತುಗಳೂ ತಿಳಿದಂತಾಗುವುವು. ಹೀಗೆ ಬ್ರಹ್ಮವಸ್ತುವೇ ವಿಶ್ವದ ಪರಮಾರ್ಥ. ಇದನ್ನೇ 'ಸ ಆತ್ಮಾ'

acharya.org

ಎಂದಿದೆ. ಎಲ್ಲ ವಸ್ತುಗಳ ಸತ್ಯತ್ವ ಬ್ರಹ್ಮವಸ್ತುವನ್ನು ಆತ್ಮವನ್ನಾಗಿ ಹೊಂದಿರುವುದ ರಿಂದಲೇ ಎಂಬುದನ್ನು 'ತತ್ಸತ್ಯಂ' ಎಂದು ಹೇಳಲಾಗಿದೆ. ಹೀಗೆ ಬ್ರಹ್ಮವಸ್ತು ಸರ್ವ ಕಲ್ಯಾಣ ಗುಣಯೋಗವನ್ನು ಹೊಂದಿ ಜಗತ್ತಿಗೆ ಅಭಿನ್ನನಿಮಿತ್ತೋಪಾದಾನ ಕಾರಣ ವಾಗಿದೆ.

ಬ್ರಹ್ಮವಸ್ತು ವಿಕಾರದೂರವಾದುದು

ಬ್ರಹ್ಮವು ಜಗತ್ತಿಗೆ ಉಪಾದಾನಕಾರಣವೆಂದು ಮೇಲೆ ಹೇಳಲಾಯಿತು. ಹಾಗಾದರೆ ಬ್ರಹ್ಮವಸ್ತು ವಿಕಾರಕ್ಕೊಳಗಾಗುವುದಿಲ್ಲವೇ ಎಂಬ ಶಂಕೆ ಏಳುತ್ತದೆ. ಬ್ರಹ್ಮವಸ್ತು ಯಾವ ವಿಕಾರಕ್ಕೂ ಒಳಪಡುವುದಿಲ್ಲ ಅದು ನಿರ್ವಿಕಾರವಾಗಿರುವುದು. 'ಅವಿಕಾರಾಯ ಶುದ್ಧಾಯ ನಿತ್ಯಾಯ ಪರಮಾತ್ಮನೇ' ಎಂದೂ 'ಮಹಾನ್ ಅನೂನಂ' ಎಂದೂ ಇದನ್ನು ಹೇಳಿದೆ. ಜಗತ್ಕಾರಣವು ಬ್ರಹ್ಮವೇ ಆಗಿರುವುದಷ್ಟೆ. ಈ ಅವಸ್ಥೆಯಲ್ಲಿ ಸೂಕ್ಷ್ಮರೂಪದಲ್ಲಿರುವ ಚೇತನ ಮತ್ತು ಅಚೇತನ ತತ್ತ್ವಗಳಿಂದ ಅದು ವಿಶಿಷ್ಟವಾಗಿದೆ. ಸೃಷ್ಟಿಮಾಡಲು ಸಂಕಲ್ಪಿಸಿದ ಬ್ರಹ್ಮವಸ್ತು ,ನಾಮರೂಪವ್ಯಾಕರಣವನ್ನು ಮಾಡಿ ಅನೇಕವಾಗುತ್ತದೆ. ಈ ಅವಸ್ಥೆಯಲ್ಲಿ ಸ್ಥೂಲರೂಪವನ್ನು ಹೊಂದಿದ ಚೇತನ ಮತ್ತು ಅಚೇತನ ತತ್ತ್ವಗಳಿಂದ ಅದು ಕೂಡಿರುತ್ತದೆ. ಈ ಕ್ರಮದಲ್ಲಿ ವಿಕಾರ ಅಥವಾ ಬದಲಾ ವಣೆ ವಿಶೇಷಣಗಳಾದ ಚೇತನ ಮತ್ತು ಅಚೇತನ ತತ್ತ್ವಗಳಲ್ಲಿ ಮಾತ್ರ ಆಗುತ್ತದೆ. ವಿಶೇಷ್ಯವಾದ ಬ್ರಹ್ಮವಸ್ತುವಿನಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ ಅಚೇತನ ತತ್ತ್ವವು ಪರಿಣಾಮವನ್ನು ಹೊಂದುತ್ತದೆ. ಚೇತನತತ್ತ್ವದಲ್ಲಿ ಜ್ಞಾನಸಂಕೋಚ ವಿಕಾ ಸಾದಿಗಳು ಸಂಭವಿಸುವುವೇ ವಿನಾ ಸ್ವರೂಪಪರಿಣಾಮವಾಗುವುದಿಲ್ಲ. ಆದರೆ ಬ್ರಹ್ಮವಸ್ತು ಪರಿಣಾಮವನ್ನಾಗಲೀ ಜ್ಞಾನಸಂಕೋಚವನ್ನಾಗಲೀ ಹೊಂದದೆ ನಿರ್ವಿಕಾರವಾಗಿಯೇ ಎಲ್ಲ ಕಾಲದಲ್ಲಿಯೂ ಉಳಿಯುವುದು. ಹೀಗೆ ಉಪಾದಾನತ್ವಕ್ಕೂ ನಿರ್ವಿಕಾರತ್ವಕ್ಕೂ ವಿಷಯ ಬೇರೆ ಬೇರೆಯಾಗಿರುವುದರಿಂದ ಪರಸ್ಪರ ವಿರೋಧವಿರುವುದಿಲ್ಲ. ಇಲ್ಲಿ ಒಂದು ಉದಾಹರಣೆಯನ್ನು ಕೊಡಬಹುದು. ನಮ್ಮ ಶರೀರದಲ್ಲಿ ಅನೇಕಾನೇಕ ಬದಲಾವಣೆ ಗಳು-ಯುವತ್ವ, ಬಾಲತ್ವ, ಸ್ಥವಿರತ್ವ ಮುಂತಾದುವು ಸಂಭವಿಸಿದರೂ ವಿಶೇಷ್ಯವಾದ ಆತ್ಮವಸ್ತುವಿನಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಹೇಗೆ ಅವಿಕಾರಿಯಾದ ಆತ್ಮವಸ್ತು ವಿಕಾರಾಸ್ಪದವಾದ ಸ್ಥೂಲಶರೀರದೊಡನೆ ಸಂಬಂಧಿಸಿರುವುದೋ ಹಾಗೆಯೇ ಜಗತ್ಕಾರಣವಾದ ಬ್ರಹ್ಮವಸ್ತು ಚೇತನಾಚೇತನಗಳೊಡನೆ ಸಂಬಂಧಿಸಿದ್ದರೂ ವಿಕಾರ ದೂರವಾಗಿದೆ. ವಿಕಾರವೆಂಬುದು ಬೇರೊಂದು ಅವಸ್ಥೆಯನ್ನು ಹೊಂದುವುದೇ ಆಗಿದೆ. ಪ್ರಕೃತಿತತ್ತ್ವವು ಸ್ವರೂಪತಃ ವಿಕ್ರಿಯಾಸ್ಪದವಾಗಿ ಮಹತ್ವ, ಅಹಂಕಾರತ್ವ, ಇಂದ್ರಿ ಯತ್ವ, ಆಕಾಶತ್ವ, ವಾಯುತ್ವ ಮೊದಲಾದ ರೂಪಗಳನ್ನು ಹೊಂದುತ್ತದೆ. ಜೀವನ

acharya.org

ಧರ್ಮಭೂತಜ್ಞಾನ ಸಂಕೋಚವಿಕಾಸಕ್ಕೊಳಗಾಗುವುದು. ಆಯಾಯಾ ತತ್ತ್ವಗಳ ಸ್ವರೂಪಕ್ಕನುಸಾರ ಈ ಬದಲಾವಣೆಗಳಾಗುವುವು. ಆದರೆ ಈಶ್ವರತತ್ತ್ವಕ್ಕೆ ಇಂತಹ ಬದಲಾವಣೆಗಳಾಗುವುದಿಲ್ಲ. ಅದ್ದರಿಂದ ಅದು ಅವಿಕಾರಿಯಾಗಿಯೇ ಇರುವುದು. ಸೂತ್ರಕಾರರು ಬ್ರಹ್ಮವಸ್ತುವಿನ ಅವಿಕಾರತ್ವವನ್ನೂ ದೋಷರಹಿತತ್ತ್ವವನ್ನೂ ಉಭಯಲಿಂಗಾಧಿಕರಣದಲ್ಲಿ ಸಮರ್ಥಿಸಿದ್ದಾರೆ. ದೋಷಯುಕ್ತವಾದ ಅನೇಕ ಸ್ಥಾನಗಳಲ್ಲಿ ವಸ್ತುತಃ ಇದ್ದರೂ ಆಕಾಶಕ್ಕೆ ಹೇಗೆ ಆಯಾ ಪದಾರ್ಥಗಳ ದೋಷಗಳುಂಟಾಗುವುದಿಲ್ಲವೋ ಹಾಗೆಯೇ ಪೃಥಿವ್ಯಾದಿಗಳಲ್ಲಿ ವಸ್ತುತಃ ಇದ್ದಾಗ್ಗೂ, ಪರಮಾತ್ಮನು ದೋಷದೂರನಾಗಿರುವ ಕಾರಣದಿಂದಲೇ, ದೋಷದ ಸಂಬಂಧವನ್ನು ಹೊಂದುವುದಿಲ್ಲ. ಇದು ಈ ವಸ್ತುವಿನ ಸರ್ವಾತಿಶಾಯಿಯಾದ ಸ್ವರೂಪ. ಈಶ್ವರನು ತನ್ನ ಸ್ವರೂಪದಿಂದಲೇ ಚೇತನಾಚೇತನ ಪದಾರ್ಥಗಳೊಡನೆ ನಿತ್ಯಸಂಬಂಧವನ್ನು ಹೊಂದಿದ್ದಾನೆ. ಹೀಗೆ ಈ ಚಿದಚಿದ್ವಿಶಿಷ್ಟತ ನಿತ್ಯವಾದುದು. ಸ್ವರೂಪಜನ್ಯವಾದ ಧರ್ಮವಲ್ಲ. ಆದುದರಿಂದಲೇ ಈಶ್ವರನು ಉಪಾದಾನಕಾರಣವಾಗಿದ್ದರೂ ವಿಕಾರದೂರನಾಗಿದ್ದಾನೆ.

ಬ್ರಹ್ಮವಸ್ತು ಶಾಸ್ತ್ರೈಕವೇದ್ಯವಾದುದು

ನಯ್ಯಾಯಿಕರ ಅಭಿಪ್ರಾಯದಲ್ಲಿ ಪ್ರಕೃತಿಯು ಜಗತ್ತಿಗೆ ಉಪಾದಾನಕಾರಣವಾಗಿ ಬ್ರಹ್ಮವಸ್ತು ನಿಮಿತ್ತಕಾರಣವಾಗಿದೆ. ಒಂದು ವಸ್ತು ಏಕಕಾಲದಲ್ಲಿ ನಿಮಿತ್ತಕಾರಣವೂ ಉಪಾದಾನ ಕಾರಣವೂ ಆಗಿರಲಾರದೆಂಬುದು ಇವರ ವಾದ. ಈ ಆಕ್ಷೇಪ ಸಲ್ಲದು. ಈಶ್ವರನನ್ನು ಅಂಗೀಕರಿಸದೆ ಈ ಆಕ್ಷೇಪವನ್ನು ಮಾಡಲಾಗುವುದಿಲ್ಲ. ಈಶ್ವರನನ್ನು ಹೇಗೆ ನಾವು ಸಾಧಿಸಬಹುದು? ವೇದಾಂತಿಗಳೆಲ್ಲರ ಅಭಿಪ್ರಾಯದಲ್ಲಿ ಈಶ್ವರನನು ಶಾಸ್ತ್ರದಿಂದ ನಾವು ತಿಳಿಯಬಹುದೇ ವಿನಾ ಅನುಮಾನದಿಂದಲ್ಲ. ಸೂತ್ರಗಳು ಈ ಅಂಶವನ್ನು ಸಮರ್ಥಿಸುತ್ತವೆ. ಶ್ರುತಿಗಳಲ್ಲಿ ಈಶ್ವರನೇ ಜಗತ್ತಿಗೆ ನಿಮಿತ್ತಕಾರಣನೂ ಉಪಾದಾನ ಕಾರಣನೂ ಆಗಿದ್ದಾನೆಂದು ಹೇಳಿದೆ. ಇದನ್ನು ಅನುಮಾನದಿಂದ ಬೇರೆಯಾಗಿ ಸಾಧಿಸುವುದಕ್ಕಾಗುವುದಿಲ್ಲ. ಈಶ್ವರ ಉಪಾದಾನಕಾರಣನೆಂದು ಶ್ರುತಿಯಲ್ಲಿ ಹೇಳಿರುವ ಭಾಗಗಳಿಗೆ ಲಕ್ಷಣಯಾ ಅರ್ಥನಿರ್ವಾಹ ಮಾಡಬೇಕೆಂದು ಕೆಲವರು ವಾದಿಸುತ್ತಾರೆ. ಅನುಮಾನದಿಂದ ಈಶ್ವರನ ನಿಮಿತ್ತಕಾರಣತ್ವವನ್ನು ಸಾಧಿಸಿ ಅನುಮಾನದಿಂದಲೇ ಈಶ್ವರನ ಉಪಾದಾನಕಾರಣತ್ವವನ್ನು ಗೌಣಾರ್ಥದಲ್ಲಿ ವಿವರಿಸಬಹುದೆಂದು ಇವರ ಆಶಯ. ಈ ವಾದ ಸಮೀಚೀನವಾದುದಲ್ಲ. ಏಕೆಂದರೆ ಶ್ರುತಿಪ್ರಾಮಾಣ್ಯದಿಂದಲೇ ಈಶ್ವರನನ್ನು ಸಮರ್ಥಿಸಬೇಕೆಂಬುದು ಸೂತ್ರಕಾರರ ಅಭಿಪ್ರಾಯ. ಮತ್ತಾವ ಪ್ರಮಾಣದಿಂದಲೂ ಈಶ್ವರನನ್ನು ಸ್ಥಾಪಿಸುವುದಕ್ಕಾಗುವುದಿಲ್ಲ. ನಮಗೆ ಕಾಣುವಂತಹ ಉದಾಹರಣೆಗಳಿಂದ ಜಗತ್ಕಾರಣವಸ್ತುವನ್ನು ಸ್ಥಾಪಿಸುವುದು ಶಕ್ಯವಲ್ಲ. ಕುಡಿಕೆ ಮಡಿಕೆಗಳನ್ನು

acharya.org

ಮಾಡುವ ಕುಂಬಾರ ಅವುಗಳಿಗೆ ನಿಮಿತ್ತಕಾರಣನಷ್ಟೆ. ಹಾಗೆಯೇ ಜಗತ್ತಿಗೂ ನಿಮಿತ್ತಕಾರಣನಾಗಿ ಪರಮಚೇತನನೊಬ್ಬನಿದ್ದಾನೆಂದು ಊಹಿಸಬೇಕು. ನಮಗೆ ಕಾಣುವ ಹಾಗೆ ಕುಡಿಕೆ ಮಡಿಕೆಗಳನ್ನು ಮಾಡುವ ಮನುಷ್ಯನು ಕರ್ಮಾಧೀನನಾಗಿ ಅನೇಕ ದೋಷಗಳಿಗೆ ಆಶ್ರಯನಾಗಿದ್ದಾನೆ. ಇದೇ ಬಗೆಯ ಕರ್ತೃವನ್ನು ಊಹಿಸುವುದರಿಂದ ಅವನೂ ದೋಷಗಳಿಗಾಸ್ಪದನೇ ಆಗಬೇಕಾಗುತ್ತದೆ. ಅಂಥ ಕರ್ತೃ ಸರ್ವಶಕ್ತನೂ ಸರ್ವಜ್ಞನೂ ಆಗಲಾರನು. ರಾಮಾನುಜರು ಶ್ರೀಭಾಷ್ಯದಲ್ಲಿ ಈಶ್ವರಾನುಮಾನವಾದವನ್ನು ಕೂಲಂಕಷವಾಗಿ ಖಂಡಿಸಿದ್ದಾರೆ. ನಯ್ಯಾಯಿಕರ ಈ ವಾದ ಈಶ್ವರವಾದವನ್ನು ಸಮರ್ಥಿಸುವುದೆಂದು ಹೇಳುವುದಕ್ಕಾಗುವುದಿಲ್ಲ. ಈ ವಾದವನ್ನು ಒಪ್ಪದಿದ್ದರೆ ನಿರೀಶ್ವರವಾದ ತಲೆ ಎತ್ತುವುದೆಂದೂ ಸಾಧಿಸುವುದಕ್ಕಾಗುವುದಿಲ್ಲ. ಮೊಟ್ಟಮೊದಲಾಗಿ ತತ್ತ್ವವಿಚಾರವನ್ನು ಇದ್ದುದಿದ್ದಂತೆ ವಿಚಾರಮಾಡಬೇಕಾದುದು ಅವಶ್ಯಕ. ಅನುಮಾನದಿಂದಲೇ ಈಶ್ವರನನ್ನು ನಂಬಿದವನಿಗೆ ತನ್ನ ಅನುಮಾನದ ಪ್ರಾಮಾಣ್ಯದಲ್ಲಿ ಸಂದೇಹ ಬಂದರೆ ಅವನು ನಿರೀಶ್ವರವಾದಿಯಾಗಬೇಕಾಗುತ್ತದೆ. ಆದರೆ ಅಂಥ ಸಂದೇಹ ಶಾಸ್ತ್ರದ ಬಗೆಗೆ ಎಂದೂ ಬರಲಾರದು. ಶಾಸ್ತ್ರೈಕವೇದ್ಯತ್ವವನ್ನಂಗೀಕರಿಸಿದರೆ ಅಂಥ ಸಂದೇಹ ಕ್ಕೆಡೆಯೇ ಇರಲಾರದು. ಏಕೆಂದರೆ ನಮಗೆ ಅಜ್ಞಾತವಾಗಿರುವುದನ್ನು ಶಾಸ್ತ್ರ ತಿಳಿಸುವುದಾಗಿರುತ್ತದೆ. ಹಾಗಿಲ್ಲದೆ ಅನುಮಾನದಿಂದಲೇ ಈಶ್ವರನನ್ನು ಸಾಧಿಸುವುದಾದರೆ ಶಾಸ್ತ್ರಕ್ಕೆ ಪ್ರಾಮಾಣ್ಯ ಕಡಿಮೆ ಆಗಿ ಅವು ಕೇವಲ ಅನುವಾದಗಳಾಗುತ್ತವೆ.

ಈಶ್ವರಾನುಮಾನದಲ್ಲಿ ಇನ್ನೂ ಅನೇಕ ತೊಡಕುಗಳಿವೆ. ಕ್ಷಿತ್ಯಾದಿಗಳು ಕಾರ್ಯಗಳೇ ಆದರೂ ಸಹ ಅವುಗಳನ್ನೆಲ್ಲಾ ಒಬ್ಬನೇ ಒಂದೇ ಸಮಯದಲ್ಲಿ ಸೃಷ್ಟಿಸಿದನೆಂದು ಸಾಧಿಸುವುದಕ್ಕಾಗುವುದಿಲ್ಲ. ಈ ಕಾರ್ಯಗಳು ಪರಸ್ಪರ ವಿಲಕ್ಷಣಗಳಾಗಿವೆ. ಇವುಗಳನ್ನೆಲ್ಲಾ ಏಕಕಾಲದಲ್ಲಿ ಒಬ್ಬನೇ ಸೃಜಿಸಿದನೆಂದು ತರ್ಕದಿಂದ ಸಿದ್ಧಪಡಿಸುವುದಕ್ಕಾಗುವುದಿಲ್ಲ. ಕಾಲಭೇದದ ಕಾರಣ ಏಕಕರ್ತೃವಿನಿಂದ ಏಕಕಾಲದಲ್ಲಿ ಆಗಲಿಲ್ಲವೆಂದೇ ಊಹಿಸಬೇಕಾಗುತ್ತದೆ. ಜೀವರುಗಳು ವಿಚಿತ್ರವಾದ ಪ್ರಪಂಚವನ್ನು ಸೃಜಿಸಲಾರದ ಕಾರಣ ಅವರಿಗಿಂತ ವಿಲಕ್ಷಣನಾದ ಈಶ್ವರ ಸೃಜಿಸಿದನೆಂದು ವಾದಿಸುವುದಕ್ಕೂ ಸಾಧ್ಯವಿಲ್ಲ. ಪ್ರಕೃಷ್ಟವಾದ ಅದೃಷ್ಟವುಳ್ಳ ಜೀವನೇ ಇದನ್ನು ಸೃಜಿಸಬಹುದೆಂದೂ ಊಹಿಸಲವಕಾಶವಿದೆ. ಸೃಷ್ಟಿ ಮತ್ತು ಪ್ರಲಯಗಳು ಒಂದಾದಮೇಲೊಂದರಂತೆ ಬೇರೆ ಬೇರೆ ಕಾಲದಲ್ಲಿ ಆಗುವುವಷ್ಟೆ? ಅವುಗಳಿಗೆಲ್ಲಾ ಒಬ್ಬನೇ ನಿಮಿತ್ತಕಾರಣನೆಂದು ವಾದಿಸುವುದಕ್ಕಾಗುವುದಿಲ್ಲ. ಈಶ್ವರ ಜಗತ್ತಿಗೆ ನಿಮಿತ್ತಕಾರಣವಲ್ಲವೆಂದೂ ಬಗೆಬಗೆಯಾಗಿ ತರ್ಕಮಾಡಲು ಶಕ್ಯವಾಗುತ್ತದೆ. ಉದಾಹರಣೆಗೆ ಈಶ್ವರ ಜಗತ್ತಿಗೆ ನಿಮಿತ್ತ ಕಾರಣವಲ್ಲ. ಏಕೆಂದರೆ ಅವನಿಗೆ ಶರೀರವಿಲ್ಲ–ಮುಕ್ತಾತ್ಮರಂತೆ. ಈಶ್ವರ ಜಗತ್ತಿಗೆ ನಿಮಿತ್ತಕಾರಣವಲ್ಲ ಏಕೆಂದರೆ ಅವನಿಗೆ ಇದರಿಂದ ಪ್ರಯೋಜನವಿಲ್ಲ–ಮುಕ್ತಾತ್ಮರಂತೆ.

acharya.org

ಅನುಮಾನವನ್ನೇ ಆಶ್ರಯಿಸಿದರೆ ಹೇಗೆ ಅನೇಕ ಅಸಂಗತಗಳು ಸಂಭವಿಸುವು ದೆಂಬುದನ್ನು ಇದರಿಂದ ಕಾಣಬಹುದು. ಆದುದರಿಂದಲೇ ವೇದಾಂತದರ್ಶನವು ಪರಬ್ರಹ್ಮವಸ್ತು ಶಾಸ್ತ್ರೈಕಸಮಧಿಗಮ್ಯವೆಂದು ಸಮರ್ಥಿಸುತ್ತದೆ.

ಬ್ರಹ್ಮವಸ್ತು ಸರ್ವಾಧಾರವಾದುದು

ಬ್ರಹ್ಮವಸ್ತು ಜಗತ್ತಿಗೆ ಆಧಾರ. ಚೇತನವರ್ಗಗಳಾಗಲೀ, ಅಚೇತನವಾಗಲೀ ತಮ್ಮ 'ಸತ್ತಾ' ಅಥವಾ ಅಸ್ತಿತ್ವಕ್ಕೆ ಬ್ರಹ್ಮವಸ್ತುವನ್ನಾಶ್ರಯಿಸಿವೆ. ಬ್ರಹ್ಮವಸ್ತುವಿನಲ್ಲಿ ಇವು ಇವೆ. ಅದಿಲ್ಲದೆ ಇವುಗಳು ಇರಲಾರವು. ಹಾಗೆಯೇ ಇವು ಕೆಲಸ ಮಾಡುವು ದಾದರೂ ಬ್ರಹ್ಮವಸ್ತುವಿನ ಕಾರಣದಿಂದಲೇ. ಹೀಗೆ ಇವುಗಳ ಸ್ವರೂಪ ಬ್ರಹ್ಮವಸ್ತು ವನ್ನವಲಂಬಿಸಿದೆ. ಹಾಗೆಯೇ ಇವುಗಳ ಕಾರ್ಯಪ್ರವೃತ್ತಿಯೂ ಬ್ರಹ್ಮವಸ್ತುವಿನ ಸಂಕಲ್ಪವನ್ನಾಶ್ರಯಿಸಿದೆ. ಹೇಗೆ ಜೀವನು ತನ್ನ ಶರೀರವನ್ನು ಧಾರಣಮಾಡಿ ನಿಯಮನ ಮಾಡಿ ಅದರಿಂದಾಗುವ ಪ್ರಯೋಜನವನ್ನು ಅನುಭವಿಸುವನೋ ಹಾಗೆಯೇ ಸರ್ವೇ ಶ್ವರನು ಚೇತನಾಚೇತನ ಪದಾರ್ಥಗಳನ್ನು ಧಾರಣಮಾಡಿ, ನಿಯಮಿಸಿ, ಅವು ಗಳಿಂದಾಗುವ ಪ್ರಯೋಜನವನ್ನು ತಾನೇ ಪಡೆಯುವವನಾಗಿದ್ದಾನೆ. ಹೇಗೆ ಜೀವನಿಲ್ಲದೆ ಶರೀರ ನಿಲ್ಲಲಾರದೋ ಹಾಗೆಯೇ ಈಶ್ವರನಿಲ್ಲದೆ ಚೇತನಾಚೇತನ ಪದಾರ್ಥಗಳೂ ಇರಲಾರವು. ಈಶ್ವರನನ್ನುಳಿದು ಮತ್ತೆಲ್ಲ ಪದಾರ್ಥಗಳೂ ಅವನನ್ನೇ ಆಶ್ರಯಿಸಿವೆ. ಹೀಗೆ ಇವು ಸ್ವರೂಪಾಶ್ರಿತಗಳೂ ಆಗಿ ಸಂಕಲ್ಪಾಶ್ರಿತಗಳೂ ಆಗಿವೆ. ತೈತ್ತಿರೀಯ ಉಪನಿಷತ್ತಿನಲ್ಲಿ 'ಸತ್ಯಂ ಜ್ಞಾನಂ ಅನಂತಂ' ಎಂದು ಹೇಳಿರುವುದು ಬ್ರಹ್ಮವಸ್ತುವಿನ ಈ ಸ್ವರೂಪವನ್ನು ಪ್ರತಿಪಾದಿಸುತ್ತದೆ. 'ಸತ್ಯಂ' ಎಂಬುದು ಅದು ನಿರುಪಾಧಿಕವಾದು ದೆಂದು ಸಾರಿ ಚೇತನವರ್ಗದಿಂದ ಅದು ಬೇರೆಯೆಂಬುದನ್ನೂ, 'ಜ್ಞಾನಂ' ಎಂಬುದು ಅದು ಸರ್ವದಾ ಅಸಂಕುಚಿತವಾದ ಜ್ಞಾನಾಕಾರವುಳ್ಳುದೆಂಬುದನ್ನೂ ಸಮರ್ಥಿಸುತ್ತದೆ. 'ಅನಂತಂ' ಎಂಬ ವಿಶೇಷಣ ಸ್ವರೂಪತಃ ಕಾಲತಃ ದೇಶತಃ ಅದು ಅಪರಿಚ್ಛಿನ್ನವಾದು ದೆಂದು ಸಮರ್ಥಿಸಿ ಜೀವರುಗಳಿಗಿಂತಲೂ ಪ್ರಕೃತಿಗಿಂತಲೂ ಅದು ಬೇರೆಯಾದುದೆಂದು ಹೇಳಿದೆ. ಬ್ರಹ್ಮವಸ್ತು ಸರ್ವಾಧಾರವೆಂಬುದರಿಂದ ಪ್ರಕೃತಿ ಮತ್ತು ಜೀವತತ್ತ್ವಗಳು ಸತ್ಯಭೂತವಾದವೆಂದೂ, ಇವು ಬ್ರಹ್ಮವಸ್ತುವನ್ನಗಲಿ ಇರಲಾರವೆಂದೂ, ಪ್ರತಿಯೊಂದು ಚೇತನಾಚೇತನಪದಾರ್ಥವೂ ಆ ಬ್ರಹ್ಮವಸ್ತುವಿನಲ್ಲಿಯೇ ಪ್ರತಿಷ್ಠಿತವಾಗಿದೆಯೆಂದೂ ಸಿದ್ಧವಾಗುತ್ತದೆ.

ಸರ್ವ ನಿಯಂತಾ

ಬ್ರಹ್ಮವಸ್ತು ಸಕಲ ಚೇತನಾಚೇತನಪದಾರ್ಥಗಳಿಗೆ ಆಧಾರವಾಗಿರುವಂತೆ

acharya.org

ಸರ್ವನಿಯಾಮಕವೂ ಆಗಿದೆ. ಬೃಹದಾರಣ್ಯಕದಲ್ಲಿ ಆರುಣಿ ಉದ್ದಾಲಕ ಯಾಜ್ಞವಲ್ಕ್ಯರನ್ನು ಕುರಿತು ಈ ಪ್ರಶ್ನೆಯನ್ನು, 'ತಮಂತರ್ಯಾಮಿಣಂ ಯ ಇಮಂ ಚ ಲೋಕಂ ಪರಂ ಚ ಲೋಕಂ ಸರ್ವಾಣಿ ಚ ಭೂತಾನಿ ಯೋಂತರೋ ಯಮಯತಿ' ಎಂದು ಪ್ರಸ್ತಾಪಿಸಿದ್ದಾರೆ. ಆಗ ಯಾಜ್ಞವಲ್ಕ್ಯರು ಅಂತರ್ಯಾಮಿಯ ಸ್ವರೂಪವನ್ನು ವಿಶದಪಡಿಸಿದರು. ಬ್ರಹ್ಮವಸ್ತು ಎಲ್ಲ ಚೇತನಾಚೇತನಗಳಲ್ಲಿ ಇದ್ದು ಅವುಗಳನ್ನು ನಿಯಮಿಸುವುದೆಂದು ಅವರು ತಿಳಿಸಿದರು. ಇವೆಲ್ಲವೂ ಆ ಬ್ರಹ್ಮವಸ್ತುವಿಗೆ ಶರೀರವೆಂದೂ ಆ ಅಂತರಾತ್ಮ ಇವುಗಳನ್ನೆಲ್ಲಾ ಆಳುವುದೆಂದೂ ಅವರು

'ಯಃ ಸರ್ವೇಷು ಭೂತೇಷು ತಿಷ್ಠನ್ ಸರ್ವೇಭ್ಯೋ ಭೂತೇಭ್ಯೋ ಅಂತರಃ ಯಃ ಸರ್ವಾಣಿ ಭೂತಾನ್ಯಂತರೋ ಯಮಯತಿ ಸ ತೇ ಅತ್ಮಾ ಅಂತರ್ಯಾಮ್ಯಮೃತಃ'

ಎಂದು ಎಲ್ಲ ಭೂತಗಳಲ್ಲಿಯೂ ಯಾರು ಇರುವರೋ, ಯಾರು ಎಲ್ಲ ಭೂತಗಳಿಗಿಂತ ಬೇರೆಯಾಗಿರುವರೋ, ಯಾರನ್ನು ಆ ಎಲ್ಲ ಭೂತಗಳೂ ಅರಿಯವೋ, ಯಾರಿಗೆ ಎಲ್ಲ ಭೂತಗಳೂ ಶರೀರವೋ, ಯಾರು ಇವೆಲ್ಲ ವಸ್ತುಗಳನ್ನೂ ಒಳಗಿನಿಂದಲೇ ಆಳುವರೋ ಆ ಬ್ರಹ್ಮವಸ್ತು ನಿನಗೂ ಅಂತರ್ಯಾಮಿಯಾಗಿದೆ ಎಂದು ವಿವರಿಸಿದರು. 'ನಿಯಂತೃತ್ವ' ಬ್ರಹ್ಮವಸ್ತುವಿನ ಒಂದು ಮುಖ್ಯ ಲಕ್ಷಣವೆಂದು ಸೂತ್ರಕಾರರು ಅಂತರ್ಯಾಮ್ಯಧಿಕರಣದಲ್ಲಿ ತಿಳಿಸುತ್ತಾರೆ. ಸರ್ವಾಧಾರನಾದವನು ಹೀಗೆ ಸರ್ವನಿಯಾಮಕನೂ ಆಗಿದ್ದಾನೆ. ಪ್ರಕೃತಿ ಮತ್ತು ಜೀವರಿಗಿಂತ ವಿಲಕ್ಷಣನಾದ ಪರಮಾತ್ಮನು ಅವುಗಳೊಳಗೇ ಅವುಗಳ ನಿಯಾಮಕನಾಗಿ ವಾಸಿಸುತ್ತಿದ್ದಾನೆ. ಬ್ರಹ್ಮವಸ್ತುವನ್ನು ಈ ಅಂತರ್ಯಾಮಿಯ ರೂಪದಲ್ಲಿ ಉಪಾಸನೆ ಮಾಡಬೇಕೆಂದು ದಹರವಿದ್ಯೆಯಲ್ಲಿ ತಿಳಿಸಿದೆ. ಶರೀರಸಂಬಂಧವಾದ ದೋಷಗಳ ಸಂಪರ್ಕವಿಲ್ಲದಂತೆ ಈ ಬ್ರಹ್ಮವಸ್ತು ಅವುಗಳೊಳಗೇ ನಿರಂತರವಾಗಿ ನೆಲೆಸಿದೆ. ಹೀಗೆ ಬ್ರಹ್ಮವಸ್ತು ನಿಯಾಮಕವಾಗಿಯೂ ಇದೆಯೆಂಬುದು ಈ ದರ್ಶನದ ನೆಲೆ.

ಸರ್ವಶೇಷೀ

ಚೇತನಾಚೇತನ ಪದಾರ್ಥಗಳು ಭಗವಂತನನ್ನೇ ಸರ್ವಾತ್ಮನಾ ಆಶ್ರಯಿಸಿವೆಯೆಂದೂ, ಅವನ ನಿಯಮನಕ್ಕೆ ಒಳಗಾಗಿವೆಯೆಂದೂ ಮೇಲೆ ತಿಳಿಸಲಾಯಿತು. ಇಷ್ಟೇ ಅಲ್ಲದೆ ಇವೆಲ್ಲ ಪದಾರ್ಥಗಳೂ ಅವನಿಗೆ ಶೇಷಭೂತವಾಗಿವೆ ಎಂದು ಸಮರ್ಥಿಸಲಾಗಿದೆ. ಈಶ್ವರನು ಸರ್ವಶೇಷಿಯಾಗಿದ್ದಾನೆ. ಶೇಷ ಎಂಬ ಶಬ್ದಕ್ಕೆ ಇನ್ನೊಬ್ಬರಿಗಾಗಿ ಇರುವುದು ಎಂಬ ಅರ್ಥ ಬರುತ್ತದೆ. 'ಪರಗತಾತಿಶಯಾಧಾನೇಚ್ಛಯಾ ಉಪಾದೇಯತ್ವಮೇವ ಯಸ್ಯ ಸ್ವರೂಪಂ ಸ ಶೇಷಃ ಪರಃ ಶೇಷೀ' ಎಂದು ರಾಮಾನುಜರು ಇದನ್ನು ನಿರೂಪಿಸುತ್ತಾರೆ. ಪ್ರಕೃತಿ ಭಗವಂತನಲ್ಲಿದೆ, ಅವನಿಗಾಗಿಯೇ ಇದೆ ಮತ್ತು ಅವನಿಗೆ ಸಂತೋಷ

7

acharya.org

ವನ್ನುಂಟುಮಾಡುವುದಾಗಿದೆ. ಹಾಗೆಯೇ ಜೀವರುಗಳೂ ಸಹ. ಜೀವರುಗಳ 'ಸತ್ತಾ' ಈಶ್ವರಾಧೀನವಾದುದು. ಜೀವರುಗಳ ಪ್ರವೃತ್ತಿ ಈಶ್ವರಾಧೀನವಾದುದು. ಜೀವರುಗಳ ಈ ವ್ಯಾಪಾರದಿಂದ ಸಂತೋಷಗೊಳ್ಳುವವನೂ ಈಶ್ವರನೇ. ಹೀಗೆ ಚೇತನಾಚೇತನ ಗಳೆರಡೂ ಈಶ್ವರಪ್ರೀತಿಗಾಗಿಯೇ ಇರುವುವಾಗಿವೆ. ಈ ಶೇಷಶೇಷಿಭಾವಕ್ಕೆ ಬಹಳ ಮಹತ್ವವಿದೆ. ಜೀವನ ಮನೋಭಾವವನ್ನೇ ಇದು ಪರಿವರ್ತನಗೊಳಿಸುವುದು. ಅಚೇತನವಾದ ಪ್ರಕೃತಿಯೂ ಜೀವರುಗಳಂತೆಯೇ ಈಶ್ವರನಿಗೆ ಶೇಷಭೂತವಾಗಿದ್ದರೂ ಜೀವರುಗಳು ಜ್ಞಾನಸ್ವರೂಪರಾಗಿರುವುದರಿಂದಲೂ, ಬುದ್ಧಿ ಹಾಗೂ ಕರ್ತೃತ್ವವನ್ನು ಹೊಂದಿರುವುದರಿಂದಲೂ ಆತ್ಮಾನಾತ್ಮವಿವೇಕವನ್ನು ಮಾಡಿಕೊಳ್ಳಲು ಶಕ್ತರಾಗು ತ್ತಾರೆ. ಹಾಗೂ ತಮ್ಮನ್ನು ಪ್ರಕೃತಿಯ ಬಂಧನದಿಂದ ಬಿಡಿಸಿಕೊಳ್ಳಲು ಸಮರ್ಥರಾಗು ತ್ತಾರೆ. ಪರಮಾತ್ಮನು ಸರ್ವಶೇಷಿ ಎಂಬುದನ್ನು ಅವರು ಮನಗಾಣುತ್ತಾರೆ ಈ ಶೇಷ ಶೇಷಿಭಾವ ಚೇತನರ ವಿಷಯದಲ್ಲಿ ಸ್ವಾಮಿಭೃತ್ಯಭಾವವಾಗಿ ಪರಿಣಮಿಸುತ್ತದೆ. ಜೀವನು ದಾಸನಾಗಿ ಈಶ್ವರನು ಸ್ವಾಮಿಯಾಗಿರುವುದರಿಂದ ಜೀವನು ತನ್ನ ಎಲ್ಲ ಕೆಲಸಗಳಿಂದ ಸ್ವಾಮಿಯಾದ ಈಶ್ವರನನ್ನು ಸಂತೋಷಪಡಿಸಲು ಯತ್ನಿಸುತ್ತಾನೆ. ಈಶ್ವರಸಂಕಲ್ಪವನ್ನೇ ತನ್ನ ಸಂಕಲ್ಪವನ್ನಾಗಿ ಎಣಿಸುತ್ತಾನೆ. ಅಹಂಕಾರ ಮಮಕಾರ ಗಳನ್ನು ಕಿತ್ತೊಗೆದು ಆ ಸರ್ವಸ್ವಾಮಿಯಲ್ಲಿ ತನ್ನನ್ನೂ ತನ್ನದನ್ನೂ ಒಪ್ಪಿಸಿಕೊಳ್ಳು ತ್ತಾನೆ. ತಾನು ಸ್ವತಂತ್ರನಲ್ಲ, ಈಶ್ವರನಿಗೆ ಸೇರಿದವನು, ಅವನು ದಾಸ ಎಂಬ ಭಾವ ಪಕ್ವವಾದಾಗಲೇ ಜೀವನ ಸ್ವಸ್ವರೂಪ ಅಭಿವ್ಯಕ್ತವಾಗುತ್ತದೆ.

ಸರ್ವಶರೀರಿ

ಶರೀರಶರೀರಿಭಾವ ಈ ದರ್ಶನದ ಪ್ರತಿತಂತ್ರ ಸಿದ್ಧಾಂತ. ಚೇತನಾಚೇತನ ಪದಾರ್ಥಗಳೆಲ್ಲವೂ ಪರಮಾತ್ಮನಿಗೆ ಶರೀರವಾಗಿವೆ. ಅವನು ಎಲ್ಲದಕ್ಕೂ ಶರೀರಿಯಾಗಿ ದ್ದಾನೆ. ಈಶ್ವರನು ಸರ್ವಶರೀರಿ ಎಂದು ಶ್ರುತಿಗಳು ಸಾರಿಹೇಳುತ್ತವೆ. ಶ್ರುತಿಗಳಲ್ಲಿ ಹಲವೆಡೆ ಜೀವರುಗಳಿಗೂ ಈಶ್ವರನಿಗೂ ಪ್ರಕೃತಿಗೂ ಭೇದವನ್ನು ಹೇಳಿದೆ. ಇವುಗಳಿಗೆ ಭೇದಶ್ರುತಿಗಳೆಂದು ಹೆಸರು. 'ನಿತ್ಯೋ ನಿತ್ಯಾನಾಂ', 'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ', 'ದ್ವಾ ಸುಪರ್ಣಾ ಸಯುಜಾ ಸಖಾಯಾ' ಮೊದಲಾದವು ಹೀಗೆ ಜೀವ ಬ್ರಹ್ಮರ ಭೇದವನ್ನು ತಿಳಿಸುತ್ತವೆ. ಮತ್ತೆ ಕೆಲವು ಶ್ರುತಿಗಳು ಜೀವಬ್ರಹ್ಮರಿಗೆ ಅಭೇದ ವನ್ನು ಹೇಳುತ್ತವೆ. 'ಆತ್ಮೈವೇದಂ ಸರ್ವಂ' 'ತತ್ತ್ವಮಸಿ' 'ಅಯಮಾತ್ಮಾ ಬ್ರಹ್ಮ' 'ಸರ್ವಂ ಖಲ್ವಿದಂ ಬ್ರಹ್ಮ' ಮುಂತಾದವು ಇಂಥವು. ಶ್ರುತಿಗಳಲ್ಲಿ ಮತ್ತೆ ಕೆಲವೆಡೆಗಳಲ್ಲಿ ಇವೆರಡನ್ನೂ ಕೂಡಿಸಿ ಸಮನ್ವಯ ಮಾಡಿರುವುದೂ ಕಂಡುಬರುತ್ತದೆ. 'ಯಃ ಪೃಥಿವ್ಯಾಂ ತಿಷ್ಠನ್ ಪೃಥಿವ್ಯಾಮಂತರೋ ಯಂ ಪೃಥಿವೀ ನ ವೇದ ಯಸ್ಯ ಪೃಥಿವೀ

acharya.org

ಶರೀರಂ ಯಃ ಪೃಥಿವೀಂ ಅಂತರೋಯಮಯತಿ ಸ ತೇ ಆತ್ಮಾ ಅಂತರ್ಯಾಮ್ಯಮೃತಃ' ಮುಂತಾದವು ಇಂಥ ಘಟಕ ಶ್ರುತಿಗಳಾಗಿವೆ. ಇಲ್ಲಿ ಹೇಳಿರುವ ಶರೀರಶರೀರಿಭಾವದ ಮೂಲಕ ಮೊದಲು ಹೇಳಿರುವ ಭೇದವೂ ಅಭೇದವೂ ಸಂಗತವಾಗುತ್ತದೆ. ಶರೀರವೆಂದರೇನು ? ನಮ್ಮ ಶರೀರದಲ್ಲಿ ನಾವು ಕಾಣುವ ಅಸಾಧಾರಣವಾದ ಲಕ್ಷಣವೇನು ? ರಾಮಾನುಜರು ಇದನ್ನು ವಿವರಿಸುತ್ತಾ 'ಯಸ್ಯಚೇತನಸ್ಯ ಯದ್ದ್ರವ್ಯಂ ಸರ್ವಾತ್ಮನಾ ಸ್ವಾರ್ಥೇ ನಿಯಂತುಂ ಧಾರಯಿತುಂ ಚ ಶಕ್ಯಮ್ ತಚ್ಛೇಷತೈಕಸ್ವರೂಪಂ ಚ ತತ್ತಸ್ಯ ಶರೀರಮ್' ಎಂದು ನಿರೂಪಿಸುತ್ತಾರೆ. ಶರೀರಿ ಆಧಾರ. ಶರೀರ ಆಧೇಯ ಶರೀರಿ ನಿಯಾಮಕ ; ಶರೀರ ನಿಯಾಮ್ಯ. ಶರೀರಿ ಶೇಷಿ ; ಶರೀರ ಶೇಷ. ಈ ಮೂರೂ ಶರೀರದ ಲಕ್ಷಣಗಳು. ಶರೀರಿ ಇಲ್ಲದೆ ಶರೀರ ನಿಲ್ಲಲಾರದು ; ಇರಲಾರದು. ಶರೀರಿಯ ನಿಯಮನಕ್ಕೆ ಶರೀರ ಅಧೀನವಾಗಿದೆ. ಶರೀರದಿಂದಾಗುವ ಪ್ರಯೋಜನ ಶರೀರಕ್ಕಲ್ಲ ಶರೀರಿಗೆ. ಹೀಗೆ ನಮ್ಮ ಶರೀರ ನಮಗಧೀನವಾಗಿದೆ. ನಿಯಾಮ್ಯವಾಗಿದೆ. ಶೇಷವಾಗಿದೆ. ಹಾಗೆಯೇ ಈಶ್ವರನು ಸಕಲಚೇತನಾಚೇತನಪದಾರ್ಥಗಳಿಗೂ ಶರೀರಿ. ಸಕಲ ಚೇತನಾಚೇತನಪದಾರ್ಥಗಳಿಗೆ ಅವನು ಆಧಾರ, ನಿಯಾಮಕ ಮತ್ತು ಶೇಷಿ. ಹೀಗೆ ಶರೀರಶರೀರಿಭಾವದಿಂದ ಈಶ್ವರನಿಗೆ ಜಗತ್ತು ಅತ್ಯಂತವಾಗಿ ಪರತಂತ್ರವಾಗಿದೆ ಎಂದು ಗೊತ್ತಾಗುತ್ತದೆ. ಶರೀರವನ್ನು ಬೋಧಿಸುವ ಶಬ್ದ ಶರೀರಿಯನ್ನು ಉದ್ದೇಶಿಸುವುದಷ್ಟೆ ? ಆದ್ದರಿಂದಲೇ ಎಲ್ಲ ಶಬ್ದಗಳು ಮುಖ್ಯವಾಗಿ ಬ್ರಹ್ಮವಸ್ತುವನ್ನು ಬೋಧಿಸುತ್ತವೆ ಎಂದು ತಿಳಿಯಬೇಕು. ಎಲ್ಲ ಶಬ್ದಗಳೂ ಅಂತರ್ಯಾಮಿಯಾದ ಈ ಪರಮಾತ್ಮನನ್ನೇ ಬೋಧಿಸುವುದರಿಂದ ಅದ್ವೈತವೂ ಸಿದ್ಧಿಸುತ್ತದೆ. ಒಂದೇ ಬ್ರಹ್ಮ ವಸ್ತು ಅನೇಕವಾದ ಚೇತನಾಚೇತನಗಳಲ್ಲಿರುತ್ತಾ ಅನೇಕವಾಗಿರುವುದರಿಂದ ಭೇದಾಭೇದವೂ ಸಿದ್ಧಿಸುವುದು. ಅಚಿದ್ವಸ್ತುವಿಗೂ, ಚಿದ್ವಸ್ತುವಿಗೂ, ಈಶ್ವರನಿಗೂ ಸ್ವರೂಪ ಸ್ವಭಾವಗಳಲ್ಲಿ ವೈಲಕ್ಷಣ್ಯವಿರುವುದರಿಂದಲೂ ಪರಸ್ಪರ ಸಂಕರವಿಲ್ಲದಿರುವುದರಿಂದಲೂ ಭೇದವೂ ಸಮರ್ಥಿತವಾಗುತ್ತದೆ. ಹೀಗಾಗಿ ಭೇದ, ಅಭೇದ ವಾಕ್ಯಗಳಿಗೆಲ್ಲಾ ಶರೀರಶರೀರಿ ಸಂಬಂಧದ ಮೂಲಕ ಸಮರ್ಪಕವಾಗಿ ಅರ್ಥವನ್ನರಿಯಲು ಸಾಧ್ಯವಾಗುತ್ತದೆ. ಇದರಿಂದ ಚಿದಚಿದ್ವಿಶಿಷ್ಟವಾದ ಬ್ರಹ್ಮವಸ್ತು ಒಂದೇ ಎಂದೂ ಇದರಲ್ಲಿ ಒಂದೊಂದಕ್ಕೂ ವಿಲಕ್ಷಣವಾದ ಸ್ವರೂಪಸ್ವಭಾವಗಳಿರುವುವೆಂದೂ ಸಿದ್ಧವಾಗುತ್ತದೆ. ಎರಡನೆಯದಾಗಿ ಶರೀರದ ದೋಷಗಳಾವುವೂ ಆತ್ಮನಿಗೆ ಸಂಬಂಧಪಡದ ಕಾರಣ ಆತ್ಮವಸ್ತು ನಿರ್ವಿಕಾರವಾಗಿರುತ್ತದೆ. ಮೂರನೆಯದಾಗಿ ಪರಮಾತ್ಮನು ಕರ್ಮಾಧ್ಯಕ್ಷನಾಗಿರುವ ಕಾರಣ ಶರೀರದಿಂದುಂಟಾಗುವ ಸುಖದುಃಖಗಳ ಅನುಭವಕ್ಕೆ ಒಳಗಾಗಿಲ್ಲ. ನಾಲ್ಕನೆಯದಾಗಿ ಭಗವಂತನಿಗೆ ಶರೀರವಿರುವುದು ದೋಷಾವಹವಲ್ಲದಿರುವುದು ಮಾತ್ರವಲ್ಲದೆ ಅವನ ಸರ್ವೇಶ್ವರತ್ವವನ್ನು ಸ್ಥಾಪಿಸತಕ್ಕದ್ದಾಗಿದೆ.

acharya.org

ಸರ್ವರಕ್ಷಕ

ಪರಮಾತ್ಮನಲ್ಲಿ ಪರತ್ವೋಪಯುಕ್ತವಾದ ಜ್ಞಾನಶಕ್ತ್ಯಾದಿಗಳು ಮಾತ್ರವಲ್ಲದೆ ಸೌಲಭ್ಯೋಪಯುಕ್ತವಾದ ಕಾರುಣ್ಯಾದಿಗಳೂ ಇವೆ. ಸರ್ವೇಶ್ವರನಾಗಿರುವ ಇವನು ಸರ್ವರಕ್ಷಕನೂ ಆಗಿದ್ದಾನೆ. ವಿಹಿತವಾದುದನ್ನು ಆಚರಿಸದೆ ನಿಂದಿತವಾದುದನ್ನು ನಡೆಸಿ ಈಶ್ವರನ ನಿಗ್ರಹಕ್ಕೆ ನಾವು ಒಳಗಾಗಿದ್ದೇವೆ. ಅವನ ಶಾಸನವನ್ನು ಉಲ್ಲಂಘಿಸಿದ ನಮ್ಮನ್ನು ಈಶ್ವರನುದಂಡಿಸುವುದೂ ನಮ್ಮನ್ನು ರಕ್ಷಿಸುವುದಕ್ಕಾಗಿಯೇ ಆಗಿದೆ. ಪಾಪದಿಂದ ನಮ್ಮನ್ನು ಬಿಡುಗಡೆ ಮಾಡುವುದಕ್ಕಾಗಿಯೂ ಅವನು ಶಿಕ್ಷೆಯೊದಗಿಸುವನು. ದೇಶಿಕರವರು ಈ ಅಂಶವನ್ನು 'ಜನಿತಸುಗತಿಂ ದಂಡನಗತಿಂ' ಎಂದು ಹೇಳುತ್ತಾರೆ. ಈ ರೀತಿಯಲ್ಲಿ ಈಶ್ವರನು ಕೊಡುವ ಶಿಕ್ಷೆಯೂ ರಕ್ಷಣೆಯ ಪ್ರಕಾರವೇ ಆಗುತ್ತದೆ. ದಯೆ ನಿತ್ಯವೂ ನಿರವಧಿಕವೂ ಆದುದು. ಜ್ಞಾನಶಕ್ತಿಗಳು ಶಿಕ್ಷೆ ರಕ್ಷೆಗಳೆರಡಕ್ಕೂ ಕಾರಣವಾದರೆ ಆತನ ಅನುಕಂಪೆ ರಕ್ಷಣೆಯನ್ನೇ ಒದಗಿಸುವುದಾಗಿದೆ. ಚೇತನರ ಮೇಲೆ ಭಗವಂತನಿಗಿರುವ ದಯೆ ಅಪಾರವಾದುದು ಮತ್ತು ಸಹಜವಾದುದು. ಶರೀರಾದಿಗಳನ್ನು ಕೊಟ್ಟು ಜ್ಞಾನಶಕ್ತಿಕ್ರಿಯಾಶಕ್ತಿಗಳನ್ನೂ ವಿವೇಕವನ್ನೂ ಕರುಣಿಸಿ ಚೇತನರು ತಮ್ಮ ಉದ್ಧಾರದ ಮಾರ್ಗವನ್ನು ಕಾಣುವಂತೆ ಈಶ್ವರನು ಅನುಗ್ರಹ ಮಾಡುತ್ತಾನೆ. ತಿಳಿದೋ ತಿಳಿಯದೆಯೋ ನಾವು ಮಾಡಿದ ಒಳ್ಳೆಯ ಕೆಲಸಕ್ಕೆ ಪ್ರತಿಯಾಗಿ ನಮ್ಮ ಮೇಲೆ ಅವನು ತನ್ನ ಕರುಣೆಯನ್ನು ವರ್ಷಿಸುತ್ತಾನೆ. ನಮ್ಮ ಅನಂತಾಪರಾಧಗಳನ್ನು ಕ್ಷಮಿಸಿ ಸಂಸಾರಚಕ್ರದಿಂದ ನಮ್ಮನ್ನು ಮುಕ್ತಗೊಳಿಸುತ್ತಾನೆ. ಹೀಗೆ ನಮ್ಮ ಮುಕ್ತಿಗೆ ಭಗವದ್ದಯೆಯೇ ಮುಖ್ಯವಾದ ಕಾರಣ. ಸಂಸಾರದಲ್ಲಿ ತೊಳಲುತ್ತಿರುವ ನಮ್ಮನ್ನು ಉದ್ಧರಿಸಲು ಅವನು ಅನೇಕ ಪ್ರಕಾರಗಳಲ್ಲಿ ಪ್ರಯತ್ನಿಸುತ್ತಾನೆ. ಸೃಷ್ಟಿ ಪ್ರಳಯಗಳೂ ಭಗವಂತನ ದಯೆಯ ಕಾರ್ಯವೇ ಆಗಿವೆ. ಪಾಪಮಾರ್ಗದಲ್ಲಿ ಹೋಗುತ್ತಿರುವವರನ್ನು ದಯೆಯಿಂದ ಅಡ್ಡಿಪಡಿಸುತ್ತಾನೆ ಅವನು. ಪ್ರಳಯದಲ್ಲಿ ಅಚಿತ್ಸಮರಾಗಿದ್ದು ಯಾವ ಸಾಧನೆಯನ್ನೂ ಮಾಡಲು ಸಾಮರ್ಥ್ಯವಿಲ್ಲದಿರುವ ಚೇತನರ ಮೇಲಿನ ಕರುಣೆಯಿಂದಲೇ ಅವನು ಶರೀರ, ಇಂದ್ರಿಯ ಮುಂತಾದವನ್ನು ಕರುಣಿಸಿ ಸೃಜಿಸುತ್ತಾನೆ. ಮುಂದೆಯಾದರೂ ಅವರು ತಮ್ಮ ಉದ್ಧಾರವನ್ನು ಸಾಧಿಸಿಕೊಳ್ಳಲವಕಾಶವಾಗಲೆಂದು ಭಗವಂತನು ಒಂದು ಕಡೆ ಕರ್ಮಾಧ್ಯಕ್ಷನಾಗಿದ್ದಾನೆ. ನಿಷ್ಪಕ್ಷಪಾತಿಯಾದ ಅವನು ಚೇತನರು ಮಾಡಿದ ಪುಣ್ಯಪಾಪಕರ್ಮಗಳಿಗನುಸಾರವಾಗಿ ಫಲಪ್ರದಾನ ಮಾಡುವವನಾಗಿದ್ದಾನೆ. ಇನ್ನೊಂದು ಕಡೆ ಅವನು ಕರುಣಾಸಮುದ್ರನೂ ಆಗಿದ್ದಾನೆ. ಸಂಸಾರಮಗ್ನರಾದ ಚೇತನರನ್ನು ಸಂರಕ್ಷಿಸಲು ಈ ಲೋಕದಲ್ಲಿ ತಾನೇ ವಿವಿಧವಾಗಿ ಅವತರಿಸುತ್ತಾನೆ. ಹೀಗೆ ತನ್ನ ಕರುಣೆಯ ಬಲೆಯನ್ನು ಬೀಸಿ ಚೇತನರನ್ನು ಆಕರ್ಷಿಸುವನವನು.

acharya.org

ಪಂಚವ್ಯೂಹಗಳು

ಮಾನವರನ್ನುದ್ಧರಿಸುವುದಕ್ಕಾಗಿಯೇ ಸರ್ವಶಕ್ತನಾದ ಪರಮಾತ್ಮನು ತನ್ನ ಕರುಣೆಯ ಕಾರಣ ಐದು ರೂಪಗಳಲ್ಲಿ ಅಭಿವ್ಯಕ್ತನಾಗಿದ್ದಾನೆ. ಇವು, ಪರ, ವ್ಯೂಹ, ವಿಭವ, ಅಂತರ್ಯಾಮಿ ಮತ್ತು ಅರ್ಚಾ ಎಂಬುವಾಗಿವೆ. ಪರರೂಪವೆಂಬುದು ಪರಮ ಪದದಲ್ಲಿ ಸಿದ್ಧವಾಗಿರುವ ನಿತ್ಯರೂಪ. ಈ ರೂಪದಲ್ಲಿ ಭಗವಂತನನ್ನು ಧ್ಯಾನಿಸುವಾಗ ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸುಗಳೆಂಬ ಆರು ಗುಣಗಳನ್ನು ಅನುಸಂಧಾನ ಮಾಡಬೇಕು. ವ್ಯೂಹಗಳು ಮೂರೆಂದೂ ಕೆಲವು ವೇಳೆ ನಾಲ್ಕೆಂದೂ ಹೇಳಲಾಗಿದೆ. ಪರರೂಪದಲ್ಲಿ ಹೇಗೋ ಹಾಗೆ ಪರವಾಸುದೇವನ ರೂಪದಲ್ಲಿಯೂ ಆರು ಗುಣಗಳನ್ನೂ ಅನುಸಂಧಾನ ಮಾಡಬೇಕೆಂದು ವಿಧಿಸಿದೆ. ನಾಲ್ಕು ವ್ಯೂಹಗಳ ಬದಲು ಮೂರನ್ನು ಆ ಕಾರಣ ಹೇಳುವುದುಂಟು.

ಪರವಾಸುದೇವ—ಷಡ್ಗುಣಗಳೂ ಪ್ರಕಾಶಗೊಳ್ಳುವ ಈ ವ್ಯೂಹವನ್ನು ಮುಕ್ತರು ಅನುಭವಿಸುವರು.

ಸಂಕರ್ಷಣ—ಜ್ಞಾನ ಮತ್ತು ಬಲಗಳು ಪ್ರಧಾನವಾದ ಗುಣಗಳು. ಈ ವ್ಯೂಹ ದಿಂದ ಶಾಸ್ತ್ರೋಪದೇಶವನ್ನೂ ಪ್ರಳಯಕಾರ್ಯವನ್ನೂ ಮಾಡುತ್ತಾನೆ.

ಪ್ರದ್ಯುಮ್ನ—ಐಶ್ವರ್ಯ ಮತ್ತು ವೀರ್ಯಗಳು ಪ್ರಧಾನವಾದವು. ಸೃಷ್ಟಿಕಾರ್ಯ ವನ್ನೂ ಧರ್ಮಸಂಸ್ಥಾಪನೆಯನ್ನೂ ಈ ರೂಪದಲ್ಲಿ ಮಾಡುತ್ತಾನೆ.

ಅನಿರುದ್ಧ—ಶಕ್ತಿ ಮತ್ತು ತೇಜಸ್ಸು ಪ್ರಧಾನವಾಗಿರುವ ಈ ವ್ಯೂಹದಿಂದ ಲೋಕ ಸಂರಕ್ಷಣೆಯನ್ನೂ ತತ್ತ್ವೋಪದೇಶವನ್ನೂ ಮಾಡುತ್ತಾನೆ.

ಈ ರೂಪಗಳಲ್ಲಿ ಭಗವಂತನು ಅಭಿವ್ಯಕ್ತನಾಗುವುದು ಅವನ ಅಪಾರವಾದ ಕರು ಣೆಯ ಕಾರಣದಿಂದಲೇ. ಬೇರೆ ಬೇರೆ ಬಗೆಯ ಜನರು,ತನ್ನನ್ನು ಧ್ಯಾನಿಸಲನುಕೂಲ ವಾಗುವಂತೆ ಮಾಡುವುದೇ ಈ ವ್ಯೂಹಗಳ ಪ್ರಯೋಜನ. ಪದ್ಮನಾಭ ಮೊದಲಾದ ಮೂವತ್ತು ರೂಪಗಳು ವಿಭವಗಳೆಂದು ಪ್ರಸಿದ್ಧವಾಗಿವೆ. ಇವುಗಳಲ್ಲಿ ಮತ್ಸ್ಯಕೂರ್ಮಾದಿ ಹತ್ತು ಅವತಾರಗಳು ಒಂದು ಪ್ರಯೋಜನ ವಿಶೇಷದಿಂದ ಉಂಟಾದವು. ಈ ವಿಭವ ಗಳಲ್ಲಿ ಆಯಾ ಕಾರ್ಯವಿಶೇಷಗಳಿಗನುಗುಣವಾಗಿ ಬೇಕಾದ ಗುಣಗಳನ್ನು ಬೇಕಾದಾಗ ಭಗವಂತನು ಮರೆಸುವುದೂ ಪ್ರಕಾಶಿಸುವುದೂ ಉಂಟು. 'ಕೃಷ್ಣರೂಪಾಣ್ಯಸಂಖ್ಯಾನಿ' ಎಂದು ಹೇಳಿದಂತೆ ಈ ರೂಪಗಳ ಅವಾಂತರಭೇದಗಳು ಅನಂತಗಳಾಗಿವೆ. ಭಗವಂತನು ತನ್ನ ದಯೆಯ ಕಾರಣದಿಂದಲೇ ಈ ಲೋಕದಲ್ಲಿ ಅವತರಿಸುವನು. ಗೀತೆಯಲ್ಲಿ ಶ್ರೀಕೃಷ್ಣನು ತನ್ನ ಅವತಾರದ ರಹಸ್ಯವನ್ನು ಉಪದೇಶಿಸಿದ್ದಾನೆ. ಅವತಾರಗಳು ಸತ್ಯ ವಾದವು. ಅವತಾರಗಳಲ್ಲಿ ಭಗವಂತನ ಸ್ವಭಾವಗಳು ಮರೆಯಾಗುವುದಿಲ್ಲ. ಅವತಾರ ದಲ್ಲಿಯೂ ಭಗವಂತನ ಶರೀರ ಅಪ್ರಾಕೃತವಾದುದು. ಅದು ಶುದ್ಧಸತ್ವಮಯವಾದುದು.

acharya.org

ಅವತಾರಕ್ಕೆ ಕಾರಣವಾದರೂ ಭಗವಂತನ ಸತ್ಯಸಂಕಲ್ಪವೇ. ಧರ್ಮಕ್ಕೆ ಗ್ಲಾನಿ ಯುಂಟಾದ ಕಾಲವೇ ಅವತಾರಕಾಲ. ಅವತಾರಗಳ ಉದ್ದೇಶವಾದರೂ ಸಜ್ಜನರ ಸಂರಕ್ಷಣೆಯೇ ಆಗಿದೆ. ಹೀಗೆ ಭಗವಂತನು ಲೋಕದಲ್ಲಿ ಮನುಜನಯನ ಗೋಚರನಾಗಿ ತನ್ನ ದಿವ್ಯ ಚೇಷ್ಟಿತಗಳಿಂದಲೂ ದಿವ್ಯೋಪದೇಶಗಳಿಂದಲೂ ಸಂಸಾರ ಮಗ್ನರಾದ ಚೇತನರನ್ನು ಉದ್ಧಾರಮಾಡಲು ಯತ್ನಿಸುತ್ತಾನೆ. ಭಗವಂತನ ಅವತಾರಗಳು ಅನಂತ ವಾದವು.

ಭಗವಂತನು ಎಲ್ಲರ ಹೃದಯಾಂತರಾಳದಲ್ಲಿ ನಿಯಾಮಕನಾಗಿ ಅಂತರ್ಯಾಮಿ ಯಾಗಿ ನೆಲಸಿದ್ದಾನೆ. ಈ ರೂಪ ಅವನ ಅಂತರ್ಯಾಮಿ ಸ್ವರೂಪವಾಗಿದೆ. ರಕ್ಷಕನಾದ ಸರ್ವೇಶ್ವರ ಎಲ್ಲಿಂದಲೋ ದೂರದಿಂದ ಬಂದು ನಮ್ಮನ್ನು ರಕ್ಷಿಸಬೇಕಾಗಿಲ್ಲ. ಅವನು ನಮ್ಮೆಲ್ಲರಲ್ಲಿಯೇ ಅವಸ್ಥಿತನಾಗಿದ್ದಾನೆ. 'ಅಂತಸ್ಸಂತೋ ಅವದ್ಯಾನಿ ಪುನಾನಾಃ' ಎಂದು ಈ ಅಂಶವನ್ನು ಹೇಳಿದೆ. ಯೋಗಿಗಳು ಈ ಅಂತರ್ಯಾಮಿಯನ್ನು ಧ್ಯಾನಿಸುತ್ತಾರೆ.

ಪರ, ವ್ಯೂಹ, ವಿಭವ ಹಾಗೂ ಅಂತರ್ಯಾಮಿ ಸ್ವರೂಪಗಳು ಸರ್ವರಿಗೂ ಸರ್ವ ಕಾಲದಲ್ಲಿಯೂ ಧ್ಯಾನಿಸಲು ಶಕ್ಯವಾಗುವುದಿಲ್ಲ. ಅಶಕ್ತಾಧಿಕಾರಿಗಳು ಈ ರೂಪ ದಲ್ಲಿ ಭಗವಂತನನ್ನು ಉಪಾಸಿಸುವುದು ಸಾಧ್ಯವಿಲ್ಲ. ವಿಭವಾದ್ಯವತಾರಗಳು ಕೆಲವು ಕಾಲ ಮಾತ್ರ ಇಲ್ಲಿ ಆದ ಕಾರಣ ಆ ಕಾಲದವರನ್ನು ಬಿಟ್ಟು ಇತರರಿಗೆ ಲಭ್ಯವಾಗುವು ದಿಲ್ಲ. ಆದರೆ ಎಲ್ಲ ಬಗೆಯ ಅಧಿಕಾರಿಗಳಿಗೂ ಎಲ್ಲ ಕಾಲದಲ್ಲಿಯೂ ಲಭ್ಯವಾಗುವ ರೀತಿಯಲ್ಲಿ ಭಗವಂತನು ತನ್ನ ನಿರುಪಾಧಿಕವಾದ ಕರುಣೆಯ ಕಾರಣ ಅರ್ಚಾರೂಪ ವನ್ನು ಸ್ವೀಕರಿಸಿದ್ದಾನೆ. ಈ ಅವತಾರಗಳು ಶಾಶ್ವತವಾಗಿರುವುವಾಗಿವೆ; ಭಗವಂತನ ದಯೆಯ ಮೂರ್ತಿಸ್ವರೂಪವಾಗಿವೆ. ಅರ್ಚಾರೂಪದಲ್ಲಿ ಕೆಲವು ಅಸಾಧಾರಣವಾದ ಸೌಲಭ್ಯಗಳಿವೆ.

೧. ಅರ್ಚಾರೂಪಿಯು ತನ್ನ ಅಸಾಧಾರಣವಾದ ಸೌಂದರ್ಯ ಮತ್ತು ತೇಜಸ್ಸು ಗಳ ಮೂಲಕ ಸಂಸಾರದಲ್ಲಿ ಆಸಕ್ತರಾದ ಚೇತನರನ್ನೂ ತನ್ನೆಡೆಗೆ ಆಕರ್ಷಣ ಮಾಡು ತ್ತಾನೆ.

೨. ಭಕ್ತನು ತನ್ನ ಕಣ್ಣುಗಳಿಂದ ಭಗವಂತನ ದಿವ್ಯಮಂಗಳ ವಿಗ್ರಹದ ಸೌಂದರ್ಯ ವನ್ನು ಮನದಣಿಯ ಹೀರಿ ಧನ್ಯನಾಗುತ್ತಾನೆ ಹಾಗೂ ಸುಲಭವಾಗಿ ಮನಸ್ಸನು ಅವನಲ್ಲಿ ನೆಲೆಗೊಳಿಸುತ್ತಾನೆ.

೩. ಭಗವದ್ದಯೆಯೇ ಘನೀಭೂತವಾದುದು ಅರ್ಚೆ. ಯಾವ ಬಗೆಯ ವ್ಯತ್ಯಾಸಗಳೂ ಇಲ್ಲದೆ ಚೇತನರೆಲ್ಲರಿಗೂ ಎಲ್ಲ ಕಾಲಕ್ಕೂ ಲಭ್ಯವಾಗುವಂಥದು ಇದು.

೪. ಅರ್ಚೆಯ ಆರಾಧನೆ ಹೃನ್ಮನಗಳಿಗೆ ಅಪಾರವಾದ ಸಂತೋಷವನ್ನುಂಟು ಮಾಡುತ್ತದೆ. ಭಕ್ತರಿಗೆ ತುಷ್ಟಿ ಸಮಾಧಾನಗಳನ್ನು ದೊರಕಿಸಿಕೊಡುತ್ತದೆ.

acharya.org

ಭಕ್ತನು ಈ ಪ್ರಪಂಚದ ದುಃಖಗಳನ್ನು ಮರೆತು ಇಲ್ಲಿಯೇ ಹೀಗೆಯೇ ಭಗವಂತನ ಸಂಶ್ಲೇಷದ ಸುಖವನ್ನನುಭವಿಸುತ್ತಾನೆ ಮತ್ತು ತನ್ನನ್ನು ಧನ್ಯನೆಂದು ಭಾವಿಸುತ್ತಾನೆ. ಇಂಥ ಭಗವತ್ಪರವಾದ ಜೀವನವೇ ಎಲ್ಲ ಸಾಧನಗಳ ಧ್ಯೇಯವಾಗಿದೆ. ಇದೇ ಮೋಕ್ಷಕ್ಕೆ ಹೆದ್ದಾರಿಯಾಗುತ್ತದೆ. ಅರ್ಚಾರೂಪಿಯ ದಿವ್ಯಾನುಭವದ ಆನಂದವನ್ನನುಭವಿಸಿದ ದೇಶಿಕರವರು,

> ನಿರಂತರಂ ನಿರ್ವಿಶತಸ್ತ್ವದೀಯಂ
> ಅಸ್ಪೃಷ್ಟ-ಚಿಂತಾಪದಮಾಭಿರೂಪ್ಯಂ ।
> ಸತ್ಯಂ ಶಪೇ ವಾರಣಶೈಲನಾಥ
> ವೈಕುಂಠವಾಸೇऽಪಿ ನಮೇऽಭಿಲಾಷಃ ॥ ಎಂದು ಹೇಳಿದ್ದಾರೆ.

ಭಗವಂತನ ಈ ಐದು ವ್ಯೂಹಗಳು ಸಮವಾಗಿಯೇ ಮಂಗಳಕರವಾದವು. ಶುಭಾಶ್ರಯವಾದವು. ಜ್ಞಾನಾದಿಗುಣಗಳಿಂದ ಕೂಡಿದವು. ಅನಂತಕಲ್ಯಾಣಗುಣಗಳಿಂದ ಕೂಡಿದ್ದು ಭಕ್ತರಿಗೆ ಧ್ಯಾನಗೋಚರವಾಗತಕ್ಕವು.

ಷಡ್ಗುಣಗಳು

ಭಗವಂತನು ಅನಂತ ಕಲ್ಯಾಣಗುಣಗಳಿಗೆ ಆಕರನಾಗಿದ್ದಾನೆ. ಇವುಗಳಲ್ಲಿ ಆರು ಗುಣಗಳು ಪ್ರಧಾನವಾಗಿದ್ದು ಅವನ ಪರತ್ವವನ್ನು ಪ್ರಕಾಶಪಡಿಸುತ್ತವೆ. ಇವು ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ ಮತ್ತು ತೇಜಸ್ಸು ಎಂಬುವಾಗಿವೆ. ಇವಲ್ಲದೆ ಅವನ ಸೌಲಭ್ಯವನ್ನು ತೋರಿಸುವ ಸೌಶೀಲ್ಯ, ವಾತ್ಸಲ್ಯ ಮುಂತಾದುವೂ ಇವೆ. ಈ ಗುಣಗಳೆಲ್ಲಾ ಚೇತನನ ಉದ್ಧಾರವನ್ನು ಸಾಧಿಸುವುದರಲ್ಲಿ ಸಹಾಯಕವಾಗುತ್ತವೆ. ಈ ಗುಣಗಳನ್ನು ಸ್ವರೂಪಗತಗುಣಗಳು ಮತ್ತು ವಿಗ್ರಹಗತಗುಣಗಳು ಎಂದು ಎರಡು ಬಗೆಯಾಗಿ ವರ್ಣಿಸುತ್ತಾರೆ. ಭಕ್ತರ ಶತ್ರುಗಳನ್ನು ಅಡಗಿಸುವ ಗುಣಗಳು ಮತ್ತು ಭಕ್ತರ ಹೃದಯವನ್ನು ಆಕರ್ಷಿಸುವ ಗುಣಗಳು ಎಂದು—ಸ್ವರೂಪಗತಗುಣಗಳು ಎರಡು ಬಗೆ. ಶೌರ್ಯ, ಧೈರ್ಯ, ಪರಾಕ್ರಮ ಮೊದಲಾದುವು ಆಶ್ರಿತರ ವಿರೋಧಿಗಳನ್ನು ನಿಗ್ರಹಿಸಲು ಸಾಧಕವಾಗಿವೆ. ವಾತ್ಸಲ್ಯ, ಸೌಶೀಲ್ಯ, ಸೌಲಭ್ಯ ಮೊದಲಾದುವು ಭಕ್ತರನ್ನು ವಶಪಡಿಸಿಕೊಳ್ಳುವುದಾಗಿವೆ. ಸೌಂದರ್ಯ, ಯೌವ್ವನ, ಲಾವಣ್ಯಮುಂತಾದುವು ವಿಗ್ರಹಗತವಾದ ಗುಣಗಳು. ಜ್ಞಾನವೆಂಬುದು ಪ್ರಧಾನವಾದ ಗುಣ. ಇದು ಸ್ವಯಂಪ್ರಕಾಶವಾದುದು. ಎಂದೂ ಯಾವಬಗೆಯ ಸಂಕೋಚವೂ ಇದಕ್ಕೆ ಸಂಭವಿಸುವುದಿಲ್ಲ. 'ನಿತ್ಯ' 'ಸರ್ವಾವಗಾಹನ' 'ಸ್ವಾತ್ಮ ಸಂಭೋಧಿ ಎಂದು ಇದನ್ನು ಹೇಳಿದೆ. ಇದು ನಿತ್ಯವಾದುದು ; ಆಗಂತುಕವಾದುದಲ್ಲ. ಬಲವೆಂಬುದು ಭಗವಂತನ ಧಾರಣಸಾಮರ್ಥ್ಯ. 'ಶ್ರಮಪ್ರಸಂಗರಹಿತಂ ಸರ್ವಧಾರಣಸಾಮರ್ಥ್ಯಂ' ಎಂದು ದೇಶಿಕರು ಇದನ್ನು ವರ್ಣಿಸಿದ್ದಾರೆ. ಭಗವಂತನ ಅವ್ಯಾಹತೇಚ್ಛೆ ಹಾಗೂ ಸರ್ವನಿಯಂತೃತ್ವವು

acharya.org

ಐಶ್ವರ್ಯವೆನ್ನಿಸುವುದು. ಅವನು ಸರ್ವೇಶ್ವರೇಶ್ವರ. ಸರ್ವಪದಾರ್ಥಗಳನ್ನೂ ನಿಯಮಿಸುವ ಸಾಮರ್ಥ್ಯ ಅವನದು. ಇದನ್ನು ಐಶ್ವರ್ಯವೆಂದು ಹೇಳಿದೆ. ಸರ್ವಪದಾರ್ಥಗಳಿಗೂ ಉಪಾದಾನಕಾರಣವಾಗಿದ್ದಾಗ್ಗೂ, ಸರ್ವಕ್ಕೂ ಆಧಾರವಾಗಿದ್ದಾಗ್ಗೂ, ಸರ್ವವನ್ನೂ ನಿಯಮನ ಮಾಡುತ್ತಿದ್ದಾಗ್ಗೂ ತಾನು ಮಾತ್ರ ಯಾವ ವಿಕಾರಕ್ಕೂ ಒಳಗಾಗದಿರುವುದು ವೀರ್ಯವೆನ್ನಿಸುವುದು.

'ವಿಕಾರ ವಿರಹೋ ವೀರ್ಯಂ' ಎಂದು ಇದರ ಲಕ್ಷಣವನ್ನು ಹೇಳಿದೆ. ಭಗವಂತನು ನಿತ್ಯಶುದ್ಧನಾಗಿ ಯಾವ ಬಗೆಯ ದೋಷದ ಸಂಪರ್ಕವಾಗಲೀ ವಿಕಾರದ ಸೋಂಕಾಗಲೀ ಇಲ್ಲದವನು. 'ಅವಿಕಾರಾಯ ಶುದ್ಧಾಯ ನಿತ್ಯಾಯ ಪರಮಾತ್ಮನೇ' ಎಂದು ಇವನನ್ನು ಸ್ತುತಿಸಿರುವುದು ಯಥಾರ್ಥವಾಗಿದೆ. ಶಕ್ತಿ ಎಂಬುದು ಭಗವಂತನ ಜಗದುಪಾದಾನತ್ವವನ್ನು ಸೂಚಿಸುತ್ತದೆ. ಭಗವಂತನೇ ಜಗತ್ತಿಗೆ ಅಭಿನ್ನನಿಮಿತ್ತೋಪಾದಾನ ಕಾರಣನಾಗಿದ್ದಾನೆ. ಯಾವುದು ಇತರರಿಗೆ ಅಸಾಧ್ಯವೋ ಅದು ಇವನಿಗೆ ಸುಲಭವಾದುದು. ತೇಜಸ್ಸೆಂಬ ಗುಣ ಇವನ ಪರಾಭಿಭವನಸಾಮರ್ಥ್ಯವನ್ನು ತೋರಿಸುತ್ತದೆ. ಇವನ ತೇಜಸ್ಸಿನಿಂದಲೇ ಇತರ ತೇಜೋರಾಶಿಗಳು ಪ್ರಕಾಶಮಾನವಾಗಿವೆ. ಇವನು ಮತ್ತಾವುದರ ಸಹಾಯವನ್ನೂ ಅಪೇಕ್ಷಿಸುವವನಲ್ಲ. ಸೃಷ್ಟಿ, ಸ್ಥಿತಿ ಪ್ರಲಯಾದಿಗಳನ್ನು ಮಾಡುವಲ್ಲಿ ಅನ್ಯಾಪೇಕ್ಷೆ ಇವನಿಗಿಲ್ಲ. ಇವೆಲ್ಲವನ್ನೂ ಅವನು ಸ್ವತಃ ಮಾಡಬಲ್ಲವನಾಗಿದ್ದಾನೆ. ಈ ಷಡ್ಗುಣಗಳಲ್ಲಿ ಜ್ಞಾನ ಮತ್ತು ಶಕ್ತಿಗಳು ಮುಖ್ಯವಾದವು. ಇತರ ಗುಣಗಳೆಲ್ಲಾ ಈ ಗುಣಗಳ ಅವಾಂತರ ಭೇದಗಳೇ ಆಗಿವೆ.

ಭಗವದ್ರಾಮಾನುಜರು ತಮ್ಮ ಶರಣಾಗತಿ ಗದ್ಯದಲ್ಲಿ ಭಗವಂತನ ಗುಣಗಳನ್ನು ವರ್ಣಿಸುವ ಸಮಯದಲ್ಲಿ 'ಸ್ವಾಭಾವಿಕಾನವಧಿಕಾತಿಶಯ-ಜ್ಞಾನ-ಬಲೈಶ್ವರ್ಯ ವೀರ್ಯ ಶಕ್ತಿ ತೇಜಃ ಸೌಶೀಲ್ಯ ವಾತ್ಸಲ್ಯ ಮಾರ್ದವಾರ್ಜವ ಸೌಹಾರ್ದ ಸಾಮ್ಯ ಕಾರುಣ್ಯ-ಮಾಧುರ್ಯ-ಗಾಂಭಿರ್ಯೌದಾರ್ಯ- ಚಾತುರ್ಯ-ಸ್ಥೈರ್ಯ-ಧೈರ್ಯ ಶೌರ್ಯ-ಪರಾಕ್ರಮ-ಸತ್ಯಕಾಮ-ಸತ್ಯ ಸಂಕಲ್ಪ-ಕೃತಿತ್ವ-ಕೃತಜ್ಞತಾದ್ಯಸಂಖ್ಯೇಯ ಕಲ್ಯಾಣಗುಣಗಣೌಘಮಹಾರ್ಣವ' ಎಂದು ವರ್ಣಿಸಿದ್ದಾರೆ. ಇಲ್ಲಿ ಪರತ್ವೋಪಯುಕ್ತವಾದ ಷಡ್ಗುಣಗಳನ್ನು ಮೊದಲು ವರ್ಣಿಸಿ ಅನಂತರ ಸೌಲಭ್ಯೋಪಯುಕ್ತವಾದ ಗುಣಗಳನ್ನು ನಿರೂಪಿಸಲಾಗಿದೆ.

ಶ್ರೀರಾಮ ಗುಹನೊಡನೆ ಸಂಶ್ಲೇಷಿಸಿದಂತೆ ಮಹಾತ್ಮರು ಮಂದರೊಡನೆಯೂ ಸಮರಸವಾಗಿ ಬೆರೆಯುವ ಗುಣ ಸೌಶೀಲ್ಯ. ಆಶ್ರಿತರ ದೋಷಗಳನ್ನು ಕಾಣದಿರುವುದು ವಾತ್ಸಲ್ಯ. ಆಶ್ರಿತರ ವಿರಹವನ್ನು ಸಹಿಸಲಾರದ ಮೃದುತ್ವ ಮಾರ್ದವ. ಅಪರಾಧ ಮಾಡಿದವರನ್ನು ಶಿಕ್ಷಿಸುವ ಸಂದರ್ಭದಲ್ಲಿಯೂ ಸಾಮಪ್ರಧಾನವಾಗಿರುವುದು ಮಾರ್ದವ. ತ್ರಿಕರಣಗಳಲ್ಲಿಯೂ ಏಕರೂಪತೆ ಆರ್ಜವ. ಎಲ್ಲ ಭೂತಗಳಿಗೂ ಹಿತವನ್ನು ಬಯಸುವ

acharya.org

ಗುಣ ಸೌಹಾರ್ದ. ಭಕ್ತರಲ್ಲಿ ಮೇಲುಕೀಳೆಂಬ ಭಾವನೆ ಮಾಡದಿರುವುದು ಸಾಮ್ಯ. ಯಾವ ಸ್ವಪ್ರಯೋಜನದ ಉದ್ದೇಶವಿಲ್ಲದೆ ಚೇತನರ ದುಃಖವನ್ನು ಹೋಗಲಾಡಿಸುವ ಇಚ್ಛೆಯೇ ಕಾರುಣ್ಯ. ಶಿಶುಪಾಲನಂತಹ ಶತ್ರುವಿನ ಹೃದಯವನ್ನೂ ಅಪಹರಿಸಬಲ್ಲ ಗುಣ ಮಾಧುರ್ಯ. ಭಗವಂತನ ದಿವ್ಯಸೌಂದರ್ಯ ಭಕ್ತರ ಮನಸ್ಸನ್ನಪಹರಿಸುವಂಥದು. ಭಗವಂತನ ಅನುಗ್ರಹವನ್ನೂ ಔದಾರ್ಯವನ್ನೂ ಅಳೆಯುವುದಕ್ಕಾಗದಿರುವುದು ಗಾಂಭೀರ್ಯ. ಯಾವ ಪ್ರತಿಫಲದ ಅಪೇಕ್ಷೆಯೂ ಇಲ್ಲದೆ ಅತ್ಯಧಿಕವಾದ ಫಲಗಳನ್ನು ಕರುಣಿಸುವ ರಸಿಕತನವೇ ಔದಾರ್ಯ. ಹೆಚ್ಚಾಗಿ ದಾನ ಮಾಡಿಯೂ ತೃಪ್ತಿಪಡದಿರುವ ಗುಣ ಔದಾರ್ಯ. ಯಾವ ದೋಷವನ್ನು ತೋರಿದರೂ ಹಿಂಜರಿಯದೆ ಶರಣಾಗತರನ್ನು ಸಂಗ್ರಹಿಸುವ ಗುಣ ಚಾತುರ್ಯ. ಪಾಪ ಮಾಡಿದವರನ್ನು ರಕ್ಷಿಸುವುದರಲ್ಲಿ ಅಪ್ರಕಂಪನೀಯನಾಗಿರುವುದು ಸ್ಥೈರ್ಯ. ಧೈರ್ಯಶೌರ್ಯಪರಾಕ್ರಮಗಳೆಂಬ ಗುಣಗಳು ಶರಣಾಗತರ ವಿರೋಧಿಗಳನ್ನು ಎದುರಿಸಿ ನಾಶಪಡಿಸುವುದರಲ್ಲಿ ಸಹಾಯಕವಾಗಿವೆ. ನಮ್ಮ ಇಷ್ಟಾರ್ಥಗಳನ್ನೆಲ್ಲಾ ಅವನು ಕರುಣಿಸಬಲ್ಲನೆಂಬುದನ್ನು ಸತ್ಯಸಂಕಲ್ಪ ಮತ್ತು ಸತ್ಯಕಾಮ ಎಂಬ ಗುಣಗಳು ತೋರುತ್ತವೆ. ನಾವು ಮಾಡಿದ ಅತಿ ಸ್ವಲ್ಪವಾದ ಸಾಧು ಕರ್ಮವನ್ನೂ ನೆನೆವನವನು. ಆಶ್ರಿತರು ಮಾಡಿದ ದೋಷವನ್ನೂ ತಾನು ಮಾಡಿರುವ ಶ್ರೇಯಸ್ಸನ್ನೂ ಅವನು ನೆನೆಯುವುದಿಲ್ಲ. ಆದುದರಿಂದಲೇ ಅವನು ಕೃತಜ್ಞ. ತನಗಾಗಿ ಏನನ್ನೂ ಮಾಡಬೇಕಾಗದ ಈ ಅವಾಪ್ತಸಮಸ್ತಕಾಮ ತನ್ನ ಆಶ್ರಿತರು ಮಾಡಬೇಕಾದ ಕರ್ತವ್ಯವನ್ನು ತಾನೂ ಮಾಡುವವನಾದುದರಿಂದ ಅವನಲ್ಲಿ ಕೃತಿತ್ವ ಎಂಬ ಗುಣವಿದೆ.

ಈ ಕಲ್ಯಾಣ ಗುಣಗಳು ಭಗವಂತನಲ್ಲಿ ಎಂದೂ ಇರತಕ್ಕವೇ ಆಗಿವೆ. ಷಡ್ಗುಣಗಳೂ ಹಾಗೆಯೇ. ಆದರೆ ಅವನು ತನ್ನ ಸಂಕಲ್ಪಕ್ಕನುಸಾರವಾಗಿ ಕೆಲವನ್ನು ಕೆಲವು ವೇಳೆ ಪ್ರಕಾಶಪಡಿಸಬಹುದು ಹಾಗೂ ಮರೆಸಬಹುದು.

ಸಿದ್ಧೋಪಾಯನು

ಸರ್ವಾಂತರನೂ ಸರ್ವಶಕ್ತನೂ ಆದ ಪರಮಾತ್ಮನು ನಮಗೆ ಮೋಕ್ಷೋಪಾಯನೂ ಆಗಿದ್ದಾನೆ. ಅವನ ರಕ್ಷಕತ್ವ ಸಹಜವಾದುದು. ಪ್ರಣವದಲ್ಲಿ ಮೊದಲ ವರ್ಣವಾದ 'ಅಕಾರ' ಭಗವಂತನ ಅಭಿದಾನವಾಗಿ ಅವನ ರಕ್ಷಕತ್ವವನ್ನು ಸೂಚಿಸುತ್ತದೆ. ದೇಶಿಕರವರು

> ಸಮಸ್ತ ಪುರುಷಾರ್ಥಾನಾಂ ಸಾಧಕಸ್ಯ ದಯಾನಿಧೇಃ ।
> ಶ್ರೀಮತಃ ಪೂರ್ವಸಿದ್ಧತ್ವಾತ್ ಸಿದ್ಧೋಪಾಯಮಿಮಂ ವಿದುಃ ॥

ಎಂದು ಹೇಳಿ ಎಲ್ಲ ಪುರುಷಾರ್ಥಗಳನ್ನೂ ಸಾಧಿಸಿಕೊಡುವ ಸಿದ್ಧೋಪಾಯನು ಭಗವಂತನೇ ಎಂದು ಹೇಳಿದ್ದಾರೆ. ನಮ್ಮ ಪ್ರಯತ್ನ ಮೊದಲಾದುವುಗಳಿಗಿಂತ

acharya.org

ಪೂರ್ವವೇ ಭಗವಂತನ ರಕ್ಷಕತ್ವ ಸ್ವತಃ ಸಿದ್ಧವಾಗಿರುವುದರಿಂದ ಅವನೇ ನಮ್ಮ ಇಷ್ಟ ಪ್ರಾಪ್ತಿಗೆ ಪ್ರಧಾನವಾದ ಉಪಾಯ. ಉಪಾಯ ಎರಡು ಬಗೆ—ಸಿದ್ಧೋಪಾಯ ಮತ್ತು ಸಾಧ್ಯೋಪಾಯ ಎಂದು. ಭಗವಂತನು ಸಿದ್ಧೋಪಾಯ. ನಾವು ಆಚರಿಸುವ ಭಕ್ತಿ ಅಥವಾ ಪ್ರಪತ್ತಿ ಸಾಧ್ಯೋಪಾಯ 'ತ್ರಾಣೇ ಸ್ವಾಮಿತವಾ ಚಿತ್ಯಂ ನ್ಯಾಸಾದ್ಯಾಃ ಸಹಕಾರಿಣ :' ಎಂದು ಇದನ್ನು ಹೇಳಿದ್ದಾರೆ.

ಭಗವಂತನು ಸರ್ವಶಕ್ತನೇ ಆಗಿದ್ದರೂ ತನ್ನ ಮನ ಬಂದಂತೆ ಯಾರನ್ನಾದರೂ ಸಲಹುವುದಾಗಲೀ ಶಿಕ್ಷಿಸುವುದಾಗಲೀ ಮಾಡುವುದಿಲ್ಲ. ಅವನು ನಿಷ್ಪಕ್ಷಪಾತನಾಗಿದ್ದಾನೆ. ಮಾನವರು ಯಾವುದಾದರೂ ಒಂದು ಉಪಾಯವನ್ನನುಷ್ಠಿಸುವಂತೆ ಮಾಡಿ ಅದನ್ನೇ ವ್ಯಾಜವನ್ನಾಗಿಟ್ಟುಕೊಂಡು ಅವನು ರಕ್ಷಿಸುತ್ತಾನೆ. ಈ ವಿಧವಾದ ಉಪಾಯಾನುಷ್ಠಾನವನ್ನು ಮೊದಲೇಕೆ ಮಾಡಿಸಲಿಲ್ಲವೆಂಬ ಶಂಕೆ ತೋರಬಹುದು. ಅದಕ್ಕೆ ಅವರವರ ಕರ್ಮವಿಪಾಕ ಅದುವರೆಗೆ ಆಗಿಸಲಿಲ್ಲವೆಂದು ಕಾರ್ಯದಿಂದ ಕಾರಣವನ್ನು ಊಹಿಸಬೇಕು. ಇಲ್ಲದಿದ್ದರೆ ಯಾವಾಗಲೋ ಒಮ್ಮೆ ಒಬ್ಬನಿಗೆ ಮೋಕ್ಷದಲ್ಲಿ ಆಶೆ ಉಂಟಾಗುವುದಕ್ಕೇನು ಕಾರಣ? ಮೊದಲೇ ಏಕೆ ಆ ಆಶೆ ಉಂಟಾಗಬಾರದಾಗಿತ್ತು? ಭಗವಂತನ ನಿರುಪಾಧಿಕವಾದ ದಯೆಯೇ ಚೇತನರು ಸಂಸಾರದಿಂದ ಮುಕ್ತರಾಗುವುದಕ್ಕೆ ಮುಖ್ಯ ಕಾರಣ. ಸಿದ್ಧೋಪಾಯನಾದ ಭಗವಂತನು ಸರ್ವರಕ್ಷನಾಗಿದ್ದರೂ ಸಾಧ್ಯೋಪಾಯದ ಅನುಷ್ಠಾನವನ್ನು ಮಾಡದೆ ಇರುವವರನ್ನು ರಕ್ಷಿಸುವುದಿಲ್ಲ. ಜೀವನ ರಕ್ಷಾಪೇಕ್ಷೆಯನ್ನು ಅವನು ನಿರೀಕ್ಷಿಸುತ್ತಿರುತ್ತಾನೆ. ಅದುದರಿಂದ ಸಾಧ್ಯೋಪಾಯ ಭಗವಂತನ ದಯೆಯ ಪ್ರಾಪ್ತಿಗೆ ಅನಿವಾರ್ಯ ಮತ್ತು ಅವಶ್ಯಕ.

ಶ್ರೀಮನ್ನಾರಾಯಣನೇ ಪರಬ್ರಹ್ಮ

ಶಾಸ್ತ್ರಗಳಲ್ಲಿ ಪರವಸ್ತುವನ್ನು ಸತ್, ಬ್ರಹ್ಮ, ಆತ್ಮನ್, ಜ್ಯೋತಿ, ಆಕಾಶ, ಭೂಮಾ ಮೊದಲಾದ ಹೆಸರುಗಳಿಂದ ಹೇಳಿದೆ. ತೈತ್ತಿರೀಯದಲ್ಲಿ ಜಗತ್ಕಾರಣವಸ್ತು ಶ್ರೀಮನ್ನಾರಾಯಣನೇ ಎಂದು ಸಮರ್ಥಿಸಿದೆ. 'ಛಾಗಪಶು' ನ್ಯಾಯದಂತೆ ಈ ಬೇರೆ ಬೇರೆ ಅಭಿಧಾನಗಳೆಲ್ಲ ಶ್ರೀಮನ್ನಾರಾಯಣನಿಗೇ ಅನ್ವಯಿಸುವುವೆಂದು ಆಚಾರ್ಯರುಗಳು ಪ್ರತಿಪಾದಿಸಿದ್ದಾರೆ. ಪರತತ್ವವಾದ ಶ್ರೀಮನ್ನಾರಾಯಣನು ಲಕ್ಷ್ಮೀವಿಶಿಷ್ಟನಾಗಿ ಉಪೇಯನೂ ಉಪಾಯನೂ ಆಗಿದ್ದಾನೆ. ಶರಣ್ಯನಾದ ಅವನಿಗೆ ಗುಣಾದಿಗಳು ಇರುವಂತೆ ಅಪೃಥಕ್ಸಿದ್ಧಳಾಗಿ ಶ್ರೀದೇವಿಯೂ ಅವನೊಡನೆ ನಿತ್ಯಯೋಗದಲ್ಲಿದ್ದಾಳೆ. ಇವುಗಳೆಲ್ಲದರಿಂದ ವಿಶಿಷ್ಟವಾದ ವಸ್ತು ಒಂದೇ. ಆದ ಕಾರಣ ಇಲ್ಲಿ ಈಶ್ವರದ್ವಿತ್ವಕ್ಕೆ ಅವಕಾಶವಿಲ್ಲ. 'ಉಭಯಾಧಿಷ್ಠಾನಂ ಚೈಕಂ ಶೇಷಿತ್ವಮ್' ಎಂದು ಈ ಅಂಶವನ್ನು ಹಿರಿಯರು ಸಮರ್ಥಿಸಿದ್ದಾರೆ. ಹೀಗೆ ಉಪಾಯ ಕೋಟಿಯಲ್ಲಿಯೂ ನಾರಾಯಣನೊಡನೆ ಲಕ್ಷ್ಮಿ

ಸೇರಿದ್ದಾಳೆ. ಭಗವಂತನಿಗೆ ಅಪೃಥಕ್ಸಿದ್ಧವಿಶೇಷಣವಾಗಿರುವ ಲಕ್ಷ್ಮೀದೇವಿ ನಾರಾಯಣ ನೊಡನೆ ಸರ್ವಾವಸ್ಥೆಗಳಲ್ಲಿಯೂ ಇರುವವಳಾಗಿದ್ದಾಳೆ. ಇಲ್ಲಿಯೂ ಉಪಾಯದ್ವಿತ್ವದ ಪ್ರಸಂಗ ಬರುವುದಿಲ್ಲ.

ಈ ಪರಮತತ್ತ್ವವನ್ನು ಪುರುಷೋತ್ತಮ, ಪರಮಪುರುಷ ಎಂದೂ ಶಾಸ್ತ್ರಗಳು ತಿಳಿಸುತ್ತವೆ. ಭಗವದ್ಗೀತೆಯಲ್ಲಿ 'ಅತೋಽಸ್ಮಿ ಲೋಕೇ ವೇದೇ ಚ ಕಥಿತಃ ಪುರುಷೋತ್ತಮಃ' ಎಂಬ ಭಗವಂತನು ತಾನೇ ತನ್ನ ಸ್ವರೂಪವನ್ನು ಹೇಳಿಕೊಂಡಿದ್ದಾನೆ. ಬದ್ಧಜೀವರು, ಮುಕ್ತಜೀವರು, ಪ್ರಕೃತಿ ಮೊದಲಾದವುಗಳಿಗಿಂತ ವಿಲಕ್ಷಣನಾಗಿ ಇವುಗಳಿಗಿಂತ ಹಿರಿಮೆಯಲ್ಲಿ ಮೀರಿರುವನಾಗಿದ್ದಾನೆ ಭಗವಂತ. ಅಖಿಲಹೇಯಪ್ರತ್ಯನೀಕನಾದ ಭಗವಂತನು ಇತರ ಎಲ್ಲ ಪದಾರ್ಥಗಳಿಗಿಂತ ವಿಲಕ್ಷಣನಾಗಿದ್ದಾನೆ. ಹಾಗೂ ಎಲ್ಲಕ್ಕೂ ನಿಯಾಮಕನಾಗಿದ್ದಾನೆ.

ಭುವನ ಸುಂದರ

ಈ ಸಿದ್ಧಾಂತದಲ್ಲಿ ಭಗವಂತನ ದಿವ್ಯಮಂಗಳ ರೂಪವನ್ನು ಪ್ರತಿಪಾದಿಸಿದೆ. ಭಗವಂತನು ಭುವನಸುಂದರನಾಗಿದ್ದಾನೆ. ಹೇಗೆ ಭಗವಂತನಿಗೆ ಮಂಗಳಗುಣಗಳಿವೆಯೋ, ಹೇಗೆ ಅವನ ಸ್ವರೂಪವು ಅಪರಿಚ್ಛೇದ್ಯವಾಗಿ ಅನವಧಿಕಾನಂದೈಕತಾನವಾಗಿದೆಯೋ ಹಾಗೆಯೇ 'ಆದಿತ್ಯ ವರ್ಣಂ' ಮೊದಲಾದ ಶ್ರುತಿವಾಕ್ಯಗಳ ಪ್ರಮಾಣಕ್ಕನುಸಾರ ಅವನಿಗೆ ದಿವ್ಯಮಂಗಳರೂಪ, ಪರಿಜನ, ದಿವ್ಯಸ್ಥಾನ ಮೊದಲಾದುವೂ ಇವೆಯೆಂಬುದು ಗೊತ್ತಾಗುತ್ತದೆ. ಭಗವಂತನ ದಿವ್ಯರೂಪಕ್ಕೆ 'ಶುಭಾಶ್ರಯ'ವೆಂಬ ಹೆಸರಿದೆ. ಉಪಾಸಕರಿಗೆ ಧ್ಯಾನ ವಿಷಯವಾದುದು ಈ ಮಂಗಲರೂಪ. ಭಗವಂತನ ದಿವ್ಯರೂಪ ನಿತ್ಯವಾದುದು. 'ನಿತ್ಯಂ ನಿತ್ಯಾಕೃತಿಧರಮ್,' 'ನಿತ್ಯಸಿದ್ಧೇ ತದಾಕಾರೇ' ಮೊದಲದವು ಈ ಅಂಶವನ್ನು ಸಮರ್ಥಿಸುತ್ತವೆ. ರಾಮಾನುಜರು ಶ್ರೀಭಾಷ್ಯದಲ್ಲಿ ಅಪ್ರಾಕೃತಸ್ವಾಸಾಧಾರಣನಿರತಿಶಯಕಲ್ಯಾಣದಿವ್ಯರೂಪತ್ವೇನ ನಿರತಿಶಯ ದೀಪ್ತಿಯುಕ್ತಃ' (1-2-2) ಎಂದು ಭಗವಂತನ ದಿವ್ಯಮಂಗಲವಿಗ್ರಹವನ್ನು ಸ್ತುತಿಸಿದ್ದಾರೆ. ಸ್ವಾಭಾವಿಕವಾದ ದಿವ್ಯರೂಪ ಅವನಿಗುಂಟೆಂಬುದನ್ನು ಸಾಧಿಸಿದ್ದಾರೆ. ವೇದಾರ್ಥ ಸಂಗ್ರಹದಲ್ಲಿ ರಾಮಾನುಜರು ಭಗವಂತನ ದಿವ್ಯರೂಪದ ವರ್ಣನೆಯನ್ನು ಅದ್ಭುತವಾಗಿ ಮಾಡಿದ್ದಾರೆ. ಶ್ರುತಿ ಪ್ರಮಾಣಗಳ ಬಲದಿಂದಲೂ ಆಚಾರ್ಯರುಗಳ ಅಭಿಪ್ರಾಯ ನಿರೂಪಣೆಯಿಂದಲೂ ಈ ಅಂಶವನ್ನು ಸ್ಥಾಪಿಸಿದ್ದಾರೆ. ಭಗವಂತನು ತನ್ನ ಅವತಾರಗಳಲ್ಲಿ ತನ್ನ ಸಂಕಲ್ಪಕ್ಕನುಸಾರವಾಗಿ ಬೇಕಾದ ರೂಪವನ್ನು ಸ್ವೀಕರಿಸುವನು. ಭಗವಂತನಿಗೆ ದಿವ್ಯಮಂಗಲವಿಗ್ರಹವಿರುವಂತೆಯೇ ಅಸ್ತ್ರಗಳೂ, ಭೂಷಣಗಳೂ ಇವೆ. ವಿಗ್ರಹವತ್ವವನ್ನು ಸ್ಥಾಪಿಸುವ ಪ್ರಮಾಣಗಳು ಅಸ್ತ್ರಭೂಷಣಾದಿಗಳನ್ನೂ ಹೇಳುತ್ತವೆ.

acharya.org

ಅಸ್ತ್ರಭೂಷಣಾಧ್ಯಾಯದಲ್ಲಿ ಈ ಅಸ್ತ್ರಭೂಷಣಗಳ ವೈಶಿಷ್ಟ್ಯವನ್ನು ವರ್ಣಿಸಿದ್ದಾರೆ.

ಉಭಯ ವಿಭೂತಿ ನಾಯಕ

ಭಗವಂತನು ಲೀಲಾವಿಭೂತಿ ಮತ್ತು ನಿತ್ಯವಿಭೂತಿಗಳೆರಡರ ನಾಯಕನೆಂದು ಶಾಸ್ತ್ರಗಳು ವಿಧಿಸುತ್ತವೆ. ಲೀಲಾವಿಭೂತಿ ಎಂಬುದು ಪ್ರಾಕೃತವಾದ ಈ ಪ್ರಪಂಚ. ಇದಕ್ಕೇ ತ್ರಿಗುಣ, ಪ್ರಕೃತಿ ಎಂದೂ ವ್ಯವಹಾರವಿದೆ. ಸತ್ವ, ರಜಸ್ಸು ಮತ್ತು ತಮಸ್ಸು ಗಳೆಂಬ ಮೂರು ಗುಣಗಳಿಂದ ಕೂಡಿದುದು ಇದು. ಇದು ಅನಂತವಾಗಿದೆ. ಶುದ್ಧ ಸತ್ವವಿರುವ ಭಾಗದಲ್ಲಿ ಮಾತ್ರ ಇದು ಪರಿಚ್ಛಿನ್ನವಾಗಿದೆ. ಉಳಿದೆಡೆ ಅಪರಿಚ್ಛಿನ್ನವಾಗಿದೆ. ನಿತ್ಯವಿಭೂತಿಯು ಪರಮಾತ್ಮನ ನಿತ್ಯಧಾಮವಾಗಿದೆ. ನಿತ್ಯರೂ ಮುಕ್ತರೂ ತಮ್ಮ ನಿಜಸ್ವರೂಪದಿಂದ ಅಲ್ಲಿ ಭಗವದನುಭವದ ಪರಮಾನಂದವನ್ನು ಅನುಭವಿಸುತ್ತಿರುತ್ತಾರೆ. ನಿತ್ಯವಿಭೂತಿಯು ಕೇವಲ ಸತ್ವಗುಣವನ್ನು ಮಾತ್ರ ಹೊಂದಿರುವುದರಿಂದ ಶುದ್ಧ ಸತ್ವವೆಂದು ಪ್ರಸಿದ್ಧವಾಗಿದೆ. ರಜಸ್ತಮಸ್ಸುಗಳ ಸಂಬಂಧ ಇದಕ್ಕಿರುವುದಿಲ್ಲ. ಇದೂ ನಿತ್ಯವಾದುದು. ಸರ್ವಶೇಷಿಯಾದ ಭಗವಂತನ ಇಚ್ಛೆಗನುಸಾರವಾಗಿ ಈ ಶುದ್ಧಸತ್ವ ಮುಕ್ತರ, ನಿತ್ಯರ ಶರೀರವಾಗಿ, ಮಂಟಪ, ಗೋಪುರ ಮೊದಲಾದುವಾಗಿ ಅಲ್ಲಿ ಪರಿವರ್ತನೆ ಹೊಂದುತ್ತದೆ. ಈ ಶುದ್ಧಸತ್ವವೂ ತ್ರಿಗುಣ ಹಾಗೂ ಕಾಲದಂತೆ ಅಚೇತನವಾದುದು. 'ಪರಮವ್ಯೋಮ' ಎಂದು ಶ್ರುತಿ ಇದನ್ನು ಕರೆಯುತ್ತದೆ. ಪರಮಪದವೆಂದೂ ಇದನ್ನು ಹೇಳಲಾಗಿದೆ. 'ಕ್ಷಯಂತಮಸ್ಯ ರಜಸಃ ಪರಾಕೇ', 'ತಮಸಃ ಪರಸ್ತಾತ್'. 'ಅಕ್ಷರೇ ಪರಮೇವ್ಯೋಮನ್' ಮೊದಲಾದ ಪ್ರಮಾಣಗಳಿಗನುಸಾರವಾಗಿ ಈ ಶುದ್ಧಸತ್ವ ಪ್ರಕೃತಿಮಂಡಲದ ಆಚೆ ಇದೆಯೆಂದೂ ಅದು ನಿತ್ಯವಾದುದೆಂದೂ ಗೊತ್ತಾಗುತ್ತದೆ. ಈ ಶುದ್ಧಸತ್ವವೂ ಸ್ವಯಂಪ್ರಕಾಶವಾದುದೆಂದು ಶಾಸ್ತ್ರಗಳಿಂದ ಗೊತ್ತಾಗುತ್ತದೆ. ಬದ್ಧಾ ವಸ್ಥೆಯಲ್ಲಿರುವ ಚೇತನರಿಗೆ ಇದು ಗೋಚರಿಸುವುದಿಲ್ಲವಾದ ಕಾರಣ ಇದು ಹೇಗೆ ಸ್ವಯಂಪ್ರಕಾಶವಾದೀತೆಂದು ಆಕ್ಷೇಪಿಸುವುದುಂಟು. ಇದಕ್ಕೆ ಸಮಾಧಾನವನ್ನು ದೇಶಿಕರು ಹೀಗೆ ಹೇಳುತ್ತಾರೆ. ನಿತ್ಯಮುಕ್ತರು ತಮ್ಮತಮ್ಮ ಧರ್ಮಭೂತಜ್ಞಾನದ ಮೂಲಕ ನಿತ್ಯವಿಭೂತಿಯನ್ನು ಗ್ರಹಿಸಿದರೂ ನಿತ್ಯವಿಭೂತಿಯ ಸ್ವಯಂಪ್ರಕಾಶತ್ವಕ್ಕೆ ಕುಂದಿಲ್ಲ. ಹೇಗೆ ಆತ್ಮಸ್ವರೂಪವನ್ನು ಧರ್ಮಭೂತಜ್ಞಾನದ ಮೂಲಕ ಗ್ರಹಿಸಿದರೂ ಆತ್ಮದ ಸ್ವಯಂಪ್ರಕಾಶತ್ವಕ್ಕೆ ಕುಂದಿಲ್ಲವೋ ಹಾಗೆಯೇ ಇದೂ ಸಹ. ಸ್ವಯಂಪ್ರಕಾಶವಾದ ಧರ್ಮಭೂತಜ್ಞಾನದ ಪ್ರಕಾಶ ಬದ್ಧರಿಗೆ ಕರ್ಮದ ಕಾರಣ ಸಂಕುಚಿತವಾಗುವಂತೆ ಶುದ್ಧ ಸತ್ವವು ಬದ್ಧರಿಗೆ ತನ್ನನ್ನು ತೋರಿಸಿಕೊಳ್ಳುವುದಿಲ್ಲ. ಇದರಿಂದ ಅದರ ಸ್ವಯಂಪ್ರಕಾಶ ತ್ವಕ್ಕೆ ಯಾವ ಹಾನಿಯೂ ಇಲ್ಲ.

ಈ ಶುದ್ಧಸತ್ವ ಭಗವಂತನ, ನಿತ್ಯರ ಹಾಗೂ ಮುಕ್ತರ ಶರೀರವಾಗುವುದು.

acharya.org

ಭಗವಂತನ ಅವತಾರ ದೆಶೆಯಲ್ಲಿ ಅದು ಭಗವಂತನ ಶರೀರವಾಗಿ ರೂಪುಗೊಳ್ಳುವುದು. ಈ ಪ್ರಾಕೃತಿಕ ಮಂಡಲದ ಹೊರಗಡೆ ಇರುವುದು ಈ ಶುದ್ಧಸತ್ತ್ವ. ಭಗವತ್ಸ್ವರೂಪವನ್ನು ಇದು ವಿಶದವಾಗಿ ಪ್ರಕಾಶಪಡಿಸುತ್ತದೆ; ಪ್ರಕೃತಿಯಂತೆ ತಿರೋಧಾನ ಮಾಡುವುದಿಲ್ಲ. ಇಂಥ ಪವಿತ್ರವಾದ ನಿತ್ಯವಿಭೂತಿಗೆ ಪರಮಾತ್ಮನು ನಾಯಕನಾಗಿದ್ದಾನೆ. ಪರಮಾತ್ಮ ನಿಗೆ ಇದೂ ಹಾಗೆಯೇ ಲೀಲಾವಿಭೂತಿಯೂ ಅಧೀನವಾಗಿದೆ.

ಹೀಗೆ ಈ ದರ್ಶನ ಶಾಸ್ತ್ರಕ್ಕನುಸಾರವಾಗಿ ಈಶ್ವರನ ಸ್ವರೂಪವನ್ನು ನಿರೂಪಿಸುತ್ತದೆ. ಪರಬ್ರಹ್ಮ ಸ್ವರೂಪವು ಈ ದರ್ಶನದಲ್ಲಿ ಶ್ರೀಮನ್ನಾರಾಯಣನೇ. ಇವನು ಪುರುಷೋತ್ತಮನಾಗಿ, ಸಕಲ ಚೇತನಾಚೇತನ ಪದಾರ್ಥಗಳಿಗೆ ಆಧಾರನಾಗಿ, ನಿಯಾಮಕನಾಗಿ, ಶೇಷಿಯಾಗಿ, ಶರೀರಿಯಾಗಿದ್ದಾನೆ. ಈ ಪರಮನಿಗೆ ಚೇತನಾಚೇತನಪ್ರಪಂಚ ಶರೀರವಾಗಿದೆ, ಚೇತನಾಚೇತನಗಳಿಂದ ಕೂಡಿದ ಪರಮಾತ್ಮನೊಬ್ಬನೇ ತತ್ತ್ವವೆಂದೂ ಹೇಳಿದೆ. ಇದರಿಂದ ಚೇತನರಿಗೆ ಭಗವತ್ಪ್ರಾಪ್ತಿಯೇ ಪರಮಪುರುಷಾರ್ಥವಾಗುತ್ತದೆ.

ಸಾಧನ ಸ್ವರೂಪ

ಆಧ್ಯಾತ್ಮಿಕ ಜೀವನವನ್ನು ನಡೆಸಲು ಪರಮಾತ್ಮನನ್ನುಳಿದು ಇತರ ವಿಷಯಗಳಲ್ಲಿ ವೈರಾಗ್ಯವನ್ನು ಹೊಂದಬೇಕೆಂದು ಉಪನಿಷತ್ತು ಬೋಧಿಸುತ್ತದೆ. ಜೀವನಿಗೆ ಸಹಜವಾದ ಅಲ್ಪಜ್ಞತ್ವ, ಅಶಕ್ತತ್ವ ಮೊದಲಾದ ದೋಷಗಳನ್ನು ಮನಗಂಡು ತನಗೆ ಪ್ರಾಪ್ಯವಾಗಿರುವ ಪರಮಾತ್ಮನ ಅನಂತಕಲ್ಯಾಣಗುಣಗಳನ್ನೂ ವಿಭೂತಿಗಳನ್ನೂ ಧ್ಯಾನಿಸುವುದರ ಮೂಲಕ ಇಂಥ ವೈರಾಗ್ಯ ಪ್ರಾಪ್ತವಾಗುತ್ತದೆ. ಪರಮಾತ್ಮನ ಸ್ವರೂಪಜ್ಞಾನದಿಂದ ಇತರ ವಿಷಯಗಳಲ್ಲಿ ವಿರಕ್ತಿ ಮೂಡುತ್ತದೆ. ಅಂಥವನೇ ಮುಮುಕ್ಷುವಾಗುತ್ತಾನೆ. ಜ್ಞಾನ ಮತ್ತು ವೈರಾಗ್ಯಗಳು ಹೀಗೆ ಭಕ್ತಿಗೆ ದಾರಿಮಾಡಿಕೊಡುತ್ತವೆ. ಮುಮುಕ್ಷುವಿನ ಸ್ವರೂಪವನ್ನು ವೇದಾಂತದೇಶಿಕರು ತಮ್ಮ ರಹಸ್ಯತ್ರಯಸಾರದಲ್ಲಿ

> ವಿಷಮಧುಬಹಿಷ್ಕುರ್ವನ್ ಧೀರೋ ಬಹಿರ್ವಿಷಯಾತ್ಮಕಂ
> ಪರಿಮಿತರಸಸ್ವಾತ್ಮಪ್ರಾಪ್ತಿಪ್ರಯಾಸ ಪರಾಙ್ಮುಖಃ ॥'
> ನಿರವಧಿಮಹಾನಂದ ಬ್ರಹ್ಮಾನುಭೂತಿಕುತೂಹಲೀ
> ಜಗತಿಭವಿತಾ ದೈವಾತ್ ಕಶ್ಚಿಜ್ಜಿಹಾಸಿತಸಂಸೃತಿಃ ।

ಎಂದು ತಿಳಿಸುತ್ತಾರೆ. ಇಲ್ಲಿ ಮೂರು ಮುಖ್ಯವಾದ ಅಂಶಗಳಿವೆ. ಮುಮುಕ್ಷುವಾದವನು.

1. ಬಾಹ್ಯಪ್ರಪಂಚದ ಸುಖ ಸಂತೋಷಗಳನ್ನು ತ್ಯಜಿಸುತ್ತಾನೆ.

2. ಕೈವಲ್ಯ ಅಥವಾ ಆತ್ಮಾನುಭವವೆಂಬ ಆನಂದವನ್ನೂ ಪರಿಮಿತವಾದುದೆಂದು ತಿಳಿದು ಅದಕ್ಕಾಗಿ ಪ್ರಯತ್ನಿಸುವುದಿಲ್ಲ.

3. ಎಲ್ಲೆಯಿಲ್ಲದ ಬ್ರಹ್ಮಾನಂದವನ್ನು ಅನುಭವಿಸಲು ಕಾತರನಾಗಿರುತ್ತಾನೆ. ಇಂಥ ನಿಸ್ಸೀಮವಾದ ಬ್ರಹ್ಮಾನಂದವನ್ನು ಪಡೆಯಲು ಪ್ರತಿಯೊಬ್ಬ ಚೇತನನೂ

acharya.org

ನಿಶ್ಚಯಿಸಿ ಆದಕ್ಕಾಗಿ ಸಾಧನಾನುಷ್ಠಾನಗಳನ್ನು ಕೈಗೊಳ್ಳಬೇಕು. ಈ ಸಿದ್ಧಾಂತದಲ್ಲಿ ಮೋಕ್ಷೋಪಾಯ ಮುಖ್ಯವಾಗಿ ಎರಡು ಬಗೆಯಾಗಿದೆ. ಇವು ಭಕ್ತಿ ಮತ್ತು ಪ್ರಪತ್ತಿ ಗಳು. ಇವೆರಡೂ ಸ್ವತಂತ್ರವಾದ ಮೋಕ್ಷೋಪಾಯಗಳು. ಸಾಧಕ ಶಾಸ್ತ್ರಗಳಿಂದಲೂ ಸದಾಚಾರ್ಯರುಗಳಿಂದಲೂ ಜೀವಸ್ವರೂಪವನ್ನೂ ಪರಮಾತ್ಮ ಸ್ವರೂಪವನ್ನೂ ಅರಿಯು ತ್ತಾನೆ. ಭಗವಂತನ ಹಿರಿಮೆಯನ್ನು ಅರಿತವನು ಬ್ರಹ್ಮೋಪಾಸಕನಾಗಿ ಪರಿವರ್ತನೆ ಹೊಂದಲು ಅರ್ಹನಾಗುತ್ತಾನೆ. ಸಾಧನೆಗಳಿಗೆದುರಾಗಿ ಬರುವ ಎಡರು ತೊಡರುಗಳನ್ನು ದಾಟಿ ಭಗವಂತನನ್ನು ಪಡೆಯಲು ಅವನು ಹಾತೊರೆಯುವನು. ಮನಸ್ಸನ್ನು ಆವರಿ ಸಿರುವ ತಮಸ್ಸು ಮತ್ತು ರಜಸ್ಸನ್ನು ಕಿತ್ತೊಗೆಯಲು ನಿರಂತರವಾಗಿ ಅವನು ಶ್ರಮಿಸ ಬೇಕು. ಅದಕ್ಕಾಗಿ ಕರ್ಮಯೋಗವನ್ನು ಆರಂಭಿಸಬೇಕು. ಕರ್ಮಯೋಗದಿಂದ ಮನಸ್ಸಿನ ಶುದ್ಧಿಯಾದ ಮೇಲೆ ಸಾಧಕನಿಗೆ ಜ್ಞಾನಯೋಗದ ಮೂಲಕವಾಗಲೀ ಅಥವಾ ನೇರವಾಗಿಯಾಗಲೀ ಆತ್ಮಾವಲೋಕನವಾಗುವುದು. ಪರಿಶುದ್ಧವಾದ ಆತ್ಮ ನನ್ನು ಕುರಿತು ನಿರಂತರವಾಗಿ ಚಿಂತಿಸುವುದೇ ಜ್ಞಾನಯೋಗ. ಆತ್ಮಸಾಕ್ಷಾತ್ಕಾರವಾದಾಗ ಸಾಧಕ ತಾನು ಭಗವಂತನಿಗೇ ಶೇಷಭೂತನಾದವನೆಂಬುದನ್ನು ಖಚಿತವಾಗಿ ಕಾಣು ತ್ತಾನೆ. ಅದು ಮೊದಲಾಗಿ ತನಗೆ ಶೇಷಿಯಾದ ಭಗವಂತನನ್ನು ಪಡೆಯಬೇಕೆಂಬ ಉತ್ಕಟೇಚ್ಛೆ ಅವನಿಗೆ ಉದಿಸುವುದು. ತನ್ನ ಶೇಷಿಯಾದ ಪರಮಾತ್ಮನನ್ನು ಪ್ರೀತಿಪೂರ್ವಕ ವಾಗಿ ಅವನು ಧ್ಯಾನಿಸುತ್ತಾನೆ. ಇದೇ ಭಕ್ತಿಯೋಗ. ತೀವ್ರವಾದ ಈ ಭಕ್ತಿಯೋಗವೇ ಪರಭಕ್ತಿ ಎನ್ನಿಸುವುದು. ಈ ಧ್ಯಾನ ಉತ್ಕಟವಾದಾಗ ಭಗವಂತನ ಸಾಕ್ಷಾತ್ಕಾರವಾಗು ವುದು. ಈ ಬಗೆಯಾದ ಸಾಕ್ಷಾತ್ಕಾರಕ್ಕೆ ಭಗವಂತನಲ್ಲಿ ಅನನ್ಯಭಾವದಿಂದ ತನ್ನನ್ನೂ ತನ್ನದನ್ನೂ ಅರ್ಪಣಮಾಡಿಕೊಳ್ಳುವುದು ಅತ್ಯಾವಶ್ಯಕ. ಇದು ಭಕ್ತಿಯೋಗದ ಮಾರ್ಗ.

ಮತ್ತೊಂದು ಮಾರ್ಗವೇ ಪ್ರಪತ್ತಿ ಅಥವಾ ಶರಣಾಗತಿ ಎಂಬುದಾಗಿದೆ. ಶರಣಾ ಗತಿ ಭಕ್ತಿಮಾರ್ಗವನ್ನು ಪೂರ್ಣಗೊಳಿಸುತ್ತದೆ. ಈಶ್ವರನಲ್ಲಿ ಶರಣಾಗತಿ ಆಗದೆ ಭಕ್ತಿ ಮಾರ್ಗದ ಆರಂಭವಾಗಲೀ, ನಿರ್ವಹಣೆಯಾಗಲೀ ಶಕ್ಯವಿಲ್ಲ. ಹೇಗೆ ಇದು ಭಕ್ತಿಯೋಗ ವನ್ನು ಪೂರ್ಣಗೊಳಿಸುವುದೋ ಹಾಗೆಯೇ ಸ್ವತಂತ್ರವಾಗಿಯೂ ಮೋಕ್ಷಕ್ಕೆ ಉಪಾಯ ವಾಗುತ್ತದೆ. ಶ್ರುತಿಗಳೂ, ಸ್ಮೃತಿಗಳೂ ಈ ಅಂಶವನ್ನು ಸಮರ್ಥಿಸುತ್ತವೆ. ಭಕ್ತಿಯೋಗಕ್ಕೆ ಅಸಮರ್ಥನಾದವನು ಸುಲಭವೂ, ಸರ್ವಾಧಿಕಾರಿಕವೂ ಆದ ಈ ಉಪಾಯದಿಂದ ಭಗವಂತನ ನಿತ್ಯಕೈಂಕರ್ಯವನ್ನು ಪಡೆಯಬಹುದು. ಇವೆರಡೂ ಹೀಗೆ ಸ್ವತಂತ್ರವಾದ ಬೇರೆ ಬೇರೆ ಮೋಕ್ಷೋಪಾಯಗಳಾಗಿವೆ. ಇವು ಬೇರೆ ಬೇರೆ ರೀತಿಯ ಸಾಧಕರಿಗೆ ಅನ್ವಯಿಸುತ್ತವೆ.

ಸಾಧನೆಯ ಸ್ವರೂಪವನ್ನು ರಾಮಾನುಜರು ತಮ್ಮ ಶ್ರೀಭಾಷ್ಯ, ಗೀತಾಭಾಷ್ಯ, ಗದ್ಯತ್ರಯ ಮೊದಲಾದುವುಗಳಲ್ಲಿ ನಿರೂಪಿಸಿದ್ದಾರೆ. ಶ್ರೀಭಾಷ್ಯಾದಿ ಗ್ರಂಥಗಳಲ್ಲಿ ಭಕ್ತಿ

acharya.org

ಯೋಗವನ್ನೂ ಗದ್ಯತ್ರಯದಲ್ಲಿ ಪ್ರಪತ್ತಿಯನ್ನೂ ಅವರು ವಿವರಿಸಿದ್ದಾರೆ.

ರಾಮಾನುಜರು ಮಾಡಿರುವ ಸಾಧನಸ್ವರೂಪ ನಿರೂಪಣೆ ವಿಶಿಷ್ಟವಾದ ರೀತಿಯಲ್ಲಿದೆ. ಭಗವದ್ದಯೆಗೆ ನಾವು ಅರ್ಹರಾಗುವಂತೆ ಪ್ರಯತ್ನಮಾಡಬೇಕಾದುದು ಅವಶ್ಯಕ. ಪುರುಷಪ್ರಯತ್ನ ರಕ್ಷಾಪೇಕ್ಷೆಯ ರೂಪದಲ್ಲಿಯಾದರೂ ಆಗಬೇಕು. ಈ ಅಂಶವನ್ನು ನಿರೂಪಿಸಿ ಭಗವದ್ದಯೆಗೂ ಪುರುಷಪ್ರಯತ್ನಕ್ಕೂ ಸಾಮರಸ್ಯವನ್ನು ರಾಮಾನುಜರು ಸಾಧಿಸಿದ್ದಾರೆ. 'ಸಂಸಾರತಂತ್ರವಾಹಿತ್ವಾತ್ ರಕ್ಷಾಪೇಕ್ಷಾಂ ಪ್ರತೀಕ್ಷತೇ' ಎಂದು ಶಾಸ್ತ್ರಗಳಲ್ಲಿ ಈ ಅಂಶ ಹೇಳಿದೆ. ಜೀವನಿಗೆ ಚಿಚ್ಛಕ್ತಿಯೋಗವನ್ನೂ ಕರಣಕಳೇಬರಾದಿಗಳನ್ನೂ ಕರುಣಿಸಿರುವ ಭಗವಂತನು ಪ್ರವೃತ್ತಿ ಮತ್ತು ಸ್ವಾತಂತ್ರ್ಯವನ್ನು ಕೊಟ್ಟಿದ್ದಾನೆ. ಶುಭಾಶುಭ ಮಾರ್ಗಗಳನ್ನು ತೋರಿ ಅವುಗಳಿಂದಾಗುವ ಸುಖದುಃಖಗಳನ್ನೂ ತಿಳಿಸಿ ಜೀವನು ಯಾವುದನ್ನು ಬೇಕಾದರೂ ಆರಿಸಿಕೊಳ್ಳುವ ಅವಕಾಶವನ್ನಿತ್ತಿದ್ದಾನೆ. ಇಲ್ಲಿ ಭಗವಂತನ ಸರ್ವಸ್ವಾತಂತ್ರ್ಯಕ್ಕೂ ಕುಂದಿಲ್ಲ. ಜೀವನ ಪೂರ್ಣವಾದ ವಿಕಾಸಕ್ಕೂ ಅವಕಾಶವಿದೆ. ಸರ್ವರಕ್ಷಕನಾದ ದೇವನು ಎಲ್ಲರನ್ನೂ ಕಾಪಾಡಲು ಸಿದ್ಧನಾಗಿದ್ದರೂ ಸಾಧ್ಯೋಪಾಯವಾದ ಭಕ್ತಿಪ್ರಪತ್ತಿಗಳನ್ನು ಅನುಷ್ಠಿಸುವಂತೆ ಮಾಡಿ ಕಾಪಾಡುವವನಾಗಿದ್ದಾನೆ. ಹೀಗೆ ಭಗವದ್ದಯೆಗೂ ಪುರುಷ ಪ್ರಯತ್ನಕ್ಕೂ ಸಾಮರಸ್ಯವನ್ನು ರಾಮಾನುಜರು ನಿರೂಪಿಸಿದ್ದಾರೆ.

'ಶೇಮುಷೀ ಭಕ್ತಿರೂಪಾ' ಎಂದು ತಮ್ಮ ಶ್ರೀಭಾಷ್ಯಮಂಗಳಶ್ಲೋಕದಲ್ಲಿ ರಾಮಾನುಜರು ಹೇಳಿ ಜ್ಞಾನ ಮತ್ತು ಭಕ್ತಿಗಳಿಗೆ ಸಾಮಂಜಸ್ಯವನ್ನು ಕಲ್ಪಿಸಿದ್ದಾರೆ. ನಿರತಿಶಯಪ್ರಿಯವೂ ಅನನ್ಯ ಪ್ರಯೋಜನವೂ ಸ್ವೇತರವೈತೃಷ್ಣ್ಯಾವಹವೂ ಆದ ಜ್ಞಾನವೇ ಭಕ್ತಿ ಎನ್ನಿಸಿಕೊಳ್ಳುವುದು. ಈ ಜ್ಞಾನವೇ ಪರಮಪ್ರೇಮರೂಪವಾಗಿ ಭಕ್ತಿ ಶಬ್ದವಾಚ್ಯವಾಗಿದೆ. ಉಪಾಸನಾತ್ಮಕವಾದ ಜ್ಞಾನ ಮೋಕ್ಷೋಪಾಯವೆಂದು ಅವರು ವಿವರಿಸಿದ್ದಾರೆ. ಇದೇ ರೀತಿಯಲ್ಲಿ ಭಕ್ತಿ ಮತ್ತು ಪ್ರಪತ್ತಿಗಳಿಗೂ ಸಾಮಂಜಸ್ಯವನ್ನು ಸಾಧಿಸಿರುವುದು ರಾಮಾನುಜರ ವೈಶಿಷ್ಟ್ಯವಾಗಿದೆ. ಇವೆರಡೂ ಮೋಕ್ಷೋಪಾಯಗಳೇ ಸರಿ ಎಂದು ಅವರು ಸಮರ್ಥಿಸುತ್ತಾರೆ. ಪ್ರಪತ್ತಿ ಭಕ್ತಿಯೋಗವನ್ನು ಪೂರ್ಣಗೊಳಿಸುವಂತೆ ಸ್ವತಂತ್ರವಾಗಿಯೂ ಮೋಕ್ಷೋಪಾಯವಾಗುವುದೆಂದು ಹೇಳಿ ಪ್ರಪತ್ತಿಯು ಅಂಗಪ್ರಪತ್ತಿ ಮತ್ತು ಅಂಗಿಪ್ರಪತ್ತಿ ಎಂದು ಎರಡು ಬಗೆ ಎಂದು ಇವರು ಹೇಳುತ್ತಾರೆ. ಪ್ರಪತ್ತಿಯ ಇವೆರಡು ಪ್ರಕಾರಗಳನ್ನು ನಿರೂಪಿಸಿರುವುದರಿಂದ ಪ್ರಪತ್ತಿಯನ್ನು ಹೆಚ್ಚುಮಾಡಿ ಭಕ್ತಿಯೋಗವನ್ನು ಕಡಿಮೆಯೂ ಮಾಡಿಲ್ಲ. ಪ್ರಪತ್ತಿಯನ್ನು ಕಡಿಮೆಮಾಡಿ ಭಕ್ತಿಯೋಗವನ್ನು ಹೆಚ್ಚು ಮಾಡಿಯೂ ಇಲ್ಲ. ಇವೆರಡಕ್ಕೂ ತಕ್ಕಂತೆ ಮಹತ್ವವನ್ನು ಹೇಳಲಾಗಿದೆ. ಹೀಗೆ ರಾಮಾನುಜರು ಮೋಕ್ಷೋಪಾಯ ನಿರೂಪಣೆಯನ್ನು ನಿಷ್ಕೃಷ್ಟವಾದ ರೀತಿಯಲ್ಲಿ ಮಾಡಿದ್ದಾರೆ. ಇದಕ್ಕನುಗುಣವಾಗಿ ಸಾಧನೆಯು

acharya.org

ಸೋಪಾನಗಳನ್ನು ಕೆಳಗೆ ಕಂಡಂತೆ ಸೂಚಿಸಬಹುದು.

ಮೋಕ್ಷೋಪಾಯ

- ಭಕ್ತಿ
  - ಶಾಸ್ತ್ರಜನ್ಯ ಜ್ಞಾನ ಮತ್ತು ಸತ್ಸಂಗತಿ
  - ಸಾಮಾನ್ಯ ಭಕ್ತಿ
  - ಕರ್ಮಯೋಗ
  - ಜ್ಞಾನಯೋಗ
  - ಆತ್ಮಾವಲೋಕನ
  - ಭಕ್ತಿಯೋಗ
  - ಪರಮಾತ್ಮ ಸಾಕ್ಷಾತ್ಕಾರ
- ಪ್ರಪತ್ತಿ
  - ಅ) ಜೀವೇಶ್ವರರನ್ನು ಕುರಿತ ಸಾಮಾನ್ಯ ಜ್ಞಾನ
  - ಆ) ಭಕ್ತಿಮಾರ್ಗದ ಅನುಸರಣೆಯಲ್ಲಿ ಶಕ್ತಿಯ ಅಭಾವ
  - ಇ) ಆವಶ್ಯಕವಾದ ಜ್ಞಾನಾಭಾವ
  - ಈ) ಶಾಸ್ತ್ರತಃ ಭಕ್ತಿಯೋಗಕ್ಕೆ ಅರ್ಹತೆ ಇಲ್ಲದಿರುವಿಕೆ
  - ಉ) ವಿಳಂಬವನ್ನು ಸಹಿಸದಿರುವಿಕೆ
    - ಉಕ್ತಿನಿಷ್ಠೆ
    - ಆಚಾರ್ಯನಿಷ್ಠೆ
    - ಸ್ವನಿಷ್ಠೆ
      - ದೇಹಾವಸಾನದಲ್ಲಿ ಮೋಕ್ಷ

ಇವುಗಳಲ್ಲಿ ಮೊದಲು ಭಕ್ತಿಯೋಗದ ನಿರೂಪಣೆಯನ್ನು ತೆಗೆದುಕೊಳ್ಳೋಣ. ಭಕ್ತಿಯೋಗಕ್ಕೆ ಆವಶ್ಯಕವಾಗಿ ಬೇಕಾದ ಆತ್ಮದರ್ಶನಕ್ಕಾಗಿ ಕರ್ಮಯೋಗವನ್ನು ಮೊದಲು ಸಾಧಕ ಅನುಷ್ಠಿಸಬೇಕು. ಇದರಿಂದ ನೇರವಾಗಿಯಾಗಲೀ ಜ್ಞಾನಯೋಗದ ಮೂಲಕವಾಗಿಯಾಗಲೀ ಆತ್ಮಸಾಕ್ಷಾತ್ಕಾರವಾಗುವುದು. ಅಲ್ಲಿಂದ ಮುಂದೆ ಭಕ್ತಿಯೋಗವನ್ನವನು ಆರಂಭಿಸುವನು. ಈ ಸಾಧನೆಯ ಮಾರ್ಗದಲ್ಲಿ ಮೊದಲ ಹಂತವಾದ ಕರ್ಮಯೋಗವನ್ನು ಕುರಿತು ಈಗ ವಿಚಾರಿಸೋಣ.

acharya.org

ಕರ್ಮಯೋಗ

'ಯೋಗಸ್ಸಂನಹನೋಪಾಯಃ' ಎಂದಂತೆ ಯೋಗವೆಂದರೆ ಉಪಾಯವೆಂದರ್ಥ. ಯಾವ ಸಾಧನೆಯಲ್ಲಿ ಕರ್ಮ ಮುಖ್ಯವಾದ ಉಪಾಯವಾಗಿದೆಯೋ ಅದು ಕರ್ಮ ಯೋಗವೆನ್ನಿಸಿಕೊಳ್ಳುವುದು. ಈ ಕರ್ಮಯೋಗದಲ್ಲಿಯೂ ಜ್ಞಾನ ಮತ್ತು ಭಕ್ತಿಯ ಅಂಶಗಳು ಇದ್ದೇ ಇರುತ್ತವೆ. ಇವು ಮೂರೂ ಒಂದರೊಡನೊಂದು ಕೂಡಿಯೇ ಇರು ತ್ತವೆ ಎಂಬುದನ್ನು ಯಾಮುನರು 'ತ್ರಯಾಣಾಮಪಿ ಯೋಗಾನಾಂ ತ್ರಿಭಿರನ್ಯೋನ್ಯ ಸಂಗಮಃ' (ಗೀ. ಸಂ .24) ಎಂದು ತಿಳಿಸಿದ್ದಾರೆ.

ಕರ್ಮಯೋಗ ಕರ್ಮಕ್ಕಿಂತ ಬೇರೆಯಾದುದು

ಕೇವಲ ಕರ್ಮ ಪುಣ್ಯಪಾಪರೂಪವಾಗಿ ಬಂಧನದಲ್ಲಿ ಪರಿಣಮಿಸುತ್ತದೆ. ಆದರೆ ಕರ್ಮಯೋಗ ಆ ಕರ್ಮದ ಬಂಧನದಿಂದ ನಮ್ಮನ್ನು ಮುಕ್ತಗೊಳಿಸುತ್ತದೆ. ಕರ್ಮ ನಮ್ಮ ನೈತಿಕ ಜೀವನದ ಆಧಾರ. ನಮ್ಮ ಇಂದಿನ ಸ್ಥಿತಿಯನ್ನು ನಿರ್ಧರಗೊಳಿಸಿರುವುದು ಇದು. ಮುಂದಿನ ನಮ್ಮ ಜೀವನವನ್ನು ರೂಪುಗೊಳಿಸುವುದು ಈ ಕರ್ಮವೇ. ಇದು ಅನಾದಿಯಾಗಿ ವಿಚಿತ್ರವಾಗಿರುವುದಾಗಿದೆ. ಅನಾದಿಯಾದ ಅವಿದ್ಯೆ ಈ ಕರ್ಮಕ್ಕೆ ಕಾರಣ. ಇದು ಫಲವನ್ನು ಕುರಿತದ್ದಾಗಿದೆ. ಪ್ರತಿಯೊಂದು ಕರ್ಮವೂ ನಮ್ಮ ಮನಸ್ಸಿನ ಮೇಲೆ ವಾಸನೆ ಎಂದು ಹೇಳಲ್ಪಡುವ ಸಂಸ್ಕಾರವನ್ನುಂಟು ಮಾಡುತ್ತದೆ. ಈ ವಾಸನೆ ಪ್ರಬಲವಾಗಿದ್ದು ಕಾರ್ಯಕರವಾಗುತ್ತದೆ. ಇದರ ಪ್ರಭಾವ ಕ್ಕೊಳಗಾದ ಮನುಷ್ಯ ಇಂದ್ರಿಯ ಸುಖಗಳೇ ಮೊದಲಾದುವನ್ನು ಅನ್ವೇಷಿಸಿಕೊಂಡು ಹೊರಡುತ್ತಾನೆ. ಇಂದ್ರಿಯ ಭೋಗಗಳಲ್ಲಿ ಜೀವನು ಮಗ್ನನಾಗುವುದಕ್ಕೆ ಕರ್ಮವಾಸ ನೆಯೇ ಮುಖ್ಯಕಾರಣ. ಆದರೆ ಕರ್ಮಯೋಗ ಇದಕ್ಕಿಂತ ಬೇರೆಯಾದುದು. ಕರ್ಮದ ಅಪಾಯಗಳು ಅದರಲ್ಲಿಲ್ಲ. ಕಾಮ ಅಥವಾ ಫಲಾಶೆಯಿಂದ ಅದು ಬಿಡಲ್ಪಟ್ಟಿರುತ್ತದೆ.

'ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ |
ಬಹುಶಾಖಾಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಂ ||' (ಗೀ-2-41)

ಎಂದು ಹೇಳಿರುವಂತೆ ಕರ್ಮಯೋಗದಲ್ಲಿರುವುದು ಒಂದೇ ಒಂದು ಉದ್ದೇಶ. ಅದಾವು ದೆಂದರೆ ಸಂಸಾರದ ಬಂಧನದಿಂದ ಬಿಡುಗಡೆ ಹೊಂದಬೇಕೆಂಬುದೇ ಆಗಿದೆ. ಕಾಮ್ಯ ಕರ್ಮ ವಿಷಯವಾದ ಬುದ್ಧಿ ಬಹು ವಿಧವಾದುದು. ಅದಕ್ಕೂ ಮೋಕ್ಷಸಾಧನವಾದ ಕರ್ಮಯೋಗದ ಬುದ್ಧಿಗೂ ವ್ಯತ್ಯಾಸವಿದೆ. ಕಾಮಾಧಿಕಾರಿಗಳ ಬುದ್ಧಿ ಫಲಾನಂತ್ಯದ ಕಾರಣ ಅನಂತವಾಗಿದೆ. ಆದರೆ ಕರ್ಮಯೋಗಿಯ ಕರ್ಮಗಳೆಲ್ಲವೂ ಮುಕ್ತಿಗೆ ಸಹಾ ಯಕವಾಗುವ ಕಾರಣ ಅವಾಂತರ ಭೇದಗಳಿದ್ದರೂ ಸಹ ಏಕಶಾಸ್ತ್ರಾರ್ಥಗೋಚರವಾಗಿ ಒಂದೇ ಆಗಿದೆ. ಫಲದಲ್ಲಿ ಅನಾಸಕ್ತಿಯುಳ್ಳ ಈ ಮಾರ್ಗ ಮನಸ್ಸಿನ ಮೇಲೆ ಯುಕ್ತವಾದ

acharya.org

ಪರಿಣಾಮ ಬೀರಿ ಆ ಮನಸ್ಸನ್ನು ಶುದ್ಧಿಗೊಳಿಸುತ್ತದೆ.

ಕರ್ಮಯೋಗಿ ತನ್ನ ಕರ್ಮಗಳನ್ನೆಲ್ಲಾ ಮಾಡಿದರೂ ಸಹ ಅವುಗಳ ಫಲಗಳಲ್ಲಿ ಆಸಕ್ತಿಯನ್ನು ಹೊಂದದಿರುವ ಕಾರಣ ಮೋಕ್ಷಸಾಧನೆಯ ಕಡೆ ತನ್ನ ಗಮನವನ್ನು ಕೇಂದ್ರೀಕರಿಸುತ್ತಾನೆ. ಇವೆಲ್ಲವೂ ಆ ಕಾರಣ ಮೋಕ್ಷಸಾಧನೆಯೇ ಆಗುತ್ತದೆ. ಆಚಾರ್ಯರು' 'ಉಕ್ತ ಬುದ್ಧಿಯೋಗಯುಕ್ತಂ ಕರ್ಮ ನಿಖಿಲಂ ಸಾಂಸಾರಿಕಂ ದುಃಖಂ ವಿನಿವರ್ತ್ಯ ಪರಮಪುರುಷಾರ್ಥಲಕ್ಷಣಂ ಚ ಮೋಕ್ಷಂ ಪ್ರಾಪಯತಿ. ಇತರತ್ ಅಪರಿಮಿತದುಃಖರೂಪಂ ಸಂಸಾರವ್' ಎಂದು ಈ ಅಂಶವನ್ನು ತಿಳಿಸಿದ್ದಾರೆ. (ಗೀ. ಭಾ. II – 49)

ಫಲಕಾಮನೆಯಿಂದ ಕೆಲಸಮಾಡುವವರು ಸಂಸಾರಾಧ್ವದಲ್ಲಿ ಬೀಳುತ್ತಾರೆ. ಈ ರೀತಿಯ ಕಾಮ್ಯಕರ್ಮ ಬುದ್ಧಿಯೋಗಕ್ಕಿಂತ ಕಡಿಮೆಯಾದುದು. ಬುದ್ಧಿಯೋಗವೆಂದರೆ ಪ್ರಧಾನ ಫಲತ್ಯಾಗಸಹಿತವಾಗಿ ಅವಾಂತರ ಫಲಗಳ ಸಿದ್ಧಿ ಅಥವಾ ಅಸಿದ್ಧಿಯಲ್ಲಿ ಸಾಮ್ಯಾನುಸಂಧಾನ ಮಾಡುವುದೇ ಆಗಿದೆ. ಇಂಥವನು ಜನ್ಮಬಂಧಗಳಿಂದ ವಿನಿರ್ಮುಕ್ತನಾಗಿ ದುಃಖದೂರವಾದ ಸ್ಥಾನವನ್ನು ಸೇರುತ್ತಾನೆ. ರಾಮಾನುಜರು ಈ ಅಂಶವನ್ನು 'ಬುದ್ಧಿಯೋಗಯುಕ್ತಾಃ ಕರ್ಮಜಂ ಫಲಂ ತ್ಯಕ್ತ್ವಾ ಕರ್ಮ ಕುರ್ವಂತಃ ತಸ್ಮಾತ್ ಜನ್ಮಬಂಧವಿನಿರ್ಮುಕ್ತಾಃ ಅನಾಮಯಂ ಪದಂ ಗಚ್ಛಂತಿ' ಎಂದು ಉಪಪಾದಿಸಿದ್ದಾರೆ (ಗೀ. ಭಾ. II – 51)

ಇಲ್ಲಿ ತ್ಯಾಗ ಮಾಡುವುದು ಕರ್ಮವನ್ನಲ್ಲ. ಆದರೆ ಕರ್ಮಫಲದಲ್ಲಿ ಆಶೆಯನ್ನು. ಹೀಗೆ ಫಲದಲ್ಲಿ ಆಶೆಯನ್ನು ಬಿಟ್ಟು ಕರ್ಮವನ್ನು ಮಾಡಲು ಮಾಡಿರುವ ಉಪದೇಶ ಪ್ರವೃತ್ತಿ ನಿವೃತ್ತಿ ಮಾರ್ಗಗಳೆರಡಕ್ಕೂ ಸಮನ್ವಯವನ್ನು ಮಾಡುತ್ತದೆ. 'ಕುರ್ವನ್ನೇವೇಹ ಕರ್ಮಾಣಿ' ಎಂದು ಕರ್ಮವನ್ನು ಬಿಡಬಾರದೆಂಬ ಆದೇಶ ಶ್ರುತಿಯಲ್ಲಿದೆ. 'ತೇನ ತ್ಯಕ್ತೇನ ಭುಂಜೀಥಾಃ', ಎಂಬಲ್ಲಿ ಕರ್ಮವನ್ನು ಬಿಡಬೇಕೆಂದೂ ಹೇಳಿದೆ. ಇವೆರಡಕ್ಕೂ ಹೇಗೆ ಸಮನ್ವಯ ಮಾಡಬೇಕೆಂಬುದನ್ನು ಗೀತೆ ಬಹಳ ಸಮರ್ಪಕವಾಗಿ ತೋರಿದೆ. ಮಾಡಬೇಕಾದ ಅಂಶ ಯಾವುದು, ಬಿಡಬೇಕಾದ ಅಂಶ ಯಾವುದು ಎಂಬುದನ್ನು ಇದು ಸ್ಪಷ್ಟಪಡಿಸಿದೆ. ಕರ್ಮಮಾಡಬೇಕಾದುದೇ. ಅದನ್ನು ಬಿಡಕೂಡದು. ಆದರೆ ಮಾಡುವ ಕರ್ಮದಿಂದ ದೊರಕುವ ಫಲದಲ್ಲಿ ಆಶೆಯನ್ನು ಬಿಡತಕ್ಕದ್ದು. ಹೀಗೆ ಕರ್ಮಯೋಗವೆಂಬುದು ಕೇವಲ ಕರ್ಮಕ್ಕಿಂತ ಬೇರೆಯಾಗಿ ಉತ್ಕೃಷ್ಟತರವಾಗಿದೆ.

ಕರ್ಮಯೋಗ ಎಂದರೇನು ?

ಕರ್ಮಯೋಗದ ವೈಶಿಷ್ಟ್ಯವನ್ನು ಗೀತಾಚಾರ್ಯನು 'ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ' ಎಂದು (II – 48) ಉಪದೇಶಿಸಿದ್ದಾನೆ. ಫಲ

acharya.org

ದಲ್ಲಿ ಆಶೆಯುನ್ನಿಟ್ಟುಕೊಳ್ಳದೆ ತನ್ನ ಕರ್ಮವನ್ನು ತಾನು ನಿಯತವಾಗಿ ಮಾಡುವುದು ಕರ್ಮಯೋಗವೆನಿಸುವುದು. ತನಗೆ ಏನಾದರೂ ಫಲ ಉಂಟಾದಾಗ ಸಂತೋಷ ಗೊಳ್ಳುವುದುಂಟು. ತನಗೆ ನಷ್ಟವಾದಾಗ ದುಃಖಿಸುವುದೂ ಉಂಟು. ಲಾಭನಷ್ಟ ಗಳಲ್ಲಿಯಾಗಲೀ, ಸುಖದುಃಖಗಳಲ್ಲಾಗಲೀ, ಜಯಪರಾಜಯಗಳಲ್ಲಾಗಲೀ ಆಸಕ್ತಿ ಯನ್ನು ಹೊಂದದಿರುವಂತೆ ಕರ್ಮಾನುಷ್ಠಾನ ಮಾಡಬೇಕು. ಅವು ಆತ್ಮಸ್ವರೂಪವನ್ನು ಹೆಚ್ಚಿಸುವುದಾಗಲೀ ಕಡಿಮೆ ಮಾಡುವುದಾಗಲೀ ಇಲ್ಲ. ಇವೆಲ್ಲ ಬಂದು ಹೋಗತಕ್ಕವು: ಸ್ಥಿರವಾಗಿರುವುದಲ್ಲ. ಈ ದ್ವಂದ್ವಗಳನ್ನೆಲ್ಲಾ ಸಮನಾಗಿ ಎಣಿಸುವವನು ಕರ್ಮಯೋಗಿ. ಈ ಬಗೆಯ ಸಮತ್ವವನ್ನು ಗೀತೆ 'ಯೋಗ' ಎಂದು ಕರೆಯುತ್ತದೆ. ಸಮತ್ವರೂಪವಾದ ಚಿತ್ತಸಮಾಧಾನವೇ ಯೋಗ. 'ಯೋಗಃ' ಸಿದ್ಧ್ಯಸಿದ್ಧ್ಯೋಃ ; ಸಮತ್ವರೂಪಂ ಚಿತ್ತ ಸಮಾಧಾನಮ್' ಎಂದು ರಾಮಾನುಜರು ಇದನ್ನು ವಿವರಿಸಿದ್ದಾರೆ. ಮತ್ತೊಂದು ಕಡೆ ಯೋಗವನ್ನು 'ಕರ್ಮಸು ಕೌಶಲಂ' ಎಂದು ವಿವರಿಸಿದೆ. ಅನಾದಿ ಕಾಲದಿಂದ ಕೂಡಿಸಿ ಕೊಂಡಿರುವ ಸುಕೃತ ದುಷ್ಕೃತಗಳನ್ನು ಪರಿಹರಿಸಿಕೊಳ್ಳಲು ಶಕ್ಯವಾದ 'ಬುದ್ಧಿಯೋಗ' ಇದು. ಆದುದರಿಂದ ಈ ಬುದ್ಧಿಯೋಗವನ್ನು ಸಾಧಿಸಬೇಕೆಂದು ಹೇಳಿದೆ. ಈ ಬುದ್ಧಿ ಯೋಗ ಸಾಧಿಸುವುದು ಸುಲಭವಲ್ಲ, ಅದರಿಂದಲೇ ಅದನ್ನು ಕೌಶಲವೆಂದಿದ್ದಾರೆ. 'ಕರ್ಮ ಸುಕ್ರಿಯಮಾಣೇಷು ಅಯಂ ಬುದ್ಧಿಯೋಗಃ ಕೌಶಲಂ–ಅತಿ ಸಾಮರ್ಥ್ಯಮ್ ಅತಿ ಸಾಮರ್ಥ್ಯ ಸಾಧ್ಯಮಿತ್ಯರ್ಥ :' ಎಂದು ರಾಮಾನುಜರು ಕೌಶಲಂ ಎಂಬುದನ್ನು ನಿರೂಪಿಸುತ್ತಾರೆ.

ಹೀಗೆ ಕರ್ಮವೊಂದನ್ನು ಅದರ ಫಲದಲ್ಲಿ ಯಾವ ಆಶೆಯನ್ನೂ ಹೊಂದಿರದೇ ಮಾಡುವುದೇ ನಿಷ್ಕಾಮಕರ್ಮ ಎನ್ನಿಸಿಕೊಳ್ಳುವುದು ಇದೇ 'ವ್ಯವಸಾಯಾತ್ಮಿಕಾ ಬುದ್ಧಿ' ಎನ್ನಿಸಿಕೊಳ್ಳುವುದು. ರಾಗದ್ವೇಷಗಳನ್ನು ಇದರಿಂದ ಜಯಿಸಲು ಸಾಧ್ಯ ವಾಗುತ್ತದೆ. ವಿಷಯಗಳಲ್ಲಿ ಆಶೆಯುಳ್ಳವರು ಮಾಡುವಂತೆಯೇ ಇವರೂ ಕರ್ಮಾನು ಷ್ಠಾನ ಮಾಡಿದರೂ ಆಯಾ ಕರ್ಮಗಳ ಫಲಗಳು ಇವರಿಗೆ ಸಂಬಂಧಿಸುವುದಿಲ್ಲ. ಏಕೆಂದರೆ ಆ ಫಲಗಳಲ್ಲಿ ಇವರಿಗೆ ಆಸಕ್ತಿ ಇರುವುದಿಲ್ಲ. 'ನಾನು ಮಾಡುವವನು' ಎಂಬಂತಹ ಕರ್ತೃತ್ವಾಭಿಮಾನ ಇವರಿಗಿರುವುದಿಲ್ಲ. ಆತ್ಮಸಾಕ್ಷಾತ್ಕಾರಕ್ಕೆ ಅತ್ಯಂತ ಆವಶ್ಯಕವಾದುದು ಈ ಬಗೆಯ ಸ್ವಕೀಯತಾತ್ಯಾಗ. ಗೀತಾಚಾರ್ಯನು

> ಮಯಿ ಸರ್ವಾಣಿ ಕರ್ಮಾಣಿ ಸನ್ನ್ಯಸ್ಯಾಧ್ಯಾತ್ಮಚೇತಸಾ ।
> ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ ॥

ಎಂಬಲ್ಲಿ ಕರ್ಮಯೋಗಕ್ಕೆ ಆವಶ್ಯಕವಾದ ತ್ರಿವಿಧತ್ಯಾಗವನ್ನು ಹೇಳಿದ್ದಾನೆ. ಈ ಶ್ಲೋಕ ದಲ್ಲಿ ಬರುವ 'ಸನ್ನ್ಯಸ್ಯ', 'ನಿರಾಶೀಃ' ಮತ್ತು 'ನಿರ್ಮಮಃ' ಎಂಬ ಪದಗಳು ಸಾಭಿ ಪ್ರಾಯವಾಗಿವೆ. 'ಸನ್ನ್ಯಸ್ಯ' ಎಂಬುದು ಕರ್ತೃತ್ವ ತ್ಯಾಗವನ್ನೂ 'ನಿರಾಶೀಃ' ಎಂಬುದು

acharya.org

ಫಲತ್ಯಾಗವನ್ನೂ 'ನಿರ್ಮಮಃ' ಎಂಬುದು ಮಮತಾತ್ಯಾಗವನ್ನೂ ವಿಧಿಸುತ್ತದೆ. 'ನಾನು ಕರ್ತಾ' ಎಂಬತಕ್ಕ ಕರ್ತೃತ್ವವನ್ನು ತ್ಯಾಗಮಾಡಿದಾಗ ಅದರಿಂದ ಬರುವ ಫಲವೂ ತನ್ನದಲ್ಲವೆಂದು ಅವನು ಮನವರಿಕೆ ಮಾಡಿಕೊಳ್ಳುತ್ತಾನೆ. ಫಲದ ಬಗೆಗೆ ಅವನು ಚಿಂತಿಸುವುದೇ ಇಲ್ಲ. ಇದರ ಕಾರಣವೇ ಆ ಕರ್ಮ ತನ್ನದು ತನಗೆ ಸಂಬಂಧಿಸಿದುದು ಎಂಬುದನ್ನೂ ಅವನು ಬಿಡುತ್ತಾನೆ. ಹೀಗೆ ಇದನ್ನು ಮಾಡುವವ ನಾನಲ್ಲ, ಇದರ ಫಲ ನನಗಲ್ಲ, ಇದು ನನಗೆ ಸಂಬಂಧಿಸಿದುದಲ್ಲ ಎಂದು ಅನುಸಂಧಾನ ಮಾಡುತ್ತಾ ಕರ್ಮಾನುಷ್ಠಾನ ಮಾಡುವ ಸಾಧಕ ಆತ್ಮಸಾಕ್ಷಾತ್ಕಾರದ ಮಾರ್ಗದಲ್ಲಿ ಮುಂದುವರಿಯುತ್ತಾನೆ. ಈ ಅನಾಸಕ್ತಿಯೋಗ ಅಪಾಯರಹಿತವಾದ ಮಾರ್ಗವಾಗಿದೆ.

ಸಂಸಾರಿಜೀವನು ಸಾಮಾನ್ಯವಾಗಿ ದೇಹಾತ್ಮಭ್ರಮೆಗೊಳಗಾಗಿರುತ್ತಾನೆ. ಅಹಂಕಾರಮಮಕಾರಗಳಿಗೆ ತುತ್ತಾಗಿರುತ್ತಾನೆ. ಇದರಿಂದಲೇ ಅವನು ಸಂಸಾರದ ಪಾಶಕ್ಕೆ ಒಳಗಾಗಿರುತ್ತಾನೆ. ಕರ್ಮದ ಸಂಕೋಲೆಗಳು ಅವನನ್ನು ಸಂಸಾರಕ್ಕೆ ಕಟ್ಟಿ ಹಾಕುವುವು. ತನ್ನ ಕೆಲವು ಆಶೆಗಳನ್ನು ಪೂರ್ತಿಗೊಳಿಸಿಕೊಳ್ಳಲು ತಾನು ಪ್ರಯತ್ನಿಸುತ್ತಿರುವುದಾಗಿ ಅವನು ಭಾವಿಸುತ್ತಾನೆ. ರಾಗದ್ವೇಷಗಳಿಗೊಳಗಾಗಿ ಸುಖ ದುಃಖಗಳಿಗವನು ಗುರಿಯಾಗುತ್ತಾನೆ. ಈ ವಿಷ ಚಕ್ರದಿಂದ ಪಾರಾಗುವ ಬಗೆ ಹೇಗೆ ? ಕರ್ಮಯೋಗ ಈ ವಿಷವ್ಯೂಹದಿಂದ ನಮ್ಮನ್ನು ಮುಕ್ತಮಾಡುವ ಸಮರ್ಥೋಪಾಯವೆಂದು ಗೀತಾಚಾರ್ಯ ಸಾರಿಸಾರಿ ಹೇಳಿದ್ದಾನೆ. ಕರ್ಮದಿಂದ ನಮ್ಮನ್ನು ನಾವು ಬಿಡಿಸಿಕೊಳ್ಳುವುದಂತೂ ಸಾಧ್ಯವಿಲ್ಲದ ಮಾತು ಗುಣಕೃತವಾದ ಕರ್ಮದ ಪ್ರಭಾವದಿಂದ ನಾವು ಮುಕ್ತರಾಗುವುದಕ್ಕೆ ಇರುವ ಏಕೈಕ ಮಾರ್ಗವೇ ಕರ್ಮಯೋಗ. ಇದು ನಮಗೆ ಉತ್ತಾರಕವಾಗುತ್ತದೆ. ಸಾಧಕನು ಇಲ್ಲಿ ಮನಗಾಣಬೇಕಾದ ಅಂಶಗಳು ಹೀಗಿವೆ :—

೧) ಜೀವನು ಪ್ರಕೃತಿಗಿಂತ ಭಿನ್ನನಾಗಿದ್ದಾನೆ. ತನ್ನ ನೈಜಸ್ವರೂಪದಲ್ಲಿ ಈ ಬಗೆಯ ಪುಣ್ಯಪಾಪಕರ್ಮಗಳಿಂದ ಅಸ್ಪೃಷ್ಟನಾಗಿದ್ದಾನೆ.

೨) ಪ್ರಕೃತಿಸಂಪರ್ಕ ಆತ್ಮನಿಗೆ ಉಂಟಾಗಿರುವುದೇ ಅಹಂಕಾರಕ್ಕೆ ಕಾರಣ.

೩) ಪ್ರಕೃತಿಯ ಮೂರು ಗುಣಗಳು ಈ ವಿಧವಾದ ಕರ್ಮಕ್ಕೆ ಕಾರಣ.

ಈ ಅಂಶಗಳನ್ನು ಮನವರಿಕೆಮಾಡಿಕೊಂಡಾಗ ಸಾಧಕ ತನ್ನ ಅಹಂಕಾರವನ್ನು ಬಿಡಲು ಪ್ರಯತ್ನಿಸುತ್ತಾನೆ. ಕರ್ತೃತ್ವಾಭಿಮಾನವನ್ನು ಬಿಡುವುದು ಬಹಳ ಸುಲಭವಲ್ಲ. ಅವಿದ್ಯಾಕರ್ಮದ ಕಾರಣ ಅನಾದಿಕಾಲದಿಂದ ಉಂಟಾಗಿರುವುದು ಇದು. ಮನಸ್ಸು ಇಂದ್ರಿಯಗಳಿಗೆ ವಶವಾಗಿ ಬಿಡುವುದು. ಮನೋನಿಗ್ರಹ ಬಹಳ ಕಠಿಣ. ಆದುದರಿಂದಲೇ ಜೀವನು ಇಂದ್ರಿಯನಿಗ್ರಹಕ್ಕಾಗಿ ಸತತವಾದ ಪ್ರಯತ್ನ ಮಾಡಬೇಕು. ಇಂದ್ರಿಯನಿಗ್ರಹವನ್ನು ಸಾಧಿಸಲು ಮನಸ್ಸನ್ನು ಗಟ್ಟಿ ಮಾಡಬೇಕು. ಕರ್ಮಯೋಗದಿಂದ ಈ

acharya.org

ನಿರ್ಧಾರ ಲಭ್ಯವಾಗುತ್ತದೆ. ಕರ್ಮಯೋಗಿ ಮೇಲೆ ಹೇಳಿದ ತ್ರಿವಿಧಾಹಂಕಾರಗಳನ್ನು ತ್ಯಾಗಮಾಡಿ ಕರ್ಮದ ಬಂಧನಗಳಿಂದ ತನ್ನನ್ನು ಬಿಡಿಸಿಕೊಳ್ಳುತ್ತಾನೆ. ಆತ್ಮನ ಸ್ವಸ್ವರೂಪವನ್ನರಿಯಲೂ, ಸಾಧಿಸಲೂ ಕರ್ಮಯೋಗ ಅತ್ಯಂತ ಆವಶ್ಯಕ.

ಕರ್ಮಯೋಗದಲ್ಲಿ ಮೂರು ಮುಖ್ಯಾಂಶಗಳಿವೆಯೆಂದು ರಾಮಾನುಜರು ನಿರೂಪಿಸಿದ್ದಾರೆ. ಅವುಯಾವುವೆಂದರೆ

೧) ಜೀವಾತ್ಮನ ಸ್ವರೂಪಜ್ಞಾನದ ಅನುಸಂಧಾನ

೨) ಮಾಡುತ್ತಿರುವ ಕರ್ಮಗಳಲ್ಲಿ ಫಲಾಪೇಕ್ಷೆಯಿಲ್ಲದಿರುವುದು

೩) ಮಾಡುವ ಕರ್ಮ ಭಗವಂತನ ಆರಾಧನೆ ಎಂಬ ಭಾವ

ಆತ್ಮಸ್ವರೂಪದ ಯಥಾತ್ಮ್ಯಜ್ಞಾನದ ಅನುಸಂಧಾನದಿಂದ ಆತ್ಮನ ನಿತ್ಯತ್ವ ಮತ್ತು ಪ್ರಕೃತಿವಿಲಕ್ಷಣತ್ವ ಚೆನ್ನಾಗಿ ಧೃಢವಾಗುತ್ತದೆ. ಪ್ರಕೃತಿಸಂಬಂಧದ ಕಾರಣ ಶುದ್ಧ ಸ್ವರೂಪನಾದ ಆತ್ಮನಿಗೆ ಪುಣ್ಯಪಾಪರೂಪಕರ್ತೃತ್ವ ಬಂದಿದೆಯೆಂಬುವೂ ನಿಶ್ಚಿತವಾಗುತ್ತದೆ.

ಫಲಾಭಿಸಂಧಿರಹಿತವಾಗಿ ಕರ್ಮಾನುಷ್ಠಾನ ಮಾಡುವುದರಿಂದ ಮಾಡುವ ಕರ್ಮಗಳೆಲ್ಲದರ ಸಂಬಂಧವನ್ನು ಬಿಡಿಸಿಕೊಳ್ಳಲು ಬುದ್ಧಿಯೋಗ ಅವಶ್ಯಕವೆಂದು ಸ್ಪಷ್ಟವಾಗುತ್ತದೆ. ಈ ಬುದ್ಧಿಯೋಗದಿಂದ ಜ್ಞಾನನಿಷ್ಠೆ ಬೆಳೆಯುತ್ತದೆ. ಈಶ್ವರಾರಾಧನರೂಪವಾಗಿ ಕರ್ಮವನ್ನು ಮಾಡಬೇಕೆಂಬುವುದರಿಂದ ಕರ್ಮಬಂಧನದಿಂದ ಮುಕ್ತರಾಗಲು ಪರಮಕಲ್ಯಾಣಸ್ವರೂಪನಾದ ಪರಮಾತ್ಮನಲ್ಲಿ ಭಕ್ತಿಶ್ರದ್ಧೆಗಳನ್ನು ಬೆಳೆಸಿಕೊಳ್ಳಬೇಕೆಂಬುದು ಸ್ಪಷ್ಟವಾಗುತ್ತದೆ. ಜೀವನನ್ನು ಸಂಸಾರಕ್ಕೆ ಕಟ್ಟಿಹಾಕುವ ವಿವಿಧವಾದ ಕರ್ಮಗಳೆಲ್ಲಾ ಇಲ್ಲಿ ಪರಮಾತ್ಮನ ಆರಾಧನೆಯ ರೂಪವನ್ನು ಹೊಂದಿದುದಾಗಿ ಪರಮಾತ್ಮನ ದಯೆಯನ್ನು ಹರಿಸುವುದಕ್ಕೆ ಸಾಧಕವಾಗುತ್ತವೆ. ಇದರಿಂದ ಸಂಸಾರದ ಬಂಧ ಕಳಚಿಹೋಗುವುದಕ್ಕೆ ಅವಕಾಶವಾಗುತ್ತದೆ. ಕರ್ಮಯೋಗದಲ್ಲಿ ಹೀಗೆ ಜ್ಞಾನ ಮತ್ತು ಭಕ್ತಿಯ ಅಂಶಗಳು ಸೇರಿಕೊಂಡಿವೆ. ತತ್ವತ್ರಯದ ಯಥಾರ್ಥಜ್ಞಾನ ಕರ್ಮಯೋಗಾರಂಭಕ್ಕೂ ನಿರ್ವಹಣೆಗೂ ಆವಶ್ಯಕ. ಈಶ್ವರನ ಅನುಗ್ರಹವಿಲ್ಲದೆ ಇಂದ್ರಿಯ ಜಯವಾಗಲೀ ಸ್ಥಿತಪ್ರಜ್ಞತೆಯಾಗಲೀ ಲಭಿಸುವುದಿಲ್ಲ. ಅದಕ್ಕಾಗಿಯೇ ಈಶ್ವರಾರಾಧನ ರೂಪವಾಗಿ ಕರ್ಮಯೋಗದ ಅನುಷ್ಠಾನವನ್ನು ವಿಧಿಸಲಾಗಿದೆ.

ಕರ್ಮಯೋಗ ಜ್ಞಾನಯೋಗಗಳ ವೈಲಕ್ಷಣ್ಯ

ಆತ್ಮಾವಲೋಕನವನ್ನು ಸಾಧಿಸಲು ಕರ್ಮಯೋಗ ಮತ್ತು ಜ್ಞಾನಯೋಗಗಳು ಎರಡು ಬೇರೆ ಬೇರೆ ಮಾರ್ಗಗಳಾಗಿವೆ. ಇವೆರಡೂ ಬೇರೆ ಬೇರೆ ಬಗೆಯ ಅಧಿಕಾರಿಗಳಿಗೆ ಅನ್ವಯಿಸುತ್ತವೆ 'ಲೋಕೇಸ್ಮಿನ್ ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾನಘ ।

acharya.org

ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಂ || ಎಂದು ಗೀತಾಚಾರ್ಯ ತಿಳಿಸಿದ್ದಾನೆ. 'ಅಸ್ಮಿನ್ ಲೋಕೇ ವಿಚಿತ್ರಾಧಿಕಾರಸಂಪೂರ್ಣೇ ದ್ವಿವಿಧಾ ನಿಷ್ಠಾ ಜ್ಞಾನಕರ್ಮ ವಿಷಯಾ ಯಥಾಧಿಕಾರಂ ಅಸಂಕೀರ್ಣೇವ ಮಯೋಕ್ತಾ' (ಗೀ. ಭಾ. III-3) ಎಂದು ರಾಮಾನುಜರು ಇದನ್ನು ವಿವರಿಸುತ್ತಾರೆ. ಈ ಲೋಕದಲ್ಲಿ ಬೇರೆ ಬೇರೆ ಮಟ್ಟದ ಅಧಿಕಾರಿಗಳಿದ್ದಾರೆ. ಆದ್ದರಿಂದ ಎಲ್ಲರೂ ಜ್ಞಾನಯೋಗವನ್ನೇ ಆರಂಭಿಸಲಾರರು ಕೆಲವರಿಗೆ ಕರ್ಮಯೋಗವೇ ಶ್ರೇಯಸ್ಕರ. ಮೋಕ್ಷಾಭಿಲಾಷೆ ಉಂಟಾದ ಮಾತ್ರಕ್ಕೇ ಲೋಕದ ಪುರುಷರಿಗೆಲ್ಲಾ ಜ್ಞಾನಯೋಗಕ್ಕೆ ಅಧಿಕಾರ ಸಿದ್ಧಿಸುವುದಿಲ್ಲ. ಸಾಂಖ್ಯರೆಂಬುವರು ಆತ್ಮೈಕವಿಷಯವಾದ ಬುದ್ಧಿಯಿಂದ ಕೂಡಿದವರು. ಅಷ್ಟು ಅರ್ಹತೆ ಇಲ್ಲದ ಕರ್ಮಯೋಗಾಧಿಕಾರಿಗಳು ಯೋಗಿಗಳು.

'ಆತ್ಮೈಕವಿಷಯಯಾ ಬುದ್ಧ್ಯಾ ಯುಕ್ತಾಃ ಸಾಂಖ್ಯಾಃ । ಅತದರ್ಹಾಃ ಕರ್ಮಯೋಗಾಧಿಕಾರಿಣೋ ಯೋಗಿನಃ ।' (III-3). ಯಾರ ಮನಸ್ಸು ಸಂಶಯಾದಿಗಳಿಂದ ಆಕುಲವಾಗಿಲ್ಲವೋ ಅವರು ಜ್ಞಾನಯೋಗಕ್ಕೆ ಅರ್ಹರು. ಇಂದ್ರಿಯಾರ್ಥಗಳಿಂದ ವಿಚಲಿತವಾದ ಮನಸ್ಸುಳ್ಳವರು ಕರ್ಮಯೋಗದಿಂದಲೇ ತಮ್ಮ ಸಾಧನೆಯನ್ನು ಆರಂಭಮಾಡಬೇಕು. ಇದನ್ನೇ ದೇಶಿಕರು 'ಶಕ್ತಾಶಕ್ತವಿಷಯತಯಾ ಜ್ಞಾನಕರ್ಮಯೋಗ ವ್ಯವಸ್ಥಾ' ಎಂದು ವಿವರಿಸಿದ್ದಾರೆ. ಕರ್ಮಯೋಗವಿಲ್ಲದೆ ಜ್ಞಾನಯೋಗ ಯಾರಿಗೂ ಸಾಧ್ಯವಿಲ್ಲ-'ನ ಕರ್ಮಣಾಂ ಅನಾರಂಭಾತ್ ನೈಷ್ಕರ್ಮ್ಯಂ ಪುರುಷೋಶ್ನುತೇ'-ಕರ್ಮಗಳನ್ನು ಬಿಟ್ಟ ಮಾತ್ರಕ್ಕೆ ಜ್ಞಾನನಿಷ್ಠೆ ಲಭಿಸುವುದಿಲ್ಲ. ಇದನ್ನೇ ದೇಶಿಕರವರು ಸ್ಪಷ್ಟವಾಗಿ—'ಕರ್ಮಯೋಗಾನಾರಂಭೇ ಜ್ಞಾನಯೋಗಾಸಿದ್ಧಿಃ ಸ್ಯಾದಿತಿ ವಾಕ್ಯಾರ್ಥಃ । ಉತ್ತರತ್ರ ತು ಯತ್ಕರ್ಮಯೋಗತ್ಯಾಗಾದೇವ ಜ್ಞಾನಯೋಗಸಿದ್ಧಿರಿತಿ ಅಭಿಪ್ರೇತಮ್ ತದಯುಕ್ತಂ । ಸಾ ಹಿ ತೇನೈವ ಜನ್ಯೇತಿ ತಾತ್ಪರ್ಯಮ್ ।' ಎಂದು ಉದ್ಘೋಷಿಸಿದ್ದಾರೆ.

ಕರ್ಮಯೋಗವನ್ನಾಚರಿಸದೆ ಜ್ಞಾನಯೋಗವನ್ನಾಚರಿಸುವುದು ಶಕ್ಯವಿಲ್ಲ. ನಿಷ್ಕಾಮ ಕರ್ಮವನ್ನು ಮಾಡದೆ ಭಗವದ್ದಯೆ ಉಂಟಾಗುವುದಿಲ್ಲ. ಈ ದಯೆ ನಮ್ಮ ಮೇಲೆ ಆಗದೆ ನಮ್ಮ ಪಾಪ ಸಂಚಯ ಹೋಗುವುದಿಲ್ಲ. ಪಾಪಸಂಚಯ ಹೋಗದೆ ರಾಗದ್ವೇಷಾದಿಗಳು ನಾಶವಾಗುವುದಿಲ್ಲ. ರಾಗದ್ವೇಷಗಳಿರುವವರೆಗೂ ಇಂದ್ರಿಯ ವ್ಯಾಕುಲತೆ ಇದ್ದೇ ಇರುತ್ತದೆ. ಬಹಿರ್ವಿಷಯಗಳಲ್ಲಿ ವ್ಯಾಕುಲತೆ ಇರುವಾಗ ಜ್ಞಾನನಿಷ್ಠೆ ಸಿದ್ಧಿಸುವುದಿಲ್ಲ. ಆದುದರಿಂದಲೇ ಕರ್ಮಯೋಗವನ್ನಾಚರಿಸದೆ ಜ್ಞಾನನಿಷ್ಠೆಯನ್ನು ಪಡೆಯುವುದು ಅಸಾಧ್ಯವೇ ಸರಿ.

ಕರ್ಮಯೋಗ ಜ್ಞಾನಯೋಗಗಳೆರಡೂ ಆತ್ಮಾವಲೋಕನವನ್ನೇ ಗುರಿಯನ್ನಾಗಿ ಹೊಂದಿವೆ. ಅವುಗಳೆರಡಕ್ಕೂ ಬೇರೆ ಬೇರೆ ಫಲಗಳಿಲ್ಲ. ಕೆಲವರು ಕರ್ಮಯೋಗಕ್ಕೆ

acharya.org

ಜ್ಞಾನಯೋಗ ಫಲವೆಂದೂ ಜ್ಞಾನಯೋಗಕ್ಕೆ ಆತ್ಮಾವಲೋಕನ ಫಲವೆಂದೂ ಹೇಳು ತ್ತಾರೆ. ಇದು ಸರಿಯಲ್ಲ ಇವುಗಳಿಗೆ ಫಲಭೇದವಿಲ್ಲ. ಕರ್ಮಯೋಗ ನೇರವಾಗಿಯಾಗಲೀ ಜ್ಞಾನಯೋಗದ ಮೂಲಕವಾಗಿಯಾಗಲೀ ಆತ್ಮಾವಲೋಕನದಲ್ಲಿ ಫಲಿಸುತ್ತದೆ. ಇವೆ ರಡೂ ಒಂದೇ ಗುರಿಯನ್ನು ಹೊಂದಿವೆ. ಇದನ್ನೇ 'ಸಾಂಖ್ಯೈಃ ಜ್ಞಾನನಿಷ್ಠೈಃ ಯದಾತ್ಮಾವಲೋಕನರೂಪಂ ಫಲಂ ಪ್ರಾಪ್ಯತೇ ತದೇವ ಕರ್ಮಯೋಗನಿಷ್ಠೈರಪಿ ಪ್ರಾಪ್ಯತೇ। ಏವಂ ಏಕಫಲತ್ವೇನೈಕಂ ವೈಕಲ್ಪಿಕಂ ಸಾಂಖ್ಯಂ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ।' ಎಂದು ಭಾಷ್ಯಕಾರರು ತಿಳಿಸುತ್ತಾರೆ.

ಇವೆರಡೂ ಏಕಫಲವನ್ನೇ ಹೊಂದಿದ್ದರೂ ಜ್ಞಾನಯೋಗಕ್ಕಿಂತ ಕರ್ಮಯೋಗ ಉತ್ತಮವಾದುದೆಂದು ಗೀತಾಚಾರ್ಯನ ಮತ. ಏಕೆಂದರೆ—

೧) ಜ್ಞಾನಯೋಗಕ್ಕಿಂತ ಕರ್ಮಯೋಗ ಮಾಡಲು ಸುಲಭವಾದುದು.

೨) ಜ್ಞಾನಯೋಗಕ್ಕಿಂತ ಶೀಘ್ರವಾಗಿ ಕರ್ಮಯೋಗ ಫಲಪ್ರದವಾಗುತ್ತದೆ.

೩) ಕರ್ಮಯೋಗವನ್ನನುಷ್ಠಿಸದೆ ಜ್ಞಾನಯೋಗ ಶಕ್ಯವಿಲ್ಲ-ಕರ್ಮಯೋಗ ದುಸ್ತ್ಯಜ.

೪) ಜ್ಞಾನಯೋಗ ಪ್ರಮಾದಯುತವಾದುದು. ಆದರೆ ಕರ್ಮಯೋಗ ಅಪ್ರಮಾದಕರವಾದುದು.

೫) ಕರ್ಮಯೋಗ ನಿಯತವಾದುದು. ಅನಾದಿವಾಸನೆಯ ಕಾರಣ ಪ್ರಕೃತಿ ಸಂಸ್ಪೃಷ್ಟವಾದುದಿದು.

೬) ಕರ್ಮಯೋಗ ಆತ್ಮಯಾಥಾತ್ಮ್ಯ ಜ್ಞಾನಪೂರ್ವಕವಾಗಿ ಆಗುವ ಕಾರಣ ಜ್ಞಾನನಿಷ್ಠೆಯ ಗುಣಗಳನ್ನೂ ಒಳಗೊಂಡಿದೆ.

ಈ ಅಂಶಗಳನ್ನು 'ಜ್ಞಾನನಿಷ್ಠಾಧಿಕಾರಿಣೋಽಪಿ ಅನಭ್ಯಸ್ತಪೂರ್ವತಯಾ ಹ್ಯನಿಯತತ್ವೇನ ದುಶ್ಶಕತ್ವಾತ್ಸಪ್ರಮಾದತ್ವಾಚ್ಚ ಜ್ಞಾನನಿಷ್ಠಾಯಾಃ ಕರ್ಮ ನಿಷ್ಠೈವ ಜ್ಯಾಯಸೀ' ಎಂದು (III-8) ರಾಮಾನುಜರು ತಿಳಿಸಿದ್ದಾರೆ.

ಕರ್ಮಯೋಗವನ್ನು ಎಲ್ಲರೂ ಆರಂಭಿಸಿ ನಡೆಸಲು ಸಾಧ್ಯ. ಜ್ಞಾನಯೋಗಕ್ಕೆ ಅಸಮರ್ಥರಾದವರೂ ಹಾಗೆಯೇ ಸಮರ್ಥರಾದವರೂ ಸಹ ಕರ್ಮಯೋಗವನ್ನಾರಂಭಿಸ ಬಹುದು. ಜ್ಞಾನಯೋಗಕ್ಕೆ ಯೋಗ್ಯರಾದವರೂ ಕರ್ಮಯೋಗವನ್ನೇ ಆರಂಭಿಸ ಬೇಕೆಂದು ಗೀತಾಚಾರ್ಯನ ಮತ. ಕರ್ಮಯೋಗ ಸುಶಕ, ಅಪ್ರಮಾದ, ಆತ್ಮಜ್ಞಾನ ಯುಕ್ತವಾದುದು, ನಿರಪೇಕ್ಷವಾದುದು. ಆದರೆ ಜ್ಞಾನಯೋಗ ದುಶ್ಶಕ, ಸಪ್ರಮಾದ, ಕರ್ಮಾಪೇಕ್ಷ (ಗೀ. ಭಾ III-33). ಕರ್ಮಯೋಗ ಅಭ್ಯಸ್ತ ವಿಷಯ, ಹೊಸದಾದು ದಲ್ಲ ಜ್ಞಾನಯೋಗದಂತೆ. ನೇರವಾಗಿ ಜ್ಞಾನಯೋಗವನ್ನೇ ಆರಂಭಿಸಿದವನು ರಾಗ ದ್ವೇಷಾದಿಗಳಿಗೆ ವಶನಾಗುವ ಸಂಭವ ಅಧಿಕವಾಗಿರುತ್ತದೆ. ಕರ್ಮಯೋಗವನ್ನು ಗೀತೆ

acharya.org

ಸ್ವಧರ್ಮ ಎನ್ನುತ್ತದೆ. ಪ್ರಕೃತಿ ಸಂಸ್ಪೃಷ್ಟನಾದವನು ಜ್ಞಾನಯೋಗವನ್ನು ಪಡೆಯುವುದೂ ಕಷ್ಟ. ಮಧ್ಯೇ ಅಪಾಯ ಒದಗಿದರೆ ಜ್ಞಾನಯೋಗ ವಿಫಲವಾಗುತ್ತದೆ. ಆದರೆ ಕರ್ಮ ಯೋಗ ಆ ರೀತಿಯಲ್ಲಿ ನಿಷ್ಫಲವಾಗುವುದಿಲ್ಲ. ಕಾಮಕ್ರೋಧಗಳನ್ನು ಜಯಿಸಲು ಕರ್ಮಯೋಗವೇ ಉಪಾಯ. ಆದುದರಿಂದ ಅದು ಆತ್ಮ ಸಾಕ್ಷಾತ್ಕಾರಕ್ಕೆ ಅತ್ಯಂತ ಸಮರ್ಥವಾದ ಉಪಾಯವಾಗಿದೆ.

ಕರ್ಮಯೋಗವನ್ನನುಷ್ಠಿಸದೆ ಕಾಮರೂಪವಾದ ಶತ್ರುವಿನ ಜಯ ಸಾಧ್ಯವಿಲ್ಲ. ಗೀತೆ 'ದುರಾಸದ' ಎಂದು ಕಾಮವನ್ನು ಕರೆಯುತ್ತದೆ. ಇದನ್ನೇ ರಾಮಾನುಜರು ವಿವರಿಸುವಾಗ 'ಅನನುಷ್ಠಿತಕರ್ಮಯೋಗೈಃ ಅನಿರಸ್ತಪಾಪೈಃ ಅಗೃಹೀತ ಸದ್ವೃಢ' ಸತ್ತ್ವಕವಚೈಃ ದೋಷದರ್ಶನೇಪಿ ಅಪಾಕರ್ತುಂ ಅಶಕ್ಯಮಿತ್ಯರ್ಥಃ' ಎಂದು 'ದುರಾಸದ ಎಂಬ ಶಬ್ದಕ್ಕೆ ಅರ್ಥನಿರೂಪಣೆ ಮಾಡಿದ್ದಾರೆ.

ಕರ್ಮಯೋಗದಲ್ಲಿ ಅಂತರ್ಗತವಾಗಿರುವ ಆತ್ಮಜ್ಞಾನದ ಕಾರಣ ಕರ್ಮಯೋಗಿ ಅದರ ನಿರಂತರವಾದ ಅನುಸಂಧಾನದ ಮೂಲಕ ಜ್ಞಾನಾಭ್ಯಾಸವನ್ನೇ ಕರ್ಮದ ಮೂಲಕ ಮಾಡುವವನಾಗುತ್ತಾನೆ. ಇಂಥ ಕರ್ಮಯೋಗಿಯನ್ನು ಗೀತೆ

> 'ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ ಜಿತೇಂದ್ರಿಯಃ |
> ಸರ್ವಭೂತಾತ್ಮಭೂತಾತ್ಮಾ' ||

ಎಂದಂ ಹೇಳುತ್ತದೆ.

ಕರ್ಮಯೋಗಿ ವಿಶುದ್ಧಾತ್ಮಾ. ಕಾಮಗಳ ಸಂಪರ್ಕವಿಲ್ಲದ ಕಾರಣ ಅವನ ಮನಸ್ಸು ಪರಿಶುದ್ಧವಾದುದು. ಕರ್ಮಾನುಷ್ಠಾನವನ್ನು ಅವನು ಭಗವದಾರಾಧನರೂಪ ವಾಗಿ ಮಾಡುತ್ತಾನೆ. ಸುಖದುಃಖಗಳ ಪ್ರಾಪ್ತಿ ಅವನ ಕರ್ಮಗಳ ಉದ್ದೇಶವಲ್ಲ. ಅವನು ತನ್ನ ಕರ್ಮಗಳನ್ನೆಲ್ಲಾ ಭಗವದರ್ಪಣಮಾಡುವನು. ನಿಷ್ಕಾಮ ಕರ್ಮಗಳಲ್ಲಿ ಅವನು ತೊಡಗುವ ಕಾರಣ ಮನಸ್ಸನ್ನು ಅವನು ಜಯಿಸಿರುತ್ತಾನೆ. ಕ್ರಮವಾಗಿ ಮನಸ್ಸನ್ನವನು ತನ್ನ ಸ್ವಾಧೀನಕ್ಕೊಳಪಡಿಸಿರುತ್ತಾನೆ. ಆದುದರಿಂದ ಅವನು ವಿಜಿತಾತ್ಮಾ ಎನಿಸುವನು.

ಮನಸ್ಸನ್ನವನು ಗೆದ್ದಿರುವ ಕಾರಣ ಇಂದ್ರಿಯಜಯ ಅವನಿಗೆ ಲಭಿಸುತ್ತದೆ. ಇಂದ್ರಿಯಗಳ ಆಕರ್ಷಣೆಗಳಿಗೊಳಗಾಗದವನು ಯೋಗಿಯೇ ಆಗುವನು. ಕರ್ಮಯೋಗ ದಲ್ಲಿ ಆತ್ಮಸ್ವರೂಪದ ಅನುಸಂಧಾನವೂ ಇರುವ ಕಾರಣ ಕರ್ಮಯೋಗಾಭ್ಯಾಸ ಮಾಡಿದವನು ತನ್ನ ಹಾಗೂ ಇತರರೆಲ್ಲರ ಆತ್ಮಗಳೂ ಜ್ಞಾನಸ್ವರೂಪವನ್ನು ಹೊಂದಿ ಒಂದೇ ರೂಪವಾಗಿರುವುದೆಂಬುದನ್ನು ಮನಗಾಣುತ್ತಾನೆ. ವಿವಿಧವೂ ವಿಚಿತ್ರವೂ ಆದ ದೇಹಯೋಗಕ್ಕೆ ಅವರವರ ಕರ್ಮ ಕಾರಣವೆಂಬುದೂ ಸ್ಪಷ್ಟವಾಗುತ್ತದೆ, ಆದುದರಿಂದ ಅವನು ಸರ್ವಭೂತಾತ್ಮಭೂತಾತ್ಮಾ ಆಗುತ್ತಾನೆ. ಹೀಗೆ ಕರ್ಮಯೋಗ ಜ್ಞಾನಯೋಗ

acharya.org

ಕ್ಕಿಂತ ಹೆಚ್ಚಿನ ಸೌಕರ್ಯಗಳನ್ನು ಹೊಂದಿದೆ.

ಕರ್ಮಯೋಗವನ್ನನುಷ್ಠಿಸುವ ರೀತಿ

ಲೋಕವು ಕರ್ಮದ ಕಟ್ಟಳೆಗೊಳಗಾಗಿರುವ ಕಾರಣ ಕರ್ಮವನ್ನು ಮಾಡದೆ ಯಾರೂ ಇರುವುದಕ್ಕಾಗುವುದಿಲ್ಲ. ಹೇಗಾದರೂ ಮಾಡಲೇ ಬೇಕಾಗಿರುವ ಕರ್ಮವನ್ನು ಫಲದಲ್ಲಿ ಅನಾಸಕ್ತಿಯಿಂದ ಮಾಡಿದರೆ ಅದು ಉತ್ತಾರಕವಾದೀತು ! ಕರ್ಮಮಾಡುವ್ರುದಂತೂ ತಪ್ಪಿದಲ್ಲ. ಜ್ಞಾನಿಯೂ ಶರೀರಧಾರಣಾರ್ಥವಾಗಿ ಕರ್ಮ ಮಾಡಲೇಬೇಕಾಗಿದೆ. 'ನ ಮೇ ಪಾರ್ಥಾಸ್ತಿ ಕರ್ತವ್ಯಂ ವರ್ತ ಏವ ಹಿ ಕರ್ಮಣಿ'। ಎಂದು ಪರಮಾತ್ಮನೇ ಹೇಳುತ್ತಾನೆ. ಸಂಸಾರದಲ್ಲಿರುವವರೆಗೆ ಕರ್ಮಬಂಧನ ತಪ್ಪಿದ್ದಲ್ಲ. ಮಾಡುವ ಕರ್ಮ ಬಂಧಕವಾಗದಂತೆ, ಮೋಚಕವಾಗುವಂತೆ ನಾವು ನೋಡಿಕೊಳ್ಳುವುದರಲ್ಲಿ ನಮ್ಮ ಉದ್ಧಾರದ ಮಾರ್ಗವಿದೆ. ಕರ್ಮಯೋಗವನ್ನು ಮಾಡುವ ಬಗೆ ಗೀತೆಯಲ್ಲಿ ಮೂರನೇ ಅಧ್ಯಾಯದಲ್ಲಿ ನಿರೂಪಿಸಿದೆ. ಆಚಾರ್ಯ ಯಾಮುನರು ಈ ವಿಧಾನಗಳನ್ನು

> ಅಸಕ್ತ್ಯಾ ಲೋಕರಕ್ಷಾಯೈ ಗುಣೇಷ್ವಾರೋಪ್ಯ ಕರ್ತೃತಾಂ ।
> ಸರ್ವೇಶ್ವರೇ ವಾ ನ್ಯಸ್ಯೋಕ್ತಾ ತೃತೀಯೇ ಕರ್ಮಕಾರ್ಯತಾ ॥

ಎಂದು ಸಂಗ್ರಹಿಸಿದ್ದಾರೆ.

ಮೊದಲಾಗಿ ನಾವು ಮಾಡುವ ಕರ್ಮದಲ್ಲಿ ನಮಗೆ ಫಲಾಭಿಸಂಧಿ ಇರಬಾರದು. ನಮ್ಮ ಕೆಲವು ಪ್ರಯೋಜನಗಳಿಗಾಗಿ ನಾವು ಮಾಡುವ ಕರ್ಮ ಆಯಾ ಫಲಗಳ ದ್ವಾರಾ ನಮ್ಮನ್ನು ಸಂಸಾರಕ್ಕೆ ಕಟ್ಟಿಹಾಕುತ್ತದೆ. ಫಲಪ್ರಾಪ್ತಿಯಿಂದ ಸಂತೋಷವೂ ಫಲಪ್ರಾಪ್ತಿಯಾಗದೆ ಹೋದರೆ ದುಃಖವೂ ನಮಗೆ ತಪ್ಪುವುದಿಲ್ಲ. ಐಹಿಕವಾದ ಅಭಿವೃದ್ಧಿಯನ್ನು ಕುರಿತು ಮಾಡುವ ಕರ್ಮ ಯಾವತ್ತೂ ದುಃಖಮೂಲವಾಗಿರುತ್ತದೆ. ಆದರೆ ಫಲದಲ್ಲಿ ಆಸಕ್ತಿಯನ್ನು ಹೊಂದದೆ ಭಗವಂತನ ಪ್ರೀತ್ಯರ್ಥವಾಗಿ ಅವನ ಆರಾಧನೆಯ ರೂಪವಾಗಿ ಮಾಡತಕ್ಕ ಕರ್ಮ ಸರ್ವಶ್ರೇಷ್ಠವಾಗುವುದು. ಸ್ವಾರ್ಥದ ಸೋಂಕಿಲ್ಲದೆ ಮಾಡುವ ಕರ್ಮಕ್ಕೆ ಮಿಗಿಲಾದುದು ಮತ್ತೊಂದಿಲ್ಲ. ಭಗವತ್ಪ್ರೀತಿಗಿಂತ ಬೇರೆ ಪ್ರಯೋಜನ ಅದಕ್ಕಿರುವುದಿಲ್ಲ. ಆತ್ಮಯಥಾತ್ಮ್ಯಜ್ಞಾನಪೂರ್ವಕವಾಗಿ ಭಗವದಾರಾಧನ ರೂಪವಾಗಿ ಕರ್ಮಮಾಡುವನು ಉತ್ತಮ ಸಾಧಕನಾಗುತ್ತಾನೆ.

ಜ್ಞಾನಯೋಗಕ್ಕೆ ಅಧಿಕಾರಿಯಾದವನೂ ಕರ್ಮಯೋಗವನ್ನೇ ಮಾಡುವುದು ಶ್ರೇಯಸ್ಕರವೆಂಬುದು ಗೀತಾಚಾರ್ಯನ ಮತ. ಜನಕ ಮೊದಲಾದವರು ಲೋಕಸಂಗ್ರಹಕ್ಕಾಗಿ ಕರ್ಮಯೋಗವನ್ನೇ ಮಾಡಿದರು. 'ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ' ಎಂದು ಗೀತಾಚಾರ್ಯ ಹೇಳಿದ್ದಾನೆ. ಉತ್ತಮರೂ ಅಭಿಜಾತರೂ ನಡೆದಂತೆ ಸಾಮಾನ್ಯಜನರೂ ಲೋಕದಲ್ಲಿ ನಡೆಯುತ್ತಾರೆ. ಆದುದರಿಂದ

acharya.org

ಇಂಥ ಉತ್ತಮರಿಗೆ ಬಹಳ ಹೆಚ್ಚಿನ ಜವಾಬ್ದಾರಿ ಇದೆ. ಸಾಮಾನ್ಯ ಜನರಿಗೆ ಸರಿಯಾದ ಮಾರ್ಗವನ್ನು ತೋರಿಸುವುದಕ್ಕಾಗಿ ಇವರು ತಮಗೆ ಕಠಿಣವಾದ ಜ್ಞಾನಮಾರ್ಗದಲ್ಲಿ ನಡೆಯುವ ಸಾಮರ್ಥ್ಯವಿದ್ದರೂ ಸುಲಭವಾದ ಕರ್ಮಯೋಗವನ್ನೇ ಆಚರಿಸಿ ಸಾಮಾನ್ಯರಿಗೆ ಮಾರ್ಗದರ್ಶಕರಾಗಬೇಕು. ಹೀಗೆ ಲೋಕಸಂಗ್ರಹಕ್ಕಾಗಿಯೂ ಕರ್ಮಯೋಗವನ್ನೇ ಆಚರಿಸಬೇಕು. ಲೋಕದಲ್ಲಿ ಕಂಡುಬರುತ್ತಿರುವ ಕರ್ತೃತ್ವ ಪ್ರಕೃತಿಯ ಗುಣಗಳ ಸಂಬಂಧದ ಕಾರಣ ಉಂಟಾಗಿರುವುದಾಗಿದೆ. ಆತ್ಮಸ್ವರೂಪವನ್ನು ಸರಿಯಾಗಿ ತಿಳಿದವನು ತಾನೇ ಕರ್ತೃವೆಂದು ಭ್ರಮಿಸುವುದಿಲ್ಲ. ಅಂಥವನು ಕರ್ತೃತ್ವಾಭಿಮಾನವನ್ನು ಬಿಟ್ಟುಬಿಟ್ಟವನಾಗಿ ಪ್ರಕೃತಿಯ ಗುಣಗಳ ಸಂಬಂಧದಿಂದ ಆ ಕರ್ತೃತ್ವ ಉಂಟಾದುದೆಂದು ಭಾವಿಸುತ್ತಾನೆ. ಈ ರೀತಿಯಲ್ಲಿ ಗುಣಗಳಲ್ಲಿ ಕರ್ತೃತ್ವವನ್ನು ಅನುಸಂಧಾನ ಮಾಡುವುದರಿಂದ ಆತ್ಮಸ್ವರೂಪ ವಿಶದವಾಗಿ, ದೇಹಾತ್ಮ ವಿವೇಕ ಉಂಟಾಗುವುದು.

ಕರ್ತೃತ್ವವನ್ನು ಪ್ರಕೃತಿಯ ಗುಣಗಳಲ್ಲಿ ಅನುಸಂಧಾನ ಮಾಡುವುದಾದರೆ ಸಾಂಖ್ಯಸಿದ್ಧಾಂತಕ್ಕೂ ಅದಕ್ಕೂ ವ್ಯತ್ಯಾಸವಿರುವುದಿಲ್ಲವೆಂಬ ಸಂದೇಹಕ್ಕೆ ಅವಕಾಶವಿಲ್ಲ. ಏಕೆಂದರೆ ಆತನ ಕರ್ತೃತ್ವವನ್ನು ಈ ಸಿದ್ಧಾಂತ ನಿರಾಕರಿಸುವುದಿಲ್ಲ. ಸೂತ್ರಗಳು 'ಕರ್ತಾ ಶಾಸ್ತ್ರಾರ್ಥವತ್ವಾತ್'ಎಂದು ಹೇಳಿ, ಜೀವನಿಗೆ ಸಹಜವಾದ ಕರ್ತೃತ್ವವುಂಟೆಂದು ಸಮರ್ಥಿಸುತ್ತವೆ. ಇಲ್ಲಿ ಮಾಡುವ 'ಅಕರ್ತೃತ್ವಾನುಸಂಧಾನ' ಈ ಸಹಜಸಿದ್ಧವಾದ ಕರ್ತೃತ್ವವನ್ನು ನಿಷೇಧಿಸುವುದಿಲ್ಲ. ಆದರೆ ಸಂಸಾರಾವಸ್ಥೆಯಲ್ಲಿ ಪ್ರಕೃತಿಸಂಬಂಧದಿಂದ ಉಂಟಾಗಿರುವ ಪುಣ್ಯ ಪಾಪ ರೂಪಕರ್ತೃತ್ವವನ್ನು ಇಲ್ಲಿ ಪ್ರಕೃತಿಯಲ್ಲಿ ಅನುಸಂಧಾನ ಮಾಡಬೇಕೆಂದು ಉಪದೇಶಿಸಿದೆ. ಈ ಕರ್ತೃತ್ವ ತನಗೆ ಸಹಜವಾದುದಲ್ಲವೆಂದೂ ನಡುವೆ ಪ್ರಕೃತಿ ಸಂಬಂಧದಿಂದ ಬಂದಿರುವುದೆಂದೂ ಅನುಸಂಧಾನ ಮಾಡಬೇಕು. ಪುಣ್ಯಪಾಪ ರೂಪ ಕರ್ತೃತ್ವವನ್ನು ತಾನು ಅತಿಕ್ರಮಿಸಬಹುದೆಂಬ ಭರವಸೆ ಇದರಿಂದ ದೊರಕುತ್ತದೆ. ಸಂಸಾರಾವಸ್ಥೆಯಲ್ಲಿ ಈ ಪುಣ್ಯಪಾಪರೂಪ ಕರ್ತೃತ್ವ ಉಂಟಾಗುತ್ತದೆ. ಆದ್ದರಿಂದ ಗುಣಗಳಲ್ಲಿ ಕರ್ತೃತ್ವಾನುಸಂಧಾನ ಮಾಡಬೇಕೆಂದು ಹೇಳಿರುವುದು ಸಾಂಖ್ಯಸಿದ್ಧಾಂತವಾಗುವುದಿಲ್ಲ. ದೇಶಿಕರವರು ಇದನ್ನು 'ಗುಣೇಷು ಕರ್ತೃತ್ವಾನುಸಂಧಾನಂ ಚೇದಂ—ಆತ್ಮನೋ ನ ಸ್ವರೂಪ ಪ್ರಯುಕ್ತಮಿದಂ ಕರ್ತೃತ್ವಂ ಅಪಿತು ಗುಣಸಂಪರ್ಕಕೃತಮಿತಿ ಪ್ರಾಪ್ತಾಪ್ರಾಪ್ತ ವಿವೇಕೇನ ಗುಣಕೃತಂ ಇತ್ಯನುಸಂಧಾನಂ', ಎಂದು ವಿವರಿಸುತ್ತಾರೆ. ಆದ್ದರಿಂದ ಎಲ್ಲ ಕರ್ಮಗಳನ್ನೂ ಮಾಡಬೇಕು ; ಬಿಡಬಾರದು. ಮಾಡುವ ಕರ್ಮದ ಬಗೆಗೆ 'ಗುಣಾ ಗುಣೇಷು ವರ್ತಂತೇ ಇತಿ ಮತ್ವಾ ನ ಸಜ್ಜತೇ' ಎಂದು ಹೇಳಿದಂತೆ ಅಕರ್ತೃತ್ವಾನುಸಂಧಾನವನ್ನು ಮಾಡಬೇಕು. ಕರ್ತೃತ್ವಾಭಿಮಾನವನ್ನು ತ್ಯಜಿಸುವುದಕ್ಕೆ ಈ ಅನುಸಂಧಾನ ಸಾಧಕ. ಇದರಿಂದ ತನ್ನ ಈ ಕರ್ತೃತ್ವ ಗುಣಕೃತ್ವವೇ ವಿನಾ ಸ್ವರೂಪ ಪ್ರಯುಕ್ತವಾದುದಲ್ಲವೆಂಬ ಅರಿವುಂಟಾಗುತ್ತದೆ. ಈ ರೀತಿ ಅನುಸಂಧಾನ

acharya.org

ಮಾಡುವುದರಿಂದ ಕರ್ಮ ಬಂಧಕವಾಗುವುದಿಲ್ಲ. ರಾಮಾನುಜರು ಈ ಅಂಶವನ್ನು ಗೀತಾಭಾಷ್ಯದಲ್ಲಿ ಸ್ಪಷ್ಟಪಡಿಸಿದ್ದಾರೆ. ಶರೀರ ಮತ್ತು ಇಂದ್ರಿಯಗಳ ರೂಪವನ್ನು ಹೊಂದಿರುವ ಪ್ರಕೃತಿಯ ಸಂಬಂಧದಿಂದ ಆತ್ಮರುಗಳಿಗೆ ಆಯಾ ಶರೀರಗಳಿಗೆ ಅಸಾಧಾರಣ ವಾದ ಕರ್ತೃತ್ವ ಉಂಟಾಗುತ್ತದೆ. ಆದರೆ ಆದೆಲ್ಲಾ ಆತ್ಮಸ್ವರೂಪ ಪ್ರಯುಕ್ತವಾದುದಲ್ಲ. 'ಅನಾದಿಕಾಲಪ್ರವೃತ್ತ-ಪೂರ್ವಪೂರ್ವಕರ್ಮಜನಿತ-ದೇವಾದ್ಯಾಕಾರ-ಪ್ರಕೃತಿ ಸಂಸರ್ಗ ತತ್ತ್ವದಭಿಮಾನಜನಿತವಾಸನಾಕೃತಮೀದೃಶಂ ಕರ್ತೃತ್ವಾದಿಕಂ ಸರ್ವಂ ನ ಸ್ವರೂಪ ಪ್ರಯುಕ್ತಂ ಇತ್ಯರ್ಥಃ' (ಗೀ ಭಾ. 5-14). ಈ ರೀತಿಯ ಅಕರ್ತೃತ್ವಾನುಸಂಧಾನ ಕರ್ಮಯೋಗದಲ್ಲಿ ಮುಖ್ಯವಾದ ಅಂಶವಾಗಿದೆ.

ಸಂಸಾರಾವಸ್ಥೆಯಲ್ಲಿ ವಿವಿಧವಾದ "ಕರ್ಮಗಳ ಅನುಷ್ಠಾನಕ್ಕೆ ಪ್ರಕೃತಿಯ ಗುಣಸಂಪರ್ಕ ಕಾರಣವೆಂದೂ ಸಂಸಾರಿ ಜೀವನ ಕರ್ತೃತ್ವ ಗುಣಕೃತವೆಂದೂ ಹೇಳಿದ ನಂತರ ಆ ಕರ್ತೃತ್ವವನ್ನು ಈಶ್ವರನಲ್ಲಿ ಅನುಸಂಧಾನ ಮಾಡಬೇಕೆಂದು ಗೀತೆ ಉಪದೇಶಿ ಸುತ್ತದೆ. ಸಕಲ ಚೇತನಾಚೇತನ ಪದಾರ್ಥಗಳಲ್ಲಿ ಈಶ್ವರನು ಅಂತರ್ಯಾಮಿಯಾಗಿ ದ್ದಾನೆ. ಅವನ ಅನುಗ್ರಹದಿಂದಲೇ ಕರ್ತೃತ್ವದ ಲಾಭ ಜೀವನಿಗೆ ಅಗುತ್ತದೆ. ಈ ಗುಣ ಕೃತವಾದ ಕರ್ತೃತ್ವವನ್ನು ಆ ಸರ್ವೇಶ್ವರನಲ್ಲಿ ಅನ್ವಯಿಸುವುದು ಅತ್ಯಾವಶ್ಯಕ. ಎಲ್ಲರ ಹೃದಯದೇಶದಲ್ಲಿರುತ್ತಾ 'ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ' ಎಂದು ಹೇಳಿದಂತೆ ಸರ್ವಪ್ರೇರಕನಾಗಿರುವ ಅವನ ಸಂಕಲ್ಪಕ್ಕನುಸಾರ ವಾಗಿಯೇ ಎಲ್ಲರೂ ಕರ್ಮಪರರಾಗಿರುವುದು. ಅವನು ನಮ್ಮೆಲ್ಲರಿಂದಲೂ ಅವನ ಪ್ರೀತಿ ಗಾಗಿಯೇ ತಾನೇ ತನ್ನ ಬಗೆಬಗೆಯಾದ ಕೆಲಸಗಳನ್ನು ಮಾಡಿಸುತ್ತಿದ್ದಾನೆಂದು ತಿಳಿಯು ವುದೇ ಬಹಳ ಮುಖ್ಯವಾದುದು. ಈ ಅನುಸಂಧಾನ ನಿರಂತರವಾಗಬೇಕು. ಆದುದ ರಿಂದಲೇ ಇದು ಸಾತ್ವಿಕ ತ್ಯಾಗವಾಗುತ್ತದೆ. 'ಸ್ವಕೀಯೈಶ್ಚೋಪಕರಣೈಃ ಸ್ವಾರಾಧನೈಕ ಪ್ರಯೋಜನಾಯ ಪರಮಪುರುಷಃ ಸ್ವಸ್ಮೈ ಸ್ವಪ್ರೀತಯೇ ಸ್ವಯಮೇವ ಕಾರಯತಿ' ಎಂಬ ಭಾವ ಬಲಿಯಬೇಕು. ಆದುದರಿಂದ ಕರ್ಮಯೋಗಿ ಗುಣಕೃತವಾದ ಕರ್ತೃತ್ವಕ್ಕೂ ಮೂಲವಾದ ಪರಮಾತ್ಮನಲ್ಲಿ ಪರಮಕರ್ತೃತ್ವವನ್ನು ಅನುಸಂಧಾನ ಮಾಡಬೇಕು. ರಾಮಾನುಜರು ಭಾಷ್ಯದಲ್ಲಿ 'ಇದಾನೀಂ ಆತ್ಮನಾಂ ಪರಮಪುರುಷ ಶರೀರತಯಾ ತನ್ನಿಯಾಮ್ಯತ್ವಸ್ವರೂಪನಿರೂಪಣೇನ ಭಗವತಿ ಪುರುಷೋತ್ತಮೇ ಸರ್ವಾತ್ಮಭೂತೇ ಗುಣಕೃತಂ ಚ ಕರ್ತೃತ್ವಂ ಆರೋಪ್ಯ ಕರ್ಮಕರ್ತವ್ಯತಾ ಉಚ್ಯತೇ' (3-30) ಎಂದು ಈ ಅಂಶವನ್ನು ಸ್ಪಷ್ಟಪಡಿಸಿದ್ದಾರೆ.

ಕರ್ಮಯೋಗ ಜ್ಞಾನಾಕಾರವಾದುದು

ಕರ್ಮಯೋಗದಲ್ಲಿ ಆತ್ಮಯಾಥಾತ್ಮ್ಯಜ್ಞಾನದ ಅಂಶ ಇರುವುದರಿಂದ ಅದು

acharya.org

ಜ್ಞಾನಯೋಗಕ್ಕಿಂತ ಹೆಚ್ಚಾದುದೆಂದು ಹೇಳಲಾಯಿತು. ಜ್ಞಾನಯೋಗದ ಅಂಶವನ್ನೂ ಅದು ಅದರಿಂದಲೇ ಒಳಗೊಂಡಿದೆ. ಈ ಸಿದ್ಧಾಂತದಲ್ಲಿ ಕರ್ಮದ ಸಂಪರ್ಕವೇ ಇಲ್ಲದ ಜ್ಞಾನಯೋಗವೆಂಬುದು ಅಸಂಭವ. ಈ ಜ್ಞಾನದ ಅಂಶ ಕರ್ಮಯೋಗದಲ್ಲಿರುವುದರಿಂದಲೇ ರಾಮಾನುಜರು. 'ಅಂತರ್ಗತಜ್ಞಾನತಯಾಸ್ಯೈವ ಜ್ಞಾನಯೋಗಾಕಾರತಾಂ ಪ್ರದರ್ಶ್ಯ' (4-1) ಎಂದು ಪ್ರತಿಪಾದಿಸಿ ಜ್ಞಾನಾಂಶವು ಕರ್ಮಯೋಗದಲ್ಲಿ ಮುಖ್ಯವಾದುದೆಂದು ಸಾಧಿಸಿದ್ದಾರೆ. ಕರ್ಮಯೋಗದಲ್ಲಿ ಹೇಗೆ ಜ್ಞಾನದ ಅಂಶ ಮುಖ್ಯವಾಗಿದೆ ಎಂಬುದನ್ನು ನಾವೀಗ ತಿಳಿಯೋಣ.

ಕರ್ಮಯೋಗವನ್ನುಪದೇಶಿಸುವಾಗ ಕರ್ಮ, ವಿಕರ್ಮ ಮತ್ತು ಅಕರ್ಮ ಎಂಬುವುಗಳನ್ನರಿಯಬೇಕೆಂಬುದು ಗೀತಾಚಾರ್ಯನ ಉಪದೇಶ. ವಿಕರ್ಮ ಎಂಬುದಕ್ಕೆ ನಿತ್ಯನೈಮಿತ್ತಿಕ ಕಾಮ್ಯಕರ್ಮವೆಂದೂ ಅದನ್ನು ಸಾಧಿಸಲು ಅನುಷ್ಠಿಸುವ ದ್ರವ್ಯಾರ್ಜನಾದಿ ರೂಪವಾದ ವಿವಿಧವಾದ ಕರ್ಮವೆಂದೂ ರಾಮಾನುಜರು ಅರ್ಥಮಾಡುತ್ತಾರೆ. ಅಕರ್ಮ ಶಬ್ದಕ್ಕೆ ಜ್ಞಾನವೆಂದೂ ಅವರು ವ್ಯಾಖ್ಯಾನ ಮಾಡಿದ್ದಾರೆ. ಕರ್ಮಣ್ಯಕರ್ಮ ಯಃ ಪಶ್ಯೇತ್ ಅಕರ್ಮಣಿ ಚ ಕರ್ಮ ಯಃ | ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್ ||' ಎಂದು ಗೀತಾಚಾರ್ಯ ಹೇಳಿದ್ದಾನೆ. ಕರ್ಮದಲ್ಲಿ ಜ್ಞಾನವನ್ನೂ ಜ್ಞಾನದಲ್ಲಿ ಕರ್ಮವನ್ನೂ ಯಾರು ಕಾಣುವರೋ ಅವರೇ ಬುದ್ಧಿಶಾಲಿಗಳು ಮತ್ತು ಶಾಸ್ತ್ರೀಯವಾದ ರೀತಿಯಲ್ಲಿ ಕರ್ಮಮಾಡುವವರು ಎಂದು ಇದರ ಅರ್ಥ. ಕರ್ಮವನ್ನನುಷ್ಠಿಸುತ್ತಿರುವಾಗಲೇ ಆತ್ಮಜ್ಞಾನವನ್ನು ಯಾವಾತನು ಅನುಸಂಧಾನ ಮಾಡುವನೋ ಆತ್ಮಜ್ಞಾನದಲ್ಲಿರುವಾಗ ಯಾವಾತನು ಕರ್ಮವನ್ನು ಕಾಣುವನೋ ಅವನು ಯುಕ್ತತಮ.

ಆತ್ಮಯಥಾತ್ಮ್ಯಾನುಸಂಧಾನದಿಂದ ಮಾಡುವ ಕರ್ಮವನ್ನೇ ಜ್ಞಾನರೂಪವಾದುದೆಂದೂ, ತತ್ತ್ವಜ್ಞಾನ ಕರ್ಮಯೋಗವನ್ನೊಳಗೊಂಡಿರುವುದರಿಂದ ಕರ್ಮಾಕಾರವಾದುದೆಂದೂ ಭಾವಿಸುವವನು ಯುಕ್ತತಮನೆಂಬುದನ್ನು ರಾಮಾನುಜರು 'ಕ್ರಿಯಮಾಣಮೇವ ಕರ್ಮ ಆತ್ಮಯಥಾತ್ಮ್ಯಾನುಸಂಧಾನೇನ ಜ್ಞಾನಾಕಾರಂ ಯಃ ಪಶ್ಯೇತ್ ತಚ್ಚಜ್ಞಾನಂ ಕರ್ಮಯೋಗಾಂತರ್ಗತತಯಾ ಕರ್ಮಾಕಾರಂ ಯಃ ಪಶ್ಯೇದಿತ್ಯುಕ್ತಂ ಭವತಿ' ಎಂದು ನಿರೂಪಿಸುತ್ತಾರೆ.

ಕರ್ಮಜ್ಞಾನಗಳು ಒಂದರೊಡನೊಂದು ಕೂಡಿಕೊಂಡೇ ಇರುವುವೆಂಬ ಅಂಶ ಇದರಿಂದ ಸ್ಪಷ್ಟವಾಗುತ್ತದೆ. ಇತರ ಸಿದ್ಧಾಂತಗಳಲ್ಲಿ ಹೇಳುವಂತೆ ಅಕರ್ಮ ಶಬ್ದಕ್ಕೆ ಕರ್ಮಸಂಬಂಧವಿಲ್ಲದ ಜ್ಞಾನವೆಂಬ ಅರ್ಥ ಈ ಸಿದ್ಧಾಂತದಲ್ಲಿಲ್ಲ. ರಾಮಾನುಜರಿಗೆ ಅಕರ್ಮವೆಂದರೆ ಆತ್ಮಜ್ಞಾನ. ಆದುದರಿಂದಲೇ ಆತ್ಮಜ್ಞಾನವನ್ನೊಳಗೊಂಡಿರುವ ಕರ್ಮಯೋಗ ಜ್ಞಾನರೂಪವಾದುದಾಗಿದೆ. ಇವೆರಡೂ ಪರಸ್ಪರ ಅನ್ವಿತವಾಗಿಯೇ ಇರುವುವು. ಆದುದರಿಂದಲೇ ಮಾಡುವ ಕರ್ಮದಲ್ಲಿ ಜ್ಞಾನಾಂಶವೂ, ಜ್ಞಾನದಲ್ಲಿ ಕರ್ಮಾಂಶವೂ

acharya.org

ಇರುವುದು ಅಸಂಭವವಾಗಿಲ್ಲ. ಕರ್ಮಜ್ಞಾನವಿಶಿಷ್ಟವಾಗಿಯೇ ಇರುವ ಕಾರಣ ಕರ್ಮಯೋಗಕ್ಕೆ ಜ್ಞಾನಾಕಾರತೆ ಇದೆ. ನಾವು ಬಗೆಬಗೆಯಾದ ಕೆಲಸ ಮಾಡುವೆವಷ್ಟೇ ? ಅವುಗಳನ್ನು ಜ್ಞಾನರೂಪವೆಂದು ಹೇಳುವುದು ಅನುಭವಕ್ಕೆ ವಿರುದ್ಧವಲ್ಲವೇ ಎಂಬ ಸಂದೇಹ ಬರಬಹುದು ಆದರೆ ಇದಕ್ಕೆ ಅವಕಾಶವಿಲ್ಲ. ಕರ್ಮ ಜ್ಞಾನರೂಪವಾಗಿರುವ ಬಗೆಯನ್ನು ಗೀತೆ ತೋರಿಸಿಕೊಟ್ಟದೆ. ಜೀವನಕ್ಕಾಗಿ ತಾನು ಮಾಡುವ ವಿವಿಧ ಕರ್ಮಗಳನ್ನೇ ಆಗಲೀ ಅಥವಾ ನೈಮಿತ್ತಿಕ ಕರ್ಮಗಳನ್ನೇ ಆಗಲೀ, ಆ ಕರ್ಮಗಳ ಫಲದಲ್ಲಿ ಆಶೆ ಇಲ್ಲದೆಯೂ, ಶರೀರದಲ್ಲಿ ಆತ್ಮಬುದ್ಧಿ ಇಲ್ಲದೆಯೂ ಮಾಡುವುದಾದರೆ. ಕರ್ಮಾಂತರ್ಗತವಾದ ಆ ಆತ್ಮಯಾಥಾತ್ಮ್ಯ ಜ್ಞಾನಾಗ್ನಿ ಎಲ್ಲ ಪ್ರಾಚೀನ ಕರ್ಮಗಳನ್ನೂ ದಹಿಸಿ ಹಾಕುವುದು. ಹೀಗೆ ಕರ್ಮ ಮಾಡುವವನು ಕರ್ಮಮಾಡುವ ನೆಪದಲ್ಲಿ ಜ್ಞಾನಾಭ್ಯಾಸವನ್ನೇ ಮಾಡುತ್ತಿರುವನು, 'ಕರ್ಮಾಪದೇಶೇನ ಜ್ಞಾನಾಭ್ಯಾಸಮೇವ ಕರೋತೀತ್ಯರ್ಥಃ' ಎಂದು ರಾಮಾನುಜರು ಇದನ್ನು ವಿವರಿಸುತ್ತಾರೆ. ಅಂಥವನು

'ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ |
ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್ ||"

ಆದವನು. ಅವನು ತನ್ನ ಕರ್ಮಗಳ ಫಲದಲ್ಲಿ ಆಶೆಯಿಲ್ಲದವನಾದುದರಿಂದ ನಿರಾಶೀಃ ಆದವನು. ಅವನ ಚಿತ್ತ ಆತ್ಮಚಿಂತನೆಯಲ್ಲಿಯೇ ನಿರತವಾದ ಕಾರಣ ಯತಚಿತ್ತಾತ್ಮಾ'; ಆತ್ಮ ಸ್ವರೂಪದಲ್ಲಿಯೇ ಆನಂದವನ್ನು ಕಾಣುವ ಆವನು ಇತರ ಲೌಕಿಕ ವಿಚಾರಗಳಲ್ಲಿ ಸಂಗವಿಲ್ಲದವನಾದ ಕಾರಣ ತ್ಯಕ್ತಸರ್ವಪರಿಗ್ರಹನಾದವನು. ಪ್ರಕೃತಿಯಲ್ಲಿಯೂ ಪ್ರಾಕೃತ ಪದಾರ್ಥಗಳಲ್ಲಿಯೂ ಮಮತೆ ಅವನಿಗಿರದು. ಅವನು ಮಾಡುವ ಕರ್ಮ ಕೇವಲ ಶಾರೀರ ವಾದುದು. ಬಂಧಕವಾದುದಲ್ಲವೇ ಅಲ್ಲ. ಆಶೆಗಳು ಮನಸ್ಸಿಗೆ ಸಂಬಂಧಿಸಿದವು. ಇವನು ಅಂಥ ಆಶೆಗಳನ್ನು ಬಿಟ್ಟವನಾದ ಕಾರಣ ಇವನ ಕರ್ಮ ಕೇವಲ ಶಾರೀರಕವಾದುದು. ಈ ಆತ್ಮಜ್ಞಾನದ ಕಾರಣ ಕರ್ಮಯೋಗಿ ಜ್ಞಾನಯೋಗವನ್ನು ಮಾಡದೆಯೇ ಆತ್ಮಾವ ಲೋಕನವನ್ನು ಪಡೆಯಬಲ್ಲ. ಹೀಗೆ ಕರ್ಮಯೋಗ ಜ್ಞಾನಾಕಾರವಾದುದು. ಕರ್ಮಯೋಗ ಜ್ಞಾನಾಕಾರವೆನ್ನಲು ಎರಡು ಮುಖ್ಯವಾದ ಕಾರಣಗಳಿವೆ- ಅವು ಯಾವುವೆಂದರೆ—

೧) ಪ್ರಕೃತಿವಿಯುಕ್ತವಾದ ಆತ್ಮಸ್ವರೂಪದ ಅನುಸಂಧಾನವನ್ನು ಅದು ಒಳಗೊಂಡಿದೆ.

೨) ಚೇತನಾಚೇತನ ಪದಾರ್ಥಗಳಿಗೆಲ್ಲಾ ಅಂತರಾತ್ಮನಾಗಿರುವ ಪರಮಾತ್ಮನ ಅನುಸಂಧಾನವನ್ನೂ ಅದು ಒಳಗೊಂಡಿದೆ. ಈ ಬಗೆಯ ಬ್ರಹ್ಮಾನುಸಂಧಾನವನ್ನು ಗೀತೆ

ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ |
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮಸಮಾಧಿನಾ || ಎಂಬ ಶ್ಲೋಕದಲ್ಲಿ

acharya.org

ಉಪದೇಶಿಸಿದೆ. ಈ ಶ್ಲೋಕದಲ್ಲಿ ಈ ಸಿದ್ಧಾಂತಕ್ಕನುಸಾರವಾಗಿ ಬ್ರಹ್ಮಶಬ್ದ ಪರಮಾತ್ಮನಾದ ವಾಸುದೇವನಿಗೆ ಅನ್ವಯಿಸುತ್ತದೆ.

ಮಾಡುವ ಕರ್ಮವೆಲ್ಲಾ ಬ್ರಹ್ಮಾತ್ಮಕವಾದ ಕಾರಣ ಬ್ರಹ್ಮಮಯವಾದುದೆಂದು ಯಾವನು ಅನುಸಂಧಾನ ಮಾಡುವನೋ ಅವನು ಬ್ರಹ್ಮಕರ್ಮಸಮಾಧಿಷ್ಠನು. ಬ್ರಹ್ಮಾತ್ಮಕವಾದ ಕಾರಣ ಬ್ರಹ್ಮಮಯವಾದ ಆತ್ಮಸ್ವರೂಪವನ್ನು ಅಂಥವನು ಹೊಂದುತ್ತಾನೆ. ಈ ಲೋಕದಲ್ಲಿರುವುದೆಲ್ಲವೂ ಬ್ರಹ್ಮಮಯ. ಆದುದರಿಂದ ಕರ್ಮಸಾಧನಗಳನ್ನೂ ಕರ್ಮ ಮಾಡುವವನನ್ನೂ, ಕರ್ಮಗಳನ್ನೂ ಕರ್ಮದ ಉದ್ದೇಶಗಳನ್ನೂ ಆ ಪರಮಾತ್ಮನಿಗೇ ಅನ್ವಯಿಸಬೇಕು. ಪರಬ್ರಹ್ಮಾತ್ಮತತ್ವದ ಅನುಸಂಧಾನ ನಿರಂತರವಾಗಿ ಆಗುವ ಕಾರಣ ಕರ್ಮಯೋಗದ ಮೂಲಕವೇ ಸಾಧಕ ಆತ್ಮಾವಲೋಕನವನ್ನು ಪಡೆಯಬಲ್ಲ. ಈ ಅಂಶವನ್ನು ರಾಮಾನುಜರು 'ಮುಮುಕ್ಷುಣಾ ಕ್ರಿಯಮಾಣಂ ಕರ್ಮ ಪರಬ್ರಹ್ಮಾತ್ಮಕಮೇವೇತಿ ಅನುಸಂಧಾನಯುಕ್ತತಯಾ ಜ್ಞಾನಾಕಾರಂ ಸಾಕ್ಷಾದಾತ್ಮಾವಲೋಕನಸಾಧನಂ ನ ಜ್ಞಾನನಿಷ್ಠಾವ್ಯವಧಾನೇನೇತ್ಯರ್ಥಃ' ಎಂದು ನಿರೂಪಿಸಿದ್ದಾರೆ. ಕರ್ಮಾಂತರ್ಗತವಾದ ಜ್ಞಾನದ ಅನುಸಂಧಾನವನ್ನು ಸರ್ವಸಾಧನಗಳಿಂದ ಸಾಧಕಮಾಡುವನು. ಆ ಜ್ಞಾನ ಪ್ರಾಪ್ಯ ದೆಶೆಯನ್ನು ಹೊಂದುತ್ತದೆ. ಹೀಗೆ ದ್ರವ್ಯಮಯವಾದ ಅಂಶಕ್ಕಿಂತ ಹೆಚ್ಚಾದುದು ಜ್ಞಾನಮಯವಾದ ಅಂಶ. ಆತ್ಮನನ್ನು ಕುರಿತ ಅನುಸಂಧಾನ ನೇರವಾದ ಆತ್ಮಾವಲೋಕನದಲ್ಲಿ ಪರಿಣಮಿಸುತ್ತದೆ. ಹೀಗೆ ಆತ್ಮಸ್ವರೂಪವನ್ನು ಸಾಕ್ಷಾತ್ಕರಿಸಿದವನು ಕೆಳಗಿನ ಲಕ್ಷಣಗಳನ್ನು ಹೊಂದಿರುತ್ತಾನೆ.

೧) ದೇಹವೇ ಆತ್ಮವೆಂಬ ಭ್ರಮೆ ಅವನಿಗೆ ಉಂಟಾಗುವುದಿಲ್ಲ. ಅವನು ದೇಹಾತ್ಮಾಭಿಮಾನವನ್ನೂ ಮಮತೆಯನ್ನೂ ಬಿಡುತ್ತಾನೆ.

೨) ಎಲ್ಲ ಆತ್ಮರುಗಳೂ ಜ್ಞಾನಾಕಾರರಾಗಿರುವ ಕಾರಣ ಪ್ರಕೃತಿಸಂಬಂಧದಿಂದ ಮುಕ್ತರಾದಾಗ ಆತ್ಮರುಗಳೆಲ್ಲರೂ ಒಂದೇ ಬಗೆಯಾಗಿರುವರೆಂಬುದನ್ನು ಮನಗಾಣುತ್ತಾನೆ. ಆತ್ಮರುಗಳ ಸಾಮ್ಯ ಸ್ವರೂಪ ಗೊತ್ತಾಗುತ್ತದೆ.

೩) ಪ್ರಕೃತಿ ವಿನಿರ್ಮುಕ್ತವಾದ ಶುದ್ಧಾತ್ಮವು ಹೇಗೆ ಪರಸ್ಪರ ಸಮವಾಗಿದೆಯೋ ಹಾಗೆಯೇ ಪರಮಾತ್ಮನೊಡನೆಯೂ ಸಾಮ್ಯವನ್ನು ಹೊಂದಿದೆ ಎಂದು ತಿಳಿಯುವನು.

ಈ ಬಗೆಯಾದ ಆತ್ಮಸ್ವರೂಪಜ್ಞಾನ ಆತ್ಮಸಾಕ್ಷಾತ್ಕಾರದ ಅಡ್ಡಿಗಳನ್ನೆಲ್ಲಾ ಕಳೆದುಹಾಕುವುದು. ಈ ಜ್ಞಾನದ ಹಡಗೋಲಿನಿಂದ ಎಲ್ಲ ಪಾಪವನ್ನೂ ಸಾಧಕ ದಾಟಬಲ್ಲ. ಅನಾದಿಕಾಲದಿಂದ ಮಾಡಿದ ಪಾಪರಾಶಿಯನ್ನೆಲ್ಲಾ ಈ ಜ್ಞಾನಾಗ್ನಿ ದಹಿಸುತ್ತದೆ. ಆದುದರಿಂದ ಆತ್ಮಜ್ಞಾನದಂತೆ ಪವಿತ್ರಗೊಳಿಸುವುದು ಮತ್ತೊಂದು ಇಲ್ಲ. ಈ ಬಗೆಯ ಆತ್ಮಾವಲೋಕನ ಜ್ಞಾನಾಕಾರವನ್ನು ಹೊಂದಿರುವ ಕರ್ಮಯೋಗವನ್ನು ಮಾಡುವುದರಿಂದ ಫಲಿಸುತ್ತದೆ. ಇದರಿಂದ ಕಾಲವಿಳಂಬವಿಲ್ಲವೆ ಸಿದ್ಧಿಯನ್ನು ಹೊಂದಿ

acharya.org

ಶಾಂತಿಯನ್ನು ಹೊಂದುತ್ತಾನೆ.

ಆತ್ಮ ಸಾಕ್ಷಾತ್ಕಾರದ ಸ್ವರೂಪ

ಇದುವರೆಗೆ ಕರ್ಮಯೋಗ ಜ್ಞಾನಾಕಾರವನ್ನು ಹೊಂದಿರುವುದೆಂದು ನಿರೂಪಿಸಲಾಯಿತು. ಈ ಕರ್ಮಯೋಗದಿಂದ ನೇರವಾಗಿ ಆತ್ಮಾವಲೋಕನ ಆಗುವುದೆಂದೂ ತಿಳಿಸಲಾಯಿತು. ಈ ಆತ್ಮಸಾಕ್ಷಾತ್ಕಾರದ ಸ್ವರೂಪವೇನೆಂಬುದನ್ನು ಈಗ ತಿಳಿಯೋಣ. ಗೀತೆಯಲ್ಲಿ ಕರ್ಮಯೋಗಿ ಆ ಕರ್ಮಯೋಗದ ಫಲವಾಗಿ ಸಮದರ್ಶನರೂಪವಾದ ಜ್ಞಾನ ವಿಪಾಕವನ್ನು ಪಡೆಯುವನೆಂದು ಹೇಳುತ್ತದೆ. ಈ ಲೋಕದಲ್ಲಿ ಎವಿಧವಾಗಿರುವ ಜನರನ್ನು ನಾವು ನೋಡುತ್ತೇವೆ. ಬೇರೆಬೇರೆಯಾಗಿ ಅವರು ಕಾಣುತ್ತಿದ್ದಾರೆ. ರೂಪದಲ್ಲಿ, ಗುಣದಲ್ಲಿ, ವರ್ಣದಲ್ಲಿ ಆಕಾರದಲ್ಲಿ ಅವರು ಬೇರೆಬೇರೆಯಾಗಿ ತೋರುತ್ತಿದ್ದಾರೆ. ಈ ವಿವಿಧವಾದ ಶರೀರಗಳಲ್ಲೆಲ್ಲಾ ಒಂದೇ ಬಗೆಯಾದ ಆತ್ಮವಸ್ತುವಿರುವುದೆಂದೂ ಆ ಆತ್ಮರುಗಳೆಲ್ಲರೂ ಜ್ಞಾನಸ್ವರೂಪರೆಂದೂ, ಅವರ ವಿಧವಿಧವಾದ ಕರ್ಮದ ಕಾರಣ ಈ ಬಗೆಯ ವಿವಿಧ ಶರೀರಗಳ ಯೋಗ ಅವರಿಗೆ ಆಗಿದೆಯೆಂದೂ ಜ್ಞಾನಿಯಾದವನು ತಿಳಿಯುತ್ತಾನೆ. ಈ ಬಗೆಯಾದ ಸಮದರ್ಶಿತ್ವ ಕರ್ಮಯೋಗಿಗೆ ಸಿದ್ಧಿಸುತ್ತದೆ. ಸತತವಾಗಿ ವಿಕಾರ ಹೊಂದುತ್ತಿರುವ ಪ್ರಕೃತಿಯ ಕಾರಣದಿಂದಲೇ ವಿಷಮಾಕಾರವಿರುವುದೆಂದು ಅವರು ಮನಗಾಣುತ್ತಾರೆ. 'ಶುನಿ ಚೈವ ಶ್ವಪಾಕೇ ಚ ಪಂಡಿತಾಸ್ಸಮದರ್ಶಿನಃ' ಎಂಬ ವಾಕ್ಯಕ್ಕೆ ಬಾಷ್ಯವನ್ನು ಬರೆಯುತ್ತಾ ರಾಮಾನುಜರು 'ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗೋಹಸ್ತಿಶ್ವಪಚಾದಿಷು ಅತ್ಯಂತ ವಿಷಮಾಕಾರತಯಾ ಪ್ರತೀಯಮಾನೇಷು ಚಾತ್ಮಸು ಪಂಡಿತಾಃ ಆತ್ಮಯಾಥಾತ್ಮ್ಯವಿದಃ ಜ್ಞಾನೈಕಾಕಾರತಯಾ ಸರ್ವತ್ರ ಸಮದರ್ಶಿನಃ। ವಿಷಮಾಕಾರಸ್ತು ಪ್ರಕೃತೇಃ ನಾತ್ಮನಃ। ಆತ್ಮಾ ತು ಸರ್ವತ್ರ ಜ್ಞಾನೈಕಾಕಾರತಯಾ ಸಮ ಇತಿ ಪಶ್ಯಂತೀತ್ಯರ್ಥಃ' ಎಂದು ವಿವರಿಸುತ್ತಾರೆ.

ಈ ಬಗೆಯ ಸಮದರ್ಶಿತ್ವ ಉಂಟಾದ ಕಾಲದಲ್ಲೇ ಎಲ್ಲ ಕ್ಲೇಶಗಳೂ ಪರಿಹಾರವಾಗುತ್ತವೆ. ಮುಂದೆ ಆತ್ಯಧಿಕವಾದ ಶ್ರೇಯಸ್ಸಿನ ಪ್ರಾಪ್ತಿಗೂ ಇದು ಕಾರಣವಾಗುತ್ತದೆ. ಈ ಸಮದರ್ಶಿತ್ವವನ್ನು ಪಡೆದ ಪುಣ್ಯಾತ್ಮರು ಆತ್ಮನಿಷ್ಠರಾಗುತ್ತಾರೆ. ಸಂಸಾರವನ್ನು ಗೆಲ್ಲುತ್ತಾರೆ. ಸಮದರ್ಶಿತ್ವರೂಪವಾದ ಈ ಜ್ಞಾನವಿಪಾಕವನ್ನು ಪಡೆಯಲು ಆರು ಅಂಶಗಳು ಆವಶ್ಯಕವೆಂದು ದೇಶಿಕರವರು ತಿಳಿಸಿದ್ದಾರೆ. ಅವು ಯಾವುವೆಂದರೆ—

೧) ಹರ್ಷ ಮತ್ತು ಉದ್ವೇಗಗಳನ್ನು ಬಿಡುವುದು.

೨) ಪ್ರಾಪಂಚಿಕ ಪದಾರ್ಥಗಳಲ್ಲಿ ಆಸಕ್ತಿ ತೊರೆಯುವುದು.

೩) ಪ್ರಾಪಂಚಿಕ ವಸ್ತುಗಳಲ್ಲಿ ಸಂಗವನ್ನು ಇಡುವುದರಿಂದ ಉಂಟಾಗುವ ದೋಷಗಳನ್ನು ಅರಿಯುವುದು.

acharya.org

೪) ಕಾಮ ಮತ್ತು ಕ್ರೋಧಗಳ ವೇಗವನ್ನು ಅಡಗಿಸುವುದು.

೫) ಸ್ವಸ್ವರೂಪಾನುಭವದಲ್ಲಿಯೇ ಸಕಲ ಸಂತೋಷಗಳನ್ನೂ ಕಾಣುವುದು.

೬) ಸರ್ವಭೂತಹಿತೇರತಿತ್ವವನ್ನು ಸಾಧಿಸುವುದು.

ಈ ಪ್ರಯತ್ನಗಳಿಂದ ಆತ್ಮಾನುಭವವನ್ನು ಪಡೆದವನು ಪರಿಶುದ್ಧಾತ್ಮನಾಗುತ್ತಾನೆ. ಆತ್ಮಸಾಕ್ಷಾತ್ಕಾರಕ್ಕೆ ಅರ್ಹನಾಗುತ್ತಾನೆ.

ಸ್ಥಿತಪ್ರಜ್ಞತೆ

ಆತ್ಮಸಾಕ್ಷಾತ್ಕಾರಕ್ಕೆ ಹೆದ್ದಾರಿಯಾದ ಸ್ಥಿತಪ್ರಜ್ಞತೆಯನ್ನು ಕರ್ಮಯೋಗ ಸಾಧಿಸಿಕೊಡುತ್ತದೆ. ರಾಮಾನುಜರು ಈ ಅಂಶವನ್ನು 'ಶಾಸ್ತ್ರ ಜನ್ಯಾತ್ಮಜ್ಞಾನ ಪೂರ್ವಕ ಕರ್ಮಯೋಗಃ ಸ್ಥಿತಪ್ರಜ್ಞತಾಖಂಜ್ಞಾನನಿಷ್ಠಾಂ ಆಪಾದಯತಿ। ಜ್ಞಾನನಿಷ್ಠಾ ರೂಪಾ ಸ್ಥಿತಪ್ರಜ್ಞತಾ ತು ಯೋಗಾಖ್ಯಮಾತ್ಮಾವಲೋಕನಂ ಸಾಧಯತಿ।' ಎಂದು ಗೀತಾಭಾಷ್ಯದಲ್ಲಿ ನಿರೂಪಿಸಿದ್ದಾರೆ. ಕರ್ಮಯೋಗ ಪಕ್ವವಾದಾಗ ಸ್ಥಿತಪ್ರಜ್ಞತೆ ಲಭಿಸುತ್ತದೆ. ಇದು ನಾಲ್ಕು ಹಂತಗಳಲ್ಲಿ ಸಿದ್ಧಿಸುತ್ತದೆ. ಅವು ಯಾವುವೆಂದರೆ :

೧) ಯತಮಾನ ಸಂಜ್ಞೆ.

೨) ವ್ಯತಿರೇಕ ಸಂಜ್ಞೆ.

೩) ಏಕೇಂದ್ರಿಯ ಸಂಜ್ಞೆ.

೪) ವಶೀಕಾರ ಸಂಜ್ಞೆ.

ಈ ನಾಲ್ಕರಲ್ಲಿ ಯತಮಾನ ಸಂಜ್ಞೆ ಆರಂಭದೆಶೆಯಾಗಿದ್ದು ಅಲ್ಲಿಂದ ಮುಂದೆ ಒಂದೊಂದೂ ಮೇಲಿನ ಸೋಪಾನವಾಗಿ ವಶೀಕಾರ ಸಂಜ್ಞೆ ಸರ್ವೋನ್ನತವಾದುದಾಗಿದೆ.

ಯತಮಾನಸಂಜ್ಞೆಯಲ್ಲಿ ಸಾಧಕ ಇಂದ್ರಿಯಾರ್ಥಗಳಿಂದ ಇಂದ್ರಿಯಗಳನ್ನೂ ಮನಸ್ಸನ್ನೂ ಹಿಂತಿರುಗಿಸಲು ಸತತವಾಗಿ ಪ್ರಯತ್ನ ಮಾಡುತ್ತಾನೆ—ಆಮೆ ತನ್ನ ಅಂಗಗಳನ್ನು ಚಿಪ್ಪಿನೊಳಕ್ಕೆ ಎಳೆದುಕೊಳ್ಳುವ ರೀತಿಯಲ್ಲಿ. ಇಂದ್ರಿಯ ಜಯ ಆತ್ಮಮನನಕ್ಕೆ ಆವಶ್ಯವಾದ ಅಂಗ. ಮನಸ್ಸನ್ನು ಆತ್ಮನಲ್ಲಿ ನೆಲೆ ನಿಲ್ಲಿಸಲೂ, ಇಂದ್ರಿಯಗಳನ್ನು ಒಳಮುಖವಾಗಿಸಲೂ ಈ ಹಂತದಲ್ಲಿ ಸಾಧಕ ನಿರಂತರವಾಗಿ ಪ್ರಯತ್ನಿಸುತ್ತಾನೆ.

ಯತಮಾನ ಸಂಜ್ಞೆಗಿಂತ ಮೇಲಿನ ಹಂತ ವ್ಯತಿರೇಕ ಸಂಜ್ಞೆ. ಹಿಂದಿನ ಸೋಪಾನದಲ್ಲಿ ಸಿದ್ಧಿಯನ್ನು ಪಡೆದವನು ಈ ಹಂತಕ್ಕೇರುತ್ತಾನೆ. ಈ ಮಟ್ಟದಲ್ಲಿ ಮನಸ್ಸು ಶಾಂತವಾಗಿರುತ್ತದೆ. ಆಯಾ ಸುಖದುಃಖಗಳನ್ನೂ ಶುಭಾಶುಭಗಳನ್ನೂ ಹೊಂದಿದ ಇವನು ಅವುಗಳಲ್ಲಿ ಸಮಭಾವವನ್ನು ಹೊಂದುತ್ತಾನೆ. ಈ ಮಟ್ಟವನ್ನೇರಿರುವ ಸಾಧಕ ಇನ್ನೂ ಪಕ್ವವಾಗದಿರುವ ರಾಗಾದಿಗಳನ್ನು ಪಕ್ವಗೊಳಿಸುವುದಕ್ಕಾಗಿ ಮನಸ್ಸಿನ ವ್ಯಾಪಾರ ವಿಶೇಷಗಳನ್ನು ಅಡಗಿಸುತ್ತಾನೆ. ಸ್ವಯಂ ಪ್ರಿಯವಾದುದರಲ್ಲಿ ಇವನು ಪ್ರವರ್ತಿಸುವುದಿಲ್ಲ.

acharya.org

ಇನ್ನೂ ಉದ್ವೇಲವಾಗಿರುವ ರಾಗ ದ್ವೇಷಗಳನ್ನು ಅಡಗಿಸುವ ಸಂಕಲ್ಪವನ್ನು ಇವನು ಮಾಡುತ್ತಾನೆ.

ಇದಕ್ಕೂ ಮೇಲಿನ ಹಂತ ಏಕೇಂದ್ರಿಯ ಸಂಜ್ಞೆ. ಈ ಮಟ್ಟದಲ್ಲಿ ಮನಸ್ಸು ಸ್ಥಿರವಾಗಿ ಆತ್ಮನಿಷ್ಠವಾಗುತ್ತದೆ. ದುಃಖದಿಂದಾಗಲೀ ದುಃಖದ ಕಾರಣದಿಂದಾಗಲೀ ಅವನ ಮನಸ್ಸು ವಿಚಲಿತವಾಗುವುದಿಲ್ಲ. ಸುಖಗಳಲ್ಲಿ ಇವನ ಆಶೆ ಕಳಚಿಹೋಗಿರುತ್ತದೆ. ಇವನನ್ನು ಗೀತೆ 'ವೀತರಾಗಭಯಕ್ರೋಧಃ' ಎಂದೂ 'ಮುನಿಃ' ಎಂದೂ ಕೊಂಡಾಡುತ್ತದೆ. ಆತ್ಮಮನನದಲ್ಲಿ ನಿರಂತರವಾಗಿ ನಿರತನಾದ ಇವನು ಮುನಿ. ಔದಾಸೀನ್ಯ ಮತ್ತು ಅನಭಿನಂದನಗಳಿಂದ ರಾಗದ್ವೇಷಗಳನ್ನು ಇವನು ತೊಡೆದು ಹಾಕುತ್ತಾನೆ. ಈ ಹಂತದಲ್ಲಿ ವಾಸನೆಯ ಸ್ವಲ್ಪಾಂಶ ಇನ್ನೂ ಇರುವುದರಿಂದ ಅದನ್ನು ಆತ್ಮಾನುಭವದಿಂದ ಅಳಿಸಿ ಹಾಕಲು ಇವನು ಪ್ರಯತ್ನಿಸುತ್ತಾನೆ.

ಈ ಸಾಧನೆಯಲ್ಲಿ ವಶೀಕಾರ ಸಂಜ್ಞೆ ಸರ್ವೋನ್ನತವಾದ ಸೋಪಾನ. ಇದು ಯೋಗದ ಚರಮ ಸೀಮೆ. ಆತ್ಮಜ್ಞಾನದಲ್ಲಿಯೇ ಸಂತುಷ್ಟನಾಗಿರುವನು ಈ ಸಾಧಕ. ಈ ಹಂತದಲ್ಲಿ ಕರ್ಮವಾಸನೆ ನಿಃಶ್ಶೇಷವಾಗಿ ಮಾಯವಾಗಿರುತ್ತದೆ. ಆತ್ಮವಸ್ತುವಿಗಿಂತ ಬೇರೆಯಾದುದೆಲ್ಲವನ್ನೂ ಸಾಧಕ ತೊರೆದಿರುತ್ತಾನೆ. ಆತ್ಮನಲ್ಲಿ ಇವನು ಸ್ಥಿರವಾಗಿ ನೆಲೆ ನಿಂತಿರುತ್ತಾನೆ. ಈ ನಾಲ್ಕು ಹಂತಗಳಲ್ಲಿ ಸಾಧಕ ಕರ್ಮಯೋಗದ ಮುಖಾಂತರ ಆತ್ಮಾವಲೋಕನವನ್ನು ಪಡೆಯಲು ಅರ್ಹನಾಗುತ್ತಾನೆ. ಗೀತೆಯ ಈ ಭಾಗಕ್ಕೆ ರಾಮಾನುಜರು ಮಾಡಿರುವ ಭಾಷ್ಯ ಮತ್ತು ದೇಶಿಕರು ನೀಡಿರುವ ವಿವರಣೆ ಭಾರತೀಯದರ್ಶನಸಂಪ್ರದಾಯಕ್ಕೇ ಒಂದು ಅಪೂರ್ವವಾದ ಕೊಡುಗೆಯಾಗಿದೆ. ಈ ನಾಲ್ಕು ಹಂತಗಳ ಬಗೆಗೆ ವಿವೇಚನೆ ನಡೆಸುತ್ತಾ ದೇಶಿಕರವರು ಅವುಗಳ ವೈಶಿಷ್ಟ್ಯವನ್ನು ಕೆಳಗೆ ಕಂಡಂತೆ ಸಂಗ್ರಹಿಸಿದ್ದಾರೆ :

೧) 'ಪ್ರಚುರೇಪಿ ರಾಗೇ ತನ್ನಿರೋಧಸಂಭವಃ' ಪ್ರಚುರವಾಗಿರುವ ರಾಗವನ್ನು ತಡೆಯಲು ಸರ್ವಪ್ರಯತ್ನ ಮಾಡುವುದು.

೨ 'ಅಸಂಗಲೇಶೇನ ಭುಜ್ಯಮಾನೇಷ್ವಪಿ ನಾತಿಸ್ನೇಹಃ' ಅನುಭವಿಸುತ್ತಿರುವ ಸುಖದುಃಖಗಳಲ್ಲಿಯೂ ಸ್ವಲ್ಪವೂ ಆಸಕ್ತಿಯನ್ನು ಇಡದೆ ಮನಸ್ಸಿಗೆ ಶಾಂತಿಯನ್ನು ತಂದುಕೊಳ್ಳುವುದು.

೩) 'ದೃಶ್ಯಮಾನೇಷ್ವಪಿ ನಿಸ್ಸಂಗತಾ' ಸಂಭವಿಸತಕ್ಕ ಸುಖದುಃಖಾದಿಗಳಲ್ಲಿಯೂ ಪೂರ್ಣವಾದ ಅನಾಸಕ್ತಿಯನ್ನು ಬೆಳಸಿಕೊಳ್ಳುವುದು.

೪) 'ಕಾಮಾನಾಂ ತಥಾತ್ವೇನ ಅದರ್ಶನಂ' ಕಾಮಗಳನ್ನು ಸಮೂಲವಾಗಿ ನಾಶ ಮಾಡುವುದು.

ಈ ವಿಧವಾದ ಸಿದ್ಧಿ ಕ್ರಮಕ್ರಮವಾಗಿ ಆಗಬೇಕು. ಭಗವಂತನಲ್ಲಿ ಭಕ್ತಿಯನ್ನು

acharya.org

ಹೊಂದಿ ಕರ್ಮಯೋಗವನ್ನಾರಂಭಿಸಿ ಸಕಲ ಕರ್ಮಗಳನ್ನೂ ಭಗವದಾರಾಧನರೂಪವಾಗಿ ಮಾಡುವ ಕರ್ಮಯೋಗಿ ಆ ಕರ್ಮಯೋಗದ ಫಲವಾಗಿ ಆತ್ಮಾವಲೋಕನವನ್ನು ಹೊಂದುತ್ತಾನೆ. ರಾಗದ್ವೇಷಾದಿಗಳನ್ನು ದಮನ ಮಾಡಿ ಇಂದ್ರಿಯ ಜಯವನ್ನಿವನು ಪಡೆಯುತ್ತಾನೆ. ಭಗವದ್ದಯೆಯ ಕಾರಣದಿಂದಲೇ ಈ ಸಾಧಕ ಸಾಧನೆಯಲ್ಲಿ ಮುಂದು ವರಿದು ಸ್ಥಿತಪ್ರಜ್ಞತೆಯನ್ನು ಹೊಂದುತ್ತಾನೆ.

ಕರ್ಮಯೋಗವೂ ನಿತ್ಯನೈಮಿತ್ತಿಕಕರ್ಮಾನುಷ್ಠಾನವೂ

ಕರ್ಮಯೋಗವನ್ನನುಷ್ಠಿಸುವಾಗ ಅದನ್ನು ನಿಯತವಾಗಿ ನಿತ್ಯನೈಮಿತ್ತಿಕ ಕರ್ಮಾನುಷ್ಠಾನದೊಡನೆ ಅನುಷ್ಠಿಸಬೇಕೆಂದು ಈ ದರ್ಶನದ ಸಿದ್ಧಾಂತ. ಅನೇಕ ಬಗೆ ಯಾಗಿರುವ ಕರ್ಮಯೋಗದ ಪ್ರಕಾರಗಳಲ್ಲಿ ತನ್ನ ಶಕ್ತಿಗೆ ಅನುರೂಪವಾದುದನ್ನು ಆರಿಸಿಕೊಂಡು ಅದನ್ನು ತಪ್ಪದೆ ಆಚರಿಸಬೇಕು. 'ಕರ್ಮಯೋಗಸ್ತಪಸ್ತೀರ್ಥ-ದಾನ ಯಜ್ಞಾದಿ ಸೇವನಂ' ಎಂದು, ಯಾಮುನರು ಕರ್ಮಯೋಗ ಅನೇಕ ಬಗೆಯಾಗಿದೆ ಎಂಬುದನ್ನು ತಿಳಿಸಿದ್ದಾರೆ. ಈ ರೀತಿಯಲ್ಲಿ ಸಾಧಕನು ತನ್ನ ಶಕ್ತಿಗನುಸಾರವಾಗಿ ಯಾವುದಾದರೊಂದನ್ನು ಆರಿಸಿಕೊಂಡು ಅದನ್ನು ಭಗವದಾರಾಧನರೂಪವಾಗಿ ಭಗವ ತ್ಪ್ರೀತ್ಯರ್ಥವಾಗಿ, ಫಲಾಭಿಸಂಧಿರಹಿತವಾಗಿ ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನದೊಡನೆ ಆಚರಿಸಬೇಕೆಂಬುದು ಶಾಸ್ತ್ರದ ಕಟ್ಟಳೆ. ಕರ್ಮಗಳು ಮೂರು ಬಗೆ. ನಿತ್ಯನೈಮಿತ್ತಿಕ ಕರ್ಮಗಳು, ಕಾಮ್ಯಕರ್ಮಗಳು ಮತ್ತು ನಿಷಿದ್ಧವಾದ ಕರ್ಮಗಳು ಇವುಗಳಲ್ಲಿ ನಿತ್ಯನೈಮಿತ್ತಿಕ ಕರ್ಮಗಳನ್ನು ಪಾಲಿಸದಿದ್ದರೆ ಭಗವದಾಜ್ಞೆಯನ್ನು ಉಲ್ಲಂಘನೆ ಮಾಡಿದಂತಾಗುವುದು. ಆದರಿಂದ ಈಶ್ವರನಿಗ್ರಹಕ್ಕೆ ಅವಕಾಶವಾಗುತ್ತದೆ. ಕಾಮ್ಯ ಕರ್ಮಗಳು ಬೇರೆ ಬೇರೆ ಬಗೆಯ ಫಲಗಳ ಪ್ರಾಪ್ತಿಗೋಸ್ಕರ ಮಾಡತಕ್ಕವಾಗಿವೆ. ಅವು ಗಳನ್ನು ಆಯಾ ಫಲಗಳಿಗಾಗಿ ಮಾಡಬಹುದು. ಅದರಿಂದ ಐಹಿಕಬಂಧನ ಬಿಗಿಯಾಗು ವುದರಿಂದ ಮುಮುಕ್ಷು ಕಾಮ್ಯಕರ್ಮಗಳನ್ನು ಮಾಡಕೂಡದು. ಆದರೆ ಆ ಕಾಮ್ಯ ಕರ್ಮಗಳನ್ನೂ ಸಹ ಭಗವತ್ಪ್ರೀತ್ಯರ್ಥವಾಗಿ, ಭಗವದಾರಾಧನರೂಪವಾಗಿ ಆಯಾ ಕರ್ಮಗಳಿಂದ ಬರುವ ಫಲಗಳಲ್ಲಿ ಆಸಕ್ತಿ ಇಲ್ಲದೆಯೇ ಮಾಡಿದರೆ ಆಗ ಅವೂ ಬಂಧಕ ವಾಗುವುದಿಲ್ಲ. ನಿಷಿದ್ಧವಾದ ಕರ್ಮಗಳನ್ನಂತೂ ಮಾಡಲೇಕೂಡದು. ಅದರಿಂದ ಭಗವಂತನ ನಿಗ್ರಹ ಸಿದ್ಧವಾಗುತ್ತದೆ. ಹೀಗೆ ನಿತ್ಯನೈಮಿತ್ತಿಕ ಕರ್ಮಗಳು 'ಆಜ್ಞಾ ಕರ್ಮ' ಆಗಿರುವುದರಿಂದ ಅವುಗಳ ಅನುಷ್ಠಾನ ಅನಿವಾರ್ಯವೇ ಅದುದು. 'ಅನುಜ್ಞಾ ಕರ್ಮ'ವೆನಿಸಿದ ಕಾಮ್ಯಕರ್ಮವನ್ನು ಮಾಡಲೂಬಹುದು, ,ಬಿಡಲೂಬಹುದು. ನಿತ್ಯ ನೈಮಿತ್ತಿಕ ಕರ್ಮಗಳನ್ನು ಮಾಡಲೇಬೇಕೆಂಬುದನ್ನು ರಾಮಾನುಜರು ಗೀತಾಭಾಷ್ಯದಲ್ಲಿ 'ಅಹರಹರನುಷ್ಠೀಯಮಾನ ನಿತ್ಯನೈಮಿತ್ತಿಕ ಕರ್ಮಾನುಷ್ಠಾನಜಾನ್ ವಿದ್ಧಿ' (IV—32)

acharya.org

ಎಂದು ಹೇಳಿದ್ದಾರೆ. ಇದನ್ನು ವಿವರಿಸುತ್ತಾ ದೇಶಿಕರವರೂ ಸಹ 'ಏವಂ ಕರ್ಮಯೋಗಾವಾಂತರಭೇದಾನುಪದಿಶ್ಯ ತತ್ತದ್ಭೇದೇಪಿ ಸಾಧಾರಣಾನಾಂ ನಿತ್ಯನೈಮಿತ್ತಿಕಾನಾಂ ಅವಶ್ಯಾನುಷ್ಠೇಯತ್ವಂ ತತ್ಪರಿತ್ಯಾಗೇ ಪ್ರತ್ಯವಾಯಶ್ಚ ಅಭಿಹಿತಃ' ಎಂದು ನಿರೂಪಿಸಿದ್ದಾರೆ.

ನಿತ್ಯನೈಮಿತ್ತಿಕ ಕರ್ಮಾನುಷ್ಠಾನದಿಂದ ಸಮಾಜದ ಭದ್ರತೆಯೂ ಸ್ಥಿರವಾಗುತ್ತದೆ. ಅಹಂಕಾರ ಖಂಡನೆ ಆಗುತ್ತದೆ. ಪ್ರತಿಯೊಬ್ಬ ಮಾನವನೂ ಸತ್ತ್ವ, ರಜಸ್ಸು, ತಮಸ್ಸು ಎಂಬ ತ್ರಿಗುಣಗಳ ಪ್ರಭಾವಕ್ಕೆ ಒಳಗಾಗಿದ್ದಾನೆ. ತಮಸ್ಸಿನಿಂದ ಪರಿಣಮಿಸುವ ಪಾಪವನ್ನು ನಿರ್ಮೂಲಗೊಳಿಸಲು ಪ್ರತಿಯೊಬ್ಬನೂ ಯತ್ನಿಸಬೇಕು. ಇದರಿಂದ ಸತ್ತ್ವಶುದ್ಧಿಯನ್ನು ಪಡೆದುಕೊಂಡು ಸತ್ತ್ವೋನ್ನತಿಯನ್ನು ಪಡೆದುಕೊಳ್ಳಬೇಕು. ನಿತ್ಯನೈಮಿತ್ತಿಕ ಕರ್ಮಾನುಷ್ಠಾನ ಹಾಗೂ ಪ್ರತಿಷಿದ್ಧ ಕರ್ಮಗಳನ್ನು ಮಾಡದೆ ಇರುವುದು ಇವೆರಡೂ ಅಂತರಿಂದ್ರಿಯ ಮತ್ತು ಬಹಿರಿಂದ್ರಿಯ ನಿಗ್ರಹಗಳನ್ನು ದೊರಕಿಸಿ ಕೊಡಲು ಸಹಾಯ ಮಾಡುತ್ತವೆ. ಶಮದಮಾದಿಗಳಿಂದ ಚಿತ್ತೈಕಾಗ್ರತೆ ಸಾಧ್ಯವಾಗುತ್ತದೆ. ಹೀಗೆ ನಿತ್ಯನೈಮಿತ್ತಿಕ ಕರ್ಮಾನುಷ್ಠಾನ 'ಸನ್ನಿಪತ್ಯೋಪಕಾರೀ' ಆಗಿದೆ.

ಭಗವದಾರಾಧನರೂಪವಾಗಿ ಆಚರಿಸುವ ನಿತ್ಯನೈಮಿತ್ತಿಕ ಕರ್ಮಾನುಷ್ಠಾನದಿಂದ ಉಂಟಾಗುವ ಭಗವತ್ಪ್ರಸಾದದಿಂದ ಭಗವಂತನಲ್ಲಿ ನಿರಂತರವಾದ ಚಿಂತನರೂಪವಾದ ಧ್ಯಾನ ಲಭ್ಯವಾಗುತ್ತದೆ. 'ಧರ್ಮೇಣ ಪಾಪಂ ಅಪನುದತಿ' 'ಕಷಾಯಪಕ್ತಿಃ ಕರ್ಮಾಣಿ' ಮುಂತಾದ ಪ್ರಮಾಣಗಳು ಇದನ್ನು ಸಮರ್ಥಿಸುತ್ತವೆ. ಹೀಗೆ ನಿತ್ಯನೈಮಿತ್ತಿಕ ಕರ್ಮಗಳ ಅನುಷ್ಠಾನ ಅವಶ್ಯವಾಗಿ ಆಚರಿಸಲ್ಪಡಬೇಕಾದುದಾಗಿದೆ. ಇದು ಉಪಾಸನೆಗೆ ಅಂಗವಾಗಿ ಉಪಾಸನೆಯನ್ನು ಪುಷ್ಕಲಗೊಳಿಸುತ್ತದೆ.

ಸಾಧನೆಯಲ್ಲಿ ಕರ್ಮಯೋಗದ ಸ್ಥಾನ

ಕರ್ಮಯೋಗ ಮೋಕ್ಷಸಾಧನೆಯಲ್ಲಿ ಮುಖ್ಯವಾದ ಒಂದು ಭಾಗ. ಆದರೆ ಇದೇ ಸರ್ವಸ್ವವೂ ಅಲ್ಲ. ಕೇವಲ ಕರ್ಮಯೋಗವೇ ಮೋಕ್ಷೋಪಾಯವಲ್ಲ; ಕರ್ಮಯೋಗದಿಂದ ಚಿತ್ತ ಶುದ್ಧವಾಗುತ್ತದೆ. ಇದು ಜ್ಞಾನಾಕಾರವಾಗಿರುವ ಕಾರಣ ಆತ್ಮಸಾಕ್ಷಾತ್ಕಾರಕ್ಕೆ ಮಾರ್ಗವಾಗುತ್ತದೆ. ಕರ್ಮಯೋಗದಿಂದ ನೇರವಾಗಿಯಾಗಲೀ ಜ್ಞಾನಯೋಗದ ಮೂಲಕವಾಗಿಯಾಗಲೀ ಆತ್ಮಸಾಕ್ಷಾತ್ಕಾರ ಪಡೆದುಕೊಂಡವನು ತನ್ನ ಸ್ವರೂಪವನ್ನರಿತು ಮೋಕ್ಷಸಾಧನೆಯಲ್ಲಿ ಮುಂದುವರಿಯುತ್ತಾನೆ. ಅಂಥವನು ಭಕ್ತಿಯೋಗಕ್ಕೆ ಅಧಿಕಾರ ಹೊಂದುತ್ತಾನೆ. ಕರ್ಮಯೋಗ ನಿರಪಾಯವಾದ ಉಪಾಯ. ಇದನ್ನು ಮಧ್ಯದಲ್ಲಿ ಬಿಟ್ಟರೂ ಯಾವ ಪ್ರತ್ಯವಾಯವೂ ಉಂಟಾಗುವುದಿಲ್ಲ. 'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್' ಎಂದು ಗೀತೆ ಇದನ್ನು

acharya.org

ಪ್ರಶಂಸಿಸುತ್ತದೆ. ಈ ರೀತಿಯಲ್ಲಿ ಕರ್ಮಯೋಗ ಮೋಕ್ಷೋಪಾಯವಾದ ಭಕ್ತಿಯೋಗಕ್ಕೆ ಅಂಗ. ಉಪಾಸನೆ, ವೇದನ, ಧ್ಯಾನ ಮೊದಲಾಗಿ ಕರೆಯಲ್ಪಡುವ ಭಕ್ತಿಯೋಗವು ಕರ್ಮಯೋಗ ಮತ್ತು ಜ್ಞಾನಯೋಗವನ್ನು ಅಂಗಗಳನ್ನಾಗಿ ಹೊಂದಿದೆ. ಭಕ್ತಿಯೋಗಕ್ಕೆ ಕರ್ಮಯೋಗ ಭದ್ರವಾದ ಅಡಿಪಾಯ. ಹೀಗೆ ಸಾಧನೆಯಲ್ಲಿ ಕರ್ಮಯೋಗ ಅತಿಮುಖ್ಯವಾದ ಮೊದಲ ಹಂತವಾಗಿದೆ.

ಜ್ಞಾನಯೋಗ

ಜ್ಞಾನಯೋಗವೆಂಬುದರ ವಿವರಣೆಯನ್ನು 'ಜ್ಞಾನಯೋಗೋ ಜಿತಸ್ವಾಂತ್ಯೈಃ ಪರಿಶುದ್ಧಾತ್ಮನಿ ಸ್ಥಿತಿಃ' ಎಂದು ಯಾಮುನರು ಮಾಡಿದ್ದಾರೆ. ಪ್ರಕೃತಿವಿಯುಕ್ತವಾದ ಶುದ್ಧವಾದ ಆತ್ಮಸ್ವರೂಪದ ನಿರಂತರವಾದ ಚಿಂತನೆಯೇ ಜ್ಞಾನಯೋಗ ಎನ್ನಿಸುವುದು. ಆತ್ಮಸಾಕ್ಷಾತ್ಕಾರಕ್ಕೆ ಈ ಬಗೆಯ ನಿರಂತರಚಿಂತನೆ ಉಪಾಯವಾಗಿದೆ. ಈ ಜ್ಞಾನಯೋಗವೂ ಸಹ ಆ ಕಾರಣದಿಂದಲೇ ಆತ್ಮಾವಲೋಕನಕ್ಕೆ ಒಂದು ಮಾರ್ಗವಾಗಿದೆ. ಕರ್ಮಯೋಗವನ್ನು ಆರಂಭಿಸಿ ಅದನ್ನು ನಡೆಸುತ್ತಾ ಬಂದು ಚಿತ್ತಶುದ್ಧಿಯನ್ನು ಪಡೆದುಕೊಂಡ ಸಾಧಕ ಜ್ಞಾನಯೋಗಕ್ಕೆ ಅಧಿಕಾರಿಯಾಗುತ್ತಾನೆ. ನೇರವಾಗಿ ಜ್ಞಾನಯೋಗವನ್ನೇ ಯಾರೂ ಆರಂಭಮಾಡುವುದಕ್ಕಾಗುವುದಿಲ್ಲ. ಗೀತೆಯಲ್ಲಿ ಶ್ರೀಕೃಷ್ಣನು ಈ ಅಂಶವನ್ನು ಸ್ಥಿರವಾಗಿ ಹೇಳಿದ್ದಾನೆ.

ಜ್ಞಾನವೆಂಬ ಶಬ್ದಕ್ಕೆ ಅನೇಕಾರ್ಥಗಳಿವೆ. ಮೊದಲಾಗಿ ನಾವು ನಮ್ಮ ಇಂದ್ರಿಯಗಳ ಮೂಲಕ ಪಡೆಯುವ ಲೌಕಿಕ ಪದಾರ್ಥಗಳ ಅರಿವು ಜ್ಞಾನಶಬ್ದವಾಚ್ಯವಾಗುತ್ತದೆ. ಪ್ರತ್ಯಕ್ಷ, ಅನುಮಾನ ಶಬ್ದ ಮೊದಲಾದ ಪ್ರಮಾಣಗಳ ಮೂಲಕ ಪಡೆಯುವ ಈ ವಿಷಯಜ್ಞಾನ ಒಂದು ಬಗೆಯದು. ಇನ್ನೊಂದು ಅರ್ಥದಲ್ಲಿ ಪ್ರಕೃತಿಗಿಂತ ವಿಲಕ್ಷಣವಾಗಿರುವ ಆತ್ಮವಸ್ತುವಿನ ತಿಳಿವಿಗೂ ಜ್ಞಾನ ಎನ್ನುತ್ತಾರೆ. ಆತ್ಮನನ್ನು ಕುರಿತ ಅರಿವು ಸ್ವರೂಪಜ್ಞಾನವಾಗಿ ಇತರ ವಸ್ತುಗಳನ್ನು ಕುರಿತ ಅರಿವು ಧರ್ಮಭೂತಜ್ಞಾನವೆನ್ನಿಸುತ್ತದೆ. ಮತ್ತೊಂದು ಅರ್ಥದಲ್ಲಿ ಏಕಮೇವಾದ್ವಿತೀಯವಾದ ಪರವಸ್ತುವಿನ ತಿಳಿವೇ ಜ್ಞಾನ ಎಂದು ಹೇಳಿ ಜ್ಞಾನಶಬ್ದಕ್ಕೆ ಅರ್ಥವಿವರಣೆಯನ್ನು ಮಾಡಿದ್ದಾರೆ. ಪ್ರಕೃತದಲ್ಲಿ ಜ್ಞಾನವೆಂಬ ಶಬ್ದ ಆತ್ಮನನ್ನು ಕುರಿತ ತಿಳಿವಳಿಕೆಗೆ ಅನ್ವಯಿಸುತ್ತದೆ. ಜೀವಾತ್ಮನ ಪರಿಶುದ್ಧಾತ್ಮಸ್ವರೂಪವನ್ನು ಕುರಿತ ನಿರಂತರವಾದ ಧ್ಯಾನವೇ ಜ್ಞಾನಯೋಗವೆಂದು ಈ ಪ್ರಕರಣದಲ್ಲಿ ಸಿದ್ಧಾಂತ ಮಾಡಲಾಗಿದೆ.

ಅದ್ವೈತ ದರ್ಶನದಲ್ಲಿ ಜ್ಞಾನಯೋಗವೆಂದರೆ ಆತ್ಮೈಕ್ಯಜ್ಞಾನ. ಆ ದರ್ಶನಕ್ಕನು ಸಾರವಾಗಿ ಬ್ರಹ್ಮವಸ್ತುವಿಗಿಂತ ಬೇರೆಯಾದುದಿಲ್ಲವಾದ ಕಾರಣ ಆ ದರ್ಶನಕಾರರು ಆತ್ಮೈಕ್ಯಜ್ಞಾನದ ಅನುಸಂಧಾನವೇ ಜ್ಞಾನಯೋಗವೆನ್ನುತ್ತಾರೆ. ಆದರೆ ರಾಮಾನುಜ

acharya.org

ದರ್ಶನ ಈ ವಿವರಣೆಯನ್ನು ಒಪ್ಪುವುದಿಲ್ಲ. ಇವರ ಅಭಿಪ್ರಾಯದಲ್ಲಿ ಜೀವಾತ್ಮರೂ ಪರಮಾತ್ಮನಂತೆಯೇ ಸತ್ಯಭೂತರಾಗಿರುವುದರಿಂದ ಆತ್ಮಸಾಕ್ಷಾತ್ಕಾರಕ್ಕೂ ಪರಮಾತ್ಮಸಾಕ್ಷಾತ್ಕಾರಕ್ಕೆ ಹೇಗೋ ಹಾಗೆ ಅವಕಾಶವಿದೆ, ಆತ್ಮಸಾಕ್ಷಾತ್ಕಾರವಾಗದೆ ಪರಮಾತ್ಮಸಾಕ್ಷಾತ್ಕಾರವಾಗುವುದಿಲ್ಲವೆಂಬುದು ಇವರ ನಿಶ್ಚಯ. ಮತ್ತೆ ಕೆಲವರು ಜ್ಞಾನಯೋಗವೆಂಬುದಕ್ಕೆ ಭಗವಂತನ ಅಪರೋಕ್ಷಜ್ಞಾನವೆಂದು ಹೇಳುತ್ತಾರೆ. ಇದನ್ನೂ ರಾಮಾನುಜರು ಒಪ್ಪುವುದಿಲ್ಲ. ಭಗವಂತನ ಅಪರೋಕ್ಷಜ್ಞಾನ ಭಕ್ತಿಯೋಗದ ಪ್ರಕಾರವೇ ಆಗುತ್ತದೆ. ಪ್ರಕೃತಿವಿಯುಕ್ತವಾದ ಆತ್ಮಸ್ವರೂಪದ ಅನುಸಂಧಾನವನ್ನು ಆ ಕಾರಣದಿಂದ ಜ್ಞಾನಯೋಗವೆಂದು ಈ ದರ್ಶನ ಸ್ವೀಕರಿಸುತ್ತದೆ.

ಸಾಧನೆಯ ಸೋಪಾನಗಳಲ್ಲಿ ಕರ್ಮಯೋಗ ಮೊದಲನೆಯದು. ಕರ್ಮಯೋಗದಲ್ಲಿಯೂ ಆತ್ಮನ ಸ್ವರೂಪಾನುಸಂಧಾನ ಅಡಗಿದೆ. ಆದುದರಿಂದಲೇ ನೇರವಾಗಿ ಕರ್ಮಯೋಗದಿಂದ ಆತ್ಮಾವಲೋಕನ ಆಗಬಹುದು. ಹಾಗೆಯೇ ಆ ಕರ್ಮಯೋಗ ಪಕ್ವವಾದಾಗ ಸಾಧಕ ಜ್ಞಾನಯೋಗಕ್ಕೆ ಅಧಿಕಾರಿಯಾಗುತ್ತಾನೆ. ಈ ಜ್ಞಾನಯೋಗದಲ್ಲಿ ನಿರಂತರವಾಗಿ ಆತ್ಮಸ್ವರೂಪಾನುಸಂಧಾನ ಮಾಡುತ್ತಾನೆ. ಇದರ ಫಲವಾಗಿ ಅವನಿಗೆ ಆತ್ಮಸಾಕ್ಷಾತ್ಕಾರವಾಗುತ್ತದೆ. ಆಗ ಭಗವಂತನಿಗೇ ಶೇಷನಾದ ತನ್ನ ಸ್ವರೂಪವನ್ನವನು ವಿಶದತಮವಾಗಿ ಕಾಣುತ್ತಾನೆ. ಈ ಶೇಷತ್ವದ ಸಾಕ್ಷಾತ್ಕಾರವಾದ ಮೇಲೆ ಅವನು ತನ್ನ ಒಡೆಯನಾದ ಭಗವಂತನನ್ನು ಸೇರಲು ಹಾತೊರೆಯುತ್ತಾನೆ. ಭಕ್ತಿಯೋಗವನ್ನಾರಂಭಿಸುತ್ತಾನೆ. ಅದರ ಮೂಲಕ ಭಗವಂತನನ್ನು ಪಡೆಯುತ್ತಾನೆ.

ಜ್ಞಾನಯೋಗದ ವಿಚಾರ ಗೀತೆಯಲ್ಲಿ ಪ್ರಸ್ತುತವಾಗಿದೆ. ಕರ್ಮಯೋಗ ಮತ್ತು ಜ್ಞಾನಯೋಗಗಳು ಬೇರೆ ಬೇರೆ ಬಗೆಯ ಅಧಿಕಾರಿಗಳಿಗೋಸ್ಕರ ಇರುವುವೆಂದು ರಾಮಾನುಜರೂ ದೇಶಿಕರೂ ಹೇಳುತ್ತಾರೆ. ಶಕ್ತರಿಗೆ ಜ್ಞಾನಯೋಗ. ಅಶಕ್ತರಿಗೆ ಕರ್ಮಯೋಗ. ಇದನ್ನು 'ಶಕ್ತಾಶಕ್ತವಿಷಯತಯಾ ಜ್ಞಾನಕರ್ಮಯೋಗವ್ಯವಸ್ಥೇತಿ ಭಾವಃ' (ತಾ. ಚಂ. III-3) ಎಂದು ದೇಶಿಕರು ಸ್ಪಷ್ಟಪಡಿಸಿದ್ದಾರೆ. ಆತ್ಮಾವಲೋಕನಕ್ಕೆ ಜ್ಞಾನಯೋಗವೂ ಒಂದು ಸಾಧನ ಎಂಬುದನ್ನು ಈ ಸಿದ್ಧಾಂತ ಸಮರ್ಥಿಸುತ್ತದೆ. ಆದರೆ ಕರ್ಮಯೋಗದ ಹಾಗೆ ಜ್ಞಾನಯೋಗ ಸುಕರವಾದುದಲ್ಲವೆಂದು ಗೀತೆ ಎಚ್ಚರಿಸುತ್ತದೆ. ಜ್ಞಾನಯೋಗಕ್ಕೆ ಶಕ್ತರಾದವರೂ ಸಹ ಆತ್ಮಾವಲೋಕನಕ್ಕಾಗಿ ಕರ್ಮಯೋಗವನ್ನೇ ಆರಂಭಿಸಿ ನಡೆಸಬೇಕೆಂದು ತಿಳಿಸುತ್ತದೆ. ಗೀತೆಯ ಮೊದಲಿನ ಆರು ಅಧ್ಯಾಯಗಳು ಒಂದಲ್ಲ ಒಂದು ರೀತಿಯಲ್ಲಿ ಕರ್ಮಯೋಗವನ್ನೇ ಪ್ರಸ್ತಾಪಿಸುತ್ತವೆ ಎಂಬುದು ಈ ದರ್ಶನಪ್ರತಿಪಾದಕರ ಅಭಿಪ್ರಾಯ. ಜ್ಞಾನಯೋಗದ ಉಲ್ಲೇಖವೇನೋ ಅಲ್ಲಿದೆ. ಆದರೆ ಅದು ಬಹಳ ಕಠಿಣವೆಂಬುದನ್ನು ಸೂಚಿಸುವುದಕ್ಕಾಗಿ ಈ ಉಲ್ಲೇಖಗಳು ಬಂದಿವೆ ಎಂದು ಇದರಿಂದ ಗೊತ್ತಾಗುತ್ತದೆ. ಈ ದರ್ಶನಕ್ಕನುಸಾರ ಜ್ಞಾನಯೋಗ

acharya.org

ವೆಂದರೆ ಇತರರು ಹೇಳುವಂತೆ ಕೇವಲ ಜ್ಞಾನವೇ ಎಂಬ ಅರ್ಥ ಅಲ್ಲ. ಕರ್ಮಗಳೊಡನೆ ಸೇರಿಕೊಂಡಿರುವ ಆತ್ಮಾನುಸಂಧಾನ ಅದು. ಅದ್ವೈತ ದರ್ಶನದಲ್ಲಿ ಹೇಳಿರುವ ಕರ್ಮಾಭಾವವಿಶಿಷ್ಟವಾದ ಜ್ಞಾನಯೋಗ ಅಸಂಭವವೆಂದು ಈ ದರ್ಶನದ ಸಿದ್ಧಾಂತ. ಕರ್ಮಯೋಗದಲ್ಲಿ ಹೇಗೆ ಜ್ಞಾನಯೋಗದ ಅಂಶವಿದೆಯೋ ಹಾಗೆಯೇ ಜ್ಞಾನಯೋಗದಲ್ಲಿ ಕರ್ಮಯೋಗದ ಅಂಶವೂ ಇದ್ದೇ ಇದೆ. ಇದಕ್ಕಾಗಿ ಹೆಚ್ಚಿನ ಪ್ರಯತ್ನ, ಅಭ್ಯಾಸ ಮತ್ತು ತೀವ್ರವಾದ ಅವಧಾನ ಆವಶ್ಯಕ. ಜ್ಞಾನಯೋಗವನ್ನು ಕರ್ಮಯೋಗವಿಲ್ಲದೆ ಸಾಧಿಸುವುದಕ್ಕಾಗುವುದಿಲ್ಲ. ಆದರೆ ಜ್ಞಾನಯೋಗದಿಂದ ಯಾವುದು ಸಾಧ್ಯವೋ ಅದನ್ನು ಕರ್ಮಯೋಗದಿಂದಲೇ ಸಾಧಿಸಬಹುದು. ಜ್ಞಾನಿಯು ಶರೀರಾತಿರಿಕ್ತನಾದ ಪರಿಶುದ್ಧಾತ್ಮನ ಸ್ವರೂಪವನ್ನು ಕುರಿತು ನಿರಂತರವಾಗಿ ಚಿಂತಿಸುವನು. ಈ ವಿಧವಾದ ಚಿಂತನೆ ಕೊನೆಯಲ್ಲಿ ಆತ್ಮಸಾಕ್ಷಾತ್ಕಾರದಲ್ಲಿ ಫಲಿಸುವುದು. ಮನಸ್ಸು ಸತತವಾಗಿ ಆತ್ಮನಲ್ಲಿ ನೆಲೆನಿಲ್ಲುವುದರಿಂದ ಈ ಸಿದ್ಧಿಯುಂಟಾಗುತ್ತದೆ. ಇತರ ಎಲ್ಲಾ ಯೋಚನೆಗಳನ್ನೂ ಪರಿತ್ಯಾಗ ಮಾಡಿ ಕೇವಲ ಆತ್ಮಚಿಂತನೆಯಲ್ಲಿಯೇ ಜ್ಞಾನಯೋಗಿ ಮಗ್ನನಾಗಬೇಕು. ಆತ್ಮಾವಲೋಕನ ಆಗುವವರಗೆ ಲೋಕದಲ್ಲಿರುವ ಸಾಧಕ ತನ್ನ ಯಾವ ಕೆಲಸವನ್ನೂ ಬಿಡುವಂತಿಲ್ಲ. ಆ ಆತ್ಮಸಾಕ್ಷಾತ್ಕಾರ ಆದಮೇಲೆ ಅದಕ್ಕೋಸ್ಕರ ಅವನು ಮಾಡತಕ್ಕದ್ದೇನೂ ಇರುವುದಿಲ್ಲ. ಎಂದರೆ ಅಂಥವನು ತನ್ನ ಕರ್ತವ್ಯಗಳನ್ನೆಲ್ಲಾ ಪರಿತ್ಯಾಗ ಮಾಡಬಹುದೇ ಎಂಬ ಪ್ರಶ್ನೆ ಏಳುತ್ತದೆ. ಶರೀರಧಾರಣೆ ಮಾಡಿ ಈ ಲೋಕದಲ್ಲಿರುವವರೆಗೂ ಅವನು ತನ್ನ ವರ್ಣಾಶ್ರಮೋಚಿತವಾದ ಕರ್ಮವನ್ನು ಬಿಡುವಂತಿಲ್ಲ; ಬಿಡಕೂಡದು. ಅವುಗಳನ್ನವನು ಭಗವತ್ಪ್ರೀತ್ಯರ್ಥವಾಗಿ ಬೇರೆ ಪ್ರಯೋಜನವನ್ನಪೇಕ್ಷಿಸದೆ ಆಚರಿಸಲೇಬೇಕು.

ಸ್ಥಿತಪ್ರಜ್ಞನಾದ ಜ್ಞಾನಯೋಗಿ ಆತ್ಮಸಾಕ್ಷಾತ್ಕಾರಕ್ಕಾಗಿ ಯೋಗಾಭ್ಯಾಸದಲ್ಲಿ ಮಗ್ನನಾಗುವನು. 'ಪಶ್ಚಾತ್ತು ತತ್ಫಲತಯಾ ಪ್ರಜಹಾತಿ ಯದಾ ಕಾಮಾನ್ ಇತ್ಯಾದಿನಾ ಜ್ಞಾನಯೋಗೋ ವಕ್ಷ್ಯತೇ' ಎಂದು (ತಾ. ಚಂ. II-39) ದೇಶಿಕರವರು ಇದನ್ನು ಹೇಳುತ್ತಾರೆ.

ಈ ವಿಧವಾದ ಅಭ್ಯಾಸಕ್ಕೆ ಸಮಬುದ್ಧಿತ್ವ, ವೈರಾಗ್ಯ ಮತ್ತು ದ್ವಂದ್ವಾತೀತತ್ವಗಳು ಆವಶ್ಯಕ. ಕರ್ಮಯೋಗದಿಂದ ಇದು ಸಂಪಾದಿತವಾಗುತ್ತದೆ. ಯೋಗಾಭ್ಯಾಸಕ್ಕೆ ಯೋಗ್ಯವಾದ ದೇಶವನ್ನು ಆರಿಸಿಕೊಳ್ಳಬೇಕು. ಮತ್ತು ಅವಶ್ಯಕವಾದ ಉಪಕರಣಗಳನ್ನು ಹೊಂದಿಸಿಕೊಳ್ಳಬೇಕು. ಚಿತ್ತೈಕಾಗ್ರತೆಯನ್ನು ಸಂಪಾದಿಸುವುದಲ್ಲದೆ ಈಶ್ವರನಲ್ಲಿ ಮನಸ್ಸನ್ನು ನೆಡಬೇಕು. ಭಗವಂತನಲ್ಲಿ ಮನಸ್ಸನ್ನಿಡುವುದರಿಂದ ಯೋಗಾಖ್ಯವಾದ ಆತ್ಮಾವಲೋಕನ ಸಾಧ್ಯವಾಗುತ್ತದೆ ಎಂದು ಗೀತೆ ಹೇಳುತ್ತದೆ. ಈ ಅಂಶವನ್ನು ರಾಮಾನುಜರು 'ಏವಂ ಮಯಿ ಪರಸ್ಮಿನ್ ಬ್ರಹ್ಮಣಿ ಪುರುಷೋತ್ತಮೇ ಮನಸಃ ಶುಭಾಶ್ರಯೇ

acharya.org

ಸದಾ ಆತ್ಮಾನಂ ಮನೋ ಯುಂಜನ್ ನಿಯತಮಾನಸಃ ಮತ್ಸ್ಪರ್ಶಪವಿತ್ರೀಕೃತ ಮಾನಸತಯಾ ನಿಶ್ಚಲಮಾನಸಃ ಮತ್ಸಂಸ್ಥಾಂ ಮಯಿ ಸಂಸ್ಥಿತಾಂ ಶಾಂತಿಮಧಿಗಚ್ಛತಿ' ಎಂದು ನಿರೂಪಿಸುತ್ತಾರೆ. ತನ್ನ ಮನಸ್ಸನ್ನು ಭಗವಂತನಲ್ಲಿ ನೆಲೆನಿಲ್ಲಿಸಿದರೆ ಆ ಪರಮಾತ್ಮನ ಸಂಸ್ಪರ್ಶದಿಂದ ಮನಸ್ಸು ಪವಿತ್ರವಾಗಿ ನಿಶ್ಚಲವಾಗುವುದು. ಹಾಗೂ ತನ್ನ ನಿಜಸ್ವರೂಪವನ್ನು ಕಾಣಲು ಸಮರ್ಥವಾಗುವುದು. ಕರ್ಮಯೋಗದಲ್ಲಿ ಯಶಸ್ಸುಂಟಾಗಬೇಕಾದರೆ ಭಗವಂತನಲ್ಲಿ ಮನಸ್ಸು ಹೇಗೆ ಪ್ರವಣವಾಗಬೇಕೋ ಹಾಗೆಯೇ ಜ್ಞಾನಯೋಗದಲ್ಲಿ ಯಶಸ್ಸು ಬರಬೇಕಾದರೂ ಈಶ್ವರಕೃಪೆ ಆವಶ್ಯಕ. ಹೀಗೆ ಪರಮಾತ್ಮನ ಚಿಂತನವೂ ಆತ್ಮಾವಲೋಕನದ ಪ್ರಾಪ್ತಿಗೆ ಅವಶ್ಯವಾದ ಸಾಧನನೆಂಬುದನ್ನು ದೇಶಿಕರು 'ಉಚಿತದೇಶಪ್ರಭೃತಿ ಪರಮಾತ್ಮ ಚಿಂತನಪರ್ಯಂತಂ ಹ್ಯತ್ರ ಯೋಗೋಪಕರಣಮೇವ' ಎಂದು (ತಾ. ಚಂ. VI–16) ವಿವರಿಸಿದ್ದಾರೆ.

ಆತ್ಮಶುದ್ಧಿಯನ್ನು ಸಾಧಿಸಿಕೊಂಡ ಸಾಧಕ ಯೋಗದಲ್ಲಿ ಆತ್ಮಾನಂದವನ್ನನುಭವಿಸುವನು. ದುಃಖಕಾರಣಗಳಿಂದ ಅವನು ವಿಚಲಿತನಾಗುವುದಿಲ್ಲ. ಆತ್ಮನಲ್ಲಿ ಸ್ಥಿರನಾಗಿ ನಿಲ್ಲಬಯಸುವವನು ತನ್ನ ಮನಸ್ಸಿನಿಂದ ಎಲ್ಲ ಬಗೆಯ ಆಶೆಗಳನ್ನೂ ದೂರಮಾಡಬೇಕು. ಇಂದ್ರಿಯಜಯ ಆತ್ಮಾವಲೋಕನಕ್ಕೆ ಅತ್ಯವಶ್ಯಕವಾದುದು. ಬಾಹ್ಯಪ್ರಪಂಚದ ಪ್ರವೃತ್ತಿಗಳಿಂದ ಮನಸ್ಸನ್ನು ಬೇರ್ಪಡಿಸಿ ಅದನ್ನು ಆತ್ಮನಲ್ಲಿ ನೆಲೆ ನಿಲ್ಲಿಸಬೇಕು.

ಯೋಗಾಭ್ಯಾಸವಿಧಿಯನ್ನು ಗೀತೆ ಅರನೆಯ ಅಧ್ಯಾಯದಲ್ಲಿ ನಿರೂಪಿಸುತ್ತದೆ. ಸಾಧಕನು ಮನಸ್ಸನ್ನು ವಶಪಡಿಸಿ ಅದನ್ನು ಆತ್ಮನಲ್ಲಿ ಸಂಸ್ಥಾಪಿಸುತ್ತಾನೆ. 'ಪ್ರಶಾಂತಮಾನಸಂ' 'ಶಾಂತರಜಸಂ' 'ಅಕಲ್ಮಷಂ' 'ಬ್ರಹ್ಮಭೂತಮ್' ಎಂದು ಗೀತೆ ಆತ್ಮಾನುಭವಕ್ಕೆ ಅರ್ಹನಾದವನನ್ನು ಕರೆಯುತ್ತದೆ. ಅಂಥ ಯೋಗಿ ಆತ್ಮಾನಂದವನ್ನನುಭವಿಸುತ್ತಾನೆ. ಯೋಗಾಭ್ಯಾಸದಿಂದ ಬರುವ ಈ ಆತ್ಮಾನುಭವರೂಪವಾದ ಸುಖ ನಿರತಿಶಯವಾದುದೆಂದು ದೇಶಿಕರು ಹೇಳುತ್ತಾರೆ. ಯೋಗಾರೂಢನ ಆತ್ಮಾನುಭವ 'ಚತುರ್ಧಾ ಯೋಗಲಕ್ಷಣಮ್' ಎಂದು ಯಾಮುನರು ಹೇಳಿರುವಂತೆ ನಾಲ್ಕು ಹಂತಗಳಲ್ಲಿರುವುದೆಂದು ದೇಶಿಕರು ಹೇಳುತ್ತಾರೆ.

ಮೊದಲ ಹಂತದಲ್ಲಿ ಜೀವರುಗಳ ಪರಸ್ಪರ ಸಾಮ್ಯದ ಸಾಧನೆ ಆಗುತ್ತದೆ. ಈ ಸಮದರ್ಶನದ ಅಭಿಪ್ರಾಯ ಜೀವರುಗಳಿಗೆ ಐಕ್ಯವನ್ನಾಗಲೀ ಅಭೇದವನ್ನಾಗಲೀ ಹೇಳುವುದರಲ್ಲಿಲ್ಲ. ಬೇರೆಬೇರೆ ಆಕಾರಗಳನ್ನು ಹೊಂದಿರುವ ಬೇರೆ ಬೇರೆ ಆತ್ಮರುಗಳೆಲ್ಲ ಜ್ಞಾನಸ್ವರೂಪರೇ ಆಗಿರುವ ಕಾರಣ ಅವರು ಪರಸ್ಪರ ಸಮರು ಎಂಬ ಅನುಭವ ಇಲ್ಲಿ ಆಗುತ್ತದೆ. (VI–29)

ಮುಂದಿನ ಹಂತದಲ್ಲಿ ಪರಮಾತ್ಮನಂತೆಯೇ ಜೀವರುಗಳೂ ಜ್ಞಾನಸ್ವರೂಪರಾಗಿರುವ ಕಾರಣ ಸಮರೆಂದು ಅನುಭವಕ್ಕೆ ಬರುತ್ತದೆ. ಜೀವರುಗಳು ಪುಣ್ಯಪಾಪ

acharya.org

ತಾರತಮ್ಯಗಳ ಕಾರಣ ದೇವಮನುಷ್ಯರೂಪದಿಂದ ಬೇರೆಬೇರೆಯಾಗಿದ್ದಾರೆ. ಈ ಪುಣ್ಯ ಪಾಪ ರೂಪ ತಾರತಮ್ಯವನ್ನು ಜೀವರು ಕಳೆದುಕೊಂಡಾಗ ಅವರು ಪರಮಾತ್ಮನೊಡನೆ ಏಕರೂಪರಾಗಿದ್ದಾರೆಂದು ಯೋಗಿ ಅನುಸಂಧಾನ ಮಾಡುತ್ತಾನೆ. (VI–30) ಪುಣ್ಯ ಪಾಪವನ್ನು ಕಳೆದುಕೊಂಡ ಪರಿಶುದ್ಧಾತ್ಮರಿಗೂ ಪರಮಾತ್ಮನಿಗೂ ಸಾಮ್ಯವನ್ನು ಇವನು ಅನುಸಂಧಾನ ಮಾಡುವನು. ಜ್ಞಾನಸ್ವರೂಪನಾದ ಪರಮಾತ್ಮನು ಜ್ಞಾನ ಸ್ವರೂಪರಾದ ಆತ್ಮರುಗಳೊಡನೆ ಸ್ವರೂಪಸಾಮ್ಯವನ್ನು ಹೊಂದಿದ್ದಾನೆಂದು ಈ ಯೋಗಿ ಅನುಸಂಧಾನ ಮಾಡುತ್ತಾನೆ. ಈ ಸಾಮ್ಯಾನುಸಂಧಾನದಿಂದ ಸಾಧಕ ಇನ್ನೂ ಮುಂದಿನ ಸಾಮ್ಯಾನುಸಂಧಾನಕ್ಕೆ ಅರ್ಹನಾಗುತ್ತಾನೆ. ಈ ಮೂರನೆಯ ಹಂತ ದಲ್ಲಿ ಸಾಧಕ ಚೇತನಾಚೇತನ ಪದಾರ್ಥಗಳಲ್ಲೆಲ್ಲಾ ಪರಮಾತ್ಮನ ಅಂತರ್ಯಾಮಿ ತ್ವವನ್ನು ಅನುಸಂಧಾನಮಾಡುತ್ತಾನೆ. ಇಲ್ಲಿ ಜೀವ ಮತ್ತು ಈಶ್ವರ ಸಾಮ್ಯಕ್ಕೆ ಅಸಂಕುಚಿತವಾದ ಜ್ಞಾನೈಕಾಕಾರತೆ ಮೂಲ. ಹಿಂದಿನ ಹಂತದಲ್ಲಿ ಅಕರ್ಮವಶ್ಯತ್ವ ಜೀವೇಶ್ವರ ಸಾಮ್ಯಕ್ಕೆ ಕಾರಣವೆಂದು ಹೇಳಲಾಯಿತು. ಕರ್ಮರೂಪವಾದ ಅವಿದ್ಯಾ ಸಂಬಂಧವು ತಪ್ಪಿದ ಕಾರಣ ಜೀವನು ಪರಿಶುದ್ಧಾತ್ಮಸ್ಥಿತಿಯಲ್ಲಿ ಅಸಂಕುಚಿತವಾದ ಜ್ಞಾನದ ಸ್ವರೂಪವನ್ನು ಹೊಂದಿದವನಾದ ಕಾರಣ ಜೀವರಿಗೂ ಈಶ್ವರನಿಗೂ ಸಾಮ್ಯ ವಿದೆಯೆಂಬುದನ್ನು ಸಾಧಕ ಈ ಹಂತದಲ್ಲಿ ಸಾಕ್ಷಾತ್ಕರಿಸುತ್ತಾನೆ.

ಈ ಅನುಸಂಧಾನದಿಂದ ಯೋಗಿ ಕೆಳಗೆ ಕಂಡ ಅಂಶಗಳನ್ನು ಸಾಕ್ಷಾತ್ಕರಿಸು ತ್ತಾನೆ :

೧. ಜೀವರುಗಳು ಪರಸ್ಪರ ಸಮರಾಗಿದ್ದಾರೆ ; ಅಭಿನ್ನರಾಗಿಲ್ಲ.

೨. ಅವರೆಲ್ಲರೂ ಜ್ಞಾನಸ್ವರೂಪರೇ ಆಗಿರುವುದು ಇದಕ್ಕೆ ಕಾರಣ.

೩. ಯಾವಾಗಲೂ ಜ್ಞಾನಸಂಕೋಚವನ್ನು ಹೊಂದದ ಈಶ್ವರ ಈ ಜೀವರು ಗಳೊಡನೆ ಸ್ವರೂಪತಃ ಸಾಮ್ಯ ಹೊಂದಿದ್ದಾನೆ.

೪. ಪರಮಾತ್ಮನು ಸರ್ವಭೂತಸ್ಥಿತನಾಗಿರುವ ಕಾರಣ ಅವನಿಲ್ಲದೆ ಯಾವುದೂ ಇರಲಾರದು.

೫. ಪರಮಾತ್ಮನಿಗೂ ಜೀವರುಗಳಿಗೂ ಅವರ್ಜನೀಯವಾದ ಸಂಬಂಧವಿದೆ.

೬. ಬ್ರಹ್ಮವಸ್ತುವಿನಿಂದ ಎಲ್ಲ ಆತ್ಮರೂ ಬೇರ್ಪಡಿಸಲಾಗದೆ ಇರುವುದರಿಂದಲೂ ಅವರೆಲ್ಲ ಒಂದು ಎಂಬ ವ್ಯವಹಾರ ಬಂದಿದೆ.

ಹೀಗೆ ಈ ಮೂರು ಹಂತಗಳಲ್ಲಿ ಸಿದ್ಧಿಯನ್ನು ಪಡೆದ ಯೋಗಿ ಜೀವಾತ್ಮ ಯೋಗಕಾಷ್ಠೆ ಎನಿಸಿದ ನಾಲ್ಕನೆಯ ಹಂತದಲ್ಲಿ ಯೋಗಾಭ್ಯಾಸದ ಪರಮಫಲವನ್ನು ಪಡೆಯುತ್ತಾನೆ. ಜೀವಸಾಮ್ಯವನ್ನು ಸಾಕ್ಷಾತ್ಕರಿಸಿರುವ ಕಾರಣ ಯೋಗಿ ಈ ಹಂತದಲ್ಲಿ ಸುಖಗಳನ್ನಾಗಲೀ ದುಃಖಗಳನ್ನಾಗಲೀ ತನಗೆ ಸಂಬಂಧಿಸಿಲ್ಲವೆಂಬುದನ್ನು ದೇಹಾತ್ಮ

acharya.org

ವಿವೇಕದ ಮೂಲಕ ಸ್ಪಷ್ಟವಾಗಿ ಮನಗಾಣುತ್ತಾನೆ. ಆತ್ಮನು ಜ್ಞಾನಾನಂದಮಯ ನೆಂದೂ, ಕರ್ಮಜ್ಞಾನಗಳ ತಾರತಮ್ಯದ ಕಾರಣ ಸುಖದುಃಖಗಳು ಸಂಭವಿಸುವು ವೆಂದೂ ಮನಗಂಡ ಈ ಯೋಗಿ ತನ್ನ ಆತ್ಮಕ್ಕೂ ಆ ಸುಖದುಃಖಗಳಿಗೂ ಅಸಂಬಂಧ ವನ್ನು ಸಾಧಿಸುತ್ತಾನೆ. ಅಹಂತೆ-ಮಮತೆಗಳಿಲ್ಲದ ಕಾರಣ ಇವನು ಸುಖದುಃಖಗಳ ಬಗೆಗೆ ಉದಾಸೀನನಾಗಿರುತ್ತಾನೆ. ಸಾಮಾನ್ಯವಾಗಿ ನಮಗೆ ಸುಖ ಆದರೆ ಅಥವಾ ದುಃಖ ಬಂದರೆ ನಾವು ನಲಿಯುತ್ತೇವೆ ಮತ್ತು ದುಃಖಿಸುತ್ತೇವೆ. ಆದರೆ ನಮಗೆ ಸಂಬಂಧಿಸಿದ ಮತ್ತೊಬ್ಬರಿಗೆ ಸುಖದುಃಖಗಳಾದರೆ ನಾವು ವಿಚಲಿತರಾಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಆ ಸುಖದುಃಖಗಳು ನಮಗೆ ಸಂಬಂಧಿಸಿಲ್ಲವೆಂದು ನಾವು ಭಾವಿಸುತ್ತೇವೆ. ಈ ನ್ಯಾಯವನ್ನು ನಮ್ಮ ಬಗೆಗೂ ನಾವು ಅನ್ವಯಿಸಿಕೊಳ್ಳಬೇಕೆಂದು ಈ ಅಸಂಬಂಧದ ನಿಯಮ ಸಾರುತ್ತದೆ. ಮೂರನೆಯವನ ಲಾಭ ನಷ್ಟಗಳು ಹೇಗೋ ಹಾಗೆ ನಮಗೆ ಒದಗುವ ಲಾಭನಷ್ಟಗಳೂ ನಮಗೆ ಸಂಬಂಧಿಸಿಲ್ಲವೆಂದು ಅನುಸಂಧಾನ ಮಾಡುವುದು ನಿರ್ವಿಕಾರಕಾಷ್ಠೆ ಎನಿಸುವುದು. ಇದು ಯೋಗದ ಉನ್ನತ ದೆಶೆ. ಇಲ್ಲಿ ಆತ್ಮಸ್ವರೂಪಾನುಸಂಧಾನ ದೃಢವಾಗಿರುತ್ತದೆ; ಸಮದರ್ಶನ ಸಿದ್ಧಿಸುತ್ತದೆ.

ಜ್ಞಾನಯೋಗದಿಂದ ಲಭ್ಯವಾಗುವ ಆತ್ಮಾವಲೋಕನದ ಸ್ವರೂಪವನ್ನು ಹೀಗೆ ಈ ಸಿದ್ಧಾಂತದಲ್ಲಿ ನಿರೂಪಿಸಲಾಗಿದೆ. ಪ್ರಕೃತಿಗಿಂತ ಆತ್ಮವಸ್ತು ವಿಲಕ್ಷಣವಾದುದೆಂದು ಸಾಧಕ ಸಾಕ್ಷಾತ್ಕರಿಸಿಕೊಳ್ಳುವುದು ಇದರ ಗುರಿ. ನಿತ್ಯತ್ವ, ಅಮಲತ್ವ, ಆನಂದತ್ವ ಮತ್ತು ಪ್ರಕೃತಿವಿಯುಕ್ತತ್ವಗಳು ಆತ್ಮನ ಲಕ್ಷಣಗಳೆಂದು ಅವನು ಮನಗಂಡು ಇಂಥ ಶುದ್ಧಾತ್ಮ ವಸ್ತುವನ್ನು ಕುರಿತು ಧ್ಯಾನಿಸುವನು. ಈ ಆತ್ಮಾವಲೋಕನವೇ ಸಾಧನೆಯ ಗಮ್ಯವಲ್ಲ. ಪರಮಪುರುಷನನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕೆ ಇದು ಒಂದು ಮುಖ್ಯ ವಾದ ಸೋಪಾನ, ಸಾಧಕ ಆತ್ಮಸಾಕ್ಷಾತ್ಕಾರ ಮಾಡಿಕೊಂಡಾಗ ಆತ್ಮನ ಸ್ವರೂಪ ವಿಶದತಮವಾಗಿ ಅವನಿಗೆ ಪ್ರಕಾಶಿಸುತ್ತದೆ. ಆಗ ಆತನು ತನ್ನ ಆತ್ಮವಸ್ತು ಭಗವಂತ ನಿಗೇ ಶೇಷಭೂತವಾಗಿದೆಯೆಂಬುದನ್ನೂ ಭಗವಂತನನ್ನುಳಿದು ಇದು ಇರಲಾರದೆಂದೂ, ಆ ಭಗವಂತನನ್ನು ಸೇರುವುದೇ ಅವನಿಗೆ ಪುರುಷಾರ್ಥವೆಂದೂ ಮನಗಾಣುತ್ತಾನೆ. ಶೇಷತ್ವ ಆತ್ಮನ ಅಸಾಧಾರಣವಾದ ಲಕ್ಷಣ. ಇದು ಸ್ಪಷ್ಟವಾದಾಗ ಜೀವನು ತನಗೆ ಶೇಷಿಯಾದ ಪರಮಾತ್ಮನನ್ನು ಹೊಂದಲು ಹಾತೊರೆಯುತ್ತಾನೆ. ಅದು ಮೊದಲ್ಗೊಂಡು ಕೇವಲ ಭಗವಂತನ ಸಂಶ್ಲೇಷಕ್ಕಾಗಿ ಹಂಬಲಿಸುವ ಜ್ಞಾನಿಯಾಗಿ ಪರಿವರ್ತನ ಗೊಳ್ಳುತ್ತಾನೆ.

ಆದುದರಿಂದಲೇ ವಿಶಿಷ್ಟಾದ್ವೈತ ಸಿದ್ಧಾಂತ ಭಗವತ್ಸಾಕ್ಷಾತ್ಕಾರಕ್ಕೆ ಮೊದಲು ಆತ್ಮಸಾಕ್ಷಾತ್ಕಾರ ಅತ್ಯವಶ್ಯಕವೆಂದು ಒತ್ತಿ ಹೇಳುತ್ತದೆ. ಆತ್ಮಸಾಕ್ಷಾತ್ಕಾರ ಪಡೆದವ ರೆಲ್ಲಾ ಮುಂದೆ ತಮಗೆ ಇಷ್ಟ ಇರಲಿ, ಇಲ್ಲದಿರಲಿ, ಭಗವತ್ಸಾಕ್ಷಾತ್ಕಾರದ ಹಾದಿಯಲ್ಲಿ

acharya.org

ಮುಂದುವರಿಯುವರೆಂದು ಹೇಳುವುದಕ್ಕಾಗುವುದಿಲ್ಲ. ಸಾಧನ ಮಾರ್ಗದಲ್ಲಿ ಸಾಧಕನ ಆಶೆ ಆಕಾಂಕ್ಷೆಗಳಿಗನುಗುಣವಾಗಿ, ಸಾಧಕನ ಸಾಧನೆಗನುಗುಣವಾಗಿ ಫಲಪ್ರಾಪ್ತಿಯಾಗುವುದೇ ವಿನಾ ತನ್ನಷ್ಟಕ್ಕೆ ತಾನೇ ಸಾಧನೆ ಬೆಳೆದುಕೊಂಡು ಹೋಗುವುದಿಲ್ಲ. ಪುರುಷಪ್ರಯತ್ನ ಭಗವಂತನ ದಯೆಯಿಂದ ಬಲಗೊಂಡು ಆಧ್ಯಾತ್ಮಿಕಸಿದ್ಧಿಗೆ ಕಾರಣವಾಗುತ್ತದೆ. ಭಗವಂತನ ದಯೆ ಇಲ್ಲದೆ ಯಾವ ಸಾಧನೆಯೂ ಎಳ್ಳಷ್ಟೂ ಮುಂದುವರಿಯಲಾರದು. ಕರ್ಮಯೋಗವನ್ನಾಗಲೀ ಜ್ಞಾನಯೋಗವನ್ನಾಗಲೀ, ಭಕ್ತಿಯೋಗವನ್ನಾಗಲೀ ನಡೆಸಿಕೊಂಡು ಹೋಗಬೇಕಾದರೆ, ಅದರಲ್ಲಿ ಫಲವನ್ನು ಪಡೆಯಬೇಕಾದರೆ, ಭಗವಂತನ ದಯೆ ಅತ್ಯಾವಶ್ಯಕ. ಹೀಗೆಯೇ ಪುರುಷಪ್ರಯತ್ನವೂ ಇದಕ್ಕಾಗಿ ಅವಶ್ಯಕ.

ಸಾಧನೆಯ ಸೋಪಾನಗಳಲ್ಲಿ ಆತ್ಮಸಾಕ್ಷಾತ್ಕಾರ ಬಹಳ ಮುಖ್ಯವಾದ ಘಟ್ಟ. ಬಹಳ ಕಠಿಣವಾದ ಮತ್ತು ದೀರ್ಘವಾದ ಪ್ರಯತ್ನಗಳಿಂದಲೇ ಇದು ಶಕ್ಯ. ಕಾಮ್ಯಕರ್ಮಗಳನ್ನು ಮಾಡುವ ಕಾಮಕಾಮೀ ಆತ್ಮಕಾಮಿಯಾಗಿ ಕೊನೆಗೆ ಇದರ ಫಲವಾಗಿ ಭಗವತ್ಕಾಮಿಯಾಗುತ್ತಾನೆ. ಈ ಸಿದ್ಧಾಂತದ ರೀತ್ಯಾ ಜ್ಞಾನಯೋಗ ಮೋಕ್ಷಸಾಧನೋಪಾಯದ ಮುಖ್ಯವಾದ ಒಂದು ಭಾಗವಾಗಿದೆಯೇ ವಿನಾ ತಾನೇ ಸ್ವತಂತ್ರವಾದ ಮೋಕ್ಷ ಸಾಧನವಲ್ಲ. ಭಕ್ತಿಯೋಗಕ್ಕೆ ಅಂಗವಾದುದು ಇದು. ಈ ಅಂಶವನ್ನೇ ಯಾಮುನರು.

'ಜ್ಞಾನಕರ್ಮಾತ್ಮಿಕೇ ನಿಷ್ಠೇ ಯೋಗಲಕ್ಷ್ಯೇ ಸುಸಂಸ್ಕೃತೇ ।
ಆತ್ಮಾನುಭೂತಿಸಿದ್ಧ್ಯರ್ಥೇ ಪೂರ್ವಷಟ್ಕೇನ ಚೋದಿತೇ ॥

ಎಂಬಲ್ಲಿ ಸ್ಪಷ್ಟಪಡಿಸಿದ್ದಾರೆ. ಇದೇ ಅಂಶವನ್ನು ರಾಮಾನುಜರೂ ಸಹ ತಮ್ಮ ಭಾಷ್ಯದಲ್ಲಿ ನಿರೂಪಿಸಿದ್ದಾರೆ. ಪರಮಾತ್ಮಪ್ರಾಪ್ತಿಗೆ ಪರಮಾತ್ಮೋಪಾಸನೆಯೇ ಮುಖ್ಯವಾದ ಕಾರಣ. ಕರ್ಮಯೋಗ ಮತ್ತು ಜ್ಞಾನಯೋಗಗಳು ಈ ಉಪಾಸನೆಗೆ ಸಹಾಯ ಮಾಡುವುದರಿಂದ ಪರಂಪರಯಾ ಕಾರಣಗಳು ಎಂದು ದೇಶಿಕರವರು 'ಪರಮಾತ್ಮೋಪಾಸನಮೇವ ತತ್ಕ್ರತುನ್ಯಾಯಾತ್ ತತ್ಪ್ರಾಪ್ತ್ಯುಪಾಯಃ। ಜೀವಜ್ಞಾನಂ ಕರ್ಮಾನುಷ್ಠಾನಂ ಚ ತನ್ನಿರ್ವರ್ತಕತ್ವೇನ ಪರಂಪರಯಾ ಉಪಾಯ ಇತಿ ಭಾವಃ।' (VII-1) ಎಂದು ತಿಳಿಸಿದ್ದಾರೆ.

ಭಕ್ತಿಯೋಗ

ಆಚಾರ್ಯ ಯಾಮುನರು ಭಕ್ತಿಯೋಗದ ಸ್ವರೂಪವನ್ನು 'ಭಕ್ತಿಯೋಗಃ ಪರೈಕಾಂತಪ್ರೀತ್ಯಾ ಧ್ಯಾನಾದಿಷು ಸ್ಥಿತಿಃ' ಎಂದು ನಿರೂಪಿಸಿದ್ದಾರೆ. ಭಗವಂತನ ಪ್ರೀತಿಗಾಗಿಯೇ ಸಾಧಕನು ನಡೆಸುವ ಭಗವಚ್ಚಿಂತನ ಧ್ಯಾನಾದಿಗಳು ಭಕ್ತಿಯೋಗ

acharya.org

ವೆನಿಸುವುದು. ಕರ್ಮಯೋಗದ ಅನುಷ್ಠಾನದಿಂದ ಚಿತ್ತಶುದ್ಧಿ ಆದ ಸಾಧಕ ಜ್ಞಾನ ಯೋಗದಿಂದ ಆತ್ಮಸಾಕ್ಷಾತ್ಕಾರವನ್ನು ಹೊಂದುವನು. ಇಂಥವನು ತನ್ನ ಆತ್ಮಸ್ವರೂಪ ವನ್ನು ಚೆನ್ನಾಗಿ ಅರಿಯುವನು. ತಾನು ಸ್ವರೂಪತಃ ಭಗವಂತನಿಗೇ ಸೇರಿದವನಾಗಿ ಅವನಿಗೆ ಅತಿಶಯವನ್ನುಂಟುಮಾಡುವುದೇ ತನ್ನ ಸ್ವರೂಪವೆಂಬುದನ್ನು ಅವನು ಮನ ಗಾಣುವನು. ಭಗವಂತನು ತನಗೆ ಅಂತರ್ಯಾಮಿಯೂ ಸ್ವಾಮಿಯೂ ಆಗಿರುವನೆಂಬು ದನ್ನರಿತ ಈ ಸಾಧಕ ಅವನನ್ನುಳಿದು ತಾನಿರಲಾರನೆಂಬುದನ್ನು ತಿಳಿಯುವನು. ತನಗೆ ಶೇಷಿಯಾದ ಆ ಪರಮಾತ್ಮನನ್ನು ಸೇರುವುದೂ ಅವನ ನಿತ್ಯಕೈಂಕರ್ಯವನ್ನು ನಡೆಸು ವುದೂ ತನ್ನ ಪುರುಷಾರ್ಥವೆಂಬುದು ಇವನಿಗೆ ಸ್ಪಷ್ಟವಾಗುತ್ತದೆ. ಇಂಥ ಸಾಧಕ ತನ್ನ ಉಸುರಿಗೂ ಉಸುರಾದ ಆ ದೇವನನ್ನು ಅತಿಶಯವಾಗಿ ಪ್ರೀತಿಸುತ್ತಾನೆ. ಅವನ ದಯೆ ಯನ್ನೇ ಬೇಡಿ ಕರಗಿ ಹೋಗುತ್ತಾನೆ. ಭಗವಂತನನ್ನು ಪಡೆಯುವುದಕ್ಕಾಗಿ ಅವನನ್ನೇ ನಿರಂತರವಾಗಿ ಪ್ರೀತಿಸಿ ಧ್ಯಾನಿಸುವುದೇ ಭಕ್ತಿಯೋಗ.

ಅಲ್ಪನೂ ಅಶಕ್ತನೂ ಅಜ್ಞನೂ ಆದ ತನ್ನ ಮೇಲೆ ಭಗವಂತನು ತನ್ನ ದಯಾ ವರ್ಷವನ್ನು ಸುರಿಸಿರುವುದನ್ನು ನೆನೆದಾಗ ಸಾಧಕ ಆ ಭಗವಂತನಲ್ಲಿ ಅಪಾರವಾದ ಕೃತಜ್ಞತೆಯನ್ನು ಹೊಂದಿ ಪ್ರೀತಿಸುವನು. ತನ್ನ ಹಿಂದಿನ ಅಕೃತ್ಯಗಳಿಗಾಗಿ ಪಶ್ಚಾತ್ತಾಪ ಪಡುವವನಾಗಿ ಭಗವಂತನನ್ನು ಸೇರುವ ಮಾರ್ಗವನ್ನು ಅನುಸರಿಸುವನು. ತನಗೆ ಸಹಜಬಂಧುವೂ ತಾಯಿತಂದೆಯೂ ಆದ ಆ ಭಗವಂತನ ಕಡೆಗೆ ಸಾಧಕ ಸಾರುವ ಈ ವಿಧಾನ ಪ್ರೀತಿಯಿಂದ ಆರಂಭವಾಗಿ ಪ್ರೀತಿಯಿಂದ ಬೆಳೆದು ಪ್ರೀತಿಯಲ್ಲಿ ಪೂರ್ಣ ವಾಗುವುದು. ಭಕ್ತಿಯನ್ನು 'ಮಹನೀಯವಿಷಯೇ ಪ್ರೀತಿಃ' ಎಂದು ಆ ಕಾರಣದಿಂದಲೇ ನಿರೂಪಿಸಿದ್ದಾರೆ. ಇದನ್ನೇ 'ಸ್ನೇಹಪೂರ್ವಮನುಧ್ಯಾನಂ ಭಕ್ತಿರಿತ್ಯಭಿಧೀಯತೇ' ಎಂದು ತಿಳಿಸಿ ಪ್ರೀತಿಪೂರ್ವಕವಾಗಿ ಮಾಡುವ ಧ್ಯಾನಾದಿಗಳು ಭಕ್ತಿ ಎಂದು ನಿರೂಪಿಸ ಲಾಗಿದೆ. ಇದು ಅನಿರ್ವಚನೀಯವಾದುದು; ಪ್ರೇಮಸ್ವರೂಪವುಳ್ಳುದು; ಅಮೃತಸ್ವರೂಪ ವುಳ್ಳುದು; ಈ ಭಕ್ತಿಯನ್ನು ಪಡೆದಿರುವವನು ಅಮೃತ, ಸಿದ್ಧ, ತೃಪ್ತ ಎಂದು ನಾರದ ಸೂತ್ರಕಾರರು ಹೇಳುತ್ತಾರೆ. ಭಗವಂತನ ಸ್ವರೂಪವನ್ನೂ ವೈಭವವನ್ನೂ ತಿಳಿದವನು ಆ ಪರಾತ್ಪರನಲ್ಲಿ ಬೆಳಸಿಕೊಳ್ಳುವ ಈ ಪ್ರೀತಿ ಹೀಗೆ ಭಕ್ತಿ ಎನ್ನಿಸುವುದು.

ಈ ಸಂಸಾರದ ಕ್ಲೇಶಗಳನ್ನು ಪರಿಹರಿಸಿಕೊಂಡು ಭಗವದನುಭವದ ಮಹದಾ ನಂದವನ್ನು ಪಡೆಯಲು ಈ ಭಕ್ತಿ ಸಾಧನವಾಗುವುದರಿಂದ ಇದು ಮೋಕ್ಷೋಪಾಯ ವಾಗಿ ಭಕ್ತಿಯೋಗವೆನ್ನಿಸುವುದು.

ಭಕ್ತಿಮಾರ್ಗ ಆಧ್ಯಾತ್ಮಿಕಸಾಧನೆಯ ಮಾರ್ಗಗಳಲ್ಲಿ ಅತಿ ಮುಖ್ಯವಾದುದು. ಅನಾದಿಯಾದ ವೈದಿಕಧರ್ಮದಲ್ಲಿ ಇದಕ್ಕೆ ಪ್ರಧಾನವಾದ ಸ್ಥಾನವಿದೆ. ಭಗವಂತನಲ್ಲಿ ಶ್ರದ್ಧೆಯುಳ್ಳವರಿಗೆಲ್ಲಾ ಇದು ಅನ್ವಯಿಸುತ್ತದೆ. ಅವನು ಸರ್ವವಿಧ ಬಂಧುವೆಂಬುದನ್ನೂ

acharya.org

ಅವನ ಪ್ರಸನ್ನತೆಯನ್ನು ಪಡೆದುಕೊಳ್ಳದೇ ನಮಗೆ ಮುಕ್ತಿಯಿಲ್ಲವೆಂಬುದನ್ನೂ ಈಶ್ವರ ವಾದ ಸ್ಥಾಪಿಸಿದೆ. ಕೇವಲ ಕರ್ಮದಿಂದಾಗಲೀ ಯಜ್ಞದಿಂದಾಗಲೀ ಅವನನ್ನು ಸಾಧಿಸುವುದು ಆಗದ ಮಾತು. 'ಯಮೇವೈಷ ವೃಣುತೇ ತೇನ ಲಭ್ಯಃ ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ' ಎಂದು ಶ್ರುತಿ ಹೇಳುತ್ತಾ ಯಾರನ್ನು ಈಶ್ವರನು ಆರಿಸಿಕೊಳ್ಳುವನೋ ಅವನು ಈಶ್ವರನನ್ನು ಪಡೆಯುವನೆಂದು ಹೇಳುತ್ತದೆ! ಭಗವಂತನನು ಯಾವನು ಅತಿಶಯವಾಗಿ ಪ್ರೀತಿಸುವನೋ ಅವನನ್ನು ಭಗವಂತನೂ ಪ್ರೀತಿಸುತ್ತಾನೆ. ಆದುದರಿಂದ ಭಕ್ತಿಮಾರ್ಗ ಪ್ರೀತಿರೂಪವಾದ ಮೋಕ್ಷೋಪಾಯವಾಗಿದೆ.

ಭಕ್ತಿಯ ಸ್ವರೂಪ

ಭಗವದ್ಗೀತೆಯು ಭಕ್ತಿಶಾಸ್ತ್ರದ ಸರ್ವಸ್ವವಾಗಿದೆ. ಭಕ್ತಿಯ ಸ್ವರೂಪವನ್ನಿದು ನಿರೂಪಿಸುತ್ತದೆ. ಸಕಲ ಕಲ್ಯಾಣಗುಣಾಕರನಾದ ಭಗವಂತನಲ್ಲಿ ಎಡೆಬಿಡದೆ ಮನಸ್ಸನ್ನು ನೆಲೆ ನಿಲ್ಲಿಸುವುದು ಭಕ್ತಿ ಎಂದೂ ಆ ಪರಮನ ಕಲ್ಯಾಣಗುಣಗಳ ಅನುಸಂಧಾನದೊಡನೆ ಪ್ರೀತಿಪೂರ್ವಕ ಮಾಡುವ ಚಿಂತನೆ ಇದೆಂದೂ ಗೀತಾಶಾಸ್ತ್ರ ನಿರೂಪಿಸುತ್ತದೆ.

'ಮನ್ಮನಾ ಭವ ಮದ್ಭಕ್ತಃ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಯುಕ್ತ್ವೈವಂ ಆತ್ಮಾನಂ ಮತ್ಪರಾಯಣಃ ॥'

ಎಂಬುದರ ನಿರೂಪಣೆಯನ್ನು ರಾಮಾನುಜರು ವಿಶಿಷ್ಟವಾದ ರೀತಿಯಲ್ಲಿ ಮಾಡಿದ್ದಾರೆ. 'ಮಯಿ ಸರ್ವೇಶ್ವರೇಶ್ವರೇ ಪರಸ್ಮಿನ್ ಬ್ರಹ್ಮಣಿ ಪುರುಷೋತ್ತಮೇ ಅನಾಲೋಚಿತ ವಿಶೇಷಾಶೇಷಲೋಕಶರಣ್ಯೇ ಸರ್ವಸ್ವಾಮಿನಿ ತೈಲಧಾರಾವದವಿಚ್ಛೇದೇನ ನಿವಿಷ್ಟಮನಾ ಭವ' ಎಂದು ಅವರು ನಿರೂಪಿಸುತ್ತಾರೆ. ಒಂದು ಪಾತ್ರೆಯಿಂದ ಮತ್ತೊಂದು ಪಾತ್ರೆಗೆ ಎಣ್ಣೆಯನ್ನು ಸುರಿದಾಗ ಹೇಗೆ ಅದು ಏಕರೂಪವಾಗಿ ವಿಚ್ಛೇದವಿಲ್ಲದಿರುವುದೋ ಹಾಗೆಯೇ ಭಗವಂತನಲ್ಲಿ ನಮ್ಮ ಧ್ಯಾನ ಏಕರೂಪವಾಗಿರಬೇಕೆಂದು ಇದರಿಂದ ಗೊತ್ತಾಗುತ್ತದೆ. 'ಮದ್ಭಕ್ತಃ' ಎಂಬ ಶಬ್ದಕ್ಕೆ ರಾಮಾನುಜರು 'ಅತ್ಯರ್ಥ-ಮತ್ಪ್ರಿಯತ್ವೇನ ಯುಕ್ತಃ' ಎಂದು ಅರ್ಥಮಾಡಿದ್ದಾರೆ. ಇದರಿಂದ ಭಗವಂತನ ಸ್ವರೂಪರೂಪಗುಣಗಳ ಶುಷ್ಕಚಿಂತನೆಯೇ ಭಕ್ತಿಯಲ್ಲ. ಆದರೆ ಈ ಚಿಂತನ ಪ್ರೀತಿ ರೂಪವಾದುದು. ಭಗವಂತನಲ್ಲಿರುವ ನಿರತಿಶಯವಾದ ಪ್ರೀತಿರೂಪವಾದ ಈ ಭಕ್ತಿಯ ಕಾರಣ ಭಕ್ತ ತನ್ನ ಸರ್ವಕಾರ್ಯಗಳನ್ನೂ ಭಗವದರ್ಪಣ ಮಾಡುತ್ತಾನೆ. ಭಗವತ್ಪ್ರೇಮದ ಮಹಾಪೂರದಲ್ಲಿ ತಾನು ಮುಳುಗುತ್ತಾನೆ. ಆ ಭಗವಂತನೊಬ್ಬನೇ ತನಗೆ ಅತ್ಯಂತ ಪ್ರಿಯವಾದುದರಿಂದ ಅವನನ್ನೇ ನಿರಂತರವಾಗಿ ಧ್ಯಾನಿಸುವನು; ಅವನಿಗೆ ಪ್ರೀತಿಯುಂಟು ಮಾಡುವ ಕಾರ್ಯಗಳನ್ನೇ ತಾನು ಕೈಗೊಳ್ಳುವನು, ತಾನು ಮಾಡುವ ಸಮಸ್ತ ವ್ಯಾಪಾರಗಳನ್ನೂ ಅವನ ಪ್ರೀತಿಗಾಗಿಯೇ ಮಾಡುವನು. 'ನಾನು' 'ನನ್ನದು' ಎಂಬ

acharya.org

ಭಾವವನ್ನು ಬಿಟ್ಟವನಾಗಿ ಭಗವಂತನಿಗಾಗಿ ತನ್ನನ್ನೂ ತನ್ನದನ್ನೂ ಸಮರ್ಪಿಸಿಕೊಳ್ಳುವನು. ಹೀಗೆ ಭಗವಂತನನ್ನು ಕುರಿತ ಜ್ಞಾನವಿಕಾಸವಿಶೇಷವೇ ಭಕ್ತಿ. 'ಮಾಂ ನಮಸ್ಕುರು' ಎಂಬುದು 'ಅತಿಮಾತ್ರ ಪ್ರಹ್ವೀಭಾವ'ವನ್ನು ಸೂಚಿಸುವುದಾಗಿ ಭಕ್ತನ ಆತ್ಮಸಮರ್ಪಣೆಯನ್ನು ತೋರುತ್ತದೆ. 'ಮತ್ಪರಾಯಣಃ' ಎಂಬುದರಿಂದ ಭಕ್ತ ಭಗವಂತನನ್ನುಳಿದು ಆತ್ಮಧಾರಣ ಮಾಡಲಾರನೆಂಬುದನ್ನು ತಿಳಿಸುತ್ತದೆ. ಭಕ್ತನಿಗೆ ಭಗವಂತನನ್ನುಳಿದು ಬೇರೆ ಯಾವ ಆಸೆಯೂ ಇರುವುದಿಲ್ಲ. ಭಕ್ತಿಯೋಗದ ಸಿದ್ಧತೆ, ಪ್ರಕಾರ ಮತ್ತು ಫಲಗಳನ್ನು ಇಲ್ಲಿ ಸಂಗ್ರಹವಾಗಿ ಉಪದೇಶಿಸಲಾಗಿದೆ.

೧) ಭಕ್ತನು ತನ್ನ ಸಮಸ್ತ ವ್ಯಾಪಾರಗಳಲ್ಲಿಯೂ 'ಸ್ವಕೀಯತಾಸಂಗ'ವನ್ನು ಬಿಡುತ್ತಾನೆ. ಭಗವಂತನ ಕೈಯಲ್ಲಿ ತಾನೊಂದು ಸಾಧನವೆಂಬುದು ಅವನ ಭಾವವಾಗುತ್ತದೆ. ಸರ್ವಾತ್ಮನಾದ ಆ ವಾಸುದೇವ ತನ್ನ ಪ್ರೀತಿಗಾಗಿ ಇದೆಲ್ಲವನ್ನೂ ಮಾಡಿಸುವನೆಂಬುದು ಇವನಿಗೆ ದೃಢವಾಗುತ್ತದೆ. ಭಗವಂತನ ಸೇವೆ ಇವನಿಗೆ ಆನಂದಕರವಾಗಿ ಇವನು ತನ್ನ ಸರ್ವಕಾರ್ಯಗಳನ್ನೂ ಭಗವತ್ಕೈಂಕರ್ಯವೆಂಬ ರೂಪದಲ್ಲಿ ನಡೆಸುವವನಾಗುತ್ತಾನೆ. ಚರಾಚರಪದಾರ್ಥಗಳೆಲ್ಲದರಲ್ಲಿಯೂ ಭಗವಂತನನ್ನು ಕಾಣುವ ಈ ಭಕ್ತ ಎಲ್ಲರಿಗೂ ಅನುಕೂಲನಾಗಿ ವರ್ತಿಸುತ್ತಾನೆ.

೨) ಭಗವಂತನಲ್ಲಿ ಇವನಿಗಿರುವ ಪ್ರೇಮ ಅಪಾರವಾಗಿ ಅನೇಕ ರೂಪಗಳಲ್ಲಿ ಹೊರಹೊಮ್ಮುತ್ತದೆ. ಕೀರ್ತನ, ಯಜನ ಮೊದಲಾದವುಗಳಿಂದ ಇವನು ಆತ್ಮಸಮಾಧಾನ ಕಂಡುಕೊಳ್ಳುತ್ತಾನೆ. ಭಗವಂತನ ನಾಮಸ್ಮರಣೆಯಿಂದ ಪುಲಕಿತನಾಗುವನಿವನು. ಭಗವಂತನ ಸೌಶೀಲ್ಯಾದಿಗಳನ್ನು ಮನಗಂಡು ಪರವಶನಾಗುತ್ತಾನೆ. ಅನೇಕಾನೇಕ ರೂಪದಲ್ಲಿ ಭಗವಂತನ ಸೇವೆಗಾಗಿ ತನ್ನನ್ನು ಇವನು ಮನಃಪೂರ್ವಕ ಅರ್ಪಿಸಿಕೊಳ್ಳುತ್ತಾನೆ. ಭಗವಂತನ ಕಲ್ಯಾಣಗುಣಗಳ ಅನುಸಂಧಾನದಿಂದ ತನ್ನನ್ನೇ ತಾನು ಮರೆಯುವನಿವನು.

೩) ಸಮಸ್ತ ಪ್ರಪಂಚವೂ ಆ ಭಗವಂತನಿಗೆ ಶೇಷಭೂತವಾದುದೆಂಬುದನ್ನು ಇವನು ಮನವರಿಕೆ ಮಾಡಿಕೊಳ್ಳುತ್ತಾನೆ.

ಭಕ್ತನು ಭಗವಂತನಲ್ಲಿ ನಿರತಿಶಯವಾದ ಪ್ರೇಮವನ್ನು ತೋರಿ ಅವನನ್ನು ಒಲಿಸಿಕೊಂಡು ಅವನ ಅನುಗ್ರಹದಿಂದ ಅವನನ್ನೇ ಪಡೆಯಲಿಚ್ಛಿಸುತ್ತಾನೆ. ಭಗವಂತನನ್ನು ಹೊಂದಲೆಂದೇ ಮಾಡುವ ಈ ಭಕ್ತಿ ಇತರ ಪ್ರಯೋಜನಗಳಲ್ಲಿ ಅಪೇಕ್ಷೆಯುಳ್ಳವರು ಮಾಡುವ ಭಕ್ತಿಗಿಂತ ವಿಲಕ್ಷಣವಾಗಿ ಶ್ರೇಷ್ಠತಮವಾಗುತ್ತದೆ. ಇದು

ರಾಜವಿದ್ಯಾ ರಾಜಗುಹ್ಯಂ ಪವಿತ್ರಮಿದಮುತ್ತಮಂ ।
ಪ್ರತ್ಯಕ್ಷಾವಗಮಂ ಧರ್ಮ್ಯಂ ಸುಸುಖಂ ಕರ್ತುಮವ್ಯಯಮ್ ॥

ಎಂದು ಗೀತೆ ಹೇಳಿದಂತೆ, ಸರ್ವೋನ್ನತವಾದುದು. ಪರಮಪುರುಷನ ಉಪಾಸನೆಯೇ ಆದುದು ಇದು. ಪರಮಾತ್ಮನನ್ನು ಪಡೆಯಲು ಸಾಧಕವಾದ ಇದು 'ವಿದ್ಯಾನಾಂ ರಾಜಾ'

acharya.org

ಆದುದು. ಅನುಷ್ಠಾನದ ಅಭ್ಯಾಸ ಆದರೆ ಶ್ರಮವಾಗದಿರುವುದರಿಂದ ಸ್ವರೂಪತಃ ಅನುಕೂಲವಾಗಿ ಚಿತ್ತಕ್ಕೆ ಆಹ್ಲಾದವನ್ನುಂಟುಮಾಡುವುದಾಗಿ ಸುಖಕರವಾದುದು. ಆದುದರಿಂದಲೇ 'ಸುಸುಖಂ ಕರ್ತುಂ' ಎಂದು ಹೇಳಿದೆ. ಫಲವನ್ನು ಕೊಟ್ಟ ಮೇಲೆ ನಾಶವಾಗುವ ಇತರ ಕರ್ಮಾದಿಗಳಂತೆ ಅಲ್ಲದೆ ಇದು ಭಗವಂತನನ್ನು ನಮಗೆ ಪರಮ ಪ್ರಿಯನನ್ನಾಗಿ ಮಾಡಿ, ಅವನನ್ನು ನಮಗೆ ದೊರಕಿಸಿಕೊಟ್ಟಮೇಲೂ ಒಂದೇ ರೀತಿ ಯಾಗಿ ಉಳಿದುಬರುತ್ತದೆಯಾದ ಕಾರಣ ಇದನ್ನು 'ಅವ್ಯಯಂ' ಎಂದು ಹೇಳಿದ್ದಾರೆ. ಪರಬ್ರಹ್ಮಾನುಭವವನ್ನು ಉಪಾಸನೆಯ ಕಾಲದಲ್ಲಿಯೇ ಉಂಟುಮಾಡಿಕೊಡುವುದ ರಿಂದಲೇ ಇದನ್ನು 'ಪ್ರತ್ಯಕ್ಷಾವಗಮಂ' ಎಂದೂ ಪರಮಶ್ರೇಯಸ್ಸಾದ ಬ್ರಹ್ಮಪ್ರಾಪ್ತಿ ಯನ್ನು ಸಾಧಿಸಿಕೊಡುವುದರಿಂದ 'ಧರ್ಮ್ಯಂ' ಎಂದೂ ಇದನ್ನು ಕೊಂಡಾಡಿದೆ. ಭಕ್ತಿಯೋಗ ಈ ರೀತಿಯಲ್ಲಿ ಇತರ ಯೋಗಗಳಿಗಿಂತ ಶ್ರೇಷ್ಠವಾದುದು. ಕರ್ಮಯೋಗ ಮತ್ತು ಜ್ಞಾನಯೋಗಗಳು ಆತ್ಮಸಾಕ್ಷಾತ್ಕಾರವನ್ನುಂಟುಮಾಡಿದರೆ ಭಕ್ತಿಯೋಗ ಭಗವತ್ಸಾಕ್ಷಾತ್ಕಾರವನ್ನುಂಟುಮಾಡುತ್ತದೆ. ಅತ್ಯಂತ ಪ್ರಿಯವಾದ ಈ ಭಕ್ತಿ ಅಕ್ಷಯ ವಾಗಿ ಯಾವದಾತ್ಮಭಾವಿಯಾಗಿರುವುದೆಂಬುದನ್ನು ರಾಮಾನುಜರು 'ಅಕ್ಷಯಂ ಮತ್ಪ್ರಾಪ್ತಿಂ ಸಾಧಯಿತ್ವಾಪಿ ಸ್ವಯಂ ನ ಕ್ಷೀಯತೇ' ಎಂದು ವಿವರಿಸಿದ್ದಾರೆ.

ಭಗವಂತನ ಸ್ವರೂಪವನ್ನೂ ಅವನಿಗೂ ನಮಗೂ ಇರುವ ಸಹಜ ಸಂಬಂಧ ವನ್ನೂ ತಿಳಿದು ಆ ಪರಮನಲ್ಲಿ ನಾವು ತೋರುವ ಪ್ರೀತಿಯೇ ಭಕ್ತಿ ಎಂದು ನಿರೂಪಿಸ ಲಾಯಿತು. ಈ ಭಕ್ತಿಯ ವಿಕಾಸಕ್ಕೆ ಸ್ವಸ್ವರೂಪಜ್ಞಾನ ಮತ್ತು ಪರಸ್ವರೂಪಜ್ಞಾನ ಅವಶ್ಯಕ. ಈ ಭಕ್ತಿಯೋಗವೇ ಮೋಕ್ಷೋಪಾಯವಾದುದು. ಇದಕ್ಕೇ ವೇದನ, ಧ್ಯಾನ, ಉಪಾಸನ ಎಂಬ ಹೆಸರುಗಳಿವೆ. ನಿರಂತರವಾದ ಸ್ಮೃತಿ ಸಂತತಿರೂಪವಾದುದಪ್ಪ ಇದು. ಇದನ್ನು ರಾಮಾನುಜರು 'ಸ್ಮೃತಿಸಂತಾನರೂಪಂ ದರ್ಶನಸಮಾನಾಕಾರಂ ಧ್ಯಾನೋಪಾಸನಾದಿಶಬ್ದವಾಚ್ಯಂ' ಎಂದು ತಿಳಿಸುತ್ತಾರೆ. ಶ್ರುತಿಯು 'ಯಮೇವೈಷ ವೃಣುತೇ ತೇನ ಲಭ್ಯಃ ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ' ಎಂದು ಹೇಳಿ ಯಾರನ್ನು ಭಗವಂತನು ಆರಿಸಿಕೊಳ್ಳುವನೋ ಅವನು ಭಗವಂತನನ್ನು ಪಡೆಯುವನೆಂದು ಘೋಷಿಸುತ್ತದೆ. ಭಗವಂತನು ಒಬ್ಬನನ್ನು ಆರಿಸಿಕೊಳ್ಳುವುದಕ್ಕೇನು ಕಾರಣವೆಂಬುದನ್ನು ಅರಿಯಬೇಕು. ಯಾರು ಭಗವಂತನನ್ನು ಪ್ರೀತಿಸುವರೋ ಅವರನ್ನು ಭಗವಂತನೂ ಪ್ರೀತಿಸುತ್ತಾನೆ. ಆದುದರಿಂದ ಭಗವಂತನು ನಮ್ಮನ್ನು ಆರಿಸಿಕೊಳ್ಳುವಂತೆ ಆಗಬೇಕಾದರೆ ನಾವು ಅವನನ್ನು ನಿರತಿಶಯವಾಗಿ ಪ್ರೀತಿಸುವುದು ಅವಶ್ಯಕ. ಇದೇ ಭಕ್ತಿ. ಇದನ್ನೇ ರಾಮಾನುಜರು 'ಪರೇಣಾತ್ಮನಾ ವರಣೀಯಹೇತುಭೂತಂ ಸ್ಮರ್ಯಮಾಣವಿಷಯಸ್ಯ ಅತ್ಯರ್ಥಪ್ರಿಯತ್ವೇನ ಸ್ವಯಮಪ್ಯತ್ಯರ್ಥಪ್ರಿಯರೂಪಂ ಸ್ಮೃತಿಸಂತಾನಮೇವ ಉಪಾ- ಸನ ಶಬ್ದವಾಚ್ಯಮಿತಿ ಹಿ ನಿಶ್ಚೀಯತೇ. ತದೇವ ಭಕ್ತಿರಿತ್ಯುಚ್ಯತೇ' ಎಂದು ತಿಳಿಸು

acharya.org

ತ್ತಾರೆ. 'ತಮೇವಂ ವಿದ್ವಾನಮೃತ ಇಹ ಭವತಿ' 'ನಾಹಂ ವೇದೈರ್ನ ತಪಸಾ' 'ಭಕ್ತ್ಯಾತ್ವನನ್ಯಯಾ ಲಭ್ಯಃ' ಮೊದಲಾದ ಶ್ರುತಿಸ್ಮೃತಿವಾಕ್ಯಗಳು ಪರಮಾತ್ಮನನ್ನು ಸಾಧಿಸಲು ಭಕ್ತಿಯೇ ಉಪಾಯವೆಂಬುದನ್ನು ಸ್ಪಷ್ಟಪಡಿಸುತ್ತದೆ. ಯಾವನು ಪರಮಾತ್ಮನಲ್ಲಿ ಹೆಚ್ಚಿನ ಪ್ರೀತಿ ತೋರುತ್ತಾನೋ ಅವನು ಪರಮಾತ್ಮನಿಂದ ವರಿಸಲ್ಪಡುತ್ತಾನೆ ಎಂಬುದನ್ನು ಸ್ಪಷ್ಟವಾಗಿ ದೇಶಿಕರು 'ಪರಮಾತ್ಮವಿಷಯಪ್ರೀತಿಮಾನೇವ ಚ ಪರಮಾತ್ಮನಾ ವರಣೀಯಃ' ಎಂದು ನಿರೂಪಿಸಿದ್ದಾರೆ. ಇವೆಲ್ಲದರಿಂದ '(೧) ಉಪಾಸನೆ ಮೋಕ್ಷೋಪಾಯವೇ ವಿನಾ ಜ್ಞಾನಮಾತ್ರವಲ್ಲ (೨) ಭಕ್ತಿರೂಪವನ್ನು ಹೊಂದಿರುವ ಉಪಾಸನೆಯೇ ಮುಕ್ತ್ಯುಪಾಯ (೩) ಮೇಲೆ ಹೇಳಿದಂತಹ ಉಪಾಸನೆ ಮೋಕ್ಷೋಪಾಯವೇ ವಿನಾ ಕರ್ಮ ಸಮುಚ್ಚಿತವಾದುದಲ್ಲ. (೪) ಪರಮಾತ್ಮ ವಿಷಯವಾದ ಉಪಾಸನೆಯೇ ಮೋಕ್ಷೋಪಾಯ' ಎಂದು ದೇಶಿಕರವರು ನಿರೂಪಿಸುತ್ತಾರೆ.

ಭಕ್ತಿಯ ಸ್ವರೂಪವನ್ನು ವರ್ಣಿಸುವುದು ಅಶಕ್ಯ. ಅದು ಅನುಭವೈಕವೇದ್ಯ. ಅದು ಸೂಕ್ಷ್ಮವಾದುದೂ ಕ್ಷಣೇ ಕ್ಷಣೇ ಬೆಳೆಯುವುದೂ ಆದುದು ಭಕ್ತಿ. ಸಾಮಾನ್ಯ ಭಕ್ತಿ ಮತ್ತು ಪರಭಕ್ತಿ ಎಂದು ಎರಡು ಬಗೆ. ಪರಭಕ್ತಿ ಎಂಬುದು ಪರಮಸಾತ್ವಿಕವಾಗಿ ರಜಸ್ತಮಸ್ಸುಗಳ ಸಂಪರ್ಕವಿಲ್ಲದುದಾಗಿ ಪರಮಾತ್ಮ ಪ್ರೀತಿಗಾಗಿಯೇ ಮೀಸಲಾದುದು. ಪರಮಾನಂದಸ್ವರೂಪವುಳ್ಳದು ಇದು. ಭಾಗ್ಯಶಾಲಿಗಳಾದ ಭಕ್ತರು ಪರಮಾತ್ಮನನ್ನು ತಮ್ಮ ಹೃದಯಮಂದಿರದಲ್ಲಿಟ್ಟು ಇತರ ವಿಚಾರಗಳಲ್ಲಿ ವಿರಕ್ತರಾಗಿ ಅವನನ್ನೇ ಆರಾಧಿಸುವರು.

ಭಕ್ತಿಯೂ ಒಂದು ಬಗೆಯ ಜ್ಞಾನವಿಶೇಷ. ಉಪಾಸನಾತ್ಮಕವಾದ ಜ್ಞಾನ ಭಕ್ತಿ. ಭಗವಂತನ ಸ್ವರೂಪರೂಪಗುಣವಿಭೂತಿಗಳನ್ನು ಕುರಿತ ನಿರಂತರವಾದ ಚಿಂತನೆ ಇದು. ಮತ್ತೊಂದು ಪ್ರಯೋಜನಕ್ಕಾಗಿ ಇದು ಪ್ರವೃತ್ತವಾಗದು. ಇದರ ಬಗೆಗೆ ರಾಮಾನುಜರು 'ಭಕ್ತಿರಪಿ ನಿರತಿಶಯಾನನ್ಯಪ್ರಯೋಜನ—ಸ್ವೇತರವೈತೃಷ್ಣ್ಯಾವಹಜ್ಞಾನವಿಶೇಷ ಏವ' ಎಂದು ಹೇಳುತ್ತಾರೆ.

ಸಾಧನ ಸಪ್ತಕಗಳು

ಭಕ್ತಿಯೋಗವು ಸಿದ್ಧಿಸಬೇಕಾದರೆ ಕೆಲವು ಪೂರ್ವ ಸಿದ್ಧತೆಗಳಾಗಬೇಕು. ಇವು ಏಳು ಬಗೆಯಾಗಿವೆ. ಇವಕ್ಕೆ ಸಾಧನ ಸಪ್ತಕಗಳೆಂದು ಹೆಸರು. ರಾಮಾನುಜರಿಗಿಂತ ಹಿಂದಿನವರಾದ ವಾಕ್ಯಕಾರರು ಈ ಸಾಧನಸಪ್ತಕಗಳನ್ನು ನಿರೂಪಿಸಿದ್ದಾರೆ. ರಾಮಾನುಜರು ಅವರನ್ನು ಉದಾಹರಿಸಿ ಈ ಸಾಧನ ಸಪ್ತಕಗಳ ನಿರ್ವಚನ ಮಾಡಿದ್ದಾರೆ. ಇವು ಕೆಳಗೆ ಕಂಡಂತಿವೆ—

೧) ವಿವೇಕ ೨) ವಿಮೋಕ ೩) ಅಭ್ಯಾಸ ೪) ಕ್ರಿಯಾ ೫) ಕಲ್ಯಾಣ

acharya.org

೬) ಅನವಸಾದ ಮತ್ತು ೭) ಅನುದ್ಧರ್ಷ.

ವಿವೇಕವೆಂಬುದು ಭಕ್ತಿಯೋಗಕ್ಕೆ ಮೊಟ್ಟಮೊದಲನೆಯ ಸಾಧನ. 'ಅದುಷ್ಟಾತ್ ಅನ್ನಾತ್ ಕಾಯಶುದ್ಧಿಃ ವಿವೇಕಃ' ಎಂದು ರಾಮಾನುಜರು ಇದನ್ನು ವಿವರಿಸಿದ್ದಾರೆ. ನಾವು ತೆಗೆದುಕೊಳ್ಳುವ ಆಹಾರ ಶುದ್ಧವಾದುದಾಗಬೇಕು. ಜಾತಿದುಷ್ಟವಾದ, ಆಶ್ರಯ ದುಷ್ಟವಾದ ಅಥವಾ ನಿಮಿತ್ತದುಷ್ಟವಾದ ಅನ್ನವನ್ನು ಸ್ವೀಕಾರ ಮಾಡಬಾರದು. ಇದರಿಂದ ಸತ್ವವೃದ್ಧಿ ಉಂಟಾಗುವುದು. ವಿಮೋಕವೆಂಬುದು ಕಾಮಕ್ರೋಧಗಳ ಪರಿಹಾರ. 'ಕಾಮಾನಭಿಷ್ವಂಗ' ಎಂದು ಇದನ್ನು ನಿರೂಪಿಸಿದೆ. ಆಧ್ಯಾತ್ಮಿಕ ಸಾಧನೆಗೆ ಇದು ಅತ್ಯಂತ ಆವಶ್ಯಕ. ಕಾಮಕ್ರೋಧಗಳಿಗೆ ವಶನಾಗದವನು ಮನಃಶ್ಶಾಂತಿಯನ್ನು ಹೊಂದುತ್ತಾನೆ. ಅವನೇ ಭಗವಚ್ಚಿಂತನೆ ಮೊದಲಾದುವಕ್ಕೆ ಅರ್ಹನಾಗುತ್ತಾನೆ. ಅಭ್ಯಾಸವೆಂಬುದು ಚಂಚಲವಾದ ಮನಸ್ಸನ್ನು ಹಿಡಿದೆಳೆದು ತಂದು ಧ್ಯೇಯವಾದ ಪರಮಾತ್ಮವಿಷಯದಲ್ಲಿ ನೆಲೆನಿಲ್ಲಿಸುವುದು. ಧ್ಯಾನಯೋಗದ ಸಿದ್ಧಿಗೆ ಇದು ಅತ್ಯಂತ ಆವಶ್ಯಕ. ಭಗವಂತನ ಸರ್ವಾಂತರ್ಯಾಮಿತ್ವವನ್ನು ಮನಗಂಡು ಅದನ್ನೇ ಸರ್ವದಾ ಚಿಂತಿಸಬೇಕು. ಕ್ರಿಯೆ ಎಂಬುದು ಸಾಧಕನು ಅನುಷ್ಠಿಸಬೇಕಾದ ನಿತ್ಯನೈಮಿತ್ತಿಕ ಕರ್ಮಗಳ ಅನುಷ್ಠಾನಕ್ಕೆ ಅನ್ವಯಿಸುತ್ತದೆ. ಇದರಿಂದ ಧ್ಯಾನ ಬಲಗೊಳ್ಳುತ್ತದೆ. 'ಕ್ರಿಯಾವಾನೇಷ ಬ್ರಹ್ಮವಿದಾಂ ವರಿಷ್ಠಃ' ಎಂದು ಶ್ರುತಿ ಇಂಥ ಕ್ರಿಯಾವಂತನ ಮಹಿಮೆಯನ್ನು ತಿಳಿಸುತ್ತದೆ. ವೇದಾನುವಚನ, ಪಂಚಮಹಾಯಜ್ಞಗಳು, ದಾನ, ತಪಸ್ಸು ಮೊದಲಾದವು ಈ ಗುಂಪಿಗೆ ಸೇರುತ್ತವೆ. ಕಲ್ಯಾಣವೆಂಬುದು ಸಾಧಕ ಸಂಪಾದಿಸಬೇಕಾದ ಸದ್ಗುಣಗಳಿಗನ್ವಯಿಸುತ್ತದೆ. ಅಂತಶ್ಶುದ್ಧಿ ಎಲ್ಲ ಕಾರ್ಯಕ್ಕೂ ಆವಶ್ಯಕ. ಈ ಅಂತರಂಗಶುದ್ಧಿ ಇಲ್ಲದೆ ಬಹಿರಂಗ ಶುದ್ಧಿಗೆ ಬೆಲೆ ಇಲ್ಲ. ಸತ್ಯ, ಆರ್ಜವ, ದಯಾ, ದಾನ ಅಹಿಂಸೆ, ಅನಭಿಧ್ಯಾ ಎಂಬ ಆರೂ ಕಲ್ಯಾಣಗಳು. ಸರ್ವಭೂತಹಿತವೇ ಸತ್ಯ. ವಾಕ್ಕು ಮನಸ್ಸು ಮತ್ತು ಶರೀರಗಳ ಏಕರೂಪತೆ ಆರ್ಜವ. ಇತರರಿಗಾಗಿ ಮರುಗುವ ಸ್ವಭಾವ ದಯೆ. ಲೋಭವಿಲ್ಲದೆ ಇತರರಿಗೆ ಸಹಾಯಮಾಡುವ ಪ್ರವೃತ್ತಿ ದಾನ. ಕರಣತ್ರಯಗಳಿಂದ ಇತರರಿಗೆ ಪೀಡೆಯಾಗದೆ ನೋಡಿಕೊಳ್ಳುವುದು ಅಹಿಂಸೆ. ನಿಷ್ಫಲವಾದ ಚಿಂತೆ ಮಾಡದೆ ಇರುವುದು ಅಥವಾ ಇತರರ ವಸ್ತುವಿನಲ್ಲಿ ತನ್ನದೆಂಬ ಭಾವನೆ ಬಿಡುವುದು, ಪರರಿಂದಾದ ಅಪಕಾರವನ್ನು ಚಿಂತಿಸದಿರುವುದು 'ಅನಭಿಧ್ಯಾ' ಎನ್ನಿಸುವುದು. ಇವು ಆರೂ ಕಲ್ಯಾಣಗಳು. ಅನವಸಾದವೆಂಬುದು ಮಾನಸಿಕವಾದ ದೈನ್ಯವಿಲ್ಲದಿರುವಿಕೆ. 'ಬಲಹೀನತೆ'ಯನ್ನು ಕಿತ್ತೊಗೆಯುವುದು ಇದು. ಅನುದ್ಧರ್ಷವೆಂಬುದು ಅಮಿತವಾದ ಹರ್ಷವಿಲ್ಲದಿರುವಿಕೆ. ಅತಿಯಾದ ದೈನ್ಯವಾಗಲೀ ಅತಿಯಾದ ಹರ್ಷವಾಗಲೀ ಸಾಧನೆಗೆ ಪ್ರತಿಬಂಧಕವಾದುದರಿಂದ ಅವುಗಳನ್ನು ಬಿಡಬೇಕೆಂದು ತಿಳಿಸಲಾಗಿದೆ. ಈ ಏಳೂ ಸಾಧನಸಪ್ತಕಗಳೆನಿಸಿ ಭಕ್ತಿಯೋಗದ ವಿಕಾಸಕ್ಕೆ ಉಪಕಾರಕವಾಗಿವೆ.

acharya.org

ಭಕ್ತಿಯು ವಿಕಾಸಕ್ಕೆ ಸಾಧಕವಾವುದೆಂಬುದನ್ನು ವಿಚಾರಿಸುತ್ತಾ ದೇಶಿಕರವರು ತಮ್ಮ ಪರಮಪದಸೋಪಾನವೆಂಬ ಗ್ರಂಥದಲ್ಲಿ ಹೇಳಿರುವ ಕೆಲವು ಪರ್ವಗಳು ಗಮನಾರ್ಹವಾಗಿವೆ. ವಿವೇಕ, ನಿರ್ವೇದ, ವಿರಕ್ತಿ, ಭೀತಿ–ಎಂಬುವು ಕ್ರಮವಾಗಿ ಭಕ್ತಿ ಪರ್ವಕ್ಕೆ ಪೂರ್ವಭಾವಿಗಳಾಗಿವೆ. ಇಲ್ಲಿ ವಿವೇಕವೆಂಬುದು ಪರಮಾತ್ಮನ ಸ್ವರೂಪಜ್ಞಾನ ಮತ್ತು ಅವನಿಗೂ ನಮಗೂ ಇರುವ ಸಂಬಂಧಜ್ಞಾನ. ಇದು ನಮಗುಂಟಾದರೆ ನಮ್ಮ ಅನೇಕ ಸಂಶಯಗಳೆಲ್ಲಾ ಜಾರಿಹೋಗುವುವು. ಈ ತಿಳಿವಳಿಕೆ ಹೃದಯ ಕವಾಟವನ್ನು ತೆರೆಯುವುದು. ಆಗ ಸಾಧಕ ತನ್ನ ಹಿಂದಿನ ಪಾಪಗಳಿಗಾಗಿ ನಿರ್ವಿಣ್ಣನಾಗುವನು. ಇದು ನಿರ್ವೇದಾವಸ್ಥೆ. ತನ್ನ ಪಾಪಗಳಿಗಾಗಿ ನೊಂದು ಪಶ್ಚಾತ್ತಾಪಪಡುವ ಸಾಧಕ ಸಾತ್ತ್ವಿಕಧೈರ್ಯವನ್ನವಲಂಬಿಸಿ ಸಾಧನೆಯ ಮಾರ್ಗದಲ್ಲಿ ಭಗವಂತನೆಡೆಗೆ ಸಾರುವನು. ಯಥಾರ್ಥಜ್ಞಾನದ ಆಧಾರದ ಮೇಲೆ ಬರುವ ಈ ನಿರ್ವೇದ ಭಗವದಿತರವಿಚಾರಗಳಲ್ಲಿ ವಿರಕ್ತಿಯನ್ನುಂಟುಮಾಡಿ ಭಗವಂತನಲ್ಲಿ ಆಸಕ್ತಿಯನ್ನು ಕೆರಳಿಸುತ್ತದೆ. ವಿವೇಕದಿಂದ ಅಹಂಕಾರಖಂಡನೆಯೂ, ನಿರ್ವೇದದಿಂದ ಪಾಪನಿವೃತ್ತಿಯೂ, ವಿರಕ್ತಿಯಿಂದ ಭಗವತ್ಪರತೆಯೂ ಉಂಟಾಗುತ್ತವೆ. ಇವುಗಳಂತೆ ಭೀತಿಯೂ ಭಕ್ತಿಯ ದೃಢತೆಗೆ ಕಾರಣವಾಗುತ್ತದೆ. ತನ್ನ ಕರ್ಮಗಳಿಂದ ತನಗೊದಗುವ ದುರಂತ ಸ್ಥಿತಿಯನ್ನು ನೆನೆದಾಗ ಸಾಧಕ ಭಯಪಟ್ಟು ತನ್ನನ್ನು ರಕ್ಷಿಸಬೇಕೆಂದು ಆ ಭಗವಂತನಲ್ಲಿ ಮೊರೆಯಿಡುತ್ತಾನೆ. 'ಅಹಂ ಭೀತೋಽಸ್ಮಿ ದೇವೇಶ ಸಂಸಾರೇಽಸ್ಮಿನ್ ಭಯಾವಹೇ। ಪಾಹಿ ಮಾಂ ಪುಂಡರೀಕಾಕ್ಷ ನ ಜಾನೇ ಶರಣಂ ಪರಮ್ ‖' ಎಂದು ತನ್ನನ್ನು ಕಾಪಾಡಬೇಕೆಂದು ಭಗವಂತನಲ್ಲಿ ಬೇಡುತ್ತಾನೆ. ಭಕ್ತಿಯೋಗದ ವಿಕಾಸಕ್ಕೆ ಆವಶ್ಯಕವಾದ ಅಂಶಗಳನ್ನು ಹೀಗೆ ಸಂಗ್ರಹಿಸಬಹುದು :

೧) ಗುರುಗಳ ಮೂಲಕ ಹಾಗೂ ಶಾಸ್ತ್ರಗಳಿಂದ ಸ್ವಸ್ವರೂಪ ಮತ್ತು ಪರಸ್ವರೂಪ ಜ್ಞಾನವನ್ನು ಪಡೆದುಕೊಳ್ಳುವುದು.

೨) ಭಕ್ತಿಮಾರ್ಗಕ್ಕೆ ಸಾಧಕವಾದ ಆತ್ಮಗುಣಗಳನ್ನು ಅಭ್ಯಾಸ ಮಾಡಿ ಅಂತರಂಗಶುದ್ಧಿಯನ್ನು ಸಾಧಿಸಿಕೊಳ್ಳುವುದು.

೩) ಭಗವಂತನ ರಕ್ಷಕತ್ವದಲ್ಲಿ ಪೂರ್ಣವಿಶ್ವಾಸವನ್ನು ಹೊಂದುವುದು.

ಭಕ್ತಿಯನ್ನು ಬೆಳೆಸಿಕೊಳ್ಳುವುದೆಂತು ?

ಆಚಾರ್ಯರು ಭಕ್ತಿಯ ಉತ್ಪತ್ತಿ ಮತ್ತು ಅಭಿವೃದ್ಧಿಯು ಆಗುವ ಬಗೆಯನ್ನು ನಿರೂಪಿಸಿದ್ದಾರೆ. ಇದಕ್ಕೆ ಅತ್ಯಂತ ಮುಖ್ಯವಾದ ಅಂಶವೆಂದರೆ ಭಗವಂತನ ಗುಣಗಳ ಮತ್ತು ವಿಭೂತಿಗಳ ಜ್ಞಾನ. ಕರುಣಾಳುಗಳಾದ ಆಚಾರ್ಯರು ದಯೆಯಿಂದ ಭಗವಂತನ ಸ್ವರೂಪವನ್ನು ನಮಗೆ ಉಪದೇಶಿಸುತ್ತಾರೆ. ಭಕ್ತಿಶಾಸ್ತ್ರದ ಸಾರಸರ್ವಸ್ವ

acharya.org

ವಾದ ಭಾಗವತ ಭಕ್ತಿಯ ಆರೋಹ ಕ್ರಮವನ್ನು ನಿರೂಪಿಸುತ್ತದೆ. ಭಗವಂತನ ದಿವ್ಯ ಗುಣಚೇಷ್ಟಿತಾದಿಗಳನ್ನು ಶ್ರದ್ಧೆಯಿಂದ ಕೇಳಬೇಕು.

'ತಸ್ಮಾದೇಕೇನ ಮನಸಾ ಭಗವಾನ್ ಸಾತ್ತ್ವತಾಂ ಪತಿಃ ।
ಶ್ರೋತವ್ಯಃ ಕೀರ್ತಿತವ್ಯಶ್ಚ ಧ್ಯೇಯಃ ಪೂಜ್ಯಶ್ಚ ನಿತ್ಯದಾ ॥'

ಭಗವಂತನ ಪವಿತ್ರವಾದ ನಾಮಗಳನ್ನು ಸಂಕೀರ್ತನ ಮಾಡುವುದರಿಂದ ಮನಸ್ಸಿನ ಕಲ್ಮಷಗಳೆಲ್ಲಾ ತೊಳೆದುಹೋಗುವುವು.

'ಶೃಣ್ವತಾಂ ಸ್ವಕಥಾಂ ಕೃಷ್ಣಃ ಪುಣ್ಯಶ್ರವಣಕೀರ್ತನಃ ।
ಹೃದ್ಯಂತಸ್ಥೋ ಹ್ಯಭದ್ರಾಣಿ ವಿಧುನೋತಿ ಸುಹೃತ್ಸತಾಮ್ ॥'

ಎಲ್ಲರ ಹೃತ್ಪ್ರದೇಶದಲ್ಲಿ ವಾಸಿಸುವ ಪರಮಾತ್ಮನು ತನ್ನನ್ನು ಸ್ಮರಿಸುವವರ, ತನ್ನ ಗುಣಗಳನ್ನೂ ಚೇಷ್ಟಿತಗಳನ್ನೂ ಕೇಳುವವರ ಸಕಲ ದೋಷಗಳನ್ನೂ ಹೋಗಲಾಡಿಸುವನು. ಅಂಥ ಸಾಧಕನ ಮನಸ್ಸು ರಜಸ್ಸು ತಮಸ್ಸುಗಳ ಸಂಪರ್ಕವನ್ನು ಕಳೆದುಕೊಂಡು ಪರಮ ಸಾತ್ತ್ವಿಕವಾಗುವುದು. ಅಂಥವನು ಭಗವಂತನಲ್ಲಿ ಪರಮಭಕ್ತಿಯನ್ನು ಹೊಂದುವನು.

'ನಷ್ಟಪ್ರಾಯೇಷ್ವಭದ್ರೇಷು ನಿತ್ಯಂ ಭಾಗವತಸೇವಯಾ ।
ಭಗವತ್ಯುತ್ತಮಶ್ಲೋಕೇ ಭಕ್ತಿರ್ಭವತಿ ನೈಷ್ಠಿಕೀ ॥'

ಇಲ್ಲಿ ಮೂರು ಹಂತಗಳಲ್ಲಿ ಭಕ್ತಿಯ ಬೆಳವಣಿಗೆಯನ್ನು ಹೇಳಲಾಗಿದೆ. ಮೊಟ್ಟಮೊದಲನೆಯದಾಗಿ ಭಗವಂತನ ನಾಮಸಂಕೀರ್ತನ ಮತ್ತು ನಾಮಶ್ರವಣವಾಗಬೇಕು. ಮುಂದಿನ ಹಂತದಲ್ಲಿ ಆ ನಾಮಸಂಕೀರ್ತನೆಯ ಪ್ರಭಾವದಿಂದ ರಜಸ್ತಮಸ್ಸುಗಳು ಹೋಗಿ ಮನಸ್ಸು ಶುದ್ಧವಾಗುವುದು. ಮೂರನೆಯ ಹಂತದಲ್ಲಿ ಭಾಗವತರ ಸೇವೆಯ ಫಲವಾಗಿ ಅಮಂಗಳವೆಲ್ಲಾ ಪರಿಹಾರವಾಗುತ್ತದೆ. ಭಗವಂತನ ದಯುಯಿಂದ ಅವನಲ್ಲಿ ದೃಢವಾದ ಭಕ್ತಿ ನೆಲಸುವುದು.

ಈ ಸಿದ್ಧಾಂತಕ್ಕನುಸಾರವಾಗಿ ಭಕ್ತಿಯೋಗವೆಂಬುದು ಕ್ರಮಕ್ರಮವಾಗಿ ಸಾಮಾನ್ಯ ಭಕ್ತಿಯಿಂದ ಉಂಟಾಗುತ್ತದೆ. ಈ ಭಕ್ತಿಯೋಗದ ಪರ್ವಗಳು ಹೀಗಿವೆ :

೧) ಸಾಮಾನ್ಯಭಕ್ತಿ. ಇದು ಶಾಸ್ತ್ರಜ್ಞಾನದಿಂದಲೂ ಸಾಧುಸಜ್ಜನರ ಸಹವಾಸದಿಂದಲೂ ಉಂಟಾಗುತ್ತದೆ.

೨) ಇದರಿಂದ ಭಗವಂತನನ್ನು ತಿಳಿಯಬೇಕೆಂಬ ಉತ್ಕಟೇಚ್ಛೆ ಉಂಟಾಗುತ್ತದೆ. ಸಾಧಕ ಈಗ ಮುಮುಕ್ಷುವಾಗುತ್ತಾನೆ. ಭಗವಂತನನ್ನು ಸಾಕ್ಷಾತ್ಕರಿಸಲು ಹಂಬಲಿಸುವ ಈ ಸಾಧಕ ಸಾಧನಾನುಷ್ಠಾನಗಳನ್ನು ಅನುಸರಿಸುತ್ತಾನೆ. ಕರ್ಮಯೋಗವನ್ನು ಅಭ್ಯಾಸಮಾಡುತ್ತಾನೆ.

೩) ಕರ್ಮಯೋಗದಿಂದ ಚಿತ್ತಶುದ್ಧಿಯಾಗುತ್ತದೆ. ಭಗವದಾರಾಧನರೂಪವಾಗಿ ಫಲಾಭಿಸಂಧಿಯಿಲ್ಲದೆ, ಆತ್ಮಜ್ಞಾನಪೂರ್ವಕವಾಗಿ ಭಗವತ್ಪ್ರೀತ್ಯರ್ಥವಾಗಿ ಎಲ್ಲ ಕರ್ಮ

acharya.org

ಗಳನ್ನೂ ಆಚರಿಸುವ ಈ ಸಾಧಕ ಆ ಕರ್ಮಯೋಗದ ಫಲವಾಗಿ ನೇರವಾಗಿಯಾಗಲೀ ಅಥವಾ ಜ್ಞಾನಯೋಗದ ಮೂಲಕವಾಗಲೀ ಆತ್ಮಸಾಕ್ಷಾತ್ಕಾರವನ್ನು ಪಡೆಯುತ್ತಾನೆ.

೪) ಜ್ಞಾನಯೋಗವನ್ನನುಷ್ಠಿಸುವ ಅರ್ಹತೆಯನ್ನು ಪಡೆದ ಸಾಧಕ ನಿರಂತರವಾಗಿ ಪರಿಶುದ್ಧವಾದ ಆತ್ಮಸ್ವರೂಪವನ್ನೇ ಚಿಂತಿಸುತ್ತಾ ಭಗವಂತನ ದಯೆಯಿಂದ ಆತ್ಮಾನುಸಂಧಾನದ ಫಲವಾಗಿ ಆತ್ಮದರ್ಶನವನ್ನು ಪಡೆಯುತ್ತಾನೆ.

೫) ಈ ಹಂತದಲ್ಲಿ ಸಾಧಕನಿಗೆ ಆತ್ಮನ ನಿಜಸ್ವರೂಪ ವಿಶದತಮವಾಗಿ ಗೊತ್ತಾಗುತ್ತದೆ. ತಾನು ಭಗವಂತನಿಗೇ ಸೇರಿದವನೆಂಬುದೂ ಅವನಿಲ್ಲದೆ ತಾನಿಲ್ಲವೆಂಬುದೂ ತಾನು ಅವನಿಗೇ ಶೇಷನೆಂಬುದೂ ಸ್ಪಷ್ಟವಾಗಿ ಗೋಚರಿಸುವುದರಿಂದ ಈ ಸಾಧಕ ತನಗೆ ಸರ್ವಸ್ವವೂ ಆಗಿ ಉಸಿರಾಗಿರುವ ಆ ಪರಮಾತ್ಮನನ್ನು ಸರ್ವಾತ್ಮನಾ ಪ್ರೀತಿಸುತ್ತಾನೆ. ಆ ಪರಮಾತ್ಮನನ್ನು ಪಡೆಯಲು ಹಂಬಲಿಸುತ್ತಾನೆ. ಈ ಪ್ರೀತಿಯೇ ಭಕ್ತಿಯೋಗ.

ಇಂಥ ಭಕ್ತಿ ಉಂಟಾಗತಕ್ಕ ಕ್ರಮವನ್ನು ಗೀತೆಯಲ್ಲಿ ಪರಮಾತ್ಮನು ಕೆಳಗೆ ಕಂಡಂತೆ ಉಪದೇಶಿಸಿದ್ದಾನೆ—

‘ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾತ್ಮಾನಂ ನಿಯಮ್ಯ ಚ |
ಶಬ್ದಾದೀನ್ವಿಷಯಾನ್ ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ ||
ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ |
ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ||
ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್ |
ವಿಮುಚ್ಯ ನಿರ್ಮಮಶ್ಶಾಂತೋ ಬ್ರಹ್ಮಭೂಯಾಯ ಕಲ್ಪತೇ ||
ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ |
ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಮ್ ||’

ಪರಭಕ್ತಿಯ ಬೆಳವಣಿಗೆಗೆ ಪ್ರಯತ್ನ ಆವಶ್ಯಕ. ಆತ್ಮಜ್ಞಾನದ ಪ್ರಭಾವದಿಂದ ಸಾಧಕ ಇತರ ವಸ್ತುಗಳಲ್ಲಿ ಆಸಕ್ತಿ ಬಿಡುವವನಾಗಬೇಕು. ಇಂದ್ರಿಯ ಮತ್ತು ವಿಷಯಗಳ ಸಂನಿಕರ್ಷದಿಂದ ಉಂಟಾಗುವ ರಾಗದ್ವೇಷಗಳನ್ನು ತಡೆಯಬೇಕು. ಇಂದ್ರಿಯ ಸಂಯಮವನ್ನು ಸಾಧಿಸಿ ಧ್ಯಾನಯೋಗ್ಯವಾದ ಏಕಾಂತವಾಸವನ್ನು ಮಾಡಬೇಕು. ಮಮಕಾರರಹಿತನಾಗಿ ಕಾಮಕ್ರೋಧಗಳನ್ನು ಬಿಟ್ಟು ಶಾಂತನಾಗಿ ಆತ್ಮಾನುಭವವನ್ನು ಸಾಧಿಸಬೇಕು. ಹೀಗೆ ಆತ್ಮಸಾಕ್ಷಾತ್ಕಾರವನ್ನು ಹೊಂದಿದವನು ಸರ್ವವಸ್ತುಗಳಲ್ಲಿಯೂ ಸಮದೃಷ್ಟಿಯನ್ನು ಹೊಂದುತ್ತಾನೆ. ಎಲ್ಲ ಆತ್ಮರುಗಳೂ ಜ್ಞಾನೈಕಾಕಾರರೆಂಬುದನ್ನು ಮನಗಾಣುತ್ತಾನೆ. ಅಂಥವನಿಗೆ ಆಸೆ ಆಗಲೀ ದುಃಖವಾಗಲೀ ಇರದು. ಇಂಥ ಸಮದರ್ಶಿತ್ವವನ್ನು ಪಡೆದುಕೊಂಡ ಸಾಧಕ ಭಗವಂತನಿಗೂ ತನಗೂ ಇರುವ ಸಂಬಂಧವನ್ನು ತಿಳಿಯುವವನಾಗಿ ಆ ಪರಮನಲ್ಲಿ ನಿರತಿಶಯವಾದ ಪ್ರೀತಿಯನ್ನು ಮಾಡುವನು. ಅವನು ಭಗವಂತನಲ್ಲಿ ಪರಾಭಕ್ತಿಯನ್ನು ಹೊಂದುತ್ತಾನೆ. ಭಗವದಿತರವಾದ ವಿಷಯ

acharya.org

ಗಳಲ್ಲಿ ಅವನಿಗೆ ಆಸಕ್ತಿ ಇರದು.

'ತತ್ಸಂಶ್ಲೇಷವಿಯೋಗೈಕಸುಖದುಃಖಃ ತದೇಕಧೀಃ' ಎಂದು ಯಾಮುನರು ಹೇಳಿದಂತೆ ಭಗವಂತನ ಸಂಶ್ಲೇಷವೇ ಸುಖವೆಂದೂ ಭಗವಂತನ ವಿಶ್ಲೇಷವೇ ದುಃಖವೆಂದೂ ಭಾವಿಸುವ ಏಕಾಂತಭಕ್ತನಾಗುತ್ತಾನೆ ಇವನು. ರಾಮಾನುಜರು ಈ ಗೀತಾವಾಕ್ಯಗಳನ್ನು ವಿವರಿಸುತ್ತಾ ಈ ಅಂಶಗಳನ್ನು—

'ಬ್ರಹ್ಮಭೂತಃ ಆವಿರ್ಭೂತಾಪರಿಚ್ಛಿನ್ನಜ್ಞಾನೈಕಾಕಾರಮಚ್ಛೇಷತೈಕಸ್ವಭಾವಾತ್ಮಸ್ವರೂಪಃ ಮದ್ವ್ಯತಿರಿಕ್ತೇಷು ಸರ್ವೇಷು ಭೂತೇಷು ಅನಾದರಣೀಯತಾಯಾಂ ಸಮೋ ನಿಖಿಲಂ ವಸ್ತುಜಾತಂ ತೃಣವನ್ಮನ್ಯಮಾನಃ ಮದ್ಭಕ್ತಿಂ ಲಭತೇ ಪರಾಮ್ ಮಯಿ ಸರ್ವೇಶ್ವರೇ ನಿಖಿಲಜಗದುದ್ಭವಸ್ಥಿತಿಪ್ರಲಯಲೀಲೇ ನಿರಸ್ತಸಮಸ್ತಹೇಯಗಂಧೇ ಅನವಧಿಕಾತಿಶಯಾಸಂಖ್ಯೇಯ ಕಲ್ಯಾಣಗುಣಗಣೈಕತಾನೇ ಲಾವಣ್ಯಾಮೃತಸಾಗರೇ ಶ್ರೀಮತಿ ಪುಂಡರೀಕನಯನೇ ಸ್ವಸ್ವಾಮಿನಿ ಅತ್ಯರ್ಥಪ್ರಿಯಾನುಭವರೂಪಾಂ ಪರಾಂ ಭಕ್ತಿಂ ಲಭತೇ' ಎಂದು ನಿರೂಪಿಸಿದ್ದಾರೆ. ಕರ್ಮಯೋಗ ಜ್ಞಾನಯೋಗಗಳ ಮೂಲಕ ಭಕ್ತಿಯೋಗದ ಪ್ರಾಪ್ತಿ ಎಂಬುದನ್ನು ಈ ಪ್ರಕರಣದಲ್ಲಿ ನಾವು ತಿಳಿಯುತ್ತೇವೆ. ವೇದಾಂತದೇಶಿಕರವರೂ ತಮ್ಮ ತಾತ್ಪರ್ಯಚಂದ್ರಿಕೆಯಲ್ಲಿ ಆತ್ಮಾನುಭವವನ್ನು ಗಳಿಸಿಕೊಂಡವನು ಪರಭಕ್ತಿಗೆ ಅಧಿಕಾರಿಯಾಗುವನೆಂಬ ಅಂಶವನ್ನು ಈ ಶ್ಲೋಕದ ನಿರೂಪಣಾವಸರದಲ್ಲಿ 'ಏವಂ ಕರ್ಮಯೋಗಾದಿಸಾಧ್ಯಪ್ರತ್ಯಗಾತ್ಮಾನುಭವಸ್ಯ ಪರಭಕ್ತ್ಯಧಿಕಾರಾಪಾದಕತ್ವಂ ಉಚ್ಯತೇ ಬ್ರಹ್ಮಭೂತ ಇತಿ ಶ್ಲೋಕೇನ' ಎಂದು ವಿವರಿಸಿದ್ದಾರೆ.

ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ ಆತ್ಮಕಾಮನಿಗೂ ಭಗವತ್ಕಾಮನಿಗೂ ಇರುವ ವೈಲಕ್ಷಣ್ಯವನ್ನು ಭಗವಂತನು ತಿಳಿಸಿದ್ದಾನೆ. ಭಗವಂತನ ಅನುಗ್ರಹವನ್ನೇ ಇವರಿಬ್ಬರೂ ಬೇಡಬೇಕಾಗಿರುತ್ತದೆ. ಆದರೂ ಭಗವತ್ಕಾಮನಿಗೆ ಭಗವತ್ಪ್ರಾಪ್ತಿ ಬೇಗ ಆಗುತ್ತದೆ. ಇದಕ್ಕೆ ಅವನು ಭಗವಂತನಲ್ಲಿ ತನ್ನ ಚಿತ್ತವನ್ನಿಟ್ಟಿರುವುದು ಕಾರಣ. ಭಗವಂತನನ್ನುಳಿದು ಮತ್ತೊಂದನ್ನೂ ಬಯಸದವನು ಭಗವತ್ಕಾಮಿ. ಇವನ ಭಕ್ತಿಗೆ ಪ್ರಯೋಜನ ಭಗವಂತನನ್ನು ಹೊಂದುವುದೇ ಆಗಿದೆ. ಭಗವಂತನಲ್ಲಿ ಸ್ಥಿರವಾದ ಚಿತ್ತಸಮಾಧಾನವನ್ನು ಹೊಂದಿದವರು ಇಂಥ ಭಕ್ತಿಯನ್ನು ಹೊಂದುವರು. ಅನಾದಿಯಾದ ಕರ್ಮವಾಸನೆಗೆ ವಶವಾದ ಮನಸ್ಸನ್ನು ಭಗವಂತನಲ್ಲಿ ನೆಲೆನಿಲ್ಲಿಸುವುದು ಸುಲಭವಲ್ಲ. ಅದಕ್ಕಾಗಿ ಅಭ್ಯಾಸಯೋಗವನ್ನು ಮಾಡಬೇಕೆಂದು ಗೀತೆ ಉಪದೇಶಿಸುತ್ತದೆ. ಭಗವಂತನ ಕಲ್ಯಾಣಗುಣಗಳನ್ನು ನಿರಂತರವಾಗಿ ಧ್ಯಾನಿಸುವುದರ ಮೂಲಕ ಸ್ಥಿರವಾದ ಚಿತ್ತಸಮಾಧಾನ ಲಭಿಸುವುದು. ಅಭ್ಯಾಸ ಮತ್ತು ವೈರಾಗ್ಯಗಳಿಂದ ಮನಸ್ಸಿನ ಚಾಂಚಲ್ಯವನ್ನು ಹತೋಟಿಗೊಳಪಡಿಸಬೇಕು. ಭಗವದಿತರ ವಿಚಾರಗಳಲ್ಲಿ ವೈರಾಗ್ಯ ಹಾಗೂ ಭಗವದ್ವಿ

acharya.org

ಷಯದಲ್ಲಿ ಅಭ್ಯಾಸ ಮಾಡಬೇಕು. ಮನಸ್ಸನ್ನು ಹೀಗೆಯೂ ದೇವರಲ್ಲಿ ನಿಲ್ಲಿಸಲಾಗದೆ ಹೋದರೆ ಭಗವಂತನಿಗೆ ಸಂಬಂಧಿಸಿದ ಯಾವುದಾದರೊಂದು ವ್ಯಾಪಾರದಲ್ಲಿ ನಿರತರಾಗಿ ತನ್ಮೂಲಕ ಅಭ್ಯಾಸಯೋಗವನ್ನು ಸಾಧಿಸಬೇಕು. 'ಅಭ್ಯಾಸೇಪ್ಯಸಮರ್ಥೋಽಸಿ ಮತ್ಕರ್ಮಪರಮೋ ಭವ' ಎಂದು ಈ ಅಂಶವನ್ನು ಹೇಳಿದೆ. ಭಗವಂತನಲ್ಲಿ ಭಕ್ತಿಯನ್ನು ಹೊಮ್ಮಿಸುವ ವ್ಯಾಪಾರಗಳಲ್ಲಿ ನಿರತನಾದ ಈ ಭಕ್ತ ಆ ಬಗೆಬಗೆಯಾದ ಕರ್ಮಾನುಷ್ಠಾನಗಳ ಮೂಲಕ ಭಗವಚ್ಚಿಂತನೆಯನ್ನೇ ಮಾಡುತ್ತಿರುವನು. ಇದನ್ನೂ ಮಾಡಲಾರದವನು ಕರ್ಮಯೋಗವನ್ನು ಅಭ್ಯಾಸಮಾಡಬೇಕು. ಈ ಕರ್ಮಯೋಗದಿಂದ ಕ್ರಮವಾಗಿ ಅವನಿಗೆ ಭಕ್ತಿಯೋಗದ ಲಾಭವಾಗುವುದು. 'ಸರ್ವಕರ್ಮಫಲ–ತ್ಯಾಗಂ ತತಃ ಕುರು ಯತಾತ್ಮವಾನ್' ಎಂದು ಈ ಅಂಶವನ್ನು ಗೀತೆಯಲ್ಲಿ ಹೇಳಿದೆ.

ಪೂರ್ವಾರ್ಜಿತಪುಣ್ಯದ ಫಲವಾಗಿ ಅಭ್ಯಾಸಯೋಗದ ಸಿದ್ಧಿಯಾದವನು ವಿಳಂಬವಿಲ್ಲದೆ ಭಕ್ತಿಯೋಗವನ್ನು ಪಡೆಯುವನು. ಆದರೆ ಅಂಥಾ ಸಾಮರ್ಥ್ಯವಿಲ್ಲದವನು ಕರ್ಮಯೋಗದ ಮೂಲಕ ಆತ್ಮಾನುಸಂಧಾನ ಮಾಡಿ ಕ್ರಮವಾಗಿ ಅದೇ ಫಲವನು ಪಡೆಯುವನು. ಅಸಂಗಕರ್ಮಾನುಷ್ಠಾನದಿಂದ ಮನಸ್ಸಿನ ಕಲ್ಮಷಗಳೆಲ್ಲಾ ಹೋಗುತ್ತವೆ. ಮನಶ್ಶುದ್ಧಿಯಾದಾಗ ಆತ್ಮಚಿಂತನೆಗೆ ಅರ್ಹತೆಯುಂಟಾಗುತ್ತದೆ. ಆತ್ಮಚಿಂತನೆಯಿಂದ ಆತ್ಮಸಾಕ್ಷಾತ್ಕಾರ ಸಿದ್ಧಿಸುತ್ತದೆ. ಆತ್ಮಸಾಕ್ಷಾತ್ಕಾರದಿಂದ ಪರಮಶೇಷಿಯಾದ ಭಗವಂತನಲ್ಲಿ ಭಕ್ತಿ ಉದಿಸುತ್ತದೆ. ಈ ಭಕ್ತಿ ಪರಿಪಕ್ವವಾದಾಗ ಭಗವತ್ಪ್ರಾಪ್ತಿಯಾಗುತ್ತದೆ. ಹೀಗೆ ಸಾಮಾನ್ಯಭಕ್ತಿಯಿಂದ ಸಾಧನ ಆರಂಭವಾಗಿ ಪರಭಕ್ತಿಯ ರೂಪವನ್ನು ಹೊಂದಿ ಪರಮಪುರುಷಾರ್ಥವನ್ನು ಸಾಧಿಸಿಕೊಡುತ್ತದೆ.

ಭಕ್ತರುಗಳು ನಾಲ್ಕು ಬಗೆ

ಮೋಕ್ಷಕ್ಕೆ ಉಪಾಯವಾದ ಪರಭಕ್ತಿ ಕ್ರಮಕ್ರಮವಾಗಿ ಸಾಮಾನ್ಯಭಕ್ತಿಯಿಂದ ರೂಪುಗೊಳ್ಳುವುದು. ಭಕ್ತಿಯು ಹೊಮ್ಮಬೇಕಾದರೆ ಭಗವಂತನ ಸ್ವರೂಪ ಹಾಗೂ ಮಹಾಮಹಿಮತ್ವದ ಅರಿವು ಆವಶ್ಯಕ. ಭಗವಂತನಲ್ಲಿ ಭಕ್ತಿಯು ಹುಟ್ಟುವುದಕ್ಕೂ ಹಾಗೂ ಆ ಭಕ್ತಿಯು ಅಭಿವೃದ್ಧಿಯಾಗುವುದಕ್ಕೂ ಸಹಾಯವಾಗಲೆಂದೇ ಶ್ರೀಕೃಷ್ಣನು ಹತ್ತನೆಯ ಅಧ್ಯಾಯದಲ್ಲಿ ತನ್ನ ವಿಭೂತಿಯನ್ನು ನಿರೂಪಿಸಿದ್ದಾನೆ. ರಾಮಾನುಜರು ತಮ್ಮ ಗೀತಾಭಾಷ್ಯದಲ್ಲಿ ಹತ್ತನೆಯ ಅಧ್ಯಾಯದ ಅವತರಣಿಕೆಯಲ್ಲಿ 'ಇದಾನೀಂ ಭಕ್ತ್ಯುತ್ಪತ್ತಯೇ ತದ್ವಿವೃದ್ಧಯೇ ಚ ಭಗವತೋ ನಿರಂಕುಶೈಶ್ವರ್ಯಾದಿ ಕಲ್ಯಾಣ-ಗುಣಾನಂತ್ಯಂ ಕೃತ್ಸ್ನಸ್ಯ ಜಗತಃ ತಚ್ಛರೀರತಯಾ ತದಾತ್ಮಕತ್ವೇನ ತತ್ಪ್ರವರ್ತ್ಯತ್ವಂ ಚ ಪ್ರಪಂಚ್ಯತೇ' ಎಂದು ಈ ಅಂಶವನ್ನು ನಿರೂಪಿಸಿದ್ದಾರೆ. ಲೋಕದಲ್ಲಿರುವ ಜನರು ತಮ್ಮ ಆಧ್ಯಾತ್ಮಿಕ ಸಾಧನೆಯನ್ನು ಸಾಧಿಸಬೇಕಾದರೆ ಬೇರೆಬೇರೆ ಹಂತಗಳಲ್ಲಿ ಬೇರೆಬೇರೆ ರೀತಿಯಲ್ಲಿ ಭಕ್ತಿಮಾರ್ಗವನ್ನನುಸರಿಸಬೇಕಾದುದು ಆವಶ್ಯಕ. ಭಗವಂತನನ್ನು ಭಜಿಸದೆ

acharya.org

ಸಿದ್ಧಿ ಯಾರಿಗೂ ಆಗದು. ಭಗವಂತನನ್ನು ಭಜಿಸದವರು ಸಂಸಾರದಿಂದ ವಿಮುಕ್ತಿಯನ್ನು ಹೊಂದಲಾರರು. ಬೇರೆಬೇರೆ ಪ್ರಯೋಜನಗಳಿಗಾಗಿಯಾದರೂ ಭಗವಂತನನ್ನು ಸೇವಿಸಬೇಕಾಗುವುದೆಂಬುದನ್ನು ಗೀತೆಯಲ್ಲಿ ಪರಮಾತ್ಮನು ನಿರೂಪಿಸಿದ್ದಾನೆ.

'ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥'

ಎಂಬುದಾಗಿ. ಪ್ರಾಚೀನಕರ್ಮದ ಕಾರಣ ಭಗವಂತನನ್ನು ಆಶ್ರಯಿಸದವರೂ ಸಹ ನಾಲ್ಕು ಬಗೆಯಾಗಿರುವರೆಂಬುದನ್ನು—

'ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯಂತೇ ನರಾಧಮಾಃ ।
ಮಾಯಯಾಪಹೃತಜ್ಞಾನಾಃ ಆಸುರೀಂ ಭಾವಮಾಶ್ರಿತಾಃ ॥'

ಎಂಬಲ್ಲಿ ತಿಳಿಸಿದೆ. ಅನಾದಿಯಾದ ಪಾಪವಾಸನೆಯಿಂದ ದೂಷಿತರಾದವರು ತಾವು ಭಗವಂತನಿಗೆ ಸೇರಿದವರೆಂಬುದನ್ನು ತಿಳಿಯಲಾರದೆ ಕೇವಲ ಲೌಕಿಕವಾದ ವ್ಯಾಪಾರದಲ್ಲಿಯೇ ಮಗ್ನರಾಗಿ ಭಗವಂತನಿಂದ ದೂರವಾಗಿಯೇ ಉಳಿಯುವರು. ಇವರನ್ನು ದುಷ್ಕೃತಿಗಳೆಂದು ಇಲ್ಲಿ ಹೇಳಿದೆ. ಪರಮಾತ್ಮಸ್ವರೂಪದ ಅರಿವು ಇವರಿಗಿಲ್ಲದಿರುವುದೇ ಇವರು ಭಗವಂತನನ್ನು ಆಶ್ರಯಿಸದಿರುವುದಕ್ಕೆ ಕಾರಣ. ಭಗವಂತನ ಸ್ವರೂಪವನ್ನು ಸಾಮಾನ್ಯಾಕಾರದಿಂದ ತಿಳಿದವರಾದರೂ ಸಹ ಭಗವಂತನನ್ನು ಆಶ್ರಯಿಸಲಾರದವರು ನರಾಧಮರೆನ್ನಿಸುವರು. ಭಗವಂತನ ನಿಜಸ್ವರೂಪವನ್ನೂ ಮಹಿಮೆಯನ್ನೂ ಅರಿತವರಾದರೂ ಸಹ ಯುಕ್ತ್ಯಾಭಾಸಗಳಿಂದ ಅವುಗಳನ್ನು ನಿರಾಕರಿಸತೊಡಗುವವರು ಮೂರನೆಯ ಬಗೆಯವರಾದ 'ಮಾಯಯಾಪಹೃತಜ್ಞಾನಾಃ' ಎನ್ನಿಸುತ್ತಾರೆ. ಆದರೆ ನಾಲ್ಕನೆಯ ಗುಂಪು ಇವು ಮೂರಕ್ಕಿಂತ ಕಠಿಣತರವಾಗಿರುವುದು. ಭಗವಂತನ ಮಹಿಮೆಯ ಮತ್ತು ಸ್ವರೂಪದ ಜ್ಞಾನ ಯಾರಲ್ಲಿ ಭಗವದ್ದ್ವೇಷರೂಪವಾಗಿ ಪರಿಣಮಿಸುವುದೋ ಅಂಥವರು ಆಸುರಭಾವವನ್ನಾಶ್ರಯಿಸಿದವರಾಗುತ್ತಾರೆ. ಈ ನಾಲ್ಕು ಬಗೆಯವರೂ ಭಗವಂತನನ್ನು ಆಶ್ರಯಿಸದಿರುವುದಕ್ಕೆ ಕಾರಣ ಅವರ ಪ್ರಾಚೀನಕರ್ಮ ಹಾಗೂ ಪಾಪವೇ ಆಗಿದೆ. ಇವರೂ ಸಹ ತಿಳಿದೋ ತಿಳಿಯದೆಯೋ ತಾವು ಮಾಡಿದ ಸುಕೃತದ ಕಾರಣ ಕರ್ಮವಿಪಾಕವನ್ನು ಹೊಂದಿ ಎಂದಾದರೊಮ್ಮೆ ಭಗವಂತನನ್ನು ಆಶ್ರಯಿಸುವ ಸಂಭವವಿದೆ. ಭಗವಂತನ ದಯೆ ಎಲ್ಲರ ಮೇಲೆಯೂ ಸಮವಾಗಿ ಪ್ರವಹಿಸುವಂಥದು. ಆ ದಯಾಕಾರ್ಯಕ್ಕೆ ವಿರೋಧಿಯಾಗಿರುವ ಪ್ರತಿಬಂಧಕಗಳು ಕಳೆದುಹೋದವೆಂದರೆ ಅದು ಸಾರ್ವಭೌಮಿಯಾಗುವುದು.

ಭಗವಂತನನ್ನು ಒಬ್ಬರು ಆಶ್ರಯಿಸುವುದಕ್ಕೂ ಒಬ್ಬರು ಆಶ್ರಯಿಸದೇ ಇರುವುದಕ್ಕೂ ಅವರವರ ಪಾಪಪುಣ್ಯಗಳೇ ಕಾರಣ. ಪೂರ್ವಪೂರ್ವಜನ್ಮಗಳಲ್ಲಿ ಸುಕೃತಗಳನ್ನಾಚರಿಸಿದ ಮಹಾನುಭಾವರು ಭಗವಂತನಲ್ಲಿ ಸ್ಥಿರವಾದ ಭಕ್ತಿಯನ್ನು ಹೊಂದುತ್ತಾರೆ.

acharya.org

ಮೇಲೆ ಹೇಳಿದಂತೆ ಈ ಭಕ್ತರೂ ನಾಲ್ಕು ಬಗೆಯಾಗಿದ್ದಾರೆ: ಆರ್ತ, ಅರ್ಥಾರ್ಥೀ, ಜಿಜ್ಞಾಸು ಮತ್ತು ಜ್ಞಾನೀ ಎಂಬುದಾಗಿ. ಭಗವಂತನನ್ನು ಭಜಿಸಿದವರು ತಮತಮಗೆ ಅಪೇಕ್ಷಿತವಾದ ಪುರುಷಾರ್ಥಗಳನ್ನು ಅವನಿಂದ ಪಡೆಯಬಹುದು. ಒಮ್ಮೆ ತಾನು ಕಳೆದು ಕೊಂಡಿರುವ ಐಶ್ವರ್ಯವನ್ನು ಬಯಸಿ ದೇವರಲ್ಲಿ ಭಕ್ತಿ ಮಾಡುವವನು 'ಆರ್ತ'ನೆನ್ನಿಸು ವನು. ತಾನು ಅದುವರೆಗೂ ಪಡೆಯದಿರುವ ಐಶ್ವರ್ಯವನ್ನು ಪಡೆಯಲಾಶಿಸುವವನು 'ಅರ್ಥಾರ್ಥೀ' ಎನ್ನಿಸುವನು. ಪ್ರಕೃತಿಸಂಬಂಧದಿಂದ ಬಿಡಲ್ಪಟ್ಟು ಶುದ್ಧವಾಗಿರುವ ಆತ್ಮಾನುಭವವನ್ನು ಪಡೆದುಕೊಳ್ಳಲಿಚ್ಛಿಸುವವನು 'ಜಿಜ್ಞಾಸು'. ಇತರ ಯಾವ ಪ್ರಾಪ್ತಿ ಯನ್ನೂ ಬಯಸದೇ ಪರಮಾತ್ಮನನ್ನೇ ಪಡೆಯಲಿಚ್ಛಿಸುವವನು 'ಜ್ಞಾನಿ'. ಈ ನಾಲ್ವರಲ್ಲಿ ಮೊದಲೆರಡು ಬಗೆಯ ಭಕ್ತರು ಐಹಿಕವಾದ ಪ್ರಯೋಜನಗಳನ್ನು ಬಯಸಿದರೆ ಕೊನೆಯ ಎರಡು ಬಗೆಯ ಭಕ್ತರು ಕೇವಲ ಆಧ್ಯಾತ್ಮಿಕವಾದ ಪ್ರಯೋಜನಗಳನ್ನು ಕೋರುವವ ರಾಗಿದ್ದಾರೆ. ಇವರಲ್ಲಿಯೂ ಸಹ ಭಗವಂತನನ್ನೇ ಪಡೆಯಲಿಚ್ಛಿಸುವ ಜ್ಞಾನೀ ಸರ್ವ ಶ್ರೇಷ್ಠನಾಗಿದ್ದಾನೆ. ಈ ನಾಲ್ಕು ಬಗೆಯ ಭಕ್ತರೂ ತಮ್ಮತಮ್ಮ ಇಷ್ಟಪ್ರಾಪ್ತಿಗಾಗಿ ಭಗವಂತನನ್ನೇ ಬೇಡುವವರಾಗಿದ್ದಾರೆ. ಆ ಕಾರಣದಿಂದಲೇ ಭಗವಂತನ ಅಭಿನಂದನೆಗೆ ಪಾತ್ರರಾಗಿದ್ದಾರೆ.

'ತೇಷಾಂ ಜ್ಞಾನೀ ನಿತ್ಯಯುಕ್ತಃ ಏಕಭಕ್ತಿರ್ವಿಶಿಷ್ಯತೇ ।
ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ ॥
ಉದಾರಾಃ ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಮ್ ।
ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಮ್ ॥'

ಎಂದು ಗೀತಾಚಾರ್ಯನು ಜ್ಞಾನಿಯನ್ನು ಕೊಂಡಾಡುತ್ತಾನೆ. ಭಗವಂತನಿಂದ ಇವರು ಏನನ್ನಾದರೂ ಬೇಡುವವರಾದ ಕಾರಣ ಇವರು ಉದಾರರೆನಿಸಿದ್ದಾರೆ. 'ಸರ್ವ ಏವೈತೇ ಮಾಮೇವೋಪಾಸತ ಇತಿ ಉದಾರಾಃ ವದಾನ್ಯಾಃ । ಯೇ ಮತ್ತೋ ಯತ್ಕಿಂಚಿದಪಿ ಗೃಹ್ಣಂತಿ, ತೇ ಹಿ ಮಮ ಸರ್ವಸ್ವದಾಯಿನಃ ॥' ಎಂದು ರಾಮಾನುಜರು ಈ ಸೂಕ್ತಿಯ ವಿವರಣೆಯನ್ನು ಕೊಟ್ಟಿರುವುದು ಗಮನಾರ್ಹವಾಗಿದೆ. ಯಾವ ಪ್ರಯೋಜನವನ್ನು ಬಯಸಿ ಬೇಡಿದರೂ ಸಹ ಭಗವದುಪಾಸನೆಗೆ ಬಹಳ ಮಹತ್ತ್ವ ಇದೆ. ಅರ್ಥಕಾಮನಾದ ವನು ಭಗವಂತನ ದಯೆಯ ಕಾರಣ ಕ್ರಮೇಣ ಭಗವತ್ಕಾಮನಾಗಿ ಪರಿವರ್ತನ ಹೊಂದುತ್ತಾನೆ. ಇವರಲ್ಲಿ ಜ್ಞಾನಿಯು ನಿತ್ಯಯುಕ್ತನೂ, ಏಕಭಕ್ತನೂ ಆದ ಕಾರಣ ಇತರರಿಗಿಂತ ಹಿರಿಮೆಯನ್ನು ಹೊಂದಿದ್ದಾನೆ. ಈ ಅಂಶದ ನಿರೂಪಣೆಯನ್ನು ರಾಮಾ ನುಜರು—

'ಜ್ಞಾನಿನೋ ಹಿ ಮದೇಕಪ್ರಾಪ್ಯಸ್ಯ ಮಯಾ ಯೋಗೋ ನಿತ್ಯಃ । ಇತರ- ಯೋಸ್ತು ಯಾವತ್ ಸ್ವಾಭಿಲಷಿತಪ್ರಾಪ್ತಿ ಮಯಾ ಯೋಗಃ । ತಥಾ ಜ್ಞಾನಿನೋ

acharya.org

ಮಯ್ಯೇಕಸ್ಮಿನ್ನೇವ ಭಕ್ತಿಃ। ಇತರಯೋಸ್ತು ಸ್ವಾಭಿಲಷಿತೇ ತತ್ಸಾಧನತ್ವೇನ ಮಯಿ ಚ। ಅತಸ್ಸ ಏವ ವಿಶಿಷ್ಯತೇ ! ಕಿಂ ಚ ಪ್ರಿಯೋ ಜ್ಞಾನಿನೋಽತ್ಯರ್ಥಮಹಂ।

ಭಗವಂತನನ್ನೇ ಪ್ರಾಪ್ಯವನ್ನಾಗಿ ಉಳ್ಳ ಜ್ಞಾನಿಗೆ ಭಗವಂತನೊಡನೆ ನಿತ್ಯ ಸಂಬಂಧವಿದೆ. ತಮ್ಮ ತಮ್ಮ ಇಷ್ಟಾರ್ಥಗಳು ಕೈಗೂಡುವವರೆಗೆ ಇತರರು ಭಗವಂತನನ್ನು ಉಪಾಸಿಸಿದರೆ ಜ್ಞಾನಿಯು ಭಗವಂತನನ್ನೇ ಬಯಸುವ ಕಾರಣ ಎಂದೆಂದೂ ಅವನನ್ನೇ ಧ್ಯಾನಿಸುವನು. ಆದುದರಿಂದ ಅವನು ನಿತ್ಯಯುಕ್ತ.

ಜ್ಞಾನಿಯು ಭಗವಂತನನ್ನೇ ಬಯಸುವವನಾಗಿ ಮತ್ತಾವ ಪ್ರಯೋಜನವನ್ನೂ ಕೋರುವವನಲ್ಲ. ಆದುದರಿಂದ ಅವನು 'ಏಕಭಕ್ತಿಃ' ಆದವನು. ಅವನು ಬಯಸುವುದು ಭಗವಂತನನ್ನೇ. ಆ ಪುರುಷಾರ್ಥಪ್ರಾಪ್ತಿಗಾಗಿ ಭಗವಂತನನ್ನೇ ಸಾಧನವನ್ನಾಗಿ ಹೊಂದುವನು. ಇದು ಜ್ಞಾನಿಯ ವೈಶಿಷ್ಟ್ಯ.

ಜ್ಞಾನಿಗೆ ಪರಮಾತ್ಮನಲ್ಲಿರುವ ಪ್ರೇಮ ಅಸಾಧಾರಣವಾದುದು. ಅದರ ಆಳವನ್ನು ವರ್ಣಿಸಲು ಶಕ್ಯವಾಗದು. ಇಂಥ ಅಪಾರವಾದ ಪ್ರೇಮವನ್ನು ಭಗವಂತನಲ್ಲಿ ತೋರುವ ಕಾರಣ ಭಗವಂತನೂ ಸಹ ಅವನನ್ನು ಪ್ರಿಯನೆಂದು ಭಾವಿಸುವನು.

ಜ್ಞಾನಿಗೂ ಇತರ ಮೂರು ಬಗೆಯ ಭಕ್ತರಿಗೂ ಹೀಗೆ ವ್ಯತ್ಯಾಸವಿದೆ. ಜ್ಞಾನಿಯು ಭಗವತ್ಕಾಮ. ಅವನದು ಅವಿಭಕ್ತವಾದ ಭಕ್ತಿ. ಅಂಥ ಜ್ಞಾನಿಯನ್ನು ಭಗವಂತನೇ 'ಸ ಮಹಾತ್ಮಾ ಸುದುರ್ಲಭಃ' ಎಂದು ಅಭಿನಂದಿಸಿದ್ದಾನೆ. ಇಂಥ ಭಕ್ತಿ ಫಲಿಸ ಬೇಕಾದರೆ ಬಹಳ ಪುಣ್ಯ ಮಾಡಿರಬೇಕು. ಅನೇಕ ಜನ್ಮಗಳಲ್ಲಿ ಆಚರಿಸಿದ ಸುಕೃತದ– ಕಾರಣ ಇದು ಲಭ್ಯವಾಗಬೇಕು. ಇದನ್ನೇ 'ಬಹೂನಾಂ ಜನ್ಮನಾಂ ಅಂತೇ ಜ್ಞಾನ-ವಾನ್ ಮಾಂ ಪ್ರಪದ್ಯತೇ' ಎಂದು ಭಗವಂತನು ಹೇಳಿದ್ದಾನೆ.

ಭಕ್ತಿಯೋಗವನ್ನಾರಂಭಿಸಲು ಕೆಲವು ಅರ್ಹತೆಗಳಿರಬೇಕೆಂದು ಶಾಸ್ತ್ರಗಳು ವಿಧಿಸಿವೆ. ಭಕ್ತಿಯೋಗವನ್ನು ತಟ್ಟನೆ ಯಾರಾದರೂ ಆರಂಭಿಸಲು ಸಾಧ್ಯವಾಗುವುದಿಲ್ಲ. ಭಗವಂತನಲ್ಲಿ ಭಕ್ತಿಯನ್ನು ಮಾಡಲು ಎಲ್ಲರಿಗೂ ಅವಕಾಶವಿದೆ. ಆದರೆ ಭಕ್ತಿಯೋಗಕ್ಕೆ ಕೆಲವು ನಿರ್ಬಂಧಗಳಿವೆ. ತಮ್ಮ ತಮ್ಮ ವರ್ಣ, ಆಶ್ರಮ ಇವುಗಳಿಗೆ ಉಚಿತವಾದ ಕರ್ಮಗಳನ್ನು ಮಾಡುತ್ತಾ ಕರ್ಮಯೋಗಾದಿಗಳನ್ನನುಷ್ಠಿಸಿ ಭಕ್ತಿಯೋಗವನ್ನಾರಂಭಿಸ ಬೇಕಾಗಿದೆ. ಭಕ್ತಿ ಮತ್ತು ಭಕ್ತಿಯೋಗಗಳಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಭಕ್ತಿ ಎಂಬುದ. ಸಾರ್ವತ್ರಿಕವಾಗಿ ಎಲ್ಲರಿಗೂ ಅನ್ವಯಿಸುತ್ತದೆ. ಎಲ್ಲ ಸಾಧನೆಗಳಿಗೂ ಅದೇ ಮೂಲ. ಎಲ್ಲರಿಗೂ ಈ ಭಕ್ತಿಯನ್ನು ಬೆಳಸಿಕೊಳ್ಳುವ ಅವಶ್ಯಕತೆ ಇದೆ. ಆದರೆ ಭಕ್ತಿಯೋಗ ಎಲ್ಲರಿಗೂ ಅನ್ವಯಿಸುವುದಿಲ್ಲ. ಬ್ರಹ್ಮವಿದ್ಯೆಗೆ ಅಧಿಕಾರವುಳ್ಳವರಿಗೆ ಮಾತ್ರ ಭಕ್ತಿಯೋಗ ಅನ್ವಯಿಸುತ್ತದೆ. ಇದಕ್ಕೆ ಅವಶ್ಯಕವಾಗಿ ಬೇಕಾದ ಅಂಶಗಳು ಯಾವುವೆಂದರೆ: (೧) ಅತ್ಯವಶ್ಯಕವಾದ ಶಾಸ್ತ್ರಜ್ಞಾನ (೨) ಭಕ್ತಿಯೋಗಾದ್ಯನುಷ್ಠಾನಕ್ಕೆ ಅವಶ್ಯಕವಾಗಿ

acharya.org

ಬೇಕಾದ ಸಾಮರ್ಥ್ಯ (೩) ವಿಹಿತವಾದ ವರ್ಣಾಶ್ರಮಾದಿಗಳ ಅಧಿಕಾರ (೪) ಫಲ ನಿಷ್ಪತ್ತಿಯಾಗುವವರೆಗೆ ಕಾಯುವ ತಾಳ್ಮೆ. ಇವುಗಳೆಲ್ಲಾ ಇದ್ದರೆ ಮಾತ್ರ ಈ ಮಾರ್ಗಕ್ಕೆ ಅಧಿಕಾರ ಪ್ರಾಪ್ತಿಯಾಗುತ್ತದೆ. ಈ ಅರ್ಹತೆಗಳು ಭಗವಂತನಲ್ಲಿ ಸಾಮಾನ್ಯ ಭಕ್ತಿಯನ್ನು ಮಾಡುವುದರಿಂದ ಕ್ರಮೇಣ ಪ್ರಾಪ್ತವಾಗಬಹುದು. ವರ್ಣಧರ್ಮಗಳ ಆವಶ್ಯಕತೆಯನ್ನು ಹೇಳಿರುವಂತೆ ಆಶ್ರಮಧರ್ಮಗಳ ಆವಶ್ಯಕತೆಯನ್ನೂ ಶಾಸ್ತ್ರಗಳಲ್ಲಿ ಒತ್ತಿ ಹೇಳಿದ್ದಾರೆ. ಸೂತ್ರಕಾರರು ಈ ಅಂಶಗಳನ್ನು ಕುರಿತು ಸೂಕ್ಷ್ಮವಾಗಿ ವಿವೇಚನೆ ಮಾಡಿದ್ದಾರೆ.

ಜ್ಞಾನಿಯ ಉಪಾಸನಾ ಪ್ರಕಾರ

ಆರ್ತ, ಅರ್ಥಾರ್ಥಿ ಮತ್ತು ಜಿಜ್ಞಾಸುಗಳ ಉಪಾಸನಾ ಕ್ರಮಕ್ಕಿಂತ ಜ್ಞಾನಿಯ ಉಪಾಸನ ಕ್ರಮ ವಿಶಿಷ್ಟವಾಗಿರುವುದು. ಮೇಲೆ ಹೇಳಿದ ಮೂರು ಬಗೆಯ ಭಕ್ತರೂ ಪಡೆಯಲಿಚ್ಛಿಸುವ ಪುರುಷಾರ್ಥಗಳು ಬೇರೆಬೇರೆಯಾಗಿರುವುವು. ಆದರೆ ಜ್ಞಾನಿಯಾದವನು ಭಗವಂತನನ್ನು ಬಿಟ್ಟು ಮತ್ತೇನನ್ನೂ ಬಯಸುವವನಲ್ಲ. ಭಗವದನುಭವಕ್ಕೆ ಆಗುವ ವಿಳಂಬವನ್ನು ಅವನು ಸಹಿಸಲಾರನು. ಭಗವಂತನನ್ನುಳಿದು ಇತರ ವಿಚಾರಗಳನ್ನು ಪಡೆಯಲು ಅವನು ಹಂಬಲಿಸುವವನಲ್ಲ. ಸಾಧನೆಯ ಆರಂಭದೆಶೆಯಿಂದಲೇ ಹೀಗೆ ಅವನು ಭಗವಂತನನ್ನು ಸಾಧಿಸಬೇಕೆಂಬ ಗುರಿಯತ್ತ ಸಾಗುವನು. ಆರ್ತ ಮತ್ತು ಅರ್ಥಾರ್ಥಿಗಳು ಮತ್ತೆ ಈ ಲೋಕದಲ್ಲಿ ಹುಟ್ಟಬೇಕಾಗಬಹುದು. ಆದರೆ ಭಗವಂತನ ದಯೆಯಿಂದ ಇವರೂ ಸಹ ಅರ್ಥಕಾಮನೆಯನ್ನು ಬಿಟ್ಟುಕೊಟ್ಟು ಕ್ರಮೇಣ ಭಗವತ್ಕಾಮಿಗಳಾಗಿ ಆ ಭಗವಂತನನ್ನೇ ಪಡೆದುಕೊಳ್ಳುವರು. ಇವರು ಬೇಡುವ ಪ್ರಯೋಜನಗಳನ್ನೂ ಹೊಂದುವರು. ಹಾಗೂ ಕ್ರಮಕ್ರಮವಾಗಿ ಅವುಗಳಲ್ಲಿ ವಿರಕ್ತ ರಾಗಿ ಭಗವಂತನನ್ನೇ ಬೇಡುವವರಾಗುವರು. ಆತ್ಮಾನುಭವವನ್ನೇ ಬಯಸುವ ಕೈವಲ್ಯಾರ್ಥಿಯೂ ಸಹ ಮೊದಲ ಹಂತದಲ್ಲಿ ಆತ್ಮಾನುಭವವನ್ನೇ ಪಡೆದುಕೊಂಡರೂ ಕ್ರಮಕ್ರಮವಾಗಿ ಭಗವತ್ಕಾಮಿಯಾಗಿ ಪರಿವರ್ತನೆ ಹೊಂದಿ ಭಗವತ್ಪ್ರಾಪ್ತಿಯನ್ನು ಹೊಂದುವನು. ಬೇಡಿದುದನ್ನು ನೀಡುವವನು ಭಗವಂತ. ಅವುಗಳನ್ನು ಕೊಟ್ಟು ಅದರೊಡನೆ ವಿವೇಕವನ್ನು ದಯಪಾಲಿಸುವನವನು- ಐಹಿಕವಾದ ಸುಖಸಂಪತ್ತುಗಳಿಗಾಗಿಯೂ ಅವನನ್ನೇ ಬೇಡುವವರು ಅವನ ಅನುಗ್ರಹದ ಕಾರಣ ಕೊನೆಗೆ ಪಾರಲೌಕಿಕವನ್ನೇ ಕೋರುವವರಾಗುತ್ತಾರೆ. ಈ ಮೂರು ಮಂದಿ ಭಕ್ತರೂ ಹೀಗೆ ಕೊನೆಯಲ್ಲಿ ಜ್ಞಾನಿಗಳಂತೆಯೇ ಆಗುತ್ತಾರೆ. ಜ್ಞಾನಿಯು ಮೊದಲಿಂದಲೂ ನೇರವಾದ ಮಾರ್ಗದಲ್ಲಿ ಭಗವಂತನತ್ತ ಸಾರುವವನಾಗಿದ್ದಾನೆ. ಮತ್ತಾವುದನ್ನೂ ಬಯಸದ ಇವನು ಭಗವಂತನೊಬ್ಬನನ್ನು ಪಡೆಯುವುದೇ ತನ್ನ ಪುರುಷಾರ್ಥವೆಂಬುದನ್ನು ದೃಢವಾಗಿ ಸಾಧಿಸುವನು.

acharya.org

ಈ ನಾಲ್ಕು ಬಗೆಯ ಭಕ್ತರನ್ನೂ ಭಗವಂತನು 'ಉದಾರಾಃ' ಎನ್ನುತ್ತಾನೆ. ಇವರೆಲ್ಲರೂ ಭಗವಂತನಲ್ಲಿ ಶರಣಾಗಿ ತಮ್ಮ ತಮ್ಮ ಅಪೇಕ್ಷೆಗಳನ್ನು ಸಾಧಿಸಿಕೊಡಬೇಕೆಂದು ಅವನಲ್ಲಿ ಬೇಡುವವರಾಗಿದ್ದಾರೆ.

'ಸತತಂ ಕೀರ್ತಯಂತೋ ಮಾಂ ಯತಂತಶ್ಚ ದೃಢವ್ರತಾಃ ।
ನಮಸ್ಯಂತಶ್ಚ ಮಾಂ ನಿತ್ಯಂ ಯೋಗಯುಕ್ತಾ ಉಪಾಸತೇ ॥'

ಎಂದು ಇವರ ಬಗೆಗೆ ಭಗವಂತನು ಹೇಳಿದ್ದಾನೆ. ಇವರ ಪ್ರತಿಯೊಂದು ವ್ಯಾಪಾರವೂ ಒಂದಲ್ಲ ಒಂದು ರೀತಿಯಲ್ಲಿ ಭಗವಂತನಿಗೆ ಸಂಬಂಧಿಸಿರುತ್ತದೆ. ಭಗವಂತನನ್ನು ಬಹಳ ವಾಗಿ ಇವರು ಪ್ರೀತಿಸುವ ಕಾರಣ ಅವನನ್ನು ಕೀರ್ತಿಸದೆ, ನಮಿಸದೆ, ಒಂದು ಕ್ಷಣವನ್ನೂ ಇವರು ಕಳೆಯಲಾರರು. ಭಗವಂತನ ನಾಮಗಳನ್ನು ಹೇಳುತ್ತಾ, ಹೇಳುತ್ತಾ ರೋಮಾಂಚಿತರಾಗಿ ಮೈಮರೆಯುವರು ಇವರು. ಹರ್ಷಗದ್ಗದಕಂಠರಾಗಿ ಭಗವಂತ ನನ್ನು ಸ್ಮರಿಸುತ್ತಾ, ಭಗವಂತನ ಸೇವೆಯನ್ನು ಏಕಮನಸ್ಕರಾಗಿ ನಡೆಸುವರಿವರು. ಇಂಥ ಭಕ್ತರನ್ನು ಗೀತೆ 'ಅನನ್ಯರು' ಎನ್ನುತ್ತದೆ. ಭಗವಂತನನ್ನು ಬಿಟ್ಟು ಅನ್ಯವಾದು ಪುರುಷಾರ್ಥ ಏನೂ ಇವರಿಗಿಲ್ಲ. ಭಗವಂತನ ಗುಣವಿಭೂತಿಗಳನ್ನು ಚಿಂತಿಸುತ್ತಾ ಮೈಮರೆಯುವ ಈ ಮಹಾನುಭಾವರ ಯೋಗಕ್ಷೇಮವನ್ನು ಭಗವಂತನೇ ನೋಡಿ ಕೊಳ್ಳುವವನಾಗಿದ್ದಾನೆ.

'ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ॥'

ಎಂದು ಭಗವಂತನೇ ಭರವಸೆ ಕೊಟ್ಟಿದ್ದಾನೆ. ಭಗವಂತನನ್ನು ನೆನೆಯದೆ ಇವರು ಬದುಕ ಲಾರರು. ಅರೆಘಳಿಗೆಯೂ ಭಗವಂತನ ಚಿಂತನೆ ಇಲ್ಲದೆ ಇವರು ಇರಲಾರರು. ಇವರಿಗೆ ಅಭೀಷ್ಟವಾದ ಭಗವತ್ಪ್ರಾಪ್ತಿ ಎಂಬ ಯೋಗವನ್ನೂ, ಆ ಪ್ರಾಪ್ತಿಯು ಸರ್ವಕಾಲ ದಲ್ಲಿಯೂ ಇರುವಂತಹ ಕ್ಷೇಮವನ್ನೂ, ಭಗವಂತನೇ ಒದಗಿಸಿಕೊಡುತ್ತಾನೆ. ರಾಮಾ ನುಜರು ಈ ಶ್ಲೋಕಕ್ಕೆ ವಿವರಣೆ ನೀಡುತ್ತಾ ಈ ಅಂಶವನ್ನು 'ಅನನ್ಯಾಃ' ಅನನ್ಯ-ಪ್ರಯೋಜನಾಃ ಮಚ್ಚಿಂತನೇನ ವಿನಾ ಆತ್ಮಧಾರಣಾಲಾಭಾತ್ ಮಚ್ಚಿಂತನೈಕ-ಪ್ರಯೋಜನಾಃ ಮಾಂ ಚಿಂತಯಂತೋ ಯೇ ಮಹಾತ್ಮಾನಃ ಜನಾಃ ಪರ್ಯು-ಪಾಸತೇ ಸರ್ವಕಲ್ಯಾಣಗುಣಾನ್ವಿತಂ ಸರ್ವವಿಭೂತಿಯುಕ್ತಂ ಮಾಂ ಪರಿತಃ ಉಪಾ-ಸತೇ ಅನ್ಯೂನಮುಪಾಸತೇ ತೇಷಾಂ ನಿತ್ಯಾಭಿಯುಕ್ತಾನಾಂ ನಿತ್ಯಾಭಿಯೋಗಂ ಕಾಂಕ್ಷಮಾಣಾನಾಂ ಅಹಂ ಮತ್ಪ್ರಾಪ್ತಿಲಕ್ಷಣಂ ಯೋಗಂ ಅಪುನರಾವೃತ್ತಿರೂಪಂ ಕ್ಷೇಮಂ ಚ ವಹಾಮಿ' ಎಂದು ನಿರೂಪಿಸಿದ್ದಾರೆ.

ಈ ಲೋಕದಲ್ಲಿ ಭಗವಂತನನ್ನು ಯಾರು ಯಾವ ರೂಪದಲ್ಲಿ ಭಜಿಸಿದರೂ ಆ ವಿಶ್ವಾತ್ಮನಿಗೇ ಅನ್ವಯಿಸುವುದೆಂಬುದು ಗೀತಾಸಿದ್ಧಾಂತ.

acharya.org

'ಯೇಽಪ್ಯನ್ಯದೇವತಾ ಭಕ್ತಾಃ ಯಜಂತೇ ಶ್ರದ್ಧಯಾನ್ವಿತಾಃ ।
ತೇಽಪಿ ಮಾಮೇವ ಕೌಂತೇಯ ಯಜಂತ್ಯವಿಧಿಪೂರ್ವಕಂ ॥'

ಎಂಬಲ್ಲಿ ಈ ಅಂಶವನ್ನು ಕಾಣಬಹುದು.

ಭಗವಂತನೇ ಸರ್ವಕ್ಕೂ ಕಾರಣವೆಂದೂ ಸರ್ವದೇವತೆಗಳ ಪೂಜೆಯಿಂದ ಈ ಸರ್ವಾತ್ಮನೇ ಸಂತುಷ್ಟನಾಗುವನೆಂದೂ ಫಲಪ್ರದಾನಮಾಡುವನೆಂದೂ ತಿಳಿದು ಉಪಾಸನೆ ಮಾಡುವವನು ಸಂಸಾರದ ಬಂಧನದಿಂದ ವಿಮುಕ್ತನಾಗುವನು. ಇಂಥ ಉಪಾಸನೆಯನ್ನು ಜ್ಞಾನಿ ಮಾಡುವನು. ಭಗವಂತನನ್ನು ಸೇವಿಸುವಲ್ಲಿ ಭಕ್ತಿಭಾವ ಬಹಳ ಮುಖ್ಯವಾದ ಪೂಜಾ ಸಾಧನ. ಭಗವಂತನು ಸರ್ವಸುಲಭನಾಗಿದ್ದಾನೆ. ಪರಾತ್ಪರನಾದ ಅವನು ಸರ್ವಾಂತರ್ಯಾಮಿಯಾಗಿ ಸರ್ವನಿಯಾಮಕನಾಗಿದ್ದಾನೆ. 'ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ' ಎಂಬ ಭರವಸೆಯನ್ನು ಕೊಟ್ಟಿದ್ದಾನೆ. ಅವನನ್ನು ಪೂಜಿಸಲು ಸರ್ವಸುಲಭವಾದ ಪೂಜಾಸಾಧನೆಗಳೇ ಸಾಕೆಂಬುದನ್ನು

'ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ ॥'

ಎಂಬುದಾಗಿ ತಾನೇ ಹೇಳಿದ್ದಾನೆ. ಮನಸ್ಸು ನಿರ್ಮಲವಾಗಿದ್ದು ಭಗವಂತನ ಸಂತೋಷವನ್ನೇ ಕೋರುವುದಾಗಿರಬೇಕು. ಅಂಥ ಭಕ್ತಿಭಾವದಿಂದ ಸಮರ್ಪಿಸಿದುದನ್ನು ಭಗವಂತನು ಪ್ರೀತಿಯಿಂದ ಸ್ವೀಕರಿಸುತ್ತಾನೆ. ಈ ಲೋಕದಲ್ಲಿರುವ ಸಮಸ್ತವೂ ಅವನದೇ ಆಗಿರುವುದೆಂಬ ದೃಢಭಾವದಿಂದ ಸ್ವಾರ್ಥದ ಹಾಗೂ ಅಹಂಕಾರದ ಲೇಶವೂ ಇಲ್ಲದೆ ಮಾಡಿದ ಸಮರ್ಪಣೆ ಸರ್ವಶ್ರೇಷ್ಠವಾಗಿರುವುದೆಂಬುದು ಗೀತೆಯ ನಿಶ್ಚಯ.

ಇಂಥ ಜ್ಞಾನಿಯನ್ನು 'ಮಹಾತ್ಮಾ' ಎಂದು ಭಗವಂತನೇ ಹೇಳುತ್ತಾನೆ. ಈ ಜ್ಞಾನಿಯ ಮನೋಭಾವ ವಿಶಿಷ್ಟವಾದುದು. ಅವನ ಬಾಳೇ ಭಗವಂತನಿಗೆ ಸಮರ್ಪಿತವಾಗಿದೆ. ಆ ಸರ್ವಾಂತರ್ಯಾಮಿಯಾದ ಭಗವಂತನು ಸರ್ವಕರ್ತೃವೂ ಪರಮಭೋಕ್ತೃವೂ ಆಗಿದ್ದಾನೆಂಬುದನ್ನು ಇವನು ಮನಗಾಣುವನು.

'ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ ॥'

ಎಂದು ಭಗವಂತ ಹೇಳಿದಂತೆ ಈ ಜ್ಞಾನಿ ತನ್ನ ಸಮಸ್ತ ವ್ಯಾಪಾರಗಳನ್ನೂ ಆ ಸರ್ವಕರ್ಮಾರಾಧ್ಯನಿಗೇ ಸಮರ್ಪಿಸುತ್ತಾನೆ. ಅಹಂತೆ, ಮಮತೆಗಳ ಲೇಶವೂ ಇವನಲ್ಲಿರುವುದಿಲ್ಲ. ತನ್ನ ಕರ್ತೃತ್ವವೂ ಭೋಕ್ತೃತ್ವವೂ ಭಗವದ್ದತ್ತವಾದುದೆಂಬುದನ್ನು ಇವನು ಮನಗಂಡಿರುತ್ತಾನೆ. ಆದುದರಿಂದ ಕರ್ತೃತ್ವವನ್ನೂ, ಭೋಕ್ತೃತ್ವವನ್ನೂ, ಆರಾಧ್ಯತ್ವವನ್ನೂ ಆ ಸರ್ವಶೇಷಿಯಲ್ಲಿಯೇ ಅನುಸಂಧಾನ ಮಾಡುತ್ತಾನೆ. ಇವನ ಸರ್ವ

acharya.org

ವ್ಯಾಪಾರಗಳೂ ಭಗವದಾರಾಧನರೂಪವಾಗಿಯೇ ಇರುತ್ತವೆ. ಹೀಗೆ ತನ್ನ ಕರ್ತವ್ಯಗಳನ್ನು ಅನುಷ್ಠಿಸುವ ಜ್ಞಾನೀ ಕರ್ಮಬಂಧದಿಂದ ವಿಮುಕ್ತನಾಗುತ್ತಾನೆ. ಹಾಗೂ ಪರಮಪುರುಷನನ್ನು ಸಾಕ್ಷಾತ್ಕರಿಸುತ್ತಾನೆ.

ಜೀವನು ಭಗವಂತನಿಗಿಂತ ಬೇರೆಯಾಗಿ ವಿಲಕ್ಷಣನಾಗಿದ್ದರೂ ಆ ಭಗವಂತನನ್ನು ಬಿಟ್ಟು ಇರಲಾರನು. ಭಗವಂತನೇ ಸರ್ವಚೇತನಾಚೇತನಪದಾರ್ಥಗಳಿಗೆ ಆಧಾರನೂ ನಿಯಾಮಕನೂ ಶೇಷಿಯೂ ಆಗಿರುವನೆಂಬುದನ್ನು ಮನಗಂಡ ಜ್ಞಾನಿಯು ತನ್ನ ಸಮಸ್ತ ವ್ಯಾಪಾರಗಳೂ ಈಶ್ವರನಿಂದಲೇ ಪ್ರೇರಿತವಾಗಿವೆಯೆಂಬುದನ್ನೂ ತನ್ನ ಸಮಸ್ತ ವ್ಯಾಪಾರಗಳೂ ಈ ಈಶ್ವರನ ಪ್ರೀತಿಗಾಗಿಯೇ ಪ್ರಯುಕ್ತವಾಗಿವೆಯೆಂಬುದನ್ನೂ ಅರಿಯುತ್ತಾನೆ. ಭಗವಂತನಿಂದ ಕರ್ತೃತ್ವವೂ ಭೋಕ್ತೃತ್ವವೂ ಜೀವನಿಗೆ ಕೊಡಲ್ಪಟ್ಟಿದೆಯೆಂಬುದನ್ನು ಸೂತ್ರಗಳಲ್ಲಿ 'ಕರ್ತಾ ಶಾಸ್ತ್ರಾರ್ಥವತ್ವಾತ್' ಮತ್ತು 'ಪರಾತ್ತು ತಚ್ಛ್ರುತೇಃ' ಎಂಬಲ್ಲಿ ಸ್ಪಷ್ಟಪಡಿಸಿದೆ. ಈ ಬುದ್ಧಿವಿಶೇಷವನ್ನು ಪಡೆದ ಭಕ್ತನು ತನ್ನ ಸಮಸ್ತ ವ್ಯಾಪಾರಗಳಲ್ಲಿಯೂ ಸ್ವಾರ್ಥದ ಅಂಶವನ್ನು ಬಿಡುತ್ತಾನೆ. ತಾನೂ, ತಾನು ಪೂಜಿಸುವ ದೇವತಾವ್ಯೂಹವೂ, ತನ್ನ ಸಮಸ್ತ ಪೂಜಾಸಾಧನಗಳೂ ಆ ಪರಮನಿಗೇ ಸೇರಿವೆಯೆಂಬುದನ್ನು ಈ ಭಕ್ತ ಚೆನ್ನಾಗಿ ಅರಿಯುವನು. ತನ್ನ ಪ್ರೀತಿಗಾಗಿ ತಾನೇ ಇವುಗಳನ್ನೆಲ್ಲಾ ಆ ಭಗವಂತನು ಮಾಡಿಸುವನೆಂದೂ ಚೆನ್ನಾಗಿ ಅವನೇ ತಿಳಿಯುತ್ತಾನೆ. ಆ ಭಗವಂತನೇ ಪರಮಕರ್ತಾ ಮತ್ತು ಪರಮಶೇಷಿ ಎಂದು ತಿಳಿದ ಕಾರಣ ಕರ್ತೃತ್ವವನ್ನೂ ಆರಾಧ್ಯತ್ವವನ್ನೂ ಅವನಲ್ಲೇ ಆ ಜ್ಞಾನಿ ಅರ್ಪಿಸುತ್ತಾನೆ. ಈ ಅಂಶವನ್ನು ದೇಶಿಕರವರು—

'ಪರಮಕರ್ತೃತ್ವಾತ್ ಕರ್ತೃತ್ವಸಮರ್ಪಣಮ್. ಪರಮಶೇಷಿತ್ವಾತ್ ಆರಾಧ್ಯತ್ವಾದಿಸಮರ್ಪಣಂ' ಎಂದು ವಿವರಿಸಿದ್ದಾರೆ.

ಈ ಬಗೆಯ ಬುದ್ಧಿವಿಶೇಷದಿಂದ ಕೂಡಿ ಭಕ್ತನು ತನ್ನ ಕರ್ತವ್ಯಗಳನ್ನು ನಿರ್ವಹಿಸಿ ತನ್ಮೂಲಕ ಸಂಸಾರಬಂಧಗಳನ್ನು ಬಿಡಿಸಿಕೊಂಡು ಆ ಭಗವಂತನನ್ನೇ ಸೇರುವನೆಂಬುದನ್ನು—

> 'ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬಂಧನೈಃ ।
> ಸಂನ್ಯಾಸಯೋಗಯುಕ್ತಾತ್ಮಾ ವಿಮುಕ್ತೋ ಮಾಮುಪೈಷ್ಯಸಿ ॥'

ಎಂಬಲ್ಲಿ ನಿರೂಪಿಸಿದೆ.

ಭಗವಂತನನ್ನುಪಾಸನೆ ಮಾಡುವ ಭಕ್ತರೆಲ್ಲರಲ್ಲಿಯೂ ಭಗವಂತನು ಒಂದೇ ರೀತಿಯಾದ ಅನುಗ್ರಹವನ್ನು ಕೋರುತ್ತಾನೆ. 'ಸಮೋಽಹಂ ಸರ್ವಭೂತೇಷು' ಎಂದು ಅವನು ಅರ್ಜುನನಿಗೆ ಉಪದೇಶಿಸಿದ್ದಾನೆ. ಭಗವಂತನನ್ನು ಭಜಿಸದೆ ಯಾರು ಬದುಕಲಾರರೋ, ಭಗವದ್ಭಜನೆಯೇ ತಮ್ಮ ಪರಮಪ್ರಯೋಜನವೆಂದು ಯಾರು ಭಾವಿಸಿದ್ದಾ

ರಿಯೋ, ಅಂಥ ಭಕ್ತರು ಯಾವ ಜಾತಿಯವರಾಗಲೀ ಯಾವ ಗುಣದವರಾಗಲೀ ಯಾವ ಸ್ವಭಾವದವರಾಗಲೀ, ಭಗವಂತನಿಗೆ ಪ್ರಿಯರಾಗುತ್ತಾರೆ. ಅವರೆಲ್ಲರನ್ನೂ ಭಗವಂತನು ಸಮನಾಗಿ ಕಾಣುತ್ತಾನೆ. ಅವರ ಗುಣದೋಷಗಳನ್ನು ಭಗವಂತನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಅವರ ಭಕ್ತಿಭಾವ ಅವರನ್ನು ಸಜ್ಜನರನ್ನಾಗಿ ಪರಿವರ್ತನೆಗೊಳಿಸುತ್ತದೆ.

> 'ಅಪಿ ಚೇತ್ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
> ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥
> ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
> ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥'

ಭಗವಂತನ ರಕ್ಷಕತ್ವದಲ್ಲಿ ಪೂರ್ಣವಿಶ್ವಾಸವುಳ್ಳವನೂ ಭಗವತ್ಸ್ವರೂಪ ಸ್ವಭಾವಗಳನ್ನರಿತವನೂ ಆದ ಭಕ್ತನು ಅತ್ಯಂತ ದುರ್ಲಭ. ಅವನು ಭಗವಂತನನ್ನು ಭಜಿಸುವುದರಿಂದಲೇ ಸಾಧುವೆನಿಸುತ್ತಾನೆ. ಅವನಲ್ಲಿ ಆಚಾರವ್ಯತಿಕ್ರಮವಿದ್ದರೂ ಅದು ಅತ್ಯಲ್ಪವಾದ ಕಾರಣ ಗಣನೀಯವಲ್ಲ. ಭಗವಂತನಲ್ಲಿ ಭಕ್ತಿಯನ್ನು ಮಾಡುವುದ ರಿಂದಲೇ ಅವನು ಶುದ್ಧವಾಗಿ ಧರ್ಮಾತ್ಮನಾಗುತ್ತಾನೆ. ಭಗವದ್ಭಕ್ತಿಯ ಮಹಿಮೆ ಹೀಗೆ ಅಪಾರವಾದುದು.

'ಉಕ್ತಪ್ರಕಾರಭಜನೇ ಸಂಪನ್ನೇ ಸತಿ ತಸ್ಯಾಚಾರವ್ಯತಿಕ್ರಮಃ ಸ್ವಲ್ಪವೈಕಲ್ಯ-ಮಿತಿ ನ ತಾವತಾ ಅನಾದರಣೀಯಃ' ಎಂದು ರಾಮಾನುಜರು ಮೇಲಿನ ಶ್ಲೋಕಕ್ಕೆ ಭಾಷ್ಯ ಬರೆದು ಈ ಅಂಶವನ್ನು ಸಮರ್ಥಿಸಿದ್ದಾರೆ. ಇಲ್ಲಿ ಮುಖ್ಯವಾದ ಅಂಶ ಭಗವಂತ ನಲ್ಲಿ ಅನನ್ಯ ಭಕ್ತಿ. ಇದೊಂದು ಸಿದ್ಧಿಸಿದರೆ ಜೀವನವೇ ಸಾರ್ಥಕವಾದಂತೆ ಆಗುತ್ತದೆ. ಜೀವನದಲ್ಲಿ ಘಟಿಸಿದ ಪಾಪಸಮೂಹವೆಲ್ಲಾ ಭಗವದ್ಭಜನದಿಂದ ಪರಿಹಾರವಾಗಿ ಭಕ್ತನು ಪರಿಶುದ್ಧನಾಗುವನೆಂಬ ಭರವಸೆ ಇಲ್ಲಿದೆ.

ಭಕ್ತಿಮಾರ್ಗಕ್ಕೆ ಎಲ್ಲರಿಗೂ ಅವಕಾಶವಿದೆ. ಭಗವಂತನಲ್ಲಿ ಭಕ್ತಿಯನ್ನು ಬೆಳೆಸಿಕೊಂಡು ಬರುವುದರಿಂದಲೇ ಮೋಕ್ಷಸಾಧನವಾದ ಪರಭಕ್ತಿ ಸಿದ್ಧಿಸುತ್ತದೆ. ಭಗವಂತನು ಎಲ್ಲರಿಗೂ ಸುಲಭನಾಗಿದ್ದಾನೆ. ಪಾಪಿಯಾದವನೂ ಸಹ ಆ ಪರಮನಲ್ಲಿ ಭಕ್ತಿ ಮಾಡುವುದರಿಂದ ಉದ್ಧಾರವಾಗಲವಕಾಶವಿದೆ. ಇಲ್ಲಿ ಹೇಳಿರುವ ಭಕ್ತಿಮಾರ್ಗ ಸಾಮಾನ್ಯಭಕ್ತಿಯಾಗಿ ಸರ್ವರಿಗೂ ಅನ್ವಯಿಸುವುದಾಗಿದೆ. ಈ ರೀತಿಯಲ್ಲಿ ಸಾಮಾನ್ಯ ಭಕ್ತಿಯನ್ನು ಬೆಳೆಸಿಕೊಂಡರೆ ಅದರ ಫಲವಾಗಿ ಭಕ್ತಿಯೋಗಕ್ಕೆ ಅಧಿಕಾರ ಕ್ರಮೇಣ ಪ್ರಾಪ್ತವಾಗುತ್ತದೆ. ಎಲ್ಲ ಸಾಧನಗಳಿಗೂ ಈ ಸಾಮಾನ್ಯ ಭಕ್ತಿ ಅಡಿಗಲ್ಲು. ಭಗವಂತ ನಲ್ಲಿ ಭಕ್ತಿಯನ್ನಿಟ್ಟವನು ಆ ಭಕ್ತಿಯ ಪ್ರಭಾವದಿಂದ ಭಗವಂತನ ದಯೆಯನ್ನು ಪಡೆದು ಕೊಂಡು ಕ್ರಮಕ್ರಮವಾಗಿ ಸಾಧನೆಯ ಸೋಪಾನವನ್ನೇರುತ್ತಾ ಬರುವನು. ಮೊದಲು

acharya.org

ವಿಷಯಕಾಮಿಯಾದವನು ಆತ್ಮಕಾಮಿಯಾಗಿ ಪರಿವರ್ತನೆ ಹೊಂದಿ ಮುಂದೆ ಭಗವತ್ಕಾಮಿಯಾಗಿ ಪರಿವರ್ತನೆ ಹೊಂದುತ್ತಾನೆ. ಭಗವಂತನನ್ನೇ ಪಡೆದುಕೊಳ್ಳಲು ಸಾಧ್ಯವಾಗುವ ಬುದ್ಧಿಯೋಗವನ್ನು ಭಗವಂತ ಇಂತಹ ಭಕ್ತರಿಗೆ ಅನುಗ್ರಹಿಸುತ್ತಾನೆ.

ಪರಭಕ್ತಿ

ಮೋಕ್ಷಕ್ಕೆ ಉಪಾಯವಾವುದೆಂಬುದನ್ನು ಶಾಸ್ತ್ರಗಳು ವಿಚಾರ ಮಾಡಿ ಮೇಲೆ ಹೇಳಿದಂತಹ ಭಕ್ತಿಯೋಗವೇ ಮೋಕ್ಷೋಪಾಯವೆಂದು ಹೇಳುತ್ತವೆ. ಈ ಭಕ್ತಿ ಯೋಗಕ್ಕೆ ಧ್ಯಾನ, ಪರಭಕ್ತಿ, ವೇದನ, ಉಪಾಸನ ಎಂಬ ಬೇರೆಬೇರೆ ಹೆಸರುಗಳಿವೆ. ಭಕ್ತನು ಭಗವಂತನ ಸ್ವರೂಪ ಸ್ವಭಾವಗಳನ್ನರಿತವನಾಗಿ ಅತಿಶಯವಾದ ಪ್ರೀತಿಯಿಂದ ಕೂಡಿ ಅವನ ಗುಣ ವಿಭೂತಿಗಳನ್ನು ಕುರಿತು ನಿರಂತರವಾಗಿ ಚಿಂತಿಸುವನು. ತೈಲಧಾರೆ ಯಂತೆ ವಿಚ್ಛೇದವಿಲ್ಲದೆ ಹೀಗೆ ನಿರಂತರವಾಗಿ ಮಾಡುವ ಚಿಂತನೆಯೇ ಧ್ಯಾನ ಅಥವಾ ಭಕ್ತಿಯೋಗ. ಈ ಉಪಾಸನೆ ಅನೇಕ ವಿಧವಾಗಿರುವುದು. ಇವುಗಳನ್ನೊಂದೊಂದನ್ನೂ ಒಂದೊಂದು ವಿದ್ಯೆ ಎನ್ನುತ್ತಾರೆ. ಈ ಉಪಾಸನೆಗಳು ಅನೇಕ ಬಗೆಯಾಗಿದ್ದರೂ ಇವು ಗಳಿಗೆಲ್ಲಾ ಫಲ ಒಂದೇ ಆದುದು. ಸಾಧಕರು ತಮ್ಮ ಯೋಗ್ಯತೆ, ಶಕ್ತಿ ಸಾಮರ್ಥ್ಯಗಳಿ ಗನುಸಾರವಾಗಿ ಇವುಗಳಲ್ಲಿ ಯಾವುದಾದರೊಂದನ್ನು ಆರಿಸಿಕೊಳ್ಳಬಹುದಾಗಿದೆ. ಈ ಉಪಾಸನೆಯನ್ನು ಆರಂಭಿಸುವುವಕ್ಕೆ ಕೆಲವು ಅವಶ್ಯವಾದ ನಿಯಮಗಳಿವೆ. ಕರ್ಮ ಯೋಗ ಮತ್ತು ಜ್ಞಾನಯೋಗವನ್ನನುಷ್ಠಿಸಿ ಆತ್ಮಸಾಕ್ಷಾತ್ಕಾರವನ್ನು ಪಡೆದುಕೊಂಡ ವನು ಭಕ್ತಿಯೋಗಕ್ಕೆ ಅಧಿಕಾರಿಯಾಗುತ್ತಾನೆ. ತಾನು ಭಗವಂತನಿಗೆ ಸೇರಿದವನು, ತನಗೆ ಸ್ವಾಮಿಯಾದವನು ಆ ಭಗವಂತನೊಬ್ಬನೇ ಎಂಬ ಅರಿವು ನಿಚ್ಚಳವಾದಾಗ ಸಾಧಕ ದೃಢವಾದ ಪ್ರೇಮವನ್ನು ಆ ಭಗವಂತನಲ್ಲಿ ಮಾಡುವನು. ಭಗವದಿತರವಾದುದ ರಲ್ಲಿ ಆಸಕ್ತಿಯನ್ನು ಬಿಟ್ಟುಕೊಟ್ಟು ತನ್ನ ಸಮಸ್ತವ್ಯಾಪಾರಗಳಿಂದಲೂ ಆ ಭಗವಂತ ನನ್ನು ಸಂತೋಷಪಡಿಸಲು ಯತ್ನಿಸುತ್ತಾನೆ, ಭಗವಂತನ ದಯೆ ಹಾಗೂ ವಾತ್ಸಲ್ಯದ ವಿವಿಧ ಪ್ರಕಾರಗಳನ್ನು ಮನಗಂಡು ಇವನು ಪರವಶನಾಗುತ್ತಾನೆ. ಭಗವತ್ಪ್ರೇಮದ ಸುಳಿಗೆ ಸಿಕ್ಕಿ ಹೋದ ಈ ಪರಮಭಕ್ತ ನಿರಂತರವಾಗಿ ಆ ಭಗವಂತನನ್ನೇ ಧ್ಯಾನಿಸುತ್ತಾ ಆನಂದಪರವಶನಾಗುತ್ತಾನೆ. ಈ ಬಗೆಯ ನಿರಂತರವಾದ ಭಗವಚ್ಚಿಂತನೆ ಪರಭಕ್ತಿ ಎನ್ನಿಸುವುದು.

ಉಪನಿಷತ್ತುಗಳಲ್ಲಿ ಭಗದುಪಾಸನೆಯ ಪ್ರಕಾರಗಳ ನಿರೂಪಣೆ ಇದೆ. ಸದ್ವಿದ್ಯೆ, ದಹರವಿದ್ಯೆ, ವೈಶ್ವಾನರ ವಿದ್ಯೆ, ಉಪಕೋಸಲ ವಿದ್ಯೆ ಮೊದಲಾದ ಮೂವತ್ತೆರಡು ಪ್ರಕಾರಗಳನ್ನು ಅಲ್ಲಿ ವಿಧಿಸಲಾಗಿದೆ. ಬೇರೆ ಬೇರೆ ಉಪನಿಷತ್ತುಗಳಲ್ಲಿ ಒಂದೇ ವಿದ್ಯೆಯ ಪ್ರಸ್ತಾಪವೂ ಬಂದಿವೆ. ಆಯಾ ವಿದ್ಯೆಯಲ್ಲಿ ಹೇಳಿರುವ ರೀತಿಯಲ್ಲಿ ಆ ಉಪಾಸನೆ

acharya.org

ಯನ್ನು ಮಾಡಬೇಕು. ಭಗವಂತನ ವಿಶೇಷವಾದ ಗುಣ ವಿಭೂತಿಗಳ ಚಿಂತನೆ ಒಂದೊಂದು ವಿದ್ಯೆಯಲ್ಲಿ ಒಂದೊಂದು ಪ್ರಕಾರವಾಗಿ ಆಗುತ್ತದೆ- ಆದರೆ ಇವೆಲ್ಲದರಲ್ಲಿಯೂ ಸಮಾನವಾಗಿ ಅನುಸಂಧಾನ ಮಾಡಬೇಕಾದ ಗುಣಗಳು ಯಾವುವೆಂದರೆ ಸತ್ಯತ್ವ ಜ್ಞಾನತ್ವ, ಅನಂತತ್ವ, ಆನಂದತ್ವ, ಅಮಲತ್ವ ಎಂಬುವುಗಳೇ ಆಗಿವೆ. ಇವು ಭಗವಂತನ ಸ್ವರೂಪ ನಿರೂಪಕಧರ್ಮಗಳಾಗಿವೆಯಾದ ಕಾರಣ ಪ್ರತಿಯೊಂದು ವಿದ್ಯೆಯಲ್ಲಿಯೂ ಇವುಗಳ ಅನುಸಂಧಾನ ಆಗಬೇಕು. ಭಗವಂತನ ಕಲ್ಯಾಣಗುಣಗಳು ಅಸಂಖ್ಯವಾಗಿವೆ. ಇವುಗಳಲ್ಲಿ ಒಂದೊಂದು ಗುಣವನ್ನು ಮುಖ್ಯವಾಗಿ ಒಂದೊಂದು ವಿದ್ಯೆಯಲ್ಲಿ ಅನುಸಂಧಾನ ಮಾಡಬೇಕೆಂದು ವಿಧಿಸಿದೆ. ಈ ಮೂವತ್ತೆರಡು ವಿದ್ಯೆಗಳೂ ಬ್ರಹ್ಮೋಪಾಸನೆಯ ವಿವಿಧ ಪ್ರಕಾರಗಳಾಗಿವೆ. ಬೇರೆ ಬೇರೆ ಅಧಿಕಾರಿಗಳಿಗೆ ಅವರವರವರ ಅರ್ಹತೆಗನುಗುಣವಾಗಿ ಈ ವಿದ್ಯೆಗಳು ಅನ್ವಯಿಸುತ್ತವೆ. ಇವುಗಳಲ್ಲಿ ಯಾವುದಾದರೂ ಒಂದು ವಿದ್ಯೆಯನ್ನು ಮಾತ್ರ ಆರಿಸಿಕೊಂಡು ಸಾಧಕ ತನ್ನ ಉಪಾಸನೆಯನ್ನು ಮುಂದುವರಿಸಬೇಕು. ವಿದ್ಯೆಗಳ ಸಮುಚ್ಚಯ ಆವಶ್ಯಕವಿಲ್ಲ.

ಬ್ರಹ್ಮೋಪಾಸನೆಯನ್ನು ಮಾಡುವ ಸಾಧಕ ತನ್ನ ನಿತ್ಯ ನೈಮಿತ್ತಿಕ ಕರ್ಮಗಳ ಅನುಷ್ಠಾನವನ್ನು ಮಾಡಬೇಕೆಂದು ಶಾಸ್ತ್ರಗಳ ಸಿದ್ಧಾಂತ. 'ಸರ್ವಾಪೇಕ್ಷಾ ಚ ಯಜ್ಞಾದಿಶ್ರುತೇರಶ್ವವತ್' ಎಂಬ ಸೂತ್ರ ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನ ಬ್ರಹ್ಮೋಪಾಸನೆಯನ್ನು ದೃಢಪಡಿಸುವುದಕ್ಕಾಗಿ ಬೇಕಾಗಿದೆ ಎಂದು ಸಮರ್ಥಿಸುತ್ತದೆ. ಆದುದರಿಂದ ವರ್ಣಾಶ್ರಮ ಧರ್ಮಗಳ ಅನುಷ್ಠಾನ ಬ್ರಹ್ಮವಿದ್ಯೆಯ ಅಂಗವಾಗಿ ಮುಂದುವರಿಯಬೇಕು.

ಕರ್ಮ ಮತ್ತು ವಿದ್ಯೆಗಳ ಸಂಬಂಧವನ್ನು ಸೂತ್ರಕಾರರು ಮೂರನೆಯ ಅಧ್ಯಾಯದ ನಾಲ್ಕನೆಯ ಪಾದದಲ್ಲಿ ಚರ್ಚಿಸಿದ್ದಾರೆ. ಭಗವಂತನ ಉಪಾಸನೆಯಿಂದಲೇ ಪರಮ ಪುರುಷಾರ್ಥದ ಪ್ರಾಪ್ತಿ ಎಂದೂ ಆ ಉಪಾಸನೆಗೆ ಕರ್ಮ ಅಂಗವೆಂದೂ ಸೂತ್ರಕಾರರು ಅಲ್ಲಿ ತೀರ್ಮಾನಿಸಿದ್ದಾರೆ. ಅವರ ನಿರ್ಣಯಗಳು ಹೀಗಿವೆ—

1) ವಿದ್ಯೆ ಕರ್ಮಾಂಗವಲ್ಲ. ಕೆಲವರು ಬ್ರಹ್ಮಜ್ಞರು ಕರ್ಮತ್ಯಾಗಮಾಡಿದ್ದಾರೆ. ವಿದ್ಯೆ ಕರ್ಮಾಂಗವಾಗಿದ್ದರೆ ಹೀಗೆ ಆಗುತ್ತಿರಲಿಲ್ಲ.

2) ವಿದ್ಯೆಯೊಡನೆ ಮಾಡಿದ ಕರ್ಮ ವೀರ್ಯವತ್ತರವಾದುವೆಂದು ಹೇಳಿರುವುದು ಉದ್ಗೀಥ ವಿದ್ಯೆಗೆ ಮಾತ್ರ ಅನ್ವಯಿಸುವುದೇ ವಿನಾ ಬ್ರಹ್ಮ ವಿದ್ಯೆಗಳಿಗೆಲ್ಲಾ ಅನ್ವಯಿಸುವುದಿಲ್ಲ.

3) ವಿದ್ಯೆಗೂ ಕರ್ಮಕ್ಕೂ ಫಲ ಬೇರೆಯಾಗಿರುವುದರಿಂದ ಅವುಗಳನ್ನು ಒಟ್ಟಿಗೆ ಹೇಳಿರುವುದರಿಂದಲೇ ವಿದ್ಯೆ ಕರ್ಮಾಂಗವೆನ್ನಲು ಶಕ್ಯವಿಲ್ಲ.

4) 'ಕುರ್ವನ್ನೇವೇಹ ಕರ್ಮಾಣಿ' ಎಂಬುದು ಕೇವಲ ಕರ್ಮಮಾರ್ಗವನ್ನೇ

acharya.org

ಹೇಳುವುದಿಲ್ಲ. ಇಲ್ಲಿ ಹೇಳಿರುವುದು ಉಪಾಸನೆಗೆ ಅಂಗವಾದ—ಕರ್ಮವನ್ನು. ವಿದ್ಯೆಯ ಮಹತ್ವವನ್ನು ಸೂಚಿಸಲು ಕರ್ಮಾನುಷ್ಠಾನ ಮಾಡಬೇಕೆಂದು ಹೇಳಿದೆ. ಬ್ರಹ್ಮವಿತ್ ಆದವನು ಈ ಕರ್ಮಗಳನ್ನು ಮಾಡಿದರೂ ಆ ಉಪಾಸನೆಯ ಮಹತ್ವದ ಕಾರಣ ಆ ಕರ್ಮಗಳ ಬಂಧನಕ್ಕೊಳಗಾಗುವುದಿಲ್ಲ.

ಹೀಗೆ ಹಲವಾರು ಕಾರಣಗಳನ್ನು ಸೂಚಿಸಿ ಸೂತ್ರಕಾರರು ವಿದ್ಯೆಗೆ ಕರ್ಮವು ಅಂಗವೆಂದು ಸ್ಥಾಪಿಸಿದ್ದಾರೆ.

ಭಕ್ತಿಯೋಗ ಅಥವಾ ಉಪಾಸನೆಗೆ ಅಷ್ಟಾಂಗಯೋಗವೂ ಅಂಗವಾಗಿದೆ. ಯುಕ್ತವಾದ ಸ್ಥಾನವನ್ನಾರಿಸಿಕೊಂಡು ಅನುಕೂಲವಾದ ರೀತಿಯಲ್ಲಿ ಕುಳಿತು ಭಗವಂತನ ಧ್ಯಾನಮಾಡಬೇಕೆಂದು ವಿಧಿಸಿದೆ. ಅಷ್ಟಾಂಗಯೋಗದಲ್ಲಿ ಆತ್ಮಸ್ವರೂಪ ಧ್ಯೇಯವಸ್ತುವಾದರೆ ಭಕ್ತಿಯೋಗದಲ್ಲಿ ಪರಮಾತ್ಮನು ಧ್ಯೇಯವಸ್ತುವಾಗಿದ್ದಾನೆ. 'ಯತ್ರೈಕಾಗ್ರತಾ ತತ್ರಾವಿಶೇಷಾತ್' ಎಂಬ ಸೂತ್ರದಲ್ಲಿ ಸೂತ್ರಕಾರರು ಮನಸ್ಸಿನ ಏಕಾಗ್ರತೆಯನ್ನು ಸಂಪಾದಿಸಿಕೊಳ್ಳಲು ಸಾಧ್ಯವಾದ ಪ್ರದೇಶದಲ್ಲಿ ಈ ಧ್ಯಾನ ನಡೆಯಬೇಕೆಂದಿದ್ದಾರೆ. ಮನಸ್ಸು ಶಾಂತವಾಗಿರಬೇಕು. ಎಲ್ಲ ಬಗೆಯ ಬಾಹ್ಯಪ್ರವೃತ್ತಿಗಳಿಂದ ವಿರತವಾಗಿ ಪರಮಾತ್ಮನಲ್ಲಿ ನೆಲೆಗೊಳ್ಳುವಂತಾಗಬೇಕು. ಹೀಗಾಗಲು ಅಷ್ಟಾಂಗಯೋಗದ ಅಭ್ಯಾಸ ಆವಶ್ಯಕ.

ಭಕ್ತಿಯೋಗವನ್ನು ಸಾಧಕ ತನ್ನ ಜೀವನಪರ್ಯಂತ ಮಾಡಬೇಕು. 'ಆಪ್ರಯಾಣಾತ್ತತ್ರಾಪಿ ಹಿ ದೃಷ್ಟಮ್' ಎಂಬ ಸೂತ್ರದಲ್ಲಿ ಸಾಧಕ ಉಪಾಸನೆಯನ್ನು ನಿರಂತರವಾಗಿ ನಡೆಸಿಕೊಂಡು ಬರಬೇಕೆಂದೂ ಈ ಲೋಕದಿಂದ ತಾನು ಪ್ರಯಾಣ ಮಾಡುವ ವರೆಗೂ ಇದು ನಡೆಯಬೇಕೆಂದೂ ವಿಧಿಸಿದೆ.

ನಿತ್ಯನೈಮಿತ್ತಿಕ ಕರ್ಮಾನುಷ್ಠಾನ ಹೇಗೆ ಉಪಾಸನೆಗೆ ಅಂಗವೋ ಹಾಗೆಯೇ ಶಮ, ದಮ, ಮೊದಲಾದ ಆತ್ಮ ಗುಣಗಳ ಸಂಪಾದನೆಯೂ ಆವಶ್ಯಕ. 'ತಸ್ಮಾದೇವಂವಿತ್ ಶಾಂತಃ ದಾಂತಃ ಉಪರತಸ್ತಿತಿಕ್ಷುಸ್ಸಮಾಹಿತೋ ಭೂತ್ವಾ ಆತ್ಮನ್ಯೇವಾತ್ಮಾನಂ ಪಶ್ಯೇತ್' ಎಂಬ ಶ್ರುತಿವಾಕ್ಯ ಶಮದಮಾದಿಗಳು ಉಪಾಸನೆಗೆ ಆವಶ್ಯಕವೆಂದು ತಿಳಿಸುತ್ತದೆ. ಈ ಆತ್ಮಗುಣಗಳ ಕಾರಣ ಚಿತ್ತಸಮಾಧಾನ ಉಂಟಾಗಿ ಬ್ರಹ್ಮವಿದ್ಯೆ ಪುಷ್ಕಲವಾಗುವುದಕ್ಕೆ ಸಾಧ್ಯವಾಗುತ್ತದೆ. ಈ ಆತ್ಮಗುಣಗಳ ಅಭ್ಯಾಸಕ್ಕೂ ಕರ್ಮಾನುಷ್ಠಾನಕ್ಕೂ ಯಾವ ವಿರೋಧವೂ ಇಲ್ಲ. ಸಾಧಕ ತಾನು ಮಾಡುವ ಸಕಲ ಕರ್ಮಗಳನ್ನೂ ಭಗವದಾರಾಧನರೂಪವಾಗಿ ಭಗವಂತನ ದಯೆಯನ್ನು ಪಡೆಯಲು ಮಾಡುವನು. ಈ ಆತ್ಮಗುಣಗಳ ಅಭ್ಯಾಸ ಅಂಥ ಉಪಾಸನೆಗೆ ಸಹಕಾರಿಯಾಗುತ್ತದೆ. 'ಶಮದಮಾದ್ಯುಪೇತಃ ಸ್ಯಾತ್ ತಥಾಪಿ ತು ತದ್ವಿಧೇಸ್ತದಂಗತಯಾ ತೇಷಾಮವಶ್ಯಾನುಷ್ಠೇಯತ್ವಾತ್' ಎಂದು ಸೂತ್ರಕಾರರು ಈ ಆತ್ಮಗುಣಗಳ ಅಭ್ಯಾಸವನ್ನು

acharya.org

ವಿಧಿಸಿದ್ದಾರೆ. ಉಪಾಸಕ ತನ್ನ ಹಿರಿಮೆಯನ್ನು ಪ್ರಕಾಶಪಡಿಸಿಕೊಳ್ಳಬಾರದು. ಅಹಂಕಾರ ಮಮಕಾರದೂರನಾಗಬೇಕು ಅವನು. ಬ್ರಹ್ಮಚಿಂತನೆಯಲ್ಲಿ ಮಗ್ನನಾಗಿ ಅವನು 'ಮುನಿ' ಯಾಗಬೇಕು. 'ಅನಾವಿಷ್ಕುರ್ವನ್ ಅನ್ವಯಾತ್' ಎಂಬ ಸೂತ್ರದಲ್ಲಿ ಸೂತ್ರಕಾರರು ಬ್ರಹ್ಮೋಪಾಸಕ ಎಳೆಯ ಮಗುವಿನಂತೆ ನಿಷ್ಕಲ್ಮಷವಾದ ಮನಸ್ಸನ್ನುಳ್ಳವನಾಗಬೇಕೆಂದು ತಿಳಿಸಿದ್ದಾರೆ.

ಭಕ್ತಿಯೋಗಕ್ಕೆ ಪ್ರಪತ್ತಿ ಆವಶ್ಯಕ

ಭಕ್ತಿಯೋಗವನ್ನಾರಂಭಿಸಿ ಅದನ್ನು ನಿರ್ವಿಘ್ನವಾಗಿ ನಡೆಸಿಕೊಂಡು ಬರಬೇಕಾದರೆ ಭಗವಂತನ ದಯೆಯಿಲ್ಲದೆ ಸಾಧ್ಯವಿಲ್ಲ. ಭಗವಂತನಲ್ಲಿ ಅದಕ್ಕಾಗಿ ಸಾಧಕ ತನ್ನನ್ನೂ ತನ್ನ ರಕ್ಷಣೆಯ ಹೊಣೆಯನ್ನೂ ಒಪ್ಪಿಸಬೇಕು. ಅನನ್ಯಭಾವದಿಂದ ಆ ಪರಮಾತ್ಮನಲ್ಲಿ ಶರಣಾಗತಿ ಮಾಡಿ ಅವನ ದಯೆಯನ್ನು ಬೇಡದಿದ್ದರೆ ಈ ಸಾಧನೆ ಸಫಲವಾಗಿ ಮುಂದುವರಿಯಲಾಗದು. ಅನಾದಿಕಾಲದಿಂದ ನಾವು ಮಾಡಿರುವ ಪಾಪಾಚಾರಣೆಯ ಫಲವಾಗಿ ಇದಕ್ಕೆ ನೂರಾರು ವಿಘ್ನಗಳು ಉದ್ಭವಿಸುವುವು. ಆ ವಿಘ್ನಗಳಿಗೆಲ್ಲಾ ಪರಿಹಾರವನ್ನು ಆ ಸರ್ವಶಕ್ತನೇ ಒದಗಿಸಬೇಕು. ಇದಕ್ಕಾಗಿ ಅವನಲ್ಲಿ ನಾವು ನಮ್ಮ ಬೇಡಿಕೆಯನ್ನರ್ಪಿಸಬೇಕು. ಕರ್ಮಯೋಗ ಸಿದ್ಧಿಸಬೇಕಾದರೂ ಭಗವಂತನ ದಯೆ ಬೇಕು. ಜ್ಞಾನಯೋಗ ಸಾಧ್ಯವಾಗಬೇಕಾದರೂ ಭಗವಂತನ ದಯೆ ಬೇಕು. ಜ್ಞಾನಯೋಗ ಸಾಧ್ಯವಾಗಬೇಕಾದರೂ ಆತನ ಕರುಣೆ ಆವಶ್ಯಕ. ಹಾಗೆಯೇ ಭಕ್ತಿಯೋಗ ನಿಷ್ಪನ್ನವಾಗಬೇಕಾದರೂ ಭಗವಂತನ ದಯೆ ಬೇಕೇಬೇಕು. ನಮ್ಮ ಸ್ವಂತ ಶಕ್ತಿಯಿಂದ ನಾವು ಸಾಧಿಸುವೆವೆಂದು ಹೇಳತಕ್ಕದ್ದು ಯಾವುದೂ ಈ ಲೋಕದಲ್ಲಿಲ್ಲ. ಆ ಭಗವಂತನಿಗೇ ನಾವು ಸೇರಿದವರಾಗಿ, ಅವನಿಗೇ ಅಧೀನರಾಗಿರುವುದರಿಂದ ಅವನ ಅನುಗ್ರಹದಿಂದಲೇ ನಮ್ಮ ಸಮಸ್ತ ವ್ಯಾಪಾರಗಳೂ ಮುಂದುವರಿಯುತ್ತಿವೆ. ಆದಕಾರಣದಿಂದಲೇ ಪ್ರತಿಯೊಂದು ಹಂತದಲ್ಲಿಯೂ ಆ ಭಗವಂತನ ಅನುಗ್ರಹವನ್ನೇ ನಾವು ಬೇಡಬೇಕಾಗಿದೆ. ಕರ್ಮಯೋಗದ ಸಂದರ್ಭದಲ್ಲಿ ಗೀತಾಚಾರ್ಯನು 'ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರ : ।' ಎಂದು ಉಪದೇಶಿಸಿ ಭಗವಂತನಲ್ಲಿ ದುರ್ನಿಗ್ರಹವಾದ ಇಂದ್ರಿಯಗಳನ್ನು ನೆಲೆನಿಲ್ಲಿಸಬೇಕೆಂದು ತಿಳಿಸುತ್ತಾನೆ. ಕರ್ಮಯೋಗದಲ್ಲಿ ಸಿದ್ಧಿ ಉಂಟಾಗಬೇಕಾದರೆ ಭಗವಂತನಲ್ಲಿ ಮನಸ್ಸನ್ನಿಡಬೇಕು. ಹಾಗೆಯೇ ಜ್ಞಾನಯೋಗದಲ್ಲಿ ಸಫಲತೆಯನ್ನು ಪಡೆಯಲು 'ಮನಸ್ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ' ಎಂದು ಉಪದೇಶಿಸಿ ಗೀತಾಚಾರ್ಯ ಪರಮಾತ್ಮಚಿಂತನೆಯ ಆವಶ್ಯಕತೆಯನ್ನು ಹೇಳಿದ್ದಾನೆ. ಹಾಗೆಯೇ ಭಕ್ತಿಯೋಗವನ್ನು ನಾವು ಸರಿಯಾಗಿ ನಡೆಸಬೇಕಾದರೆ ಅದನ್ನು ಹಾಗೆ ನಡೆಸಿಕೊಡಬೇಕೆಂದು ಆ ಸರ್ವಶಕ್ತನಲ್ಲಿ ಬೇಡಿಕೆ ಸಲ್ಲಿಸಬೇಕು. ಭಗವಂತನಲ್ಲಿ ಶರಣುಹೋಗಿ ಭಕ್ತಿಯೋಗವನ್ನು ನಡೆ

acharya.org

ಸಲು ಪ್ರಾರ್ಥನೆ ಮಾಡಬೇಕು. ಇಲ್ಲಿ ಮಾಡುವ ಪ್ರಪತ್ತಿ ಅಥವಾ ಶರಣಾಗತಿ ಭಕ್ತಿಗೆ ಅಂಗವಾಗಿ ಅಂಗಪ್ರಪತ್ತಿ ಎನ್ನಿಸುವುದು. ಪ್ರಪತ್ತಿಯನ್ನನುಷ್ಠಿಸದೆ ಭಕ್ತಿಯೋಗ ಸಿದ್ಧಿಸುವುದಿಲ್ಲ. ಈ ರಹಸ್ಯವನ್ನು ಗೀತಾಚಾರ್ಯ—

'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥'

ಎಂಬಲ್ಲಿ ಉಪದೇಶಿಸಿದ್ದಾನೆ.

ರಾಮಾನುಜರು ಈ ಶ್ಲೋಕಕ್ಕೆ ವಿವರಣೆಯನ್ನು ಕೊಡುತ್ತಾ, ಪ್ರಪತ್ತಿಯ ಆವಶ್ಯಕತೆಯನ್ನು ನಿರೂಪಿಸುತ್ತಾರೆ. ಕರ್ಮಯೋಗ ಜ್ಞಾನಯೋಗ ಮತ್ತು ಭಕ್ತಿಯೋಗ ರೂಪವಾದ ಧರ್ಮಗಳನ್ನು ಅನುಷ್ಠಾನ ಮಾಡುತ್ತಾ, ಫಲ, ಕರ್ಮ, ಕರ್ತೃತ್ವ ಎಂಬುವುಗಳ ಬಗೆಗೆ ತ್ಯಾಗಬುದ್ಧಿಯನ್ನು ಹೊಂದಿ ಭಗವಂತನೊಬ್ಬನೇ ಕರ್ತಾರನೂ, ಪ್ರಾಪ್ಯನೂ ಆರಾಧ್ಯನೂ, ಉಪಾದೇಯನೂ ಆಗಿದ್ದಾನೆಂದು ಅನುಸಂಧಾನ ಮಾಡಬೇಕು. ಹೀಗೆ ಅನನ್ಯಭಾವದಿಂದ ಸರ್ವಸಮರ್ಪಣೆ ಮಾಡಿರುವ ಸಾಧಕನನ್ನು ಸಕಲಪಾಪಗಳಿಂದ ಭಗವಂತನು ರಕ್ಷಿಸುವನು. ಇದು ಒಂದು ವಿವರಣೆ. ಮತ್ತೊಂದು ವಿಧವಾದ ಅರ್ಥನಿರೂಪಣೆಯನ್ನು ರಾಮಾನುಜರು ಮಾಡಿದ್ದಾರೆ.

ಭಕ್ತಿಯೋಗವನ್ನಾರಂಭಿಸಲು ತನಗಿರುವ ಅನರ್ಹತೆಯನ್ನು ಕಂಡು ಶೋಕಿಸಿದ ಅರ್ಜುನನನ್ನು ಕುರಿತು ಭಗವಾನ್ ಕೃಷ್ಣನು ಅವನಿಗೆ ಸಮಾಧಾನ ಮಾಡುತ್ತಾನೆ ಈ ಶ್ಲೋಕದಿಂದ. ಭಕ್ತಿಯೋಗಾರಂಭಕ್ಕೆ ಅಡ್ಡಿಯಾಗಿರುವ ಅನಾದಿಕಾಲಸಂಚಿತವಾದ ನಾನಾವಿಧವಾದ ಪಾಪಗಳಿಗನುಗುಣವಾದ ಚಾಂದ್ರಾಯಣಾದಿ ಪ್ರಾಯಶ್ಚಿತ್ತಗಳನ್ನು ಬಿಟ್ಟುಕೊಟ್ಟು ಆ ಭಗವಂತನಲ್ಲಿ ಶರಣಾಗತಿಯನ್ನನುಷ್ಠಿಸಬೇಕು ಎಂದು ಉಪದೇಶಿಸಿದ್ದಾನೆ. ಅಂಥ ಸಾಧಕನಿಗೆ ಭಗವಂತನು ದಯೆ ತೋರಿ ಅವನು ಭಕ್ತಿಯೋಗವನ್ನು ಆರಂಭಿಸಲು ಅಡ್ಡಿಯಾಗಿದ್ದ ಸಕಲ ಪಾಪಗಳನ್ನು ಪರಿಹರಿಸಿ ಭಕ್ತಿಯೋಗವನ್ನಾರಂಭಿಸಲು ಸಮರ್ಥನನ್ನಾಗಿ ಮಾಡುತ್ತಾನೆ. ಹೀಗೆ ಭಕ್ತಿಯೋಗದ ಆರಂಭ ಆಗಬೇಕಾದರೆ ಭಗವಂತನಲ್ಲಿ ಶರಣಾಗತಿ ಮಾಡುವುದು ಆವಶ್ಯಕವೆಂದು ಉಪದೇಶಿಸಲಾಗಿದೆ.

ಭಕ್ತಿಯ ಪರ್ವಗಳು

ಮೋಕ್ಷೋಪಾಯವಾದ ಈ ಭಕ್ತಿಯೋಗವನ್ನು 'ಸ ಖಲ್ವೇವಂ ವರ್ತಯನ್ಯಾವದಾಯುಷಂ ಬ್ರಹ್ಮಲೋಕಮಭಿಸಂಪದ್ಯತೇ' ಎಂಬ ಶ್ರುತಿಗನುಸಾರವಾಗಿ ನಿರಂತರವಾಗಿ ಅನುಷ್ಠಿಸಬೇಕು.

ಈ ಭಕ್ತಿಯೋಗವನ್ನಾರಂಭಿಸುವುದೂ ಹಾಗೂ ಪೂರ್ಣಗೊಳಿಸುವುದೂ ಭಗವಂತನ ಅನುಗ್ರಹದಿಂದಲೇ ಸಾಧ್ಯ. ಅದಕ್ಕಾಗಿ ಆ ಸರ್ವಶಕ್ತನಲ್ಲಿ ಶರಣು ಹೋಗಬೇಕು. ಇಂಥ ಸಾಧಕ ತನ್ನ ದಿನದಿನದ ಅಭ್ಯಾಸದಿಂದ ಭಕ್ತಿಯೋಗವನ್ನು ಪುಷ್ಕಲ

acharya.org

ಗೊಳಿಸಿಕೊಂಡು ಸಿದ್ಧಿಯನ್ನು ಪಡೆಯುತ್ತಾನೆ. ಈ ಭಕ್ತಿಯೋಗದ ಪ್ರಭಾವದಿಂದ ಸಾಧಕನ ಸಂಚಿತಕರ್ಮಗಳೆಲ್ಲಾ ನಾಶವಾಗುವುವು. ಮುಂದೆ ಸಂಭವಿಸುವ ಆಗಾಮಿ ಕರ್ಮಗಳು ಲೇಪಿಸುವುದಿಲ್ಲ. ಆದರೆ ಪ್ರಾರಬ್ಧಕರ್ಮಗಳನ್ನು ಈ ಸಾಧಕನೂ ಅನುಭವಿಸಿಯೇ ತೀರಿಸಬೇಕು. 'ಭೋಗೇನ ತ್ವಿತರೇ ಕ್ಷಪಯಿತ್ವಾಽಥ ಸಂಪದ್ಯತೇ' ಎಂಬ ಸೂತ್ರದಿಂದ ಸೂತ್ರಕಾರರು ಫಲಕೊಡಲು ಆರಂಭವಾದ ಪ್ರಾರಬ್ಧಕರ್ಮರೂಪವಾದ ಪುಣ್ಯಪಾಪಗಳನ್ನು ಅನುಭವಿಸಿಯೇ ತೀರಿಸಬೇಕಾಗುವುದೆಂಬುದನ್ನು ಸೂಚಿಸಿದ್ದಾರೆ. ಈ ಪ್ರಾರಬ್ಧಕರ್ಮದ ಅನುಭವ ಒಂದೇ ಜನ್ಮದಲ್ಲಾಗಬಹುದು. ಅಥವಾ ಅನೇಕಜನ್ಮಗಳಲ್ಲಾಗಬಹುದು. ಇದನ್ನು ತಪ್ಪಿಸಿಕೊಳ್ಳುವುದಕ್ಕಾಗದು. ಅನಾದಿಕಾಲದಿಂದ ನಾವು ಸಂಪಾದಿಸಿಕೊಂಡ ಪುಣ್ಯಪಾಪರೂಪವಾದ ಸಂಚಿತಕರ್ಮ ಈ ಬ್ರಹ್ಮವಿದ್ಯೆಯ ಮಹಾತ್ಮ್ಯದಿಂದ ಅಳಿದುಹೋಗುತ್ತದೆ. ವಿದ್ಯಾರಂಭವಾದ ಮೇಲೆ ಮಾಡುವ ಕರ್ಮ ಅಂಟುವುದಿಲ್ಲ. ಸಾಧಕನ ಶರೀರವಿಯೋಗಕಾಲದಲ್ಲಿ ಈ ಪುಣ್ಯರೂಪವಾದುದೆಲ್ಲವನ್ನೂ ಮಿತ್ರರೂ, ಪಾಪರೂಪವಾದುದೆಲ್ಲವನ್ನೂ ಶತ್ರುಗಳೂ ಪಡೆಯುವರು. ಹೀಗೆ ಉಪಾಸನೆಯ ಪ್ರಭಾವದಿಂದ ಕರ್ಮದ ಬಂಧ ಕಳಚಿಹೋಗುತ್ತದೆ. ಪ್ರಾರಬ್ಧಕರ್ಮವನ್ನು ಅನುಭವದಿಂದ ಶೋಷಿಸಿ ಸಾಧಕ ಭಗವಂತನನ್ನು ಸೇರುತ್ತಾನೆ. ಹೀಗೆ ಉಪಾಸನೆಯೇ ಭಗವತ್ಪ್ರಾಪ್ತಿಗೆ ಉಪಾಯ. ಈ ಉಪಾಸನೆಯನ್ನಾರಂಭಿಸಲು ಇರುವ ಅಡ್ಡಿಗಳನ್ನು ನಿವಾರಿಸಿಕೊಂಡರೇ ಇದು ಸಿದ್ಧಿಸುವುದು. ನಮ್ಮ ಉಪಾಸನೆಯಿಂದ ಪ್ರಸನ್ನನಾದ ಭಗವಂತ ನಮ್ಮನ್ನು ಅನುಗ್ರಹಿಸಿ ತನ್ನ ನಿತ್ಯಸಂಶ್ಲೇಷವನ್ನು ನಮಗೆ ದಯಪಾಲಿಸುತ್ತಾನೆ.

ಇಂಥ ಭಕ್ತಿಯೋಗ ಅಥವಾ ಉಪಾಸನೆ ಅನೇಕ ರೂಪದಲ್ಲಿರುವುದು. ಎಲ್ಲರಲ್ಲಿಯೂ ಅಂತರ್ಯಾಮಿಯಾಗಿರುವ ಆ ಪರಮಾತ್ಮನನ್ನು ಸಾಧಿಸಲು ಈ ಭಕ್ತಿಮಾರ್ಗ ಸಹಾಯ ಮಾಡುತ್ತದೆ. ಇದು ಒಂಭತ್ತು ಬಗೆಯಾಗಿದೆಯೆಂದು ಭಾಗವತದಲ್ಲಿ ಹೇಳಿದೆ. ಶ್ರವಣ ಕೀರ್ತನ, ಸ್ಮರಣ ಎಂಬುವು ಧ್ಯಾನಕ್ಕೂ; ಪಾದಸೇವನ, ಅರ್ಚನ ಮತ್ತು ವಂದನ ಎಂಬುವು ಭಗವತ್ಪ್ರೀತ್ಯರ್ಥವಾಗಿ ಮಾಡುವ ಕ್ರಿಯೆಗಳಿಗೂ; ದಾಸ್ಯ, ಸಖ್ಯ, ಆತ್ಮನಿವೇದನ ಎಂಬುವು ಶೇಷಭಾವ ಮತ್ತು ಶರಣಾಗತಿಗೂ ಅನ್ವಯಿಸುವುವು.

ಭಕ್ತಿಯ ವಿಚಾರವನ್ನು ನಿರೂಪಿಸುವಾಗ ರಾಮಾನುಜರು ಭಕ್ತಿಯ ಮೂರು ಪರ್ವಗಳನ್ನು ಹೇಳಿರುವುದು ಗಮನಾರ್ಹವಾಗಿದೆ. ಇವುಗಳು ಭಕ್ತಿಯೋಗದ ಗಾಢತೆಯನ್ನು ಸೂಚಿಸುತ್ತವೆ. 'ಭಗವಚ್ಚರಣಾರವಿಂದಯುಗಲೈಕಾಂತಿಕಾತ್ಯಂತಿಕ ಪರಭಕ್ತಿ-ಪರಜ್ಞಾನ ಪರಮಭಕ್ತಿಕೃತ ಪರಿಪೂರ್ಣಾನವರತ' ಎಂಬುದಾಗಿ ತಮ್ಮ ಗದ್ಯದಲ್ಲಿ ಹಲವಾರು ಬಾರಿ ನಿರೂಪಿಸಿದ್ದಾರೆ ರಾಮಾನುಜರು. ಪರಭಕ್ತಿ ಎಂಬುದು ಭಗವಂತನನ್ನು ಕಾಣಲೋಸುಗ ಹೊಂದಿರುವ ತೀವ್ರವಾದ ಆಸೆ ಹಾಗೂ ನಿಶ್ಚಯ. ಭಗವಂತನನ್ನು ಕಾಣದೆ ಬದುಕಲಾರೆನೆಂಬ ಗಾಢವಾದ ಸ್ಥಿತಿಯನ್ನಿದು ಸೂಚಿಸುತ್ತದೆ. ತನಗೆ ಸಂದರ್ಶನ

acharya.org

ನೀಯಬೇಕೆಂದು ಸಾಧಕ ಈ ಅವಸ್ಥೆಯಲ್ಲಿ ಭಗವಂತನನ್ನು ಕಾಡಿ ಬೇಡುವನು. 'ಉತ್ತರೋತ್ತರಸಾಕ್ಷಾತ್ಕಾರಾಭಿನಿವೇಶ : ಪರಭಕ್ತಿ:' ಎಂದು ಇದರ ಅರ್ಥನಿರೂಪಣೆ ಮಾಡಿದ್ದಾರೆ. ಭಕ್ತನ ಈ ತ್ರೀವವಾದ ಹಂಬಲಕ್ಕನುಸಾರವಾಗಿ ದಯಾಮಯನಾದ ಭಗವಂತನು ತನ್ನ ಸಂದರ್ಶನವನ್ನು ಕರುಣಿಸುವನು. ಈ ಬಗೆಯ ತಾತ್ಕಾಲಿಕವಾದ ಸಾಕ್ಷಾತ್ಕಾರವೇ **ಪರಜ್ಞಾನ.** ಇದನ್ನು 'ಪರಜ್ಞಾನಂ ಉತ್ತರೋತ್ತರಸಾಕ್ಷಾತ್ಕಾರ:' ಎಂದು ಹೇಳಿದ್ದಾರೆ.

ಈ ಸಾಕ್ಷಾತ್ಕಾರ ಮಿಂಚಿನಂತೆ ಹೊಳೆದು ಮಾಯವಾಗುತ್ತದೆ. ಭಗವಂತನ ದಿವ್ಯ ರೂಪವನ್ನು ಕಂಡಾಗ ಸಾಧಕ ಆ ಭಗವದನುಭವದ ಆನಂದ ನಿರಂತರವಾಗಿರಬೇಕೆಂದು ಆಶಿಸುವನು. ನಿರತಿಶಯವಾದ ಭಕ್ತಿ ಆ ಸಂದರ್ಶನದಿಂದ ಹೊರಹೊಮ್ಮುವುದು. ಭಗವಂತನನ್ನು ಹೊಂದದೆ ಕ್ಷಣಮಾತ್ರವೂ ಇರಲು ಈ ಸಾಧಕ ಶಕ್ತನಾಗುವುದಿಲ್ಲ. ಈ ಅವಸ್ಥೆಗೆ 'ಪರಮ ಭಕ್ತಿ' ಎಂದು ಹೆಸರು. ಭಗವತ್ಪ್ರೇಮದ ಪರಾಕಾಷ್ಠೆ ಇದು. ಈ ಅವಸ್ಥೆಯನ್ನು ಪಡೆದ ಸಾಧಕ ಭಗವಂತನನ್ನು ಪಡೆಯದೆ ಕ್ಷಣಮಾತ್ರವೂ ಇರಲಾರ, ಭಕ್ತಿಯ ಉತ್ಕಟಾವಸ್ಥೆ ಇದು. ಭಗವಂತನ ನಿತ್ಯಸಾಕ್ಷಾತ್ಕಾರ ಇದರಿಂದಾಗುವುದು. ರಾಮಾನುಜರು ಈ ರೀತಿಯಲ್ಲಿ ಭಕ್ತಿಯೋಗದ ಪರ್ವಗಳನ್ನು ನಿರೂಪಿಸಿದ್ದಾರೆ.

ಇತರ ಉಪಾಯಗಳು ಉದ್ದಿಷ್ಟವಾದ ಫಲವನ್ನು ದೊರಕಿಸಿಕೊಟ್ಟು ನಾಶವಾಗುವುವು. ಆದರೆ ಭಕ್ತಿ ಆ ರೀತಿಯದಲ್ಲ. ಇದು ಸರ್ವದಾ ಅಭಿವೃದ್ಧಿ ಹೊಂದುತ್ತಲೇ ಇರುವುದು. ಮುಕ್ತ್ಯವಸ್ಥೆಯಲ್ಲಿಯೂ ಈ ಭಕ್ತಿ ಉಳಿದಿರುವುದು. ನಿತ್ಯರೂ ಮತ್ತು ಮುಕ್ತರೂ ಈ ಭಕ್ತಿಯ ವಿವಿಧಾವಸ್ಥೆಗಳನ್ನು ಅನುಭವಿಸುತ್ತಲೇ ಇರುವರು. ಹೀಗೆ ಭಕ್ತಿಯೋಗ ಮೋಕ್ಷೋಪಾಯಗಳಲ್ಲಿ ಪ್ರಧಾನವಾದುದಾಗಿದೆ.

ಪ್ರಪತ್ತಿ

ಪ್ರಪತ್ತಿ ಅಥವಾ ಶರಣಾಗತಿಯು ಅಪೌರುಷೇಯವಾದ ವೇದಗಳಲ್ಲಿ ಉಪದೇಶಿಸಿರುವ ಸಿದ್ಧಾಂತವೇ ವಿನಾ ಕಲ್ಪಿತವಾದುದಲ್ಲ. ಕರ್ಮ, ಜ್ಞಾನ ಮತ್ತು ಭಕ್ತಿಗಳು ಸಿದ್ಧಿಸಬೇಕಾದರೆ ಪ್ರಪತ್ತಿಯು ಅವಶ್ಯಕ. ಭಗವಂತನ ಅಚಿಂತ್ಯವಾದ ಶಕ್ತಿಸಾಮರ್ಥ್ಯಗಳನ್ನು ಮನಗಂಡ ಸಾಧಕ ತನ್ನನ್ನೂ ತನ್ನದೆಲ್ಲವನ್ನೂ ಆ ಭಗವಂತನ ಪದತಲದಲ್ಲಿ ಅನನ್ಯಭಾವದಿಂದ ಸಮರ್ಪಣ ಮಾಡುವನು- ವೇದಗಳಲ್ಲಿ ಪ್ರಪತ್ತಿಯ ಮೂಲಭೂತವಾದ ತತ್ತ್ವಗಳು ಅಡಗಿವೆ. ಮಾನವನು ತನ್ನ ಅಲ್ಪತ್ವವನ್ನೂ ಅಸಹಾಯತೆಯನ್ನೂ ಮನಗಂಡು 'ಮೂರಾ ಅಮೂರ ನವಯಂ ಚಿಕಿತ್ವ:' ಎಂದರೆ ಎಲೈ ಅಮೂಢನೇ, ಮೂಢರಾದ ನಾವು ನಿನ್ನನ್ನು ಅರಿಯಲಾರೆವು ಎಂಬ ನಮ್ರಭಾವದಿಂದ ಆ ವಿಶ್ವಶಕ್ತಿಯ ಮುಂದೆ ಮಣಿದಿದ್ದಾನೆ. ಋಗ್ವೇದ ಸಂಹಿತೆಯ 'ವಯಮಿಂದ್ರ ತ್ವಾಯವಃ ಸಖಿತ್ವ-

acharya.org

ಮಾರಭಾಮಹೇ,' 'ತ್ವಮಸ್ಮಾಕಂ ತವ ಸ್ಮಸಿ,' 'ಶ್ರಿಯೇ ತೇ ಪಾದಾ ದುವ ಆಮಿಮಿಕ್ಷುಃ' 'ಅಯಾಮಿ ತೇ ನಮ ಉಕ್ತಿಂ ಜುಷಸ್ವ' ಮೊದಲಾದ ಶ್ರುತಿಗಳಲ್ಲಿ ಪ್ರಪತ್ತಿಯ ಸಾರಸರ್ವಸ್ವ ಅಡಗಿದೆ. ಭಗವಂತನನ್ನು ಬಿಟ್ಟು ಮತ್ತೆ ಯಾರೂ ನಮ್ಮನ್ನು ರಕ್ಷಿಸಲಾರರೆಂಬ ಭಾವ, 'ನ ಹಿ ತ್ವದನ್ಯಃ ಪುರುಹೂತ ಕಶ್ಚನ ಮಘವನ್ನಸ್ತಿ ಮರ್ಡಿತಾ' ಎಂಬಲ್ಲಿದೆ. ಮಾನವಕೋಟಿಯ ರಕ್ಷಕನಾಗಿ ಭಗವಂತನಿದ್ದಾನೆ. ಅವನಲ್ಲಿ ನಾವು ನಮ್ಮ ರಕ್ಷಣೆಯನ್ನು ಬೇಡಬೇಕಷ್ಟೆ. ಮರುಭೂಮಿಯ ನಡುವಣ ಜಲಾಶಯವೆಂದೂ ನಿರಪಾಯವಾದ ಹಾಗೂ ಸಮರ್ಥವಾದ ನಾವೆಯೆಂದೂ ದೇವರನ್ನು ವೇದ ಸ್ತುತಿಸುತ್ತದೆ. ಮರುಭೂಮಿಯಲ್ಲಿರುವವನು ಜಲವಸತಿಯನ್ನು ಸೇರಲು ಯತ್ನಿಸುವಂತೆ, ಸಮುದ್ರವನ್ನು ದಾಟಲಿಚ್ಛಿಸುವವನು ಹಡಗನ್ನೇರುವಂತೆ ಲೋಕದ ಕಷ್ಟಕಾರ್ಪಣ್ಯಗಳನ್ನು ಕಳೆದುಕೊಂಡು ನಿರತಿಶಯವಾದ ಸುಖವನ್ನು ಪಡೆಯಲು ಆ ಪರಮಾತ್ಮನನ್ನು ನಾವು ಆಶ್ರಯಿಸಬೇಕೆಂಬ ಸೂಚನೆ ಇಲ್ಲಿದೆ. ಭಗವಂತನ ದಯೆ ನಮ್ಮನ್ನೆಲ್ಲಾ ರಕ್ಷಿಸುವ ದೀಕ್ಷೆಯನ್ನು ವಹಿಸಿಕೊಂಡಿದೆ. ಆ ದಯೆಯನ್ನು ಅವನು ನಮ್ಮ ಮೇಲೆ ವರ್ಷಿಸಲು ಅವನನ್ನು ನಾವು ಬೇಡಬೇಕಾಗಿದೆ. ಈ ಅಂಶಗಳನ್ನು ಶಾಸ್ತ್ರಗಳಲ್ಲಿ ವಿಧಿಸಿದೆ. ಭಗವಂತನನ್ನು ಪಡೆಯಲು ನಾವನುಸರಿಸಬೇಕಾದ ವಿಧಾನಗಳನ್ನುಪದೇಶಿಸುವ ಉಪನಿಷತ್ತುಗಳು ಭಕ್ತಿಯನ್ನೂ, ಜ್ಞಾನವನ್ನೂ ಉಪದೇಶಿಸುವಂತೆ ಪ್ರಪತ್ತಿಯನ್ನೂ ಉಪದೇಶಿಸಿವೆ. ಈಶಾವಾಸ್ಯೋಪನಿಷತ್ತಿನ 'ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ' ಎಂಬುದು ಇಂಥ ಒಂದು ಶ್ರುತಿ. ಇಲ್ಲಿ ಬರುವ 'ನಮ ಉಕ್ತಿ' ಶರಣಾಗತಿಗೆ ಅನ್ವಯಿಸುತ್ತದೆ. ಛಾಂದೋಗ್ಯ ಉಪನಿಷತ್ತಿನಲ್ಲಿ 'ಇಂದ್ರಂ ಶರಣಂ ಪ್ರಪನ್ನೋ ಅಭೂವಂ; ಪ್ರಜಾಪತಿಂ ಶರಣಂ ಪ್ರಪನ್ನೋ ಅಭೂವಂ; ಮೃತ್ಯುಂ ಶರಣಂ ಪ್ರಪನ್ನೋ ಅಭೂವಂ' ಎಂಬಲ್ಲಿ ಶರಣಾಗತಿಯ ಸ್ಪಷ್ಟೋಕ್ತಿ ಇದೆ. ಹೀಗೆ ಶರಣಾಗತಿಯನ್ನನುಷ್ಠಿಸಿದವನು ಬ್ರಹ್ಮಸಂಸ್ಥನಾಗಿ ಅಮೃತತ್ವವನ್ನು ಪಡೆಯುವನೆಂದು ಹೇಳಿದೆ. ಮುಂಡಕೋಪನಿಷತ್ತಿನಲ್ಲಿ ಬರುವ 'ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ । ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥' ಎಂಬ ಶ್ರುತಿ ಆತ್ಮವನ್ನು ಬ್ರಹ್ಮವಸ್ತುವಿನಲ್ಲಿ ಸಮರ್ಪಣ ಮಾಡಬೇಕೆಂಬುದನ್ನು ತಿಳಿಸುತ್ತದೆ. ಮಹಾನಾರಾಯಣೀಯ ಉಪನಿಷತ್ತು 'ತಸ್ಮಾನ್ನ್ಯಾಸಮೇಷಾಂ ತಪಸಾಮತಿರಿಕ್ತಮಾಹುಃ' ಎಂದು ನ್ಯಾಸವಿದ್ಯೆಯ ಅಥವಾ ಪ್ರಪತ್ತಿಯ ಮಹತ್ತ್ವವನ್ನು ಎತ್ತಿ ತೋರಿಸುತ್ತದೆ. 'ಯೋ ವೈ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈತಂ ಹ ದೇವಮಾತ್ಮಬುದ್ಧಿಪ್ರಕಾಶಂ ಮುಮುಕ್ಷುರ್ವೈ ಶರಣಂ ಅಹಂ ಪ್ರಪದ್ಯೇ ॥' ಎಂಬ ಶ್ವೇತಾಶ್ವತರಶ್ರುತಿ ಮುಮುಕ್ಷುವಾದವನು ಭಗವಂತನಲ್ಲಿ ಶರಣಾಗತಿ ಮಾಡಬೇಕೆಂಬುದನ್ನು ತಿಳಿಸುತ್ತದೆ. ಹೀಗೆ ಶರಣಾಗತಿ ಎಂಬುವುದು ವೇದೋಪನಿಷತ್ತುಗಳ ಉಪದೇಶಸಾರವಾಗಿದೆ.

acharya.org

ಈ ಪರಮೋಪದೇಶವನ್ನು ಸ್ಮೃತಿಗಳೂ ಇತಿಹಾಸಗಳೂ ಪುರಾಣಗಳೂ ಪರಿಪೋಷಿಸಿವೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನು ಅರ್ಜುನನಿಗೆ ಈ ರಹಸ್ಯವನ್ನುಪದೇಶಿಸಿರುವುದನ್ನು 'ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ' 'ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ' ಮೊದಲಾದ ಸೂಕ್ತಿಗಳಲ್ಲಿ ಕಾಣಬಹುದು.

ಶರಣಾಗತಿಯು ಬ್ರಹ್ಮವಿದ್ಯೆಗಳಲ್ಲಿ ಒಂದು ಎಂಬುದನ್ನು 'ನಾನಾ ಶಬ್ದಾದಿ-ಭೇದಾತ್' ಎಂಬ ಸೂತ್ರದ ವಿವರಣೆಯ ಸಂದರ್ಭದಲ್ಲಿ ಶ್ರುತಪ್ರಕಾಶಿಕಾಚಾರ್ಯರು ನಿರೂಪಿಸುತ್ತಾರೆ. ಮೋಕ್ಷಕ್ಕೆ ಇದು ಸಾಕ್ಷಾತ್ ಸಾಧನ. ಹೇಗೆ ಶರಣಾಗತಿ ಕರ್ಮಯೋಗವನ್ನೋ ಜ್ಞಾನಯೋಗವನ್ನೋ ಅಥವಾ ಭಕ್ತಿಯೋಗವನ್ನೋ ಪುಷ್ಟಿಗೊಳಿಸುವುದೋ ಹಾಗೆಯೇ ನೇರವಾಗಿ ಮೋಕ್ಷೋಪಾಯವೂ ಆಗಿದೆ ಎಂಬುದನ್ನು ಆಚಾರ್ಯರುಗಳು ತಮ್ಮ ಅನುಷ್ಠಾನಗಳಿಂದಲೂ ಉಪದೇಶಗಳಿಂದಲೂ ಸ್ಥಾಪಿಸಿದ್ದಾರೆ.

ಆಳ್ವಾರರುಗಳು ತಮ್ಮ ದಿವ್ಯ ಪ್ರಬಂಧಗಳಲ್ಲಿ ಈ ಶರಣಾಗತಿಯ ಪ್ರಭಾವವನ್ನೂ ಆವಶ್ಯಕತೆಯನ್ನೂ ಮನಮುಟ್ಟುವಂತೆ ತಿಳಿಸಿಕೊಟ್ಟಿದ್ದಾರೆ. ವಾಲ್ಮೀಕಿರಾಮಾಯಣ ಶರಣಾಗತಿಯ ಸಾರಸರ್ವಸ್ವವಾಗಿದೆ. ಈ ಸಂಪ್ರದಾಯದ ಹಿರಿಯ ಆಚಾರ್ಯರುಗಳಾದ ಶ್ರೀಮನ್ನಾಥ ಮುನಿಗಳು, ಶ್ರೀಮದ್ಯಾಮುನ ಮುನಿಗಳು ಮತ್ತು ಶ್ರೀಮದ್ರಾಮಾನುಜರೂ ಶರಣಾಗತಿಯು ಮೋಕ್ಷಕ್ಕೆ ಸುಕರವೂ ನೇರವೂ ಆದ ಮಾರ್ಗವೆಂದು ಉಪದೇಶಿಸಿದ್ದಾರೆ. 'ಅಕಿಂಚನೋಽನನ್ಯಗತಿಶರಣ್ಯ ತ್ವತ್ಪಾದಮೂಲಂ ಶರಣಂ ಪ್ರಪದ್ಯೇ' ಎಂದು ಯಾಮುನರೂ 'ಶ್ರೀಮತಶ್ಚರಣಾರವಿಂದಯುಗಲಂ ಅನನ್ಯಾತ್ಮಸಂಜೀವನೇನ ತದ್ಗತ-ಸರ್ವಭಾವೇನ ಶರಣಮನುವ್ರಜೇತ್' ಎಂದು ರಾಮಾನುಜರೂ ಪ್ರಪತ್ತಿಯನ್ನು ವಿಧಿಸಿದ್ದಾರೆ. ರಾಮಾನುಜರು ತಮ್ಮ ಶ್ರೀಭಾಷ್ಯಾದಿ ಗ್ರಂಥಗಳಲ್ಲಿ ಭಕ್ತಿಯೋಗವನ್ನು ನಿರೂಪಿಸಿರುವಂತೆ ಗದ್ಯತ್ರಯದಲ್ಲಿ ಶರಣಾಗತಿಯನ್ನು ಉಪದೇಶಿಸಿದ್ದಾರೆಂಬುದನ್ನು ಉಭಯಕಲೆಯ ಆಚಾರ್ಯರುಗಳೂ ಮಾನ್ಯ ಮಾಡಿದ್ದಾರೆ. ಎಲ್ಲ ಸಾಧನೆಯ ರಹಸ್ಯ ಶರಣಾಗತಿಯೇ ಎಂಬುದನ್ನು ಇವರು ಸ್ಪಷ್ಟಗೊಳಿಸಿದ್ದಾರೆ.

ಭಕ್ತಿ-ಪ್ರಪತ್ತಿ

ಈ ಸಿದ್ಧಾಂತಕ್ಕನುಸಾರವಾಗಿ ಪ್ರಧಾನವಾದ ಮೋಕ್ಷೋಪಾಯ ಶ್ರೀಮನ್ನಾರಾಯಣನೇ ಆಗಿದ್ದಾನೆ. ಸಿದ್ಧೋಪಾಯನಾದ ಭಗವಂತನ ದಯೆಯನ್ನು ಸಾಧಿಸಿಕೊಡುವ ಸಾಧ್ಯೋಪಾಯ ಭಕ್ತಿ ಮತ್ತು ಪ್ರಪತ್ತಿಗಳಾಗಿವೆ. ಇದನ್ನೇ 'ಭಕ್ತಿ ಪ್ರಪತ್ತಿ-ಪ್ರಮುಖಂ ತದ್ವಶೀಕಾರಕಾರಣಮ್' ಎಂದು ಹೇಳಿದ್ದಾರೆ. ಭಗವಂತನ ನಿರುಪಾಧಿಕವಾದ ದಯೆ ಹಾಗೂ ಪುರುಷಪ್ರಯತ್ನ ಇವೆರಡೂ ಜೀವನ ಮುಕ್ತಿಗೆ ಕಾರಣಗಳು.ಜೀವ

acharya.org

ನಿಗೆ ಭಗವಂತನು ಚಿಚ್ಛಕ್ತಿ ಮೊದಲಾದುವನ್ನು ಕೊಟ್ಟು ಸಾಧನೆಯನ್ನನುಷ್ಠಿಸಲು ಶಕ್ತ ನನ್ನಾಗಿ ಮಾಡಿದ್ದಾನೆ; ಯುಕ್ತಾಯುಕ್ತ ವಿವೇಕವನ್ನೂ ಕರುಣಿಸಿದ್ದಾನೆ; ಶಾಸ್ತ್ರಜ್ಞಾನ ವನ್ನುಪದೇಶಿಸಿದ್ದಾನೆ; ಪರಮ ಪುರುಷಾರ್ಥವಾವುದೆಂದೂ ಅದನ್ನು ಪಡೆಯುವ ವಿಧಾನ ವಾವುದೆಂದೂ ಬೋಧಿಸಿದ್ದಾನೆ. ಈ ಜ್ಞಾನದ ಲಾಭದಿಂದ ಜೀವನು ತನ್ನ ಆಧ್ಯಾತ್ಮಿಕ ಜೀವನವನ್ನು ರೂಪಿಸಿಕೊಂಡು ಭಗವಂತನನ್ನು ಆಶ್ರಯಿಸಿ ಉದ್ಧಾರ ಹೊಂದಬೇಕು. ಭಗವಂತನೇ ನನಗೆ ಗತಿ, ಅವನನ್ನು ಬಿಟ್ಟು ಬೇರೆ ಉಪಾಯವಿಲ್ಲ ಎಂಬ ದೃಢ ವಿಶ್ವಾಸ ದಿಂದ ಅವನನ್ನು ಬೇಡಬೇಕು. ಮನುಷ್ಯಪ್ರಯತ್ನ ಇಷ್ಟಾದರೂ ಆಗಬೇಕಾದುದು ಆವ ಶ್ಯಕ. 'ರಕ್ಷಾಪೇಕ್ಷಾಂ ಪ್ರತೀಕ್ಷತೇ' ಎಂದು ಹೇಳಿದಂತೆ ಜೀವನು ತನ್ನನ್ನು ಕಾಪಾಡ ಬೇಕೆಂದು ಅಪೇಕ್ಷಿಸುವುದನ್ನೇ ಕಾಯುತ್ತಿರುವ ಭಗವಂತನು ಜೀವಕೋಟಿಯ ರಕ್ಷಣೆಗೆ ಧಾವಿಸಿ ಬರುತ್ತಾನೆ; ಹಾಗೂ ತನ್ನ ಸಹಜವಾದ ದಯೆಯ ಕಾರಣ ಸಂಸಾರದ ದುಃಖ ಗಳನ್ನು ಹೋಗಲಾಡಿಸಿ ಶಾಶ್ವತವಾದ ಭಗವದನುಭವದ ಮಹದಾನಂದವನ್ನು ಕರುಣಿಸು ತ್ತಾನೆ. ಹೀಗೆ ಭಗವಂತನನ್ನು ಹೊಂದಲು ಮುಖ್ಯವಾದ ಉಪಾಯಗಳು ಭಕ್ತಿ ಮತ್ತು ಪ್ರಪತ್ತಿಗಳೇ ಆಗಿವೆ ಎಂಬುದನ್ನು 'ಭಕ್ತ್ಯಾ ಪರಮಯಾ ವಾಪಿ ಪ್ರಪತ್ತ್ಯಾ ವಾ ಮಹಾ- ಮುನೇ । ಪ್ರಾಪ್ಯೋಽಹಂ ನಾನ್ಯಥಾ ಪ್ರಾಪ್ಯಃ ಮಮ ಕೈಂಕರ್ಯಲಿಪ್ಸುಭಿಃ ॥ ಎಂಬಲ್ಲಿ ಕಾಣಬಹುದು.

ಭಕ್ತಿ ಮತ್ತು ಪ್ರಪತ್ತಿಗಳು ಮೋಕ್ಷಕ್ಕೆ ವಿಹಿತವಾದ ಉಪಾಯಗಳು. ಇವು ಒಂದ ರೊಡನೊಂದು ನಿಕಟವಾಗಿ ಕೂಡಿಕೊಂಡಿವೆ. ಭಕ್ತಿ ಎಂಬ ಶಬ್ದವನ್ನೇ ಎರಡಕ್ಕೂ ಉಪ ಯೋಗಿಸಿ ಸಾಧನ ಭಕ್ತಿ ಎಂದು ಭಕ್ತಿಯನ್ನೂ, ಸಾಧ್ಯ ಭಕ್ತಿ ಎಂದು ಪ್ರಪತ್ತಿಯನ್ನೂ ನಿರ್ದೇಶಿಸಿದೆ. ಹಾಗೆಯೇ ಸದ್ವಾರಕ ಪ್ರಪತ್ತಿ ಎಂದು ಭಕ್ತಿಯೋಗವನ್ನೂ, ಅದ್ವಾರಕ ಪ್ರಪತ್ತಿ ಎಂದು ಪ್ರಪತ್ತಿಯನ್ನೂ ನಿರ್ದೇಶಿಸಲಾಗಿದೆ. ಭಕ್ತಿಯಲ್ಲಿ ಪ್ರಪತ್ತಿಯ ಅಂಶ ವಿರುವುದೂ ಪ್ರಪತ್ತಿಯಲ್ಲಿ ಭಕ್ತಿಯ ಅಂಶವಿರುವುದೂ ಇದಕ್ಕೆ ಕಾರಣ. ಇವರಿಬ್ಬರೂ ಪ್ರಪನ್ನರೇ ಆಗಿದ್ದಾರೆ ; ಏಕೆಂದರೆ ಪ್ರಪತ್ತಿ ಒಂದರಲ್ಲಿ ಅಂಗವಾಗಿದ್ದರೆ ಇನ್ನೊಂದರಲ್ಲಿ ಪ್ರಧಾನವಾಗಿರುವುದು. ಇವರಿಬ್ಬರೂ ಭಕ್ತರೇ ಎನ್ನಬಹುದು ಏಕೆಂದರೆ ಒಂದರಲ್ಲಿ ಭಕ್ತಿ ಸಾಧನವಾದರೆ ಮತ್ತೊಂದರಲ್ಲಿ ಭಕ್ತಿ ಫಲವಾಗಿರುತ್ತದೆ. ಇದನ್ನೇ ರಹಸ್ಯತ್ರಯಸಾರ ದಲ್ಲಿ ದೇಶಿಕರವರು—

'ಸ್ವತಂತ್ರಾಂಗಪ್ರಪತ್ತಿಭ್ಯಾಂ ಪ್ರಪನ್ನಾವತ್ರ ತಾವುಭಾ ।
ಫಲಸಾಧನಭಕ್ತಿಭ್ಯಾಂ ಭಕ್ತಾವಪಿ ಚ ದರ್ಶಿತಾ ॥'

ಎಂದು ನಿರೂಪಿಸಿದ್ದಾರೆ. ಆದರೂ ಭಕ್ತಿಯೋಗಕ್ಕಿಂತ ಪ್ರಪತ್ತಿ ವಿಲಕ್ಷಣವಾದ ಮತ್ತು ಬೇರೆಯಾದ ಮೋಕ್ಷೋಪಾಯ. ಇವೆರಡೂ ಬೇರೆ ಬೇರೆ ಅಧಿಕಾರಿಗಳಿಗೆ ಅನ್ವಯಿಸು ವುವು. ಭಕ್ತಿಯೋಗದಲ್ಲಿಯೂ ಒಂದು ವಿಧವಾದ ಉಪಾಸನೆಗಿಂತ ಮತ್ತೊಂದು ಹೇಗೆ

acharya.org

ಬೇರೆಯಾಗಿದ್ದು ಬೇರೆ ಅಧಿಕಾರಿಗಳಿಗೆ ಅನ್ವಯಿಸುವುದೋ ಹಾಗೆಯೇ ಪ್ರಪತ್ತಿಯೂ ಸಹ ಭಕ್ತಿಯೋಗ ಅಥವಾ ಉಪಾಸನೆಗಿಂತ ಬೇರೆಯಾದ ಮೋಕ್ಷೋಪಾಯವಾಗಿದೆ.

ಭಕ್ತಿಯೋಗವು ಕಷ್ಟಸಾಧ್ಯವಾದುದು. ಇದಕ್ಕೆ ಆತ್ಮದರ್ಶನ ಆವಶ್ಯಕ. ಕರ್ಮಯೋಗ ಜ್ಞಾನಯೋಗಗಳ ಅನುಷ್ಠಾನವಿಲ್ಲದೆ ಭಕ್ತಿಯೋಗದ ನಿಷ್ಪತ್ತಿ ಆಗುವುದಿಲ್ಲ. ಶಾಸ್ತ್ರೀಯವಾದ ಜ್ಞಾನ ಇದಕ್ಕೆ ಮೊಟ್ಟಮೊದಲಾಗಿ ಬೇಕು. ಅದಕ್ಕನುಗುಣವಾಗಿ ಆಚರಿಸತಕ್ಕ ಸಾಮರ್ಥ್ಯವೂ ಬೇಕು. ಕರ್ಮಯೋಗಾದಿಗಳನ್ನನುಷ್ಠಿಸಲು ಅರ್ಹತೆ ಇರುವ ಉತ್ತಮ ವರ್ಣಗಳಲ್ಲಿ ಜನಿಸಿರಬೇಕು. ಭಕ್ತಿಯೋಗಕ್ಕನುಸಾರವಾಗಿ ಫಲಪ್ರಾಪ್ತಿಯಾಗುವವರೆಗೂ ಸಹಿಸುವ ತಾಳ್ಮೆ ಇರಬೇಕು. ಇವಿಷ್ಟೂ ಇದ್ದರೆ ಭಕ್ತಿಯೋಗ ಸಾಧ್ಯವಾಗುತ್ತದೆ. ಇವುಗಳಲ್ಲಿ ಯಾವ ಒಂದು ಅಂಶವಿಲ್ಲದಿದ್ದರೂ ಭಕ್ತಿಯೋಗದ ಅನುಷ್ಠಾನ ಸಿದ್ಧಿಸುವುದಿಲ್ಲ. ಈ ಭಕ್ತಿಯೋಗಕ್ಕೆ ವಿಘ್ನಗಳೂ ಅನೇಕವಿವೆ. ಹೀಗಾಗಿ ಎಲ್ಲ ಬಗೆಯ ಜನರಿಗೂ, ಶಕ್ತರಿಗೂ ಅಶಕ್ತರಿಗೂ ಸಮಾನವಾಗಿ ಇದು ಅನ್ವಯಿಸಲಾರದು. ಆದರೆ ಪ್ರಪತ್ತಿ ಸರ್ವಾಧಿಕಾರಿಕವಾದುದು. ಭಕ್ತಿಯೋಗವನ್ನು ಅನುಷ್ಠಿಸಲು ಅಶಕ್ತರಾದವರೂ ಹಾಗೆಯೇ ಭಕ್ತಿಯೋಗಕ್ಕೆ ಅರ್ಹರಾದವರೂ ಸಹ ಅನುಸರಿಸಲು ಯೋಗ್ಯವಾದ ಉಪಾಯ ಎಂದರೆ ಪ್ರಪತ್ತಿಯೊಂದೇ. ಭಕ್ತಿಯೋಗಕ್ಕೆ ಇರಬೇಕಾದಂತೆ ಇದಕ್ಕೆ ಉತ್ತಮ ವರ್ಣದಲ್ಲಿ ಹುಟ್ಟಬೇಕಾದುದಿಲ್ಲ. ಶಾಸ್ತ್ರೀಯಜ್ಞಾನವನ್ನು ಸ್ವಾಧೀನ ಮಾಡಿಕೊಳ್ಳಬೇಕಾದುದಿಲ್ಲ. ಕಠಿಣತರವಾದ ಕರ್ಮಯೋಗಜ್ಞಾನಯೋಗಾದಿಗಳನ್ನು ಅನುಷ್ಠಿಸುವ ಶಕ್ತಿಸಾಮರ್ಥ್ಯಗಳ ಅಪೇಕ್ಷೆಯಿಲ್ಲ. ಇದಕ್ಕೆ ಬೇಕಾದುದೇನೆಂದರೆ ಇತರ ಉಪಾಯಗಳನ್ನನುಷ್ಠಿಸಲು ಶಕ್ತಿ ಇಲ್ಲದಿರುವಿಕೆ ಹಾಗೂ ಇತರ ಮಾರ್ಗಗಳ ಅಭಾವದ ಕಾರಣ ಉಂಟಾದ ತೀವ್ರವಾದ ಅಸಹಾಯತೆ. ಇವೆರಡೂ ಕೂಡಿ ಪ್ರಪತ್ತಿಗೆ ಅಧಿಕಾರ ಉಂಟಾಗುತ್ತದೆ. ಮೋಕ್ಷವನ್ನು ಕೂಡಲೇ ಹೊಂದಬೇಕೆಂಬ ತೀವ್ರವಾದ ಅಭಿಲಾಷೆಯಿರುವವನು ಸ್ವಲ್ಪವೂ ಕಾಲವಿಳಂಬವನ್ನು ಸಹಿಸಲಾರನು. ತನಗೆ ಬೇರೆ ಗತಿಯಿಲ್ಲವೆಂದು ಮನಗಂಡ ಆ ಸಾಧಕ ತನ್ನ ಅಭೀಷ್ಟವನ್ನು ನೆರವೇರಿಸಿಕೊಡುವ ಸರ್ವಸಮರ್ಥನಲ್ಲಿ ತನ್ನ ರಕ್ಷಣೆಯ ಹೊಣೆಯನ್ನೊಪ್ಪಿಸಿಬಿಟ್ಟು ನಿಶ್ಚಿಂತನಾಗುವನು. ಇದೇ ಪ್ರಪತ್ತಿಯ ಜೀವಾಳ. ಜೀವಪರಮಾತ್ಮಸಂಬಂಧದ ಸಾಮಾನ್ಯಜ್ಞಾನ ಹಾಗೂ ತನ್ನ ಆಕಿಂಚಿನ್ಯ ಮತ್ತು ಅನನ್ಯಗತಿತ್ವ ಇವು ಪ್ರಪತ್ತಿಗೆ ಬೇಕಾದ ಆವಶ್ಯಕತೆಗಳು. ಇಂಥ ಸಾಧಕ ಭಗವಂತನಲ್ಲಿ ವಿಶ್ವಾಸವನ್ನು ಇಟ್ಟು ಅವನಲ್ಲಿ ತನ್ನನ್ನರ್ಪಿಸಿಕೊಳ್ಳುವನು. ಭಕ್ತಿಯ ಸ್ಥಾನದಲ್ಲಿ ಪ್ರಪತ್ತಿ ಅವನಿಗೆ ಉಪಾಯವಾಗುವುದು. ಭಕ್ತಿಯೋಗಕ್ಕೂ ಪ್ರಪತ್ತಿಗೂ ಇರುವ ವೈಲಕ್ಷಣ್ಯಗಳನ್ನು ಕೆಳಗೆ ಕಂಡಂತೆ ಸೂಚಿಸಬಹುದು.

acharya.org

ಭಕ್ತಿಯೋಗ	ಪ್ರಪತ್ತಿ
1) ಕರ್ಮ, ಜ್ಞಾನ ಮತ್ತು ಭಕ್ತಿಗಳಿಗೆ ಸಂಬಂಧಿಸಿದಂತೆ ಶಾಸ್ತ್ರಗಳ ನಿಷ್ಕೃಷ್ಟವಾದ ಜ್ಞಾನ ಆವಶ್ಯಕ.	ಜೀವನಿಗೂ ಈಶ್ವರನಿಗೂ ಇರುವ ಅವರ್ಜನೀಯವಾದ ಸಂಬಂಧದ ಅರಿವು ಆವಶ್ಯಕ.
2) ಶಾಸ್ತ್ರದಲ್ಲಿ ವಿಧಿಸಿರುವಂತೆ ನಡೆಯುವ ಶಕ್ತಿ ಬೇಕು.	ಭಕ್ತಿಯೋಗ ಮೊದಲಾದವುಗಳಿಗಾಗಿ ಶಾಸ್ತ್ರ ವಿಹಿತವಾದ ರೀತಿಯಲ್ಲಿ ಅನುಷ್ಠಿಸಲು ಅಶಕ್ತಿ.
3) ಮೂರು ಉತ್ತಮ ವರ್ಣಗಳಲ್ಲಿ ಜನ್ಮ ಪಡೆದವರಿಗೆ ಅರ್ಹತೆ.	ಜಾತಿಕುಲ ಲಿಂಗಗಳ ಭೇದವಿಲ್ಲದೆ ಎಲ್ಲರಿಗೂ ಅರ್ಹತೆ ಇದೆ.
4) ಕರ್ಮಯೋಗಜ್ಞಾನಯೋಗಗಳನ್ನು ಅನುಷ್ಠಿಸಿ ಆತ್ಮದರ್ಶನ ಪಡೆದು ಭಕ್ತಿಯೋಗ ಆರಂಭಿಸಬೇಕು.	ಪ್ರಪತ್ತಿಗಾಗಿ ಬೇರೇನನ್ನೂ ಅನುಷ್ಠಿಸಬೇಕಾಗಿಲ್ಲ. ಇದೇ ಪರಭಕ್ತಿ ಸ್ಥಾನದಲ್ಲಿದ್ದು ಮುಂದಿನ ಫಲವನ್ನು ಕೊಡುತ್ತದೆ.
5) ಪ್ರಾರಬ್ಧ ಕರ್ಮವನ್ನೆಲ್ಲಾ ಅನುಭವಿಸುವವರೆಗೆ ಫಲಪ್ರಾಪ್ತಿಗೆ ಕಾಯುವ ತಾಳ್ಮೆ ಇರಬೇಕು.	ಫಲಪ್ರಾಪ್ತಿಗೆ ಎಳ್ಳಷ್ಟೂ ವಿಳಂಬವನ್ನು ತಡೆಯಲಾರದ ತೀವ್ರತೆ ಇರಬೇಕು.
6) ಭಕ್ತಿಯೋಗವನ್ನು ನಿರಂತರವಾಗಿ ಯಾವಜ್ಜೀವವೂ ಅನುಷ್ಠಿಸಬೇಕು.	ಪ್ರಪತ್ತಿಯನ್ನು ಒಮ್ಮೆ ಮಾತ್ರ ಅನುಷ್ಠಿಸಬೇಕು.
7) ಅಷ್ಟಾಂಗ ಯೋಗದ ಅವಶ್ಯಕತೆ ಇದಕ್ಕೆ ಉಂಟು.	ಮತ್ತಾವುದರ ಅವಶ್ಯಕತೆಯೂ ಇದಕ್ಕಿಲ್ಲ.
8) ಮುಕ್ತಿ ಪ್ರಾರಬ್ಧಕರ್ಮದ ಅನುಭವಕ್ಕೆ ಮೊದಲು ಆಗದ ಕಾರಣ ಯಾವಾಗ ಮೋಕ್ಷ ಆಗುವುದೆಂದು ಹೇಳುವುದಕ್ಕಾಗದು. ಅನೇಕ ಕಲ್ಪಾಂತರಗಳಾದರೂ ಆಗಬಹುದು.	ಪ್ರಪನ್ನನ ಆರ್ತಿಗನುಗುಣವಾಗಿ ಫಲ ಕೂಡಲೇ ಆಗಬಹುದು ಅಥವಾ ಆ ದೇಹಾವಸಾನದಲ್ಲಿ ಆಗಬಹುದು. ಪುನರ್ಜನ್ಮದ ಅವಶ್ಯಕತೆ ಇದಕ್ಕಿಲ್ಲ. ಅನಭ್ಯುಪಗತವಾದ ಪ್ರಾರಬ್ಧ ಕರ್ಮವೂ ಇದರಿಂದ ನಾಶವಾಗುವುದು.

ಹೀಗೆ ಪ್ರಪತ್ತಿಯಲ್ಲಿ ಭಕ್ತಿಯೋಗದ ಕಷ್ಟಗಳಾವುವೂ ಇಲ್ಲದೆ ಗುಣಾಂಶಗಳೆಲ್ಲಾ ಇರುವುವು. ಪ್ರಪತ್ತಿಯೂ ಸಹ ಭಕ್ತಿಯೋಗದಂತೆ ಐಹಿಕ ಹಾಗೂ ಪಾರಲೌಕಿಕ ಫಲಪ್ರಾಪ್ತಿಗೆ ಕಾರಣವಾಗುತ್ತದೆ. ಪರಮಾತ್ಮನು ಸರ್ವವಿಧವಾದ ಅಭೀಷ್ಟಗಳನ್ನೂ ಕರುಣಿಸುವವನಾಗಿರುವ ಕಾರಣ ಅವನ ಚರಣಗಳಲ್ಲಿ ಮಾಡಿದ ಪ್ರಪತ್ತಿ ಎಲ್ಲ ವಿಧವಾದ ಅಪೇಕ್ಷೆಗಳನ್ನೂ ಕರುಣಿಸುವುದಾಗಿದೆ.

acharya.org

ಪ್ರಪತ್ತಿಯ ಅಂಗಗಳು

ಪ್ರಪತ್ತಿಗೆ ಕರ್ಮಯೋಗಾನುಷ್ಠಾನವಾಗಲೀ ಜ್ಞಾನಯೋಗವಾಗಲೀ, ಆತ್ಮ ದರ್ಶನವಾಗಲೀ ಆವಶ್ಯಕವಿಲ್ಲವೆಂದು ಹೇಳಲಾಯಿತು. ಆದರೆ ಇದಕ್ಕೆ ತನ್ನದೇ ಆದ ಐದು ಅಂಶಗಳ ಆವಶ್ಯಕತೆ ಇದೆ. ಇವುಗಳು ಐದೂ ಅಂಗಗಳಾಗಿ ಆತ್ಮನಿಕ್ಷೇಪ ಅಂಗಿಯಾಗಿ ಇವೆಲ್ಲಾ ಸೇರಿ ಷಡಂಗಯೋಗನೆಂಬ ಹೆಸರು ಇದಕ್ಕೆ ಬಂದಿದೆ. ಇವುಗಳು ಕೆಳಗೆ ಕಂಡಂತಿವೆ—ಅನುಕೂಲ್ಯ ಸಂಕಲ್ಪ, ಪ್ರಾತಿಕೂಲ್ಯ ವರ್ಜನ, ಮಹಾವಿಶ್ವಾಸ, ಕಾರ್ಪಣ್ಯ, ಗೋಪ್ತೃತ್ವವರಣ ಮತ್ತು ಆತ್ಮನಿಕ್ಷೇಪ.

ಆತ್ಮನಿಕ್ಷೇಪ—ಇದು ಪ್ರಧಾನವಾದ ಕಾರ್ಯ ; ಆತ್ಮವಸ್ತುವನ್ನು ಭಗವಂತನಲ್ಲಿ ಅರ್ಪಿಸುವ ಕ್ರಿಯಾವಿಶೇಷ ಇದು. ರಕ್ಷಿಸಲ್ಪಡಬೇಕಾದ ವಸ್ತುವನ್ನು ರಕ್ಷಕನ ಕೈಗೆ ಕೊಟ್ಟ ಹೊರತು ರಕ್ಷಣೆ ದೊರೆಯಲಾರದು. ಕರ್ಮ ಜ್ಞಾನ ಭಕ್ತಿಗಳನ್ನು ಅನುಷ್ಠಿಸಲು ಅಸಮರ್ಥನಾದ ಜೀವನು ತನ್ನನ್ನು ರಕ್ಷಿಸಬೇಕೆಂದು ಬೇಡಿ ಆ ಭಗವಂತನಲ್ಲಿ ಸಮರ್ಪಣೆ ಮಾಡಿಕೊಳ್ಳುವುದು ಆತ್ಮನಿಕ್ಷೇಪವೆನ್ನಿಸುವುದು. ಇದಕ್ಕೆ ಉಳಿದ ಐದೂ ಪರಿಕರಗಳಾಗಿವೆ.

ಈ ನಿಕ್ಷೇಪ ಸರಿಯಾಗಿ ಆಗಬೇಕಾದರೆ ಕೆಲವು ಅಂಶಗಳು ಆವಶ್ಯಕ. ಅವುಗಳಲ್ಲಿ **ಆನುಕೂಲ್ಯಸಂಕಲ್ಪ** ಮತ್ತು **ಪ್ರಾತಿಕೂಲ್ಯ ವರ್ಜನ** ಎಂಬುವು ಎರಡು ಮುಖ್ಯವಾದ ಅಂಶಗಳು. ಭಗವಂತನಿಗೇ ನಾವು ಸೇರಿದವರು ಎಂಬ ಶೇಷತ್ವಜ್ಞಾನ ನಮ್ಮಲ್ಲಿ ಉಂಟಾದುದರ ಕುರುಹು ಇದು. ನಾವು ನಮಗಾಗಿ ಇಲ್ಲ ಆ ಪರಮಾತ್ಮನಿಗಾಗಿ ಇದ್ದೇವೆ ಎಂಬ ಪಾರಾರ್ಥ್ಯಜ್ಞಾನ ಸಾಧಕನಲ್ಲಿ ಉಂಟಾಗಬೇಕು. ಆಗ ಅವನು ತಾನೂ ತನ್ನದೂ ಎಂಬುದಿಲ್ಲವೆಂಬುದನ್ನು ಮನಗಂಡು ಆ ಭಗವಂತನಿಗೆ ಅನುಕೂಲವಾಗಿ ನಡೆಯುವುದೂ ಅವನಿಗೆ ಪ್ರತಿಕೂಲವಾದುದನ್ನೂ ಬಿಡುವುದೂ ತನ್ನ ಆದ್ಯಕರ್ತವ್ಯವೆಂದು ತಿಳಿಯುವನು. ಭಗವತ್ಸಂಕಲ್ಪವನ್ನು ಬಿಟ್ಟು ಬೇರೆ ತನ್ನದೆಂಬುವುದಾವುದೂ ಇಲ್ಲವೆಂದು ತಿಳಿದು ಈ ಸಾಧಕ ಸ್ವಾರ್ಥದ ಅಂಶವನ್ನೆಲ್ಲಾ ಕಿತ್ತೊಗೆಯುವನು. ಲೋಕದಲ್ಲಿರುವ ಚೇತನಾಚೇತನ ಪದಾರ್ಥಗಳೆಲ್ಲಾ ಭಗವಂತನ ರೂಪಗಳೆಂದು ಮನಗಾಣುವ ಈ ಪ್ರಪನ್ನ ಎಲ್ಲರಿಗೂ ಅನುಕೂಲವಾಗಿ ವರ್ತಿಸುವನು.

> 'ಚರಾಚರಾಣಿ ಭೂತಾನಿ ಸರ್ವಾಣಿ ಭಗವದ್ವಪುಃ ।
> ಅತಸ್ತದಾನುಕೂಲ್ಯಂ ಮೇ ಕರ್ತವ್ಯಮಿತಿ ನಿಶ್ಚಯಃ ॥'

ಪ್ರಪತ್ತಿಗೆ ಮೂರನೆಯ ಅಂಗ ಕಾರ್ಪಣ್ಯ. ಭಗವಂತನ ದಯೆಗೆ ನಾವು ಅರ್ಹರಾಗಬೇಕಾದರೆ ಈ ಭಾವ ಅತ್ಯಂತ ಆವಶ್ಯಕ. ನಾವು ನಮ್ಮನ್ನು ಕಾಪಾಡಿಕೊಳ್ಳಲು ಅಸಮರ್ಥರೆಂಬ ಭಾವ ನಮಗೆ ಸ್ಪಷ್ಟವಾದಾಗ ನಾವು ಮತ್ತೊಬ್ಬರ ಸಹಾಯವನ್ನು ಬೇಡಲು ಅರ್ಹರಾಗುತ್ತೇವೆ. ಅಹಂಕಾರಖಂಡನೆ ಆಗಿ ತನ್ನ ಕೃಪಣತೆ ನಿಚ್ಚಳವಾಗ

acharya.org

ಬೇಕು. ಎಲ್ಲಿಯವರೆಗೆ ನಾವೇ ನಮ್ಮನ್ನು ಕಾಪಾಡಿಕೊಳ್ಳಲು ಸಮರ್ಥರೆಂದು ನಾವು ಭಾವಿಸುವೆವೋ ಅಲ್ಲಿಯವರೆಗೆ ನಾವು ಪ್ರಪತ್ತಿಗೆ ಅಧಿಕಾರಿಗಳಲ್ಲ. ಬೇರೆ ಯಾವ ಮಾರ್ಗವೂ ನಮಗೆ ತೆರೆದಿಲ್ಲವೆಂಬುದು ಸ್ಪಷ್ಟವಾದಾಗ ಇತರ ಉಪಾಯಗಳ ಗೋಜಿಗೆ ಹೋಗದೆ ನಮ್ಮ ಅಸಹಾಯಕತೆಯನ್ನರಿತು ಆ ಸರ್ವಸಮರ್ಥನ ಬಳಿ ನಾವು ಬೇಡು ವೆವು. ಇದನ್ನೇ 'ಕಾರ್ಪಣ್ಯೇನಾಪ್ಯುಪಾಯಾನಾಂ ವಿನಿವೃತ್ತಿರಿಹೇರಿತಾ' ಎಂಬಲ್ಲಿ ಕಾಣ ಬಹುದು.

ತಾನು ಅಸಮರ್ಥನೆಂಬುದನ್ನರಿತಂತೆ ತನ್ನ ರಕ್ಷಣೆಯನ್ನು ಮಾಡುವವನಿವನೆಂಬ ನಂಬಿಕೆಯೂ ಪ್ರಪತ್ತಿಗೆ ಆವಶ್ಯಕ. ಇದು 'ಮಹಾವಿಶ್ವಾಸ' ಎನ್ನಿಸುವುದು. ಈ ವಿಶ್ವಾಸ ವಿಲ್ಲದೆ ಹೋದರೆ ಪ್ರಪತ್ತಿ ಕೇವಲ ತೋರಿಕೆಯಾಗುತ್ತದೆ. ಇದರಿಂದ ಎರಡು ಅಂಶಗಳು ಸಿದ್ಧವಾಗುತ್ತವೆ. ಮೊದಲನೆಯದಾಗಿ ಯಾವ ವಿಧವಾದ ಸಂದೇಹಗಳಿಗೂ ಅವಕಾಶ ಕೊಡದೆ ಪ್ರಪತ್ತಿಯನ್ನು ಅನುಷ್ಠಿಸಲು ಸಾಧ್ಯವಾಗುತ್ತದೆ. ಎರಡನೆಯದಾಗಿ ಪ್ರಪತ್ತಿ ಮಾಡಿದ ನಂತರ ಎಲ್ಲ ಬಗೆಯಾದ ಆತಂಕವೂ ಭಯವೂ ಪರಿಹಾರವಾಗುತ್ತದೆ. ಈ ಮಹಾವಿಶ್ವಾಸ ಪ್ರಪತ್ತಿಗೆ ಅತ್ಯವಶ್ಯಕವಾದ ಅಂಶ. ಇದಿಲ್ಲದೆ ಪ್ರಪತ್ತಿ ಸಿದ್ಧಿಸುವುದಿಲ್ಲ.

ಮೇಲೆ ಹೇಳಿದ ನಾಲ್ಕು ಅಂಶಗಳಂತೆ ಗೋಪ್ತೃತ್ವವರಣವೂ ಪ್ರಪತ್ತಿಗೆ ಮುಖ್ಯವಾದ ಅಂಗವಾಗಿದೆ. ಭಗವಂತನ ರಕ್ಷಣೆಯನ್ನು ಬೇಡುವುದು ಬಹಳ ಆವಶ್ಯಕ. ಮೋಕ್ಷವನ್ನು ಪಡೆಯಲು ನಮಗೆ ಆಶೆ ಮತ್ತು ಅರ್ಹತೆಗಳಿರಬಹುವುದು. ಆದರೆ ಅದನ್ನು ಬೇಡದೆ ಅದು ಲಭಿಸುವುದಿಲ್ಲ. ಇತರ ಪುರುಷಾರ್ಥಗಳಿಗಾಗಿ ಬೇಡಿಕೆ ಸಲ್ಲಿಸುವಂತೆ ಮೋಕ್ಷಕ್ಕೂ ಬೇಡಿಕೆ ಸಲ್ಲಿಸಬೇಕು. ನಾವು ಪ್ರಾರ್ಥಿಸದೆ ಇರುವುದಾದರೆ ರಕ್ಷಣೆ ದೊರಕ ಲಾರದು.

ಈ ಐದು ಅಂಗಗಳೊಡನೆ ಮಾಡಿದ ಶರಣಾಗತಿ ಯಾವಾಗಲೂ ವಿಫಲವಾಗು ವುದಿಲ್ಲ. ಲೋಕವ್ಯವಹಾರದಲ್ಲಿಯೂ ಈ ಅಂಶಗಳು ನಮಗೆ ಗೋಚರಿಸುತ್ತವೆ. ನಾವು ನಮ್ಮಲ್ಲಿ ಸುರಕ್ಷಿತವಾಗಿ ಇಡಲಾಗದ ಅಮೂಲ್ಯವಾದ ವಸ್ತುವೊಂದನ್ನು ಮತ್ತೊಬ್ಬನಲ್ಲಿ ನ್ಯಾಸವಾಗಿಡುವಾಗ ನಾವು ಮನುಷ್ಯನಿಗೆ ಸಂತೋಷವಾಗುವಂತೆಯೂ, ಅವನಿಗೆ ವಿರೋಧವಾಗದಂತೆಯೂ ವರ್ತಿಸುತ್ತೇವೆ. ಆ ವಸ್ತುವನ್ನು ಅವನು ರಕ್ಷಿಸಿಡಬಲ್ಲನೆಂಬ ದೃಢವಾದ ನಂಬಿಕೆ ಇದ್ದರೆ ಮಾತ್ರ ಅವನಿಗೆ ಅದನ್ನೊಪ್ಪಿಸುತ್ತೇವೆ. ಆ ವಸ್ತುವನ್ನು ಕಾಪಾಡಬೇಕೆಂದು ಅವನಲ್ಲಿ ಕೇಳಿಕೊಳ್ಳುತ್ತೇವೆ. ಇದೆಲ್ಲದರೊಡನೆ ಆ ವಸ್ತುವನ್ನು ಅವನ ಕೈಯಲ್ಲಿಡುತ್ತೇವೆ. ಈ ಅಂಶಗಳೆಲ್ಲಾ ಶರಣಾಗತಿಯಲ್ಲಿಯೂ ಇರುತ್ತವೆ.

ಈ ಅಂಗಗಳು ಸಾಧಕನ ಮನೋಭಾವವನ್ನು ತೋರಿಸುತ್ತವೆ. ಭಗವಂತನ ಕಟ್ಟಳೆ ಯನ್ನು ಮೀರದಂತೆ ವರ್ತಿಸುವುದನ್ನು ಆನುಕೂಲ್ಯಸಂಕಲ್ಪ ಮತ್ತು ಪ್ರಾತಿಕೂಲ್ಯ ವರ್ಜನಗಳು ಸೂಚಿಸುತ್ತವೆ. ಬೇರೆ ಉಪಾಯ ತನಗಿಲ್ಲವೆಂಬುದರ ಸ್ಪಷ್ಟವಾದ ತಿಳಿವಳಿಕೆ

acharya.org

ಯನ್ನು ಕಾರ್ಪಣ್ಯ ತೋರುತ್ತದೆ. ಮನಃಸ್ಥೈರ್ಯವನ್ನು ಮಹಾವಿಶ್ವಾಸ ಸೂಚಿಸುತ್ತದೆ. ನಮ್ಮನ್ನು ರಕ್ಷಿಸುವುದರಲ್ಲಿ ಭಗವಂತನ ಸಂಕಲ್ಪದ ಮಹತ್ವವನ್ನು ಗೋಪ್ತೃತ್ವವರಣ ತಿಳಿಸುತ್ತದೆ. ಇವೊಂದೊಂದು ಅಂಗವೂ ಹೀಗೆ ಒಂದೊಂದು ನಿರ್ದಿಷ್ಟವಾದ ಪ್ರಯೋಜನ ವನ್ನುಂಟುಮಾಡಿ ಈ ಯೋಗ ಸಾಧ್ಯವಾಗುವಂತೆ ಮಾಡುತ್ತದೆ. ಭಗವಂತನು ಸರ್ವ ಶೇಷಿ ಎಂಬುದನ್ನೂ ತಾನು ಅವನಿಗೇ ಶೇಷಭೂತನಾದವನೆಂಬುದನ್ನೂ ಚೆನ್ನಾಗಿ ಅರಿತ ಸಾಧಕ ಹೀಗೆ ತನ್ನನ್ನೂ ತನ್ನದನ್ನೂ ಅವನ ಪದತಲದಲ್ಲಿ ಅರ್ಪಿಸುವನು. ಇದರಿಂದ ನಾವು ಅನುಷ್ಠಿಸಬೇಕಾದ ಅಂಶಗಳಾವುವೆಂದರೆ—

1) ಭಗವಂತನ ಶಾಸನವನ್ನು ಉಲ್ಲಂಘಿಸದೆ ಅವನ ಸಂಕಲ್ಪಕ್ಕನುಸಾರ ನಾವು ನಡೆಯಬೇಕು.

2) ಆ ಸರ್ವಶಕ್ತನಾದ ಭಗವಂತನನ್ನು ಬಿಟ್ಟು ನಮಗೆ ಬೇರೆ ಉಪಾಯವಿಲ್ಲ ವೆಂಬುದನ್ನು ಮನಗಾಣಬೇಕು.

3) ಆ ಪರಮಾತ್ಮನಲ್ಲಿ ಅಚಲವಾದ ವಿಶ್ವಾಸವನ್ನಿಡುವಂತಹ ಸ್ಥಿರಬುದ್ಧಿಯನ್ನು ಹೊಂದಬೇಕು.

4) ಆ ಪರಮಾತ್ಮನು ದಯಾಪೂರ್ಣನಾದ ರಕ್ಷಕನೆಂದು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಬೇಕು.

5) ಅವನಿಗೇ ನಾವು ಸೇರಿದವರೆಂಬ ಅನುಸಂಧಾನದೊಡನೆ ಆ ಭಗವಂತನಿಗೇ ನಮ್ಮ ರಕ್ಷಣೆಯ ಹೊಣೆಯನ್ನು ವಾಸ್ತವವಾಗಿ ಒಪ್ಪಿಸಬೇಕು.

ಪ್ರಪತ್ತಿ ಎಂದರೇನು ?

'ಪದ್ಲ್ ಗತೌ' ಎಂಬ ಧಾತುವಿನಿಂದ ಈ ಶಬ್ದ ಬಂದಿದೆ. ಗತ್ಯರ್ಥಕ ವಾದುದು ಜ್ಞಾನಾರ್ಥಕವೂ ಆದ ಕಾರಣ ಇದು ಅವನು ನನ್ನನ್ನು ರಕ್ಷಿಸುವನೆಂಬ ವಿಶ್ವಾಸವನ್ನು ಸೂಚಿತ್ತದೆ. ಈ ವಿಶ್ವಾಸ ಅಚಲವೂ ದೃಢವೂ ಆದುದೆಂಬುದನ್ನು 'ಪ್ರ' ಎಂಬ ಉಪಸರ್ಗ ಸೂಚಿಸುತ್ತದೆ. 'ಪ್ರಪತ್ತಿರ್ವಿಶ್ವಾಸಃ' ಎಂದು ಆ ಕಾರಣದಿಂದಲೇ ಹೇಳಿದೆ. ಇದನ್ನು ದೇಶಿಕರವರು—

'ಅಭೀಷ್ಟೇ ದುಸ್ಸಾಧೇ ಸ್ವತ ಇತರತೋ ವಾ ಕ್ವಚನ ತತ್
ಭರನ್ಯಾಸಂ ಯಾಚ್ಞಾನ್ವಿತಮಭಿವಂದತಿ ಪ್ರಪದನಮ್ ।
ಇತಃ ಪಶ್ಚಾದಸ್ಮದ್ಯತನನಿರಪೇಕ್ಷೇಣ ಭವತಾ
ಸಮರ್ಥೋಽಸಾವರ್ಥಸ್ತ್ವಿತಿ ಮತಿವಿಶೇಷಂ ತದವಿದುಃ ॥

ಎಂದು ಇದನ್ನು ನಿರೂಪಿಸಿದ್ದಾರೆ. ನಮಗೆ ಬೇಕಾಗಿರುವ ಅಭೀಷ್ಟವನ್ನು ನಮ್ಮಿಂದಲಾ ಗಲೀ ಇತರರ ಸಹಾಯದಿಂದಾಗಲೀ ಸಾಧಿಸುವುದಕ್ಕಾಗದೇ ಹೋದಾಗ ಅವನ್ನು

acharya.org

ಸಾಧಿಸಿಕೊಡಬಲ್ಲ ಸಮರ್ಥನಲ್ಲಿ ಅದನ್ನು ದೊರಕಿಸಿಕೊಡಬೇಕೆಂದು ಬೇಡುತ್ತಾ ಅದರ ಹೊಣೆಯನ್ನು ಒಪ್ಪಿಸುವುದು ಪ್ರಪದನ ಎನ್ನಿಸುವುದು. ಇಲ್ಲಿಂದ ಮುಂದೆ ನಮ್ಮ ಪ್ರಯತ್ನಲೇಶವೂ ಇಲ್ಲದೆ ನಿನ್ನಿಂದಲೇ ಈ ಅಭೀಷ್ಟವು ಸಾಧಿಸಲ್ಪಡಬೇಕೆಂಬ 'ಮತಿ ವಿಶೇಷ' ಇದು. ಯಾರಲ್ಲಿ ಶರಣಾಗತಿ ಮಾಡಲಾಗುವುದೋ ಅವರಿಂದಲೇ ಆ ಫಲ ದೊರಕುವುದೆಂಬ ವಿಶ್ವಾಸರೂಪವಾದುದು ಇದು. ಪ್ರತಿಯೊಬ್ಬರೂ ಈ ಉಪಾಯವನ್ನನುಷ್ಠಿಸ ಬಹುದು. ಇದರಿಂದ ಸರ್ವವಿಧವಾದ ಫಲಗಳನ್ನೂ ಪಡೆಯಬಹುದು. ಭಗವಂತನ ಅಡಿದಾವರೆಗಳಲ್ಲಿ ಈ ಉಪಾಯವನ್ನನುಷ್ಠಿಸಿ ಮುಕ್ತಿಯನ್ನು ಪಡೆಯಬಹುದೆಂದು ಶಾಸ್ತ್ರಗಳು ವಿಧಿಸುತ್ತವೆ.

ಇದಕ್ಕೆ 'ಷಡಂಗಯೋಗ' ವೆಂದು ಹೆಸರು. ಐದು ಅಂಗಗಳೊಡನೆ ಕೂಡಿದ ಉಪಾಯ ಇದು. ಅಷ್ಟಾಂಗಯೋಗದಲ್ಲಿ ಸಮಾಧಿಯು ಮುಖ್ಯವಾದ ಅಂಶವಾಗಿ ಉಳಿದ ಏಳು ಅಂಶಗಳು ಅಂಗವಾಗಿದ್ದರೂ ಅದನ್ನು ಅಷ್ಟಾಂಗಯೋಗವೆಂದು ಕರೆಯುವಂತೆ ಇಲ್ಲಿ 'ಆತ್ಮನಿವೇದನ' ಅಂಗಿಯಾಗಿ ಇತರ ಐದು ಅಂಶಗಳು ಅಂಗವಾಗಿರುವುದರಿಂದ ಇದನ್ನು 'ಷಡಂಗಯೋಗ' ವೆಂದು ಕರೆಯುತ್ತಾರೆ. ಇವುಗಳಲ್ಲಿ 'ಆತ್ಮನಿಕ್ಷೇಪ', 'ಆತ್ಮನಿವೇದನ' ಅಥವಾ 'ಆತ್ಮಸಮರ್ಪಣ' ಪ್ರಧಾನವಾದ ಅಂಶ. ಇದಕ್ಕೆ ಆನುಕೂಲ್ಯ ಸಂಕಲ್ಪವೇ ಮೊದಲಾದ ಅಂಶಗಳು ಅಂಗಗಳು. ಈ ಪ್ರಪತ್ತಿಯೂ ಸಾಧ್ಯೋಪಾಯ. ಇದರಿಂದ ಸುಪ್ರಸನ್ನನಾದ ಭಗವಂತನು ಕೋರಿದ ಫಲವನ್ನು ಕೊಡುತ್ತಾನೆ. ಈ ಪ್ರಪತ್ತಿಯನ್ನನುಷ್ಠಿಸುವುದರಲ್ಲಿಯೂ 'ನಾನು' 'ನನ್ನದು' ಎಂಬ ರೀತಿಯ ಅಹಂಕಾರಕ್ಕೆ ಅವಕಾಶವೇ ಇಲ್ಲ. ಲೋಕದಲ್ಲಿರುವ ಸಮಸ್ತ ಚೇತನಾಚೇತನ ಪದಾರ್ಥಗಳೂ ಆ ಪರಮಾತ್ಮನಿಗೇ ಸೇರಿದವು. ನಾವು ನಮ್ಮದು ಎಂಬುವುದೆಲ್ಲಾ ಅವನದೇ. ಇವುಗಳು ನಮ್ಮವೆಂದು ನಾವು ತಿಳಿದಿರುವುದಕ್ಕೆ ಅನಾದಿಯಾದ ಅವಿದ್ಯೆಯು ಕಾರಣ. ನಾವು ಹೀಗೆ ಆತ್ಮಾಪಹಾರರಸಿಕರು. ನಮ್ಮ ನಿಜಸ್ವರೂಪ ನಮಗೆ ಚೆನ್ನಾಗಿ ಅರಿವಾದಾಗ ಅಹಂಕಾರ ಮಮಕಾರಗಳನ್ನು ಕಿತ್ತೊಗೆದು ಸರ್ವಶೇಷಿಯೂ ಸರ್ವಸ್ವಾಮಿಯೂ ಆದ ಅವನ ಪದತಲದಲ್ಲಿ ನಮ್ಮನ್ನೂ ನಮ್ಮದನ್ನೂ ಅನನ್ಯಭಾವದಿಂದ ಅರ್ಪಿಸಿಬಿಡುತ್ತೇವೆ. ಇದೇ ಶರಣಾಗತಿಯ ತಿರುಳು.

ಪ್ರಪದನವೆಂಬುವುದು ಭಗವಂತನಿಗೆ ನಾವು ಶೇಷಭೂತರಾಗಿದ್ದೇವೆಂಬುದನ್ನು ವಿಶೇಷವಾಗಿ ಅನುಸಂಧಾನ ಮಾಡುತ್ತಾ ಅವನಲ್ಲಿ ನಮ್ಮ ರಕ್ಷಣೆಯ ಭಾರವನ್ನು ವಹಿಸುವುದಾಗಿದೆ. ಈ ರಕ್ಷಣೆಯ ಫಲವೂ ಅವನಿಗೇ ಸೇರಿದುದೆಂಬ ಅನುಸಂಧಾನ ಇಲ್ಲಿರುವುದು. ಈ ಅನುಸಂಧಾನದಲ್ಲಿ ಮೂರು ಮುಖ್ಯವಾದ ಅಂಶಗಳಿವೆ—

೧) ಸ್ವರೂಪ ಸಮರ್ಪಣ.

೨) ಭರ ಸಮರ್ಪಣ

acharya.org

೩) ಫಲ ಸಮರ್ಪಣ.

ಶಾಸ್ತ್ರಗಳಲ್ಲಿ ಆತ್ಮಸ್ವರೂಪದ ನಿರೂಪಣೆ ಸ್ಪಷ್ಟವಾಗಿ ಮೂಡಿದೆ. 'ಆತ್ಮಾಪಿ ಚಾಯಂ ನ ಮಮ' ಎಂದೂ 'ಯಸ್ಯಾತ್ಮಾ ಶರೀರಂ' ಎಂದೂ ನಿರೂಪಿಸಿ ಸಕಲ ಚೇತನಾ ಚೇತನ ಪದಾರ್ಥಗಳೂ ಆ ಸರ್ವಾಂತರ್ಯಾಮಿಯಾದ ಪರಮಾತ್ಮನಿಗೆ ಶರೀರವಾಗಿವೆ ಎಂದು ಶಾಸ್ತ್ರಗಳು ತಿಳಿಸುತ್ತವೆ. ಸಕಲ ಪದಾರ್ಥಗಳಿಗೂ ಭಗವಂತನು ಧಾರಕ, ನಿಯಾಮಕ ಮತ್ತು ಶೇಷಿಯಾಗಿದ್ದಾನೆ. 'ಪತಿಂ ವಿಶ್ವಸ್ಯಾತ್ಮೇಶ್ವರಂ' ಎಂಬಲ್ಲಿ ಈ ತತ್ತ್ವ ಕಂಡುಬರುತ್ತದೆ. ಆದುದರಿಂದ ನಾವು ಸ್ವತಂತ್ರರೆಂಬ ಭ್ರಮೆಯನ್ನು ಬಿಡಬೇಕಾದುದು ಅತ್ಯಾವಶ್ಯಕ. ಅಹಂಕಾರವನ್ನು ಆದ್ದರಿಂದಲೇ ನಾವು ಕಿತ್ತೊಗೆಯಬೇಕು. ಅವನದಾದ ಆತ್ಮವಸ್ತುವನ್ನು ಅವನಿಗೇ ಒಪ್ಪಿಸಬೇಕು. ತಾನೂ ತನ್ನದೂ ಅವನದೇ ಎಂಬ ಅನುಸಂಧಾನ ಪ್ರಪತ್ತಿಯಲ್ಲಿರಬೇಕು. ಇದನ್ನೇ 'ಆತ್ಮಾತ್ಮೀಯಭರನ್ಯಾಸೋ ಹ್ಯಾತ್ಮ-ನಿಕ್ಷೇಪ ಉಚ್ಯತೇ' ಎಂದು ತಿಳಿಸಿದೆ. ಇದು ಸ್ವರೂಪ ಸಮರ್ಪಣವೆನ್ನಿಸುವುದು.

ಶರಣಾಗತಿಯಲ್ಲಿ ಮುಖ್ಯವಾದ ಅಂಶ **ಭರಸಮರ್ಪಣ.** ತನ್ನನ್ನು ತಾನು ರಕ್ಷಿಸಿಕೊಳ್ಳಲಾರನೆಂಬುದನ್ನು ಮನಗಂಡ ಸಾಧಕ ತನ್ನನ್ನು ರಕ್ಷಿಸುವ ಭಾರವನ್ನು ಆ ಭಗವಂತನಲ್ಲಿಡುವನು. ಪ್ರಾಪ್ಯನಾದ ಆ ದೇವನೇ ಪ್ರಾಪಕನೂ ಆಗಿದ್ದಾನೆ. ನಮ್ಮನ್ನೂ ನಮ್ಮದನ್ನೂ ರಕ್ಷಿಸುವ ಶಕ್ತಿ ಅವನಿಗಲ್ಲದೆ ಮತ್ತಾರಿಗೂ ಇಲ್ಲ. ಭಕ್ತಿಯೋಗದಲ್ಲಿ ಸ್ವಪ್ರಯತ್ನವಿದೆ. ಆ ಪ್ರಯತ್ನವನ್ನು ಸಫಲಗೊಳಿಸಲು, ದೃಢಪಡಿಸಲು, ಭಗವಂತನಲ್ಲಿ ಬೇಡಿಕೆಯನ್ನು ಸಲ್ಲಿಸಲಾಗುವುದು. ಪ್ರಪನ್ನನಾದರೋ ತನ್ನ ಪ್ರಯತ್ನವನ್ನು ಬಿಟ್ಟುಕೊಟ್ಟು ಭಗವಂತನೇ ತನ್ನ ರಕ್ಷಣೆಯನ್ನು ಸಾಧಿಸಬೇಕೆಂದು ಬೇಡುತ್ತಾನೆ. ಸರ್ವಶಕ್ತನೂ ದಯಾಮಯನೂ ಆದ ಅವನಲ್ಲಿ ಮಹಾ ವಿಶ್ವಾಸವಿಟ್ಟು ತನ್ನ ರಕ್ಷಣೆಯ ಹೊಣೆಯನ್ನು ಅವನ ಮೇಲೆ ಹಾಕುತ್ತಾನೆ ಪ್ರಪನ್ನ. ಇದು ಭರಸಮರ್ಪಣವೆನಿಸುವುದು.

ಪ್ರಪತ್ತಿಯ ಮತ್ತೊಂದು ಮುಖ್ಯಾಂಶವೆಂದರೆ ಫಲಸಮರ್ಪಣ. ತನ್ನನ್ನು ರಕ್ಷಿಸಿದುದರಿಂದ ಬರುವ ಪ್ರಯೋಜನ ಭಗವಂತನದೇ ವಿನಾ ತನ್ನದಲ್ಲವೆಂದು ಸಾಧಕ ಮನಗಾಣಬೇಕು. ಭಗವಂತನಿಗೇ ಶೇಷಭೂತನಾದ ತಾನು ಆ ಸರ್ವೇಶ್ವರನ ಸಂತೋಷಕ್ಕಾಗಿಯೇ ಇರುವವನು. ತಾನು ತನಗೆ ಸೇರಿದವನಲ್ಲ. ತನ್ನದೆಂಬುವುದೊಂದೂ ತನಗಿಲ್ಲ. ತಾನು ಭಗವಂತನಿಗೇ ಸೇರಿದವನು. ಆದುದರಿಂದ ತನ್ನ ಲಾಭವೆಂಬುದು ಭಗವಂತನ ಲಾಭವೇ. ತಾನು ಯಾವುದನ್ನೂ ಪಡೆಯಲಿಚ್ಛಿಸುವುದಿಲ್ಲ ಇಂಥ ತತ್ತ್ವಜ್ಞ. ಫಲದಲ್ಲಿ ಇವನಿಗೆ ಸ್ವಾಮ್ಯವಿಲ್ಲ. ಆದುದರಿಂದ ಈ ರಕ್ಷಣೆಯ ಫಲ ಆ ಭಗವಂತನದೇ ಎಂದು ಅನುಸಂಧಾನ ಮಾಡಬೇಕು. ಈ ಅಂಶಗಳನ್ನೆಲ್ಲಾ ವೇದಾಂತದೇಶಿಕರು ನ್ಯಾಸದಶಕದಲ್ಲಿ ಅತ್ಯಂತ ಪ್ರಭಾವಪೂರ್ಣವಾಗಿ—

acharya.org

'ಅಹಂ ಮದ್ರಕ್ಷಣಭರೋ ಮದ್ರಕ್ಷಣಫಲಂ ತಥಾ ।
ನ ಮಮ ಶ್ರೀಪತೇರೇವೇತ್ಯಾತ್ಮಾನಂ ನಿಕ್ಷಿಪೇದ್ಬುಧಃ ॥
ಸ್ವಾಮಿನ್ ಸ್ವಶೇಷಂ ಸ್ವವಶಂ ಸ್ವಭರತ್ವೇನ ನಿರ್ಭರಂ ।
ಸ್ವದತ್ತಸ್ವಧಿಯಾ ಸ್ವಾರ್ಥಂ ಸ್ವಸ್ಮಿನ್ನ್ಯಸ್ಯತಿ ಮಾಂ ಸ್ವಯಂ ॥'

ಎಂದು ತಿಳಿಸಿದ್ದಾರೆ.

ಇಲ್ಲಿ ಬರುವ **'ಅಹಂ, ನ ಮಮ'** ಮತ್ತು **ಸ್ವಶೇಷಂ'** ಎಂಬ ಮಾತುಗಳು ಜೀವನ ಶೇಷತ್ವವನ್ನು ನಿರೂಪಿಸಿ ಸ್ವರೂಪಸಮರ್ಪಣಪರವಾಗಿವೆ. 'ಮದ್ರಕ್ಷಣಭರೋ ನ ಮಮ', 'ಸ್ವಭರತ್ವೇನ ನಿರ್ಭರಂ' ಎಂಬ ಮಾತುಗಳು ನಮ್ಮ ರಕ್ಷಣೆಯ ಭಾರ ಅವನದೇ ಎಂಬುದನ್ನು ಸ್ಥಾಪಿಸುತ್ತವೆ. ಭರಸಮರ್ಪಣವನ್ನು ಇವು ಸೂಚಿಸುತ್ತವೆ. 'ಮದ್ರ-ಕ್ಷಣಫಲಂ ತಥಾ ನ ಮಮ' ಎಂಬುವು ಫಲಸಮರ್ಪಣವನ್ನು ಹೇಳುತ್ತವೆ. ಈ ರಕ್ಷಣೆಯ ಫಲವೂ ಅವನದೇ ಎಂಬುದನ್ನು ಇದು ಸಮರ್ಥಿಸುತ್ತದೆ. ಮೋಕ್ಷವನ್ನಪೇಕ್ಷಿಸಿ ಪ್ರಪತ್ತಿ ಮಾಡುವಲ್ಲಿ ಈ ಮೂರು ಅಂಶಗಳೂ ಇರುತ್ತವೆ. ಇತರ ಪ್ರಯೋಜನಗಳಿಗಾಗಿ ಶರಣಾಗತಿ ಮಾಡುವಾಗ **ರಕ್ಷಾಭರನ್ಯಾಸ** ಇರುತ್ತದೆ. ಆದರೆ ಫಲಸಮರ್ಪಣವಿರುವುದಿಲ್ಲ. ಮೋಕ್ಷವನ್ನಪೇಕ್ಷಿಸಿ ಭಕ್ತಿಯೋಗವನ್ನನುಷ್ಠಿಸುವವರೂ, ಪ್ರಪತ್ತಿಯನ್ನನುಷ್ಠಿಸುವವರೂ ಭೇದವಿಲ್ಲದೆ ಸ್ವರೂಪತ್ಯಾಗವನ್ನೂ, ಫಲತ್ಯಾಗವನ್ನೂ ಅನುಸಂಧಾನ ಮಾಡುತ್ತಾರೆ. ಭಕ್ತಿಯೋಗಿ ಭರಸಮರ್ಪಣವನ್ನನುಷ್ಠಿಸುವುದಿಲ್ಲ. ಆದರೆ ತಾನು ಆರಿಸಿಕೊಂಡಿರುವ ಭಕ್ತಿಯೋಗದ ನಿರ್ವಾಹಕ್ಕಾಗಿಯೂ ಸಾಫಲ್ಯಕ್ಕಾಗಿಯೂ ಭಗವಂತನಲ್ಲಿ ಅಂಗಪ್ರಪತ್ತಿಯನ್ನು ಅನುಷ್ಠಿಸುತ್ತಾನೆ. ಭಕ್ತಿಯೋಗಿಗೂ ಪ್ರಪನ್ನರಿಗೂ ಇಲ್ಲಿ ವ್ಯತ್ಯಾಸವಿದೆ. ಈ ಅಂಶವನ್ನು ದೇಶಿಕರು ತಮ್ಮ ರಹಸ್ಯತ್ರಯಸಾರದಲ್ಲಿ—

'ಮುಮುಕ್ಷುಮಾತ್ರಸಾಮಾನ್ಯಂ ಸ್ವರೂಪಾದಿಸಮರ್ಪಣಮ್ ।
ಅಕಿಂಚನೇ ಭರನ್ಯಾಸಸ್ತ್ವಧಿಕೋಽಂಗಿತಯಾ ಸ್ಥಿತಃ ॥
ಅತ್ರ ಕ್ಷಾಭರನ್ಯಾಸಸ್ಸಮಃ ಸರ್ವಫಲಾರ್ಥಿನಾಂ ।
ಸ್ವರೂಪಫಲನಿಕ್ಷೇಪಸ್ತ್ವಧಿಕೋ ಮೋಕ್ಷಕಾಂಕ್ಷಿಣಾಮ್ ॥'

ಎಂದು ವಿವರಿಸಿದ್ದಾರೆ.

ದ್ವಯಮಂತ್ರದಲ್ಲಿನ 'ಶರಣಂ ಪ್ರಪದ್ಯೇ' ಎಂಬ ಕ್ರಿಯಾಪದ ಮಹಾವಿಶ್ವಾಸದೊಡನೆ ರಕ್ಷಣೆ ಬೇಡುವುದನ್ನು ಸೂಚಿಸುತ್ತದೆ. ಹಾಗೆಯೇ ಇದು ನಾವು ಆ ಭಗವಂತನಿಗೆ ಶೇಷಭೂತರೆಂಬುವುದನ್ನೂ ನಮ್ಮ ರಕ್ಷಣೆಯ ಭಾರವನ್ನು ಅವನಲ್ಲಿ ಅರ್ಪಿಸಬೇಕೆಂಬುವುದನ್ನೂ ತಿಳಿಸುತ್ತದೆ. ಇದು ಅಂಗಗಳೊಡನೆ ಕೂಡಿದ ಆತ್ಮಸಮರ್ಪಣವನ್ನು ವಿಧಿಸುತ್ತದೆ.

ಪ್ರಪತ್ತಿಯ ಅನುಷ್ಠಾನವೆಂತಾಗಬೇಕೆಂಬುದನ್ನು ಶಾಸ್ತ್ರಗಳು ವಿಧಿಸಿವೆ. ಕರ್ತೃತ್ವ

acharya.org

ತ್ಯಾಗ, ಮಮತಾತ್ಯಾಗ, ಫಲತ್ಯಾಗ, ಮತ್ತು ಫಲೋಪಾಯತ್ಯಾಗಪೂರ್ವಕವಾಗಿ ಆನುಕೂಲ್ಯಸಂಕಲ್ಪವೇ ಮೊದಲಾದ ಐದು ಅಂಗಗಳನ್ನೂ ಅನುಸಂಧಾನ ಮಾಡುತ್ತಾ ಸ್ವರೂಪಸಮರ್ಪಣ ಮತ್ತು ಫಲಸಮರ್ಪಣಗಳೊಡನೆ ಆತ್ಮರಕ್ಷಾಭರದ ಸಮರ್ಪಣ ವನ್ನು ಆ ಸರ್ವೇಶ್ವರನಲ್ಲಿ ಮಾಡಬೇಕು. ಇದು ಮೋಕ್ಷಾರ್ಥಿಯಾದವನು ಸಾಂಗಾ ನುಷ್ಠಾನ ಮಾಡುವ ಬಗೆ.

ಭಗವದೇಕಶೇಷತ್ವಜ್ಞಾನ ನಮ್ಮಲ್ಲಿ ಮೂಡಬೇಕು. ಆಗ ನಾವು ಕರ್ತೃತ್ವಾಭಿ ಮಾನವನ್ನು ಬಿಡುತ್ತೇವೆ. ದಯಮಯನಾದ ಆ ಭಗವಂತನಿಂದ ದತ್ತವಾದುದು ಈ ಕರ್ತೃತ್ವ. ಅವನೇ ಪರಮಕರ್ತಾ. ಹಾಗೆಯೇ ಅವನೇ ಪರಮಭೋಕ್ತಾ. ಆದ್ದರಿಂದ ಫಲದಲ್ಲಿಯೂ ನಮಗೆ ಅಭಿಮಾನ ಹೋಗಬೇಕು. ನಮ್ಮದು ಇದು, ನಾವು ಇದನ್ನು ಅವನಿಗೆ ಕೊಡುತ್ತಿದ್ದೇವೆ ಎಂಬಂಥ 'ಮಮತಾ' ಬುದ್ಧಿಯೂ ಹೋಗಬೇಕು. ನಾವು ಅನುಷ್ಠಿಸುವ ಪ್ರಪತ್ತಿಯು ಫಲಪ್ರಾಪ್ತಿಗೆ ಉಪಾಯವೆಂಬ ಬುದ್ಧಿಯೂ ಅಳಿಯಬೇಕು. ಏಕೆಂದರೆ ಫಲಪ್ರಾಪ್ತಿಗೆ ಸಿದ್ಧೋಪಾಯನಾದ ಆ ಭಗವಂತನೇ ಉಪಾಯ. ಈ ಪ್ರಪ ತ್ತಿಯೇ ಫಲಕೊಡಲಾರದು. ಇದರಿಂದ ಪ್ರೀತನಾದ ಭಗವಂತನೇ ಫಲಪ್ರದ. ಆದುದ ರಿಂದ ಅವನೇ ಫಲೋಪಾಯ. ಈ ಅನುಸಂಧಾನ ಪ್ರಪತ್ತಿ ಮಾಡುವುದಕ್ಕೆ ಆವಶ್ಯಕ. ಪ್ರಪತ್ತಿಯನ್ನನುಷ್ಠಿಸುವಾಗ ಸರ್ವಶಕ್ತನೂ, ಸರ್ವೋಪಕಾರಕನೂ ಆದ ಭಗವಂತನ ದಯಾಮಯತ್ವವನ್ನು ನೆನೆಯುತ್ತಾ ಸಹಜಸುಹೃತ್ತಾದ ಅವನು ಬೇರೆ ಯಾವ ಗತಿಯೂ ಇಲ್ಲದ ಅಸಹಾಯರಿಗೆ ಅವರವರ ಅಭೀಷ್ಟವನ್ನು ದೊರಕಿಸಿಕೊಡುವ ಉಪಾಯನಾಗಿದ್ದಾನೆ ಎಂಬುವುದನ್ನು ದೃಢವಾಗಿ ಅನುಸಂಧಾನ ಮಾಡಬೇಕು.

ನಡಾದೂರಮ್ಮಾಳ್ ಅವರು ಈ ಸಾಂಗಾನುಷ್ಠಾನ ಕ್ರಮವನ್ನು ಕೆಳಗೆ ಕಂಡಂತೆ ತಿಳಿಸಿದ್ದಾರೆಂದು ದೇಶಿಕರವರು ನಿರೂಪಿಸಿದ್ದಾರೆ. "ಅನಾದಿಕಾಲದಿಂದ ತಮಗೆ ಅನಿಷ್ಟಾ ಚರಣೆ ಮಾಡಿ ನಾನು ಸಂಸಾರದಲ್ಲಿ ಬಿದ್ದು ಹೋಗಿದ್ದೇನೆ. ಇದು ಮೊದಲಾಗಿ ತಮಗೆ ಅನುಕೂಲನಾಗಿಯೇ ನಾನು ನಡೆದುಕೊಳ್ಳುತ್ತೇನೆ. ತಮಗೆ ಪ್ರತಿಕೂಲಾಚರಣೆಯನ್ನು ಎಳ್ಳಷ್ಟೂ ಮಾಡುವುದಿಲ್ಲ. ತಮ್ಮನ್ನು ಪಡೆದುಕೊಳ್ಳಲು ನನ್ನ ಕೈಯಲ್ಲಿ ಯಾವ ಉಪಾಯವೂ ಶಕ್ಯವಿಲ್ಲ. ತಮ್ಮನ್ನೇ ಇದಕ್ಕೆ ಉಪಾಯವೆಂದು ನಾನು ತಿಳಿದುಕೊಂಡಿ ದ್ದೇನೆ. ತಾವೇ ನನ್ನ ಅಭೀಷ್ಟಪ್ರಾಪ್ತಿಗೆ ಉಪಾಯವಾಗಬೇಕು. ಅನಿಷ್ಟನಿವೃತ್ತಿ ಗಾಗಲೀ ಇಷ್ಟಪ್ರಾಪ್ತಿಗಾಗಲೀ ಇನ್ನು ನನಗೆ ಯಾವ ಹೊಣೆಯೂ ಇಲ್ಲ."

ಇಲ್ಲಿ ಆನುಕೂಲ್ಯಸಂಕಲ್ಪ ಮೊದಲಾದವು ಉಪಾಯಕ್ಕೆ ಪರಿಕರಗಳಾಗಿರುವುವು. ತತ್ಕಾಲದಲ್ಲಿ ಇರುವುವು ಇವು. ಮುಂದೆ ಅನುಕೂಲವೃತ್ತಿಯೇ ಮೊದಲಾದವು ಈ ಉಪಾಯದ ಫಲವಾಗಿ ಎಂದೆಂದೂ ಇರತಕ್ಕದ್ದಾಗಿದೆ. ಪ್ರಾತಿಕೂಲ್ಯವರ್ಜನವೂ ಹೀಗೆಯೇ. ಪ್ರಪತ್ತಿಯನ್ನು ಮಾಡುವ ಕಾಲದಲ್ಲಿ ಅದು ಸಂಕಲ್ಪರೂಪವಾಗಿ ಅಂಗವಾಗಿರು

acharya.org

ತ್ತದೆ. ಮುಂದೆ ಅದು ಫಲರೂಪವಾಗಿರುತ್ತದೆ. ಹೀಗೆಯೇ ಮಹಾ ವಿಶ್ವಾಸವೂ ಸಹ. ಇದನ್ನೇ ದೇಶಿಕರವರು ಹೀಗೆ ಹೇಳಿದ್ದಾರೆ—

'ಪ್ರವೃತ್ತಿರನುಕೂಲೇಷು ನಿವೃತ್ತಿಶ್ಚ ಅನ್ಯತಃ ಫಲಮ್ ।
ಪ್ರಾರಬ್ಧ ಸುಕೃತಾಚ್ಚ ಸ್ಯಾತ್ ಸಂಕಲ್ಪೇ ಚ ಪ್ರಪತ್ತಿತಃ ॥'

ಪ್ರಪತ್ತಿ ಮಾಡುವ ಕಾಲದಲ್ಲಿ ಮಾಡುವ ಆನುಕೂಲ್ಯ ಸಂಕಲ್ಪ ಹಾಗೂ ಪ್ರಾತಿಕೂಲ್ಯ ವರ್ಜನಸಂಕಲ್ಪ ಪ್ರಪತ್ತ್ಯನಂತರದ ಕಾಲದಲ್ಲಿ ಅನುಕೂಲವೃತ್ತಿ ಮತ್ತು ಪ್ರತಿಕೂಲನಿವೃತ್ತಿ ಯಾಗಿ ಪರಿಣಮಿಸುವುದು. ಇರುವವರೆಗೆ ಅಪರಾಧ ಸಂಭವಿಸದೇ ಇರಬೇಕೆಂದು ಬೇಡುತ್ತಾ ಶರೀರಾವಸಾನದಲ್ಲಿ ಮೋಕ್ಷವನ್ನು ಬೇಡಿ ಪ್ರಪತ್ತಿಯನ್ನನುಷ್ಠಿಸಬೇಕು.

'ನಿಷಿದ್ಧ ಕಾಮ್ಯರಹಿತಂ ಕುರು ಮಾಂ ನಿತ್ಯಕಿಂಕರಂ'

ಎಂಬ ಸೂಕ್ತಿಯಲ್ಲಿಯೂ 'ನಿತ್ಯಂ ನಿರಪರಾಧೇಷು ಕೈಂಕರ್ಯೇಷು ನಿಯುಂಕ್ಷ್ವ ಮಾಂ' ಎಂಬಲ್ಲಿಯೂ ಈ ಅಂಶವನ್ನು ಕಾಣಬಹುದು.

ಪ್ರಪತ್ತಿಯನ್ನು ಒಂದೇ ಸಲ ಮಾಡಬೇಕು

ಒಂದು ಪ್ರಯೋಜನದ ಪ್ರಾಪ್ತಿಗಾಗಿ ಒಮ್ಮೆ ಮಾತ್ರ ಪ್ರಪತ್ತಿ ಮಾಡಬೇಕು. ದೃಢವಾದ ಬಿಲ್ಲುಗಾರನ ವ್ಯಾಪಾರಕ್ಕೆ ಇದನ್ನು ಹೋಲಿಸಿದೆ—

'ಪ್ರಣವೋ ಧನುಶ್ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥

ಎಂಬ ಶ್ರುತಿವಾಕ್ಯ ಇದನ್ನು ನಿರೂಪಿಸುತ್ತದೆ. ಓಂಕಾರವೇ ಬಿಲ್ಲು. ಆತ್ಮವೇ ಬಾಣ. ಬ್ರಹ್ಮವಸ್ತುವೇ ಗುರಿ. ಗುರಿಯನ್ನದು ಮುಟ್ಟುವಂತೆ ಸಾವಧಾನದಿಂದ ಬಾಣಪ್ರಯೋಗ ಮಾಡಬೇಕು. ಈ ವ್ಯಾಪಾರದಲ್ಲಿ ತನ್ಮಯರಾಗಬೇಕು. ಆತ್ಮವಸ್ತುವನ್ನು ಪರಮಾತ್ಮ ನಲ್ಲಿ ಹೇಗೆ ಅರ್ಪಿಸಬೇಕೆಂಬ ವಿಧಾನವಿಲ್ಲಿ ವಿವರಿಸಿದೆ. ಬಿಲ್ಲುಗಾರನು ಹೇಗೆ ಬಾಣವನ್ನು ಗುರಿಮುಟ್ಟುವಂತೆ ತನ್ಮಯನಾಗಿ ಪ್ರಯೋಗಿಸುವನೋ ಹಾಗೆಯೇ ಆತ್ಮವಸ್ತುವನ್ನು ನಿಷ್ಠೆಯಿಂದ ಆ ಭಗವಂತನಲ್ಲಿ ಒಪ್ಪಿಸಬೇಕು. ಸಾವಧಾನ ತಪ್ಪಿದರೆ ಶರವು ಗುರಿಯನ್ನು ಮುಟ್ಟದು. ಶರವು ಗುರಿಯನ್ನು ಮುಟ್ಟಿದ ಮೇಲೆ ಮತ್ತು ಅದನ್ನು ಕಿತ್ತು ಪ್ರಯೋಗಿಸ ಬೇಕಾದುದಿಲ್ಲ. ಒಮ್ಮೆಯೇ ಆಗತಕ್ಕದು ಈ ಶರಪ್ರಯೋಗ. ಹಾಗೆಯೇ ಪ್ರಪತ್ತಿಯೂ ಸಹ ಒಂದು ಪ್ರಯೋಜನಕ್ಕಾಗಿ ಒಮ್ಮೆ ತಾನೇ ಆಗತಕ್ಕದ್ದು. ಈ ಫಲಕ್ಕಾಗಿ ಮತ್ತೊಮ್ಮೆ ಪ್ರಪತ್ತಿಯನ್ನನುಷ್ಠಿಸುವುದೆಂದರೆ ಅವನಿಗೆ ಮಹಾವಿಶ್ವಾಸವಿಲ್ಲವೆಂದಾಗು ವುದು. ಮತ್ತೊಂದು ಅಭೀಷ್ಟದ ಪ್ರಾಪ್ತಿಗಾಗಿ ಸಾಧಕ ಭಗವಂತನಲ್ಲಿ ಪ್ರಪತ್ತಿ ಮಾಡು ವುದಕ್ಕೆ ಅಡ್ಡಿ ಯಾವುದೂ ಇಲ್ಲ. ಬೇರೆ ಬೇರೆ ಉದ್ದೇಶಗಳಿಗಾಗಿ ಬೇರೆ ಬೇರೆಯಾಗಿ ಶರಣಾಗತಿ ಮಾಡಬಹುದು. ಆದರೆ ಒಂದೇ ಉದ್ದೇಶಕ್ಕಾಗಿ ಎರಡು ಬಾರಿ ಪ್ರಪತ್ತಿ

acharya.org

ಮಾಡಬಾರದು. ಮೋಕ್ಷಕ್ಕಾಗಿ ಜೀವಮಾನದಲ್ಲಿ ಒಮ್ಮೆ ಮಾತ್ರ ಪ್ರಪತ್ತಿ ಮಾಡಬೇಕು. ಪ್ರಪತ್ತಿಯನ್ನು ಮಾಡಿದ ನಂತರ ತನಗೂ ತಿಳಿಯದೆಯೇ ಸಂಭವಿಸಿದ ಅಪರಾಧಗಳ ಪರಿಹಾರಕ್ಕಾಗಿ ಪ್ರಾಯಶ್ಚಿತ್ತ ಪ್ರಪದನವನ್ನು ಮಾಡಬಹುದು. ಈ ಎರಡನೇ ಪ್ರಪತ್ತಿ ಮೋಕ್ಷಕ್ಕಾಗಿ ಮಾಡತಕ್ಕದ್ದಲ್ಲ. ಆದರೆ ಅಪರಾಧಪರಿಹಾರಕ್ಕಾಗಿ ಮಾಡಬೇಕಾದದ್ದು ಇದು. ಮೊದಲೇ ಪ್ರಪತ್ತಿ ಮಾಡುವಾಗ ಮುಂದೆ ಅಪರಾಧಗಳುಂಟಾಗದಿರಲೆಂದು ಬೇಡಿ ಪ್ರಪತ್ತಿ ಮಾಡಿದ್ದಾದರೆ ಅಪರಾಧಗಳು ಸಂಭವಿಸುವುದಿಲ್ಲ. ಮತ್ತೊಮ್ಮೆ ಪ್ರಾಯಶ್ಚಿತ್ತ ರೂಪವಾದ ಪ್ರಪತ್ತಿಯನ್ನು ಮಾಡಬೇಕಾದ ಆವಶ್ಯಕತೆಯೂ ಇರುವುದಿಲ್ಲ. ಉಪಾಸನೆಯನ್ನು 'ಆವೃತ್ತಿರಸಕೃದುಪದೇಶಾತ್' ಎಂದು ಹೇಳಿರುವಂತೆ ಬದುಕಿರುವವರೆಗೂ ಮಾಡಬೇಕು. ಆದರೆ ಪ್ರಪತ್ತಿ ಸಕೃತ್ಕರ್ತವ್ಯವಾದುದರಿಂದ ಅದೇ ಫಲವನ್ನು ಕೋರಿ ಮತ್ತೊಮ್ಮೆ ಪ್ರಪತ್ತಿ ಮಾಡಕೂಡದು.

ಪ್ರಪತ್ತಿಯ ಬಗೆಗಳು

ಪ್ರಪತ್ತಿಯನ್ನನುಷ್ಠಿಸಲು ಅಧಿಕಾರಿಗಳು ಯಾರೆಂಬುದನ್ನು ಹಿಂದೆಯೇ ತಿಳಿಸಲಾಯಿತು. ಬೇರೆಯ ರೀತಿಯಲ್ಲಿ ತನ್ನ ಅಭೀಷ್ಟವನ್ನು ಸಾಧಿಸಿಕೊಳ್ಳಲು ಅಸಮರ್ಥನಾದವನು ಆ ಅಭೀಷ್ಟವನ್ನು ಸಾಧಿಸಿಕೊಡಲು ಸಮರ್ಥನಾದ ಭಗವಂತನಲ್ಲಿ ತನ್ನ ರಕ್ಷಣೆಯ ಭಾರವನ್ನೂ ಅದನ್ನೂ ಸಾಧಿಸುವ ಬಗೆಯನ್ನೂ ಒಪ್ಪಿಸಿಬಿಡುತ್ತಾನೆ. ಜಾತಿ, ಕುಲ, ವಯಸ್ಸು, ಲಿಂಗ ಮೊದಲಾದ ಯಾವ ಭೇದಗಳೂ ಇಲ್ಲದೆ ಎಲ್ಲರೂ ಈ ಮಾರ್ಗವನ್ನನುಷ್ಠಿಸಬಹುದು. ಭಕ್ತಿಯೋಗವನ್ನಾಶ್ರಯಿಸಲಸಮರ್ಥನಾದವನು, ಅದಕ್ಕೆ ಅಧಿಕಾರವಿಲ್ಲದವನು, ಅದನ್ನು ಅನುಷ್ಠಿಸಿ ಅದರಿಂದ ಫಲ ಲಭಿಸುವವರೆಗೂ ಕಾಯಲಾರದವನು ಪ್ರಪತ್ತಿಯನ್ನು ಅನುಷ್ಠಿಸಬಹುದು. ಈ ಶರಣಾಗತಿ ಭಕ್ತಿಯ ಸ್ಥಾನದಲ್ಲಿದ್ದು ಸಾಧಕನಿಗೆ ಭಗವಂತನ ಮೂಲಕ ಇಷ್ಟಾರ್ಥವನ್ನು ದೊರಕಿಸಿಕೊಡುವುದು. ಭಕ್ತಿಯೋಗ ಅನೇಕ ಬಗೆಯಾಗಿರುವಂತೆ ಪ್ರಪತ್ತಿಯಲ್ಲಿಯೂ ಹಲವು ಮುಖಭೇದಗಳಿವೆ. 'ಸ್ನಾನಂ ಸಪ್ತವಿಧಂ ಸ್ಮೃತಂ' ಎಂದು ಧರ್ಮಶಾಸ್ತ್ರಕಾರರು ಹೇಳುತ್ತಾರೆ. ಮಂತ್ರಸ್ನಾನ, ಮಾನಸಸ್ನಾನ, ದಿವ್ಯಸ್ನಾನ ಮೊದಲಾದ ಬೇರೆ ಬೇರೆ ಬಗೆಯ ಸ್ನಾನಗಳು ಬೇರೆ ಬೇರೆ ಅಧಿಕಾರಿಗಳಿಗನ್ವಯಿಸುತ್ತದೆ. ಆದರೆ ಅವುಗಳೆಲ್ಲಕ್ಕೂ ಫಲ ಸಮಾನವಾಗಿರುವುದು. ಹಾಗೆಯೇ ಪ್ರಪತ್ತಿಯೂ ಸಾಧಕರ ಶಕ್ತಿಸಾಮರ್ಥ್ಯಗಳಿಗನುಸಾರವಾಗಿ ಅನೇಕ ವಿಧವಾಗಿರುವುದು. ಆದರೆ ಅವುಗಳೆಲ್ಲಕ್ಕೂ ಫಲವು ಸಮಾನವಾಗಿರುತ್ತದೆ. ಪ್ರಪತ್ತಿಯ ಮುಖ ಭೇದಗಳು ಮುಖ್ಯವಾಗಿ ಕೆಳಗೆ ಕಂಡಂತಿವೆ—

೧ ಉಕ್ತಿನಿಷ್ಠೆ

೨ ಆಚಾರ್ಯನಿಷ್ಠೆ

acharya.org

೩. ಸ್ವನಿಷ್ಠೆ

ಉಕ್ತಿ ನಿಷ್ಠೆ ಎಂಬುವುದರಲ್ಲಿ ಸಾಧಕನು ಭಗವಂತನಲ್ಲಿ ಶರಣು ಹೋಗುವ ಮಾತುಗಳನ್ನು ಉಚ್ಚರಿಸಿ ಪ್ರಪತ್ತಿ ಮಾಡುವನು. ಆನುಕೂಲ್ಯ ಸಂಕಲ್ಪ ಮೊದಲಾದ ಅಂಗಗಳ ಬಗೆಗೆ ಸ್ಪಷ್ಟವಾದ ಅರಿವು ಇಲ್ಲದಿದ್ದರೂ ಆ ಭಗವಂತನನ್ನು ಬಿಟ್ಟು ತನ್ನನ್ನು ರಕ್ಷಿಸುವರಿಲ್ಲವೆಂಬ ಅರಿವನ್ನೂ, ಅವನು ತನ್ನನ್ನು ಸಲಹುವನೆಂಬ ಮಹಾವಿಶ್ವಾಸವನ್ನೂ ಹೊಂದಿರುವ ಸಾಧಕನು, ಆಚಾರ್ಯರು ಹೇಳಿಕೊಟ್ಟಂತೆ 'ನನ್ನನ್ನು ಕಾಪಾಡುವ ಹೊಣೆಯನ್ನು ನೀನೇ ಒಪ್ಪಿಸಿಕೊಳ್ಳಬೇಕು' ಎಂದು ಶರಣಾಗತಿಯ ನುಡಿಯನ್ನು ಉಚ್ಚರಿಸಿ ಪ್ರಪತ್ತಿ ಮಾಡುವುದು ಉಕ್ತಿನಿಷ್ಠೆ ಎನ್ನಿಸುವುದು. ಸಾರ್ವಭೌಮನ ಮುಂದೆ ಎಳೆಯ ವಯಸ್ಸಿನ ಸಾಮಂತ ರಾಜಕುಮಾರನು ದಾದಿಯರು ಹೇಳಿಕೊಟ್ಟಂತೆ ಬಿನ್ನವಿಸುವಂತೆ ಈ ಉಕ್ತಿನಿಷ್ಠೆ ಇದೆ. ಪದಸ್ವರೂಪವನ್ನಾಗಲೀ ವಾಕ್ಯಸ್ವರೂಪವನ್ನಾಗಲೀ ಅರಿಯದ ಹಸುಳೆ, 'ಭವತಿ ಭಿಕ್ಷಾಂ ದೇಹಿ' ಎಂಬ ಶಬ್ದಪ್ರಯೋಗವನ್ನು ಸಜ್ಜನರ ಗೃಹದಲ್ಲಿ ಮಾಡಿದರೆ ಅದಕ್ಕೆ ಫಲಸಿದ್ಧಿ ಉಂಟೇ ಉಂಟು. ಹಾಗೆಯೇ ಪರಮೋದಾರನಾದ ಭಗವಂತನು ಈ ಉಕ್ತಿಗೆ ವಶನಾಗಿ ಫಲಪ್ರದಾನ ಮಾಡುತ್ತಾನೆ. ಪದವನ್ನು ಬಳಸುವವನಿಗೆ ಅರ್ಥವಾಗದಿದ್ದರೂ ಆ ಪದಗಳ ಶಕ್ತಿ ಫಲಪ್ರದವಾಗುತ್ತದೆ. 'ಯೇನ ಕೇನಾಪಿ ಪ್ರಕಾರೇಣ ದ್ವಯವಕ್ತಾ ತ್ವಮ್' ಎಂದು ರಾಮಾನುಜರು ಗದ್ಯದಲ್ಲಿ ನಿರೂಪಿಸಿ ಇದರ ಮಹತ್ತ್ವವನ್ನು ತಿಳಿಸಿದ್ದಾರೆ. 'ಪ್ರಪತ್ತಿಯ ನುಡಿಗೇ ನೀನು ಪ್ರಸನ್ನನಾಗಬೇಕೆಂದು ನಾನು ಕೋರುತ್ತೇನೆ' ಎಂದೂ 'ನಿನ್ನಲ್ಲಿ ರಕ್ಷಣೆಯನ್ನು ನಾನು ಬೇಡಿ ಹೇಳುತ್ತಿರುವ ಈ ಮಾತುಗಳೂ ಬುದ್ಧಿಪೂರ್ವಕವಾದುದಲ್ಲ. ಆದರೂ ನೀನು ಉಪೇಕ್ಷೆ ಮಾಡಕೂಡದು' ಎಂದೂ 'ಪಾಪಿಷ್ಠರಾಗಿದ್ದರೂ ಸಹ ಶರಣಾಗತಿ ಶಬ್ದವನ್ನುಚ್ಚರಿಸಿದವನನ್ನು ಈಶ್ವರನಾದ ನೀನು ಉಪೇಕ್ಷಿಸಬಾರದು' ಎಂದೂ ಆಚಾರ್ಯರುಗಳು ಬೇಡಿದ್ದಾರೆ. ಹೀಗೆ ಈ ಉಕ್ತಿನಿಷ್ಠನಿಗೆ ಫಲಸಿದ್ಧಿ ಉಂಟೆಂದು ಸಮರ್ಥಿಸಿದ್ದಾರೆ.

ಆಚಾರ್ಯ ನಿಷ್ಠೆ

ತನ್ನ ಆಚಾರ್ಯನನ್ನೇ ಪೂರ್ಣವಾಗಿ ಅವಲಂಬಿಸಿರುವವನು ಆಚಾರ್ಯನಿಷ್ಠನೆನಿಸುತ್ತಾನೆ. ಆಚಾರ್ಯನು ಭಗವಂತನಲ್ಲಿ ಪ್ರಪತ್ತಿ ಮಾಡುವಾಗ ತನ್ನ ಶಿಷ್ಯರ ರಕ್ಷಣೆಯನ್ನೂ ಅದರಲ್ಲಿ ಸೇರಿಸಿಬಿಡುತ್ತಾನೆ. ಆಚಾರ್ಯರ ಆತ್ಮೀಯರ ಭರಸಮರ್ಪಣದಲ್ಲಿ ಶಿಷ್ಯನೂ ಅಂತರ್ಗತನಾಗಿದ್ದಾನೆ. ಭಗವದ್ಭಕ್ತರಾದ ಆಚಾರ್ಯರ ಸೇವೆಯಲ್ಲಿ ನಿರತರಾದವರಿಗೆ ಫಲಸಿದ್ಧಿ ಉಂಟೇ ಉಂಟು.

'ಸಿದ್ಧಿರ್ಭವತಿ ವಾ ನೇತಿ ಸಂಶಯೋಽಚ್ಯುತಸೇವಿನಾಮ್ ।
ನ ಸಂಶಯೋಽತ್ರ ತದ್ಭಕ್ತಪರಿಚರ್ಯಾರತಾತ್ಮನಾಮ್ ॥'

acharya.org

ಎಂಬ ನುಡಿ ಇದನ್ನು ಸಮರ್ಥಿಸುತ್ತದೆ. ಮೊದಲಿಯಾಂಡಾನ್‌ರವರ ಶ್ರೀಸೂಕ್ತಿಯೊಂದನ್ನು ದೇಶಿಕರು ಹೀಗೆ ಉದಾಹರಿಸುತ್ತಾರೆ–'ಒಂದು ಬೆಟ್ಟದಮೇಲೆ ನಿಂತ ಸಿಂಹ ಮತ್ತೊಂದು ಬೆಟ್ಟಕ್ಕೆ ಹಾರುವಾಗ ಅದರ ಶರೀರದಲ್ಲಿರುವ ಕ್ರಿಮಿಕೀಟಾದಿಗಳೂ ಹೇಗೆ ಆ ಬೆಟ್ಟವನ್ನು ದಾಟುವುವೋ ಹಾಗೆ ಭಗವದ್ಭಾಷ್ಯಕಾರರು ಸಂಸಾರಲಂಘನ ಮಾಡಿದಾಗ ಅವರೊಡನೆ ನಮಗುಂಟಾದ ಸಹಜಸಂಬಂಧದ ಕಾರಣ ನಾವೂ ಉತ್ತೀರ್ಣರಾದೆವು'–ಎಂದು. ಪ್ರಪನ್ನರ ಜೊತೆಗೆ ಸಂಬಂಧವನ್ನು ಹೊಂದಿರುವವರಿಗೂ ಫಲಪ್ರಾಪ್ತಿ ಉಂಟೆಂಬುದನ್ನು ಈ ಸೂಕ್ತಿ ಸೂಚಿಸುತ್ತದೆ. ಸೀತೆ ತ್ರಿಜಟೆಗೆ ಅಭಯಕೊಟ್ಟಾಗ ಇತರ ರಾಕ್ಷಸಿಯರ ರಕ್ಷಣೆಯೂ ಅದರಲ್ಲಿ ಸೇರಿಕೊಂಡಿತ್ತು. ಶ್ರೀರಾಮ ವಿಭೀಷಣನಿಗೆ ರಕ್ಷಣೆ ಕೊಟ್ಟಾಗ ಅವನ ಸಹಚರರಾದ ನಾಲ್ವರು ಅಸುರರಿಗೂ ರಕ್ಷಣೆ ದೊರಕಿತು. ಹೀಗೆ ಆಚಾರ್ಯನನ್ನಾಶ್ರಯಿಸಿದವರು ಆಚಾರ್ಯನಿಷ್ಠರು. ಇವರು ಪ್ರತ್ಯೇಕವಾಗಿ ಪ್ರಪತ್ತಿ ಮಾಡಬೇಕಾಗಿಲ್ಲ. ಇವರಿಗಾಗಿ ಇವರ ಆಚಾರ್ಯರು ಭಗವಂತನಲ್ಲಿ ಪ್ರಪತ್ತಿ ಮಾಡುವರು. ಆಚಾರ್ಯನಲ್ಲಿ ಇವರಿಗೆ ಪೂರ್ಣವಾದ ಭಕ್ತಿವಿಶ್ವಾಸಗಳಿರಬೇಕು. ನಮ್ಮ ರಕ್ಷಣೆಯ ಭಾರವನ್ನು ಭಗವಂತನಲ್ಲಿ ಒಪ್ಪಿಸಲು ನಾವು ಆಚಾರ್ಯರನ್ನು ಬೇಡುತ್ತೇವೆ. ಪರಮಕೃಪಾಶಾಲಿಗಳಾದ ಆಚಾರ್ಯರು ಭಗವಂತನಲ್ಲಿ ಬೇಡಿಕೆ ಸಲ್ಲಿಸುತ್ತಾರೆ. ಈ ಕ್ರಮದಲ್ಲಿ ಆಚಾರ್ಯರು ತಮ್ಮಲ್ಲಿ ಆಶ್ರಯವನ್ನು ಬೇಡಿದ ಒಬ್ಬೊಬ್ಬ ಚೇತನನಿಗಾಗಿಯೂ ಭಗವಂತನಲ್ಲಿ ಪ್ರಪತ್ತಿ ಮಾಡುತ್ತಾರೆ. ಉಕ್ತಿನಿಷ್ಠೆಗೂ ಆಚಾರ್ಯನಿಷ್ಠೆಗೂ ಇರುವ ವ್ಯತ್ಯಾಸವನ್ನು ದೇಶಿಕರು—

> ಅಂಧೋಽನಂಧಗ್ರಹಣವಶಗೋ ಯಾತಿ ರಂಗೇಶ ಯದ್ವ-
> ತ್ಪಂಗುರ್ನೌಕಾಕುಹರನಿಹಿತೋ ನೀಯತೇ ನಾವಿಕೇನ ।
> ಭುಂಕ್ತೇ ಭೋಗಾನವಿದಿತನೃಪಸ್ಸೇವಕಸ್ಯಾರ್ಭಕಾದಿಃ
> ತ್ವತ್ಸಂಪ್ರಾಪ್ತೌ ಪ್ರಭವತಿ ತಥಾ ದೇಶಿಕೋ ಮೇ ದಯಾಳುಃ ॥

ಎಂದು ನ್ಯಾಸತಿಲಕದಲ್ಲಿ ತಿಳಿಸಿದ್ದಾರೆ. ಕುರುಡನಾದವನು ಕುರುಡನಲ್ಲದವನಿಗೆ ಅಧೀನನಾಗಿ ಸುರಕ್ಷಿತವಾಗಿ ಸಂಚರಿಸುವನು. ಕುಂಟನನ್ನು ನಾವಿಕ ದೋಣಿಯಲ್ಲಿ ಕುಳ್ಳಿರಿಸಿಕೊಂಡು ಕರೆದೊಯ್ಯುತ್ತಾನೆ. ರಾಜನನ್ನೇ ಕಾಣದ ಸೇವಕನ ಮಕ್ಕಳೇ ಮೊದಲಾದವರು ರಾಜಭೋಗಾದಿಗಳನ್ನು ಹೊಂದುತ್ತಾರೆ. ಹಾಗೆಯೇ ದಯಾಳುಗಳಾದ ಆಚಾರ್ಯರುಗಳು ಭಗವತ್ಪ್ರಾಪ್ತಿಯನ್ನು ಉಂಟುಮಾಡಿಕೊಡುತ್ತಾರೆ. ಇಲ್ಲಿ ಮೊದಲನೆಯ ದೃಷ್ಟಾಂತ ಉಕ್ತಿನಿಷ್ಠೆಗೆ ಅನ್ವಯಿಸುತ್ತದೆ. ಜ್ಞಾನವೈಶದ್ಯವಿಲ್ಲದಿದ್ದರೂ ಉಕ್ತಿನಿಷ್ಠೆಯಲ್ಲಿ ಸ್ವಪ್ರಯತ್ನವಿದೆ. ಆಚಾರ್ಯನಿಷ್ಠೆಗೆ ಉಳಿದ ಎರಡು ಉದಾಹರಣೆಗಳು ಅನ್ವಯಿಸುವುವು. ಕುಂಟನು ಹೇಗೆ ಸ್ವಪ್ರಯತ್ನ ಬಿಡುತ್ತಾನೋ, ರಾಜಸೇವಕರ ಮಕ್ಕಳು ಹೇಗೆ ಸ್ವಪ್ರಯತ್ನರಹಿತರಾಗಿರುತ್ತಾರೆಯೋ, ಹಾಗೆ ಆಚಾರ್ಯನಿಷ್ಠನು ಸ್ವಪ್ರಯತ್ನ

acharya.org

ವನ್ನು ಬಿಟ್ಟಿರುತ್ತಾನೆ. ಆದರೆ ಫಲಪ್ರಾಪ್ತಿ ಆಚಾರ್ಯರುಗಳಿಂದ ಲಭಿಸುತ್ತದೆ. ಈ ಎರಡು ವಿಧಾನದಲ್ಲಿ ಯಾವುದನ್ನಾದರೂ ಅವಲಂಬಿಸಬಹುದು.

ತಾನೇ ನೇರವಾಗಿಯಾಗಲೀ ಅಥವಾ ಆಚಾರ್ಯರ ಮುಖಾಂತರವಾಗಿಯಾಗಲೀ ಭಗವಂತನಲ್ಲಿ ಪ್ರಪತ್ತಿಯನ್ನು ಮಾಡಲೇಬೇಕು. ಇಲ್ಲದೆ ಹೋದರೆ ಆ ಸರ್ವೇಶ್ವರ ಪುರುಷಾರ್ಥವನ್ನು ಕರುಣಿಸುವವನಲ್ಲ: ಭಾಗವತಾಭಿಮಾನ ಮತ್ತು ಭಗವದ್ವಿಷಯ ವಾಸಗಳು ಮೋಕ್ಷಕ್ಕೆ ಕಾರಣವೆಂದು ಹೇಳಿರುವುದರ ತಾತ್ಪರ್ಯವೇನೆಂಬ ಪ್ರಶ್ನೆ ಇಲ್ಲಿ ಏಳುತ್ತದೆ. ಇವೆರಡೂ ನಮ್ಮಲ್ಲಿ ಸತ್ಪ್ರವೃತ್ತಿಯನ್ನುಂಟುಮಾಡಿ ನಾವು ಭಗವಂತನಲ್ಲಿ ಪ್ರಪತ್ತಿ ಮಾಡುವಂತೆ ಪ್ರೇರಿಸುತ್ತವೆ. ಆ ಕಾರಣ ಪರಂಪರಯಾ ಕಾರಣಗಳಾಗುತ್ತವೆ ಯೆಂದು ಮಾತ್ರ ತಿಳಿಯಬೇಕು. ಇವುಗಳಿಂದ ಆಗುವ ಉಪಕಾರ ಹೆಚ್ಚಾದುದು. ಭಕ್ತಿ ಮಾರ್ಗದಲ್ಲಿಯಾಗಲೀ ಪ್ರಪತ್ತಿ ಮಾರ್ಗದಲ್ಲಿಯಾಗಲೀ ಒಬ್ಬನು ಮುಂದುವರಿಯು ವಂತೆ ಇವು ಮಾಡುವುವು. ಉಪಾಸನೆಯನ್ನಾರಂಭಿಸಿದ್ದವನಿಗೆ ಉತ್ತರೋತ್ತರವಾದ ಅಭಿ ವೃದ್ಧಿಯನ್ನು ಸಾಧಿಸಿಕೊಡುತ್ತವೆ ಇವು. ಪ್ರಪತ್ತಿ ಮಾಡಿದವನಿಗೆ ಇಲ್ಲಿರುವ ಕಾಲದಲ್ಲಿ ಕೈಂಕರ್ಯಲಾಭವನ್ನು ದೊರಕಿಸಿಕೊಟ್ಟು ಭಗವತ್ಪ್ರಾಪ್ತಿಯಲ್ಲಿ ತ್ವರೆಯನ್ನುಂಟುಮಾಡಿ ಉಪಕಾರ ಮಾಡುತ್ತವೆ. ಹೀಗೆ 'ಭಾಗವತಾಭಿಮಾನ' ಮತ್ತು 'ಭಗವದ್ವಿಷಯವಾಸ' ಇವು ಉಪಕಾರಕಗಳಾಗಿವೆ.

ಸ್ವತಂತ್ರ ನಿಷ್ಠೆ

ಉಕ್ತಿನಿಷ್ಠೆ ಮತ್ತು ಆಚಾರ್ಯನಿಷ್ಠೆಯಂತೆ ಸ್ವನಿಷ್ಠೆ ಎಂಬುದೂ ಒಂದಿದೆ. ಆತ್ಮಪರಮಾತ್ಮಜ್ಞಾನವನ್ನು ಹೊಂದಿದವರಾಗಿ ಪರಮಪುರುಷಾರ್ಥದಲ್ಲಿ ಆಸಕ್ತಿ ಉಳ್ಳ ಮಹನೀಯರು ನೇರವಾಗಿ ಭಗವಂತನಲ್ಲಿ ತಾವೇ ಪ್ರಪತ್ತಿ ಮಾಡಬಹುದು. ಕಾರ್ಪಣ್ಯ, ಮಹಾವಿಶ್ವಾಸ ಮೊದಲಾದ ಅಂಗಗಳೊಡನೆ ಭಗವಂತನ ಪಾದಗಳಲ್ಲಿ ಮಾಡಿದ ಶರಣಾ ಗತಿ ಸಫಲವೇ ಆಗುತ್ತದೆ. ಇಂಥ ಸಾಧಕ ಸ್ವನಿಷ್ಠನೆನಿಸುತ್ತಾನೆ. ಭಗವಂತನಲ್ಲಿ ಪ್ರಪತ್ತಿ ಮಾಡಲು ಮತ್ತೊಬ್ಬರ ಅಪೇಕ್ಷೆ ಇಂಥ ಜ್ಞಾನಾನುಷ್ಠಾನಸಂಪನ್ನರಿಗೆ ಇರುವುದಿಲ್ಲ. ಉಪಾಯದ ವಿಶದತಮವಾದ ಜ್ಞಾನ ಹಾಗೂ ಉಪಾಯಾನುಷ್ಠಾನವನ್ನು ಮಾಡುವ ಕೌಶಲ ಇವುಗಳನ್ನು ಹೊಂದಿದವರು ಸ್ವನಿಷ್ಠೆಗೆ ಅಧಿಕಾರಿಗಳಾಗಿದ್ದಾರೆ. ಈ ರೀತಿಯಲ್ಲಿ ಭಗವದ್ಯಾಮುನರು, ಭಗವದ್ರಾಮಾನುಜರು ಹಾಗೂ ವೇದಾಂತದೇಶಿಕರವರು ಪ್ರಪತ್ತ್ಯನುಷ್ಠಾನವನ್ನು ಮಾಡಿದ್ದಾರೆ, ಇಂಥ ಅಧಿಕಾರಿಗಳು ಬಹಳ ವಿರಳರೆಂದು ತಿಳಿಯಬೇಕು.

ಆರ್ತಪ್ರಪತ್ತಿ ಮತ್ತು ದೃಪ್ತಪ್ರಪತ್ತಿ

ಪ್ರಪತ್ತಿಯು ಉಪಾಸನಕ್ಕೂ ಆವಶ್ಯಕ. ಭಕ್ತಿಯೋಗವನ್ನು ಆರಿಸಿಕೊಂಡವರು

acharya.org

ಆ ಮಾರ್ಗದಲ್ಲಿ ಮುಂದವರಿದು ಸಿದ್ಧಿ ಹೊಂದಬೇಕಾದರೆ ಭಗವಂತನಲ್ಲಿ ಮರೆಹೋಗಬೇಕು. ಇದು ಅಂಗಪ್ರಪತ್ತಿ ಎನ್ನಿಸುವುದು. ನೇರವಾಗಿ ಮೋಕ್ಷಕ್ಕಾಗಿಯಾಗಲೀ ಅಥವಾ ಇತರ ಪುರುಷಾರ್ಥಗಳಿಗಾಗಲೀ ಭಗವಂತನಲ್ಲಿ ಪ್ರಪತ್ತಿ ಮಾಡುವುದು ಅಂಗಿ ಪ್ರಪತ್ತಿ ಎನ್ನಿಸುವುದು. ಇದು ಸರ್ವಾಧಿಕಾರವಾದುದು. ಸರ್ವಾನಿಷ್ಟನಿವರ್ತನಸಮರ್ಥವಾದುದು. ಸರ್ವೇಷ್ಟಸಾಧನವಾದುದು. ಸುಕರವಾದುದು, ಸಕೃತ್ಕರ್ತವ್ಯವಾದುದು. ಬೇಗ ಫಲಕೊಡುವುದು ಇದು. ಪ್ರತಿಬಂಧವಿಲ್ಲದಿರುವುದಿದು. ಬ್ರಹ್ಮಾಸ್ತ್ರಕ್ಕೆ ಹೇಗೋ ಹಾಗೆ ಬೇರೆ ಉಪಾಯಗಳ ಪ್ರಯೋಗವನ್ನು ಸಹಿಸದೆ ಇರುವಂಥದು. ಭಕ್ತಿ ಹೇಗೆ ಚತುರ್ವಿಧ ಪುರುಷಾರ್ಥಗಳಿಗೂ ಸಾಧನವೋ ಹಾಗೆಯೇ ಇದೂ ಎಲ್ಲ ವಿಧವಾದ ಅಭೀಷ್ಟಗಳನ್ನೂ ಸಾಧಿಸಿಕೊಡುವುದು. ಪ್ರಪತ್ತಿ ಮಾಡಿದವನು ಅದು ಮೊದಲಾಗಿ ಭಗವತ್ಕೈಂಕರ್ಯದ ಪರಮಾನಂದವನ್ನು ಹೊಂದುವವನಾಗಿ ಶರೀರವಿಯೋಗವಾದ ಕೂಡಲೇ ಭಗವಂತನ ಪರಿಪೂರ್ಣಾನುಭವನನ್ನು ಹೊಂದುತ್ತಾನೆ. ಭಗವಂತನು ಸರ್ವ ಫಲಪ್ರದನಷ್ಟೇ ? ಅವನ ಪಾದಗಳಲ್ಲಿ ಮಾಡಿದ ಶರಣಾಗತಿ ಆದುದರಿಂದಲೇ ಹೀಗೆ ಸಕಲಫಲಸಾಧನವಾಗಿರುತ್ತದೆ.

ಮೋಕ್ಷವನ್ನು ಬಯಸಿ ಭಗವಂತನಲ್ಲಿ ಶರಣು ಹೋಗುವವರು ತಮ್ಮ ತಮ್ಮ ಮನೋಭಾವಕ್ಕನುಸಾರವಾಗಿ ಎರಡು ಬಗೆಯಾಗಿರುವನು–'ಪ್ರಪನ್ನಶ್ಚ ದ್ವೇಧಾ ಸುಚರಿತಪರೀಪಾಕಭಿದಯಾ' ಎಂದು ದೇಶಿಕರು ಹೇಳಿ ಈ ಭೇದಕ್ಕೆ ಅವರವರ ಸುಕೃತ ಪರಿಪಾಕ ಕಾರಣವೆಂದಿದ್ದಾರೆ. ಇದಕ್ಕನುಗುಣವಾಗಿ ಅವರನ್ನು 'ಆರ್ತಪ್ರಪನ್ನರು' ಮತ್ತು 'ದೃಪ್ತಪ್ರಪನ್ನರು' ಎಂದು ಕರೆಯುತ್ತಾರೆ. ಭಗವಂತನ ವಿರಹವನ್ನು ಕ್ಷಣಮಾತ್ರವೂ ಸಹಿಸದವರಾಗಿ ಸ್ವಲ್ಪವೂ ವಿಳಂಬವಿಲ್ಲದೆ ಆ ಕ್ಷಣದಲ್ಲಿಯೇ ಅವನನ್ನು ಸೇರುವ ಉತ್ಕಟೇಚ್ಛೆಯನ್ನು ಹೊಂದಿ ಶರಣು ಹೋಗುವವರು ಆರ್ತಪ್ರಪನ್ನರು. ಭಗವಂತನಲ್ಲಿ ಅವರಿಗಿರುವ ಆ ಉತ್ಕಟ ಪ್ರೇಮದ ಫಲವಾಗಿ ಅವರು ತತ್‌ಕ್ಷಣದಲ್ಲಿಯೇ ಭಗವಂತನನ್ನು ಸೇರುವರು. ಅವರ ಆರ್ತಿ ಅಂಥದು. ದೇಹಾವಸಾನದಲ್ಲಿ ಭಗವತ್ಪ್ರಾಪ್ತಿಯನ್ನು ಕೋರಿ ಶರಣು ಹೋಗುವವರು ದೃಪ್ತರು. 'ಏತದ್ದೇಹಾವಸಾನೇ ಮಾಂ ತ್ವತ್ಪಾದಂ ಪ್ರಾಪಯಸ್ವಯಂ' ಎಂಬುದು ಇವರ ಬೇಡಿಕೆಯಾಗಿರುವುದು. ಇವರಿಗೆ ದೃಪ್ತಪ್ರಪನ್ನರೆಂದು ಹೆಸರು. ಈ ರೀತಿಯಾಗಿ ಇವರು ಬೇರೆ ಬೇರೆ ಕಾಲದಲ್ಲಿ ಏಕೆ ಫಲಪ್ರಾಪ್ತಿಯನ್ನು ಬೇಡುವರೆಂಬುವುದಕ್ಕೆ ಅವರವರ ಸುಕೃತಪರಿಪಾಕವೇ ಕಾರಣವೆಂದು ದೇಶಿಕರವರು ಹೇಳುತ್ತಾರೆ. ಅದಕ್ಕನುಸಾರವಾಗಿ ಭಗವಂತನಲ್ಲಿ ಬೇರೆ ಬೇರೆ ಬಗೆಯಾದ ಪ್ರಾರ್ಥನೆಯನ್ನಿವರು ಸಲ್ಲಿಸುವರು. ನಾವು ಕೋರಿದ ಕಾಲದಲ್ಲಿ ಕೋರಿದ ಫಲವನ್ನು ಭಗವಂತನು ಕರುಣಿಸುವವನಾಗಿದ್ದಾನೆ. ಫಲಪ್ರಾಪ್ತಿ ವಿಳಂಬದಿಂದ ಆಗಲೆಂದು ನಾವು ಕೋರಿದರೆ ವಿಳಂಬವಾಗುತ್ತದೆ. ಸದ್ಯಃ ಲಭಿಸಬೇಕೆಂದು ಕೋರಿದರೆ ಸದ್ಯಃ ಆಗುತ್ತದೆ. ನಮ್ಮ ತ್ವರೆಗನು

acharya.org

ಗುಣವಾಗಿ ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಆದರೆ ಇವರಿಬ್ಬರಿಗೂ ಫಲಪ್ರಾಪ್ತಿಯಲ್ಲಿ ಸಂದೇಹವಿಲ್ಲ. ವ್ಯತ್ಯಾಸವೂ ಇಲ್ಲ. ಇವರಿಬ್ಬರಿಗಿರುವ ವ್ಯತ್ಯಾಸವನ್ನು ದೇಶಿಕರವರು,

'ವಿಳಂಬೇನ ಪ್ರಾಪ್ತಿಃ ಭಜನಸುಖಮೇಕಸ್ಯ ವಿಪುಲಂ
ಪರಸ್ಯಾಶುಪ್ರಾಪ್ತಿಃ ಪರಿಮಿತರಸಾ ಜೀವಿತದಶಾ ।'

ಎಂದು ನಿರೂಪಿಸಿದ್ದಾರೆ. ದೃಪ್ತಪ್ರಪನ್ನನಿಗೆ ಭಗವತ್ಪ್ರಾಪ್ತಿ ವಿಳಂಬದಿಂದ ಅಂದರೆ ಆ ದೇಹಾವಸಾನದಲ್ಲಿ ಆಗುತ್ತದೆ. ಆದರೆ ಬದುಕಿರುವವರೆಗೂ ಭಗವಂತನನ್ನು ಭಜಿಸುವ ಮಹದಾನಂದ ಹೇರಳವಾಗಿರುತ್ತದೆ. ಆರ್ತಪ್ರಪನ್ನನಿಗೆ ಜೀವಿತದ ಕಾಲ ಪರಿಮಿತ ವಾಗಿರುತ್ತದೆ. ಆದರೆ ಭಗವತ್ಪ್ರಾಪ್ತಿ ತತ್ಕಾಲದಲ್ಲಿಯೇ ಉಂಟಾಗುತ್ತದೆ. ಭಗವತ್ಪ್ರಾಪ್ತಿ ಯಲ್ಲಿ ಎಳ್ಳಷ್ಟೂ ವಿಳಂಬವನ್ನು ಆರ್ತ ಸಹಿಸಲಾರ. ಆದರೆ ದೃಪ್ತ ಭಜನಸುಖದ ಆನಂದವನ್ನನುಭವಿಸಿ ದೇಹಾವಸಾನದಲ್ಲಿ ಭಗವತ್ಪ್ರಾಪ್ತಿಯನ್ನು ಹೊಂದಲಿಚ್ಛಿಸುವನು. ಮುಕ್ತಿದಶೆಯಲ್ಲಿ ಭಗವದನುಭವ ಇವರಿಬ್ಬರಿಗೂ ಏಕರೂಪವಾಗಿಯೇ ಇರುತ್ತದೆ.

ಪ್ರಪತ್ತ್ಯನುಷ್ಠಾನ

ಪ್ರಪತ್ತಿಯ ಅನುಷ್ಠಾನದಲ್ಲಿ ಮೂರು ಬಗೆಯ ಕರ್ತವ್ಯಗಳಿವೆ. ಇವು ಪೂರ್ವ ಕೃತ್ಯ, ತತ್ಕಾಲಕೃತ್ಯ ಮತ್ತು ಉತ್ತರಕೃತ್ಯ ಎಂಬುವು. ಇವು ಪ್ರಪತ್ತಿಮಾಡುವವರಿಗೆ ಹೇಗೆ ಅನ್ವಯಿಸುವುವೋ ಹಾಗೆ ಆ ಸರ್ವೇಶ್ವರನಿಗೂ ಅನ್ವಯಿಸುತ್ತವೆ.

ಪೂರ್ವಕೃತ್ಯವೆಂಬುದು ಪ್ರಪತ್ತಿ ಮಾಡುವ ಮೊದಲು ಮಾಡಬೇಕಾದ ಕೆಲಸ. ಆಚಾರ್ಯ ಸಮಾಶ್ರಯಣ, ಆಚಾರ್ಯರುಗಳಿಂದ ತತ್ತ್ವಜ್ಞಾನೋಪದೇಶ ಪಡೆಯು ವುದು ಮತ್ತು ಪುರುಷಕಾರ ಸಂಪಾದನೆ ನಮಗೆ ಪೂರ್ವಕೃತ್ಯವಾಗಿರುವುದು. ನಮಗೆ ಒಬ್ಬ ಚೇತನನ ಪ್ರಸನ್ನತೆಯನ್ನು ಸಂಪಾದಿಸಿಕೊಡಬಲ್ಲ ಮತ್ತೊಬ್ಬ ಚೇತನನೇ ಪುರುಷಕಾರ ಎನ್ನಿಸುವನು. ಭಗವಂತನು ನಮ್ಮ ತಪ್ಪುಗಳನ್ನು ಕಾಣದಂತೆ ಮಾಡಿ ನಮ್ಮ ಮೇಲೆ ಅವನ ಅನುಗ್ರಹವನ್ನು ದೊರಕಿಸಿಕೊಡುವ ಶ್ರೀದೇವಿ ನಮಗೆ ಪುರುಷ ಕಾರಭೂತೆಯಾಗಿದ್ದಾಳೆ. ಆದ್ದರಿಂದಲೇ ಮೊದಲು ಶ್ರೀದೇವಿಯಲ್ಲಿ ಪ್ರಪತ್ತಿಮಾಡಿ ಆಕೆಯ ಅನುಗ್ರಹವನ್ನು ಪಡೆದುಕೊಂಡು ತದನಂತರ ಭಗವಂತನಲ್ಲಿ ಶರಣುಹೋಗು ತ್ತೇವೆ. ಅನುಗ್ರಹೈಕಮಯಿಯಾದ ದೇವಿ ನಮ್ಮ ಮೇಲೆ ಭಗವಂತನ ದಯೆಯುಂಟಾಗು ವಂತೆ ಮಾಡುವಳು. ಪ್ರಪತ್ತಿಯ ಕಾಲದಲ್ಲಿ ನಾವು ಮಾಡುವ ಕರ್ತವ್ಯ ತತ್ಕಾಲಕೃತ್ಯ ವೆನ್ನಿಸುವುದು. ಸರ್ವಸ್ವಾಮಿಯಾದ ದೇವನಲ್ಲಿ ಅಂಗಪಂಚಕಪೂರ್ವಕವಾಗಿ ನಮ್ಮನ್ನೂ, ನಮ್ಮ ರಕ್ಷಣೆಯ ಭಾರವನ್ನೂ, ನಮ್ಮ ರಕ್ಷಣೆಯ ಫಲವನ್ನೂ ಸಮರ್ಪಣ ಮಾಡುವುದು ತತ್ಕಾಲಕೃತ್ಯವೆನ್ನಿಸುವುದು. ಹೀಗೆ ಆತ್ಮಸಮರ್ಪಣ ಮಾಡಿದವನು ಕೃತಕೃತ್ಯನೆನ್ನಿಸು ತ್ತಾನೆ. ಇಂಥ ಪ್ರಪನ್ನ ಭಗವಂತನಲ್ಲಿ ಪ್ರಪತ್ತಿ ಮಾಡಿದ ಮೇಲೆ ಮಾಡಬೇಕಾದ

acharya.org

ಕರ್ತವ್ಯ ಉತ್ತರಕೃತ್ಯ. ಪ್ರಪತ್ತ್ಯುತ್ತರ ಕಾಲದಲ್ಲಿ ತನಗೆ ತಕ್ಕುದಾದ ಭಗವತ್ಕೈಂಕರ್ಯ ಮತ್ತು ಭಾಗವತಕೈಂಕರ್ಯಾದಿಗಳನ್ನು ಮಾಡಿಕೊಂಡು ಬರುವುದು ಉತ್ತರ ಕೃತ್ಯವೆನ್ನಿಸುವುದು.

ಈ ಬಗೆಯಾದ ಮೂರು ಕರ್ತವ್ಯಗಳು ಸರ್ವಶರಣ್ಯನಾದ ಭಗವಂತನಿಗೂ ಇವೆ. ಪುರುಷಕಾರಳಾದ ಶ್ರೀದೇವಿಯಲ್ಲಿಯೂ ಅವಳ ಪುರುಷಕಾರ ಕ್ರಿಯೆಯಲ್ಲಿಯೂ ಪ್ರಸನ್ನನಾಗಿರುವುದು ಭಗವಂತನಿಗೆ ಪೂರ್ವಕೃತ್ಯ. ಪ್ರಪತ್ತಿಯ ಸಮಯದಲ್ಲಿ ಚೇತನರು ತನ್ನಲ್ಲಿ ಶರಣಾಗಿ ಸಮರ್ಪಿಸುವ ಸಮಸ್ತ ಭಾರಗಳನ್ನೂ ವಹಿಸಿಕೊಳ್ಳುವುದು ತತ್ಕಾಲ ಕೃತ್ಯ. ಪ್ರಪತ್ತ್ಯುತ್ತರ ಕಾಲದಲ್ಲಿ ಸ್ವಯಂಪ್ರಯೋಜನವಾದ ಭಕ್ತಿ ಮೊದಲಾದುವನ್ನು ಅನುಗ್ರಹಿಸಿ ತನ್ನ ಪರಿಪೂರ್ಣವಾದ ಕೈಂಕರ್ಯವನ್ನು ಕರುಣಿಸುವುದು ಉತ್ತರಕೃತ್ಯ. ನಮ್ಮ ಶರಣಾಗತಿ ಆ ಭಗವಂತನಲ್ಲಿ ಈ ರೀತಿಯಾಗಿ ಆದರೆ ಅವನು ನಮ್ಮ ರಕ್ಷಣೆಯ ಭಾರವನ್ನು ಹೊತ್ತು ನಮಗೆ ತನ್ನ ನಿತ್ಯಕೈಂಕರ್ಯಾದಿಗಳನ್ನು ನಮ್ಮ ಪ್ರಾರ್ಥನೆಯಂತೆ ಅನುಗ್ರಹಿಸಿ ರಕ್ಷಿಸುತ್ತಾನೆ.

ಕೃತಕೃತ್ಯ

ಮೋಕ್ಷವನ್ನಪೇಕ್ಷಿಸಿ ಭಗವಂತನ ಪಾದಾರವಿಂದಗಳಲ್ಲಿ ಶರಣಾಗತಿ ಮಾಡಿದವನು ಕೃತಕೃತ್ಯನೆನ್ನಿಸುವನು. ಮಾಡಬೇಕಾದ ಕರ್ತವ್ಯವನ್ನು ಅವನು ಮಾಡಿ ಮುಗಿಸಿರುತ್ತಾನೆ. ಅಂಥವನು ಮುಂದೆ ಹೇಗಿರಬೇಕೆನ್ನುವುದನ್ನು ರಾಮಾನುಜರು ತಮ್ಮ ಗದ್ಯದಲ್ಲಿ 'ಮಜ್ಜ್ಞಾನದರ್ಶನಪ್ರಾಪ್ತಿಷು ನಿಸ್ಸಂಶಯಃ ಸುಖಮಾಸ್ವ' ಎಂದು ತಿಳಿಸಿದ್ದಾರೆ. ದೇಶಿಕರವರು 'ಸಮರ್ಥೇ ಸರ್ವಜ್ಞೇ ಸಹಜಸುಹೃದಿ ಸ್ವೀಕೃತಭರೇ ಯದರ್ಥಂ ಕರ್ತವ್ಯಂ ನ ಪುನರಿಹ ಯತ್ಕಿಂಚಿದಪಿ ನಃ |' ಎಂದು ತಿಳಿಸಿ ಸಮರ್ಥನೂ ಸರ್ವಜ್ಞನೂ ಸಹಜಸುಹೃತ್ತಮನೂ ಆದ ಭಗವಂತನು ನಮ್ಮ ರಕ್ಷಣೆಯ ಭಾರವನ್ನು ವಹಿಸಿಕೊಂಡ ನಂತರ ಆ ಬಗೆಗೆ ನಾವು ಮಾಡತಕ್ಕದ್ದೇನೂ ಇನ್ನಿಲ್ಲವೆಂದು ನಿರೂಪಿಸಿದ್ದಾರೆ. ಕರ್ತವ್ಯಾಂಶವು ಒಮ್ಮೆ ಪ್ರಪತ್ತಿ ಮಾಡಿದುದರಿಂದಲೇ ಸಿದ್ಧವಾಯಿತು. ತಾನು ಕೋರಿದ ಫಲಕ್ಕಾಗಿ ಅವನು ಮಾಡಬೇಕಾದ ಕರ್ತವ್ಯವಿನ್ನೇನೂ ಇರುವುದಿಲ್ಲ. ಸತ್ಯಸಂಕಲ್ಪನೂ ಸ್ವತಂತ್ರನೂ ಆದ ಸರ್ವೇಶ್ವರನು 'ಮಾ ಶುಚಃ' ಎಂದು ಹೇಳಿರುವುದರಿಂದಲೂ 'ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ' ಎಂದು ಭರವಸೆ ಕೊಟ್ಟಿರುವುದರಿಂದಲೂ ಫಲಸಿದ್ಧಿಯಲ್ಲಿ ಸಂಶಯವಿಲ್ಲದವನಾಗಬೇಕು. ಮೊದಲು ತನಗಿದ್ದ ಭಯವನ್ನು ಬಿಟ್ಟವನಾಗಬೇಕು. ಇತರ ಪುರುಷಾರ್ಥಗಳನ್ನು ಸಮೂಲವಾಗಿ ಕಿತ್ತೊಗೆದವನಾಗಿ ಇತರ ಮೋಕ್ಷೋಪಾಯಗಳನ್ನೂ ಬಿಡುವವನಾಗಬೇಕು. ನಿರ್ಧನನಾದವನು ಪ್ರಯತ್ನವಿಲ್ಲದೆಯೇ ಮಹಾನಿಧಿಯನ್ನು ಪಡೆದರೆ ಸಂತೋಷಿಸುವಂತೆ ತನಗೆ ಮುಂದೆ ಲಭಿಸಲಿರುವ

acharya.org

ಪುರುಷಾರ್ಥಕ್ಕಾಗಿ ಅಮಿತಾನಂದವನ್ನು ಪಡುವವನಾಗಬೇಕು. ತಾನು ಅನುಷ್ಠಾನ ಮಾಡುವ ಪಂಚಮಹಾಯಜ್ಞಾದಿಗಳಾದ ನಿತ್ಯನೈಮಿತ್ತಿಕ ಕರ್ಮಗಳಿಂದ ಸರ್ವಾಂತರ ನಾದ ಆ ಭಗವಂತನನ್ನೇ ಆರಾಧಿಸುವೆನೆಂಬುದನ್ನು ಅನುಸಂಧಾನ ಮಾಡಬೇಕು. ಶಾಸ್ತ್ರಗಳಲ್ಲಿ .ಉಪದೇಶಿಸಿರುವ ರೀತಿಯಲ್ಲಿ ತನಗುಚಿತವಾದ ವರ್ಣಾಶ್ರಮಧರ್ಮ ಗಳನ್ನು ಅನುಷ್ಠಿಸಿ ಸರ್ವಶೇಷಿಯಾದ ಭಗವಂತನ ಸೇವೆಯನ್ನು ನಡೆಸುವವನಾಗಬೇಕು. ತನ್ನ ಜೀವಿತಶೇಷವನ್ನು ಭಗವಂತನ ಸೇವೆಯಲ್ಲಿಯೂ ಭಾಗವತ ಕೈಂಕರ್ಯದಲ್ಲಿಯೂ ಉಪಯೋಗಿಸಬೇಕು. ಭಾಗವತಾಪಚಾರಕ್ಕವಕಾಶ ಕೊಡದೆ ತನ್ನ ಜೀವಮಾನವನ್ನು ನೂಕಬೇಕು.

ಸಂಸಾರದಲ್ಲಿ ತೊಳಲುತ್ತಿದ್ದ ನಾವು ಭಗವಂತನ ದಯೆಯಿಂದ ಆಚಾರ್ಯಾನು ಗ್ರಹಕ್ಕೆ ಪಾತ್ರರಾಗಿ ದ್ವಯಮಂತ್ರೋಪದೇಶವನ್ನು ಪಡೆದವರಾಗಿ ಪ್ರಪತ್ತ್ಯನುಷ್ಠಾನ ಮಾಡುವಂತಾಯಿತು. ಆ ಪರಮಕರುಣಾಕರನು ನಮ್ಮ ಪಾಪಗಳನ್ನೆಲ್ಲಾ ಕ್ಷಮಿಸುವ ನೆಂಬ ಈ ವಿಶ್ವಾಸ ನಮ್ಮ ಬಾಳಿನಲ್ಲಿರಬೇಕು.

ಪ್ರಪತ್ತ್ಯನುಷ್ಠಾನಕ್ಕೆ ಮೊದಲು ಸಾಧಕನಿಗೆ ದುಃಖ ಇರಬೇಕು. ಇಲ್ಲದಿದ್ದರೆ ಪ್ರಪತ್ತಿ ಪರಿಣಾಮಕಾರಿಯಾಗದು. ಆದರೆ ಪ್ರಪತ್ತ್ಯನುಷ್ಠಾನ ಮಾಡಿದ ಮೇಲೆ ಸಾಧಕನಿಗೆ ಶೋಕಪರಿಹಾರವಾಗಬೇಕು. ಪ್ರಪತ್ತಿಯನ್ನು ಮಾಡಿದ ಮೇಲೆಯೂ ದುಃಖವು ಮುಂದುವರಿಯುವುದಾದರೆ ಪ್ರಪತ್ತಿ ಪೂರ್ಣವಾಗಿಲ್ಲವೆಂದು ತಿಳಿಯಬೇಕು. ಆದುದರಿಂದ ಪ್ರಪತ್ತ್ಯನಂತರ ವೀತಶೋಕನಾದವನು ಕೃತಕೃತ್ಯನೆಂದು ಭಾವಿಸ ಬೇಕು.

ಉತ್ತರ ಕೃತ್ಯ

ಭಗವಂತನಲ್ಲಿ ಪ್ರಪತ್ತಿ ಮಾಡಿ ಕೃತಕೃತ್ಯನಾದವನು ಪ್ರಪತ್ತ್ಯನಂತರ ಮಾಡ ಬೇಕಾದುದೇನು ? ದೇಶಿಕರವರು ಕೆಳಗಿನ ಶ್ಲೋಕದಲ್ಲಿ ಉತ್ತರಕೃತ್ಯವನ್ನು ಸಂಗ್ರಹ ಮಾಡಿದ್ದಾರೆ—

ಸಂತೋಷಾರ್ಥಂ ವಿಮೃಶತಿ ಮುಹುಃ ಸದ್ಭಿರಧ್ಯಾತ್ಮವಿದ್ಯಾಂ
ನಿತ್ಯಂ ಬ್ರೂತೇ ನಿಶಮಯತಿ ಚ ಸ್ವಾದು ಸುವ್ಯಾಹೃತಾನಿ |
ಅಂಗೀಕುರ್ವನ್ನನಘಲಲಿತಾಂ ವೃತ್ತಿಮಾದೇಹಪಾತಾತ್
ದೃಷ್ಟಾದೃಷ್ಟಸ್ವಭರವಿಗಮೋ ದತ್ತದೃಷ್ಟಿಃ ಪ್ರಪನ್ನಃ ||'

ಪ್ರಪನ್ನನು ಆತ್ಮಸಂತೋಷಕ್ಕಾಗಿ ಮತ್ತು ಭಗವದ್ಗುಣಾನುಭವದ ಆನಂದಕ್ಕಾಗಿ ಸಜ್ಜನರೊಡನೆ ಅಧ್ಯಾತ್ಮವಿದ್ಯೆಯನ್ನು ಕುರಿತು ಚರ್ಚಿಸುತ್ತಾನೆ. ಆಚಾರ್ಯರುಗಳ ಮತ್ತು ಆಳ್ವಾರರುಗಳ ಶ್ರೀಸೂಕ್ತಿಗಳನ್ನು ಅನುದಿನವೂ ಕೇಳುತ್ತಾನೆ; ಮತ್ತು ಹೇಳು

acharya.org

ತ್ತಾನೆ. ತಾನು ಈ ಲೋಕದಲ್ಲಿ ಬದುಕಿರುವವರೆಗೂ ಪಾಪರಹಿತವಾದ ಹಾಗೂ ಪರಿಶುದ್ಧವಾದ ಜೀವನವನ್ನು ನಡೆಸುತ್ತಾನೆ. ದೃಷ್ಟವಾದ ಲೌಕಿಕ ವಿಚಾರಗಳಲ್ಲಿಯಾಗಲೀ ಅದೃಷ್ಟವಾದ ಪುರುಷಾರ್ಥದ ಬಗೆಗಾಗಲೀ ತನ್ನ ಹೊಣೆಯನ್ನು ಕಳೆದುಕೊಂಡವನಾಗಿರುತ್ತಾನೆ. ಭಗವಂತನಲ್ಲಿ ನ್ಯಸ್ತಭರನಾದ ಪ್ರಪನ್ನನು ಮುಂದೆ ಮಾಡಬೇಕಾದುದೇನೆಂಬುವನ್ನು ಭಗವದ್ರಾಮಾನುಜರು ಉಪದೇಶಿಸಿದ್ದಾರೆ. ವೇದಾಂತದೇಶಿಕರು ತಮ್ಮ ರಹಸ್ಯತ್ರಯಸಾರದಲ್ಲಿ ಅದನ್ನು ಹೀಗೆ ಸಂಗ್ರಹಿಸಿದ್ದಾರೆ.

"ಪ್ರಪನ್ನನ ಆತ್ಮಯಾತ್ರೆಯಾಗಲೀ ದೇಹಯಾತ್ರೆಯಾಗಲೀ ಅವನಿಗೆ ಅನ್ವಯಿಸುವುದಿಲ್ಲ. ದೇಹಯಾತ್ರೆ ಕರ್ಮಾಧೀನವಾದುದು. ಅದಕ್ಕಾಗಿ ಅವನು ಚಿಂತಿಸಬೇಕಾಗಿಲ್ಲ. ಚಿಂತಿಸಿದುದಾದರೆ ಅವನು ನಾಸ್ತಿಕನಾದಂತೆಯೇ ಆಗುವುದು. ಆತ್ಮಯಾತ್ರೆ ಭಗವದಧೀನವಾದುದು. ಅದರಲ್ಲಿಯೂ ಅವನು ಚಿಂತಿಸಬೇಕಾದುದಿಲ್ಲ. ಚಿಂತಿಸುವುದಾದರೆ ಆತ್ಮಸಮರ್ಪಣ ಸುಳ್ಳೆನಿಸುವುದು. ಆದುದರಿಂದ ಇವೆರಡು ಅಂಶಗಳಲ್ಲಿಯೂ ಅವನು ಮಾಡಬೇಕಾದುದೇನೂ ಇಲ್ಲ. ಹಾಗಾದರೆ ಮನಸ್ಸು, ವಾಕ್ಕು, ಶರೀರಗಳೆಂಬ ತ್ರಿಕರಣಗಳಿಂದ ಅವನು ಬೇಕಾದ ಹಾಗೆ ವ್ಯವಹರಿಸಬಹುದೇ ಎಂದರೆ ಅದು ಅವನಿಗೆ ಸ್ವರೂಪವಲ್ಲ. ಬೇರೆ ಮೋಕ್ಷೋಪಾಯದಲ್ಲಿ ಅವನು ಆಸಕ್ತಿ ಇಲ್ಲದವನಾಗಬೇಕೇ ವಿನಾ ಮುಂದೆ ಬರುವ ಕೈಂಕರ್ಯಾಂಶದಲ್ಲಿ ಅವನು ತ್ರಿಕರಣಪೂರ್ವಕವಾಗಿ ತೊಡಗಬೇಕು. ಇಲ್ಲಿರುವವರೆಗೂ ಅವನು ಮಾಡಬಹುದಾದ ಕೈಂಕರ್ಯಗಳು ಐದು ಬಗೆ : ೧) ಶ್ರೀ ಭಾಷ್ಯವನ್ನು ಅಧ್ಯಯನಮಾಡಿ ಅದರಂತೆ ಪ್ರವರ್ತಿಸುವುದು. ೨) ಅದಕ್ಕೆ ಯೋಗ್ಯತೆ ಇಲ್ಲದಿದ್ದರೆ ಆಳ್ವಾರರುಗಳ ಶ್ರೀಸೂಕ್ತಿಗಳನ್ನು ಅನುಸಂಧಾನ ಮಾಡಿ ಅವುಗಳ ಪ್ರವರ್ತನದಲ್ಲಿ ತೊಡಗುವುದು. ೩) ಅದೂ ಆಗದಿದ್ದರೆ ಭಗವಂತನು ನಿತ್ಯವಾಸ ಮಾಡುತ್ತಿರುವ ದಿವ್ಯದೇಶಗಳಲ್ಲಿ ವಾಸಿಸುತ್ತಾ ಭಗವಂತನ ದೀಪಸೇವೆ, ಮಾಲಾ ಸಮರ್ಪಣ, ನಿವೇದನಸೇವೆ ಮೊದಲಾದವುಗಳಲ್ಲಿ ಮಗ್ನರಾಗುವುದು. ೪) ಇದೂ ಸಾಧ್ಯವಿಲ್ಲದೆ ಹೋದರೆ ದ್ವಯಮಂತ್ರದ ಅರ್ಥಾನುಸಂಧಾನವನ್ನು ನಿರಂತರವಾಗಿ ಮಾಡುತ್ತಿರುವುದು. ೫) ಇದೂ ಅಶಕ್ಯವೆನಿಸಿದರೆ ನಮ್ಮವನೆಂದು ಅಭಿಮಾನಿಸುವ ವೈಷ್ಣವನ ಸದಾಶ್ರಯವನ್ನು ಹೊಂದಿದ್ದು ಬಿಡುವುದು."

ಪ್ರಪನ್ನನು ಇಲ್ಲಿರುವಾಗ ಕಾಲವನ್ನೆಲ್ಲಾ ಭಗವಂತನ ಸೇವೆಗೂ ಭಾಗವತರ ಸೇವೆಗೂ ಮೀಸಲಾಗಿಟ್ಟು ಭಗವದನುಭವದ ಮಹದಾನಂದವನ್ನು ಪಡೆಯಬೇಕೆಂಬುದನ್ನು ಇವು ಸೂಚಿಸುತ್ತವೆ. ಭಗವಚ್ಚಿಂತನೆ ಇಲ್ಲದ ಕಾಲ ಸ್ವಲ್ಪವೂ ಅಂಥವನಿಗೆ ಇರುವುದಿಲ್ಲ. ಇಂಥವನು ಲೋಕದಲ್ಲಿ ಬದುಕಿರುವಾಗ ತನ್ನ ಜೀವಿತದ ಧ್ಯೇಯವು ಸ್ವಲ್ಪವೂ ಮಸಕಾಗದಂತೆ ಜಾಗ್ರತೆಯಿಂದ ವರ್ತಿಸಬೇಕು. ಭಗವಂತನನ್ನು ಪ್ರೇಮಿಸುವ ಭಕ್ತಶ್ರೇಷ್ಠರೊಡನೆ ಬೆರೆತು ಸಂತೋಷಿಸಬೇಕು. ಭಗವದ್ದ್ವೇಷಿಗಳನ್ನು ಕಂಡರೆ

acharya.org

ಸರ್ಪಾಗ್ನಿಗಳನ್ನು ಕಂಡರೆ ಹೇಗೋ ಹಾಗೆ ಹೆದರಿ ದೂರವಾಗಬೇಕು. ಉದಾಸೀನರೊಡನೆ ಉದಾಸೀನತೆಯಿಂದ ವರ್ತಿಸಬೇಕು. ಇದು ಪ್ರಪನ್ನನು ನಡೆದುಕೊಳ್ಳಬೇಕಾದ ಮಾರ್ಗ. ಹೀಗೆ ಮಾಡದೆ ಇರುವುದಕ್ಕೆ ಅರ್ಥಕಾಮಗಳ ಪ್ರಭಾವ ಕಾರಣವೆನಿಸುವುದು. ಅರ್ಥಕಾಮಗಳಿಗೆ ವಶನಾಗಿ ಭಕ್ತರನ್ನು ಆದರಿಸದೆ ಇದ್ದರೆ, ಕ್ಷುದ್ರಜನರಾದ ಭಗವದ್ದ್ವೇಷಿಗಳನ್ನು ಆದರಿಸಿದರೆ ಭಗವಂತನಿಗೆ ಆಗ್ರಹ ಉಂಟಾಗುವುದು. ಧರ್ಮಕ್ಕೆ ವಿರುದ್ಧವಲ್ಲದ ಅರ್ಥಕಾಮಗಳು ವಿಹಿತವಾದ ಕಾರಣ ಪ್ರಪನ್ನನು ಧರ್ಮಕ್ಕೆ ವಿರುದ್ಧವಾದ ಅರ್ಥಕಾಮಗಳನ್ನು ಬಿಟ್ಟು ಯಾವಜ್ಜೀವವೂ ಭಗವಂತನಿಗೆ ಅನುಕೂಲಾಚರಣೆಯನ್ನೇ ಮಾಡಬೇಕು. ಭಾಗವತರ ಬಗೆಗೆ ಅನಾದರ ತೋರಬಾರದು ಹಾಗೂ ಭಗವತ್ಪ್ರತಿಕೂಲರ ಸಂಸರ್ಗ ಹೊಂದಬಾರದು ಎಂಬುದನ್ನು—

'ಅನಾದೃತಸುತಂ ಗೇಹೀ ಪುರುಷೋ ನಾಭಿನಂದತಿ |
ತಥಾನರ್ಚಿತಸದ್ಭಕ್ತಂ ಭಗವಾನ್ನಾಭಿನಂದತಿ ॥ ಎಂದೂ
ಯೇ ದ್ವಿಷಂತಿ ಮಹಾತ್ಮಾನಂ ನ ಸ್ಮರಂತಿ ಚ ಕೇಶವಂ |
ನ ತೇಷಾಂ ಪುಣ್ಯತೀರ್ಥೇಷು ಗತಿಸ್ಸಂಸರ್ಗಿಣಾಮಪಿ ॥'

ಎಂದೂ ತಿಳಿಸಿದ್ದಾರೆ. ಪ್ರತಿಕೂಲ ಸಂಸರ್ಗವು ಭಗವತ್ಪ್ರೇಮವನ್ನು ಹೋಗಲಾಡಿಸುವುದೆಂದು ಹೇಳುವುದರಿಂದ ಇದರ ಬಗೆಗೆ ಬಹಳ ಎಚ್ಚರಿಕೆಯಿಂದಿರಬೇಕು.

ಪ್ರಪನ್ನನು ಇಲ್ಲಿರುವ ಕಾಲವನ್ನು ಬಹಳ ಅಪೂರ್ವವಾದ ಕಾಲವೆಂದು ಭಾವಿಸುತ್ತಾನೆ. ಮುಂದೆ ಬರಲಿರುವ ಭಗವಂತನ ನಿತ್ಯಕೈಂಕರ್ಯಕ್ಕೆ ತನ್ನನ್ನು ಅಣಿಗೊಳಿಸುವ ಪೂರ್ವ ಕೈಂಕರ್ಯವು ಇಲ್ಲಿ ಅವನಿಗೆ ಲಭಿಸುತ್ತದೆ. ಆದುದರಿಂದ ತನ್ನ ಭಗವನ್ನಿಷ್ಠೆಯನ್ನು ಉಜ್ವಲಗೊಳಿಸುವಂತಹ ಕೈಂಕರ್ಯಗಳಲ್ಲಿ ಪ್ರಪನ್ನ ತೊಡಗಬೇಕು. ಅವನನ್ನು ಬಿಟ್ಟು ಮತ್ತೊಂದನ್ನೂ ಬಯಸನಿವನು. ಸರ್ವವಿಧದಲ್ಲಿಯೂ ಸರ್ವವಿಧವಾದ ವ್ಯಾಪಾರಗಳಲ್ಲಿಯೂ ಆ ಭಗವಂತನ ಸೇವೆಯನ್ನೇ ಇವನು ಮಾಡುವವನಾಗುತ್ತಾನೆ. 'ಅಹಂ ಸರ್ವಂ ಕರಿಷ್ಯಾಮಿ ಜಾಗ್ರತಃ ಸ್ವಪತಶ್ಚ ತೇ' ಎಂಬ ಲಕ್ಷ್ಮಣನ ನಿಷ್ಠೆಯಂತೆ ಇವನ ನಿಷ್ಠೆ ಇರುವುದು.

'ವರ್ತಮಾನಃ ಸದಾ ಚೈವಂ ಪಾಂಚಕಾಲಿಕವರ್ತ್ಮನಾ |
ಸ್ವಾರ್ಜಿತೈಃ ಗಂಧಪುಷ್ಪಾದ್ಯೈಃ ಶುಭೈಃ ಶಕ್ತ್ಯನುರೂಪತಃ |
ಆರಾಧಯನ್ ಹರಿಂ ಭಕ್ತ್ಯಾ ಗಮಯಿಷ್ಯಾಮಿ ವಾಸರಾನ್ ॥'

ಎಂಬಂತೆ ಭಗವಂತನ ಸೇವೆಯಲ್ಲಿ ಪ್ರಪನ್ನನು ನಿರತನಾಗುತ್ತಾನೆ.

ತಾನಿರುವವರೆಗೂ ತತ್ತ್ವಜ್ಞಾನವನ್ನು ತಿಳಿದವರಿಂದ ಪಡೆದುಕೊಳ್ಳುತ್ತಾನೆ. ಭಗವಂತನಲ್ಲಿ ತನ್ನ ಭಕ್ತಿ ಉಜ್ವಲವಾಗಿರುವಂತೆ ಬೇಡುತ್ತಾನೆ. ತಾನು ಕೃತಕೃತ್ಯನೆಂದು ಭಾವಿಸಿ ಇವುಗಳಲ್ಲಿ ಅವನು ಅನಾದರ ಮಾಡಬಾರದು. ಈ ಜ್ಞಾನಭಕ್ತಿಗಳು ಪರಮ

acharya.org

ಶೇಷಿಯಾದ ಆ ಭಗವಂತನನ್ನು ಅನುಭವಿಸಲೂ ಹಾಗೂ ಅದರಿಂದ ಪರಮಾನಂದವನ್ನು ಪಡೆಯಲೂ ಸಾಧಕವಾಗುತ್ತವೆ. ಇದನ್ನೇ

'ತತ್ಪಾದಭಕ್ತಿಜ್ಞಾನಾಭ್ಯಾಂ ಫಲಮನ್ಯತ್ಕದಾಚನ ।
ನ ಯಾಚೇತ್ಪುರುಷೋ ವಿಷ್ಣುಂ ಯಾಚನಾನ್ನಶ್ಯತಿ ಧ್ರುವಮ್ ॥'

ಎಂದು ತಿಳಿಸಿದ್ದಾರೆ. ಈ ಅರ್ಥಗಳಲ್ಲಿ ನಿಷ್ಠೆಯುಳ್ಳವರೊಡನೆ ಇವನು ಬೆರೆತು ಅವರ ಅನುಷ್ಠಾನಾದಿಗಳಲ್ಲಿ ತನಗೆ ಅನುರೂಪವಾದುದನ್ನು ಆರಿಸಿ ಆಚರಿಸಿಕೊಂಡು ಬರುತ್ತಾನೆ. ಪ್ರಪನ್ನನಾದವನು

೧) ಆತ್ಮೋನ್ನತಿ ಮತ್ತು ಪರನಿಕರ್ಷಾನುಸಂಧಾನವೆಂಬ ದೋಷದ ಬಲೆಗೆ ತಾನು ಬೀಳದಂತೆ ಎಚ್ಚರದಿಂದಿರಬೇಕು.

೨) ಆಚಾರ್ಯರುಗಳೂ ಆಳ್ವಾರರುಗಳೂ ಅನುಸಂಧಾನ ಮಾಡಿರುವಂತೆ ತನ್ನ ಭಗವತ್ಪಾರತಂತ್ರ್ಯವನ್ನು ಅನುಸಂಧಾನ ಮಾಡಬೇಕು.

೩) ಅನಾದಿಕಾಲದಿಂದ ತನಗುಂಟಾಗಿದ್ದ ಅನರ್ಹತೆಗಾಗಿ ದುಃಖಿಸದೆ ಭಗವಂತನ ದಯೆಯಿಂದ ತನಗೆ ಈಗ ಲಭಿಸಿರುವ ಸದವಕಾಶಕ್ಕಾಗಿ ಸಂತೋಷಿಸಿ ಮುಂಬರುವ ಫಲಕ್ಕೆ ತನ್ನನ್ನು ಅರ್ಹನನ್ನಾಗಿಸಿಕೊಳ್ಳಬೇಕು.

೪) ಅಯೋಗ್ಯ ವಿಷಯಗಳಿಂದ ಮನಸ್ಸನ್ನು ತಿರುಗಿಸಿ ಯೋಗ್ಯವಾದ ವಿಚಾರಗಳಲ್ಲಿ ಮನಸ್ಸನ್ನು ಮೂಡಿಸಿ ಭಗವಂತನ ಕಟ್ಟಳೆಯಾದ ನಿತ್ಯನೈಮಿತ್ತಿಕಾದಿ ಕರ್ಮಗಳನ್ನು ಅನುಷ್ಠಿಸಿ ಅವನ ಮನಸ್ಸಂತೋಷಪಡಿಸಬೇಕು.

೫) ಪರಮಕೃಪೆಯಿಂದ ಭಗವಂತನು ಕೈಕೊಂಡಿರುವ ಅರ್ಚಾವತಾರವನ್ನು ಪೂಜಿಸಿ ಸೇವಿಸಿ ಧನ್ಯನಾಗಬೇಕು. ಎಲ್ಲ ಕಾಲದ ಎಲ್ಲ ಜನರಿಗೂ ಗೋಚರನಾಗಿ ಅರ್ಚಾರೂಪಿಯಾದ ಭಗವಂತನು ಅನುಗ್ರಹ ಮಾಡುತ್ತಿದ್ದಾನೆ. ಪಾವನತಮವಾದ ಈ ರೂಪವನ್ನು ನಿರಂತರವಾಗಿ ಸೇವಿಸಬೇಕು. ಪರತ್ವ ಮತ್ತು ಸೌಲಭ್ಯಕ್ಕೆ ಅನುರೂಪವಾದ ವೃತ್ತಿಗಳಲ್ಲಿ ಭಗವಂತನ ಅರ್ಚಾರೂಪವನ್ನು ಸೇವಿಸಬೇಕೆಂದು—

ಸತೀವ ಪ್ರಿಯಭರ್ತಾರಂ ಜನನೀವ ಸ್ತನಂಧಯಮ್ ।
ಆಚಾರ್ಯಂ ಶಿಷ್ಯವನ್ಮಿತ್ರಂ ಮಿತ್ರವಲ್ಲಾಲಯೇದ್ಧರಿಮ್ ॥
ಸ್ವಾಮಿತ್ವೇನ ಸುಹೃತ್ವೇನ ಗುರುತ್ವೇನ ಚ ಸರ್ವದಾ ।
ಪಿತೃತ್ವೇನ ತಥಾ ಭಾರ್ಯೋ ಮಾತೃತ್ವೇನ ಚ ಮಾಧವಃ ॥
ಯಥಾ ಯುವಾನಂ ರಾಜಾನಂ ಯಥಾ ಚ ಮದಹಸ್ತಿನಂ ।
ಯಥಾ ಪ್ರಿಯಾತಿಥಿಂ ಯೋಗ್ಯಂ ಭಗವಂತಂ ತಥಾರ್ಚಯೇತ್ ॥
ಯಥಾ ಚ ಪುತ್ರಂ ದಯಿತಂ ತಥೈವೋಪಚರೇದ್ಧರಿಮ್ ॥

ಎಂದು ಉಪದೇಶಿಸಿದ್ದಾರೆ.

೬) ತನ್ನಲ್ಲಿ ಕರುಣೆ ತೋರಿ ತತ್ತ್ವಹಿತ ಪುರುಷಾರ್ಥಗಳ ಯಥಾರ್ಥಜ್ಞಾನವನ್ನು ಪದೇಶಿಸಿದ ಆಚಾರ್ಯರುಗಳಲ್ಲಿ ಕೃತಜ್ಞನಾಗಿರಬೇಕು.

acharya.org

ಉತ್ತರಕೃತ್ಯದಲ್ಲಿ ಪ್ರಪನ್ನನು ಕರಣತ್ರಯದಿಂದಲೂ ಮಾಡಬೇಕಾದವು ಕೆಲವಿವೆ, ಬಿಡಬೇಕಾದವು ಕೆಲವಿವೆ. ಮಾಡಬೇಕಾದವು ಯಾವುವೆಂದರೆ—

೧) ಆಚಾರ್ಯನು ಕೃಪೆಯಿಂದ ಮಾಡಿದ ಪ್ರಥಮಕಟಾಕ್ಷವೇ ಮೊದಲಾದ ಉಪಕಾರವನ್ನು ಎಂದೆಂದಿಗೂ ಸ್ಮರಿಸಿ ಕೃತಜ್ಞನಾಗಿರಬೇಕು.

೨) ಉಪಾಯನಿಷ್ಠೆ ಮಸಕಾಗದೆ ಇರುವುದಕ್ಕಾಗಿ ಸದಾ ದ್ವಯಮಂತ್ರಾನುಸಂಧಾನ ಮಾಡಬೇಕು.

೩) ಭಗವತ್ಕೈಂಕರ್ಯದ ಪರಮಕಾಷ್ಠೆಯಾದ ಭಾಗವತ ಕೈಂಕರ್ಯವನ್ನು ಪ್ರಧಾನವಾದ ಕರ್ತವ್ಯವೆಂದು ಭಾವಿಸಿ ನಡೆಸಬೇಕು.

ಪ್ರಪನ್ನನು ಬಿಡಬೇಕಾದವು ಯಾವುವೆಂದರೆ—

೧) ಪರಮಪುರುಷಾರ್ಥದಲ್ಲಿ ರುಚಿ ತಪ್ಪದಿರುವುದಕ್ಕಾಗಿ ಮುಖ್ಯವಾಗಿ ವಿಷಯಾಸ್ವಾದವನ್ನು ಬಿಡಬೇಕು.

೨) ಕಾರ್ಪಣ್ಯವು ಅಳಿಯದಿರುವುದಕ್ಕಾಗಿ ಇವನು ಮುಖ್ಯವಾಗಿ ಆತ್ಮೋತ್ಕರ್ಷವನ್ನು ಹೇಳಿಕೊಳ್ಳಬಾರದು.

೩) ಭಗವಂತನು ನಮ್ಮ ಮೇಲೆ ಕುಪಿತನಾಗದೆ ಇರುವುದಕ್ಕಾಗಿ ನಾವು ಸರ್ವಥಾ ಬ್ರಹ್ಮವಿದಪಚಾರ ಮಾಡಬಾರದು.

ಪ್ರಪನ್ನನು ಶಾಸ್ತ್ರೀಯ ಸರಣಿಯನ್ನನುಸರಿಸಬೇಕು

ಭಗವಂತನಲ್ಲಿ ಪ್ರಪತ್ತಿ ಮಾಡಿದ ಸಾಧಕನು ಮುಕ್ತನಂತಾದರೂ ಸಂಸಾರದ ಬಂಧದಿಂದ ಬಿಡುಗಡೆ ಹೊಂದಿ ಆ ಭಗವಂತನನ್ನು ಸೇರುವವರಗೆ ಈ ಲೋಕದಲ್ಲಿಯೇ ಇರುತ್ತಾನೆ. ಇಂಥ ಪ್ರಪನ್ನನು ಭಗವಂತನ ಆಜ್ಞೆಯನ್ನು ಶಾಸ್ತ್ರದ ಮೂಲಕ ತಿಳಿದುಕೊಂಡವನಾಗಿ ಅದನ್ನು ಚಾಚೂ ತಪ್ಪದೆ ಪಾಲಿಸಬೇಕು. ದೇಶಿಕರು–'ಅಲಂಘ್ಯಾಂ ಆಮೋಕ್ಷಾದನುಸರತಿ ಶಾಸ್ತ್ರೀಯಸರಣಿಮ್' ಎಂದು ಈ ಅಂಶವನ್ನು ಹೇಳಿದ್ದಾರೆ.

'ಶ್ರುತಿಃ ಸ್ಮೃತಿರ್ಮಮೈವಾಜ್ಞಾ' ಎಂಬುದು ಭಗವಂತನ ನುಡಿ. ಆದುದರಿಂದ ಈ ಶರೀರದೊಡನೆ ಇರುವವರೆಗೆ ಶಾಸ್ತ್ರವಶ್ಯನಾಗಿ ಭಗವತ್ಕೈಂಕರ್ಯವನ್ನು ನಡೆಸಬೇಕು. ಈ ಶಾಸ್ತ್ರೀಯಕರ್ಮಾನುಷ್ಠಾನ ಭಗವತ್ಪ್ರೀತ್ಯರ್ಥವಾಗಿ ಆಗತಕ್ಕದ್ದು ಎಂಬುದನ್ನು—

> 'ನಿಜಕರ್ಮಾದಿ ಭಕ್ತ್ಯಂತಂ ಕುರ್ಯಾತ್ಪ್ರೀತ್ಯೈವ ಕಾರಿತಃ |
> ಉಪಾಯತಾಂ ಪರಿತ್ಯಜ್ಯ ನ್ಯಸ್ಯೇದ್ದೇವೇ ತು ತಾಮಭೀಃ ||

ಎಂದು ಯಾಮುನರು ಹೇಳಿದ್ದಾರೆ. ಇದು ಮೋಕ್ಷಸಾಧನರೂಪವಾದುದಲ್ಲ, ಆದರೆ ಭಗವತ್ಪ್ರೀತಿಗಾಗಿ ಮಾಡುವ ಕರ್ತವ್ಯಪಾಲನೆ. ಶಾಸ್ತ್ರದ ಕಟ್ಟಳೆಯನ್ನು ಪರಿಪಾಲಿ

acharya.org

ಸಲೇಬೇಕೆಂಬುದನ್ನು 'ಮನೀಷೀ ವೈದಿಕಾಚಾರಂ ಮನಸಾಪಿ ನ ಲಂಘಯೇತ್ ।' ಎಂದು ತಿಳಿಸಲಾಗಿದೆ.

ಹಾಗೆ ಶಾಸ್ತ್ರೀಯನಿಯಮಗಳನ್ನು ಅನುಸರಿಸದೆ ಹೋದರೆ ಆಗುವ ಹಾನಿ ಯಾವುದು ? ಅದು ಭಗವಂತನ ಅಪ್ರಸನ್ನತೆಯೇ. ಅದಕ್ಕಿಂತ ಹೆಚ್ಚಿನ ಹಾನಿ ಇಲ್ಲ. ಮುಕ್ತನಾಗುವ ಮೊದಲು ಯಾವುದಾದರೊಂದು ಅನಿಷ್ಟವನ್ನು ಅದು ಉಂಟುಮಾಡಬಹುದು. ಸಾತ್ತ್ವಿಕನಿಗೆ ಭಗವಂತನ ಅಪ್ರೀತಿಗಿಂತ ಹೆಚ್ಚಾದ ಶಿಕ್ಷೆ ಬೇಕಾಗಿಲ್ಲ. ಆ ಅಪ್ರೀತಿ ಶಮನವಾಗುವುದಕ್ಕಾಗಿ ಭಗವಂತನಲ್ಲಿ ಶರಣಾಗುವವರೆಗೆ ಅವನಿಗೆ ಬಹಳ ನೋವನ್ನುಂಟುಮಾಡುವುದಿದು. ಹಾಗೆ ನೋವುಂಟಾಗದೆ ಹೋದಲ್ಲಿ ಸ್ವಾಮಿಯ ವಿಷಯದಲ್ಲಿ ಪ್ರಾವಣ್ಯವಾಗಲೀ ಕೈಂಕರ್ಯರೂಪವಾದ ಮೋಕ್ಷದಲ್ಲಿ ರುಚಿಯಾಗಲೀ ಇಲ್ಲವೆಂದು ಹೇಳಬೇಕಾಗುತ್ತದೆ. ಆದರೆ ಶಾಸ್ತ್ರೀಯ ನಿಯಮನವನ್ನು ಅನುಸರಿಸುವುದರಿಂದ ಭಗವಂತನ ಪ್ರಸನ್ನತೆಯುಂಟಾಗುವುದು.

ಶಾಸ್ತ್ರವಿಭಾಗ ಎರಡು ವಿಧವಾಗಿದೆ. ಆಜ್ಞಾಕರ್ತವ್ಯ ಮತ್ತು ಅನುಜ್ಞಾಕರ್ತವ್ಯ ಎಂದು. ಮೊದಲನೆಯ ಆಜ್ಞಾಕರ್ತವ್ಯ ಭಗವಂತನ ನಿಗ್ರಹ ನಮ್ಮ ಮೇಲೆ ಆಗದೆ ಇರುವುದಕ್ಕಾಗಿ ಮಾಡಬೇಕಾದುದು. ಎರಡನೆಯ ಅನುಜ್ಞಾಕಾರ್ಯ ಆಯಾ ಫಲ ಪ್ರಾಪ್ತಿಯನ್ನುದ್ದೇಶಿಸಿ ಮಾಡತಕ್ಕದ್ದಾಗಿದೆ. ಪ್ರಪನ್ನರು ಆಜ್ಞಾಕರ್ಮಗಳನ್ನು ಬಿಡಕೂಡದು. ಹಾಗೆಯೇ ಇತರ ಫಲಗಳಲ್ಲಿ ಅಪೇಕ್ಷೆಯನ್ನು ಹೊಂದಿ ಅನುಜ್ಞಾಕರ್ಮವನ್ನು ಮಾಡಲೂಕೂಡದು. ಭಗವಂತನ ಪ್ರೀತಿಗಾಗಿ ಭಗವಂತನ ಕೈಂಕರ್ಯವೆಂಬುವ ರೀತಿಯಲ್ಲಿ ಕಾಮ್ಯಕರ್ಮಗಳನ್ನು ಮಾಡಿದರೆ ಯಾವ ದೋಷವೂ ಉಂಟಾಗದು. ಕಾಮ್ಯಕರ್ಮ ಮಾಡದೆ ಇದ್ದರೆ ಆಜ್ಞಾತಿಲಂಘನವಿಲ್ಲ. ಆದರೆ ಆಜ್ಞಾಕರ್ಮಗಳಾದ ನಿತ್ಯನೈಮಿತ್ತಿಕ ಕರ್ಮಗಳನ್ನು ಮಾಡದಿದ್ದರೆ ಭಗವಂತನ ನಿಗ್ರಹಕ್ಕೆ ಪಾತ್ರರಾಗಬೇಕಾಗುತ್ತದೆ. ಇದನ್ನೇ ದೇಶಿಕರವರು

'ಆಜ್ಞಾನುಜ್ಞಾವಿಭಾಗೇನ ದ್ವಿಧಾ ಶಾಸ್ತ್ರೀಯಪದ್ಧತಿಃ ।
ನಿಗ್ರಹಾನುದಯಾಯಾದ್ಯಾ ಪರಾ ತತ್ತತ್ಫಲಾಪ್ತಯೇ ॥

ಎಂದು ತಿಳಿಸಿದ್ದಾರೆ.

ಪ್ರಪನ್ನನು ಅಪರಾಧ ದೂರನಾಗಬೇಕು

ಪ್ರಪನ್ನನು ಪ್ರಪತ್ತ್ಯುತ್ತರ ಕಾಲದಲ್ಲಿ ಈ ಲೋಕದಲ್ಲಿರುವಾಗ ಸಾಮಾನ್ಯವಾಗಿ ಅಪರಾಧ ಮಾಡುವ ಸಂಭವವೇ ಇರುವುದಿಲ್ಲ. ಭಗವಂತನಿಗೆ ತಾನು ಶೇಷಭೂತನೆಂದೂ ತನಗೆ ಭಗವತ್ಕೈಂಕರ್ಯವೇ ಪರಮಫಲವೆಂದೂ ಪ್ರಪನ್ನ ಮನಗಂಡವನು. ಆದುದರಿಂದ ಸಾಮಾನ್ಯವಾಗಿ ಬುದ್ಧಿಪೂರ್ವಕವಾಗಿ ಪಾಪಾಚರಣೆಯನ್ನು ಅವನು ಮಾಡಲಾರ. ಪ್ರಾರಬ್ಧಕರ್ಮಕ್ಕನುಗುಣವಾಗಿ ದೇಶಕಾಲಾವಸ್ಥೆಗಳ ಪರಿಣಾಮವಾಗಿ

acharya.org

ಪ್ರಾಸಮಾದಿಕವಾಗಿ ಅವನಿಗೆ ತಿಳಿಯದೆ ಸಂಭವಿಸುವ ಪಾಪಗಳು ಅವನಿಗೆ ಅಂಟುವುದಿಲ್ಲ. ಆದರೂ ಅವರವರ ಪ್ರಾರಬ್ಧಕರ್ಮಾನುಸಾರವಾಗಿ ಕೆಲವು ವೇಳೆ ಬುದ್ಧಿಪೂರ್ವಕವಾದ ಪಾಪಾಚರಣೆ ಸಂಭವಿಸಬಹುದು. ಪ್ರಪತ್ತಿ ಮಾಡುವಾಗ ಪ್ರಪತ್ತ್ಯುತ್ತರ ಕಾಲದಲ್ಲಿ ಪಾಪಮಾಡುವ ಸಂಭವಗಳೆಲ್ಲಾ ಹೋಗಲೆಂದು ಬೇಡಿ ಪ್ರಪತ್ತಿ ಮಾಡದೆ ಇರುವ ಸಂದರ್ಭದಲ್ಲಿ ಬುದ್ಧಿಪೂರ್ವಕವಾಗಿಯೂ ವಿಪರೀತಾಚರಣೆ ಸಂಭವಿಸಬಹುದು. ಅಂಥ ಸಂದರ್ಭದಲ್ಲಿ ಪ್ರಪನ್ನನು ಮಾಡಬೇಕಾದುದೇನು ಎಂಬ ಪ್ರಶ್ನೆ ಏಳುತ್ತದೆ. ಪ್ರಪತ್ತಿ ಮಾಡಿದ ಮೇಲೆ ಅವನ ರಕ್ಷಣೆಯ ಹೊಣೆ ಪೂರ್ಣವಾಗಿ ಭಗವಂತನದೇ ಆಗುವ ಕಾರಣ ಬುದ್ಧಿಪೂರ್ವಕವಾದ ಪಾಪ ಸಂಘಟಿಸಿದರೂ ಅವನು ಯಾವ ಪರಿಹಾರವನ್ನೂ ಮಾಡಿಕೊಳ್ಳಬೇಕಾಗಿಲ್ಲವೆಂದು ಕೆಲವರು ವಾದಿಸುತ್ತಾರೆ. ಅಂಥ ಪಾಪಾಚರಣೆಯಿಂದ ಅವನಿಗೆ ಯಾವ ಶಿಕ್ಷೆಯೂ ಆಗದೆಂದೂ ಅವನ ಫಲಪ್ರಾಪ್ತಿಯಲ್ಲಿ ವ್ಯತ್ಯಾಸವಿಲ್ಲವೆಂದೂ ಅವನಿಗೆ ಭಗವತ್ಕೈಂಕರ್ಯಪ್ರಾಪ್ತಿಯಲ್ಲಿ ಯಾವ ಕೊರೆಯೂ, ಆಗುವುದಿಲ್ಲವೆಂದೂ ಇವರು ಹೇಳುತ್ತಾರೆ. ಈ ವಾದಗಳೆಲ್ಲಾ ಪ್ರಪತ್ತಿಯ ಮಹಿಮೆಯನ್ನು, ಭಗವಂತನ ಕಾರುಣ್ಯವನ್ನು ಸಮರ್ಥಿಸುವ ವಾದಗಳಾಗಿವೆ ಎಂದು ದೇಶಿಕರು ತಿಳಿಸುತ್ತಾರೆ.

ಪ್ರಪನ್ನನು ಸಾಮಾನ್ಯವಾಗಿ ಅಪರಾಧದೂರನಾಗಿರುವನು. ಆದರೂ ಅಪರಾಧ ಸಂಭವ ಪ್ರಾರಬ್ಧಕರ್ಮಾನುಸಾರ ಉಂಟಾಗಬಹುದು. ಹಾಗೆ ಪಾಪಾಚರಣೆ ಸಂಭವಿಸಿದರೆ ಪ್ರಪನ್ನ ಆ ಪಾಪಕೃತ್ಯಗಳನ್ನು ಕ್ಷಮಿಸಬೇಕೆಂದು ಬೇಡಿ ಭಗವಂತನಲ್ಲಿ ಶರಣಾಗಬೇಕು. ಸಹಜವಾದ ಸೌಹಾರ್ದವನ್ನುಳ್ಳ ಭಗವಂತನು ರಕ್ಷಕನಾಗಿದ್ದು ಪ್ರಪನ್ನನನ್ನು ಕಾಪಾಡುವವನೇ ಆಗಿದ್ದಾನೆ. ಈ ವಿಧವಾದ ವಿಪರೀತಾನುಷ್ಠಾನಗಳು ಸಂಭವಿಸಿದುದಕ್ಕೆ ಲಜ್ಜಿತನಾಗಿ, ಅನುತಾಪ ಸೂಚಿಸಿ ಪ್ರಪನ್ನ ಭಗವಂತನಲ್ಲಿ ಪ್ರಾಯಶ್ಚಿತ್ತರೂಪವಾದ ಪ್ರಪತ್ತಿಯನ್ನು ಮಾಡಬೇಕೆಂದು ಶಾಸ್ತ್ರಗಳು

> ಅಪಾಯಸಂಪ್ಲವೇ ಸದ್ಯಃ ಪ್ರಾಯಶ್ಚಿತ್ತಂ ಸಮಾಚರೇತ್ ।
> ಪ್ರಾಯಶ್ಚಿತ್ತಿರಿಯಂ ಸಾತ್ರ ಯತ್ಪುನಶ್ಶರಣಂ ವ್ರಜೇತ್ ॥ ಎಂದೂ
> ಅಜ್ಞಾನಾದಥವಾಜ್ಞಾನಾದಪರಾಧೇಷು ಸತ್ಸ್ವಪಿ ।
> ಪ್ರಾಯಶ್ಚಿತ್ತಂ ಕ್ಷಮಸ್ವೇತಿ ಪ್ರಾರ್ಥನೈಕೈವ ಕೇವಲಂ ॥

ಎಂದೂ ತಿಳಿಸಿವೆ.

ಹೀಗೆ ಮಾಡುವ ಪ್ರಾಯಶ್ಚಿತ್ತಪ್ರಪದನ ಮಧ್ಯೆ ಸಂಭವಿಸಿದ ಪಾಪಪರಿಹಾರಕ್ಕಾಗಿ ಎಂಬುದನ್ನು ಚೆನ್ನಾಗಿ ನೆನಪಿಡಬೇಕು. ಇದು ಮೋಕ್ಷಕ್ಕಾಗಿ ಅಲ್ಲ. ಮೊದಲು ಮಾಡಿದ ಪ್ರಪತ್ತಿಗೇ ಮೋಕ್ಷವನ್ನು ಭಗವಂತನು ಕೊಡುವವನಾಗಿದ್ದಾನೆ. ಒಂದು ವೇಳೆ ಈ ರೀತಿಯಾದ ಪ್ರಾಯಶ್ಚಿತ್ತ ಪ್ರಪತ್ತಿಯನ್ನು ಮಾಡದೆ ಹೋದರೆ ಏನಾಗು

acharya.org

ವುದು ? ಅಂಥ ಪರಿಸ್ಥಿತಿಯಲ್ಲಿಯೂ ಅವನಿಗೆ ಮೋಕ್ಷ ತಪ್ಪುವುದಿಲ್ಲ. ಆದರೆ ಸಂಭವಿಸಿದ ಅಪರಾಧಕ್ಕಾಗಿ ಭಗವಂತನು ಆ ಪ್ರಪನ್ನನಿಗೆ ಲಘುವಾದ ದಂಡವನ್ನು ವಿಧಿಸುತ್ತಾನೆ. ಮಾಡಿದ ಅಪರಾಧಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡುವಂತೆ ಆ ಭಗವಂತನೇ ಪ್ರೇರಿಸುತ್ತಾನೆ. ಕಠಿಣ ಪ್ರಕೃತಿಗಳಾಗಿ ಅವನಲ್ಲಿ ಪುನಃ ಬೇಡದವರಿಗೂ ಸಹ ಶಿಕ್ಷಾರೂಪವಾದ ದಂಡವಿಶೇಷವನ್ನು ಮಾಡಿ ಪೂರ್ವಪ್ರಪತ್ತಿಗೆ ಫಲವಾದ ಮೋಕ್ಷವನ್ನು ಕೊಡುತ್ತಾನೆ. ಪ್ರಪತ್ತಿಯು ಎಂದೂ ವ್ಯರ್ಥವಾಗದು. ಅದಕ್ಕೆ ಫಲ ಕಟ್ಟಿಟ್ಟ ಬುತ್ತಿ. ಹಾಗಾದರೆ ಏಕೆ ಈ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ? ನಮ್ಮ ಅಪರಾಧಕ್ಕಾಗಿ ಲಘುವಾದ ದಂಡವನ್ನೂ ನಮ್ಮ ಮೇಲೆ ಭಗವಂತ ವಿಧಿಸದೆ ಇರುವುದಕ್ಕಾಗಿಯೂ ಅವನ ನಿರವಗ್ರಹವಾದ ಅನುಗ್ರಹ ಏಕರೂಪವಾಗಿ ನಮ್ಮ ಮೇಲೆ ಇರುವುದಕ್ಕಾಗಿಯೂ ಈ ಪ್ರಾಯಶ್ಚಿತ್ತ ಪ್ರಪದನವನ್ನು ಆಚರಿಸಬೇಕು. ಭಗವಂತನು ಇಂಥ ಪ್ರಪನ್ನರಿಗೆ ರಾಜನು ಅಂತಃಪುರದ ಪರಿಜನರಿಗೆ ವಿಧಿಸುವಂತಹ ಲಘುವಾದ ಶಿಕ್ಷೆಯನ್ನು ವಿಧಿಸುವನೆಂಬುದನ್ನು 'ಲಘುರ್ದಂಡಃ ಪ್ರಪನ್ನಸ್ಯ ರಾಜಪುತ್ರಾಪರಾಧವತ್' ಎಂದು ತಿಳಿಸಲಾಗಿದೆ. ಪ್ರಪತ್ತ್ಯುತ್ತರ ಕಾಲದಲ್ಲಿ ಸಂಭವಿಸುವ ಬುದ್ಧಿಪೂರ್ವವಾದ ಉತ್ತರಾಘದ ಪರಿಹಾರಕ್ಕಾಗಿ ಹೀಗೆ ಪ್ರಾಯಶ್ಚಿತ್ತಪ್ರಪತ್ತಿಯನ್ನು ಮಾಡಬೇಕೆಂಬುದು ಶಾಸ್ತ್ರದ ತಿರುಳು.

ಮೇಲೆ ಹೇಳಿದಂತೆ ಮೊದಲು ಮಾಡಿದ ಪ್ರಪತ್ತಿಗೆ ಫಲ ಸಿಕ್ಕಿಯೇ ಸಿಕ್ಕುತ್ತದೆ. ಅಪರಾಧ ಸಂಭವಿಸಿದಾಗ ಪ್ರಾಯಶ್ಚಿತ್ತದಿಂದ ಆ ಪಾಪಪರಿಹಾರ ಮಾಡಿಕೊಳ್ಳಬಹುದು. ಹಾಗೂ ಆಗದಿದ್ದಾಗ ಭಗವಂತನು ಲಘುವಾದ ಶಿಕ್ಷೆಯಿಂದ ಅದನ್ನು ಪರಿಹರಿಸಿ ಅವನಿಗೆ ಫಲಪ್ರದಾನಮಾಡುತ್ತಾನೆಂಬುದನ್ನು 'ಕೌಟಿಲ್ಯೇ ಸತಿ ಶಿಕ್ಷಯಾ–ಪ್ಯನಘಯನ್ ಕ್ರೋಡೀಕರೋತಿ ಪ್ರಭುಃ' ಎಂಬುದಾಗಿ ದೇಶಿಕರವರು ಹೇಳಿದ್ದಾರೆ.

ಪ್ರಪನ್ನನ ನಿಷ್ಠೆಗೆ ಗುರುತುಗಳಾವುವು ?

ತನ್ನ ಸ್ವರೂಪ, ತಾನು ಅನುಷ್ಠಿಸಿರುವ ಮೋಕ್ಷೋಪಾಯ ? ಹಾಗೂ ತಾನು ಪಡೆಯಲಿರುವ ಪರಮಪುರುಷಾರ್ಥ ಇವುಗಳ ಬಗೆಗೆ ನಿಶ್ಚಯಜ್ಞಾನವನ್ನು ಹೊಂದಿರುವ ಪ್ರಪನ್ನನು ಲೋಕದಲ್ಲಿರುವಾಗ ತನ್ನ ನಿಷ್ಠೆಯನ್ನು ಬಿಟ್ಟುಕೊಡುವುದಿಲ್ಲ. ತತ್ತ್ವನಿಷ್ಠೆ, ಉಪಾಯನಿಷ್ಠೆ, ಹಾಗೂ ಪರಮಪುರುಷಾರ್ಥನಿಷ್ಠೆಯನ್ನು ಈ ಬಗೆಯ ಸಾಧಕ ತನ್ನ ದಿನದಿನದ ವ್ಯವಹಾರದಿಂದ ತೋರಿಸಿಕೊಡುತ್ತಾನೆ. ಒಬ್ಬನಲ್ಲಿ ಇಂಥ ನಿಷ್ಠೆ ಇದೆ ಎಂಬುದಕ್ಕೆ ಕೆಲವು ಗುರುತುಗಳಿವೆ. ಅವುಗಳನ್ನು ಕುರಿತು ವೇದಾಂತದೇಶಿಕರು ತಮ್ಮ ರಹಸ್ಯತ್ರಯಸಾರದಲ್ಲಿ ಬಹಳ ಪ್ರಭಾವಪೂರ್ಣವಾಗಿ ವಿಚಾರ ಮಾಡಿದ್ದಾರೆ. ಯೋಗಶಾಸ್ತ್ರದಲ್ಲಿ ಹೇಗೋ ಹಾಗೆ ಈ ರೀತಿಯ ಲಕ್ಷಣಗಳು ನಮ್ಮಲ್ಲಿವೆಯೋ ಇಲ್ಲವೇ ಎಂಬುದನ್ನು ನಾವೇ ಪರೀಕ್ಷಿಸಿ ತಿಳಿದುಕೊಳ್ಳಬೇಕು. ಹಾಗೆ ಇಲ್ಲದಿದ್ದರೆ ಅದನ್ನು ಸಾಧಿಸಿ

acharya.org

ಕೊಂಡು ಸ್ವನಿಷ್ಠೆಯ ಸಿದ್ಧಿಯಿಂದ ಧನ್ಯರಾಗಬೇಕು.

ಸ್ವರೂಪನಿಷ್ಠೆ ಒಬ್ಬನಿಗೆ ಇದೆ ಎಂಬುವುದನ್ನು ತೋರಿಸುವ ಲಕ್ಷಣಗಳು ಕೆಳಗೆ ಕಂಡಂತೆ ಇವೆ :—

೧) ಇತರರು ತನ್ನನ್ನು ನಿಂದಿಸಿ ಅಪಮಾನಗೊಳಿಸಿದರೆ ದೇಹಾತ್ಮವಿವೇಕದಿಂದ ಅವು ತನಗೆ ಸಂಬಂಧಿಸುವುದಿಲ್ಲವೆಂದು ತಿಳಿದು ವಿಷಾದವನ್ನು ಬಿಡಬೇಕು.

೨) 'ಶಪ್ಯಮಾನಸ್ಯ ಯತ್ಪಾಪಂ ಶಪಂತಮಧಿಗಚ್ಛತಿ' ಎಂದೂ
'ಆತ್ಮದ್ರುಹಮಮರ್ಯಾದಂ ಮೂಢಮುಜ್ಝಿತಸತ್ಪಥಂ |
ಸುತರಾಮನುಕಂಪೇತ ನರಕಾರ್ಚಿಷ್ಮದಿಂಧನಮ್ ||'

ಎಂದೂ ಹೇಳಿರುವ ರೀತಿಯಲ್ಲಿ ತನ್ನನ್ನು ಪರಿಭವಿಸಿ ಅವರು ಪಾಪಕ್ಕೆ ಗುರಿಯಾಗುವರಲ್ಲಾ ಎಂದು ಅವರಲ್ಲಿ ಮರುಕ ತೋರಬೇಕು.

೩) ಆಚಾರ್ಯರುಗಳೂ ಆಳ್ವಾರರುಗಳೂ ಹೆಜ್ಜೆಹೆಜ್ಜೆಗೆ ನೆನಪು ಮಾಡಿಕೊಡುತ್ತಿರುವಂತೆ ತನ್ನ ದೋಷಗಳನ್ನು ತಾನು ಮರೆಯದಂತೆ ಅವರು ಮಾಡಿದರಲ್ಲಾ ಎಂದೂ ಅವರಲ್ಲಿ ಕೃತಜ್ಞತೆಯನ್ನು ತೋರಬೇಕು.

೪) ಎಲ್ಲ ಆತ್ಮರುಗಳೂ ಭಗವಂತನಿಗೆ ಅಧೀನರಾಗಿರುವುದರಿಂದಲೂ ಅವರವರ ಕರ್ಮಕ್ಕನುಗುಣವಾಗಿ ಆ ಭಗವಂತನು ಪ್ರೇರಿಸುವುದರಿಂದಲೂ ಅವರು ನಮ್ಮನ್ನು ನಿಂದಿಸಿ ವರ್ತಿಸುತ್ತಿದ್ದಾರೆಂದು ಭಾವಿಸಿ ನಿರ್ವಿಕಾರಚಿತ್ತತೆಯಿಂದಿರಬೇಕು.

೫) ಇಂಥ ಪರಿವಾದಗಳೇ ಮೊದಲಾದವುಗಳಿಂದ ನಮ್ಮ ಪ್ರಾರಬ್ಧಕರ್ಮವು ಕಳೆದುಹೋಗುತ್ತಿದೆಯೆಂದು ತಿಳಿದು ಸಂತೋಷ ಪಡಬೇಕು.

ಮೂಲಮಂತ್ರದ ಪ್ರಥಮಪದವಾದ ಪ್ರಣವದಿಂದಲೂ ಮಧ್ಯಮಪದವಾದ ನಮಶ್ಶಬ್ದದಿಂದಲೂ ತಿಳಿಯುವಂತೆ ತಾನು (೧) ಪ್ರಕೃತಿವಿಲಕ್ಷಣನೂ (೨) ಸರ್ವಭೂತಗಳಿಗೂ ಅನುಕೂಲವಾಗಿ ವರ್ತಿಸುವಂತಹ ಜ್ಞಾನವುಳ್ಳವನೂ (೩) ಸರ್ವತೋಮುಖವಾದ ಆಕಿಂಚಿನ್ಯವುಳ್ಳವನೂ (೪) ಸರ್ವಸಮನೂ ಕರ್ಮಾನುರೂಪ ಫಲಪ್ರದನೂ ಆದ ಭಗವಂತನಿಗೆ ಶೇಷನೂ ಪರತಂತ್ರನೂ ಆದವನೂ ಆಗಿರುವನೆಂಬ ಸ್ವಸ್ವರೂಪದಲ್ಲಿ ನಿಷ್ಠೆಯಿರುವುದನ್ನು ಮೇಲಿನ ಈ ಲಕ್ಷಣಗಳು ದೃಢಪಡಿಸುತ್ತವೆ.

ತನಗೆ ಉಪಾಯನಿಷ್ಠೆ ಇರುವುದನ್ನು ಸಮರ್ಥಿಸುವ ಲಕ್ಷಣಗಳು ಕೆಳಗೆ ಕಂಡಂತೆ ಇವೆ—

೧) ಪರಮೇಶ್ವರನನ್ನು ಬಿಟ್ಟು ತನಗೆ ಹಿತತಮರೂ ರಕ್ಷಕರೂ ಬೇರಾರೂ ಇಲ್ಲವೆಂಬ ನಿಶ್ಚಯಜ್ಞಾನವಿರಬೇಕು.

೨) ಮೃತ್ಯುವೇ ಸಂಭವಿಸುವಂಥ ಭಯಕಾರಣಗಳಿದ್ದರೂ ಸ್ವಲ್ಪವೂ ವಿಚಲಿತನಾಗದೆ ತನ್ನ ಜೀವನದ ಪರಮ ಫಲವಾದ ಮೋಕ್ಷಪ್ರಾಪ್ತಿಯು ಸಮೀಪಿಸುತ್ತಿದೆ

acharya.org

ಯೆಂದು ಭಾವಿಸಿ ಸಂತೋಷಪಡಬೇಕು. 'ಕೃತಕೃತ್ಯಾ ಪ್ರತೀಕ್ಷಂತೇ ಮೃತ್ಯುಂ ಪ್ರಿಯಮಿವಾತಿಥಿಮ್' ಎಂದು ಹೇಳಿರುವಂತೆ ಕೃತಕೃತ್ಯನಿಗೆ ಮೃತ್ಯುವಿನ ಬಗೆಗೆ ಭಯ ವಿರುವುದೇ ಇಲ್ಲ. ಶ್ರೀರಾಮನ ಬಾಹುವನ್ನು ಆಶ್ರಯಿಸಿದ ಸೀತೆಗೆ ಮತ್ತೊಂದರಿಂದಲೂ ಭಯವಾಗಲಿಲ್ಲವೆಂಬುದನ್ನು ವಾಲ್ಮೀಕಿಗಳು—

'ಗಜಂ ವಾ ವೀಕ್ಷ್ಯ ಸಿಂಹಂ ವಾ ವ್ಯಾಘ್ರಂ ವಾಪಿ ವರಾನನಾ ।
ನಾಹಾರಯತಿ ಸಂತ್ರಾಸಂ ಬಾಹೂ ರಾಮಸ್ಯ ಸಂಶ್ರಿತಾ ॥

ಎಂದು ವರ್ಣಿಸಿದ್ದಾರೆ.

೩) ತಾನು ಭಗವಂತನಲ್ಲಿ ಪರಮವಿಶ್ವಾಸವನ್ನು ಹೊಂದಿರಬೇಕು. ತನ್ನ ರಕ್ಷಣೆಯನ್ನು ರಾಮನಿಗೆ ವಹಿಸಿಕೊಟ್ಟಿದ್ದ ಸೀತಾದೇವಿ

'ಶರೈಸ್ತು ಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ ।
ಮಾಂ ನಯೇದ್ಯದಿ ಕಾಕುತ್ಸ್ಥಃ ತತ್ತಸ್ಯ ಸದೃಶಂ ಭವೇತ್ ॥'

ಎಂದು ಹೇಳಿ ರಕ್ಷಕನನ್ನು ಅವಲಂಬಿಸಿಕೊಂಡಿದ್ದುದು ಇದಕ್ಕೆ ನಿದರ್ಶನವಾಗಿದೆ.

೪) ತಾನು ಶರಣಾಗತಿ ಮಾಡಿರುವ ವಿಚಾರದಲ್ಲಿ ಸ್ವಪ್ರಯತ್ನವನ್ನು ಬಿಟ್ಟು ಬಿಟ್ಟಿರಬೇಕು

೫) ಇಷ್ಟಪ್ರಾಪ್ತಿಯೂ ಅನಿಷ್ಟನಿವೃತ್ತಿಯೂ ಆ ಭಗವಂತನಿಗೇ ಸೇರಿದುದೆಂದು ಮನಗಂಡು ನಿರ್ಭರರೂ ನಿರ್ಭಯರೂ ಆಗಬೇಕು. ಚರಮ ಶ್ಲೋಕದ ಪೂರ್ವಾರ್ಧದಲ್ಲಿ 'ಮಾಮೇಕಂ ಶರಣಂ ವ್ರಜ' ಎಂದೂ ದ್ವಯಮಂತ್ರದ ಪೂರ್ವಖಂಡವಾದ 'ಶ್ರೀಮನ್ನಾರಾಯಣಚರಣೌ ಶರಣಂ ಪ್ರಪದ್ಯೇ' ಎಂದೂ ಮೂಲಮಂತ್ರದಲ್ಲಿ ಮಧ್ಯಮ ಪದವಾದ 'ನಮಃ' ಎಂದೂ ಹೇಳಿರುವಲ್ಲಿ ಅನುಸಂಧಾನಮಾಡಬೇಕಾದ ಉಪಾಯ ಸ್ವರೂಪದಲ್ಲಿ ತನಗೆ ನಿಷ್ಠೆ ಇರುವುದನ್ನು ಮೇಲಿನ ಲಕ್ಷಣಗಳಿಂದ ಅರಿಯಬಹುದು. ತನಗೆ ಪುರುಷಾರ್ಥನಿಷ್ಠೆ ಇರುವುದೆಂಬುದನ್ನು ಕೆಳಗಿನ ಲಕ್ಷಣಗಳಿಂದ ತಿಳಿಯಬಹುದು :—

೧) ಪ್ರಾರಬ್ಧಕರ್ಮಕ್ಕನುಗುಣವಾಗಿ ಸಾರುವ ದೇಹಯಾತ್ರೆಯ ವಿಚಾರದಲ್ಲಿ ಆಸಕ್ತಿಯನ್ನು ಬಿಟ್ಟಿರಬೇಕು.

'ಉತ್ಪತ್ತಿಸ್ಥಿತಿನಾಶಾನಾಂ ಸ್ಥಿತಾ ಚಿಂತಾ ಕುತಸ್ತವ ।
ಯಥೋತ್ಪತ್ತಿರ್ಯಥಾ ನಾಶಃ ಸ್ಥಿತಿಸ್ತದ್ವದ್ಭವಿಷ್ಯತಿ ॥'

ಎಂದು ಈ ಅಂಶವನ್ನೇ ಹಿರಿಯರು ಹೇಳಿದ್ದಾರೆ.

೨) ಈ ಪ್ರಪಂಚದಲ್ಲಿ ಈಶ್ವರಸಂಕಲ್ಪವಿಲ್ಲದೆ ಯಾವುದೂ ನಡೆಯುವುದಿಲ್ಲವೆಂಬ ದೃಢನಿಶ್ಚಯವಿರಬೇಕು.

acharya.org

ಉತ್ಪತನ್ನಪಿ ಚಾಕಾಶಂ ವಿಶನ್ನಪಿ ರಸಾತಲಮ್ ।
ಅಟನ್ನಪಿ ಮಹೀಂ ಕೃತ್ಸ್ನಾಂ ನಾದತ್ತಮುಪತಿಷ್ಠತೇ ॥'
'ಅನ್ಯೋಽಹ್ಯನ್ಯಚ್ಚಿಂತಯತಿ ಸ್ವಚ್ಛಂದಂ ವಿದಧಾಮ್ಯಹಮ್ ।'

ಎಂದೂ ಈ ಅಂಶವನ್ನು ಹೇಳಲಾಗಿದೆ.

೩) ಶಾಸ್ತ್ರಕ್ಕೆ ವಿರೋಧವಲ್ಲದವೂ, ಭಗವತ್ಸಂಕಲ್ಪದಿಂದ ಪ್ರಾಪ್ತವಾದವೂ ಆದ ವಿಷಯಗಳನ್ನು ಪ್ರಾರಬ್ಧ ಕರ್ಮವು ತೀರುವುದೆಂಬ ಭಾವನೆಯಿಂದ ಅನಾಸಕ್ತಿಯಿಂದ ಅನುಭವಿಸಬೇಕು.

'ಅಪ್ರಯತ್ನಾಗತಾಸ್ಸೇವ್ಯಾಃ ಗೃಹಸ್ಥೈರ್ವಿಷಯಾಸ್ಸದಾ ।
ಪ್ರಯತ್ನೇನಾಪಿ ಕರ್ತವ್ಯಃ ಸ್ವಧರ್ಮ ಇತಿ ಮೇ ಮತಿಃ ॥'
ನ ಸನ್ನಿಪತಿತಂ ಧರ್ಮ್ಯಮುಪಭೋಗಂ ಯದೃಚ್ಛಯಾ ।
ಪ್ರತ್ಯಾಚಕ್ಷೇ ನ ಚಾಪ್ಯೇನಂ ಅನುರುಂಧೇ ಸುದುರ್ಲಭಮ್ ॥

ಎಂದು ಈ ಅಂಶವನ್ನು ಹೇಳಿದೆ.

೪) ಕರ್ಮವಿಶೇಷಾಧೀನವಾಗಿ ಬರುವ ಐಹಿಕಾಭಿವೃದ್ಧಿ ಅಥವಾ ಐಹಿಕಹಾನಿಗಳಲ್ಲಿ ಸಂತೋಷವನ್ನಾಗಲೀ ದುಃಖವನ್ನಾಗಲೀ ಹೊಂದದೇ ಇರುವುದು.

'ನ ಸುಖಂ ಪ್ರಾಪ್ಯ ಸಂಹೃಷ್ಯೇದ್ದುಃಖಂ ಪ್ರಾಪ್ಯ ನ ಸಂಜ್ವರೇತ್'

ಎಂಬಲ್ಲಿ ಈ ಅಂಶವನ್ನು ಕಾಣಬಹುದು.

೫) ತನ್ನ ಸ್ವರೂಪಕ್ಕನುರೂಪವಾದ ಭಗವತ್ಕೈಂಕರ್ಯದಲ್ಲಿ ರುಚಿಯನ್ನೂ, 'ಕದಾ ಕದಾ' ಎಂದು ಹೇಳಿರುವಂತೆ ಭಗವತ್ಪ್ರಾಪ್ತಿಯಲ್ಲಿ ತ್ವರೆಯನ್ನೂ ಹೊಂದಿರಬೇಕು.

ಈ ಲಕ್ಷಣಗಳೆಲ್ಲಾ ನಮ್ಮಲ್ಲಿದ್ದರೆ ನಮಗೆ ಪುರುಷಾರ್ಥನಿಷ್ಠೆ ಇದೆ ಎಂಬುದನ್ನರಿಯಬಹುದು. ಪ್ರಪನ್ನನ ಮನೋಭಾವವನ್ನಿವು ಸೂಚಿಸುತ್ತವೆ. ಪ್ರಪತ್ತಿಮಾಡಿದ ಮೇಲೆಯೂ ಪ್ರಪನ್ನ ಈ ಲೋಕದಲ್ಲಿ ಎಲ್ಲರೊಡನೆ ಇರುತ್ತಾನೆ. ಅವನು ಲೋಕದಲ್ಲಿ ಇತರರೊಡನೆ ಇದ್ದ ಮಾತ್ರಕ್ಕೆ ಅವನ ನಿಷ್ಠೆಗೆ ಕುಂದುಂಟಾಗುವುದಿಲ್ಲ. ಭಗವಂತನ ಸ್ಮರಣೆ ಅವನ ಬಾಳಿನಲ್ಲಿ ಏಕತಾನವಾಗಿರುವುದು. ಶಾಂತನೂ, ದಾಂತನೂ, ತಿತಿಕ್ಷುವೂ, ಉಪರತನೂ ಆಗಿ ಈ ಪ್ರಪನ್ನ ಇತರರಲ್ಲಿ ದೈವಿಕತೆಯನ್ನುಂಟುಮಾಡುವವನಾಗುತ್ತಾನೆ. ಭಗವಂತನ ಸಂಕಲ್ಪಕ್ಕೆ ಪೂರ್ಣವಾಗಿ ತನ್ನನ್ನು ಅನುಗೊಳಿಸಿಕೊಂಡು ಪ್ರಪನ್ನನು ಇಲ್ಲಿ ಬಾಳುವ ಬಾಳ್ವೆ ಮೋಕ್ಷಕ್ಕೆ ಸದೃಶವಾಗಿಯೇ ಇರುವುದು. 'ಮುಕುಂದೇ ನಿಕ್ಷಿಪ್ಯ ಸ್ವಭರಮನಘೋ ಮುಕ್ತವದಸೌ' ಎಂದು ದೇಶಿಕರು ಹೇಳಿರುವುದು ಉತ್ಪ್ರೇಕ್ಷೆಯಲ್ಲ.

ದೇಹಾವಸಾನದಲ್ಲಿ ಮೋಕ್ಷ

ಹೀಗೆ ಪ್ರಪತ್ತಿಯು ಸರ್ವಾಧಿಕಾರಕವೂ ಸುಕರವೂ ಸಕಲಾಭೀಷ್ಟಪ್ರದವೂ,

acharya.org

ಒಮ್ಮೆ ಮಾತ್ರ ಆಚರಿಸತಕ್ಕದ್ದೂ ಆದ ಉಪಾಯವಾಗಿದೆ. ಭಕ್ತಿಯೋಗದಲ್ಲಿ ಸಾಧಕನ ಪ್ರಾರಬ್ಧ ಕರ್ಮವನ್ನು ಬಿಟ್ಟರೆ ಉಳಿದ ಸಂಚಿತ ಮತ್ತು ಆಗಾಮಿ ಕರ್ಮಗಳು ಪರಿಹಾರವಾಗುತ್ತವೆ. ಆದರೆ ಪ್ರಾರಬ್ಧ ಕರ್ಮವನ್ನು ಭಕ್ತಿಯೋಗಿ ಅನುಭವಿಸಿ ತೀರಿಸಿದ ಮೇಲೆಯೇ ಮೋಕ್ಷಪ್ರಾಪ್ತಿಯಾಗುತ್ತದೆ. ಪುಣ್ಯ ಪಾಪಗಳೆರಡನ್ನೂ ಕಳೆದುಕೊಂಡು ಸಾಧಕ ಮೋಕ್ಷಕ್ಕೆ ಹೋಗುತ್ತಾನೆ. 'ತದಧಿಗಮ ಉತ್ತರಪೂರ್ವಾಘಯೋಃ ಅಶ್ಲೇಷ ವಿನಾಶೌ ತದ್ವ್ಯಪದೇಶಾತ್' ಎಂಬ ಸೂತ್ರ ಪೂರ್ವಾಘದ ವಿನಾಶವನ್ನೂ ಉತ್ತರಾಘದ ಅಶ್ಲೇಷವನ್ನೂ ಸಾಧಕನಿಗೆ ತಿಳಿಸುತ್ತದೆ. ಬ್ರಹ್ಮವಿದ್ಯೆ ಅಂಥ ಪುಣ್ಯಪಾಪಕರ್ಮಗಳಿಗೆ ಪ್ರಾಯಶ್ಚಿತ್ತವಾಗುವುದು. 'ಭೋಗೇನ ತ್ವಿತರೇ ಕ್ಷಪಯಿತ್ವಾಥ ಸಂಪದ್ಯತೇ' ಎಂಬ ಸೂತ್ರ ಪ್ರಾರಬ್ಧಕರ್ಮದ ಅನುಭವದ ನಂತರ ಮುಕ್ತಿಯೆಂದು ಸ್ಥಾಪಿಸುತ್ತದೆ.

ಪ್ರಪತ್ತಿಗೂ ಹೀಗೆಯೇ ಪ್ರಭಾವವಿದೆ. ಪ್ರಪತ್ತಿಯಿಂದ ಪೂರ್ವಾಘದ ವಿನಾಶವೂ ಉತ್ತರಾಘದ ಅಶ್ಲೇಷವೂ ಸಂಭವಿಸುತ್ತದೆ. ಭಕ್ತಿಯೋಗಿ ಪ್ರಾರಬ್ಧ ಕರ್ಮವನ್ನು ಪೂರ್ತಿಯಾಗಿ ಮುಗಿಸುವವರೆಗೆ ಅನೇಕ ಜನ್ಮಗಳನ್ನಾದರೂ ತೆಗೆಯಬೇಕಾಗಬಹುದು. ಆದರೆ ಪ್ರಪನ್ನನಿಗೆ ಆ ಶರೀರದ ಅವಸಾನದಲ್ಲಿ ಮೋಕ್ಷ ಸಿದ್ಧ. ಪ್ರಾರಬ್ಧ ಕರ್ಮದಲ್ಲಿ ಅನಭ್ಯುಪಗತವಾದ ಭಾಗವೂ ಪ್ರಪತ್ತಿಯ ಪ್ರಭಾವದಿಂದ ನಾಶವಾಗುವುದು. ಅಭ್ಯುಪಗತವಾದ ಭಾಗವನ್ನು ಮಾತ್ರ ಪ್ರಪನ್ನ ಅನುಭವಿಸಿ ದೇಹಾವಸಾನದಲ್ಲಿ ಮೋಕ್ಷವನ್ನು ಪಡೆಯುವನು. 'ಸಾಧ್ಯಭಕ್ತಿಸ್ತು ಸಾ ಹಂತ್ರೀ ಪ್ರಾರಬ್ಧಸ್ಯಾಪಿ ಭೂಯಸೀ' ಎಂಬಲ್ಲಿ ಈ ಅಂಶವನ್ನು ತಿಳಿಸಿದೆ. ದೇಶಿಕರವರು 'ಪ್ರಾರಬ್ಧೇತರಪೂರ್ವಪಾಪಮಖಿಲಂ ಪ್ರಾಮಾದಿಕಂ ಚೋತ್ತರಂ ನ್ಯಾಸೇನ ಕ್ಷಪಯನ್ನನಭ್ಯುಪಗತಪ್ರಾರಬ್ಧಖಂಡಂ ಚ ನಃ' ಎಂದು ಈ ಅಂಶವನ್ನು ವಿವರಿಸಿದ್ದಾರೆ. ಪ್ರಪನ್ನನು ಬುದ್ಧಿಪೂರ್ವಕವಾಗಿ ಪಾಪ ಮಾಡಲಾರ. ಅಬುದ್ಧಿಪೂರ್ವಕವಾಗಿ ಮಾಡಿದ ಪಾಪಪುಣ್ಯಗಳು ಅವನಿಗೆ ಅಂಟುವುದಿಲ್ಲ. ಬುದ್ಧಿಪೂರ್ವಕವಾಗಿ ಪಾಪಪುಣ್ಯಗಳು ಘಟಿಸಿದರೆ ಅದಕ್ಕಾಗಿ ಪ್ರಾಯಶ್ಚಿತ್ತ ಪ್ರಪದನ ಮಾಡಿಕೊಳ್ಳಬೇಕೆಂದು ಹಿಂದೆಯೇ ತಿಳಿಸಿದೆ. ಹಿಂದಿನ ಪಾಪಪುಣ್ಯಗಳು ಬೆಂಕಿ ಬಿದ್ದ ಹತ್ತಿಯ ರಾಶಿಯಂತೆ ದಗ್ಧವಾಗುವುವು. ಪ್ರಾರಬ್ಧಕರ್ಮದಲ್ಲಿ ಫಲಕೊಡಲು ಆರಂಭವಾಗಿರುವ ಭಾಗವನ್ನು ಶರೀರಧಾರಣೆಯ ಕಾಲದಲ್ಲಿ ಅನುಭವಿಸಿ ಸಾಧಕ ಮುಕ್ತನಾಗುವನು. ಹೀಗೆ ಪ್ರಪತ್ತಿಯನ್ನನುಷ್ಠಿಸಿ ಅದರ ಪ್ರಭಾವದಿಂದ ಪುಣ್ಯಪಾಪಗಳ ಸಂಕೋಲೆಯನ್ನು ಕಳೆದುಕೊಂಡು ಪ್ರಪನ್ನನು ಭಗವಂತನನ್ನು ಶರೀರಾವಸಾನದಲ್ಲಿ ಸೇರುತ್ತಾನೆ.

ತೆಂಗಲೈ ಸಂಪ್ರದಾಯದಲ್ಲಿ ಪ್ರಪತ್ತಿ

ತೆಂಗಲೈ ಸಂಪ್ರದಾಯಕ್ಕನುಸಾರ ಪ್ರಪತ್ತಿಯೇ ಮೋಕ್ಷೋಪಾಯ. ಈ ಪ್ರಪತ್ತಿ ಎಂಬುದು ನಾವು ಸ್ವಪ್ರಯತ್ನದಿಂದ ಅನುಷ್ಠಿಸುವಂತದಲ್ಲ. ಸರ್ವೇಶ್ವರನಾದ ಭಗವಂತ

acharya.org

ನಿಗೆ ನಾವು ಸೇರಿದವರೆಂದೂ, ನಾವು ಅವನಿಗೆ ಅತ್ಯಂತ ಪರತಂತ್ರರೆಂದೂ, ನಮ್ಮ ರಕ್ಷಣೆ ಅವನ ಹೊಣೆಯೆಂದೂ ನಾವು ನಿಶ್ಚಯಜ್ಞಾನ ಹೊಂದಿ ಸ್ವರಕ್ಷಣದಲ್ಲಿ ಸ್ವಪ್ರಯತ್ನವನ್ನು ಬಿಟ್ಟುಬಿಟ್ಟು ಅವನನ್ನೇ ನಂಬಿರುವುದು ಪ್ರಪತ್ತಿ ಎನಿಸುವುದು. ಈ ಸಂಪ್ರದಾಯದಂತೆ ಪ್ರಪತ್ತಿಯ ಕ್ರಿಯಾತ್ಮಕವಾದ ಅನುಷ್ಠಾನ ಆವಶ್ಯಕ್ಯವಿಲ್ಲ. ಈ ಸಂಪ್ರದಾಯ ನಿರೂಪಣೆಯನ್ನು ಶ್ರೀ ಪಿಳ್ಳೈ ಲೋಕಾಚಾರ್ಯರು 'ಶ್ರೀ ವಚನಭೂಷಣ' ದಲ್ಲಿ ಪ್ರತಿಪಾದಿಸಿದ್ದಾರೆ. ಶ್ರೀ ಜೀಯರ್ ಅವರು ಅದಕ್ಕೆ ಉತ್ತಮವಾದ ವ್ಯಾಖ್ಯಾನವನ್ನು ರಚಿಸಿದ್ದಾರೆ. ಪ್ರಪತ್ತಿಯ ಬಗೆಗೆ ಅವರ ಅಭಿಪ್ರಾಯಗಳನ್ನು ಕೆಳಗೆ ಸಂಗ್ರಹಿಸಲಾಗಿದೆ.

ಇತಿಹಾಸ ಪುರಾಣಗಳಿಂದ ಪುರುಷಕಾರತ್ವ ಮತ್ತು ಉಪಾಯತ್ವದ ನಿರೂಪಣೆ ಆಗಿದೆ. ಇತಿಹಾಸ ಇವುಗಳಲ್ಲಿ ಪ್ರಧಾನವಾದುದು. ರಾಮಾಯಣದಲ್ಲಿ ಪುರುಷಕಾರಳಾದ ಸೀತಾದೇವಿಯನ್ನೂ, ಭಾರತದಲ್ಲಿ ಉಪಾಯಸ್ವರೂಪನಾದ ಶ್ರೀ ಕೃಷ್ಣನನ್ನೂ ಕೊಂಡಾಡಿದೆ. ಕೃಪೆ, ಪಾರತಂತ್ರ್ಯ ಮತ್ತು ಅನನ್ಯಾರ್ಹತ್ವಗಳು ಪುರುಷಕಾರಕ್ಕೆ ಅವಶ್ಯಕ. ಸೀತಾದೇವಿ ಇವನ್ನು ಪ್ರಕಾಶಪಡಿಸುವವಳಾಗಿದ್ದಾಳೆ. ಪುರುಷಕಾರಳಾದ ದೇವಿ ತನ್ನ ಉಪದೇಶದಿಂದ ಚೇತನನನ್ನೂ ಈಶ್ವರನನ್ನೂ ತಿದ್ದುತ್ತಾಳೆ. ಉಪದೇಶಕ್ಕೆ ಒಳಗಾಗದಿದ್ದರೆ, 'ಚೇತನನ್ನೈ ಅರುಳಾಲೇ ತಿರುತ್ತುಮ್ ; ಈಶ್ವರನ್ನೈ ಅಳಗಾಲೆ ತಿರುತ್ತುಮ್', ಎಂದು ಹೇಳಿದಂತೆ ಕೃಪೆಯಿಂದ ಜೀವನನ್ನೂ ತನ್ನ ಸೌಂದರ್ಯದಿಂದ ಈಶ್ವರನನ್ನೂ ತಿದ್ದುತ್ತಾಳೆ. ಚೇತನನನ್ನು ಸ್ವೀಕಾರಮಾಡುವ ಕಾಲದಲ್ಲಿ ಉಪಾಯ ಪುರುಷಸಾಪೇಕ್ಷವೂ ಪುರುಷಕಾರ ಸಾಪೇಕ್ಷವೂ ಆದುದು. ಆದರೆ ಕಾರ್ಯಕಾಲದಲ್ಲಿ ಸಿದ್ಧೋಪಾಯನಾದ ದೇವನು ಉಭಯನಿರಪೇಕ್ಷವಾಗಿ ಪ್ರವರ್ತಿಸುತ್ತಾನೆ. ಉಪಾಯ ವೈಭವ ಮಹಾಭಾರತದಲ್ಲಿ ಪ್ರಕಾಶಿಸುತ್ತದೆ. ಶ್ರೀಕೃಷ್ಣನು ಅರ್ಜುನನಿಗೆ ತಾನೇ ಪ್ರಪತ್ತ್ಯುಪದೇಶ ಮಾಡಿದ್ದಾನೆ.

ಸಾಧಕರು ಐದು ಬಗೆಯಾಗಿರುವರೆಂದು ಪಿಳ್ಳೈ ಲೋಕಾಚಾರ್ಯರು ವಿಭಾಗಿಸುತ್ತಾರೆ. ಅವರು ಯಾರೆಂದರೆ—

೧) ದೇಹಾತ್ಮಾಭಿಮಾನಿ:—ಇವರಿಗೆ ದೇಹವರ್ಧಕರಾದ ಮನುಷ್ಯರು ಉದ್ದೇಶ್ಯರು. ಇವರಿಗೆ ಉಪೇಯ ಐಹಿಕ ಭೋಗ; ಇವರಿಗೆ ಉಪಾಯ ಅರ್ಥ.

೨) ಸ್ವತಂತ್ರರು :—ಇವರಿಗೆ ಸ್ವರ್ಗಾದಿಭೋಗ ಉದ್ದೇಶ್ಯ. ಅದೇ ಇವರಿಗೆ ಉಪೇಯ. ಕರ್ಮಾನುಷ್ಠಾನ ಉಪಾಯ.

೩) ಅನ್ಯಶೇಷಭೂತರು :—ಇವರಿಗೆ ಬ್ರಹ್ಮರುದ್ರಾದಿಗಳು ಉದ್ದೇಶ್ಯರು. ಆಯಾ ದೇವತೆಗಳ ಸಾಯುಜ್ಯ ಉಪೇಯ. ಉಪಾಯ ಆ ದೇವತೆಗಳ ಸಮಾಶ್ರಯಣವೇ.

೪) ಉಪಾಯಾಂತರನಿಷ್ಠರು :—ಇವರಿಗೆ ದೇವತಾಂತರ್ಯಾಮಿಯಾದ ಸರ್ವೇಶ್ವರನೇ ಉದ್ದೇಶ್ಯ, ಉಪೇಯ ಭಗವದನುಭವ. ಉಪಾಯ ಕರ್ಮಜ್ಞಾನ ಭಕ್ತಿಗಳು.

acharya.org

೫) ಸ್ವಪ್ರಯೋಜನಪರರು :—'ನೆಂಜಿನಾಲ್ ನಿನೈಪ್ಪಾ ಯವನ್'ಎಂಬುವನು ಉದ್ದೇಶ್ಯ. ಉಪೇಯ ಸ್ವಾರ್ಥಕೈಂಕರ್ಯ. ಉಪಾಯ ಸ್ವಕೀಯ ಸ್ವೀಕಾರ. ಇದು ಅರ್ಚಾವತಾರಕ್ಕೆ ಅನ್ವಯಿಸುವುದು. ಅನಿಷ್ಟನಿವೃತ್ತಿಗೂ ಇಷ್ಟಪ್ರಾಪ್ತಿಗೂ ಅವನೇ ಉಪಾಯವೆಂದು ನೆನಸಿಕೊಂಡು ತಾನು ಅನುಸರಿಸುವ ಸ್ಥಿತಿಯನ್ನಿದು ಸೂಚಿಸುತ್ತದೆ. ತನಗೆ ಸಂತೋಷವನ್ನುಂಟುಮಾಡುವ ಕೈಂಕರ್ಯವೇ ಇಲ್ಲಿ ಉಪೇಯ. (ಸೂ. 265)

ಈ ಐದು ಜನ ಅಧಿಕಾರಿಗಳಲ್ಲಿ ಮೊದಲ ಮೂವರು ಭಗವಂತನ ನಿಗ್ರಹಕ್ಕೆ ಪಾತ್ರ ರಾಗುವರು. ಕೊನೆಯ ಎರಡು ಬಗೆಯವರು ಅನುಗ್ರಹಕ್ಕೆ ಪಾತ್ರರು. ಮೊದಲ ಮೂರು ಬಗೆಯ ಅಧಿಕಾರಿಗಳ ಕರ್ಮ ಅನುಭವ ವಿನಾಶ್ಯ. ನಾಲ್ಕನೆಯ ಅಧಿಕಾರಿಯ ಕರ್ಮ ಪ್ರಾಯಶ್ಚಿತ್ತವಿನಾಶ್ಯ. ಐದನೆಯ ಅಧಿಕಾರಿಯ ಕರ್ಮ ಪುರುಷಕಾರವಿನಾಶ್ಯ (ಸೂ. 267).

ಈ ಸಂಪ್ರದಾಯದಂತೆ ಕರ್ಮಜ್ಞಾನಭಕ್ತಿಗಳು ನಮ್ಮ ಸ್ವರೂಪಕ್ಕೆ ಅನುಗುಣ ವಾದವಲ್ಲವೆಂದೂ ಪ್ರಪತ್ತಿಯು ನಮ್ಮ ಸ್ವರೂಪಕ್ಕೆ ಅನುಗುಣವಾದುದೆಂದೂ ಹೇಳಿದೆ. ಅತ್ಯಂತ ಪರತಂತ್ರರಾದ ನಾವು ಸ್ವಸ್ವರೂಪ ಜ್ಞಾನವನ್ನು ಹೊಂದಿರುವುದು ಮಾತ್ರ ಆವಶ್ಯಕ. ಸರ್ವಸ್ವಾಮಿಯಾದ ಭಗವಂತನು ತನ್ನ ನಿರ್ಹೇತುಕಕೃಪೆಯಿಂದ ಚೇತನ ರನ್ನು ಸಂರಕ್ಷಿಸುವವನಾಗಿದ್ದಾನೆ. 'ಈ ನಿಶ್ಚಯ ಜ್ಞಾನದಲ್ಲಿದ್ದು ಈಶ್ವರನ ಸಂಕಲ್ಪಕ್ಕೆ ವಿರುದ್ಧವಾಗಿ ಹೋಗದೆ ಇರುವ ಸ್ಥಿತಿಯೇ ಪ್ರಪತ್ತಿಯ ಜೀವಾಳ. ಮಾರ್ಜಾಲ ಕಿಶೋರ ನ್ಯಾಯವನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು. ಬೆಕ್ಕಿನ ಮರಿ ಯನ್ನು ತಾಯಿ ತನ್ನ ಇಚ್ಛೆಯಂತೆ ಒಂದೆಡೆಯಿಂದ ಮತ್ತೊಂದೆಡೆಗೆ ತಾನೇ ಒಯ್ಯು ವುದು. ತಾಯಿ ಮರಿಯ ರಕ್ಷಣೆಯನ್ನು ತಾನೇ ಮಾಡುತ್ತದೆ. ಮರಿಯ ಸ್ವಪ್ರಯತ್ನ ಇದರಲ್ಲಿ ಎಳ್ಳಷ್ಟೂ ಇರುವುದಿಲ್ಲ. ಹಾಗೆಯೇ ನಮ್ಮ ಸ್ವಪ್ರಯತ್ನವನ್ನು ಬಿಟ್ಟು ನಾವು ಈಶ್ವರನ ರಕ್ಷಣೆಯಲ್ಲಿ ನಿಲ್ಲಬೇಕು. ಈ ಬಗೆಯಾದ ದೃಢವಾದ ನಿಶ್ಚಯವನ್ನು ಹೊಂದಿರು ವುದೇ ಪ್ರಪತ್ತಿಯ ಲಕ್ಷಣವು.

ಭಗವಂತನಲ್ಲಿ ರಕ್ಷಣೆಯನ್ನು ಬೇಡಬೇಕೆಂಬುದನ್ನೂ ಈ ಪ್ರಪತ್ತಿಗೆ ಎಲ್ಲರೂ ಅಧಿ ಕಾರಿಗಳೆಂದೂ ಇಲ್ಲಿ ಸೂಚಿಸಲಾಗಿದೆ. 'ಪ್ರಪತ್ತಿಕ್ಕು ದೇಶನಿಯಮಮುಮ್ ಕಾಲ ನಿಯಮುಮ್ ಪ್ರಕಾರ ನಿಯಮಮುಮ್ ಅಧಿಕಾರಿ ನಿಯಮಮುಮ್ ಫಲ ನಿಯಮ ಮುಮ್ ಇಲ್ಲೈ' ಎಂಬ ಸೂತ್ರದಲ್ಲಿ (ಸೂ. 23) ಇದನ್ನು ಸಮರ್ಥಿಸಿದ್ದಾರೆ. ಆದರೆ ವಿಷಯನಿಯಮವುಂಟು. ಯಾವ ದೇಶದಲ್ಲಿಯಾಗಲೀ ಯಾವ ಕಾಲದಲ್ಲಿಯಾಗಲೀ, ಒಬ್ಬನಿಗೆ ಭಗವತ್ಸಮಾಶ್ರಯಣರುಚಿ ಉಂಟಾದರೆ ಕ್ಷಣಭಂಗುರವಾದ ಆ ರುಚಿ ಕಳೆ ಯುವ ಮುನ್ನವೇ, ಆ ರುಚಿ ಉಂಟಾದ ಕಾಲದಲ್ಲಿಯೇ ಪ್ರಪತ್ತಿ ಆಗಬೇಕು. ಇತರ ಪ್ರಕಾರಗಳ ನಿರ್ಬಂಧ ಇದಕ್ಕೆ ಇಲ್ಲ. ದ್ರೌಪದಿ ಸ್ನಾನಮಾಡಿ ಪ್ರಪತ್ತಿ ಮಾಡಲಿಲ್ಲ.

acharya.org

ಅರ್ಜುನ ನೀಚರ ನಡುವೆ ನಿಂತು ಆ ಅರ್ಥಗಳನ್ನೆಲ್ಲಾ ಕೇಳಿದನು. ಶುದ್ಧಿ ಅಥವಾ ಅಶುದ್ಧಿ ಎಂಬ ಎರಡನ್ನೂ ಬಯಸಬೇಕಾಗಿಲ್ಲ. 'ಇರುಂದ ಪಡಿಯೇ ಅಧಿಕಾರಿಯಾಂ ಇತ್ತನ್ನೈ' ಎಂದು ಇದನ್ನು ಆಚಾರ್ಯರು ಸಾಧಿಸಿದ್ದಾರೆ. ಧರ್ಮಪುತ್ರಾದಿಗಳು, ದ್ರೌಪದೀ, ಕಾಕ, ಕಾಳೀಯ, ಗಜೇಂದ್ರ, ವಿಭೀಷಣ, ಶ್ರೀರಾಮ, ಲಕ್ಷ್ಮಣ ಇವರೆಲ್ಲರೂ ಇದನ್ನು ಅನುಷ್ಠಿಸಿರುವುದರಿಂದ ಅಧಿಕಾರಿನಿಯಮವಾಗಲೀ, ಫಲನಿಯಮವಾಗಲೀ ಇದಕ್ಕೆ ಇಲ್ಲವೆಂಬುದು ಗೊತ್ತಾಗುತ್ತದೆ. ರಾಜ್ಯ, ವಸ್ತ್ರ, ಪ್ರಾಣ, ಕೈಂಕರ್ಯ ರಾಮಪ್ರಾಪ್ತಿ, ಸಮುದ್ರತರಣ, ರಾಮಾನುವೃತ್ತಿ ಇವು ಮೇಲಿನ ಶರಣಾಗತಿಗಳಿಗೆ ಫಲವಾಗಿ ಲಭಿಸಿದವು. 'ಗುಣಪೂರ್ತಿಯುಳ್ಳವಿಡಮೇ ವಿಷಯಮಾಹೈ ಪೂರ್ತಿಯುಳ್ಳತುಂ ಅರ್ಚಾವತಾರತ್ತಿಲೇ' (ಸೂ 34) ಎಂಬ ಸೂತ್ರದಿಂದ ಈ ಪ್ರಪತ್ತಿ ಅರ್ಚಾವತಾರದಲ್ಲಿ ಆಗಬೇಕೆಂಬುದನ್ನು ತಿಳಿಸಿದೆ. ಆಳ್ವಾರರುಗಳು ಅರ್ಚೆಯಲ್ಲಿ ಪ್ರಪತ್ತಿ ಮಾಡಿದರು. ಪ್ರಪತ್ತಿಗೆ ಅಪೇಕ್ಷಿತಗಳಾದ ಸೌಲಭ್ಯಾದಿಗಳು ಕತ್ತಲೆಯಲ್ಲಿನ ಬೆಳಕಿನಂತೆ ಪ್ರಕಾಶಿಸುವುದು ಅರ್ಚೆಯಲ್ಲಿ.

'ಅರ್ಚಾವತಾರವಿಷಯೇ ಮಯಾಪ್ಯುದ್ದೇಶತಸ್ತಥಾ ।
ಉಕ್ತಾ ಗುಣಾ ನ ಶಕ್ಯಂತೇ ವಕ್ತುಂ ವರ್ಷಶತೈರಪಿ ॥'

ಎಂದು ಹೇಳಿರುವಂತೆ ಅರ್ಚಾವತಾರದ ಮಹಿಮೆ ಅಮಿತವಾದುದು.

ಪ್ರಪತ್ತಿಗೆ ಅಧಿಕಾರಿಗಳು ಮೂವರು—ಅಜ್ಞರು, ಜ್ಞಾನಾಧಿಕರು ಮತ್ತು ಭಕ್ತಿಪರವಶರು ಎಂದು. ನಮ್ಮಂತಹವರು ಅಜ್ಞರು. ಜ್ಞಾನಾಧಿಕ್ಯದಿಂದ ಪ್ರಪನ್ನರಾದವರು ಪೂರ್ವಾಚಾರ್ಯರುಗಳು. ಭಕ್ತಿಪಾರವಶ್ಯದಿಂದ ಪ್ರಪನ್ನರಾದವರು ಆಳ್ವಾರರುಗಳು. ಕರ್ಮನಿಬಂಧನವಾದ ಅಚಿತ್ಸಂಬಂಧದಿಂದ ಉಂಟಾದ ಅಜ್ಞಾನಾಶಕ್ತಿಗಳು ನಾವು ಪ್ರಪತ್ತಿಮಾಡಲು ಹೇತುಗಳಾಗಿವೆ. ಅಜ್ಞಾನ ಅಚಿತ್ತತ್ವಕ್ಕೆ ಅನ್ವಯಿಸುತ್ತದೆ. ಆತ್ಮಸ್ವರೂಪದ ಯಥಾತ್ಮ್ಯದರ್ಶನ ಇತರ ಸಾಧನಗಳು ಸ್ವರೂಪವಿರುದ್ಧವೆಂದು ತಿಳಿಯಲೂ ಅವುಗಳನ್ನು ಪರಿತ್ಯಜಿಸಲೂ ಕಾರಣವಾದ ಜ್ಞಾನಪೂರ್ತಿಗೆ ಮೂಲ. ಜ್ಞಾನಾಧಿಕ್ಯ ಆತ್ಮತತ್ವಕ್ಕೆ ಅನ್ವಯಿಸುತ್ತದೆ. ಯಾವುದನ್ನೂ ಅನುಷ್ಠಿಸಲು ಅವಕಾಶ ಕೊಡದಂತೆ ಇಂದ್ರಿಯಗಳನ್ನು ಶಿಥಿಲಗೊಳಿಸುವ ಭಕ್ತಿವಿವೃದ್ಧಿಗೆ ಕಾರಣ ಭಗವದ್ವಿಗ್ರಹ ವೈಲಕ್ಷಣ್ಯ. ಆದುದರಿಂದ ಭಕ್ತಿಪಾರವಶ್ಯ ಭಗವತ್ತತ್ವಕ್ಕೆ ಅನ್ವಯಿಸುತ್ತದೆ. ಈ ಮೂರು ಬಗೆಗಳಲ್ಲಿ ಭಕ್ತಿಪಾರವಶ್ಯದಿಂದ ಮೂಡಿಬರುವ ಪ್ರಪತ್ತಿ ಮುಖ್ಯವಾದುದು. ಇದರಲ್ಲಿ ಪ್ರಾಪ್ಯರುಚಿ ಸ್ವಲ್ಪವೂ ಮರೆಯಾಗುವುದಿಲ್ಲ.

ಪ್ರಪತ್ತಿ ಎಂದರೇನು ? ಪ್ರಪತ್ತಿ ಎಂದರೆ ಭಗವಂತನಲ್ಲಿ ನಮ್ಮ ರಕ್ಷಣೆಯ ಭಾರವನ್ನೊಪ್ಪಿಸುವುದೆಂದರ್ಥ. ಎಂದರೆ ಸ್ವಪ್ರವೃತ್ತಿಯಲ್ಲಿ ಅನ್ವಯವನ್ನು ಬಿಡುವುದೆಂದು ಅರ್ಥ. ಅವನನ್ನೇ ಉಪಾಯವೆಂದು ನಿಶ್ಚಯಿಸಿ ಅವನ ಆಗಮನವನ್ನೇ ನಿರೀಕ್ಷಿಸುತ್ತಿರ

acharya.org

ಬೇಕು ಪ್ರಪನ್ನ. ಆದರೆ ಸ್ವಯತ್ನದಲ್ಲಿ ಕೆಲವರು ತೊಡಗುವುದೇಕೆ ಎಂದರೆ ಭಕ್ತಿಯ ಅವಸ್ಥಾಭೇದಗಳು ತೋರುವುದರಿಂದ ಎಂದು ಹೇಳಬೇಕು. ಯಾವ ರೀತಿಯಲ್ಲಾದರೂ ಭಗವಂತನನ್ನು ಆಗಲೇ ಪಡೆಯಬೇಕೆಂಬ ಅತಿಮಾತ್ರತ್ವರಾವಸ್ಥೆ ಈ ಬಗೆಯ ಸ್ವಪ್ರಯತ್ನಕ್ಕೆ ಕಾರಣ. ಅವನನ್ನು ಅರೆಕ್ಷಣವೂ ಬಿಟ್ಟಿರಲಾರದ ಭಕ್ತ್ಯವಸ್ಥೆ ಸ್ವಪ್ರಯತ್ನದಲ್ಲಿ ಪ್ರವೃತ್ತಿಯನ್ನು ಪ್ರೇರಿಸುತ್ತದೆ.

ಶಾಸ್ತ್ರ ಪ್ರಪತ್ತಿಯನ್ನು ವಿಧಿಸುತ್ತದೆ. ಇದನ್ನು ಮೋಕ್ಷಸಾಧನವೆಂದು ಅವು ಸಾರುತ್ತವೆ. ಆದರೆ ಇದಕ್ಕೆ ಉಪಾಯತ್ವಪ್ರತಿಪತ್ತಿಯೋಗ್ಯತೆ ಇಲ್ಲವೆಂದು ತಿಳಿಯಬೇಕು. (ಸೂ. 54).

(1) ತಂದೆ ಹಿತೈಷಿಯಾಗಿ ಮಗನಿಗೆ ಅರಿವಿಲ್ಲದ ಅವಸ್ಥೆಯಲ್ಲಿಯೂ ಅವನನು ರಕ್ಷಿಸಿಕೊಂಡು ಬರುತ್ತಾನೆ. ಅಂಥದರಲ್ಲಿ ತನಗೆ ಅರಿವುಂಟಾದ ಸಮಯದಲ್ಲಿ ಮಗ ತಂದೆಯನ್ನು 'ನನ್ನನ್ನು ನೀನು ರಕ್ಷಿಸಬೇಕು' ಎಂದು ಹೇಳಿದರೆ ಅದರಿಂದ ಅವರಿಬ್ಬರಿಗೂ ಇರುವ ಸಂಬಂಧಕ್ಕೆ ದೋಷಬರುತ್ತದೆ. ಹಾಗೆಯೇ ನಮಗೂ ಭಗವಂತನಿಗೂ. ನಮ್ಮ ಇರುವಿಕೆಗೆ ಕಾರಣನೂ, ಸರ್ವಕಾಲದಲ್ಲಿಯೂ ನಮಗೆ ರಕ್ಷಕನೂ ಆದ ಅಕಾರವಾಚ್ಯನಾದ ಸರ್ವೇಶ್ವರನಿಗೂ ಮಕಾರವಾಚ್ಯರಾದ ನಮಗೂ ಇರುವ ಸಂಬಂಧಕ್ಕೆ ಈ ಉಪಾಯತ್ವ ಕಲ್ಪನೆಯಿಂದ ದೋಷವುಂಟು.

(2) ಚರಮಶ್ಲೋಕದಲ್ಲಿ ಇದನ್ನು ವಿಧಿಸಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಸ್ವೀಕಾರರೂಪವಾದ ಪ್ರಪತ್ತಿಯೊಂದನ್ನು ಬಿಟ್ಟು ಉಳಿದ ಚೇತನ ಪ್ರವೃತ್ತಿಗಳೊಂದನ್ನೂ ಸಹಿಸದಂತೆ ಅವೆಲ್ಲವನ್ನೂ ಬಿಡಬೇಕೆಂದು ಅಲ್ಲಿ ಹೇಳಿದೆ. ಸಾಧನರೂಪವಾದ ಸಕಲಪ್ರವೃತ್ತಿಗಳ ಸವಾಸನಾತ್ಯಾಗ ಅದಕ್ಕೆ ಅಂಗ. ಆದುದರಿಂದ ಇದು ಪ್ರಪತ್ತಿಯ ಅನುಪಾಯತ್ವವನ್ನೇ ಸೂಚಿಸುತ್ತದೆ.

(3) ಸಿದ್ಧೋಪಾಯನಾದ ಸರ್ವೇಶ್ವರ ಇಷ್ಟಾನಿಷ್ಟ ಪ್ರಾಪ್ತಿಪರಿಹಾರಗಳಿಗೆಲ್ಲಾ ಸ್ವಯಂನಿರ್ವಾಹಕನಾಗಿರುವುದರಿಂದ ಅವನನ್ನು ಉಪಾಯವೆಂಬುವುದು ಯುಕ್ತವಾಗಿದೆ. ಈ ಸಿದ್ಧೋಪಾಯ ಸಹಾಯಾಂತರ ಸಂಸರ್ಗವನ್ನೂ ಸಹಿಸುವುದಿಲ್ಲ. ಆದುದರಿಂದಲೇ ಆನುಕೂಲ್ಯಸಂಕಲ್ಪಾದಿಗಳು ಉಪಾಯಕ್ಕೆ ಅಂಗವಾಗಿರದೆ ಸಂಭಾವಿತ ಸ್ವಭಾವಗಳಾಗಿವೆ. ಸಿದ್ಧೋಪಾಯಕ್ಕಿಂತ ಬೇರೆಯಾದ ಸಾಧ್ಯೋಪಾಯದಲ್ಲಿ ಉಪಾಯತ್ವ ಪ್ರತಿಪತ್ತಿಯೂ ಅಂಗಗಳೂ ಇರಬಹುದು. ಆದರೆ ಪ್ರಪತ್ತಿ ಅಂತಹುದಲ್ಲ. ಪ್ರಪತ್ತಿ ಸಿದ್ಧೋಪಾಯವರಣರೂಪವಾದುದೂ, ನಿವೃತ್ತಿಸಾಧ್ಯವೂ, ಅಧಿಕಾರಿವಿಶೇಷಣವೂ ಆದುದು. ಇದಕ್ಕೆ ಉಪಾಯತ್ವ ಸಲ್ಲದು.

ಪ್ರಪತ್ತಿಗೆ ಉಪಾಯತ್ವವಿಲ್ಲವೆಂದ ಮೇಲೆ ಫಲಸಿದ್ಧಿ ಹೇಗಾದೀತೆಂದು ಶಂಕಿಸಬೇಕಾಗಿಲ್ಲ, 'ಫಲತ್ತುಕ್ಕು ಆತ್ಮಜ್ಞಾನಮುಂ ಅಪ್ರತಿಷೇಧಮುಮೇ ವೇಂಡುವದು'

acharya.org

(ಸೂ. 60) ಎಂದಂತೆ ಭಗವದೇಕಶೇಷತ್ವ, ತದೇಕ ರಕ್ಷ್ಯತ್ವ ಇವುಗಳ ಅರಿವೂ, ನಿರುಪಾಧಿಕಶೇಷಿಯೂ ರಕ್ಷಕನೂ ಆದ ಭಗವಂತನೇ ಮಾಡುವ ರಕ್ಷಣೆಯನ್ನು ಪ್ರತಿಷೇಧ ಮಾಡದಿರುವಿಕೆಯೂ ಫಲಸಿದ್ಧಿಗೆ ಕಾರಣವಾಗುತ್ತವೆ. ಸ್ವರಕ್ಷಣದಲ್ಲಿ ಸ್ವಾನ್ವಯನಿವೃತ್ತಿಯಿಂದ ಫಲಸಿದ್ಧಿ. ಇಲ್ಲದಿದ್ದರೆ ಅವನ ನಿರುಪಾಧಿಕ ಶೇಷಿತ್ವಕ್ಕೂ ನಿರಪೇಕ್ಷೋಪಾಯತ್ವಕ್ಕೂ ಹಾನಿಯುಂಟಾಗುವುದು.

ಭಗವಂತನು 'ನೀನು ನನ್ನಿಂದ ರಕ್ಷಿಸಲ್ಪಡುವವನು' ಎಂದರೆ 'ಹಾಗಲ್ಲ'ವೆಂದು ಹೇಳದೇ ಇರುವುದು ಎಂದರೆ 'ರಕ್ಷ್ಯತ್ವಾನುಮತಿ' ರಕ್ಷಣಕ್ಕೆ ಬೇಕಾದುದು. 'ಯಾಂಭಾ ಪ್ರಪತ್ತಿಃ' 'ಪ್ರಾರ್ಥನಾ ಮತಿಃ' ಎಂಬುದಕ್ಕೆ ಅಪ್ರತಿಷೇಧದ್ಯೋತಕವೆಂದು ಅರ್ಥ. ಈ ಅನುಮತಿಯೂ ಸಾಧನವಾಗಲಾರದು. ಇದು 'ಅಚಿದ್ವ್ಯಾವೃತ್ತಿವೇಷ.' ಹಿತೈಷಿಯಾದ ಭಗವಂತನು ನಮ್ಮನ್ನು ನೆನೆಸಿಕೊಳ್ಳುವುದು ಪ್ರಾಪ್ತಿಗೆ ಉಪಾಯ. ಚೇತನೋಜ್ಜೀವನಾರ್ಥವಾದ ಅವನ ಈ ನೆನಹು ಯಾವಾಗಲೂ ಇದ್ದೇ ಇರುವುದಾದರೂ ಅದು ಫಲಿಸುವುದು ಮಾತ್ರ 'ಇವನ್ ನಿನ್ನೈವು ಮಾರಿನಾಲ್' ಎಂದರೆ ಈ ಚೇತನನ ಸರ್ವಕ್ಷಣ ಚಿಂತೆ ಬದಲಾದ ಕಾಲದಲ್ಲಿ. ತನ್ನನ್ನು ತಾನು ಕಾಪಾಡಿಕೊಳ್ಳಲು ಪ್ರಯತ್ನಿಸುವುದನ್ನು ಇವನು ಬಿಟ್ಟಾಗ ಭಗವಂತನ ಚೇತನೋಜ್ಜೀವನಚಿಂತೆ ಫಲಿಸುತ್ತದೆ. ಉಪಾಯನೂ ಭಗವಂತನೇ. ಲಾಭವನ್ನು ಹೊಂದುವವನೂ ಅವನೇ. ಸ್ವತ್ತಿನ ಲಾಭದಲ್ಲಿ ಭೋಕ್ತೃವಾದ ಸ್ವಾಮಿ ಸಂತೋಷಗೊಳ್ಳುವಂತೆ ಚೇತನನನ್ನು ಪಡೆದಾಗ ಸಂತೋಷಿಸುವವನೂ ಭಗವಂತನೇ. ಹೀಗೆ ಸ್ವಪ್ರಯೋಜನದಲ್ಲಿಯೂ ಇವನಿಗೆ ಅನ್ವಯವಿಲ್ಲವೆಂಬುದನ್ನು ಅರಿಯಬೇಕು. 'ಸ್ವಯತ್ನನಿವೃತ್ತಿ ಪಾರತಂತ್ರ್ಯದ ಫಲ. ಸ್ವಪ್ರಯೋಜನ ನಿವೃತ್ತಿ ಶೇಷತ್ವ ಫಲ.' "ಭಗವತ್ಪ್ರವೃತ್ತಿವಿರೋಧಿ ಸ್ವಪ್ರವೃತ್ತಿ ನಿವೃತ್ತಿಃ ಪ್ರಪತ್ತಿಃ"–ಎಂಬಂತೆ ಅವನೇ ಉಪಾಯವೆಂಬ ಅಧ್ಯವಸಾಯದಿಂದ ಸ್ವಪ್ರವೃತ್ತಿಯಿಂದ ನಿವೃತ್ತನಾಗಿರುವುದು ಪ್ರಪತ್ತಿಯ ತಿರುಳು.

ಅವಾಪ್ತಸಮಸ್ತಕಾಮನಾದ ಭಗವಂತ ಪರಿಪೂರ್ಣನಾದುದರಿಂದ ಇವನು ಅವನಿಗಾಗಿ ಮಾಡಬೇಕಾದುದೇನೂ ಇಲ್ಲ. "ಆಭಿಮುಖ್ಯಸೂಚಕಮಾತ್ರತಾಲೇ ಸಂತೋಷಂ ವಿಳೈಯುಮ್" (ಸೂ. 137) ಎಂಬಂತೆ ಕೇವಲ ಭಗವದಾಭಿಮುಖ್ಯವೇ ಸಾಕು ಭಗವಂತನನ್ನು ಸಂತೋಷಪಡಿಸಲು. ವಿಲಕ್ಷಣಗುಣವಿಶಿಷ್ಟನಾದ ಭಗವಂತನೇ ಇವನನ್ನು ಸೇರಿಸಿಕೊಳ್ಳಲು ಉಪಾಯನಾಗಿದ್ದಾನೆ. ಹಾಗೆಯೇ ಎಂದೆಂದೂ ಇವನಿಗೆ ಉಪೇಯನೂ ಆಗಿದ್ದಾನೆ. ಫಲಸಾಧನಗಳೆರಡೂ ಒಂದೇ ವಸ್ತುವಾಗಿದೆ.

ಇಲ್ಲಿ ಸಿದ್ಧೋಪಾಯಕ್ಕೇ ಪ್ರಾಧಾನ್ಯ. ಪರಗತಸ್ವೀಕಾರೋಪಾಯತ್ವವನ್ನು ಇಲ್ಲಿ ಒತ್ತಿಹೇಳಿದೆ. 'ಪ್ರಾಪ್ತಿಕ್ಕುಪಾಯಂ ಅವನ್ ನಿನ್ನೈವು' ಎಂಬಲ್ಲಿ ಈಶ್ವರಸಂಕಲ್ಪವೇ ಮುಕ್ತಿಗೆ ಉಪಾಯವೆಂದು ತಿಳಿಸಿದೆ. ಭಗವಂತನು ಈ ಚೇತನನನ್ನು ಸ್ವೀಕರಿಸಲು

acharya.org

ಸಂಕಲ್ಪಿಸಿದರೆ ಈ ಚೇತನನ ಪಾತಕವೂ ಅಡ್ಡಿಯಾಗದು.

"ಚಿತಃ ಪರಮಚಿಲ್ಲಾಭೇ ಪ್ರಪತ್ತಿರಪಿ ನೋಪಧೀಃ ।
ವಿಪರ್ಯಯೇ ತು ಸೈವಾಸ್ಯ ಪ್ರತಿಷೇಧಾಯ ಪಾತಕವ್ ॥"

ಎಂಬಲ್ಲಿ ಇದನ್ನು ಹೇಳಿದ್ದಾರೆ. ಪ್ರಪತ್ತ್ಯುಪಾಯಕ್ಕೆ ಇತರ ಉಪಾಯಗಳಿಗಿರುವಂತಹ ದೋಷಗಳಾವುವೂ ಇಲ್ಲ. ವಸ್ತುತಃ ಉಪಾಯತ್ವವಿಲ್ಲದಿದ್ದರೂ ಆಪಾತತಃ ಉಪಾಯತ್ವಪ್ರತೀತಿ ಇದೆ. ಇದೊಂದೇ ಅದರ ದೋಷ. ಪ್ರಪತ್ತಿ ಆತ್ಮಯಾಥಾತ್ಮ್ಯಜ್ಞಾನದ ಕಾರ್ಯವಾದುದರಿಂದ ನಮ್ಮ ಸ್ವರೂಪಕ್ಕೆ ಉಚಿತವಾದುದು. ನಿವೃತ್ತಿಸಾಧ್ಯವಾದುದರಿಂದ ಸುಖಕರವಾದುದು. ಸಾಧ್ಯವಸ್ತುವೇ ಸಾಧನವಾದುದರಿಂದ ಸುಖರೂಪವಾದುದು. ಪ್ರಪತ್ತಿಯಲ್ಲಿ ಗುಣಾಂಶಗಳಿವೆ, ದೋಷಗಳಿಲ್ಲ.

ಪ್ರಪತ್ತಿಯನ್ನನುಷ್ಠಿಸಿದವನು ಇತರ ಉಪಾಯಗಳನ್ನು ಬಿಡಬೇಕು. ಏಕೆಂದರೆ ಅವು ಸ್ವರೂಪವಿರುದ್ಧವಾದವು. ನಮ್ಮ ಸ್ವರೂಪ ಭಗವಂತನಿಗೆ ಅತ್ಯಂತವಾಗಿ ಪರತಂತ್ರವಾಗಿರುವುದೇ ಆಗಿದೆ. ಆ ಕಾರಣ ಪ್ರಾಪಕಾಂತರಗಳು ನಮಗೆ ತಕ್ಕುವಲ್ಲ. ಸಾಮರ್ಥ್ಯವಿದ್ದರೂ ಇತರ ಉಪಾಯಗಳನ್ನು ನಾವು ಸ್ವೀಕಾರ ಮಾಡಬಾರದೆಂಬುದು ಇದರ ತಾತ್ಪರ್ಯ. ಜ್ಞಾನಿಗಳಿಗೆ ಪ್ರಾಪಕಾಂತರ ಅಪಾಯಕರ ಹಾಗೂ ಸ್ವರೂಪನಾಶಕ. ಪ್ರಪನ್ನನಿಗೆ ಪ್ರಾಮಾದಿಕವಾಗಿ ಉಪಾಯಾಂತರಪ್ರವೃತ್ತಿ ಬಂದರೆ ಪುನಃ ಪ್ರಪತ್ತಿರೂಪವಾದ ಪ್ರಾಯಶ್ಚಿತ್ತವನ್ನು ಮಾಡಬೇಕೆಂದು 'ಪ್ರಾಯಶ್ಚಿತ್ತಿರಿಯಂ ಯತ್ರ ಯತ್ಪುನಶ್ಶರಣಂ ವ್ರಜೇತ್' ಎಂದು ಹೇಳಿರುವುದು ಪ್ರಾಪಕಾಂತರದ ಅಪಾಯಕರತ್ವ ಸೂಚಿಸುತ್ತದೆ. ಇಲ್ಲಿ ಪುನಃ ಪ್ರಪದನವೆಂದರೆ ಪೂರ್ವಪ್ರಪದನನ ಸ್ಮರಣೆ ಎಂದು ತಿಳಿಯಬೇಕು.

'ಓಮಿತ್ಯಾತ್ಮಾನಂ ಧ್ಯಾಯಥ' ಎಂದೆಂದು ಉಪನಿಷತ್ತುಗಳು ಏಕೆ ಧ್ಯಾನವನ್ನು ಉಪಾಯವನ್ನಾಗಿ ವಿಧಿಸಿವೆ ಎಂದರೆ ಈಶ್ವರನ ಉಪಾಯತ್ವವನ್ನು ತಿಳಿಯಪಡಿಸುವುದಕ್ಕಾಗಿ ಎಂದು ತಿಳಿಯಬೇಕು. 'ಔಷಧಸೇವೈ ಪಣ್ಣಾತವರ್ ಹಳುಕ್ಕು ಅಭಿಮತವಸ್ತುಕ್ಕಳಿಲೇ ಅತ್ತೈ ಕಲಶಿಯಿಡುವಾರ್ಪೈಪ್ಪೋಲೇ ಈಶ್ವರನ್ನೈ ಕಲಂದ್ ವಿಧಿಕ್ಕಿರವಿತ್ತನ್ನೈ' (ಸೂ. 128) ಎಂದು ಪಿಳ್ಳೈಲೋಕಾಚಾರ್ಯರು ಹೇಳುತ್ತಾರೆ. ಚೇತನರಿಗೆ ಅಭಿಮತವಾದ ಸ್ವಯತ್ನರೂಪವಾದ ಉಪಾಸನದಲ್ಲಿ ಚೇತನರನ್ನು ಶಾಸ್ತ್ರ ಉದ್ಯೋಗಿಸುವುದು ಉಪಾಸನೆಗಿಂತ ಅದರೊಡನೆ ಸಂಬಂಧಿಸಿದ ಈಶ್ವರನೇ ಉಪಾಯವೆಂಬುದನ್ನು ಸ್ಪಷ್ಟವಾಗಿ ತಿಳಿಯಪಡಿಸುವ ಉದ್ದೇಶದಿಂದ. ಯಾಗಾದಿಕರ್ಮಗಳಿಂದ ಮನಸ್ಸನ್ನು ಬಿಡಿಸಿ, ಹಾಗೆಯೇ ಸ್ವರ್ಗಾದಿ ಸಾಧನಗಳಿಂದ ಅಗ್ನೀಂದ್ರಾದಿಗಳನ್ನು ಭಜಿಸುವುದನ್ನು ತಪ್ಪಿಸಿ, ಭಗವದೇಕ ವಿಷಯವಾದ ಉಪಾಸನೆಯಲ್ಲಿ ಅವರನ್ನು ತೊಡಗಿಸುವುದಕ್ಕಾಗಿ ವಿವಿಧವಾದ ಉಪಾಸನೆಗಳನ್ನು ವಿಧಿಸಿದೆ. ಉಪಾಸನವಿಧಿಗೆ ಕಾಮ್ಯಕರ್ಮನಿವೃತ್ತಿ ಉದ್ದೇಶ.

acharya.org

ಆದರೆ ಈ ಉಪಾಸನೆಯೂ ಸ್ವರೂಪವಿರುದ್ಧವಾದುದರಿಂದ ಇದನ್ನು ಬಿಟ್ಟುಕೊಟ್ಟು ಭಗವಂತನಲ್ಲಿ ಪ್ರಪತ್ತಿನಿಷ್ಠನಾಗಬೇಕು. ಈ ಉಪಾಸನವಿಧಿ ಶಾಸ್ತ್ರವಿಶ್ವಾಸವನ್ನು ಮೂಡಿಸುವುದಕ್ಕಾಗಿ ಆದುದು. ತಾನು ಸ್ವತಂತ್ರನೆಂದಾಗಲೀ, ಅನ್ಯಶೇಷಭೂತನೆಂದಾಗಲೀ ತಿಳಿಯದೆ ಇರಲೆಂದೂ ತನ್ನ ಸ್ವರೂಪ ಸಾಧಕನಿಗೆ ಗೊತ್ತಾಗಲೆಂದೂ ಉಪಾಸನ ವಿಧಿ ಬಂದಿದೆ. 'ಸ್ವರೂಪ ವಿಶ್ವಾಸ ತ್ತುಕ್ಕಾಹ ವಿಧಿತ್ತದು' (ಸೂ 131) ಎಂದು ಇದನ್ನು ತಿಳಿಸಿದ್ದಾರೆ. ಭಗವದೇಕಪಾರತಂತ್ರ್ಯರೂಪಸ್ವರೂಪಕ್ಕೆ ಉಪಾಸನೆ ಹಾನಿಯುಂಟುಮಾಡುವುದರಿಂದ ಅದು ಯುಕ್ತವಾದುದಲ್ಲ.

ಭಗವನ್ನಿಷ್ಠನಾದವನು ಪ್ರಪನ್ನ. ಸಿದ್ಧೋಪಾಯನಿಷ್ಠನ ಪ್ರಭಾವ ಅಮಿತವಾದುದು. ಪ್ರಪನ್ನನ ಆರ್ತಿಯನ್ನು ನೋಡಿ ಕರುಣೆತೋರಿ ರಕ್ಷಿಸುವುದಕ್ಕಿಂತ ಭಗವಂತನು ತನ್ನ ನಿರ್ಹೇತುಕ ಕೃಪೆಯಿಂದಲೂ ಸ್ವಾತಂತ್ರ್ಯದಿಂದಲೂ ಸಲಹುವುದು ಶ್ರೇಷ್ಠಕರ (ಸೂ 148). 'ಯಮೇವೈಷ ವೃಣುತೇ ತೇನ ಲಭ್ಯಃ' ಎಂಬ ಶ್ರುತಿ ಭಗವಂತನು ಅಪೇಕ್ಷಾನಿರಪೇಕ್ಷನಾಗಿ ನಮ್ಮನ್ನು ಸಲಹುವನೆಂದು ಸಾರಿ ಹೇಳುತ್ತಿದೆ.

ಹೀಗೆ ಈ ಸಂಪ್ರದಾಯಕ್ಕನುಸಾರವಾಗಿ ನಮ್ಮ ಸ್ವರೂಪೋಚಿತವಾದ ಸಾಧನವೆಂದರೆ ಪ್ರಪತ್ತಿಯೇ. ಇದು ಸ್ವಪ್ರವೃತ್ತಿನಿವೃತ್ತಿರೂಪವಾದುದು. ಭಗವಂತನು ನಮ್ಮನ್ನು ರಕ್ಷಿಸುವನೆಂಬ ವಿಶ್ವಾಸದಿಂದ ಅವನ ರಕ್ಷಣೆಯನ್ನೇ ನಿರೀಕ್ಷಿಸುತ್ತಾ ಇರುವುದು ಪ್ರಪನ್ನನ ಲಕ್ಷಣ. ಇಲ್ಲಿ ಅರ್ಥಪಂಚಕ ಜ್ಞಾನದ ಅನುಸಂಧಾನ ಪೂರ್ಣವಾಗಿರುವುದು. ಈ ಸಂಪ್ರದಾಯ ಪ್ರವರ್ತಕರಾದ ಆಚಾರ್ಯರುಗಳು ಪ್ರಪತ್ತಿಯ ಮಹತ್ತ್ವವನ್ನು ಹೀಗೆ ಒತ್ತಿ ಹೇಳಿದ್ದಾರೆ. ಪ್ರಪತ್ತಿಯೇ ರಾಮಾನುಜರ ಇಷ್ಟೋಪಾಯವೆಂದೂ ಸಮರ್ಥಿಸಿದ್ದಾರೆ.

ಮೋಕ್ಷ ಸ್ವರೂಪ

ಈ ಲೋಕದಲ್ಲಿ ನಮಗೆ ಲಭಿಸುವ ಸುಖ ಸಂತೋಷಗಳು ಅಸಾರವಾದವೆಂದೂ ದುಃಖಮಿಶ್ರವಾದವೆಂದೂ ಎಲ್ಲರೂ ಒಪ್ಪುತ್ತಾರೆ. ಪರಮ ಸುಖವನ್ನು ಪಡೆಯುವುದೇ ಎಲ್ಲರ ಗುರಿಯಾಗಿದೆ. ಆ ಸುಖವು ಯಾವುದೆಂಬುದರ ಬಗೆಗೆ ದಾರ್ಶನಿಕರಲ್ಲಿ ಏಕಾಭಿಪ್ರಾಯವಿಲ್ಲವೇ ವಿನಾ ಈ ಲೋಕದ ಬಾಳ್ವೆಯೇ ಚರಮಸೀಮೆಯಲ್ಲವೆಂಬುದರ ಬಗೆಗೆ ಭಿನ್ನಾಭಿಪ್ರಾಯವೇ ಇಲ್ಲ. ಅಲ್ಪವೂ ಅಸಾರವೂ ಆದುದು ಇಲ್ಲಿನ ಸುಖ. ಅನಂತವೂ ಸ್ಥಿರವೂ ಆದ ಸುಖವನ್ನು ಪಡೆಯುವುದು ಎಲ್ಲರ ಗುರಿಯಾಗಬೇಕು 'ಯತ್ರ ಆನಂದಾಶ್ಚ ಮೋದಾಶ್ಚ ಮುದಃ ಪ್ರಮುದ ಆಸತೇ ತತ್ರಮಾಮಮೃತಂ ಕೃಧೀ' ಎಂದು ಅದಕ್ಕಾಗಿಯೇ ಬೇಡಲಾಗಿದೆ. 'ಮೃತ್ಯೋಃ ಮುಕ್ಷೀಯ ಮಾ ಅಮೃತಾತ್' ಎಂಬ ಪ್ರಾರ್ಥನೆ ಆ ಕಾರಣವೇ ಬಂದಿದೆ. ಜೀವರುಗಳು ಅನಾದಿಯಾದ ಕರ್ಮಕ್ಕೆ, ಅವಿದ್ಯೆಗೆ ವಶರಾಗಿ ಇಲ್ಲಿ ತೊಳಲುತ್ತಿದ್ದಾರೆಂಬ ಬಗೆಗೆ ಎಲ್ಲರೂ ಒಪ್ಪುತ್ತಾರೆ. ಈ

acharya.org

ಲೋಕದ ಸುಖಸಂತೋಷಗಳು ಆಗಮಾಪಾಯಿಗಳು. ಆದುದರಿಂದ 'ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾತ್ ನಾಸ್ತ್ಯಕೃತಃ ಕೃತೇನ' ಎಂದು ಉಪನಿಷತ್ತು ಉಪದೇಶಿಸುತ್ತಿದೆ. ಆದುದರಿಂದ ಐಹಿಕ ವಿಚಾರ ಗಳಲ್ಲಿ ಮಮತೆ ಬಿಟ್ಟು ಪರಮಫಲವಾದ ಭಗವತ್ಪ್ರಾಪ್ತಿಯನ್ನು ಪುರುಷಾರ್ಥವೆಂದು ನಿಶ್ಚಯಿಸಬೇಕು.

'ಅಸಾರಂ ಅಲ್ಪಸಾರಂ ಚ ಸಾರಂ ಸಾರತರಂ ತ್ಯಜೇತ್ ।
ಭಜೇತ್ಸಾರತಮಂ ಶಾಸ್ತ್ರೇ ರತ್ನಾಕರ ಇವಾಮೃತಮ್ ॥'

ಎಂದು ಹೇಳಿ ಶಾಸ್ತ್ರಗಳ ಮೂಲಕ ಪರಮಪುರುಷಾರ್ಥವನ್ನೂ ಅದನ್ನು ಪಡೆಯುವ ಬಗೆಯನ್ನೂ ಅರಿಯಬೇಕೆಂದು ದೇಶಿಕರವರು ತಿಳಿಸಿದ್ದಾರೆ.

ಐಹಿಕವಾದ ಸುಖವಾಗಲೀ ಸ್ವರ್ಗಭೋಗಾದಿಸುಖಗಳಾಗಲೀ ಕೇವಲ ಆತ್ಮ ಪ್ರಾಪ್ತಿಯಾಗಲೀ ಪುರುಷಾರ್ಥವಾಗುವುದಿಲ್ಲ. ಆದುದರಿಂದ ಸಾರತಮವಾದ ಪರ ಮಾತ್ಮ ಪ್ರಾಪ್ತಿ ಮತ್ತು ಅದಕ್ಕೆ ಸಾಧನಗಳನ್ನು ಅರಿಯಬೇಕಾದುದು ಆವಶ್ಯಕವೆಂದು ತಿಳಿಯಬೇಕು.

'ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಂ,' 'ಸರ್ವಂ ದುಃಖ-ಮಯಂ ಜಗತ್', 'ಸ್ವರ್ಗೇಽಪಿ ಪಾತಭೀತಸ್ಯ ಕ್ಷಯಿಷ್ಣೋಃ ನಾಸ್ತಿ ನಿರ್ವೃತಿಃ ।' 'ಏತೇ ವೈ ನಿರಯಾಸ್ತಾತ ಸ್ಥಾನಸ್ಯ ಪರಮಾತ್ಮನಃ'

'ಬ್ರಹ್ಮಣಸ್ಸದನಾದೂರ್ಧ್ವಂ ತದ್ವಿಷ್ಣೋಃ ಪರಮಂ ಪದಮ್ ।
ಶುದ್ಧಂ ಸನಾತನಂ ಜ್ಯೋತಿಃ ಪರಂಬ್ರಹ್ಮೇತಿ ತದ್ವಿದುಃ ॥'
ನಿರ್ಮಮಾ ನಿರಹಂಕಾರಾ ನಿರ್ದ್ವಂದ್ವಾ ಸ್ಸಂಯತೇಂದ್ರಿಯಾಃ ।
ಧ್ಯಾನಯೋಗರತಾಶ್ಚೈವ ತತ್ರ ಗಚ್ಛಂತಿ ಸಾಧವಃ ।

ಎಂಬ ಪ್ರಮಾಣಗಳಿಂದ ಈ ಅಂಶವು ಸುಸ್ಪಷ್ಟವಾಗುತ್ತದೆ.

ವಿಶಿಷ್ಟಾದ್ವೈತಸಿದ್ಧಾಂತಕ್ಕನುಸಾರವಾಗಿ ಜೀವನ ಪರಮಪುರುಷಾರ್ಥವಾವು ದೆಂದರೆ ಪರಮಾತ್ಮ ಪ್ರಾಪ್ತಿಯೇ. ಎಲ್ಲ ಜೀವರೂ ಪರಮಾತ್ಮನಿಗೇ ಶೇಷಭೂತರಾದವ ರೆಂದು ಶಾಸ್ತ್ರವು ಉದ್ಘೋಷಿಸುತ್ತದೆ. ಈ ಜೀವರುಗಳಿಗೂ ಭಗವಂತನಿಗೂ ಸ್ವಸ್ವಾಮಿ ಭಾವ ಸಂಬಂಧವಿದೆ. ಈ ಪರಮಶೇಷಿಯಾದ ಭಗವಂತನನ್ನು ಸೇರಿ ಅವನನ್ನು ಯಾವ ದಾತ್ಮಭಾವಿಯಾಗಿ ಸೇವಿಸುವ ಮಹದಾನಂದವೇ ಜೀವನದ ಗುರಿಯಾಗಬೇಕೆಂಬುದು ಈ ದರ್ಶನದ ನೆಲೆ.

ಆತನನ್ನು ಪಡೆಯಲು ಅವನನ್ನೇ ನಾವು ಆಶ್ರಯಿಸಬೇಕು. ಭಕ್ತಿಯೋಗ ಅಥವಾ ಪ್ರಪತ್ತಿಯ ಮೂಲಕ ಆ ಭಗವಂತನ ಪ್ರಾಪ್ತಿಯಾಗುವುದು. ಭಕ್ತಿಯೋಗ ವನ್ನನುಸರಿಸುವವನಿಗೆ ಪ್ರಾರಬ್ಧ ಕರ್ಮದ ಅನುಭವಾನಂತರವೂ, ಪ್ರಪನ್ನರಿಗೆ ಶರೀರಾವ

acharya.org

ಸ್ಥಾನದಲ್ಲಿಯೂ ಮೋಕ್ಷವು ಸಂಭವಿಸುವುದೆಂಬುದು ಈ ದರ್ಶನದ ಸಿದ್ಧಾಂತ. ಈ ಮೋಕ್ಷಸ್ವರೂಪವೆಂಥದೆಂಬುದನ್ನು ಈಗ ವಿಚಾರಿಸೋಣ.

ಭಕ್ತನೂ ಹಾಗೆಯೇ ಪ್ರಪನ್ನನೂ ಈ ಲೋಕದಿಂದ ಹೊರಹೊರಟು ಭಗವಂತನನ್ನು ಸೇರುವ ಬಗೆಯನ್ನು ದೇಶಿಕರವರು

ವಿತಮಸಿ ಪದೇ ಲಕ್ಷ್ಮೀಕಾಂತಂ ವಿಚಿತ್ರವಿಭೂತಿಕಂ
ಸಚಿವಗಮಿತಸ್ಸಂಪದ್ಯಾವಿರ್ಭವತ್ಸಹಜಾಕೃತಿಃ ।
ಸ್ಫುಟಿತದ ಪೃಥಕ್ಸಿದ್ಧಿಸ್ಸಿಧ್ಯದ್ಗುಣಾಷ್ಟಕ ತತ್ಫಲೋ
ಭಜತಿ ಪರಮಂ ಸಾಮ್ಯಂ ಭೋಗೇ ನಿವೃತ್ತಿಕಥೋಜ್ಝಿತಮ್ ॥

ಎಂದು ಹೇಳಿದ್ದಾರೆ. ಈ ಶ್ಲೋಕದಲ್ಲಿ ಹೇಳಿರುವ ಮುಖ್ಯವಾದ ಅಂಶಗಳು ಯಾವುವೆಂದರೆ ;—

೧) ಜೀವನನ್ನು ಅಪ್ರಾಕೃತವಾದ ಆ ದಿವ್ಯಲೋಕಕ್ಕೆ ಆತಿವಾಹಿಕ ಗಣದವರು ಕರೆದೊಯ್ಯುತ್ತಾರೆ.

೨) ಜೀವನ ಸ್ವಸ್ವರೂಪದ ಆವಿರ್ಭಾವ ಆಗ ಆಗುತ್ತದೆ.

೩) ತಾನು ಭಗವಂತನನ್ನು ಬಿಟ್ಟಿರಲಾರನೆಂಬ ಅಂಶ ಎಂದರೆ ಅಪೃಥಕ್ಸಿದ್ಧಿಯು ಸ್ಫುಟವಾಗಿ ಗೋಚರಿಸುತ್ತದೆ.

೪) ಅಪಹತಪಾಪ್ಮತ್ವ, ವಿಜರತ್ವ ವಿಮೃತ್ಯುತ್ವ, ವಿಶೋಕತ್ವ ವಿಜಿಘಿತ್ಸತ್ವ, ಅಪಿಪಾಸತ್ವ, ಸತ್ಯಕಾಮತ್ವ ಮತ್ತು ಸತ್ಯಸಂಕಲ್ಪತ್ವ ಎಂಬ ಎಂಟು ಗುಣಗಳೂ ಪೂರ್ಣವಾಗಿ ಆವಿರ್ಭವಿಸುವುವು.

೫) ಭಗವದನುಭವದ ಮಹದಾನಂದವನ್ನವನು ಅನುಭವಿಸುವನು. ಈ ಅನುಭವದಲ್ಲಿ ಭಗವಂತನೊಡನೆ ಪರಮಸಾಮ್ಯವನ್ನು ಅನುಭವಿಸುವನು.

೬) ಮತ್ತೆ ಸಂಸಾರಕ್ಕೆ ಬರುವ ಗೊಂದಲವಿಲ್ಲದೆ ಯಾವದಾತ್ಮಭಾವಿಯಾದ ಭಗವದನುಭವ ಅವನದಾಗುವುದು.

ಈ ಸಿದ್ಧಾಂತದಂತೆ ಜೀವನು ತನ್ನ ಶರೀರಸಂಬಂಧವನ್ನು ತ್ಯಜಿಸುವ ವೊದಲು ಮೋಕ್ಷವು ಸಂಭವಿಸುವುದಿಲ್ಲ. ಜೀವನ್ಮುಕ್ತಿಯು ಸಿದ್ಧಾಂತ ಈ ದರ್ಶನಕ್ಕೆ ಮಾನ್ಯವಾಗಿಲ್ಲ. ಶರೀರವು ಇನ್ನೂ ಇರಬೇಕಾದರೆ ಕರ್ಮಸಂಬಂಧ ಪೂರ್ಣವಾಗಿ ಹೋಯಿತೆಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದಲೇ 'ಕರ್ಮಸಂಬಂಧ ತತ್ಕೃತ ದೇಹಾದಿ ವಿನಿರ್ಮುಕ್ತಃ' ಎಂದು ರಾಮಾನುಜರು ಹೇಳುತ್ತಾರೆ.

ಭಕ್ತಿಯೋಗವನ್ನು ಪ್ರಾರಂಭಿಸಿದಾಗ ಹೇಗೆಯೋ ಹಾಗೆ ಪ್ರಪತ್ತಿವಾಕ್ಯೋಚ್ಚಾರಣಕಾಲದಲ್ಲಿಯೇ ಭಗವಂತನು ಸಾಧಕನ ಪೂರ್ವಾಘದ ವಿನಾಶವನ್ನೂ ಉತ್ತರಾಘದ ಅಶ್ಲೇಷವನ್ನೂ ಸಂಕಲ್ಪಿಸುತ್ತಾನೆ. ಭಕ್ತಿಯೋಗನಿಷ್ಠನು ಪ್ರಾರಬ್ಧಕರ್ಮಾವ

acharya.org

ಸಾನದಲ್ಲಿ ಪುಣ್ಯಪಾಪಗಳನ್ನು ವಿಭಾಗಮಾಡಿಕೊಡುವುದಾದರೆ, ಪ್ರಪನ್ನ ತನ್ನ ದೇಹಾವಸಾನದಲ್ಲಿ ತನ್ನ ಸುಕೃತ ದುಷ್ಕೃತಗಳನ್ನು ಮಿತ್ರರು ಮತ್ತು ಶತ್ರುಗಳಿಗೆ ಬಿಟ್ಟುಕೊಟ್ಟು ಭಗವಂತನನ್ನು ಸೇರುತ್ತಾನೆ, ಎಂಬುದನ್ನು

'ಪ್ರಿಯೇಷು ಸ್ವೇಷು ಸುಕೃತಂ ಅಪ್ರಿಯೇಷು ಚ ದುಷ್ಕೃತಮ್ ।
ವಿಸೃಜ್ಯ ಧ್ಯಾನಯೋಗೇನ ಬ್ರಹ್ಮಾಪ್ಯೇತಿ ಸನಾತನಮ್ ॥'

ಎಂದು ತಿಳಿಸಲಾಗಿದೆ.

ಹಗಲು, ಶುಕ್ಲಪಕ್ಷ, ಉತ್ತರಾಯಣ ಮೊದಲಾದವು ಮರಣಕ್ಕೆ ಪ್ರಶಸ್ತವಾದವು ಎಂಬುದು ಮೋಕ್ಷೋಪಾಯವನ್ನು ಅನುಷ್ಠಿಸದೆ ಇರುವವರಿಗೆ ಮಾತ್ರ ಅನ್ವಯಿಸುತ್ತದೆ. 'ನಿಶಿ ನೇತಿ ಚೇನ್ನ ಸಂಬಂಧಸ್ಯ ಯಾವದ್ದೇಹಭಾವಿತ್ವಾತ್' ಎಂದೂ 'ಅತಶ್ಚಾಯನೇಪಿ ದಕ್ಷಿಣೇ' ಎಂದೂ ಸೂತ್ರಗಳಲ್ಲಿ ಈ ಅಂಶವನ್ನೇ ಹೇಳಿದೆ. ಉಪಾಸನೆಯನ್ನು ಅನುಷ್ಠಿಸಿದವನಿಗೂ ಪ್ರಪನ್ನನಿಗೂ ಈ ನಿಯಮವಿಲ್ಲ. ಭಗವಂತನು ತನ್ನ ಸಂಕಲ್ಪಕ್ಕನುಸಾರ ಅಂಥ ಸಾಧಕನನ್ನು 'ಅಪ್ರಚ್ಯುತಪೂರ್ವಸಂಸ್ಕಾರಮನೋರಥಃ' ಎಂಬುವಂತೆ ಮಾಡಿ ಪ್ರಶಸ್ತವಾದ ಕಾಲ, ಅಪ್ರಶಸ್ತವಾದ ಕಾಲ ಎಂಬ ನಿಯಮವಿಲ್ಲದೆ ಶರೀರದಿಂದ ಆತ್ಮನು ನಿರ್ಯಾಣ ಹೊಂದುವಂತೆ ಮಾಡುತ್ತಾನೆ. ಈ ನಿರ್ಯಾಣ ಕ್ರಮವು

'ಮನಸಿ ಕರಣಗ್ರಾಮಂ ಪ್ರಾಣೇ ಮನಃ ಪುರುಷೇ ಚ ತಂ
ಝಟಿತಿ ಘಟಯನ್ ಭೂತೇಷ್ವೇನಂ ಪರೇ ಚ ತಮಾತ್ಮನಿ ।'

ಎಂಬಂತೆ ಇರುವುದು.

I. ಆ ಕಾಲದಲ್ಲಿ ಭಗವಂತನು ಸಾಧಕನ ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ, ಶ್ರೋತ್ರ, ಘ್ರಾಣ, ರಸನಾ, ತ್ವಕ್ ಎಂಬ ಹತ್ತು ಬಾಹ್ಯೇಂದ್ರಿಯಗಳನ್ನು ಮನಸ್ಸಿನೊಡನೆ ಸೇರಿಸುತ್ತಾನೆ.

II. ಕರ್ಮೇಂದ್ರಿಯ ಜ್ಞಾನೇಂದ್ರಿಯಗಳೊಡನೆ ಕೂಡಿದ ಮನಸ್ಸನ್ನು ಪ್ರಾಣದೊಡನೆ ಸೇರಿಸುತ್ತಾನೆ.

III. ಹನ್ನೊಂದು ಇಂದ್ರಿಯಗಳೊಡನೆ ಕೂಡಿದ ಪ್ರಾಣವಾಯುವನ್ನು ಜೀವಾತ್ಮನೊಡನೆ ಸೇರಿಸುತ್ತಾನೆ.

IV. ಪ್ರಾಣ, ಇಂದ್ರಿಯಗಳು ಇವುಗಳೊಡನೆ ಕೂಡಿದ ಜೀವನನ್ನು ಸ್ಥೂಲದೇಹದಿಂದ ಕಡೆದು ತೆಗೆದು ಪಂಚಭೂತ ಸೂಕ್ಷ್ಮಗಳೊಡನೆ ಸೇರಿಸುತ್ತಾನೆ.

V. ಇಂದ್ರಿಯಗಳು, ಪ್ರಾಣ, ಭೂತಸೂಕ್ಷ್ಮ ಇವುಗಳೊಡನೆ ಕೂಡಿದ ಆತ್ಮನನ್ನು ಸಹಜಸುಹೃತ್ತಾದ ಭಗವಂತನು ಬ್ರಹ್ಮನಾಡಿಯಲ್ಲಿ ಪ್ರವೇಶಿಸುವಂತೆ ಮಾಡಿ ಅರ್ಚಿರಾದಿ ಮಾರ್ಗದಲ್ಲಿ ಸಾರುವಂತೆ ಮಾಡುತ್ತಾನೆ.

ಈ ನಿರ್ಯಾಣ ಕ್ರಮವು ಬ್ರಹ್ಮನಾಡಿಯ ಪ್ರವೇಶದವರೆಗೆ ಎಲ್ಲರಿಗೂ ಸಮಾನವಾಗಿರುವುದು. ಮೋಕ್ಷಸಾಧನವನ್ನನುಷ್ಠಿಸಿದ ಭಕ್ತಿನಿಷ್ಠನನ್ನೂ ಪ್ರಪನ್ನನನ್ನೂ ಭಗ

acharya.org

ವಂತನು ಸ್ಥೂಲಶರೀರದಿಂದ ಹೊರ ಹೊರಡಿಸುವಾಗ ಅರ್ಚಿರಾದಿ ಮಾರ್ಗಕ್ಕೆ ಬಾಗಿಲೆನಿಸುವ ಬ್ರಹ್ಮನಾಡಿಯಲ್ಲಿ ಪ್ರವೇಶಗೊಳಿಸಿ ಸೂರ್ಯನ ಕರಾವಲಂಬನದಿಂದ ಮುಂದುವರಿಯುವಂತೆ ಮಾಡುತ್ತಾನೆ. 'ಶತಂ ಚೈಕಾ ಹೃದಯಸ್ಯ ನಾಡ್ಯಸ್ತಾಸಾಂ ಮೂರ್ಧಾನಮಭಿನಿಃಸೃತೈಕಾ । ತಯೋರ್ಧ್ವಮಾಯನ್ನಮೃತತ್ವಮೇತಿ ವಿಷ್ವಙ್ಙನ್ಯಾ ಉತ್ಕ್ರಮಣೇ ಭವಂತಿ । ಎಂದು ಹೇಳಿದಂತೆ ಹೃದಯದಲ್ಲಿರುವ ನೂರು ನಾಡಿಗಳಿಗಿಂತ ಬೇರೆಯಾದ ಬ್ರಹ್ಮನಾಡಿಯಲ್ಲಿ ಜೀವನು ಪ್ರವೇಶಿಸಿ ಹೊರ ಹೊರಡುತ್ತಾನೆ. ಇತರ ನಾಡಿಗಳಲ್ಲಿ ಇವನು ಉತ್ಕ್ರಮಿಸದಂತೆಯೂ ಬ್ರಹ್ಮನಾಡಿಯಲ್ಲಿಯೇ ಬರುವಂತೆಯೂ ಮಾರ್ಗದರ್ಶನ ಮಾಡಿ ಭಗವಂತನು ಉಪಕರಿಸುತ್ತಾನೆ.

ಊರ್ಧ್ವಮೇಕಃ ಸ್ಥಿತಸ್ತೇಷಾಂ ಯೋ ಭಿತ್ವಾ ಸೂರ್ಯಮಂಡಲಮ್ ।
ಬ್ರಹ್ಮಲೋಕಮತಿಕ್ರಮ್ಯ ತೇನ ಯಾತಿ ಪರಾಂ ಗತಿಮ್ ॥'

ಎಂದು ಈ ಅಂಶವನ್ನು ತಿಳಿಸಿದ್ದಾರೆ. ಸ್ವತಂತ್ರಪ್ರಪತ್ತಿನಿಷ್ಠನಿಗೆ ಭಗವದ್ವಿಷಯದಲ್ಲಿ ಅಂತಿಮಸ್ಮೃತಿಯು ಅವಶ್ಯವಾಗಿ ಬರುವುದು ಎಂಬುದು ಆಚಾರ್ಯರ ಅಭಿಪ್ರಾಯ. 'ನಷ್ಟಸ್ಮೃತಿರಪಿ ಪರಿತ್ಯಜನ್ ದೇಹಮ್' ಎಂದೂ 'ಸ್ಥಿತೇ ಮನಸಿ ಸುಸ್ವಸ್ಥೇ' ಎಂದೂ ಹೇಳಿರುವಂತೆ ಪ್ರಪನ್ನನಿಗೆ ಅಂತಿಮಸ್ಮೃತ್ಯಾದಿಗಳ ನಿರ್ಬಂಧವಿಲ್ಲ. ಅದು ಒಬ್ಬನಿಗೆ ಬರುವುದೇ ಇಲ್ಲವೇ ಎಂಬುದು ಇತರರಿಗೆ ತಿಳಿಯುವಂತೆಯೂ ಇಲ್ಲ.

ಹೀಗೆ ಮೂರ್ಧನ್ಯನಾಡಿಯಲ್ಲಿ ಹೊರ ಹೊರಟ ಜೀವನು ಅತಿವಾಹಿಕರಿಂದ ದಾರಿ ತೋರಲ್ಪಟ್ಟವನಾಗಿ ಭಗವಂತನನ್ನು ಸೇರುತ್ತಾನೆ.

ಅರ್ಚಿರಾದಿ ಮಾರ್ಗದ ಉಲ್ಲೇಖ ಉಪನಿಷತ್ತಿನಲ್ಲಿದೆ. 'ತೇರ್ಚಿಷಮಭಿಸಂಭವಂತಿ ಅರ್ಚಿಷಾಹರಹ್ನಾ ಆಪೂರ್ಯಮಾಣಪಕ್ಷಮಾಪೂರ್ಯ ಮಾಣಪಕ್ಷಾದ್ಯಾನ್ ಷಣ್ಮಾಸಾನುದಙ್ಙಾದಿತ್ಯ ಏತಿ ಮಾಸಾನ್ಮಾಸೇಭ್ಯೋ ದೇವಲೋಕಂ ದೇವಲೋಕಾದಾದಿತ್ಯಂ ಆದಿತ್ಯಾದ್ವೈದ್ಯುತಂ ವೈದ್ಯುತಾತ್ಪುರುಷೋಽಮಾನವಸ್ಸ ಏತ್ಯ ಬ್ರಹ್ಮಲೋಕಾನ್ ಗಮಯತಿ' ಎಂದು ಬೃಹದಾರಣ್ಯಕದಲ್ಲಿ ಹೇಳಿದೆ. ಈ ಆತಿವಾಹಿಕರನ್ನು ಕ್ರಮವಾಗಿ ದೇಶಿಕರವರು ಹೀಗೆ ಹೇಳಿದ್ದಾರೆ. ಮೊದಲು ಅಗ್ನಿ ಅನಂತರ ಕ್ರಮವಾಗಿ ಹಗಲು, ಶುಕ್ಲ ಪಕ್ಷ, ಉತ್ತರಾಯಣ, ಸಂವತ್ಸರ, ವಾಯು, ಸೂರ್ಯ, ಚಂದ್ರ, ವಿದ್ಯುತ್, ವರುಣ, ಇಂದ್ರ, ಪ್ರಜಾಪತಿ ಎಂಬುವರಿವರು. ಈ ಅಭಿಮಾನಿ ದೇವತೆಗಳಿಂದ ದಾರಿ ತೋರಲ್ಪಟ್ಟು ಸತ್ಕೃತನಾಗುತ್ತಾನೆ ಜೀವನು. ಅಗ್ನಿ, ದಿವಸ, ಜ್ಯೋತ್ಸ್ನಾ, ಉತ್ತರಾಯಣ, ವತ್ಸರ ಮೊದಲಾದ ಆಯಾ ಅಭಿಮಾನಿ ದೇವತೆಗಳಿಂದಲೂ ವಾಯುವಿನಿಂದಲೂ ಸತ್ಕೃತನಾಗಿ ಮುಕ್ತನು ಸೂರ್ಯಮಂಡಲವನ್ನು ಭೇದಿಸಿಕೊಂಡು ನಭೋರಂಧ್ರದ್ವಾರದಿಂದ ಸೂರ್ಯ ಲೋಕಕ್ಕೆ ಹೋಗಿ ಅನಂತರ ಚಂದ್ರ, ವಿದ್ಯುತ್, ವರುಣ, ಇಂದ್ರ ಮತ್ತು ಪ್ರಜಾಪತಿ ಇವರುಗಳಿಂದ ಆದರಪೂರ್ವಕವಾಗಿ ಆಯಾ ಲೋಕಗಳಲ್ಲಿ ದಾರಿತೋರಲ್ಪಟ್ಟವನಾಗಿ,

acharya.org

ಪ್ರಕೃತಿಮಂಡಲಕ್ಕೂ ವೈಕುಂಠಕ್ಕೂ ಎಲ್ಲೆಯಾಗಿರುವ ವಿರಜಾನದಿಯನ್ನು ದಾಟಿ, ಸೂಕ್ಷ್ಮ ಶರೀರವನ್ನು ಬಿಟ್ಟುಕೊಟ್ಟು, ಅಮಾನವಕರಸ್ಪರ್ಶದಿಂದ ಅಪ್ರಾಕೃತ ಶರೀರ ವನ್ನು ಹೊಂದಿ, ಸ್ವಸ್ವರೂಪಾವಿರ್ಭಾವವನ್ನು ಪಡೆದು, 'ವಾಚಸ್ತತಃ ಪರಮುದ್ಭುತವ್' ಎಂಬಂತೆ ವರ್ಣಿಸಲಸದಳನಾದ ಪರಮಾತ್ಮನೊಡನೆ ನಿತ್ಯಸಂಶ್ಲೇಷವನ್ನು ಹೊಂದು ತ್ತಾನೆ.

ಬ್ರಹಾನುಭವವೆಂದರೇನು ? ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ಸರ್ವೇಶ್ವರನ ಅನಂತಾನಂತ ವಿಗ್ರಹ ಗುಣ ವಿಭೂತಿ ಚೇಷ್ಟಿತಗಳಲ್ಲಿ ಸ್ವಲ್ಪವೂ ಕುಂದಿ ಲ್ಲದೆ ಎಲ್ಲವನ್ನೂ ನಿರತಿಶಯ ಭೋಗ್ಯವಾಗಿ ಅನುಭವಿಸುವುದೇ ಬ್ರಹ್ಮಾನುಭವವೆನ್ನಿಸು ವುದು. ಈ ಅನುಭವ ಇವನಿಗೂ ಈಶ್ವರನಿಗೂ ಸಮಾನವಾಗಿರುವುದರಿಂದ ಈ ಆನಂದಾ ನುಭವದಲ್ಲಿ ಪರಮ ಸಾಮ್ಯವೆಂದು ಹೇಳಿದೆ.

'ನಿರಸ್ತಾತಿಶಯಾಹ್ಲಾದಸುಖಭಾವೈಕಲಕ್ಷಣಾ ।
ಭೇಷಜಂ ಭಗವತ್ಪ್ರಾಪ್ತಿರೇಕಾನ್ತಾತ್ಯನ್ತಿಕೀ ಮತಾ ॥'

ಎಂದು ಹೇಳಿರುವಂತೆ ಭಗವತ್ಸ್ವರೂಪವು ಭೋಗ್ಯವೆನ್ನಿಸುವುದು. ಹಾಗೆಯೇ ಭಗವಂತ ನಿಗೆ ಸಂಬಂಧಿಸಿದ ಭೋಗೋಪಕರಣ ಭೋಗ ಸ್ಥಾನಾದಿಗಳೂ ಕೂಡ ಇವನಿಗೆ ಭೋಗ್ಯ ತಮವಾಗುವುವು. ಸರ್ವಪ್ರಕಾರವಿಶಿಷ್ಟನಾದ ಸರ್ವೇಶ್ವರನು ಭೋಗ್ಯನೆಂಬುವುದನ್ನು ಭೂಮಾಧಿಕರಣದಲ್ಲಿ ಆಚಾರ್ಯರು ನಿರೂಪಿಸಿದ್ದಾರೆ.

ಪರಬ್ರಹ್ಮವಸ್ತುವಿನ ಪ್ರಾಪ್ತಿಯೇ ಪರಮಸುಖವಾದ ಕಾರಣ ಅದನ್ನು ಪಡೆದು ಕೊಳ್ಳುವುದೇ ಪುರುಷಾರ್ಥವೆಂದು ಭೂಮಾದಿಕರಣದಲ್ಲಿ ತಿಳಿಸಿದೆ, ಮತ್ತಾವುದನ್ನು ಪಡೆದರೂ ದುಃಖ ತಪ್ಪದು. ಭಗವತ್ಪ್ರಾಪ್ತಿಯಲ್ಲಿಯೇ ಪರಮಸುಖ ಅಡಗಿದೆ. ಇದನ್ನು 'ನಿರತಿಶಯ ವಿಪುಲಸುಖರೂಪಸ್ಯ ಬ್ರಹ್ಮಣೋ ಲಕ್ಷಣಮಿದಂ ಉಚ್ಯತೇ, ಯತ್ರ ನಾನ್ಯತ್ಪಶ್ಯತಿ ನಾನ್ಯಚ್ಛೃಣೋತಿ ನಾನ್ಯದ್ವಿಜಾನಾತಿ ಸ ಭೂಮಾ ಇತಿ' ಎಂದು ಆಚಾರ್ಯರು ವಿವರಿಸಿದ್ದಾರೆ. ನಿರತಿಶಯ ಸುಖರೂಪವಾದ ಬ್ರಹ್ಮವಸ್ತುವನ್ನು ಅನು ಭವಿಸುವನು ಮತ್ತೊಂದನ್ನೂ ಅನುಭವಿಸುವುದಿಲ್ಲ. ಏಕೆಂದರೆ ಸಮಸ್ತ ವಸ್ತುಜಾತವೂ ಬ್ರಹ್ಮಸ್ವರೂಪ ಮತ್ತು ಅದರ ವಿಭೂತಿಯಲ್ಲಿಯೇ ಅಡಕವಾಗಿದೆ. ನಿರತಿಶಯಸುಖ ರೂಪವಾದ ಬ್ರಹ್ಮವಸ್ತುವನ್ನು ಅನುಭವಿಸುವವನು ತದ್ವ್ಯತಿರಿಕ್ತವಾದ ವಸ್ತುವೊಂದೂ ಇಲ್ಲದ ಕಾರಣವೇ ಮತ್ತೊಂದನ್ನೂ ನೋಡುವುದಿಲ್ಲ. ತಾನು ಅನುಭವಿಸುವುದೆಲ್ಲವೂ ಸುಖರೂಪವಾಗಿಯೇ ಇರುವುದರಿಂದ ದುಃಖವನ್ನು ಕಾಣುವುದಿಲ್ಲ. ಇದನ್ನೇ ಆಚಾ ರ್ಯರು 'ಅತಃ ಐಶ್ವರ್ಯಾಪರಪರ್ಯಾಯವಿಭೂತಿಗುಣವಿಶಿಷ್ಟಂ ನಿರತಿಶಯ ಸುಖ ರೂಪಂ ಬ್ರಹ್ಮಾನುಭವನ್ ತದ್ವ್ಯತಿರಿಕ್ತಸ್ಯ ವಸ್ತುನೋ ಅಭಾವಾದೇವ ಕಮಪ್ಯನ್ಯನ್ನ ಪಶ್ಯತಿ ಅನುಭಾವ್ಯಸ್ಯ ಸರ್ವಸ್ಯ ಸುಖರೂಪತ್ವಾದೇವ ದುಃಖಂ ಚ ನ ಪಶ್ಯತಿ ತದೇವ ಹಿ

acharya.org

ಸುಖಂ ಯದನುಭೂಯಮಾನಂ ಪುರುಷಾನುಕೂಲಂ ಭವತಿ,' ಎಂದು ವಿವರಿಸಿದ್ದಾರೆ. 'ಆನಂದೋ ಬ್ರಹ್ಮ' ಎಂದು ಹೇಳಿದಂತೆ ಬ್ರಹ್ಮವಸ್ತುವೇ ಪರಮಾನಂದಘನವಾಗಿರುವ ಕಾರಣ ಬ್ರಹ್ಮಾನುಭವವೇ ಪರಮಪುರುಷಾರ್ಥವಾದುದು. ಮುಕ್ತನಿಗೆ ಪರಮಾನಂದ ರೂಪವಾದ ಭಗವದನುಭವ ಅವ್ಯಾಹತವಾಗಿ, ಸಮಗ್ರವಾಗಿ ಉಂಟಾಗುತ್ತದೆ.

ಅತಿವಾಹಿಕರಿಂದ ಸತ್ಕರಿಸಲ್ಪಟ್ಟು ಮಾರ್ಗ ತೋರಲಾದ ಜೀವನು ಪರಮಪದ ವೆನಿಸುವ ವೈಕುಂಠವನ್ನು ಸೇರಿ ಭಗವಂತನನ್ನು ಪಡೆದುಕೊಳ್ಳುತ್ತಾನೆ. ಸ್ಥಾನವಿಶೇಷ ವನ್ನು ಸೇರಿ ಈ ಪರಮಸುಖವನ್ನು ಹೊಂದುವುದರಿಂದ ಆ ಸ್ಥಾನವಿಶೇಷವನ್ನೂ ಪರಮ ಪದವೆನ್ನುತ್ತಾರೆ. ಭಗವತ್ಸ್ವರೂಪದ ಪರಿಪೂರ್ಣಾನುಭವವನ್ನು ಹೊಂದಲು ಸೇರುವ ಭೋಗ್ಯತಮವೂ ಸರ್ವೋತ್ತರವೂ ಆದ ಸ್ಥಾನವಿಶೇಷ ಪರಮಪದವೆನಿಸುವುದು. ಈ ಪರಮಪದಶಬ್ದ ಭಗವತ್ಸ್ವರೂಪಕ್ಕೂ ಅನ್ವಯಿಸುತ್ತದೆ. ನಿರತಿಶಯವಾದ ಆನುಕೂಲ್ಯ ವನ್ನು ಹೊಂದಿದುದೂ ನಮಗೆ ಪ್ರಾಪ್ಯವಾದುದೂ ಆದುದು ಭಗವತ್ಸ್ವರೂಪ. ಆ ಕಾರಣ ಭಗವತ್ಸ್ವರೂಪವೂ ಪರಮಪದವೆನಿಸುವುದು. ಈ ಅನುಭವಕ್ಕೆ ಆಶ್ರಯ ವಾದುದೂ, ಅನುಭವಿಸಲ್ಪಡುವ ಭಗವದ್ವಿಭೂತಿಯಲ್ಲಿ ಸೇರಿರುವುದೂ, ಜ್ಞಾನಾ ನಂದಾದಿ ಲಕ್ಷಣಗಳನ್ನುಳ್ಳದೂ ಆದ ತನ್ನ ಸ್ವರೂಪವನ್ನೂ ಪರಮಪದವೆನ್ನುತ್ತಾರೆ.

ಹೀಗೆ ಮುಕ್ತನು ಶ್ರೀವೈಕುಂಠವನ್ನು ಸೇರಿ ಸ್ವಸ್ವರೂಪಾವಿರ್ಭಾವ ಹೊಂದಿ ಭಗವದನುಭವದ ಮಹದಾನಂದವನ್ನು ಪಡೆದುಕೊಳ್ಳುತ್ತಾನೆ. ಹೀಗೆ ಭಗವಂತನ ಪರಿ ಪೂರ್ಣಾನುಭವದಿಂದ ಉಂಟಾದ ಭಕ್ತಿವಿಶೇಷದ ಪರೀವಾಹ ಕೈಂಕರ್ಯವಾಗುತ್ತದೆ. ಮುಕ್ತಿದಶೆಯಲ್ಲಿ 'ಜಕ್ಷನ್ ಕ್ರೀಡನ್ ರಮಮಾಣಃ' ಎಂದು ಹೇಳಿರುವುವೆಲ್ಲಾ ಕರ್ಮ ನಿರಪೇಕ್ಷವಾಗಿ, ಭಗವಂತನ ಸಂಕಲ್ಪಕ್ಕನುಗುಣವಾಗಿ ಉಂಟಾಗತಕ್ಕವು. ಅವೆಲ್ಲವೂ ಆ ಕಾರಣ ಭಗವತ್ಕೈಂಕರ್ಯದಲ್ಲಿ ಅಂತರ್ಭೂತವಾದವು. ಆದುದರಿಂದ ಮುಕ್ತನಿಗೆ ಉಂಟಾಗುವ ಪ್ರಾಪ್ತಿ ತನ್ನ ಇಷ್ಟಕ್ಕನುಸಾರವಾದ ಕೈಂಕರ್ಯಪರ್ಯಂತವಾದ ಪರಿ ಪೂರ್ಣ ಬ್ರಹ್ಮಾನುಭವವೆಂದು ತಿಳಿಯಬೇಕು.

ರಾಮಾನುಜರು ಗದ್ಯದಲ್ಲಿ 'ತಥಾವಿಧ—ಭಗವದನುಭವಜನಿತ—ಅನವಧಿಕಾ ತಿಶಯ ಪ್ರೀತಿಕಾರಿತಾಶೇಷ—ಶೇಷತೈಕರತಿರೂಪ—ನಿತ್ಯಕಿಂಕರೋ ಭವಾನಿ' ಎಂದು ಹೇಳಿ ಭಗವದನುಭವದಿಂದ ಸ್ಫೂರ್ತಿಗೊಂಡು ಮುಕ್ತರು ಆ ಪರಮನನ್ನು ತಮ್ಮ ನಿತ್ಯಕೈಂ ಕರ್ಯದಿಂದ, ಸೇವೆಯಿಂದ ಆನಂದಗೊಳಿಸುವರೆಂಬುದನ್ನು ತಿಳಿಸಿದ್ದಾರೆ.

ಈ ವಿಧವಾದ ಭಗವತ್ಕೈಂಕರ್ಯ ಜೀವನಿಗೆ ಸ್ವರೂಪವೇ ಆದುದು. ಇದು ದೋಷಾವಹವಲ್ಲ. ಭಗವಂತನನ್ನುಳಿದು ಇತರರಿಗೆ ಮಾಡುವ ಕೈಂಕರ್ಯ ಕರ್ಮ ಮೂಲವಾಗಿ ಆದುದರಿಂದ ದುಃಖಕರವಾದುದು. ಆದರೆ ಭಗವತ್ಕೈಂಕರ್ಯ ನಮ್ಮ ಪುರುಷಾರ್ಥವಾಗಿ ಮಹತ್ತರವಾದ ಲಾಭವೇ ಆಗಿರುವುದು. ಜೀವನಿಗೆ ಬಂಧನದ ಬಿಡು

acharya.org

ಗಡೆ ಎಂದರೆ ವಿಶದತಮವಾದ ಭಗವತ್ಪಾರತಂತ್ರ್ಯದ ಪ್ರಾಪ್ತಿಯೇ. ಇದನ್ನು

ಪಾರತಂತ್ರ್ಯಂ ಪರೇ ಪುಂಸಿ ಪ್ರಾಪ್ಯ ನಿರ್ಗತಬಂಧನಃ ।
ಸ್ವಾತಂತ್ರ್ಯಮತುಲಂ ಪ್ರಾಪ್ಯ ತೇನೈವ ಸಹ ಮೋದತೇ ॥

ಎಂದು ತಿಳಿಸಿದ್ದಾರೆ.

ಶ್ರೀ ವೈಕುಂಠಲೋಕವನ್ನು ಸೇರಿದ ಮುಕ್ತನು ಪಡೆಯುವ ಭಗವದನುಭವಕ್ಕೆ ಕೊನೆಯೇ ಇಲ್ಲ. ಮತ್ತೆಂದೂ ಅವನು ಈ ಸಂಸಾರಮಂಡಲಕ್ಕೆ ಹಿಂದಿರುಗುವುದಿಲ್ಲ. 'ನ ಚ ಪುನರಾವರ್ತತೇ' ಎಂದು ಇದನ್ನು ಹೇಳಿದೆ. 'ಪ್ರಾಪ್ಯತೇ ಪರಮಂ ಧಾಮ ಯತೋ ನಾವರ್ತತೇ ಯತಿಃ । ಎಂದೂ

'ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಂ ।
ನಾಪ್ನುವಂತಿ ಮಹಾತ್ಮಾನಃ ಸಂಸಿದ್ಧಿಂ ಪರಮಾಂ ಗತಾಃ ॥'

ಎಂದೂ ಈ ಅಂಶವನ್ನು ಶಾಸ್ತ್ರಗಳು ತಿಳಿಸುತ್ತಿವೆ. ಭಗವಂತನ ಇಚ್ಛೆಯಂತೆ ಅವನ ಕೈಂಕರ್ಯಕ್ಕಾಗಿ ಅವನೊಡನೆಯಾಗಲೀ ಬೇರೆಯಾಗಿಯಾಗಲೀ ಈ ಲೋಕದಲ್ಲಿ ಮುಕ್ತನು ಅವತರಿಸಿದರೂ ಸಹ ಅವನಿಗೆ ಭಗವದನುಭವಕ್ಕೆ ಸಂಕೋಚವಿಲ್ಲದ ಕಾರಣ ಪುನರಾವೃತ್ತಿ ಇಲ್ಲವೆನ್ನಬಹುದು. ಹೀಗೆ ಈ ಮೋಕ್ಷಾನುಭವಕ್ಕೆ ಉತ್ತರಾವಧಿ ಇಲ್ಲ. ಯಾವದಾತ್ಮಭಾವಿಯಾದುದು ಈ ದಿವ್ಯಾನುಭವ.

ಅರ್ಚಿರಾದಿ ಮಾರ್ಗದಲ್ಲಿ ಮುಕ್ತನು ಭಗವಂತನನ್ನು ಸೇರಿದಾಗ ತನ್ನ ನಿಜ ಸ್ವರೂಪವನ್ನು ಪಡೆಯುತ್ತಾನೆ ಎಂದು ಹೇಳಿದೆ. 'ಸಂಪದ್ಯಾವಿರ್ಭಾವಃ ಸ್ವೇನ ಶಬ್ದಾತ್' ಎಂಬ ಸೂತ್ರದಲ್ಲಿ ಇದನ್ನು ಪ್ರತಿಪಾದಿಸಿದೆ. ಸ್ವಸ್ವರೂಪವು ಸದಾ ಸಿದ್ಧವಾದುದಲ್ಲವೇ ? ಅದು ಹೊಸದಾಗಿ ಆವಿರ್ಭಾವವಾಗತಕ್ಕದಲ್ಲವಲ್ಲ' ಎಂಬ ಆಶಂಕೆಗೆ 'ಮುಕ್ತಃ ಪ್ರತಿಜ್ಞಾ-ನಾತ್' ಎಂಬ ಸೂತ್ರದಲ್ಲಿ ಸಮಾಧಾನವನ್ನು ಹೇಳಿದೆ. ಕರ್ಮಸಂಬಂಧದಿಂದ ಉಂಟಾಗಿದ್ದ ಶರೀರದಿಂದ ಮುಕ್ತನಾಗಿ ತನ್ನ ಸ್ವಾಭಾವಿಕರೂಪದಿಂದ ಇರುವ ಜೀವನನ್ನು 'ಸ್ವರೂಪಾವಿರ್ಭಾವವನ್ನು ಹೊಂದಿದವನು' ಎಂದು ಹೇಳಿದೆ. ಕರ್ಮರೂಪವಾದ ಅವಿದ್ಯೆ ಅವನ ನಿಜಸ್ವರೂಪವನ್ನು ಅದುವರೆಗೂ ಮುಚ್ಚಿದ್ದಿತು. ಬ್ರಹ್ಮಪ್ರಾಪ್ತಿಯಾದಾಗ ಅದು ನಿವೃತ್ತಿಯಾಯಿತು. ಇದು ಸ್ವಸ್ವರೂಪಾವಿರ್ಭಾವ. ಅಪಹತಪಾಪ್ಮತ್ವಾದಿ ಎಂಟು ಗುಣಗಳು ಜೀವನಲ್ಲಿ ಮೊದಲಿನಿಂದಲೂ ಇರುತ್ತಿದ್ದರೂ ಅವು ಸಂಸಾರದೆಶೆಯಲ್ಲಿ ಕರ್ಮದಿಂದ ಮರೆಯಾಗಿದ್ದವು. ಮುಕ್ತಾವಸ್ಥೆಯಲ್ಲಿ ಸ್ಫುಟವಾಗಿ ಪ್ರಕಾಶವಾಗುತ್ತವೆ. ಇವು ಆ ಕಾರಣ ಹೊಸದಾಗಿ ಉಂಟಾದವಲ್ಲ ಆದರೆ ಆವಿರ್ಭಾವ ಹೊಂದಿದವು. ಇದನ್ನೇ

ಯಥಾ ನ ಕ್ರಿಯತೇ ಜ್ಯೋತ್ಸ್ನಾ ಮಲಪ್ರಕ್ಷಾಲನಾನ್ಮಣೇಃ ।
ದೋಷಪ್ರಹಾಣಾನ್ನ ಜ್ಞಾನಂ ಆತ್ಮನಃ ಕ್ರಿಯತೇ ತಥಾ ॥

acharya.org

ಎಂದು ವಿವರಿಸಿದ್ದಾರೆ.

ಪರಮಪದದಲ್ಲಿ ಹೋಗಿ ಭಗವಂತನನ್ನು ಸೇರಿದಾಗ ಬರುವ ಸಾಯುಜ್ಯವೇ ಮೋಕ್ಷವೆನ್ನಿಸುವುದು. ಕೆಲವರು ವಿಷ್ಣುವಿನ ಲೋಕದಲ್ಲಿ ವಾಸಿಸುತ್ತಾರೆ. ಕೆಲವರು ವಿಷ್ಣುವಿನ ಸಾಮೀಪ್ಯವನ್ನು ಹೊಂದುತ್ತಾರೆ. ಮತ್ತೆ ಕೆಲವರು ಅವನಂತೆಯೇ ರೂಪವನ್ನು ಪಡೆಯುತ್ತಾರೆ. ಮತ್ತೆ ಕೆಲವರು ಸಾಯುಜ್ಯವನ್ನು ಹೊಂದುತ್ತಾರೆ ಎಂದು ಹೇಳಿದೆ. ಇವುಗಳಲ್ಲಿ ಸಾಲೋಕ್ಯ, ಸಾಮೀಪ್ಯ ಮತ್ತು ಸಾರೂಪ್ಯಗಳು ಮೋಕ್ಷವಲ್ಲ; ಸಾಯುಜ್ಯವೇ ಮೋಕ್ಷವೆಂಬುದು ಈ ದರ್ಶನದ ಸಿದ್ಧಾಂತ. ಸಾಲೋಕ್ಯ ಸಾರೂಪ್ಯ ಸಾಮಿಪ್ಯಾದಿಗಳು ಶ್ವೇತದ್ವೀಪಾದಿಗಳಲ್ಲಿ ಆಗುವ ಅನುಭವವನ್ನು ಹೇಳುವುದರಿಂದ ಮೋಕ್ಷವೆಂಬುದಾಗಿ ಹೇಳಿದೆ. ಇದನ್ನು

ಮೋಕ್ಷಂ ಸಾಲೋಕ್ಯಸಾರೂಪ್ಯಂ ಪ್ರಾರ್ಥಯೇ ನ ಕದಾಚನ ।
ಇಚ್ಛಾಮ್ಯಹಂ ಮಹಾಬಾಹೋ ಸಾಯುಜ್ಯಂ ತವ ಸುವ್ರತ ॥'

ಎಂದೂ 'ಸಾಯುಜ್ಯಮನ್ಯೇ ಸ ತು ಮೋಕ್ಷ ಉಕ್ತಃ' ಎಂದೂ ಪ್ರತಿಪಾದಿಸಿದ್ದಾರೆ. ಸಾಯುಜ್ಯವು ವ್ಯಾಪ್ತಕವಾಗಿ ಉಳಿದವನ್ನು ತನ್ನೊಳಗೆ ಒಳಗೊಂಡಿದೆ. 'ಸಮಾನ ಗುಣಕಃ ಸಯುಕ್' ಎಂದು ಹೇಳಿದಂತೆ ಬ್ರಹ್ಮವಸ್ತುವಿಗೆ ಸಮನಾದ ಗುಣಗಳನ್ನು ಹೊಂದಿರುವ ಜೀವನು 'ಸಯುಕ್' ಎನಿಸುವನು. ಸಪ್ರಕಾರ ಬ್ರಹ್ಮವಸ್ತುವೆನ್ನುವ ಭೋಗ್ಯದಲ್ಲಿ ಬ್ರಹ್ಮವಸ್ತುವೂ ಮುಕ್ತನೂ ಭೋಕ್ತೃಗಳಾಗಿ ಅನ್ವಯಿಸುವುದರಿಂದ ಇಬ್ಬರೂ ಸಮಾನ ಗುಣಕರೆನಿಸುವರು. ಆ ಆನಂದದ ಅನುಭವದಲ್ಲಿ ಮುಕ್ತನೂ ಬ್ರಹ್ಮವಸ್ತುವೂ ಸಮಾನವಾಗಿ ಭಾಗವಹಿಸುವರು. ಶ್ರುತಿಯಲ್ಲಿ ಸಾಯುಜ್ಯ ಮತ್ತು ಸಾರ್ಷ್ಟಿತಾ ಎಂಬ ಶಬ್ದಗಳ ಪ್ರಯೋಗವಿದೆ. ಬ್ರಹ್ಮವಸ್ತುವಿಗೂ ಮುಕ್ತನಿಗೂ ಭೋಕ್ತೃವಾದುದು ಒಂದೇ ಎಂಬುದನ್ನು ಸಾಯುಜ್ಯಶಬ್ದ ತಿಳಿಸಿದರೆ ಅವರ ಆನಂದಾನುಭವದಲ್ಲಿ ತಾರತಮ್ಯವಿಲ್ಲವೆಂಬುದನ್ನು 'ಸಾರ್ಷ್ಟಿತಾ' ಎಂಬ ಶಬ್ದ ತಿಳಿಸುವುದು. ಇದನ್ನೇ

'ಸಾಯುಜ್ಯಮುಭಯೋರತ್ರ ಭೋಕ್ತೃತ್ವಸ್ಯಾವಿಶಿಷ್ಟತಾ ।
ಸಾರ್ಷ್ಟಿತಾ ತತ್ರ ಭೋಗಸ್ಯ ತಾರತಮ್ಯವಿಹೀನತಾ ॥'

ಎಂಬಲ್ಲಿ ಸ್ಪಷ್ಟವಾಗಿ ನಿರೂಪಿಸಿದ್ದಾರೆ.

'ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ' ಎಂದೂ 'ಪರಮಂ ಸಾಮ್ಯಮುಪೈತಿ' ಎಂದೂ 'ಮಮ ಸಾಧರ್ಮ್ಯಮಾಗತಾಃ' ಎಂದೂ ಈ ವಿಧವಾದ ಬ್ರಹ್ಮಾನುಭವಪ್ರಕಾರವನ್ನು ನಿರೂಪಿಸಿದೆ. ಇದರಿಂದ ಮುಕ್ತರು ಭಗವಂತನಿಗಿಂತ ಭಿನ್ನರಾಗಿ ಆ ಭಗವಂತನನ್ನು ಯಾವದಾತ್ಮಭಾವಿಯಾಗಿ ಅನುಭವಿಸುವರೆಂಬುದು

acharya.org

ಸ್ಪಷ್ಟವಾಗುತ್ತದೆ. ಇತರ ದರ್ಶನಗಳವರು ಹೇಳುವ ಬ್ರಹ್ಮಾತ್ಮೈಕ್ಯವನ್ನು ಈ ದರ್ಶನ ಒಪ್ಪುವುದಿಲ್ಲ. ಮೇಲಿನ ಪ್ರಮಾಣಗಳು ಬ್ರಹ್ಮಾತ್ಮೈಕ್ಯವನ್ನು ನಿರಾಕರಿಸುತ್ತವೆ. ಅವಿದ್ಯೆಯ ಗಂಧವೂ ಇಲ್ಲದ ಮುಕ್ತನು ಯಥಾರ್ಥಜ್ಞಾನವುಳ್ಳವನಾಗುತ್ತಾನೆ. ಅವನ ಧರ್ಮಭೂತಜ್ಞಾನವು ಸ್ವಸ್ವರೂಪವನ್ನು ಹೊಂದಿ ವಿಕಾಸ ಹೊಂದಿರುತ್ತದೆ. ಸರ್ವವನ್ನೂ ತಿಳಿಯುವ ಸಾಮರ್ಥ್ಯ ಅವನದಾಗುವುದು. ಮುಕ್ತನು ತಾನು ಬ್ರಹ್ಮಪ್ರಕಾರವೆಂಬುದನ್ನು ಮನಗಂಡವನಾಗಿ ತಾನೂ ಪರಮಾತ್ಮನನ್ನು ಆತ್ಮನನ್ನಾಗಿ ಹೊಂದಿರುವುದರಿಂದ 'ಬ್ರಹ್ಮಾಸ್ಮಿ' ಎಂದರೆ 'ಬ್ರಹ್ಮಾತ್ಮಕನಾಗಿದ್ದೇನೆ' ಎಂದು ಅನುಭವಿಸುತ್ತಾನೆ. ಪರಮಪುರುಷನಿಗೆ ಸಮವಾದ ಆನಂದಾನುಭವವನ್ನು ತಾನೂ ಹೊಂದುತ್ತಾನೆ. ಮುಕ್ತನಿಗೆ ಜಗದೀಶ್ವರತ್ವವೂ ಜಗದ್ವ್ಯಾಪಾರವೂ ಇಲ್ಲವೆಂಬುದನ್ನು 'ಜಗದ್ವ್ಯಾಪಾರವರ್ಜ್ಯಂ ಪ್ರಕರಣಾದಸನ್ನಿಹಿತತ್ವಾಚ್ಚ' ಎಂಬ ಸೂತ್ರವು ತಿಳಿಸುತ್ತದೆ. 'ಭೋಗಮಾತ್ರ-ಸಾಮ್ಯಲಿಂಗಾಚ್ಚ' ಎಂಬ ಸೂತ್ರದಲ್ಲಿ ಬ್ರಹ್ಮವಸ್ತುವಿನ ಭೋಗಮಾತ್ರದಲ್ಲಿ ಮುಕ್ತನಿಗೂ ಪರಬ್ರಹ್ಮನಿಗೂ ಸಾಮ್ಯವಿದೆಯೆಂದು ಹೇಳಿದೆ.

ಮುಕ್ತದೆಶೆಯಲ್ಲಿಯೂ ಮುಕ್ತನಿಗೆ ಆಧೇಯತ್ವ ವಿಧೇಯತ್ವ, ಶೇಷತ್ವ, ಅಣುತ್ವ ಮೊದಲಾದವು ವ್ಯವಸ್ಥಿತವಾಗಿಯೇ ಇವೆ. ಭಗವಂತನಿಗೆ ಅಸಾಧಾರಣ ಲಕ್ಷಣಗಳೆಂದು ಹೇಳಿದ ಜಗತ್ಕಾರಣತ್ವ, ಮೋಕ್ಷಪ್ರದತ್ವ, ಸರ್ವಾಧಾರತ್ವ, ಸರ್ವನಿಯಂತೃತ್ವ, ಸರ್ವ-ಶೇಷಿತ್ವ, ಸರ್ವಶರೀರಿತ್ವ, ಸರ್ವಶಬ್ದವಾಚ್ಯತ್ವ, ಸರ್ವಲೋಕಶರಣ್ಯತ್ವ, ಸರ್ವೋಪಾಸ್ಯತ್ವ, ಸರ್ವಫಲಪ್ರದತ್ವ, ಲಕ್ಷ್ಮೀಪತಿತ್ವ ಮೊದಲಾದವು ವ್ಯವಸ್ಥಿತವಾಗಿ ಮತ್ತಾರಿಗೂ ಸಂಭವಿಸುವುದೇ ಇಲ್ಲ. ಭಗವಂತನಿಗೆ ಯಾರೂ ಈ ಅಂಶಗಳಲ್ಲಿ ಸಮರಾಗರು ಎನ್ನುವುದನ್ನು

'ನ ಸಂಪದಾಂ ಸಮಾಹಾರೇ ವಿಪದಾಂ ವಿನಿವರ್ತನೇ ।
ಸಮರ್ಥೋ ವಿದ್ಯತೇ ಕಶ್ಚಿತ್ ತಂ ವಿನಾ ಪುರುಷೋತ್ತಮಮ್ ।'

ಎಂಬಲ್ಲಿ ಹೇಳಿದೆ.

ಮುಕ್ತರೂ ಸ್ವತಂತ್ರರಲ್ಲವೆಂದ ಮೇಲೆ ಅವರಿಗೆ ಮತ್ತೆ ಸಂಸಾರಪ್ರಾಪ್ತಿಯಾಗಬಹುದಲ್ಲವೇ ಎಂಬ ಆಶಂಕೆಗೆ ಅವಕಾಶವಿಲ್ಲ. ಮುಕ್ತರ ಬಾಳ್ವೆಯೂ ಪರಮಪುರುಷನಿಗೆ ಅಧೀನವಾಗಿದೆ ಎಂದ ಮಾತ್ರಕ್ಕೆ ಭಗವಂತನ ಸಂಕಲ್ಪವಾದರೆ ಅವರಿಗೆ ಪುನರಾವೃತ್ತಿ ಆಗಬಹುದಲ್ಲಾ ಎಂಬ ಸಂದೇಹಕ್ಕೆ ಆಸ್ಪದವಿಲ್ಲ. 'ಅನಾವೃತ್ತಿಶ್ಶಬ್ದಾತ್' ಎಂಬ ಸೂತ್ರವೂ 'ಸ ಖಲ್ವೇವಂ ವರ್ತಯನ್ಯಾವದಾಯುಷಂ ಬ್ರಹ್ಮಲೋಕಮಭಿಸಂಪದ್ಯತೇ ನ ಚ ಪುನರಾವರ್ತತೇ' ಎಂಬ ಶ್ರುತಿವಾಕ್ಯವೂ ಇದಕ್ಕೆ ಪ್ರಮಾಣಗಳಾಗಿವೆ. ತನಗೆ ಅತ್ಯಂತ ಪ್ರಿಯನಾದ ಜ್ಞಾನಿಯನ್ನು ಪಡೆದುಕೊಂಡ ಪರಮಾತ್ಮನು ಎಂದೆಂದೂ ಅವನನ್ನು ಕೈ ಬಿಡುವುದಿಲ್ಲ. ಅಲ್ಲದೆ ಕರ್ಮಸಂಬಂಧವನ್ನು ಕಳೆದುಕೊಂಡು ಪರಬ್ರಹ್ಮಾನು

acharya.org

ಭವವನ್ನು ಮಾಡುತ್ತಿರುವ ಮುಕ್ತನಿಗೆ ಅನ್ಯಾಪೇಕ್ಷೆಯೇ ಉದಿಸದು. ಪರಮೋದಾರನಾದ ಭಗವಂತನು ತಾನೇ ಈ ಬಗೆಗೆ ಆಶ್ವಾಸನೆಯನ್ನು ಕೊಟ್ಟಿದ್ದಾನೆ.

'ಸಾಯುಜ್ಯಂ ಪ್ರತಿಪನ್ನಾ ಯೇ ತೀವ್ರಭಕ್ತಾಸ್ತಪಸ್ವಿನಃ ।
ಕಿಂಕರಾ ಮಮ ತೇ ನಿತ್ಯಂ ಭವಂತಿ ನಿರುಪದ್ರವಾಃ ॥'

ಎಂದೂ ತಾನೇ ಹೇಳಿರುವಂತೆ ಮುಕ್ತರಿಗೆ ಪುನರಾವೃತ್ತಿಯ ಶಂಕೆಯೂ ಇಲ್ಲ ಮುಕ್ತನು ಆಜ್ಞಾತಿಲಂಘನವನ್ನಾಗಲೀ ವಿಪರೀತಾನುಷ್ಠಾನವನ್ನಾಗಲೀ ಮಾಡುವವನಲ್ಲ. ಭಗವಂತನ ಸಂತೋಷವೇ ತನ್ನ ಸಂತೋಷವೆಂದು ನಲಿಯುವವನು ಅವನು. ಆದುದ ರಿಂದ ಕೈಂಕರ್ಯಪರ್ಯಂತವಾಗಿ ಪರಿಪೂರ್ಣ ಬ್ರಹ್ಮಾನುಭವರೂಪವಾದ ಮೋಕ್ಷ ಸ್ವರೂಪವು ಮುಕ್ತನಿಗೆ ಯಾವದಾತ್ಮಭಾವಿಯಾಗಿರುವುದೆಂದು ತಿಳಿಯಬೇಕು.

ಶ್ರೀವೈಷ್ಣವ ಧರ್ಮ

ಲಕ್ಷ್ಮೀವಿಶಿಷ್ಟನಾದ ಶ್ರೀಮನ್ನಾರಾಯಣನೇ ಪರದೈವವೆಂದು ಪ್ರತಿಪಾದಿಸುವ ಈ ವಿಶಿಷ್ಟಾದ್ವೈತಸಿದ್ಧಾಂತದ ಅನುಯಾಯಿಗಳಿಗೆ ಶ್ರೀವೈಷ್ಣವರೆಂದು ಹೆಸರಿದೆ. ಮಾಧ್ವಸಂಪ್ರದಾಯದವರಿಗೆ ವೈಷ್ಣವರೆಂಬ ಅಭಿಧಾನವುಂಟು. ಅವರೂ ಸಹ ವಿಷ್ಣು ಪಾರಮ್ಯವನ್ನೇ ಹೇಳುವವರು. ಆದರೆ ಶ್ರೀದೇವಿಗೆ ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಕೊಟ್ಟಿರುವ ಸ್ಥಾನವನ್ನು ಶ್ರೀವೈಷ್ಣವಶಬ್ದ ಸೂಚಿಸುತ್ತದೆ.

ವಿಶಿಷ್ಟಾದ್ವೈತ ಸಿದ್ಧಾಂತಕ್ಕನುಸಾರವಾಗಿ ತತ್ವಹಿತಪುರುಷಾರ್ಥಗಳ ನಿರೂ ಪಣೆಯನ್ನು ಇದುವರೆಗೆ ಮಾಡಲಾಯಿತು. ದರ್ಶನಭಾಗಕ್ಕೆ ಹೇಗೆ ಪ್ರಾಧಾನ್ಯವನ್ನು ಕೊಟ್ಟಿದೆಯೋ ಹಾಗೆಯೇ ದಿನದಿನದ ಜೀವನಕ್ರಮಕ್ಕೂ ಈ ಸಿದ್ಧಾಂತ ಅದೇ ರೀತಿಯ ಪ್ರಾಧಾನ್ಯವನ್ನು ಕೊಟ್ಟಿದೆ. ದಿನದಿನದ ಬಾಳು ನಮ್ಮ ನಂಬಿಕೆ ಧ್ಯೇಯ ಮತ್ತು ಗುರಿಗಳಿಗೆ ಅನುಗುಣವಾಗಿ ರೂಪುಗೊಳ್ಳಬೇಕು. ನಮ್ಮಲ್ಲಿ ಭಗವದ್ಭಕ್ತಿಯ ಮತ್ತು ಭಗವತ್ಪಾರತಂತ್ರ್ಯದ ಹೊನಲನ್ನು ಹರಿಸಲು ಸಾಧಕವಾಗಬೇಕು ಇಲ್ಲಿನ ನಮ್ಮ ಜೀವನ ಕ್ರಮ.

ಸಮಗ್ರವಾದ ಧರ್ಮವೊಂದರಲ್ಲಿ ಆಚಾರಾಂಗ, ಧರ್ಮಶಾಸ್ತ್ರ, ಪೂಜಾಪ್ರಕ್ರಿಯೆ ಮತ್ತು ದರ್ಶನ ಎಂಬ ನಾಲ್ಕು ಅಂಶಗಳು ಯುಕ್ತವಾದ ಕ್ರಮದಲ್ಲಿ ಕೂಡಿಕೊಂಡಿರು ತ್ತವೆ. ಮನಸ್ಸು, ರಸಭಾವ ಮತ್ತು ಬುದ್ಧಿಗಳ ಮೇಲೆ ತಕ್ಕ ಪ್ರಭಾವವನ್ನಿವು ಬೀರು ತ್ತವೆ. ಹಾಗೂ ಅದನ್ನನುಸರಿಸುವವರಲ್ಲಿ ಸಮಗ್ರವಾದ ಪರಿಣಾಮವನ್ನುಂಟು ಮಾಡು ತ್ತವೆ. ಒಂದೊಂದು ಧರ್ಮದಲ್ಲಿಯೂ ಆಯಾ ತತ್ತ್ವಕ್ಕನುಸಾರವಾದ ಆಚಾರಾನುಷ್ಠಾನ ಗಳು ಮತ್ತು ಜೀವನಕ್ರಮಗಳು ಉಪದೇಶಿಸಲ್ಪಟ್ಟಿವೆ. ಬುದ್ಧಿಪೂರ್ವಕವಾಗಿ ಮತ್ತು ಸಹಜವಾಗಿ ಧಾರ್ಮಿಕ ಜೀವನವನ್ನು ನಾವು ಬಾಳಲು ಇವು ಸಹಾಯ ಮಾಡುತ್ತವೆ. ತತ್ವಜ್ಞಾನದ ಉಪದೇಶ ಅನುಷ್ಠಾನಪರ್ಯಂತವಾಗಿ ಮೂಡಲು ಅವಕಾಶ ಮಾಡಿ ಕೊಡುತ್ತವೆ.

acharya.org

ಧರ್ಮಶಾಸ್ತ್ರದಲ್ಲಿ ವಿಧಿಸಿರುವ ವರ್ಣಾಶ್ರಮಧರ್ಮಗಳ ಅನುಷ್ಠಾನ ಇತರರಿಗೆ ಹೇಗೋ ಹಾಗೆ ಶ್ರೀವೈಷ್ಣವರಿಗೂ ಸಮಾನವಾಗಿ ಅನ್ವಯಿಸುತ್ತದೆ, ಭಕ್ತಿಮಾರ್ಗವನ್ನನುಸರಿಸಿದವರೂ ಹಾಗೆಯೇ ಪ್ರಪತ್ತಿಮಾರ್ಗವನ್ನನುಸರಿಸಿದವರೂ ಸಹ ಶಾಸ್ತ್ರೀಯ ಪದ್ಧತಿಯನ್ನು ಪರಿಪಾಲಿಸಬೇಕೆಂದು ಸ್ಪಷ್ಟಪಡಿಸಿದ್ದಾರೆ. ಹಿಂದೂ ಧರ್ಮ ವಿಧಿಸಿರುವ ಸಾಮಾನ್ಯ ಧರ್ಮಗಳು ಎಲ್ಲರಿಗೂ ಕರ್ತವ್ಯಗಳೇ ಆಗಿವೆ.

'ಅವಿಪ್ಲವಾಯ ಧರ್ಮಾಣಾಂ ಪಾಲನಾಯ ಕುಲಸ್ಯ ಚ ।
ಸಂಗ್ರಹಾಯ ಚ ಲೋಕಸ್ಯ ಮರ್ಯಾದಾಸ್ಥಾಪನಾಯ ಚ ।
ಪ್ರಿಯಾಯ ಮಮ ವಿಷ್ಣೋಶ್ಚ ದೇವದೇವಸ್ಯ ಶಾರ್ಙ್ಗಿಣಃ ।
ಮನೀಷೀ ವೈದಿಕಾಚಾರಂ ಮನಸಾಪಿ ನ ಲಂಘಯೇತ್ ॥'

ಎಂದು ಈ ಅಂಶವನ್ನು ಸ್ಪಷ್ಟಪಡಿಸಿದ್ದಾರೆ.

ಈ ಲೋಕದಲ್ಲಿ ನಾವಿರುವವರೆಗೆ 'ಯಸ್ಮಾನ್ನೋದ್ವಿಜತೇ ಲೋಕಃ ಲೋಕಾನ್ನೋದ್ವಿಜತೇ ಚ ಯಃ' ಎಂಬಂತೆ ಶಾಂತವಾದ, ಭಗವತ್ಪರವಾದ, ಧಾರ್ಮಿಕವಾದ ಜೀವನವನ್ನು ನಡೆಸಬೇಕೆಂಬುದು ಈ ಸಿದ್ಧಾಂತದ ಗುರಿ.

ಯಾವ ವರ್ಣದವರಾಗಲೀ, ಕುಲದವರಾಗಲೀ, ಅವರು ಭಗವದ್ಭಕ್ತರಾಗಿದ್ದರೆ ಅವರನ್ನು ಬ್ರಾಹ್ಮಣರಂತೆಯೇ ಶ್ಲಾಘಿಸಿ ಆದರಿಸಬೇಕೆಂದು ತಿಳಿಸಲಾಗಿದೆ. ಭಗವದ್ಭಕ್ತಿ ಎಂಬ ಗುಣವಿಶೇಷದಿಂದ ಯಾರಾದರೂ ಗೌರವಾರ್ಹರಾಗುತ್ತಾರೆ. ಶಾಸ್ತ್ರೋಕ್ತವಾದ ಆಚಾರ ವ್ಯವಹಾರಗಳು ನಿಯತವಾದರೂ ಗುಣದ ಆಧಾರದಿಂದ ಗೌರವ ತೋರಿ ಶ್ಲಾಘಿಸಬೇಕು. ಆದುದರಿಂದ ಯಾರಲ್ಲಿ ಈ ಹೆಚ್ಚಳವಿರುವುದೋ ಅವರು ಯಾರೇ ಇಗಲಿ ಅವರಿಗೆ ಗೌರವ ತೋರಬೇಕೆಂದು ಈ ಧರ್ಮ ಸೂಚಿಸುತ್ತದೆ.

'ನ ಶೂದ್ರಾ ಭಗವದ್ಭಕ್ತಾಃ ವಿಪ್ರಾ ಭಾಗವತಾಃ ಸ್ಮೃತಾಃ।
ಸರ್ವವರ್ಣೇಷು ತೇ ಶೂದ್ರಾಃ ಯೇ ಹ್ಯಭಕ್ತಾ ಜನಾರ್ದನೇ ॥'

ಎಂಬಲ್ಲಿ ಇದನ್ನು ಸ್ಪಷ್ಟವಾಗಿ ಹೇಳಿದ್ದಾರೆ.

ಯಾರು ಭಗವದ್ಭಕ್ತರಾಗಿದ್ದಾರೆಯೋ ಅವರಿಗೆ ಮೊದಲು ಗೌರವ ಕೊಡಬೇಕು ಎಂಬುದನ್ನು

ಮದ್ಭಕ್ತಜನವಾತ್ಸಲ್ಯಂ ಪೂಜಾಯಾಂ ಚಾನುಮೋದನಮ್ ।
ಮತ್ಕಥಾಶ್ರವಣೇ ಭಕ್ತಿಃ ಸ್ವರನೇತ್ರಾಂಗವಿಕ್ರಿಯಾ ॥
ಸ್ವಯಮಾರಾಧನೇ ಯತ್ನೋ ಮಮಾರ್ಥೇ ದಂಭವರ್ಜನಮ್ ।
ಮಮಾನುಸ್ಮರಣಂ ನಿತ್ಯಂ ಯಚ್ಚ ಮಾಂ ನೋಪಜೀವತಿ ॥
ಭಕ್ತಿರಷ್ಟವಿಧಾ ಹ್ಯೇಷಾ ಯಸ್ಮಿನ್ಮ್ಲೇಚ್ಛೇಪಿ ವರ್ತತೇ ।
ಸ ವಿಪ್ರೇಂದ್ರೋ ಮುನಿಃ ಶ್ರೀಮಾನ್ ಸ ಯತಿಃ ಸ ಚ ಪಂಡಿತಃ ।
ತಸ್ಮೈ ದೇಯಂ ತತೋ ಗ್ರಾಹ್ಯಂ ಸ ಚ ಪೂಜ್ಯೋ ಯಥಾ ಹ್ಯಹಮ್ ॥

acharya.org

ಎಂಬಲ್ಲಿ ಸ್ಪಷ್ಟಪಡಿಸಿದ್ದಾರೆ. ಶಾಸ್ತ್ರದ ನಿಯಮಗಳನ್ನು ಬಿಡಬಾರದು. ಅದರಿಂದಲೇ ಆತ್ಮೋತ್ಕರ್ಷ ಮತ್ತು ಪರನಿಕರ್ಷವೆಂಬುದನ್ನೂ ಮನಸ್ಸಿನಲ್ಲಿ ಎಣಿಸಬಾರದು. ಭಕ್ತರಲ್ಲಿ ಪರಮ ಗೌರವ ಹೊಂದಿರಬೇಕು.

ಭಕ್ತನಾಗಲೀ ಪ್ರಪನ್ನನಾಗಲೀ ತನ್ನ ಪರಮನಿಷ್ಠೆಗೆ ಸ್ವಲ್ಪವೂ ಕುಂದುಂಟಾಗದಂತೆ ಹಾಗೂ ತನ್ನ ಪುರುಷಾರ್ಥಕ್ಕನುಗುಣವಾಗುವಂತೆ ತನ್ನ ಬಾಳನ್ನು ಬಾಳಬೇಕು. ತನ್ನಿಂದ ಒಬ್ಬರಿಗೂ ನೋವಾಗದಂತೆ ನೋಡಿಕೊಳ್ಳಬೇಕು, ಆತ್ಮಗುಣಗಳನ್ನು ಬೆಳಸಿಕೊಳ್ಳಬೇಕು. ಧರ್ಮಕ್ಕೆ ವಿರುದ್ಧನಲ್ಲದೆ ಇರುವುವೂ ಪ್ರಯತ್ನವಿಲ್ಲದೆ ಪ್ರಾಪ್ತವಾದವೂ ಆದ ಸಾಂಸಾರಿಕ ಸುಖಗಳನ್ನನುಭವಿಸಬಹುದು. ಆದರೆ ಭಗವತ್ಸ್ಮರಣೆಯು ಮಸುಕಾಗದಂತೆ ಅದು ಉಜ್ವಲವಾಗುವಂತೆ ತನ್ನ ಪ್ರತಿಯೊಂದು ವ್ಯವಹಾರವೂ ನಡೆಯುವಂತೆ ಮಾಡಿಕೊಳ್ಳಬೇಕು.

'ಅಭಿಗಚ್ಛನ್ ಹರಿಂ ಪ್ರಾತಃ ಪಶ್ಚಾದ್ದ್ರವ್ಯಾಣಿ ಚಾರ್ಜಯನ್ ।
ಅರ್ಚಯಂಶ್ಚ ತತೋ ದೇವಂ ತತೋ ಮಂತ್ರಾನ್ ಜಪನ್ನಪಿ ॥
ಧ್ಯಾಯನ್ನಪಿ ಪರಂ ದೇವಂ ಕಾಲೇಷೂಕ್ತೇಷು ಪಂಚಸು ।
ವರ್ತಮಾನಸ್ಸದಾ ಚೈವಂ ಪಾಂಚಕಾಲಿಕವರ್ತ್ಮನಾ ॥
ಸ್ವಾರ್ಜಿತೈಃ ಗಂಧಪುಷ್ಪಾದ್ಯೈಃ ಶುಭೈಃ ಶಕ್ತ್ಯನುರೂಪತಃ ।
ಆರಾಧಯನ್ ಹರಿಂ ಭಕ್ತ್ಯಾ ಗಮಯಿಷ್ಯಾಮಿ ವಾಸರಾನ್ ॥

ಪ್ರಾತಃಕಾಲದಲ್ಲಿ ಏಳುವುದರಿಂದ ರಾತ್ರಿ ಮಲಗುವವರೆಗೆ ನಾವು ನಡೆದುಕೊಳ್ಳಬೇಕಾದ ಕರ್ತವ್ಯಗಳನ್ನು ಇಲ್ಲಿ ಹೇಳಿದ್ದಾರೆ. ಹಗಲನ್ನು ಐದು ಭಾಗಗಳನ್ನಾಗಿ ಮಾಡಿ ಒಂದೊಂದು ಕಾಲಭಾಗದಲ್ಲಿಯೂ ಮಾಡಬೇಕಾದ ಕೆಲಸಗಳನ್ನು ತಿಳಿಸಿದ್ದಾರೆ. ಈ ಐದು ಭಾಗಗಳು ಅಭಿಗಮನ, ಉಪಾದಾನ, ಇಜ್ಯಾ, ಸ್ವಾಧ್ಯಾಯ ಮತ್ತು ಯೋಗ ಎಂಬುವುಗಳಾಗಿವೆ. ಇವುಗಳಿಗೆ ಪಾಂಚಕಾಲಿಕ ಪ್ರಕ್ರಿಯಾ ಎಂದು ಹೆಸರು.

I ಅಭಿಗಮನ.

ಬ್ರಾಹ್ಮೇ ಮುಹೂರ್ತೇ ಚೋತ್ಥಾಯ ನಿದ್ರಾಂ ತ್ಯಕ್ತ್ವಾ ಪ್ರಸನ್ನಧೀಃ ।
ಹರಿರ್ಹರಿರ್ಹರಿರಿತಿ ವ್ಯಾಹರೇದ್ವೈಷ್ಣವಃ ಪುಮಾನ್ ॥

ಎಂದು ಹೇಳಿರುವಂತೆ ಬ್ರಾಹ್ಮಮುಹೂರ್ತದಲ್ಲಿ ಎದ್ದು ಹರಿನಾಮ ಸಂಕೀರ್ತನವನ್ನು ಮಾಡಬೇಕು.

'ಪ್ರಾತಃ ಸ್ಮರಾಮಿ ಭವಭೀತಿಮಹಾರ್ತಿಶಾಂತ್ಯೈ।
ನಾರಾಯಣಂ ಗರುಡವಾಹನಮಂಜನಾಭಂ ॥'

ಎಂದೂ 'ಗ್ರಾಹಗ್ರಸ್ತೇ ಗಜೇಂದ್ರೇ' ಎಂದೂ ಗಜೇಂದ್ರವರದನಾದ ಭಗವಂತನನ್ನು ಸ್ಮರಣೆ ಮಾಡಿಕೊಂಡು ಏಳಬೇಕು. ಭಗವಂತನ ಅಡಿದಾವರೆಗಳನ್ನು ಪೂಜಿಸದೆ ಅನೇಕ

acharya.org

ಜನ್ಮಗಳು ನಿಷ್ಫಲವಾದವಲ್ಲಾ ಎಂದು ನಿರ್ವೇದಗೊಂಡು ಭಗವಂತನ ಪೂಜಾದಿಗಳನು ಈಗಲಾದರೂ ನಡೆಸಲು ಸಂಕಲ್ಪಿಸಿ ಸಾತ್ತ್ವಿಕ ಧೈರ್ಯವನ್ನು ಅವಲಂಬಿಸಬೇಕು. ಸ್ನಾನಾದಿನಿತ್ಯಕೃತ್ಯಗಳನ್ನು ನೆರವೇರಿಸಿ ಪ್ರಾತಃಕಾಲದಲ್ಲಿ ಭಗವಂತನನ್ನು ಪೂಜಿಸಬೇಕು. ಇದು ಅಭಿಗಮನವೆನಿಸುವುದು.

II ಉಪಾದಾನ

ಪ್ರಾತಃಕಾಲದ ನಿತ್ಯಕೃತ್ಯಗಳನ್ನು ನಡೆಸಿದ ಮೇಲೆ ಭಗವದ್ಭಾಗವತರ ಆರಾಧನೆಗೆ ಬೇಕಾದ ದ್ರವ್ಯಗಳನ್ನು ಸಂಪಾದಿಸುವುದರಲ್ಲಿ ಉದ್ಯುಕ್ತರಾಗುವುದು ಉಪಾದಾನ. ಭಗವಂತನ ಪೂಜೆಗೆ ಬೇಕಾದ ತುಲಸಿ, ಪುಷ್ಪ, ಗಂಧ ಮೊದಲಾದ ಪೂಜಾದ್ರವ್ಯಗಳ ಸಂಪಾದನೆ ಮಾಡುವ ಕಾಲವಿದು.

III ಇಜ್ಯಾ

ಮಧ್ಯಾಹ್ನದ ವೇಳೆಯಲ್ಲಿ ಮಾಡುವ ಕರ್ತವ್ಯಗಳಿವು. ಮಾಧ್ಯಾಹ್ನಿಕ, ಭಗವದಾರಾಧನ, ವೈಶ್ವದೇವ, ಅತಿಥಿಸತ್ಕಾರ, ಭೋಜನ ಮುಂತಾದವು ಈ ಕಾಲದಲ್ಲಿ ನಡೆಯಬೇಕು.

IV ಸ್ವಾಧ್ಯಾಯ

ಭೋಜನಾನಂತರದ ಕಾಲದಲ್ಲಿ ಗ್ರಂಥಾವಲೋಕನ, ಸಚ್ಛಾಸ್ತ್ರಕಾಲಕ್ಷೇಪ, ಗ್ರಂಥರಚನೆ, ಶಿಷ್ಯೋಪದೇಶ ಮೊದಲಾದ ಕರ್ತವ್ಯಗಳನ್ನು ಮಾಡಬೇಕು. ಜ್ಞಾನಾರ್ಜನೆ ಮತ್ತು ಜ್ಞಾನೋಪದೇಶ ನಡೆಯಬೇಕಾದ ಕಾಲವಿದು.

V ಯೋಗ

ಹಗಲಿನ ಕೊನೆಯ ಭಾಗದಲ್ಲಿ ನಡೆಯಬೇಕಾದ ಕರ್ತವ್ಯಗಳು ಈ ಕಾಲಕ್ಕೆ ಸಂಬಂಧಿಸುತ್ತವೆ. ಸಾಯಂ ಸಂಧ್ಯಾವಂದನೆ, ಭಗವಂತನ ಸ್ತೋತ್ರಪಾರಾಯಣ, ಆಹಾರ ಸ್ವೀಕಾರ ಇವುಗಳನ್ನು ಮಾಡಿದ ಮೇಲೆ

> ಈದೃಶಃ ಪರಮಾತ್ಮಾಯಂ ಪ್ರತ್ಯಗಾತ್ಮಾ ತಥೇದೃಶಃ ।
> ತತ್ಸಂಬಂಧಾನುಸಂಧಾನಮಿತಿ ಯೋಗಃ ಪ್ರಕೀರ್ತಿತಃ ॥

ಎಂದು ಹೇಳಿದ ಹಾಗೆ ಪರಮಾತ್ಮಸ್ವರೂಪವನ್ನೂ ಸ್ವಸ್ವರೂಪವನ್ನೂ, ಸ್ವಸ್ವಾಮಿಭಾವ ಸಂಬಂಧವನ್ನೂ ಅನುಸಂಧಾನಮಾಡುವುದು ಯೋಗವೆನಿಸುವುದು.

ಈ ಪಾಂಚಕಾಲಿಕ ಪ್ರಕ್ರಿಯೆಯಲ್ಲಿ ನಿರಂತರವಾದ ಭಗವದನುಸಂಧಾನಕ್ಕೆ ಅವಕಾಶಮಾಡಿಕೊಡಲಾಗಿದೆ. ಇದನ್ನನುಸರಿಸುವವರು ತನ್ನ ಸಮಸ್ತ ವ್ಯಾಪಾರಗಳೂ ಆ ಪರಮಾತ್ಮನ ಸೇವೆಗೆ ಮೀಸಲಾಗಿವೆ ಎಂಬುದನ್ನು ಮನಗಾಣುತ್ತಾರೆ.

acharya.org

'ಕರ್ಮಣಾ ಮನಸಾ ವಾಚಾ ಶಿರಸಾ ವಾ ಕಥಂಚನ |
ತ್ವಾಂ ವಿನಾ ನಾನ್ಯಮುದ್ದಿಶ್ಯ ಕರಿಷ್ಯೇ ಕಿಂಚಿದಪ್ಯಹಮ್ ॥

ಎಂದು ಹೇಳಿರುವಂತೆ ಭಗವತ್ಪ್ರೀತಿಯನ್ನೇ ಪ್ರಯೋಜನವಾಗಿ ಉಳ್ಳ ಕೈಂಕರ್ಯದಲ್ಲಿ ಆಚಾರ್ಯರುಗಳ ಉಪದೇಶಕ್ಕನುಸಾರವಾಗಿ ಪ್ರಪನ್ನನು ತೊಡಗುತ್ತಾನೆ. ಭಗವಂತನನ್ನು ಬಿಟ್ಟು ಮತ್ತೊಬ್ಬನನ್ನು ಇಂಥ ಅನನ್ಯಭಕ್ತ ಸೇವಿಸುವುದಿಲ್ಲ. ನಿರಂತರವೂ ಭಗವಚ್ಚಿಂತನೆಯಲ್ಲಿಯೇ ತನ್ನ ಬಾಳನ್ನು ಸಾರ್ಥಕಗೊಳಿಸುತ್ತಾನೆ.

ಶ್ರೀವೈಷ್ಣವನು ಪಂಚಸಂಸ್ಕಾರವನ್ನು ಹೊಂದಿರಬೇಕೆಂದು ವಿಧಿಸಿದೆ. ಇವು—

'ತಾಪೋ ಪುಂಡ್ರಸ್ತಥಾ ನಾಮ ಮಂತ್ರೋ ಯಾಗಶ್ಚ ಪಂಚಮಃ' ಎಂಬುವಾಗಿವೆ. ಉಪನಯನಾದಿಗಳಿಂದ ಬ್ರಾಹ್ಮಣ್ಯವು ತ್ರೈವರ್ಣಿಕರಿಗೆ ಸಿದ್ಧಿಸುತ್ತದೆ. ವೈಷ್ಣವತ್ವ ಸಿದ್ಧಿಗಾಗಿ ಪಂಚ ಸಂಸ್ಕಾರಗಳು ಹೇಳಲ್ಪಟ್ಟಿವೆ. ಶಾಸ್ತ್ರಗಳಲ್ಲಿ ವಿಧಿಸಿರುವಂತೆ ಆಚಾರ್ಯರನ್ನು ಆಶ್ರಯಿಸಿ ಅವರ ಮುಖಾಂತರ ಸುದರ್ಶನ ಪಾಂಚಜನ್ಯಾದಿಲಾಂಛನವನ್ನು ಧರಿಸಬೇಕು. ಬಲತೋಳಿನಲ್ಲಿ ಸುದರ್ಶನ ಮುದ್ರೆಯನ್ನೂ ಎಡತೋಳಿನಲ್ಲಿ ಪಾಂಚಜನ್ಯ ಮುದ್ರೆಯನ್ನೂ ಧರಿಸಬೇಕು.

ಶ್ರುತ್ಯಾ ಸ್ಮೃತ್ಯಾ ಪುರಾಣೇನ ಸೇತಿಹಾಸೇನ ಗಮ್ಯತೇ ।
ಪಂಚರಾತ್ರೇಣ ವಿಪ್ರಾಣಾಂ ತಪ್ತ ಚಕ್ರಾದಿಧಾರಣಾ ॥
ದಕ್ಷಿಣೇ ತು ಭುಜೇ ವಿಪ್ರೋ ಬಿಭೃಯಾದ್ವೈ ಸುದರ್ಶನಂ |
ಸವ್ಯೇ ತು ಶಂಖಂ ಬಿಭೃಯಾತ್ ಇತಿ ಬ್ರಹ್ಮವಿದೋ ವಿದುಃ ॥'

ಎಂದು ಈ ಅಂಶವನ್ನು ತಿಳಿಸಿದೆ. ತಪ್ತಾಂಕನ, ಮುದ್ರಧಾರಣ ಎಂದು ಇದಕ್ಕೆ ಹೆಸರು. ಇದರಿಂದ ಆ ಚೇತನನು ವೈಷ್ಣವರೆಂದು ಸೂಚಿತವಾಗುತ್ತದೆ. ತ್ರೈವರ್ಣಿಕರಿಗೇ ಅಲ್ಲದೆ ಎಲ್ಲ ವರ್ಣದವರಿಗೂ ಈ ಮುದ್ರಧಾರಣಕ್ಕೆ ಅವಕಾಶವಿದೆ. ಹರಿಜನರಿಗೂ ಮುದ್ರಧಾರಣೆಮಾಡಿ ಅವರನ್ನು ವೈಷ್ಣವಕೋಟಿಗೆ ಸೇರಿಸುವ ಸಂಪ್ರದಾಯವಿದೆ. ಜಾತಿ ಮತ ಕುಲಗಳ ಭೇದವಿಲ್ಲದೆ ಎಲ್ಲರಿಗೂ ಈ ವೈಷ್ಣವದೀಕ್ಷೆ ಕೊಡುವ ಅವಕಾಶವು ಈ ಧರ್ಮದಲ್ಲಿದೆ.

ಪುಂಡ್ರ

ವೈಷ್ಣವತ್ವವನ್ನು ಸೂಚಿಸುವ ಚಿಹ್ನೆ ಇದು. ಊರ್ಧ್ವಪುಂಡ್ರಗಳನ್ನು ಧರಿಸಿಯೇ ವಿಹಿತವಾದ ಅನುಷ್ಠಾನಗಳನ್ನು ಮಾಡಬೇಕು. ಭಗವದಾರಾಧನೆ, ನಿತ್ಯನೈಮಿತ್ತಿಕ ಕರ್ಮಾನುಷ್ಠಾನ, ವೇದಾಧ್ಯಯನ, ಹೋಮ, ಅರ್ಚನ, ಭೋಜನ, ಮಂಗಳಕಾರ್ಯಗಳು ಮೊದಲಾದವುಗಳನ್ನು ಮಾಡುವಾಗ ಊರ್ಧ್ವಪುಂಡ್ರಗಳನ್ನು ಧರಿಸಿರಬೇಕು. ಇದನ್ನು ಧರಿಸದೆ ಮಾಡಿದ ಕರ್ಮ ಬೂದಿಯಲ್ಲಿ ಹೋಮಮಾಡಿದಂತೆ ನಿಷ್ಫಲವಾಗುವುದು. ಊರ್ಧ್ವಪುಂಡ್ರಗಳನ್ನು ಧರಿಸಿಕೊಂಡು ಆಯಾ ದೇವತೆಗಳನ್ನು ಆವಾಹನೆಮಾಡಿ

acharya.org

ಕೊಳ್ಳಬೇಕು. ಊರ್ಧ್ವಪುಂಡ್ರಧಾರಣೆ ಸರ್ವವರ್ಣದವರಿಗೂ ಸಮಾನವಾಗಿ ಅನ್ವಯಿಸುತ್ತದೆ.

'ಧೃತೋರ್ಧ್ವಪುಂಡ್ರಃ ಪರಮೇಶಿತಾರಂ ನಾರಾಯಣಂ ಸಾಂಖ್ಯಯೋಗಾಧಿಗಮ್ಯಂ ।
ಜ್ಞಾತ್ವಾ ವಿಮುಚ್ಯೇತ ನರಸ್ಸಮಸ್ತೈಃ ಸಂಸಾರಪಾಶೈರಿಹ ಚೈವ ವಿಷ್ಣುಂ ॥
ಸ್ವಾಧ್ಯಾಯೇ ಭೋಜನೇ ಚೈವ ಹೋಮೇ ಮಂಗಳಕರ್ಮಣಿ ।
ಊರ್ಧ್ವಪುಂಡ್ರಧರೋ ನಿತ್ಯಂ ರಕ್ಷಸಾಂ ಚಾಪನುತ್ತಯೇ ॥
ಯೋ ವಿನಾ ಚೋರ್ಧ್ವಪುಂಡ್ರೇಣ ಯತ್ಕಿಂಚಿತ್ಕರ್ಮ ವೈದಿಕಂ ।
ನಿಷ್ಫಲಂ ತಸ್ಯ ತತ್ಕರ್ಮ ಭಸ್ಮನೀವ ಹುತಂ ಹವಿಃ ॥'

ಎಂದು ಈ ಅಂಶವನ್ನು ನಿರೂಪಿಸಲಾಗಿದೆ.

ನಾಮ.

ನಾಮವೆಂಬುದು ಹೆಸರಿಗನ್ವಯಿಸುತ್ತದೆ. ಹೆಸರನ್ನಿಟ್ಟುಕೊಳ್ಳುವಾಗ ಭಗವಂತನಿಗೆ ದಾಸರೆಂಬುವುದನ್ನು ಸೂಚಿಸುವಂತಹ ಹೆಸರೊಂದನ್ನು ಇಟ್ಟುಕೊಳ್ಳಬೇಕು. ಹರಿದಾಸ, ವಿಷ್ಣುದಾಸ ಮೊದಲಾದ ಹೆಸರನ್ನಿಟ್ಟುಕೊಳ್ಳಬೇಕು. ಭಗವಂತನಿಗೆ ಶೇಷಭೂತರಾದವರೆಂಬುದನ್ನು ಹೆಸರಿನಲ್ಲಿಯೂ ಸೂಚಿಸುವಂತಿರಬೇಕು.

ಮಂತ್ರ.

ಆಚಾರ್ಯರುಗಳಿಂದ ಮಂತ್ರೋಪದೇಶವನ್ನು ಪಡೆದುಕೊಂಡು ನಿರಂತರವಾಗಿ ಅದರ ಅನುಸಂಧಾನವನ್ನು ಮಾಡಬೇಕು. ಮೂಲಮಂತ್ರ, ದ್ವಯಮಂತ್ರ ಮತ್ತು ಚರಮಶ್ಲೋಕ ಮುಂತಾದ ಮಹಾಮಂತ್ರಗಳನ್ನು ಪ್ರತಿದಿನವೂ ಜಪಿಸಬೇಕು. ಈ ಮಂತ್ರೋಪದೇಶಕ್ಕೆ ಸ್ತ್ರೀಶೂದ್ರಾದಿಗಳೆಲ್ಲರೂ ಅಧಿಕಾರಿಗಳೇ ಆಗಿದ್ದಾರೆ. ತ್ರೈವರ್ಣಿಕರಿಗೆ ಮಂತ್ರೋಪದೇಶಮಾಡುವಾಗ ಪ್ರಣವದೊಡನೆ ಮಾಡಿದರೆ ಸ್ತ್ರೀಯರಿಗೂ ಶೂದ್ರಾದಿಗಳಿಗೂ ಪ್ರಣವರಹಿತವಾಗಿ ಮಾಡಬೇಕೆಂದು

'ಅಷ್ಟಾಕ್ಷರಜಪಃ ಸ್ತ್ರೀಣಾಂ ಪ್ರಕೃತ್ಯೈವ ವಿಧೀಯತೇ ।' ಎಂದೂ 'ಸ್ತ್ರೀಣಾಂ ತು ಶೂದ್ರಜಾತೀನಾಂ ಮಂತ್ರಮಾತ್ರೋಕ್ತಿರಿಷ್ಯತೇ ' ಎಂದೂ 'ನಮೋ ನಾರಾಯಣೇತ್ಯುಕ್ತ್ವಾ ಶ್ವಪಾಕಃ ಪುನರಾಗಮತ್' ಎಂದೂ ವಿಧಿಸಲಾಗಿದೆ. ಉಪದಿಷ್ಟವಾದ ಈ ಮಹಾಮಂತ್ರಗಳ ಅನುಸಂಧಾನ ಸರ್ವರಿಗೂ ಅವಶ್ಯಕರ್ತವ್ಯವಾಗಿದೆ.

ಯಾಗ.

ಭಗವಂತನ ಪೂಜೆಯು ಯಾಗವೆನಿಸುವುದು. ವೈಷ್ಣವನಿಗೆ ಇದಕ್ಕಿಂತ ಶ್ರೇಷ್ಠವಾದುದು ಮತ್ತಾವುದೂ ಇಲ್ಲ.

acharya.org

'ನ ವಿಷ್ಣೋರರ್ಚನಾತ್ಪುಣ್ಯಂ ವಿದ್ಯತೇ ಕರ್ಮ ವೈದಿಕಂ ।
ಆರಾಧನಾನಾಂ ಸರ್ವೇಷಾಂ ವಿಷ್ಣೋರಾರಾಧನಂ ಪರಂ ॥'

ಎಂದು ಹೇಳಿರುವಂತೆ ಭಗವದರ್ಚನೆಯಲ್ಲಿ ವೈಷ್ಣವನು ನಿರತನಾಗಿರಬೇಕೆಂದು ಹೇಳಿದೆ. ಯಾವ ಕುಲದವರಾದರೂ ಸರಿ, ಎಲ್ಲಿ ವಾಸವಾಗಿದ್ದರೂ ಸರಿ, ಯಾವ ವರ್ಣದವರಾದರೂ ಸರಿ ಎಲ್ಲರೂ ಭಗವಂತನನ್ನು ಆರಾಧಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಹಾಗೆ ಭಗವತ್ಪರವಾದ ಜೀವನವನ್ನು ನಡೆಸಬೇಕು.

'ಯತ್ರ ತತ್ರ ಕುಲೇ ವಾಸೋ ಯೇಷು ಕೇಷು ಭವೋಸ್ತು ಮೇ ।
ತವ ದಾಸ್ಯೈಕಭೋಗೇ ಸ್ಯಾತ್ಸದಾ ಸರ್ವತ್ರ ಮೇ ರತಿಃ ॥'

ಎಂದು ಈ ಅಂಶವನ್ನೇ ಹಿರಿಯರು ಬೇಡಿದ್ದಾರೆ. ಈ ಪೂಜೆ ಕೇವಲ ಭಗವತ್ಪ್ರೀತ್ಯರ್ಥವಾಗಬೇಕು. ಮುಕ್ತರು ಹೇಗೆ ಭಗವದನುಭವದ ಪರಮಾನಂದದಲ್ಲಿ ಮಗ್ನರಾಗಿ ಭಗವಂತನ ನಿತ್ಯ ಕೈಂಕರ್ಯವನ್ನು ನಡೆಸುವರೋ ಹಾಗೆ ಇಲ್ಲಿಯೂ ಭಗವಂತನ ಅರ್ಚನವನ್ನು ಸ್ವಯಂ ಪ್ರಯೋಜನಾರ್ಥವಾಗಿ ನಡೆಸುವುದು ಗುರಿಯಾಗಬೇಕು.

ಹೀಗೆ ವೈಷ್ಣವನೆಂಬುವನು ತನ್ನ ತನ್ನ ವರ್ಣಾಶ್ರಮಾದಿಗಳಿಗೆ ಅನ್ವಯಿಸುವ ನಿಯಮಗಳ ಜೊತೆಗೆ ಭಗವತ್ಕೈಂಕರ್ಯವನ್ನೂ ನಡೆಸಿಕೊಂಡು ಬರಬೇಕು. ಭಗವಂತನಿಗೆ ನಿವೇದನ ಮಾಡಿದ ಸಾತ್ತ್ವಿಕಾಹಾರವನ್ನು ಸ್ವೀಕರಿಸಬೇಕು.

ತಾನು ಉಪಯೋಗಿಸುವ ಆಹಾರ ಶುದ್ಧವಾದುದಾಗಿರಬೇಕು; ರಸ್ಯವೂ ಹೃದ್ಯವೂ ಆಗಿ ಜಾತ್ಯಾಶ್ರಯನಿಮಿತ್ತ ದೋಷಗಳಿಲ್ಲದಿರಬೇಕು.

ಅರ್ಥ ಪಂಚಕ.

ಶ್ರೀವೈಷ್ಣವರು ಪಡೆಯಬೇಕಾದ ತಿಳಿವಳಿಕೆಯಲ್ಲಿ ಇದು ಮುಖ್ಯವಾದುದು.

ಪ್ರಾಪ್ಯಸ್ಯ ಬ್ರಹ್ಮಣೋ ರೂಪಂ ಪ್ರಾಪ್ತುಶ್ಚ ಪ್ರತ್ಯಗಾತ್ಮನಃ ।
ಪ್ರಾಪ್ತ್ಯುಪಾಯಂ ಫಲಂ ಚೈವ ತಥಾ ಪ್ರಾಪ್ತಿವಿರೋಧಿ ಚ ।
ವದಂತಿ ಸಕಲಾ ವೇದಾಃ ಸೇತಿಹಾಸಪುರಾಣಕಾಃ॥

ಎಂದು ಇದನ್ನು ತಿಳಿಸಿದೆ. ನಾವು ಪಡೆಯಬೇಕಾದ ಪರವಸ್ತುವಾದ ಬ್ರಹ್ಮಸ್ವರೂಪವನ್ನೂ, ಆ ಪರಬ್ರಹ್ಮವಸ್ತುವನ್ನು ಪಡೆಯುವವರಾದ ನಮ್ಮ ಸ್ವರೂಪವನ್ನೂ ಈ ಪ್ರಾಪ್ತಿ ಲಭಿಸುವ ಉಪಾಯಸ್ವರೂಪವನ್ನೂ ಆ ಪರಮಪುರುಷನನ್ನು ಪಡೆದರೆ ಬರುವ ಫಲಸ್ವರೂಪವನ್ನೂ, ಆ ಪ್ರಾಪ್ತಿಗೆ ಅಡ್ಡಿಯಾಗಿರುವ ವಿರೋಧಿ ಸ್ವರೂಪವನ್ನೂ ನಾವು ಅರಿಯಬೇಕು. ಈ ಅರ್ಥಪಂಚಕ ಜ್ಞಾನವನ್ನು ಗುರುಗಳಿಂದ ಪಡೆದುಕೊಳ್ಳಬೇಕು. ಇದರೊಡನೆ ಸೇರಿದಂತೆ ಈ ಸಿದ್ಧಾಂತದ ಪ್ರಧಾನ ಪ್ರತಿತಂತ್ರವಾದ ಶೇಷತ್ವಜ್ಞಾನವನ್ನೂ ಹೊಂದಿರಬೇಕು.

acharya.org

ಹೀಗೆ ಶ್ರೀವೈಷ್ಣವನು ತನ್ನ ಬಾಳನ್ನು ಭಗವಂತನಿಗೇ ಸಮರ್ಪಿಸಿ, ಅವನ ಅನುಗ್ರಹವನ್ನೇ ಬಯಸುವವನಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುತ್ತಾನೆ. ಖ್ಯಾತಿಯನ್ನಾಗಲೀ, ಲಾಭ ಪೂಜೆಗಳನ್ನಾಗಲೀ ಬಯಸದ ಇಂಥ ಧಾರ್ಮಿಕ ಭಗವತ್ಸೇವೆಯನ್ನೇ ತನ್ನ ಸಮಸ್ತ ವ್ಯಾಪಾರಗಳಿಂದಲೂ ಮಾಡುವವನಾಗಿದ್ದಾನೆ.

acharya.org

೪

ವಿಶಿಷ್ಟಾದ್ವೈತವೂ ಇತರ ದರ್ಶನಗಳೂ

ಇದುವರೆಗೆ ಈ ದರ್ಶನದ ಪ್ರಮೇಯಾಂಶಗಳನ್ನು ಸಂಗ್ರಹವಾಗಿ ನಿರೂಪಿಸಲಾಯಿತು. ವೇದಗಳಿಗೆ ಪರಮಪ್ರಾಧಾನ್ಯ ಕೊಡುವ ಈ ದರ್ಶನ ವೇದದ ಉಪದೇಶಕ್ಕನುಗುಣವಾಗಿರುವ ಇತಿಹಾಸ ಪುರಾಣಗಳಿಗೂ ಪಾಂಚರಾತ್ರ ದ್ರಾವಿಡಪ್ರಬಂಧಗಳಿಗೂ ಪ್ರಾಧಾನ್ಯವನ್ನಿತ್ತಿದೆ. ವೇದಾಂತಸೂತ್ರಗಳು ವೇದಪ್ರತಿಪಾದ್ಯವಾದ ಸಿದ್ಧಾಂತವನ್ನು ಸ್ಥಾಪಿಸುತ್ತವೆ. ಸಾಂಖ್ಯ, ಯೋಗ, ಪಂಚರಾತ್ರ, ವೇದ, ಪಾಶುಪತ ಮೊದಲಾದವು ಒಂದೇ ತತ್ತ್ವವನ್ನು ಹೇಳುವುವೋ ಬೇರೆ ತತ್ತ್ವವನ್ನು ಹೇಳುವುವೋ ಎಂಬ ಪ್ರಶ್ನೆಗೆ ಉತ್ತರವಾಗಿ,

'ಜ್ಞಾನಾನ್ಯೇತಾನಿ ರಾಜರ್ಷೇ ವಿದ್ಧಿ ನಾನಾಮತಾನಿ ವೈ' ಎಂದು ತಿಳಿಸಿ ಸಾಂಖ್ಯ ಯೋಗ ಪಾಶುಪತಗಳು ಕಪಿಲ ಹಿರಣ್ಯಗರ್ಭ ಪಶುಪತಿಗಳಿಂದ ಉಪದಿಷ್ಟವಾದವೆಂದೂ ಅದರಿಂದಲೇ ಅವು ಪೌರುಷೇಯವೆಂದೂ ತಿಳಿಸಲಾಗಿದೆ. ವೇದಗಳು ಅಪೌರುಷೇಯವಾದ ಕಾರಣ ಯಾವ ಬಗೆಯ ದೋಷಗಳಿಗೂ ಆಸ್ಪದವಿಲ್ಲವಾಗಿದೆ. ಈ ಶ್ರುತಿಗಳು ನಾರಾಯಣನೇ ಪರದೈವವೆಂದು ಸಾರುತ್ತಿವೆ.

ಸರ್ವೇಷು ಚ ನೃಪಶ್ರೇಷ್ಠ ಜ್ಞಾನೇಷ್ವೇತೇಷು ದೃಶ್ಯತೇ ।
ಯಥಾಗಮಂ ಯಥಾನ್ಯಾಯಂ ನಿಷ್ಠಾ ನಾರಾಯಣಃ ಪ್ರಭುಃ ॥

ಎಂದು ಈ ಅಂಶವನ್ನು ಸ್ಥಾಪಿಸಿದೆ. 'ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ನಾರಾಯಣಃ ಸ್ವಯಮ್' ಎಂದು ಹೇಳಿರುವಂತೆ ಭಗವಂತನೇ ಪಂಚರಾತ್ರವನ್ನು ಸಮಗ್ರವಾಗಿ ಉಪದೇಶಿಸಿದುದರಿಂದ ಅದು ಸಮಗ್ರವಾಗಿ ಪ್ರಮಾಣವೆಂದು ಅಂಗೀಕರಿಸಲಾಗಿದೆ. ಸಾಂಖ್ಯರು ಹೇಳುವ ಇಪ್ಪತ್ತೈದು ತತ್ತ್ವಗಳು, ಯೋಗದರ್ಶನ ಪ್ರತಿಪಾದಿಸುವ ಯಮ ನಿಯಮಾದಿಗಳನ್ನುಳ್ಳ ಅಷ್ಟಾಂಗಯೋಗ, ವೇದದಲ್ಲಿ ಹೇಳಿರುವ ಕರ್ಮಸ್ವರೂಪ ಇವುಗಳನ್ನೆಲ್ಲಾ ಅಂಗೀಕರಿಸಿ ತತ್ತ್ವಗಳೆಲ್ಲಾ ಬ್ರಹ್ಮಾತ್ಮಕವಾದವೆಂದೂ, ಯೋಗ ಬ್ರಹ್ಮೋಪಾಸನೆಗೆ ಉಪಕಾರಕವೆಂದೂ, ಕರ್ಮಗಳೆಲ್ಲಾ ಭಗವದಾರಾಧನರೂಪವಾದವೆಂದೂ ಪ್ರತಿಪಾದಿಸಲಾಗಿದೆ.

ಈ ದರ್ಶನ ಇತರ ದರ್ಶನಗಳನ್ನೆಲ್ಲಾ ಪೂರ್ಣವಾಗಿ ತಳ್ಳಿಹಾಕುವುದಿಲ್ಲ. ಆಯಾ ದರ್ಶನದಲ್ಲಿ ಯಾವ ಯಾವ ಅಂಶ ವೇದವಿರುದ್ಧವಾಗಿದೆಯೋ, ನ್ಯಾಯವಿರುದ್ಧವಾಗಿದೆಯೋ ಅದನ್ನು ಮಾತ್ರ ಬಹಿಷ್ಕರಿಸುತ್ತದೆ. ಸಾಂಖ್ಯರು ಹೇಳುವ ನಿರೀಶ್ವರವಾದವನ್ನು ನಿರಾಕರಿಸುತ್ತದೆಯೇ ವಿನಾ ಸಾಂಖ್ಯಸ್ವರೂಪವನ್ನು ನಿರಾಕರಿಸುವುದಿಲ್ಲ.

acharya.org

ಈಶ್ವರ ಕೇವಲ ನಿಮಿತ್ತಕಾರಣನೆಂಬ ಯೋಗದರ್ಶನವಾದವನ್ನೂ ಪಾಶುಪತದರ್ಶನ ದಲ್ಲಿನ ಪರತತ್ತ್ವದ ವಿಪರೀತ ಕಲ್ಪನೆಯನ್ನೂ ವೇದಬಹಿಷ್ಕೃತವಾದ ಆಚಾರವನ್ನೂ ನಿರಾಕರಿಸುತ್ತದೆ. ಯೋಗಸ್ವರೂಪವನ್ನೂ ಪಶುಪತಿಸ್ವರೂಪವನ್ನೂ ಒಟ್ಟಿಗೆ ತಳ್ಳಿ ಹಾಕುವುದಿಲ್ಲ. ಆದುದರಿಂದಲೇ

> ಸಾಂಖ್ಯಂ ಯೋಗಃ ಪಾಂಚರಾತ್ರಂ ವೇದಾಃ ಪಾಶುಪತಂ ತಥಾ ।
> ಆತ್ಮಪ್ರಮಾಣಾನ್ಯೇತಾನಿ ನ ಹಂತವ್ಯಾನಿ ಹೇತುಭಿಃ ॥

ಎಂದು ಉಪದೇಶಿಸಿದ್ದಾರೆ. ಅವೈದಿಕವಾದ ದರ್ಶನಗಳಲ್ಲಿಯೂ ವೇದವಿರುದ್ಧವಾದ ಅಂಶ ಬಹಿಷ್ಕಾರ್ಯವೇ ವಿನಾ ಸರ್ವವೂ ಬಹಿಷ್ಕಾರ್ಯವಲ್ಲ. 'ಯಥಾಗಮಂ ಯಥಾ-ನ್ಯಾಯಂ' ಎಂಬ ಮಾತು ಈ ಅಂಶವನ್ನು ಸಮರ್ಥಿಸುತ್ತದೆ. ಹೀಗೆ ಈ ದರ್ಶನ ಇತರ ದರ್ಶನಗಳಲ್ಲಿ ಹೇಳಿರುವ ತತ್ತ್ವಸ್ವರೂಪವನ್ನು ವೇದದ ಒರೆಗಲ್ಲಿನ ಮೇಲೆ, ನ್ಯಾಯದ ಒರೆಗಲ್ಲಿನ ಮೇಲೆ ಒರೆಹಚ್ಚಿ ಪರೀಕ್ಷಿಸಿದೆ.

ವಿಶಿಷ್ಟಾದ್ವೈತದರ್ಶನಕ್ಕೂ ಇತರ ದರ್ಶನಗಳಿಗೂ ಇರುವ ಸಾಮ್ಯವೈಷಮ್ಯ ಗಳನ್ನು ಇಲ್ಲಿ ಸಂಗ್ರಹವಾಗಿ ಗುರುತಿಸುವ ಪ್ರಯತ್ನ ಮಾಡಿದೆ. ಇತರ ದರ್ಶನಗಳ ದೃಷ್ಟಿ ಯಿಂದ ಈ ದರ್ಶನದ ವೈಲಕ್ಷಣ್ಯವನ್ನೂ ಇದರಿಂದ ತಿಳಿಯಬಹುದು.

ವಿಶಿಷ್ಟಾದ್ವೈತವೂ ಚಾರ್ವಾಕವೂ

ಚಾರ್ವಾಕದರ್ಶನವನ್ನು ಬಹಳ ಬುದ್ಧಿವಂತರಾದ ಬೃಹಸ್ಪತಿಗಳೇ ಉಪ ದೇಶಿಸಿದರಂತೆ. ಚಾರುವಾದ ವಾಕ್ ಎಂದರೆ ಮನಮೋಹಕವಾದ ಮಾತುಗಳಿರುವ ವಾದ ಇದು. ಇವರ ಅಭಿಪ್ರಾಯದಲ್ಲಿ ನಿತ್ಯನಾದ ಆತ್ಮವೆಂಬುದೇ ಇಲ್ಲ. ಪರಲೋಕ, ಪುನರ್ಜನ್ಮ, ಮೋಕ್ಷ, ಮೊದಲಾದವು ಯಾವುವೂ ಇಲ್ಲ. ಪೃಥಿವೀ, ಅಪ್ಪು, ತೇಜಸ್ಸು ಮತ್ತು ವಾಯು ಇವು ಸೇರಿದಾಗ ಚೈತನ್ಯ ಅಥವಾ ಜ್ಞಾನ ಉಂಟಾಗುವುದೆಂದು ಇವರು ಹೇಳುವರು. ಧರ್ಮವಾಗಲೀ ಅಧರ್ಮವಾಗಲೀ ಇಲ್ಲಿಲ್ಲ. ಆದುದರಿಂದ ಸ್ವಯತ್ನಸಿದ್ಧ ವಾಗಿ ಅಥವಾ ಅಯತ್ನಸಿದ್ಧವಾಗಿ ಬರುವ ದೃಷ್ಟಭೋಗಗಳನ್ನು ಅನುಭವಿಸುವುದೇ ಪುರುಷಾರ್ಥ. ಭಸ್ಮೀಭೂತವಾದ ದೇಹ ಮತ್ತೆಲ್ಲಿ ಬರುತ್ತದೆ ? ಆದುದರಿಂದ 'ಋಣಂ ಕೃತ್ವಾ ಘೃತಂ ಪಿಬ' ಎಂದು ಉಪದೇಶಿಸುವುದಿದು.

ಈ ದರ್ಶನಕ್ಕೂ ವಿಶಿಷ್ಟಾದ್ವೈತಕ್ಕೂ ಬಹಳ ವ್ಯತ್ಯಾಸವಿದೆ. ವೇದವನ್ನು ಒಪ್ಪದೆ ಇರುವ ಈ ದರ್ಶನವನ್ನು ವಿಶಿಷ್ಟಾದ್ವೈತ ಸರ್ವಶಕ್ತಿಯಿಂದಲೂ ನಿರಾಕರಿಸುತ್ತದೆ. ಪ್ರತ್ಯಕ್ಷಮಾತ್ರವೇ ಪ್ರಮಾಣವೆಂದು ಚಾರ್ವಾಕ ಹೇಳಿದರೆ ಪ್ರತ್ಯಕ್ಷ, ಅನುಮಾನ ಮತ್ತು ಶಬ್ದಗಳು ಪ್ರಮಾಣವೆಂದು ವಿಶಿಷ್ಟಾದ್ವೈತ ಹೇಳುತ್ತದೆ. ಲೋಕದಲ್ಲಿಯೂ ಒಬ್ಬರು ಹೇಳಿದುದನ್ನು ಇನ್ನೊಬ್ಬರು ನಂಬಿ ನಡೆಯುವುದನ್ನೂ ಸುಖ ಹೊಂದುವುದನ್ನೂ

acharya.org

ನಾವು ನೋಡಿದ್ದೇವೆ. ಹೀಗೆಯೇ ಪಾರಲೌಕಿಕ ಶಾಸ್ತ್ರದಲ್ಲಿಯೂ ನಂಬಿಕೆ ಇಡ ಬೇಕೆಂಬುದು ವಿಶಿಷ್ಟಾದ್ವೈತದ ನಿಶ್ಚಯ. ಆತ್ಮನೇ ಇಲ್ಲವೆಂಬ ವಾದ ಚಾರ್ವಾಕನದು. ಇದು ವಿಶಿಷ್ಟಾದ್ವೈತಕ್ಕೆ ನೇರ ವಿರೋಧ. ಶರೀರಕ್ಕಿಂತಲೂ ಇಂದ್ರಿಯಗಳಿಗಿಂತಲೂ ಮನಸ್ಸು ಪ್ರಾಣ ಬುದ್ಧಿಗಳಿಗಿಂತಲೂ ವಿಲಕ್ಷಣವಾದ ನಿತ್ಯವಾದ ಜ್ಞಾನಸ್ವರೂಪವಾದ ಪದಾರ್ಥವೊಂದಿದೆಯೆಂದೂ ಅದೇ ಆತ್ಮನೆಂದೂ ವಿಶಿಷ್ಟಾದ್ವೈತದ ನಿಶ್ಚಯ. 'ಇದು ನನ್ನ ಕಣ್ಣು' 'ಇದು ನನ್ನ ಶರೀರ' ಮೊದಲಾದ ವ್ಯವಹಾರಗಳಲ್ಲಿ ಇದು ಸ್ಪಷ್ಟವಾಗಿದೆ. 'ಇದು' ಎಂಬ ವ್ಯವಹಾರಕ್ಕೆ ವಿಷಯವಾಗಿರುವ ಪದಾರ್ಥಕ್ಕಿಂತ 'ನಾನು' ಎಂಬ ವ್ಯವಹಾರ ವಿರುವ ಆತ್ಮನು ಬೇರೆ ಎಂಬುದು ಅನುಭವಸಿದ್ಧ. ಇಂದ್ರಿಯಗಳನ್ನೂ ಶರೀರವನ್ನೂ ಉಪಯೋಗಿಸಿಕೊಂಡು ವ್ಯವಹರಿಸುವವನು ಆತ್ಮನು. ಇಂಥ ಸ್ಥಿರನಾದ ಆತ್ಮನನ್ನು ಒಪ್ಪದೆ ಹೋದರೆ ಸ್ಮರಣೆ, ವಾಸನಾಸಂಕ್ರಮ ಮೊದಲಾದವನ್ನು ವಿವರಿಸುವುದಕ್ಕಾಗು ವುದಿಲ್ಲ. ಶರೀರಕ್ಕಿಂತ ಬೇರೆಯಾದ ಆತ್ಮರುಗಳು ಅನಂತರಾಗಿ ತಮ್ಮ ತಮ್ಮ ಪುಣ್ಯ ಪಾಪಕ್ಕನುಸಾರವಾಗಿ ಸುಖದುಃಖಗಳನ್ನು ಬೇರೆ ಬೇರೆಯಾಗಿ ಅನುಭವಿಸುತ್ತಿದ್ದಾರೆ. ಆದುದರಿಂದ ಶರೀರನಿವೃತ್ತಿಯಿಂದ ಮೋಕ್ಷವೆಂದು ಹೇಳುವುದಕ್ಕಾಗುವುದಿಲ್ಲ.

ಚಾರ್ವಾಕರು ಈ ಲೋಕವನ್ನೂ ಲೋಕಾನುಭವವನ್ನೂ ಒಪ್ಪುತ್ತಾರೆ. ಅವರು ಜಗತ್ಸತ್ಯವಾದಿಗಳು ಆದರೆ ನೈರಾತ್ಮ್ಯವಾದಿಗಳು. ವ್ಯವಹಾರದಲ್ಲಿ ಅನೇಕತ್ವವನ್ನು ಅವರೂ ಒಪ್ಪಬೇಕು. ಆದರೆ ಈ ಸುಖದುಃಖಗಳೆಲ್ಲಾ ಯಾರಿಗೆ ಎಂಬುದೇ ಇಲ್ಲಿ ಏಳುವ ಪ್ರಶ್ನೆ. ಸ್ಥಿರನಾದ ಆತ್ಮನೇ ಇಲ್ಲದ ಮೇಲೆ ಪುರುಷಾರ್ಥವೆಂಬುದೂ ಇರಲಾರದು. ಇಷ್ಟಾ ದರೂ ಇವರು ಸಮಾಜಜೀವನಕ್ಕೂ ರಾಜಾಜ್ಞೆಗೂ ಪ್ರಾಧಾನ್ಯಕೊಡುತ್ತಾರೆ. ಲೋಕದ ವ್ಯವಹಾರ ಸುಗಮವಾಗಿ ನಡೆದುಕೊಂಡು ಹೋಗಬೇಕು. ಆದಕ್ಕೆ ರಾಗದ್ವೇಷಾದಿ ಗಳನ್ನು ಬಿಟ್ಟು ನಡೆಯಬೇಕು. ಇವು ಹೋಗಬೇಕಾದರೆ ಅಹಂತೆ ಮತ್ತು ಮಮತೆ ಹೋಗಬೇಕು. ಈ ಗುರಿಯನ್ನು ಸಾಧಿಸುವುದರಲ್ಲಿ ಚಾರ್ವಾಕ ಆತ್ಮನೇ ಇಲ್ಲವೆಂಬ ವಾದವನ್ನು ಪುರಸ್ಕರಿಸಿದ್ದಾನೆ. ಆತ್ಮನ ಅಸ್ತಿತ್ವವನ್ನೂ ಅವನಿಗೂ ನಿಯಾಮಕನಾದ ಪರಮಾತ್ಮನ ಅಸ್ತಿತ್ವವನ್ನೂ ಅಂಗೀಕರಿಸಿ ಸತತವಾದ ಅಭ್ಯಾಸದಿಂದ ಆತ್ಮಸಂಯಮ ವನ್ನು ಸಾಧಿಸಿ ರಾಗದ್ವೇಷಗಳನ್ನು ಬಿಡಬೇಕೆಂದು ವಿಶಿಷ್ಟಾದ್ವೈತ ಹೇಳುತ್ತದೆ. ಆತ್ಮನೇ ಇಲ್ಲವೆಂಬ ಮಾರ್ಗ ಉಚ್ಛೃಂಖಲವೃತ್ತಿಗೆ ದಾರಿಯಾಗುತ್ತದೆ. ರಾಗದ್ವೇಷಗಳ ನಿವೃತ್ತಿ ಅದರಿಂದಲೇ ಸಾಧ್ಯವಾಗದು. ಪಶುಜೀವನವನ್ನು ತಡೆಗಟ್ಟಿ ಆಧ್ಯಾತ್ಮಿಕ ಸಾಧನೆಯಲ್ಲಿ ಜನ ಮಗ್ನರಾಗುವಂತೆ ಮಾಡಬೇಕು. ಆತ್ಮೋನ್ನತಿಗೆ ಕಠಿಣವಾದ ಸಾಧನೆ ಅವಶ್ಯಕ. ಆತ್ಮನೇ ಇಲ್ಲವೆಂಬ ವಾದದಿಂದ ಅದನ್ನು ಸಾಧಿಸುವುದಕ್ಕಾಗದು. ಲೋಕವ್ಯವಹಾರದಲ್ಲಿ ಎಲ್ಲರೂ ಸಿಕ್ಕಿಕೊಂಡಿದ್ದಾರೆ. ಈ ಲೋಕವ್ಯವಹಾರ ಸುಳ್ಳೆಂದರೂ ಸರಿ, ನಿಜವೆಂದರೂ ಸರಿ, ಇದರಿಂದ ತಪ್ಪಿಸಿಕೊಳ್ಳಲಾರದಾಗಿದ್ದಾರೆ. ಇದನ್ನು ಕುರಿತು

acharya.org

ವಿವೇಕದಿಂದ ವಿವೇಚಿಸಬೇಕಾದುದು ಅವಶ್ಯಕ. ಚಾರ್ವಾಕ ದರ್ಶನಕ್ಕೂ ಈ ದರ್ಶನಕ್ಕೂ ಹೀಗೆ ಅಜಗಜಾಂತರವಿದೆ.

ಚೈತನ್ಯವು ನಾಲ್ಕು ಮಹಾಭೂತಗಳ ಸಂಸರ್ಗದಿಂದ ಆಗುವುದೆಂಬ ವಾದವನ್ನು ವಿಶಿಷ್ಟಾದ್ವೈತ ಒಪ್ಪುವುದಿಲ್ಲ. ಈ ಸಂಸರ್ಗ ಹೇಗೆ ಆಗುವುದು, ಏಕೆ ಆಗುವುದು, ಯಾರ ಸಂಕಲ್ಪದಂತೆ ಆಗುವುದು ಎಂಬುದನ್ನೂ ಯೋಚಿಸಬೇಕು. ಸ್ವಭಾವವಾದವನ್ನು ವಿಶಿಷ್ಟಾದ್ವೈತ ಒಪ್ಪುವುದಿಲ್ಲ. ಆತ್ಮರುಗಳನ್ನೂ ಪರಮಾತ್ಮನನ್ನೂ ಅಂಗೀಕರಿಸಿದರೇನೇ ಈ ಲೋಕದ ವಿಚಿತ್ರವಾದ ಸೃಷ್ಟಿಗೆ ವಿವರಣೆ ಕೊಡಬಹುದೆಂದು ಈ ದರ್ಶನ ಪ್ರತಿಪಾದಿಸುತ್ತದೆ. ಪ್ರಕೃತಿಮಾತ್ರ ಸತ್ಯವೆಂದು ಹೇಳಿ ಮತ್ತೊಂದೂ ಇಲ್ಲವೆನ್ನುವ ಚಾರ್ವಾಕವಾದವನ್ನು ತಳ್ಳಿಹಾಕಿ ವಿಶಿಷ್ಟಾದ್ವೈತ ಪ್ರಕೃತಿಯ, ಆತ್ಮರುಗಳ ಹಾಗೂ ಪರಮಾತ್ಮನ ಸತ್ಯತ್ವವನ್ನು ಸ್ಥಾಪಿಸುತ್ತದೆ. ಇವರುಗಳೆಲ್ಲ ಸತ್ಯರು ; ನಿತ್ಯರು. ಪ್ರಕೃತಿ ಸ್ವತಂತ್ರವಾಗಿ ಕಾರ್ಯದಲ್ಲಿ ತೊಡಗಲಾರದು. ಜೀವರು ನಿತ್ಯರಾದರೂ ಭಗವಂತನಿಗೆ ಅಧೀನರಾಗಿದ್ದಾರೆ. ಆಯಾ ಜೀವರುಗಳ ಕರ್ಮಾನುಸಾರವಾಗಿ ಅವರಿಗೆ ಈಶ್ವರಸಂಕಲ್ಪದಂತೆ ಶರೀರ ಸಂಬಂಧ ಏರ್ಪಡುವುದು. ಭಗವಂತನ ಕರುಣೆಯಿಂದ ಬಂದ ಶರೀರಗಳನ್ನು ಹೊಂದಿ ಜೀವರುಗಳು ಪ್ರವೃತ್ತಿ ನಿವೃತ್ತಿಗಳಲ್ಲಿ ತೊಡಗಿ ಆತ್ಮೋನ್ನತಿಯನ್ನು ಸಾಧಿಸಲು ಪ್ರಯತ್ನಿಸುತ್ತಾರೆಂಬುದು ವಿಶಿಷ್ಟಾದ್ವೈತದ ನಿಶ್ಚಯ. ಈ ಲೋಕವೂ ಸತ್ಯ, ಪರಲೋಕವೂ ಸತ್ಯ, ಆತ್ಮರುಗಳೂ ಸತ್ಯ. ಪರಮಾತ್ಮನೂ ಸತ್ಯ, ಇವು ನಿತ್ಯವಾದವು; ಬಂಧ ಮೋಕ್ಷಗಳೂ ಸತ್ಯವಾದವು. ಇವೆಲ್ಲ ಅಪೌರುಷೇಯವಾದ ವೇದಗಳಿಂದಲೂ ಪ್ರತ್ಯಕ್ಷ ಅನುಮಾನಗಳಿಂದಲೂ ತಿಳಿಯುತ್ತವೆ. ಅನಂತರಾದ ಜೀವರುಗಳು ಪರಮಾತ್ಮನನ್ನು ಪಡೆಯುವುದು ಪುರುಷಾರ್ಥ. ಈ ಲೋಕದ ಸಂಬಂಧ ಕರ್ಮಕೃತವಾದದ್ದು; ಇದೇ ಪರಮಾರ್ಥವಲ್ಲ; ಇದನ್ನು ಮೀರಿದಂಥ ಆನಂದವನ್ನು ಸಂಪಾದಿಸಬೇಕು. ಅದಕ್ಕೆ ಈಶ್ವರೋಪಾಸನೆ ಆಗಬೇಕು. ಈಶ್ವರನ ಕೃಪೆಯಿಂದ ಕರ್ಮವನ್ನು ಕಳೆದುಕೊಂಡು ಶುದ್ಧನಾಗಿ ಸ್ವಸ್ವರೂಪದಿಂದ ಪ್ರಕಾಶಿಸುತ್ತಾ ಜೀವರುಗಳು ತಮ್ಮ ಪ್ರಭುವೂ ನಿಯಾಮಕನೂ ಆದ ಪರಮಾತ್ಮನನ್ನು ಸೇರುವುದೇ ಪರಮಪುರುಷಾರ್ಥವೆಂದು ಈ ದರ್ಶನ ಉಪದೇಶಿಸುತ್ತದೆ. ಹೀಗೆ ಚಾರ್ವಾಕ ಮತ್ತು ವಿಶಿಷ್ಟಾದ್ವೈತ ದರ್ಶನಗಳಲ್ಲಿ ಮೂಲಭೂತವಾದ ವ್ಯತ್ಯಾಸಗಳಿವೆ.

ವಿಶಿಷ್ಟಾದ್ವೈತವೂ ಬೌದ್ಧದರ್ಶನವೂ

ಚಾರ್ವಾಕರು ಪ್ರತ್ಯಕ್ಷವನ್ನು ಒಪ್ಪುವವರಾದರೆ ಬೌದ್ಧರು ಪ್ರತ್ಯಕ್ಷವನ್ನೂ ಪರೋಕ್ಷವನ್ನೂ ನಿರಾಕರಿಸುವವರಾಗಿದ್ದಾರೆ. ಎಲ್ಲವೂ ಶೂನ್ಯವೆಂಬುದನ್ನು ಇವರೇ ಸಾಧಿಸುತ್ತಾರೆ. ಎಲ್ಲವೂ ದುಃಖ, ಎಲ್ಲವೂ ಕ್ಷಣಿಕ, ಎಲ್ಲವೂ ಸ್ವಲಕ್ಷಣ, ಎಲ್ಲವೂ ಶೂನ್ಯ ಎಂಬ ಆರ್ಯ ಸತ್ಯಚತುಷ್ಟಯವನ್ನು ಇವರು ಪ್ರತಿಪಾದಿಸುತ್ತಾರೆ. ಇವರ ದೃಷ್ಟಿಯಲ್ಲಿ ನಿತ್ಯವಾದುದು

acharya.org

ದೊಂದೂ ಇಲ್ಲ. ಪ್ರತಿಯೊಂದೂ ಪ್ರತಿಕ್ಷಣದಲ್ಲಿಯೂ ನಾಶವಾಗಿ ಹುಟ್ಟುತ್ತಿರುತ್ತದೆ. ಈ ದೃಷ್ಟಿಯಿಂದ ನೋಡಿದಲ್ಲಿ ಆತ್ಮನೆಂಬುವುದೂ ಇಲ್ಲ ಪ್ರಕೃತಿ ಎಂಬುದೂ ಇಲ್ಲ ಪರಮಾತ್ಮನೆಂಬುದೂ ಇಲ್ಲ; 'ಚತುಷ್ಕೋಟಿವಿನಿರ್ಮುಕ್ತಂ ತತ್ತ್ವಂ ಮಾಧ್ಯಮಿಕಾ ವಿದುಃ' ಎಂದು ಹೇಳುತ್ತಾರೆ. ಶೂನ್ಯವೇ ಪರಮಾರ್ಥವಾದರೂ ಅನಾದಿಯಾದ ಕರ್ಮ ವಾಸನೆಯ ಕಾರಣ ಪದಾರ್ಥಗಳು ಇಲ್ಲಿ ತೋರುತ್ತಿವೆ. ಈ ತೋರಿಕೆಯ ಹಿನ್ನೆಲೆಯಲ್ಲಿ ನಿತ್ಯವಾದ ಅಧಿಷ್ಠಾನವೊಂದಿಲ್ಲವೆಂಬುದು ಇವರ ಮತ. ಕಾರ್ಯಕಾರಣ ಭಾವವನ್ನು ಪುರಸ್ಕರಿಸುವ ಬದಲು ಪ್ರತೀತ್ಯಸಮುತ್ಪಾದವನ್ನಿವರು ಪ್ರತಿಪಾದಿಸುತ್ತಾರೆ. ಒಂದು ಕಾರ್ಯೋತ್ಪತ್ತಿಗೆ ಇರುವ ಪ್ರತಿಬಂಧಕದ ನಿವಾರಣೆ ಮಾತ್ರ ಆಗುವುದು. ಈ ಕಾರ್ಯೋತ್ಪತ್ತಿ ಆಗದಂತೆ ಮಾಡುವುದು ನಮ್ಮ ಗುರಿಯಾಗಬೇಕು. ಆಗ ಶೂನ್ಯತಾ ವಸ್ಥೆ ಬರುತ್ತದೆ. ಅದನ್ನು ಸಾಧಿಸುವುದು ಎಲ್ಲರ ಗುರಿಯಾಗಬೇಕು.

ಬೌದ್ಧರಲ್ಲಿ ನಾಲ್ಕು ಪಂಗಡಗಳಿವೆ—ವೈಭಾಷಿಕ, ಸೌತ್ರಾಂತಿಕ, ಯೋಗಾಚಾರ, ಮಾಧ್ಯಮಿಕ ಎಂದು. ವೈಭಾಷಿಕ ಸೌತ್ರಾಂತಿಕರಿಗೆ ಹೀನಯಾನರೆಂಬ ಹೆಸರೂ. ಯೋಗಾ ಚಾರ ಮತ್ತು ಮಾಧ್ಯಮಿಕರಿಗೆ ಮಹಾಯಾನರೆಂದೂ ಹೆಸರಿದೆ. ವೈಶೇಷಿಕರು ಆಂತರ ವಾದ ಮತ್ತು ಬಾಹ್ಯವಾದ ಪದಾರ್ಥಗಳೆರಡನ್ನೂ ಅಂಗೀಕರಿಸಿ ಅವು ಕ್ಷಣಿಕವೆಂದು ಹೇಳುತ್ತಾರೆ. ಸೌತ್ರಾಂತಿಕರು ಸಮಸ್ತವಾದ ಬಾಹ್ಯಾರ್ಥಗಳೂ ವಿಜ್ಞಾನದಿಂದ (ಅನು ಮಾನ) ತರ್ಕಿಸಿ ತಿಳಿಯಲ್ಪಡತಕ್ಕವೆನ್ನುತ್ತಾರೆ. ಯೋಗಾಚಾರರು ಬಾಹ್ಯಾರ್ಥಗಳೆಲ್ಲಾ ಸ್ವಪ್ನಪ್ರಾಯವಾದವೆಂದು ಹೇಳಿ ಅರ್ಥಶೂನ್ಯವಾದ ವಿಜ್ಞಾನವೇ ತತ್ತ್ವವೆನ್ನುತ್ತಾರೆ. ಇವರು ಮೂವರೂ ಕ್ಷಣಪಕ್ಷವನ್ನು ಪ್ರತಿಪಾದನೆ ಮಾಡುತ್ತಾರೆ. ಮಾಧ್ಯಮಿಕರು ಸರ್ವ ಶೂನ್ಯತ್ವವನ್ನು ಪ್ರತಿಪಾದಿಸುತ್ತಾರೆ.

ಕ್ಷಣಿಕವಾದುದನ್ನು ಸ್ಥಿರವೆಂದು ಭಾವಿಸುವುದು ಇವರ ದೃಷ್ಟಿಯಲ್ಲಿ ಅವಿದ್ಯೆ ಎನ್ನಿಸುವುದು. ನಿತ್ಯನಾದ ಆತ್ಮನಿರುವನೆಂಬುದು ಅವಿದ್ಯೆ. ಈ ಅವಿದ್ಯೆಯ ಕಾರಣ ಬೆಳೆದುಬಂದಿರುವುದು ಜ್ಞಾನಸಂತಾನ. ಈ ಜ್ಞಾನಸಂತಾನಕ್ಕೇ ಕರ್ಮ, ಅವಿದ್ಯೆ ಪುನರ್ಜನ್ಮ ಮೊದಲಾದವು.

> 'ಯಸ್ಮಿನ್ನೇವ ಹಿ ಸಂತಾನೇ ಆಹಿತಾ ಕರ್ಮವಾಸನಾ ।
> ಫಲಂ ತತ್ರೈವ ಬಧ್ನಾತಿ ಕಾರ್ಪಾಸೇ ರಕ್ತತಾ ಯಥಾ ॥'

ಎಂದು ಇದನ್ನು ಹೇಳಿದ್ದಾರೆ. ಈ ಅಜ್ಞಾನದ ನಿವಾರಣೆಗೆ ದಯಾಪಾರಮಿತಾ, ದಾನಪಾರ ಮಿತಾ ಮತ್ತು ಧರ್ಮಪಾರಮಿತಾ ಎಂಬುವುಗಳನ್ನು ಸಾಧನಗಳನ್ನಾಗಿ ತಿಳಿಸಲಾಗಿದೆ. ಈ ದರ್ಶನಪ್ರಕ್ರಿಯೆಗೂ ವಿಶಿಷ್ಟಾದ್ವೈತಕ್ಕೂ ಬಹಳ ವ್ಯತ್ಯಾಸವಿದೆ.

ಜಗತ್ತಿಗೆ ಪರಮಾಣುಕಾರಣತ್ವವನ್ನಿವರು ಹೇಳುವುದು ಸಂಗತವಾಗುವುದಿಲ್ಲ. ಇವರ ಕ್ಷಣಿಕತ್ವವಾದವನ್ನು ಇತರ ದಾರ್ಶನಿಕರೆಲ್ಲರೂ ಆಕ್ಷೇಪಿಸಿದ್ದಾರೆ. ಎಲ್ಲವೂ

acharya.org

ಕ್ಷಣಿಕವಾದರೆ ಕಾರ್ಯಕಾರಣಭಾವ ಸಂಭವಿಸುವುದಿಲ್ಲ. ಪೂರ್ವಕ್ಷಣಸಂತಾನ ಉತ್ತರಕ್ಷಣ ಸಂತಾನಕ್ಕೆ ಕಾರಣವೆಂದು ಹೇಳುವುದೂ ಯುಕ್ತವಾಗದು. ಕ್ಷಣಿಕವಾದ ಪರಮಾಣುಗಳು ಸೇರುವುದು ಯಾವಾಗ ? ಅವು ತಿಳಿವಳಿಕೆಗೆ ವಿಷಯವಾಗುವುದು ತಾನೇ ಹೇಗೆ ? ಯಾವ ವಿಜ್ಞಾನಾತ್ಮನಾದವನು ಯಾವಾಗತಾನೇ ಯಾವುದನ್ನೇ ತಾನೇ ತಿಳಿಯಬಲ್ಲನು ? ತಿಳಿಯುವವನೂ ತಿಳಿಯಲ್ಪಡುವುದೂ ಆ ಕ್ಷಣದಲ್ಲಿಯೇ ನಾಶವಾಗುವುದಷ್ಟೇ ? ವಿಶಿಷ್ಟಾದ್ವೈತ ಈ ಕ್ಷಣಿಕತ್ವವಾದವನ್ನು ಒಪ್ಪುವುದಿಲ್ಲ. ಏಕೆಂದರೆ ಇದರಂತೆ ಜಗತ್ತಿನ ಉತ್ಪತ್ತಿಯೇ ಆಗದು. ವಸ್ತುವಿನ ಸ್ಥಿರತ್ವವನ್ನು ವಿಶಿಷ್ಟಾದ್ವೈತ ಸಮರ್ಥಿಸಿ ಕ್ಷಣಿಕವಾದವನ್ನು ಖಂಡಿಸುತ್ತದೆ. ವಿಜ್ಞಾನಮಾತ್ರಾಸ್ತಿತ್ವವಾದಿಗಳ ವಾದವನ್ನು ಈ ದರ್ಶನ ಒಪ್ಪುವುದಿಲ್ಲ. ಜ್ಞಾನಕ್ಕಿಂತ ಅತಿರಿಕ್ತವಾದ ಪದಾರ್ಥವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಜ್ಞಾತೃವಾದ ಆತ್ಮನಿಗೆ ಅರ್ಥವಿಶೇಷವ್ಯವಹಾರಕ್ಕನುಕೂಲವಾದ ಜ್ಞಾನದ ಉಪಲಬ್ಧಿ ಆಗುತ್ತಿರುವುದು ಅನುಭವದಲ್ಲಿದೆ. ಅರ್ಥವೈಚಿತ್ರ್ಯದಿಂದ ಜ್ಞಾನವೈಚಿತ್ರ್ಯ ಉಂಟಾಗುತ್ತದೆ. ಸ್ವಾಪ್ನಜ್ಞಾನದಂತೆ ಜಾಗರಿತಜ್ಞಾನವೂ ಅರ್ಥಶೂನ್ಯವೆಂದು ಹೇಳುವುದಕ್ಕಾಗುವುದಿಲ್ಲ. ನಿದ್ರೆಯೇ ಮೊದಲಾದ ದೋಷಗಳ ಕಾರಣ ಉಂಟಾದುದು ಸ್ವಪ್ನಜ್ಞಾನ. ಆದರೆ ಜಾಗರಿತಜ್ಞಾನ ಹಾಗಲ್ಲ. ಎಲ್ಲವೂ ಅರ್ಥಶೂನ್ಯವೆಂದರೆ ಇವರು ಸಾಧಿಸಬೇಕೆಂದು ಹೊರಟಿರುವ ಅರ್ಥವೂ ಸಿದ್ಧಿಸಲಾರದು.

ಸರ್ವಶೂನ್ಯವಾದಿಯಾದ ಮಾಧ್ಯಮಿಕನ ಮತವೂ ಅನುಪಾದೇಯ. ಎಲ್ಲವೂ ಶೂನ್ಯವೆಂದು ಸಾಧಿಸಲು ಹೊರಟವನು ಅದಕ್ಕೆ ಹೇಳುವ ಪ್ರಮಾಣವು ಸತ್ಯವೆಂದು ಒಪ್ಪಬೇಕಷ್ಟೇ ? ಆ ಪ್ರಮಾಣವೂ ಅಸತ್ಯವಾದರೆ ಸತ್ಯತ್ವವೇ ಸ್ಥಾಪಿತವಾಗುತ್ತದೆ. ಯಾವುದೊಂದು ಸತ್ಯವಾದ ಪದಾರ್ಥವೂ ಇಲ್ಲದೇ ಭ್ರಮೆ ತೋರುವುದೆಂದು ಹೇಳುವುದಕ್ಕಾಗದು. 'ಸರ್ವಥಾ ಅನುಪಪತ್ತೇಶ್ಚ' ಎಂಬ ಸೂತ್ರದಲ್ಲಿ ಸೂತ್ರಕಾರರು ಸರ್ವಶೂನ್ಯವಾದವನ್ನು ನಿರಾಕರಿಸಿದ್ದಾರೆ.

ಬೌದ್ಧದರ್ಶನ ವೇದಪ್ರಮಾಣ್ಯವನ್ನು ಒಪ್ಪುವುದಿಲ್ಲ. ಆತ್ಮನನ್ನೂ ಒಪ್ಪುವುದಿಲ್ಲ. ಬಾಹ್ಯ ಮತ್ತು ಆಂತರ ವಸ್ತುಗಳ ಸತ್ಯತ್ವವನ್ನು ಒಪ್ಪುವುದಿಲ್ಲ. ಇವುಗಳ ಶೂನ್ಯತ್ವವನ್ನು ತಾನು ಅಂಗೀಕರಿಸಿರುವ ಪ್ರಮಾಣಗಳಿಂದಲೇ ಸಾಧಿಸಲೆಳೆಸುತ್ತದೆ. ಕರ್ಮವನ್ನೂ ಪುನರ್ಜನ್ಮವನ್ನೂ ಅಂಗೀಕರಿಸುತ್ತದೆ ಈ ದರ್ಶನ. ಆತ್ಮನೇ ಇಲ್ಲವೆಂದರೂ ಜ್ಞಾನಸಂತಾನಕ್ಕೆ ಪುನರ್ಜನ್ಮಾದಿಗಳನ್ನು ಹೇಳಿದೆ. ಈ ಕ್ರಮವನ್ನು ವಿಶಿಷ್ಟಾದ್ವೈತ ದರ್ಶನ ಒಪ್ಪುವುದಿಲ್ಲ. ಜಗತ್ತು ಸತ್ಯವಾಗಿ ಆತ್ಮರುಗಳೂ ನಿತ್ಯರಾಗಿ ತಮ್ಮ ತಮ್ಮ ಕರ್ಮದ ಕಾರಣ ಇಲ್ಲಿ ತೊಳಲುತ್ತಿದ್ದಾರೆಂದು ವಿಶಿಷ್ಟಾದ್ವೈತ ಸಾಧಿಸುತ್ತದೆ. ಎಲ್ಲವೂ ಶೂನ್ಯವೆಂದು ಹೇಳಿದರೂ ಸಹ ಬೌದ್ಧರು ಆತ್ಮನನ್ನು ಸೂಚಿಸಲು ವಿಜ್ಞಾನವನ್ನು

acharya.org

ಎರಡು ವಿಧವಾಗಿ ಮಾಡುತ್ತಾರೆ—ಆಲಯವಿಜ್ಞಾನ ಮತ್ತು ಚಿತ್ತವಿಜ್ಞಾನ ಎಂದು—

'ತತ್ ಸ್ಯಾದಾಲಯವಿಜ್ಞಾನಂ ಯದ್ಭವೇದಹಮಾಸ್ಪದಮ್ ।
ತತ್ ಸ್ಯಾದ್ಧಿ ಚಿತ್ತವಿಜ್ಞಾನಂ ಯನ್ನೀಲಾದಿಕಮುಲ್ಲಿಖೇತ್ ॥'

ಎಂದು ಈ ಅಂಶವನ್ನು ಹೇಳಿದೆ. ನೈರಾತ್ಮ್ಯದರ್ಶನವನ್ನು ಹೇಳುವ ಬೌದ್ಧರು ಲೋಕದಲ್ಲಿ ದುಃಖವನ್ನು ಹೇಳುವುದು ಒಂದು ಚೋದ್ಯವಾಗಿದೆ. ದುಃಖ ಯಾರಿಗೆ ? ಏಕೆ ಸಂಭವಿಸಿದೆ ? ಅನುಭವಿಸುವ ಆತ್ಮನೇ ಇಲ್ಲದ ಮೇಲೆ ಇದನ್ನೇಕೆ ವಿಚಾರ ಮಾಡಬೇಕು? ಇದರ ಪರಿಹಾರ ತಾನೇ ಏಕೆ ನಮ್ಮ ಗುರಿಯಾಗಬೇಕು ? ಸುಖವನ್ನೋ ದುಃಖವನ್ನೋ ಹೊಂದುವ ಆತ್ಮನಿರುವನೆಂದರೆ ತಾನೇ ಸುಖದುಃಖಗಳ ಮಾತು ? ಧರ್ಮಾಧರ್ಮಗಳ ಮಾತು ? ಆತ್ಮನೇ ಇಲ್ಲವೆಂದಮೇಲೆ ಇವೊಂದೂ ಇರುವುದಿಲ್ಲ.

ಬೌದ್ಧದರ್ಶನ ತತ್ತ್ವಸ್ವರೂಪವನ್ನು ಹೇಳುವುದು ಹೇಗೆ ವ್ಯತ್ಯಾಸವಾಗಿದೆಯೋ ಹಾಗೆ ಅವರು ಹೇಳುವ ಮೋಕ್ಷೋಪಾಯವೂ ಸರಿಯಲ್ಲವೆಂದು ವಿಶಿಷ್ಟಾದ್ವೈತದ ಮತ. ದಯಾಪಾರಮಿತಾ, ದಾನಪಾರಮಿತಾ ಮತ್ತು ಧರ್ಮಪಾರಮಿತಾ ಎಂಬುವೂ ಪರಿಪೂರ್ಣವಾದ ಮೋಕ್ಷೋಪಾಯವಾಗಿಲ್ಲ. ನೈತಿಕ ಮಟ್ಟವನ್ನು ಉತ್ತಮಪಡಿಸಲು ಇವು ಬಹಳ ಉಪಯುಕ್ತವಾದವೇ ಸರಿ. ಆದರೆ ಆಧ್ಯಾತ್ಮಿಕಸಾಧನೆ ನೈತಿಕಸಾಧನೆಗಿಂತ ಮೀರಿದುದಾಗಿದೆ. ಆತ್ಮಗುಣಗಳ ಸಂಪಾದನೆ ಎಲ್ಲ ಸಾಧನೆಗೂ ಮೂಲ. ಧರ್ಮ, ದಾನ, ಅಹಿಂಸೆ ಮೊದಲಾದವು ಎಲ್ಲರಿಗೂ ಅವಶ್ಯವಾಗಿ ಬೇಕಾದವೇ. ಆದರೆ ಇಷ್ಟರಿಂದಲೇ ಎಲ್ಲವನ್ನೂ ಸಾಧಿಸಿದಂತಾಗುವುದಿಲ್ಲ. ಇದರಿಂದ ಚಿತ್ತಶುದ್ಧಿಯಾಗುವುದು. ಆತ್ಮಚಿಂತನೆಯಿಂದ ಆತ್ಮಸಾಕ್ಷಾತ್ಕಾರವನ್ನು ಹೊಂದಿ ಭಗವಂತನಲ್ಲಿ ಭಕ್ತಿ ಮಾಡುವುದರಿಂದ ಈಶ್ವರಾನುಗ್ರಹವುಂಟಾಗಿ ಸಂಸಾರದ ಬಂಧನ ಕಳೆಯುವುದು. ಆದಕಾರಣ ಭಕ್ತಿಪ್ರಪತ್ತಿಗಳು ಮೋಕ್ಷಕಾರಣಗಳಾಗಿ ಆತ್ಮಸಂಸ್ಕರಣ ಅದಕ್ಕೆ ಅಂಗವಾಗಿರುತ್ತದೆ. ಬೌದ್ಧರು ಹೇಳುವ ಸಾಧನಾನುಷ್ಠಾನಗಳು ನೈತಿಕಬಲವರ್ಧನಕ್ಕೆ ಮಾತ್ರ ಸಾಧಕವಾಗಿವೆ ಎಂದು ವಿಶಿಷ್ಟಾದ್ವೈತದರ್ಶನ ಹೇಳುತ್ತದೆ.

ವಿಶಿಷ್ಟಾದ್ವೈತ ದರ್ಶನ ಶೂನ್ಯತಾಪತ್ತಿಯೇ ಪುರುಷಾರ್ಥವೆಂಬುವುದನ್ನು ಮಾನ್ಯಮಾಡುವುದಿಲ್ಲ. ಆತ್ಮರುಗಳು ನಿತ್ಯರುಗಳಾಗಿ ಅನೇಕರಾಗಿರುವರೆಂದೂ ಕರ್ಮದ ಕಾರಣ ಬಂದ ಸಂಸಾರವನ್ನವರು ಬಿಡಿಸಿಕೊಂಡು ಪರಮಾತ್ಮನ ಸಾಯುಜ್ಯವನ್ನು ಹೊಂದುವುದು ಪುರುಷಾರ್ಥವೆಂದು ಈ ದರ್ಶನ ಪ್ರತಿಪಾದಿಸುತ್ತದೆ. ನೈರಾತ್ಮ್ಯವಾದ ಅಜ್ಞಾನಮೂಲವಾದುದು. ಕರ್ಮದ •ಕಾರಣ ಬಂದಿರುವ ಈ ಬಂಧನ ಪರಿಹಾರವಾಗಬೇಕಾದರೆ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳನ್ನು ಅನುಷ್ಠಿಸಬೇಕು. ಪ್ರಪತ್ತಿಯನ್ನು ಸರ್ವಕಾರಣನಾದ ಭಗವಂತನಲ್ಲಿ ಮಾಡಬೇಕು. ಅವನ ದಯೆಯಿಂದ

acharya.org

ಈ ಸಂಸಾರದ ಬಂಧನದಿಂದ ಬಿಡುಗಡೆ ಹೊಂದಬೇಕು. ಹೀಗೆ ಬೌದ್ಧದರ್ಶನ ಪ್ರತಿಪಾದಿಸುವ ತತ್ತ್ವ, ಉಪಾಯ ಪುರುಷಾರ್ಥಗಳು ಚಾರ್ವಾಕದರ್ಶನದಂತೆಯೇ ವಿಶಿಷ್ಟಾದ್ವೈತದರ್ಶನದ ಪ್ರಮೇಯಕ್ಕಿಂತ ಬೇರೆಯಾಗಿವೆ.

ವಿಶಿಷ್ಟಾದ್ವೈತವೂ ಜೈನದರ್ಶನವೂ

ಜೈನದರ್ಶನವೂ ವೇದಪ್ರಾಮಾಣ್ಯವನ್ನು ಅಂಗೀಕರಿಸುವುದಿಲ್ಲ. ಸರ್ವಜ್ಞನೆಂದು ಪ್ರಸಿದ್ಧನಾದ ಮಹಾವೀರನು ಈ ದರ್ಶನದ ಪ್ರವರ್ತಕ. ಈ ದರ್ಶನ ಲೌಕಿಕವಾದ ಮತ್ತು ಪಾರಲೌಕಿಕವಾದ ಪದಾರ್ಥಗಳ ಸತ್ಯತ್ವವನ್ನು ಅಂಗೀಕರಿಸುತ್ತದೆ. ಬೌದ್ಧರು ಎರಡೂ ಸುಳ್ಳೆಂದು ಹೇಳಿದರೆ ಇವರು ಎರಡೂ ಸತ್ಯವಾದವೆಂದು ಹೇಳುತ್ತಾರೆ. ಪ್ರತ್ಯಕ್ಷ, ಅನುಮಾನ ಮತ್ತು ಶಬ್ದಗಳನ್ನು ಇವರು ಪ್ರಮಾಣಗಳೆಂದು ಒಪ್ಪುತ್ತಾರೆ. ವೈರಾಗ್ಯ ಮತ್ತು ಅಹಿಂಸೆಗಳಿಗೆ ಈ ದರ್ಶನ ಪರಮಪ್ರಾಧಾನ್ಯ ಕೊಡುತ್ತದೆ.

ಪಂಚಾಸ್ತಿಕಾಯಗಳನ್ನು, ಜೀವ, ಅಜೀವ, ಆಸ್ರವ, ನಿರ್ಜರ, ಸಂವರ, ಬಂಧ, ಮೋಕ್ಷಗಳನ್ನೂ, ಘಾತಿಕರ್ಮಚತುಷ್ಟಯವನ್ನೂ, ಅಘಾತಿಕರ್ಮಚತುಷ್ಟಯವನ್ನೂ ಇವರು ಹೇಳುತ್ತಾರೆ. ಜೀವ, ಧರ್ಮ, ಅಧರ್ಮ, ಪುದ್ಗಲ, ಕಾಲ ಮತ್ತು ಆಕಾಶಗಳೆಂಬ ದ್ರವ್ಯಗಳನ್ನು ಇವರು ಒಪ್ಪುತ್ತಾರೆ. ಜೀವನು ಅಣುಸ್ವರೂಪಿಯಾದರೂ ತಾನು ಪಡೆದಿರುವ ಶರೀರಕ್ಕನುಗುಣವಾದ ಪರಿಮಾಣವನ್ನು ಹೊಂದುವನೆಂದು ಹೇಳಲಾಗಿದೆ. ಪುದ್ಗಲವೆಂಬುವುದು ಸ್ಪರ್ಶಾದಿಯುಕ್ತದ್ರವ್ಯವಾಗಿ ವಾಯು, ಅಗ್ನಿ, ಜಲ, ಪೃಥಿವೀ ರೂಪವಾದ ಪರಿಣಾಮಗಳನ್ನು ಹೊಂದುತ್ತದೆ ಎಂದು ಹೇಳಿದೆ.

ಈ ದರ್ಶನಕ್ಕನುಗುಣವಾಗಿ ಜಗತ್ಸತ್ಯತ್ವವು ಸಿದ್ಧವಾಗುತ್ತದೆ. ಅನೇಕಾನೇಕ ಆತ್ಮರುಗಳನ್ನು ಇವರು ಒಪ್ಪುತ್ತಾರೆ. ಇದು ವಿಶಿಷ್ಟಾದ್ವೈತಕ್ಕೆ ಒಪ್ಪಿಗೆ. ಆದರೆ ಜಗತ್ಕಾರಣನಾದ ಈಶ್ವರನನ್ನಿವರು ಅಂಗೀಕರಿಸುವುದಿಲ್ಲ. ತೀರ್ಥಂಕರರನ್ನೇ ಈಶ್ವರಸ್ಥಾನದಲ್ಲಿ ಇವರು ಪೂಜಿಸುತ್ತಾರೆ. ಈ ಅಂಶವನ್ನು ವಿಶಿಷ್ಟಾದ್ವೈತ ನಿರಾಕರಿಸುತ್ತದೆ. ಜೀವ-ಅಜೀವ ಎಂಬ ವಿಭಾಗ ಪ್ರಕೃತಿ–ಪುರುಷರಿಗೆ ಅನ್ವಯಿಸುವುದಾದರೂ ಈಶ್ವರನನು ಹೊಂದಿಲ್ಲದ ಈ ವಾದವನ್ನು ವೇದಾಂತಿಗಳು ಒಪ್ಪುವುದಿಲ್ಲ. ಪುದ್ಗಲವೆಂಬುದು ತಾನಾಗಿ ಪರಿಣಮಿಸುವುದೆಂಬ ವಾದವನ್ನೂ, ಕಾರ್ಮಣಶರೀರವಾಗಿ ಪುದ್ಗಲಪರಮಾಣುಗಳು ಜೀವನನ್ನು ಸೇರುವುವೆಂದು ಹೇಳುವ 'ಪ್ರದೇಶ ಬಂಧ'ದ ಅಂಶವನ್ನೂ ವಿಶಿಷ್ಟಾದ್ವೈತ ಅಂಗೀಕರಿಸುವುದಿಲ್ಲ. ಕರ್ಮಕ್ಕೆ ಸ್ವತಃ ಫಲಕೊಡುವ ಶಕ್ತಿ ಇಲ್ಲವೆಂಬುದು ವೇದಾಂತ ದರ್ಶನದ ಮತ. ಜೀವರುಗಳು ಮಾಡುವ ಶುಭಾಶುಭಕರ್ಮಗಳಿಗೆ ಕರ್ಮಾಧ್ಯಕ್ಷನಾದ ಭಗವಂತನು ಫಲಪ್ರದಾನ ಮಾಡುತ್ತಾನೆಂಬುದು ವೇದಾಂತಿಗಳ ಮತ. ಈ ಜೈನದರ್ಶನಕಾರರು ಹೇಳುವ ಸಪ್ತಭಂಗೀನ್ಯಾಯವನ್ನೂ ವೇದಾಂತಿಗಳು ಒಪ್ಪುವುದಿಲ್ಲ. 'ನೈಕಸ್ಮಿನ್ನ

acharya.org

ಸಂಭವಾತ್' ಎಂಬ ಸೂತ್ರದಲ್ಲಿ ಈ ದರ್ಶನವನ್ನು ಸೂತ್ರಕಾರರು ನಿರಾಕರಿಸಿದ್ದಾರೆ. ಕರ್ಮಕ್ಕೆ ಪ್ರಾಧಾನ್ಯ ಕೊಡುತ್ತದೆ ಜೈನದರ್ಶನ. ಜೀವರುಗಳು ತಾವು ತಾವು ಮಾಡಿದ ಶುಭಾಶುಭಕರ್ಮಗಳ ಪರಿಣಾಮವನ್ನು ತಪ್ಪಿಸಿಕೊಳ್ಳಲಾರರೆಂದು ಇದು ಸಾಧಿಸುತ್ತದೆ. ಕರ್ಮಕ್ಕೆ ಮಹತ್ತ್ವ ವಿದೆ ಎಂಬುದನ್ನು ವಿಶಿಷ್ಟಾದ್ವೈತ ಒಪ್ಪುತ್ತದೆ. ಆದರೆ ಆ ಕರ್ಮಕ್ಕೇ ಸರ್ವಶಕ್ತಿತ್ವವನ್ನು ಹೇಳುವುದಿಲ್ಲ. ಈ ದೃಷ್ಟಿಯಲ್ಲಿ ವಿಶಿಷ್ಟಾದ್ವೈತಕ್ಕೂ ಜೈನದರ್ಶನಕ್ಕೂ ವ್ಯತ್ಯಾಸವಿದೆ. ಕರ್ಮಬಂಧದಿಂದ ಮುಕ್ತರಾಗಿ ಜೀವರು ಕೇವಲಿಗಳಾಗಿ ಅಲೋಕಾಕಾಶದಲ್ಲಿ ನಿಲ್ಲುವುದು ಮೋಕ್ಷಸ್ವರೂಪವೆಂದು ಜೈನದರ್ಶನ ಹೇಳುತ್ತದೆ. ಶ್ರುತಿಗಳಿಗೆ ಇದು ವಿರುದ್ಧವಾದುದೆಂದು ವಿಶಿಷ್ಟಾದ್ವೈತದ ನೆಲೆ. ಹೀಗೆ ಒಂದೆಡೆಯಲ್ಲಿ ನಿಲ್ಲುವವನನ್ನು ಅಪರಿಮಿತನೆಂದು ಹೇಳುವುದಕ್ಕಾಗುವುದಿಲ್ಲ. ಮುಕ್ತಿದಶೆಯಲ್ಲಿ ಆತ್ಮನಿಗೆ ಶರೀರವಿಲ್ಲದ ಕಾರಣ ಪರಿಮಾಣದ ವ್ಯವಸ್ಥೆ ತಪ್ಪುವುದು. ಆಕಾಶವು ನಿತ್ಯವಾಗಿ ಅನಂತ ಪ್ರದೇಶವುಳ್ಳುದಾಗಿ ಸರ್ವವ್ಯಾಪಿಯಾಗಿದೆ ಎಂದು ಹೇಳುವ ಮಾತು ವಿಶಿಷ್ಟಾದ್ವೈತಕ್ಕೆ ಒಪ್ಪಿಗೆಯಿಲ್ಲ. ಆಕಾಶದ ಉತ್ಪತ್ತಿ ಶ್ರುತಿಯಲ್ಲಿ ಪ್ರಸಿದ್ಧವಾಗಿರುವುದು ಇದಕ್ಕೆ ಕಾರಣ.

ತತ್ತ್ವವಿಚಾರದಲ್ಲಿ ಹೀಗೆ ಈ ದರ್ಶನಗಳಲ್ಲಿ ವ್ಯತ್ಯಾಸವಿರುವಂತೆ ಮೋಕ್ಷೋಪಾಯಸ್ವರೂಪದಲ್ಲಿಯೂ ಪುರುಷಾರ್ಥಸ್ವರೂಪದಲ್ಲಿಯೂ ವ್ಯತ್ಯಾಸವಿದೆ. ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ ಮತ್ತು ಸಮ್ಯಕ್ ಚಾರಿತ್ರಗಳು ಮೋಕ್ಷೋಪಾಯವೆಂದು ಜೈನದರ್ಶನದ ನೆಲೆ. ಈ ಅಂಶಗಳು ಆತ್ಮೋನ್ನತಿಗೆ ಅತ್ಯವಶ್ಯಕವೇ ಆದರೂ ಇಷ್ಟೇ ಮೋಕ್ಷಕ್ಕೆ ಕಾರಣವಾಗದೆಂದು ವಿಶಿಷ್ಟಾದ್ವೈತದ ನೆಲೆ. ಜೈನದರ್ಶನ ಕರ್ಮಕ್ಕೆ ಪರಮ ಪ್ರಾಧಾನ್ಯ ಕೊಡುವುದರಿಂದ ಘಾತಿಕರ್ಮಚತುಷ್ಟಯದಿಂದ ದೂರವಾಗಿ ಅಘಾತಿ ಕರ್ಮಚತುಷ್ಟಯವನ್ನನುಷ್ಠಿಸಿ ಕರ್ಮಲೇಪವಾಗದ ಹಾಗೆ ನೋಡಿಕೊಂಡು ಆಗಲೇ ಘಟಿಸಿರುವ ಕರ್ಮವನ್ನನುಭವಿಸಿ ಆತ್ಯಂತಿಕ ಕರ್ಮನಾಶವನ್ನು ಮಾಡಿ ಸ್ವಸ್ವರೂಪವನ್ನು ಹೊಂದಿ ಕೇವಲಿಯಾಗಬೇಕೆನ್ನುತ್ತದೆ. ಈ ಕರ್ಮಕ್ಕೇ ಇಷ್ಟು ಪ್ರಭಾವವಿಲ್ಲವೆಂದು ವಿಶಿಷ್ಟಾದ್ವೈತದ ನಿಶ್ಚಯ. ಕರ್ಮ ಅಚೇತನವಾಗಿ ಫಲಪ್ರದಾನ ಮಾಡಲಾರದು. ಜೀವರುಗಳ ಕರ್ಮಕ್ಕನುಸಾರ ಪುದ್ಗಲಪರಮಾಣು ಜೀವನನ್ನು ಸೇರಿಕೊಳ್ಳುವುದೆಂದು ಹೇಳುವುದೂ ಸರಿಹೋಗದು. ಈಶ್ವರನನ್ನು ಒಪ್ಪದೆಹೋದರೆ ಜಗತ್ತಿನ ಹುಟ್ಟು ಸ್ಥಿತಿಗಳ ಬಗೆಗೆ ಸಮರ್ಪಕವಾಗಿ ಉತ್ತರಿಸುವುದು ಕಷ್ಟವಾಗುವುದು. ಆದ್ದರಿಂದ ಜೈನದರ್ಶನದ ಪ್ರಕ್ರಿಯೆಯನ್ನು ವಿಶಿಷ್ಟಾದ್ವೈತ ಒಪ್ಪುವುದಿಲ್ಲ. ಆತ್ಮಸಂಸ್ಕರಣಕ್ಕೆ ಸಮ್ಯಕ್ ಚಾರಿತ್ರ ಆವಶ್ಯಕ. ವೈರಾಗ್ಯ ಮತ್ತು ಅಹಿಂಸೆಗಳು ಎಲ್ಲರಿಗೂ ಆವಶ್ಯಕವಾದ ಧರ್ಮಗಳಾಗಿವೆ. ಇವುಗಳನ್ನು ಬೆಳೆಸಿಕೊಂಡು ಅದರಿಂದ ಚಿತ್ತಶುದ್ಧಿಯನ್ನು ಸಾಧಿಸಿ ಈಶ್ವರೋಪಾಸನೆ ಮಾಡಬೇಕೆಂದು ವಿಶಿಷ್ಟಾದ್ವೈತದ ನಿಶ್ಚಯ. ಹೀಗೆ ಜೈನ ಮತ್ತು ವಿಶಿಷ್ಟಾದ್ವೈತ ದರ್ಶನಗಳ ಪ್ರಕ್ರಿಯೆಗಳಲ್ಲಿ ಭೇದವಿದೆ.

acharya.org

ಸಾಂಖ್ಯ ದರ್ಶನವೂ ವಿಶಿಷ್ಟಾದ್ವೈತವೂ

ಸಾಂಖ್ಯದರ್ಶನ ವೇದಪ್ರಾಮಾಣ್ಯವನ್ನು ಒಪ್ಪುತ್ತದೆ. ಆದರೆ ವಿವರಣೆ ಕೊಟ್ಟು ನಿರೀಶ್ವರವಾದವನ್ನು ಪುರಸ್ಕರಿಸಿದೆ. ಸಾಂಖ್ಯದರ್ಶನಕ್ಕನುಸಾರವಾಗಿ ನಿತ್ಯರೂ ಅನೇಕರೂ ಆದ ಆತ್ಮರುಗಳುಂಟು. ಪ್ರಕೃತಿಯೂ ಇವರ ಸಿದ್ಧಾಂತದಂತೆ ನಿತ್ಯ. ಪ್ರಕೃತಿ ಪುರುಷ ರನ್ನು ಬಿಟ್ಟು ಬೇರೆ ತತ್ತ್ವವನ್ನಿವರು ಒಪ್ಪರು. ಪ್ರಕೃತಿಯ ಇಪ್ಪತ್ತನಾಲ್ಕು ಪರಿಣಾಮ ವಿಶೇಷಗಳನ್ನು ಇವರೇ ಮೊಟ್ಟಮೊದಲಾಗಿ ಹೇಳಿದವರು. ಮೂಲಪ್ರಕೃತಿ, ಬುದ್ಧಿ, ಅಹಂಕಾರ, ಪಂಚತನ್ಮಾತ್ರೆಗಳು, ಏಕಾದಶೇಂದ್ರಿಯಗಳು ಮತ್ತು ಪಂಚಮಹಾಭೂತ ಗಳು ಪ್ರಕೃತಿಯ ಪರಿಣಾಮವಿಶೇಷಗಳು. ಈ ಪ್ರಕೃತಿಯು ಪುರುಷನೊಡನೆ ಕೂಡಿರು ವುದೇ ಸಂಸಾರವಾಗಿದೆ. ಈ ದರ್ಶನದಲ್ಲಿ ಆತ್ಮನು 'ನಿರತಿಶಯ ವಸ್ತು'ವೆನಿಸಿ ಸ್ವರೂಪತಃ ಪುಷ್ಕರಪಲಾಶದಂತೆ ನಿರ್ಲಿಪ್ತನಾಗಿದ್ದಾನೆ. ಪ್ರಕೃತಿಗೇ ಎಲ್ಲ ಸಂಸಾರವೂ ! ಬಂಧನ ಮೋಕ್ಷಗಳೂ ಪ್ರಕೃತಿಗೇ. ಪ್ರಕೃತಿಗೆ ಕ್ರಿಯಾಶಕ್ತಿ ಇರುವುದೆಂದೂ ಚಿಚ್ಛಕ್ತಿ ಪುರುಷನಿ ಗಿದೆಯೆಂದೂ ಹೇಳಿ ಇತರ ದರ್ಶನಕಾರರು ಆತ್ಮನಿಗೆ ಹೇಳುವ ಬಂಧ ಮೋಕ್ಷಗಳನ್ನೆಲ್ಲಾ ಇವರು ಪ್ರಕೃತಿಗೇ ಹೇಳುತ್ತಾರೆ. ಬುದ್ಧ್ಯಾತ್ಮವಾದಿಗಳೆಂದು ಆ ಕಾರಣ ಇವರನ್ನು ಕರೆಯುತ್ತಾರೆ. ಪುರುಷನು ಪ್ರಕೃತಿಪುರುಷವಿವೇಕವಿಲ್ಲದೆ ಹೋದ ಕಾರಣ ಭ್ರಮೆ ಗೊಳಗಾಗಿ ತಾನೇ ಬಂಧನಕ್ಕೊಳಗಾದವನೆಂದು ಭಾವಿಸುವನಂತೆ. ಪ್ರಕೃತಿಪುರುಷ ವಿವೇಕ ಉಂಟಾದಾಗ ಆತನಿಗೆ ಬಿಡುಗಡೆ. ಜಗತ್ತಿನ ಸೃಷ್ಟಿಗೂ ಇವರು ಭಗವಂತನನ್ನು ಹೇಳುವುದಿಲ್ಲ, ಮಹಾಪುರುಷಸಾನ್ನಿಧ್ಯದಿಂದ ಪ್ರಕೃತಿಯಲ್ಲಿ ಕ್ಷೋಭೆಯುಂಟಾಗಿ ಸೃಷ್ಟ್ಯಾದಿಗಳಾಗುತ್ತವೆ ಎಂಬುದು ಇವರ ಮತ. ಈ ದರ್ಶನ ಜ್ಞಾನದಿಂದ ಮೋಕ್ಷ ಎಂಬ ಪಕ್ಷವನ್ನು ಪುರಸ್ಕರಿಸಿ ಪ್ರಕೃತಿಪುರುಷವಿವೇಕದಿಂದ ಮೋಕ್ಷವೆನ್ನುತ್ತದೆ. ಭ್ರಮೆ ಯಿಂದ ಸಂಸಾರವೆಂಬ ವಾದವನ್ನು ಮುಂದಿಟ್ಟಿದೆ. ಆತ್ಮನು ಶುದ್ಧಸ್ವರೂಪನಾಗಿದ್ದರೂ ಪ್ರಕೃತಿ ಸಂಸರ್ಗದಿಂದ ತಾನೇ ಕಷ್ಟಕ್ಕೊಳಗಾದವನಂತೆ ಇದ್ದಾನೆ ಎಂದು ಹೇಳಿ ಅವನ ನಿರ್ವಿಕಾರತೆಯನ್ನು ಸ್ಥಾಪಿಸುತ್ತದೆ. ಸುಖದುಃಖಾದಿಗಳೆಲ್ಲವೂ ಪ್ರಕೃತಿಗೆಂದು ಹೇಳಲಾಗಿದೆ.

ಈ ಸಾಂಖ್ಯದರ್ಶನದ ಪ್ರಮೇಯಕ್ಕೂ ವಿಶಿಷ್ಟಾದ್ವೈತದರ್ಶನ ಪ್ರಮೇಯಕ್ಕೂ ವ್ಯತ್ಯಾಸವಿದೆ. ವೇದಾಂತಸೂತ್ರಗಳಲ್ಲಿ ಸಾಂಖ್ಯ ದರ್ಶನದ ನಿರಾಕರಣೆ ಗಮನಾರ್ಹ ವಾಗಿ ಆಗಿದೆ- ಜಗತ್ತಿನ ಸೃಷ್ಟಿ ಪ್ರಕೃತಿಯಿಂದ ತನಗೆತಾನೇ ಆಗುವುದೆಂದು ಹೇಳುವುದನ್ನು ವೇದಾಂತಿಗಳು ಒಪ್ಪುವುದಿಲ್ಲ. ಪ್ರಕೃತಿಯೂ ವಿಭುವಾಗಿ ಜೀವನೂ ವಿಭುವಾಗಿರುವ ಕಾರಣ ಇವರ ಸಂಬಂಧ ನಿತ್ಯವಾಗುವುದು. ಇದರಿಂದ ನಿತ್ಯವೂ ಸೃಷ್ಟಿಯಾಗಬೇಕಾಗು ತ್ತದೆ. ಈ ಪರಿಸ್ಥಿತಿಯನ್ನು ನಿವಾರಿಸಲೆಂದೇ ಮಹಾಪುರುಷಸಾನ್ನಿಧ್ಯವೆಂದು ಇವರು

acharya.org

ಕಲ್ಪಿಸಬೇಕಾಗಿದೆ. ವೇದದಲ್ಲಿ ಇಪ್ಪತ್ತಾರನೇ ತತ್ವವಾದ ಪರಮಾತ್ಮನನ್ನು ಹೇಳಿದೆ. ಜಗತ್ತಿನ ಸೃಷ್ಟಿಸ್ಥಿತಿ ಪ್ರಳಯಗಳಿಗೆ ಕಾರಣನಾದ ಭಗವಂತನನ್ನು ಒಪ್ಪಿಕೊಳ್ಳಬೇಕಾದುದು ಆವಶ್ಯಕ. ಆತ್ಮರುಗಳಿಗೆ ಕರ್ತೃತ್ವವಿಲ್ಲದೆ ಕೇವಲ ಸಾಕ್ಷಿಗಳಾಗಿದ್ದಾರೆಂಬುದನ್ನೂ ವಿಶಿಷ್ಟಾದ್ವೈತ ಒಪ್ಪುವುದಿಲ್ಲ. 'ಕರ್ತಾ ಶಾಸ್ತ್ರಾರ್ಥವತ್ತ್ವಾತ್' ಎಂಬ ಸೂತ್ರದಲ್ಲಿ ಜೀವನ ಕರ್ತೃತ್ವ ಸ್ಥಾಪಿತವಾಗಿದೆ. ಕರ್ತಾ, ಭೋಕ್ತಾ, ಜ್ಞಾತಾ, ಬೋದ್ಧಾ, ವಿಜ್ಞಾನಾತ್ಮಾ ಆದವನವನು. ಈ ವಿಧವಾದ ಲಕ್ಷಣಗಳು ಆತ್ಮನ ಸ್ವರೂಪವೇ ಆಗಿವೆ. 'ಜ್ಞಾನಾನಂದಮಯಸ್ತ್ವಾತ್ಮಾ ಶೇಷೋ ಹಿ ಪರಮಾತ್ಮನಃ' ಎಂಬುದು ಆತ್ಮಸ್ವರೂಪ. ಅವನು ಕೇವಲ ಸಾಕ್ಷಿ ಎಂಬುದನ್ನು ಈ ದರ್ಶನ ಒಪ್ಪುವುದಿಲ್ಲ. ಪ್ರಕೃತಿಪುರುಷವಿವೇಕದಿಂದ ಮೋಕ್ಷವೆಂಬ ವಾದವನ್ನು ವಿಶಿಷ್ಟಾದ್ವೈತ ಒಪ್ಪುವುದಿಲ್ಲ. ಕರ್ಮಮೂಲವಾಗಿ ಬಂದಿರುವ ಸಂಸಾರ ಹೋಗಬೇಕಾದರೆ ಅದಕ್ಕೆ ಕಠಿಣವಾದ ಸಾಧನಾನುಷ್ಠಾನಗಳು ಆವಶ್ಯಕ. ಕರ್ಮಯೋಗದಿಂದ ಕರ್ಮಲೇಪವಾಗದ ಹಾಗೆ ಮಾಡಿ ಈಶ್ವರೋಪಾಸನೆಯಿಂದ ಈಶ್ವರಾನುಗ್ರಹವನ್ನು ಸಂಪಾದಿಸಿಕೊಳ್ಳಬೇಕು. ಈಶ್ವರಸಂಕಲ್ಪದಿಂದ ಸಂಸಾರ ಬಂಧನದ ಮೋಕ್ಷವಾಗುವುದು. ಸಾಂಖ್ಯರ ತತ್ತ್ವನಿರೂಪಣೆ ಪ್ರಕೃತಿಗೆ ಸ್ವಾತಂತ್ರ್ಯವನ್ನು ಕೊಟ್ಟಿದೆ. ಇದು ಯುಕ್ತವಾಗದು. ಪ್ರಕೃತಿ ಭಗವತ್ಸಂಕಲ್ಪಕ್ಕನುಗುಣವಾಗಿಯೇ ಪ್ರವರ್ತಿಸುವುದು. ಮೋಕ್ಷಸ್ವರೂಪದ ಬಗೆಗೂ ಈ ದರ್ಶನಗಳಲ್ಲಿ ವ್ಯತ್ಯಾಸವಿದೆ. ಪ್ರಕೃತಿ ಪುರುಷ ವಿವೇಕದಿಂದ ಮುಕ್ತರಾದ ಆತ್ಮರುಗಳು ಸ್ವಸ್ವರೂಪದಲ್ಲಿರುವರೆಂದು ಹೇಳುತ್ತಾರೆ ಸಾಂಖ್ಯರು. ಅವರು ಮತ್ತೆ ಪ್ರಕೃತಿಯ ಸಂಪರ್ಕವನ್ನು ಹೊಂದದೆ ಇರುವರೆಂದು ಹೇಳುವುದಕ್ಕಾಗುವುದಿಲ್ಲವೆಂದೂ ಆ ರೀತಿಯಾದ ಸ್ಥಿತಿ ಮೋಕ್ಷವಲ್ಲವೆಂದೂ ವಿಶಿಷ್ಟಾದ್ವೈತದ ನಿಶ್ಚಯ. ಭಗವದನುಭವದ ಮಹಾದಾನಂದ ಮೋಕ್ಷದ ಪ್ರಯೋಜನ. ಭಗವಂತನಿಗೇ ಸೇರಿದ ಆತ್ಮರು ಮುಕ್ತಿಯಲ್ಲಿ ತಮ್ಮ ಪ್ರಭುವನ್ನು ಸೇರಿ ಅವನ ನಿತ್ಯಕೈಂಕರ್ಯದ ಮಹದಾನಂದದಲ್ಲಿ ಮಗ್ನರಾಗುವರು. ಹೀಗೆ ಸಾಂಖ್ಯದರ್ಶನದ ಪ್ರಮೇಯಕ್ಕೂ ವಿಶಿಷ್ಟಾದ್ವೈತದರ್ಶನದ ಪ್ರಮೇಯಕ್ಕೂ ವ್ಯತ್ಯಾಸವಿದೆ.

ವಿಶಿಷ್ಟಾದ್ವೈತದರ್ಶನವೂ ಯೋಗವೂ

ಯೋಗದರ್ಶನದ ಪ್ರವಕ್ತಾರರು ಪತಂಜಲಿಗಳು. ಈ ದರ್ಶನ ಸಾಂಖ್ಯದರ್ಶನದೊಡನೆ ನಿಕಟಸಂಬಂಧ ಹೊಂದಿದೆ. ಸಾಂಖ್ಯದರ್ಶನದಲ್ಲಿ ಹೇಳುವ ಇಪ್ಪತ್ತೈದು ತತ್ತ್ವಗಳ ಜೊತೆಗೆ ಇಪ್ಪತ್ತಾರನೆಯ ತತ್ತ್ವವಾದ ಪರಮಾತ್ಮನನ್ನೂ ಈ ದರ್ಶನ ಒಪ್ಪುತ್ತದೆ. ಕ್ಲೇಶ, ಕರ್ಮ, ವಿಪಾಕ, ಆಶಯಗಳಿಂದ ಅಪರಾಮೃಷ್ಟನಾದವನು ಈಶ್ವರನೆಂದು ಈ ದರ್ಶನ ಹೇಳುತ್ತದೆ. ಸರ್ವಜ್ಞನೂ ಸರ್ವತಂತ್ರನೂ ಆದ ಪರಮಾತ್ಮಸ್ವರೂಪವನ್ನು ಒಪ್ಪುವಂತೆ ಕರ್ತೃತ್ವಭೋಕ್ತೃತ್ವಗಳಿಂದ ಕೂಡಿದ ಅನಂತಾತ್ಮರುಗಳನ್ನು ಈ ದರ್ಶನ

acharya.org

ಅಂಗೀಕರಿಸುತ್ತದೆ. ಯೋಗದರ್ಶನಕ್ಕನುಸಾರ ಈಶ್ವರನು ಜಗತ್ತಿಗೆ ನಿಮಿತ್ತಕಾರಣನಾಗಿದ್ದಾನೆ. ಪ್ರಕೃತಿ ಜಗತ್ತಿಗೆ ಉಪಾದಾನಕಾರಣವೆಂಬುದು ಇವರ ಮತ. ಅವಿದ್ಯಾ, ಕರ್ಮ, ವಾಸನಾ, ರುಚಿ, ಪ್ರಕೃತಿಸಂಬಂಧ ಇವುಗಳಿಂದ ತೊಳಲುವ ಆತ್ಮರುಗಳು ತಮ್ಮ ತಮ್ಮ ಉದ್ಧಾರವನ್ನು ಸಾಧಿಸಿಕೊಂಡು ಮುಕ್ತರಾಗಬೇಕೆಂಬುದು ಇವರಿಗೆ ಸಮ್ಮತ. ಪ್ರಕೃತಿಯು ಬ್ರಹ್ಮಾತ್ಮಕವೆಂದು ಇವರು ಹೇಳುವುದಿಲ್ಲ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳೆಂಬ ಅಷ್ಟಾಂಗ ಯೋಗವನ್ನು ಮೋಕ್ಷೋಪಾಯವೆಂದು ಇವರು ವಿಧಿಸುತ್ತಾರೆ. ಇಲ್ಲಿ ಧ್ಯೇಯವಾದ ವಸ್ತು ಆತ್ಮಸ್ವರೂಪವೇ ಆಗುತ್ತದೆ ಪರಮಾತ್ಮನಾಗುವುದಿಲ್ಲ. ಈ ಅಂಶಗಳು ವಿಶಿಷ್ಟಾದ್ವೈತಕ್ಕೆ ಅಂಗೀಕಾರಾರ್ಹವಲ್ಲ. 'ಈಶ್ವರ ಪ್ರಣಿಧಾನಾದ್ವಾ' ಎಂದು ಯೋಗಸೂತ್ರದಲ್ಲಿ ಈಶ್ವರ ಪ್ರಣಿಧಾನಕ್ಕೆ ಗೌಣಸ್ಥಾನವನ್ನು ಕೊಟ್ಟಿರುವುದೂ ವಿಶಿಷ್ಟಾದ್ವೈತಕ್ಕೆ ಒಪ್ಪಿಗೆಯಿಲ್ಲ. ಈ ಕಾರಣಗಳಿಂದ 'ಸೇಶ್ವರ ಸಾಂಖ್ಯ' ಎಂದು ಕರೆಯಲಾಗುವ ಈ ಯೋಗದರ್ಶನವನ್ನು ಸೂತ್ರಕಾರರು 'ಏತೇನ ಯೋಗಃ ಪ್ರತ್ಯುಕ್ತಃ' ಎಂಬ ಸೂತ್ರದಿಂದ ನಿರಾಕರಿಸಿದ್ದಾರೆ. ಆತ್ಮಸ್ವರೂಪಾವಾಪ್ತಿಯೇ ಪುರುಷಾರ್ಥವಲ್ಲವೆಂದೂ ಭಗವಂತನ ಸಾಯುಜ್ಯವನ್ನು ಪಡೆಯುವುದೂ, ಅವನ ನಿತ್ಯಕೈಂಕರ್ಯದ ಮಹದಾನಂದವನ್ನು ಪಡೆಯುವುದೂ, ಮನುಷ್ಯನ ಬಾಳಿನ ಗುರಿಯಾಗಬೇಕೆಂದೂ ವಿಶಿಷ್ಟಾದ್ವೈತ ಸಾರಿ ಹೇಳುತ್ತದೆ. ಯೋಗದರ್ಶನವ ಅಷ್ಟಾಂಗಯೋಗವನ್ನು ಭಕ್ತಿಯೋಗಕ್ಕೆ ಅಂಗವಾಗಿ ಸ್ವೀಕರಿಸಲಾಗಿದೆ. ಯೋಗಸ್ವರೂಪಕ್ಕೆ ಮಾನ್ಯತೆ ಕೊಟ್ಟು ಆ ದರ್ಶನದವರು ಹೇಳುವ ಈ ಮೇಲಿನ ವಿವರಣೆಗಳನ್ನು ಮಾತ್ರ ನಿರಾಕರಿಸಿದೆ. ಹೀಗೆ ವಿಶಿಷ್ಟಾದ್ವೈತದರ್ಶನಕ್ಕೂ ಯೋಗದರ್ಶನಕ್ಕೂ ವೈಷಮ್ಯವಿದೆ.

ವಿಶಿಷ್ಟಾದ್ವೈತವೂ ನ್ಯಾಯದರ್ಶನವೂ

ಗೌತಮರು ನ್ಯಾಯದರ್ಶನದ ಪ್ರವರ್ತಕರು. ಕಣಾದರು ವೈಶೇಷಿಕದರ್ಶನದ ಪ್ರವಕ್ತಾರರು. ಇವೆರಡು ದರ್ಶನಗಳೂ ಮುಂದೆ ಒಂದಾಗಿ ಬೆರೆತು ನ್ಯಾಯವೈಶೇಷಿಕವೆಂಬ ಹೆಸರು ಪಡೆಯಿತು. ಗೌತಮರು ಪದಾರ್ಥಗಳು ಹದಿನಾರೆಂದು ನಿರೂಪಿಸಿ ಅವುಗಳ ತತ್ತ್ವಜ್ಞಾನದಿಂದ ನಿಃಶ್ರೇಯಸ್ಸು ಲಭಿಸುವುದೆಂದು ಪ್ರತಿಪಾದಿಸಿದ್ದಾರೆ. ವೈಶೇಷಿಕರು ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ, ಅಭಾವ ಎಂಬ ಪದಾರ್ಥಗಳನ್ನು ಅಂಗೀಕರಿಸಿದ್ದಾರೆ. ಭಾವಪದಾರ್ಥಗಳು ಆರು, ಅಭಾವ ಪದಾರ್ಥ ಒಂದು ಸೇರಿ ಏಳು ಪದಾರ್ಥಗಳಾಗಿವೆ ಇವು. ಇವುಗಳಲ್ಲಿ ದ್ರವ್ಯಗಳು ಒಂಭತ್ತೆಂದು ಇವರ ಮತ. ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಕಾಲ, ದಿಕ್ಕು, ಆತ್ಮಾ ಮತ್ತು ಮನಸ್ಸು ಎಂಬುವೇ ಒಂಭತ್ತು ದ್ರವ್ಯಗಳು. ಆತ್ಮಾ ಎಂಬುದು ಜೀವಾತ್ಮಾ ಮತ್ತು

acharya.org

ಪರಮಾತ್ಮಾ ಎಂದು ಎರಡು ಬಗೆ ಎಂದು ಹೇಳುತ್ತಾರೆ. ಇವರ ಮತದಂತೆ ಜೀವನೂ ವಿಭು. ಪರಮಾತ್ಮನನ್ನು ನಿತ್ಯನೆಂದೂ, ಅವನಿಗೂ ಜ್ಞಾನ ಚಿಕೀರ್ಷಾ ಪ್ರಯತ್ನಗಳಿವೆ ಎಂದೂ ಹೇಳುತ್ತಾರೆ. ಪಂಚಭೂತಗಳು ಪರಮಾಣುರೂಪದಲ್ಲಿ ನಿತ್ಯವಾದವು ಎಂಬುದು ಇವರ ಸಿದ್ಧಾಂತ. ಪರಮಾಣುಕಾರಣವಾದ ಇವರದು. ಜೀವರ ಅದೃಷ್ಟ, ಪರಮಾಣು ಗತವಾದ ಅದೃಷ್ಟಕ್ಕನುಸಾರ ಈಶ್ವರಸಂಕಲ್ಪದಂತೆ ಈ ಪರಮಾಣುಗಳು ಒಂದರೊಡನೊಂದು ಸೇರುತ್ತವೆ ಎಂದು ಇವರು ಪ್ರತಿಪಾದಿಸುತ್ತಾರೆ. ಇವರು ಆರಂಭವಾದವನ್ನು ಹೇಳುವವರು. ಉತ್ಪನ್ನವಾದ ಪದಾರ್ಥ ಆ ಅವಯವಗಳಿಗಿಂತ ಬೇರೆಯಾದುದೆಂಬುದು ಇವರ ವಾದ. ಇವರ ಸಿದ್ಧಾಂತದಂತೆ ಈಶ್ವರ ಸೃಷ್ಟಿಪ್ರಳಯಗಳಿಗೆ ನಿಮಿತ್ತಕಾರಣನು. ಈಶ್ವರನನ್ನು ಅನುಮಾನದಿಂದ ಇವರು ಸ್ಥಾಪಿಸಿದ್ದಾರೆ. ಅನುಮಾನಸಿದ್ಧವಾದ ಈ ಅಂಶವನ್ನು ಶ್ರುತಿ ಸಮರ್ಥಿಸಿದೆ. ಇವರ ದೃಷ್ಟಿಯಲ್ಲಿ ವೇದ ಪೌರುಷೇಯ ಎಂದರೆ ಆಪ್ತತಮ ಪರಮಪುರುಷನಿಂದ ಪ್ರಣೀತವಾದುದು. ಆದುದರಿಂದಲೇ 'ಮಂತ್ರಾಯುರ್ವೇದವತ್' ಅದಕ್ಕೆ ಪ್ರಾಮಾಣ್ಯವುಂಟು.

ತಾರ್ಕಿಕರು ಜಗತ್ಸತ್ಯತ್ವವಾದಿಗಳು. ಅನಂತರಾದ ಜೀವರುಗಳನ್ನು ಇವರು ಒಪ್ಪುತ್ತಾರೆ. ಈಶ್ವರನನ್ನೂ ಒಪ್ಪುತ್ತಾರೆ. ಕರ್ಮ, ಪುನರ್ಜನ್ಮ ಮೊದಲಾದವನ್ನೂ ಧರ್ಮಾಧರ್ಮಗಳನ್ನೂ ಒಪ್ಪುತ್ತಾರೆ. ಆತ್ಯಂತಿಕ ದುಃಖನಿವೃತ್ತಿ ಮೋಕ್ಷವೆಂದೂ ಅದನ್ನು ಪಡೆಯುವುದು ಪುರುಷಾರ್ಥವಾಗಬೇಕೆಂದೂ ಉಪದೇಶಿಸಿದ್ದಾರೆ. ಜೀವನು ಸ್ವಭಾವತಃ ಜಡನೆಂಬುದು ಇವರ ಮತ. ಮನಸ್ಸಿನೊಡನೆ ಕೂಡಿದಾಗ ಚೈತನ್ಯವುಂಟಾಗುವುದೆಂದೂ ಲೋಕವ್ಯಾಪಾರದಲ್ಲಿ ತೊಡಗಿ ಸುಖದುಃಖಾದಿಗಳನ್ನನುಭವಿಸುವನೆಂದೂ ಇವರು ಹೇಳುತ್ತಾರೆ.

ದುಃಖನಿವೃತ್ತಿ ಮೋಕ್ಷವೆಂದು ಇವರು ಹೇಳುವುದರಿಂದ ಅದು ಸ್ವಭಾವವಾದ ಜಡಸ್ಥಿತಿ ಎಂದು ತಿಳಿಯಬೇಕಾಗಿದೆ. ಪದಾರ್ಥತತ್ತ್ವಜ್ಞಾನದಿಂದ ಭ್ರಾಂತಿ ಹೋಗಿ ಜೀವನಿಗೆ ಮೋಕ್ಷ ದೊರಕುವುದು ಎಂದು ಇವರ ಸಿದ್ಧಾಂತ.

ಈ ಸಿದ್ಧಾಂತಕ್ಕೂ ವಿಶಿಷ್ಟಾದ್ವೈತಕ್ಕೂ ಬಹಳ ವ್ಯತ್ಯಾಸವಿದೆ. ವಿಶಿಷ್ಟಾದ್ವೈತ ರೀತ್ಯಾ ಜೀವರುಗಳೆಲ್ಲರೂ ಜ್ಞಾನಸ್ವರೂಪಿಗಳಾಗಿ ಜ್ಞಾನಗುಣಕರಾಗಿದ್ದಾರೆ. ಮನಸ್ಸು ಅನಿತ್ಯಪದಾರ್ಥವಾಗಿರುತ್ತದೆ. ನಯ್ಯಾಯಿಕರು ಹೇಳುವ ಪರಮಾಣುಕಾರಣವಾದವನ್ನು ವಿಶಿಷ್ಟಾದ್ವೈತ ಒಪ್ಪುವುದಿಲ್ಲ. 'ಮಹದ್ದೀರ್ಘವದ್ವಾ ಹ್ರಸ್ವಪರಿಮಂಡಲಾಭ್ಯಾಮ್' ಎಂಬ ಸೂತ್ರದಲ್ಲಿ ಪರಮಾಣುಕಾರಣವಾದವನ್ನು ಸೂತ್ರಕಾರರು ಖಂಡಿಸಿದ್ದಾರೆ. ಪರಮಾಣುದ್ವಯಸಂಯೋಗದಿಂದ ದ್ವ್ಯಣುಕ, ತ್ರ್ಯಣುಕ, ಮುಂತಾದವು ಆಗುವುವು ಎಂಬುದು ವಿಶಿಷ್ಟಾದ್ವೈತಕ್ಕೆ ಅಸಮಂಜಸವಾದ ವಾದ. ಪರಮಾಣುಗಳಲ್ಲಿ ಪ್ರದೇಶಭೇದವಿಲ್ಲವೆಂದೇ ಹೇಳಿರುವ ಕಾರಣ ಪರಮಾಣುಗಳ ಸಂಯೋಗವಾದರೂ

acharya.org

ಮಹತ್ವ, ದೀರ್ಘತ್ವ, ಹ್ರಸ್ವತ್ವ, ಮೊದಲಾದವು ಉಂಟಾಗಲಾರವು. ಪರಮಾಣುಗತವಾದ ಆದ್ಯಕರ್ಮ ಅದೃಷ್ಟದಿಂದಾದುದೆಂದು ಹೇಳುವ ಇವರ ವಾದವನ್ನು ವಿಶಿಷ್ಟಾದ್ವೈತ ನಿರಾಕರಿಸುತ್ತದೆ. ಜೀವರು ಮಾಡಿದ ಪುಣ್ಯಪಾಪದಿಂದ ಅದೃಷ್ಟ ಪರಮಾಣುಗಳಲ್ಲಿ ಫಲಿಸುವುದೆಂದು ಹೇಳುವುದಕ್ಕಾಗುವುದಿಲ್ಲ. ಹಾಗೆಯೇ ಇವರು ಹೇಳುವ ಸಮವಾಯಸಂಬಂಧವೂ ಸಮಂಜಸವಾದುದಲ್ಲವೆಂದು ವಿಶಿಷ್ಟಾದ್ವೈತದ ಮತ. ಇವರು ಕಲ್ಪಿಸಿರುವ ಅದೃಷ್ಟವೆಂಬುದನ್ನು ವಿಶಿಷ್ಟಾದ್ವೈತ ಒಪ್ಪದು. ಜೀವನು ಅಣುವೆಂಬುದು ಶ್ರುತಿಸಿದ್ಧವಾಗಿರುವಾಗ ಅವನು ವಿಭುವೆನ್ನುವ ವಾದವನ್ನೂ ಅಂಗೀಕರಿಸುವುದಿಲ್ಲ ಈ ದರ್ಶನ. ಜಗತ್ತು, ಈಶ್ವರ, ಜೀವ, ಕರ್ಮ ಇವರುಗಳನ್ನು ಈ ದರ್ಶನ ಒಪ್ಪಿದರೂ ಅವುಗಳ ಸ್ವರೂಪನಿರೂಪಣೆಯನ್ನು ಯಥಾವತ್ತಾಗಿ ಶ್ರುತಿಯ ನಿರೂಪಣೆಗನುಸಾರ ಮಾಡಿಲ್ಲ. ತತ್ತ್ವಜ್ಞಾನದಿಂದ ನಿಃಶ್ರೇಯಸ್ಸು ಎಂದು ಹೇಳಿರುವುದೂ ಯುಕ್ತವಲ್ಲ. ಈಶ್ವರನ ಅನುಗ್ರಹದಿಂದ ಮೋಕ್ಷವೆಂದು ಹೇಳುವುದು ಯುಕ್ತವಾಗಿರುವಾಗ ಈಶ್ವರನನ್ನು ಒಪ್ಪಿದರೂ ಅವನಿಗೆ ಯುಕ್ತವಾದ ಸ್ಥಾನವನ್ನಿವರು ಕೊಟ್ಟಿಲ್ಲ. ಆ ಕಾರಣವೇ ಇವರಿಗೆ ನಿರನುಗ್ರಹೇಶ್ವರವಾದಿಗಳೆಂದು ಹೆಸರು ಕೊಡಲಾಗಿದೆ. ಮೋಕ್ಷಸ್ವರೂಪನಿರೂಪಣೆಯಲ್ಲಿಯೂ ಇವರಿಗೂ ವಿಶಿಷ್ಟಾದ್ವೈತಕ್ಕೂ ಬಹಳ ವ್ಯತ್ಯಾಸವಿದೆ. ಮೋಕ್ಷವೆಂಬುದು ಕೇವಲ ದುಃಖನಿವೃತ್ತಿಯಲ್ಲ. ಆದರೆ ಪರಮಾನಂದದ ಪ್ರಾಪ್ತಿ. ಪಾಷಾಣಕಲ್ಪವೆಂದು ಹೇಳುವ ಜಡಸ್ವರೂಪದ ಪ್ರಾಪ್ತಿಯನ್ನು ಮೋಕ್ಷವೆಂದು ವಿಶಿಷ್ಟಾದ್ವೈತ ಹೇಳದು. ಭಗವಂತನ ದಿವ್ಯಾನುಭವದ ಪರಮಾನಂದವು ಮೋಕ್ಷದ ಫಲ. ನೈಯ್ಯಾಯಿಕರು ಕರ್ಮಕ್ಕೆ ಅತಿ ಹೆಚ್ಚಿನ ಸ್ಥಾನ ಕೊಟ್ಟಿದ್ದಾರೆ. ಇದೂ ಯುಕ್ತವಲ್ಲವೆಂಬುದು ವಿಶಿಷ್ಟಾದ್ವೈತದ ನೆಲೆ. ಭಗವಂತನು ಜಗತ್ತಿಗೆ ನಿಮಿತ್ತಕಾರಣನಾಗಿರುವುದಲ್ಲದೆ ಉಪಾದಾನಕಾರಣವೂ ಆಗಿದ್ದಾನೆಂಬುದನ್ನು ಶ್ರುತಿಗಳು ಸಾರುತ್ತಿವೆ. ಆದುದರಿಂದ ಜಗತ್ತಿಗೆ ಈಶ್ವರ ಕೇವಲ ನಿಮಿತ್ತಕಾರಣನೆಂದು ಇವರು ಹೇಳುವುದನ್ನು ವಿಶಿಷ್ಟಾದ್ವೈತ ನಿರಾಕರಿಸುತ್ತದೆ. ಈಶ್ವರವಾದವನ್ನು ನ್ಯಾಯವೈಶೇಷಿಕದರ್ಶನ ಪ್ರತಿಪಾದಿಸಿದರೂ ಅದು ಮಾಡುವ ಪ್ರಮೇಯನಿರೂಪಣೆ ವೇದಗಳ ತಾತ್ಪರ್ಯಕ್ಕೆ ವಿರುದ್ಧವಾಗಿದೆಯೆಂದು ವಿಶಿಷ್ಟಾದ್ವೈತ ಸಾಧಿಸಿದೆ. ಚೇತನ ಮತ್ತು ಅಚೇತನಗಳು ನಿತ್ಯತತ್ತ್ವಗಳಾಗಿ ಈಶ್ವರನಿಗೆ ಪ್ರಕಾರಗಳಾಗಿವೆ ಎಂಬ ಅಸಾಧಾರಣವಾದ ಸಿದ್ಧಾಂತ ವಿಶಿಷ್ಟಾದ್ವೈತದ ತಿರುಳು. ಹೀಗೆ ಈ ಎರಡು ದರ್ಶನಗಳಲ್ಲಿ ವ್ಯತ್ಯಾಸವಿದೆ.

ವಿಶಿಷ್ಟಾದ್ವೈತವೂ ಪೂರ್ವಮೀಮಾಂಸೆಯೂ

ಪೂರ್ವಮೀಮಾಂಸಾದರ್ಶನದ ಪ್ರವರ್ತಕರು ಜೈಮಿನಿಗಳು. ಇದು ವೇದಾರ್ಥವನ್ನು ವಿಚಾರಿಸುವ ಶಾಸ್ತ್ರ. ಧರ್ಮಜಿಜ್ಞಾಸೆಯನ್ನು ಈ ಶಾಸ್ತ್ರ ಮಾಡುತ್ತದೆ. ಇವರು

acharya.org

ವೇದಪ್ರಾಮಾಣ್ಯವನ್ನು ಅಂಗೀಕರಿಸುತ್ತಾರೆ. ವೇದಪ್ರಾಮಾಣ್ಯವನ್ನು ಸ್ಥಾಪಿಸಿದರೇನೇ ಧರ್ಮನಿರೂಪಣೆಯಾಗುವುದು ಎಂಬ ಭಾವನೆಯ ಕಾರಣ ಇಲ್ಲಿ ವೇದಪ್ರಾಮಾಣ್ಯಕ್ಕೆ ಪ್ರಾಧಾನ್ಯ ಕೊಟ್ಟಿದೆ. ಇದು ಆಸ್ತಿಕ ಮತ; ಮೋಕ್ಷವನ್ನು ಪುರುಷಾರ್ಥವೆಂದು ನಂಬಿರುವ ದರ್ಶನ. ಜೀವರುಗಳು ಅನೇಕರೆಂದು ಇವರು ಸ್ಥಾಪಿಸಿದ್ದಾರೆ. ಜಗತ್ಸತ್ಯತ್ವವನ್ನೂ ಪಾರಲೌಕಿಕವನ್ನೂ ಇವರು ನಂಬುತ್ತಾರೆ. ದೇಹೇಂದ್ರಿಯಗಳಿಗಿಂತ ಅತಿರಿಕ್ತನಾದ ಆತ್ಮನಿದ್ದಾನೆಂದು ನಂಬುವ ಇವರು ಮೋಕ್ಷಸಾಧನೆಯ ಆವಶ್ಯಕತೆಯನ್ನು ಒತ್ತಿ ಹೇಳುತ್ತಾರೆ. ಮೀಮಾಂಸಕರು ಕರ್ಮಕ್ಕೆ ಪರಮಪ್ರಾಧಾನ್ಯ ಕೊಟ್ಟಿದ್ದಾರೆ; ಈಶ್ವರನನ್ನು ನಿರಾಕರಣೆ ಮಾಡಿದ್ದಾರೆ. ಗೃಹಸ್ಥಾಶ್ರಮಕ್ಕೆ ಇವರು ಪ್ರಾಧಾನ್ಯ ಕೊಟ್ಟಿದ್ದಾರೆ. ಗೃಹಸ್ಥಾಶ್ರಮದಲ್ಲಿದ್ದುಕೊಂಡೇ ಯಾಗಾದಿಕರ್ಮಗಳನ್ನು ಮಾಡಿ ಜ್ಞಾನವನ್ನು ಸಂಪಾದಿಸಿ ಮೋಕ್ಷವನ್ನು ಸಂಪಾದಿಸಬೇಕೆಂದು ಇವರ ಅಭಿಪ್ರಾಯ.

ಆತ್ಮವಸ್ತುಗಳು ಸರ್ವವ್ಯಾಪಕಗಳೆಂದೂ ಇಂಥ ಆತ್ಮರುಗಳಿಗೆ ಶರೀರಸಂಯೋಗ ವಿಯೋಗಗಳೇ ಜನನ ಮರಣಗಳೆಂದೂ ಹೇಳಲಾಗಿದೆ. ಆತ್ಮರುಗಳಿಗೆ ಸರ್ವವಿಧ ಸೌಖ್ಯವನ್ನೂ ಸರ್ವೈಶ್ವರ್ಯವನ್ನೂ ಸರ್ವಶಕ್ತಿಯನ್ನೂ ಹೊಂದುವ ಯೋಗ್ಯತೆ ಇದೆಯೆಂದೂ, ಪಾಪವೆಂಬ ಪ್ರತಿಬಂಧಕ ಅದಕ್ಕೆ ಅಡ್ಡಿಯಾಗಿದೆಯೆಂದೂ ಇವರು ಹೇಳುತ್ತಾರೆ. ಆತ್ಮವಸ್ತು ಸ್ವಸಂವೇದ್ಯ ಮತ್ತು ಸ್ವಪ್ರಕಾಶ. ದೇಹಾತಿರಿಕ್ತ ಆತ್ಮಜ್ಞಾನವು ಯಾಗಾದಿ ಕರ್ಮಗಳಿಗೆ ಉಪಯೋಗವಾಗುತ್ತದೆ. ಕಾಮ್ಯಕರ್ಮಗಳನ್ನು ಮಾಡದೆ ಇರಬೇಕು. ನಿತ್ಯನೈಮಿತ್ತಿಕ ಕರ್ಮಗಳನ್ನು ಮಾಡಬೇಕು. ಹಿಂದೆ ಮಾಡಿದ ಕರ್ಮಗಳ ಫಲವನ್ನನು ಭವಿಸಿ ಅದನ್ನು ನಾಶಪಡಿಸಬೇಕು. ಆಗ ಶರೀರೇಂದ್ರಿಯಸಂಬಂಧ ನಿವೃತ್ತಿಯಾಗುತ್ತದೆ. ಕರ್ಮವಿಲ್ಲದ ಕಾರಣ ಜನ್ಮವೂ ಇರುವುದಿಲ್ಲ. ಆಗ ಆತ್ಮನು ಸ್ವಸ್ವರೂಪಸ್ಥಿತಿಯಲ್ಲಿ ನಿಂತು ಬಿಡುವನು. ಈ ಸಿದ್ಧಾಂತದಲ್ಲಿ ಹೇಳುವ ಮೋಕ್ಷ ತಾರ್ಕಿಕರ ಸಿದ್ಧಾಂತವನ್ನನುಸರಿಸಿದೆ. ಇವರ ಸಿದ್ಧಾಂತದಲ್ಲಿ ಈ ಪ್ರಪಂಚಕ್ಕೆ ಸೃಷ್ಟಿಪ್ರಳಯಗಳಿಲ್ಲ. ಪ್ರಪಂಚವು ಇಂದು ಇರುವಂತೆ ಹಿಂದೆಯೂ ಇತ್ತು. ಮನುಷ್ಯನು ಮಾಡುವ ಕರ್ಮಗಳಿಂದಲೇ ಲೋಕದ ಕಾರ್ಯ ನಿರ್ವಾಹವಾಗುವುದೆಂಬುದು ಇವರ ಮತ. ಹೀಗೆ ಇವರ ಅಭಿಪ್ರಾಯದಲ್ಲಿ ಆತ್ಮರುಗಳ ನಿತ್ಯತ್ವ ಅನಂತತ್ವಗಳೂ, ಜಗತ್ಸತ್ಯತ್ವವೂ, ಕರ್ಮದ ಪ್ರಭಾವವೂ, ಕರ್ಮನಾಶದಿಂದ ಮೋಕ್ಷಪ್ರಾಪ್ತಿಯೂ ವಿವರಿಸಲ್ಪಟ್ಟಿವೆ.

ಈ ಸಿದ್ಧಾಂತಕ್ಕೂ ವಿಶಿಷ್ಟಾದ್ವೈತಕ್ಕೂ ಬಹಳ ವ್ಯತ್ಯಾಸವಿದೆ. ಬ್ರಹ್ಮಸೂತ್ರಗಳಲ್ಲಿ ಮೊದಲ ಸೂತ್ರದಲ್ಲಿಯೇ ಕರ್ಮವಿಚಾರಾನಂತರ ಬ್ರಹ್ಮವಿಚಾರ ಮಾಡಬೇಕೆಂದು ಹೇಳಿದೆ. ಕರ್ಮದಿಂದ ಬರುವ ಫಲ ಅನಿತ್ಯವೂ ಅಲ್ಪವೂ ಆದ ಕಾರಣ ಸ್ಥಿರವೂ ಅನಂತವೂ ಆದ ಫಲವನ್ನು ಪಡೆಯಲು ಬ್ರಹ್ಮವಿಚಾರ ಮಾಡಬೇಕೆಂದು ಮೊದಲ ಸೂತ್ರ ವಿಧಿಸುತ್ತದೆ. ಮೀಮಾಂಸಾಶಾಸ್ತ್ರಪ್ರವರ್ತಕರಾದ ಜೈಮಿನಿಗಳ ಅಭಿಪ್ರಾಯವನ್ನು ಬಾದ

acharya.org

ರಾಯಣರು ಅನೇಕ ಕಡೆ ಉದಾಹರಿಸಿದ್ದಾರೆ. ವೇದಪ್ರಾಮಾಣ್ಯಸ್ಥಾಪನೆಗಾಗಿ ಮೀಮಾಂಸಕರು ಈಶ್ವರನಿರಾಕರಣೆ ಮಾಡಿದ್ದಾರೆಂದೂ ವೇದಪ್ರಾಮಾಣ್ಯ ಸಿದ್ಧಿಸಿತೆಂದರೆ ಈಶ್ವರನೂ ಸಿದ್ಧಿಸುವನೆಂದೂ ವೇದಾಂತಿಗಳು ಹೇಳುತ್ತಾರೆ. ವೇದಭಾಗ ಕರ್ಮಕಾಂಡ ಮತ್ತು ಬ್ರಹ್ಮಕಾಂಡವೆಂದು ಎರಡು ಭಾಗವೆಂದೂ ಇವೆರಡೂ ಸೇರಿ ಒಂದೇ ಶಾಸ್ತ್ರವೆಂದೂ ರಾಮಾನುಜರು ಸ್ಥಾಪಿಸಿ 'ಏಕಶಾಸ್ತ್ರಸಮರ್ಥನೆ'ಯನ್ನು ಮಾಡಿದ್ದಾರೆ. ಇವು ಪೂರ್ವೋತ್ತರಭಾಗಗಳೆಂದೂ ಪೂರ್ವಭಾಗದಲ್ಲಿ ಭಗವದಾರಾಧನರೂಪವಾದ ಕರ್ಮವಿಚಾರವಿದೆಯೆಂದೂ ಆ ಕರ್ಮಗಳಿಂದ ಆರಾಧಿಸಲ್ಪಡುವ ಈಶ್ವರನ ವಿಚಾರವನ್ನು ಉತ್ತರಕಾಂಡವಾದ ಬ್ರಹ್ಮಕಾಂಡದಲ್ಲಿ ಕಾಣಬಹುದೆಂದೂ ವಿಶಿಷ್ಟಾದ್ವೈತ ಸಾಧಿಸುತ್ತದೆ. ಕ್ಷಣಿಕವಾದ ಕರ್ಮ ಅಚೇತನವಾಗಿ ಫಲಪ್ರದಾನ ಮಾಡಲಾರದೆಂದೂ ಆ ಕರ್ಮಗಳಿಂದ ತುಷ್ಟನಾದ ಈಶ್ವರನು ಫಲಪ್ರದಾನ ಮಾಡುವನೆಂದೂ ವಿಶಿಷ್ಟಾದ್ವೈತ ನಿರೂಪಿಸುತ್ತದೆ. ಜೀವರು ಅನಂತರು ಮತ್ತು ನಿತ್ಯರು ಎಂಬ ಅಂಶ ವಿಶಿಷ್ಟಾದ್ವೈತಕ್ಕೆ ಒಪ್ಪಿಗೆ. ಜಗತ್ತು ಮಾಯೆಯಾಗಿರದೆ ಸತ್ಯವಾಗಿದೆಯೆಂಬುದೂ ಒಪ್ಪಿಗೆ. ಆದರೆ ಕೇವಲ ಕರ್ಮಗಳ ಅನುಷ್ಠಾನದಿಂದಲೇ ಮೋಕ್ಷವೆಂಬುದನ್ನು ಈ ದರ್ಶನ ಒಪ್ಪುವುದಿಲ್ಲ. ಕಾಮ್ಯಕರ್ಮಗಳನ್ನು ವರ್ಜಿಸಿ ಅಥವಾ ಭಗವದಾರಾಧನರೂಪವಾಗಿ ಅವುಗಳ ಫಲದಲ್ಲಿ ಆಶೆಯಿಲ್ಲದೆ ಮಾಡಬೇಕೆಂದೂ ನಿತ್ಯನೈಮಿತ್ತಿಕ ಕರ್ಮಗಳನ್ನು ಅನುಷ್ಠಿಸಬೇಕೆಂದೂ ವಿಶಿಷ್ಟಾದ್ವೈತ ಹೇಳುತ್ತದೆ. ಇಷ್ಟು ಮಾತ್ರವೇ ಸಾಧನೆಯಲ್ಲ. ಇದು ಸಾಧನೆಗೆ ಅತ್ಯವಶ್ಯಕವಾದ ಸಹಕಾರಿಯೆಂದೂ ಆದರೆ ಮೋಕ್ಷಕ್ಕೆ ನೇರವಾದ ಉಪಾಯ ಭಕ್ತಿ ಪ್ರಪತ್ತಿಗಳೆಂದೂ ಸಮರ್ಥಿಸಲಾಗಿದೆ. ಆತ್ಮನು ಸ್ವಸ್ವರೂಪದಲ್ಲಿರುವುದೇ ಮೋಕ್ಷವಲ್ಲ. ಅಷ್ಟಗುಣಾವಿರ್ಭಾವಪೂರ್ವಕವಾದ ಭಗವತ್ಪ್ರಾಪ್ತಿ ಅಥವಾ ಸಾಯುಜ್ಯವು ಮೋಕ್ಷವೆಂದು ಈ ಸಿದ್ಧಾಂತದ ಮತ. ಹೀಗೆ ಇವೆರಡು ದರ್ಶನಗಳಿಗೂ ವೈಲಕ್ಷಣ್ಯವಿದೆ.

ಅದ್ವೈತವೂ ವಿಶಿಷ್ಟಾದ್ವೈತವೂ

ವೇದಾಂತದರ್ಶನಕ್ಕೆ ಪ್ರಸ್ಥಾನತ್ರಯ ಆಧಾರ. ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳು ಪ್ರಸ್ಥಾನತ್ರಯಗಳು. ಉಪನಿಷತ್ತುಗಳಲ್ಲಿ ಭೇದವಾಕ್ಯಗಳು, ಅಭೇದವಾಕ್ಯಗಳು ಮತ್ತು ಘಟಕಶ್ರುತಿಗಳು ಎಂಬ ಮೂರು ಬಗೆಯ ಶ್ರುತಿಗಳಿವೆ. ಅದ್ವೈತದರ್ಶನ ಅಭೇದಶ್ರುತಿಗೆ ಪ್ರಾಧಾನ್ಯಕೊಡುತ್ತದೆ. ಇದಕ್ಕನುಸಾರವಾಗಿ ಬ್ರಹ್ಮವಸ್ತುವೊಂದೇ ಸತ್ಯ. ಉಳಿದುದೆಲ್ಲ ಮಿಥ್ಯೆ. ಈ ಸಿದ್ಧಾಂತ ಬೌದ್ಧಸಿದ್ಧಾಂತಕ್ಕೆ ಪ್ರತಿಪಕ್ಷವಾಗಿದೆ. ಇದು ಆತ್ಮನನ್ನು ಸಾಧಿಸುವ ದರ್ಶನ. ಆತ್ಮರುಗಳು ಒಂದು, ಜೀವನೇ ಬ್ರಹ್ಮ ಎಂಬುದು ಇದರ ತಿರುಳು. ಜೀವಬ್ರಹ್ಮೈಕ್ಯವಾದ ಇದು. 'ತತ್ತ್ವಮಸಿ' 'ಅಯಮಾತ್ಮಾ ಬ್ರಹ್ಮ' ಎಂಬುವ ಶ್ರುತಿಗಳು ಇದಕ್ಕೆ ಪರಮಾಧಾರವಾಗಿವೆ. ಇದರಿಂದ

acharya.org

ಜಗತ್ತು ಕೇವಲ ತೋರಿಕೆಯೇ ವಿನಾ ನಿಜವಲ್ಲವೆಂಬುದು ಇದರ ನಿಶ್ಚಯ. ಬೌದ್ಧರು ಹೇಗೆ ಲೋಕಕ್ಕೆ ಸಾಂವೃತಸತ್ಯತ್ವವನ್ನು ಹೇಳುವರೋ ಹಾಗೆ ಅದ್ವೈತದರ್ಶನ ಲೋಕಕ್ಕೆ ವ್ಯಾವಹಾರಿಕ ಸತ್ಯತ್ವವನ್ನು ಹೇಳುತ್ತದೆ. . ವ್ಯವಹಾರಮಾರ್ಗ, ವಿಚಾರ ಮಾರ್ಗ ಮತ್ತು ವಿಜ್ಞಾನಮಾರ್ಗ ಎಂಬ ಮೂರು ಮಾರ್ಗಗಳು ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ ಎಂಬ ಮೂರು ವಿಧವಾದ ಅವಸ್ಥೆಗಳಿಗೆ ಅನ್ವಯಿಸುವುದಾಗಿದೆ. ಇತರರು ಅಂಗೀಕರಿಸಿರುವಂತೆ ಕಾರ್ಯಕಾರಣಭಾವ, ಪುಣ್ಯಪಾಪವ್ಯವಸ್ಥೆ, ಸುಖ ದುಃಖಾದಿಗಳು ಮೊದಲಾದವೆಲ್ಲವನ್ನೂ ವ್ಯವಹಾರಾವಸ್ಥೆಯಲ್ಲಿ ಅಂಗೀಕರಿಸಿದ್ದಾರೆ. ಚಿತ್ತಶುದ್ಧಿ, ವಿವೇಕ ವೈರಾಗ್ಯಗಳುಂಟಾದಾಗ ವಿಚಾರಾವಸ್ಥೆಗೆ ಅರ್ಹತೆ ಬರುತ್ತದೆ. ಈ ಅವಸ್ಥೆಯಲ್ಲಿ ಮೊದಲು ಹೇಳಿದುದೆಲ್ಲ ದುರ್ನಿರೂಪವೆಂದೂ ಅನಿರ್ವಚನೀಯವೆಂದೂ ಸ್ವಾಪ್ನಪ್ರಪಂಚದಂತೆ ವಿನಶ್ವರವೆಂದೂ ಗೊತ್ತಾಗುತ್ತದೆ. ಇದು ವಿವರ್ತಮಾರ್ಗ-ಮುಂದಿನ ಸೋಪಾನ ವಿಚಾರಮಾರ್ಗ. ಇಲ್ಲಿ ಆತ್ಮವ್ಯತಿರಿಕ್ತವಾದ ಸರ್ವವನ್ನೂ ಪ್ರತಿಷೇಧಮಾಡಲಾಗುತ್ತದೆ. 'ನೇತಿ ನೇತಿ' ಎಂಬ ಶ್ರುತಿಗನುಸಾರ ಬ್ರಹ್ಮವಸ್ತು ವೊಂದನ್ನುಳಿದು ಮಿಕ್ಕುದನ್ನೆಲ್ಲಾ ನಿಷೇಧಿಸುವ ಅವಸ್ಥೆ ಇದು.

ಈ ಸಿದ್ಧಾಂತ 'ವ್ಯವಹಾರೇ ಭಾಟ್ಟನಯಃ' ಎಂದು ಹೇಳಿರುವಂತೆ ವ್ಯಾವಹಾರಿಕ ದೆಶೆಯಲ್ಲಿ ಜೀವ, ಈಶ್ವರ, ಪ್ರಕೃತಿ, ಕರ್ಮ, ಜ್ಞಾನ, ಪುನರ್ಜನ್ಮ ಮೊದಲಾದವನ್ನೆಲ್ಲಾ ಅಂಗೀಕರಿಸುತ್ತದೆ. ಭೂತ ಭೌತಿಕಗಳನ್ನೂ ಪಂಚಕೋಶಗಳನ್ನೂ ಪ್ರಲಯವನ್ನೂ ಇವರು ಒಪ್ಪಿದ್ದಾರೆ.

ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ ಮತ್ತು ಅನುಪಲಬ್ಧಿ ಎಂಬ ಆರು ಪ್ರಮಾಣಗಳನ್ನು ಇವರು ಅಂಗೀಕರಿಸಿದ್ದಾರೆ. ಚೈತನ್ಯಸ್ವರೂಪನಾದ ಪರ ಬ್ರಹ್ಮನು ಅವಿದ್ಯಾವಿಶಿಷ್ಟನಾದಾಗ ಅಪರಬ್ರಹ್ಮ ಅಥವಾ ಈಶ್ವರನೆನಿಸುತ್ತಾನೆ. ಮೂಲಾವಿದ್ಯೆ ಮತ್ತು ತೂಲಾವಿದ್ಯೆ ಎಂದು ಅವಿದ್ಯೆ ಎರಡು ಬಗೆ. ಈ ಪ್ರಪಂಚಕ್ಕೆ ಮೂಲಕಾರಣವಾದ ಮಾಯೆ ಮೂಲಾವಿದ್ಯೆ. ಆ ಮೂಲಾವಿದ್ಯೆಯ ಅನಂತಶಕ್ತಿಗಳು ಎಲ್ಲ ಜೀವರುಗಳ ಅವಿದ್ಯೆಯಾಗಿ ಇರುವುವು. ಇದು ತೂಲಾವಿದ್ಯೆ. ಮಾಯಾವಿಶಿಷ್ಟ ನಾದ ಈಶ್ವರನು ಜಗತ್ಕಾರಣನೆನ್ನಲಾಗಿದೆ- ಈಶ್ವರನು ಜಗತ್ತಿಗೆ ನಿಮಿತ್ತಕಾರಣನೂ ಹೌದು ಉಪಾದಾನಕಾರಣನೂ ಹೌದು. ಮಾಯೆಯಿಂದ ಕೂಡಿರುವುದರಿಂದ ಉಪಾ ದಾನಕಾರಣ. ಚೈತನ್ಯಪ್ರಾಧಾನ್ಯದ ಕಾರಣ ನಿಮಿತ್ತಕಾರಣ.

ಈ ದರ್ಶನದಲ್ಲಿ ಪ್ರಪಂಚ ಅನಿರ್ವಚನೀಯವೆಂಬುದು ಮುಖ್ಯವಾದ ಒಂದು ಅಂಶ. ಇತರರೆಂದಂತೆ ಇವರು ಪರಿಣಾಮವಾದವನ್ನಾಗಲೀ, ಆರಂಭವಾದವನ್ನಾಗಲೀ ಹೇಳುವುದಿಲ್ಲ. ಜಗತ್ತು ಬ್ರಹ್ಮನಲ್ಲಿ ಅಧ್ಯಸ್ತವಾಗಿದೆ ಎಂಬುದು ಇವರ ಸಿದ್ಧಾಂತ. ತನ್ನ ಸ್ವರೂಪಕ್ಕೆ ಹಾನಿಯಿಲ್ಲದಂತೆ ಮತ್ತೊಂದು ವಸ್ತುವಿನ ಹಾಗೆ ಕಾಣುವುದು ವಿವರ್ತ

acharya.org

ಅಥವಾ ಅಧ್ಯಾಸವೆನ್ನಿಸುವುದು. ಹಗ್ಗದಲ್ಲಿ ಹಾವು ತೋರುವಂತೆ ಬ್ರಹ್ಮನಲ್ಲಿ ಪ್ರಪಂಚ ತೋರುವುದು. ಆದುದರಿಂದ ಬ್ರಹ್ಮನಲ್ಲಿ ಪ್ರಪಂಚ ಕಲ್ಪಿತ ಅಥವಾ ಆರೋಪಿತ ಎಂದು ತಿಳಿಯಬೇಕು. ಅನಿರ್ವಚನೀಯಖ್ಯಾತಿಯನ್ನು ಇವರು ಪ್ರತಿಪಾದಿಸುತ್ತಾರೆ.

ಈ ಸಿದ್ಧಾಂತದಂತೆ ತತ್ತ್ವ ಒಂದೇ. ಅದು ಬ್ರಹ್ಮವಸ್ತು. ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವವುಳ್ಳದು ಆ ಪರವಸ್ತು. ಆ ಬ್ರಹ್ಮವಸ್ತು ಅವಿದ್ಯೆಯ ದೋಷದಿಂದ ದ್ವಿಚಂದ್ರಜ್ಞಾನದಂತೆ ಜೀವ, ಬ್ರಹ್ಮ ಎಂದು ಬೇರೆ ಬೇರೆಯಾಗಿ ತೋರುವುದು. ಹೀಗೆ ಬೇರೆಯಾಗಿ ತಿಳಿಯಲ್ಪಟ್ಟ ಜೀವ ದೇಹೇಂದ್ರಿಯಾದಿಗಳೊಡನೆ ಬೆರೆತು ಅಹಂಕಾರ ಮಮಕಾರಗಳನ್ನು ಹೊಂದಿ ಜನ್ಮ ಜರಾ ಮರಣಗಳಿಗೆ ತುತ್ತಾಗಿದ್ದಾನೆ. ಕರ್ತೃತ್ವ, ಭೋಕ್ತೃತ್ವ ಮೊದಲಾದುವು ಆತ್ಮನಲ್ಲಿ ಇಲ್ಲ. ಆದರೆ ತೋರುತ್ತಿವೆ. ಇದಕ್ಕೆ ಕಾರಣ ಅಂತಃಕರಣ. ಅಂತಃಕರಣದೊಡನೆ ಸೇರಿರುವ ಆತ್ಮನಲ್ಲಿ ಇವು ತೋರುತ್ತಿವೆ. ಅಂತಃಕರಣ ದಲ್ಲಿ ಆತ್ಮಸ್ವರೂಪವಾದ ಚೈತನ್ಯ ಆನಂದ ಮೊದಲಾದವು ತೋರುವುವು. ಇದಕ್ಕೂ ಅವಿದ್ಯೆ ಕಾರಣ. ಅವಿದ್ಯೆಯ ಆವರಣಶಕ್ತಿ ಮತ್ತು ವಿಕ್ಷೇಪಶಕ್ತಿಯಿಂದ ಇವು ತೋರು ತ್ತಿವೆ ಎಂದು ಹೇಳಲಾಗಿದೆ.

ವಿಶುದ್ಧವಾದ ಚೈತನ್ಯ ಅಥವಾ ಜ್ಞಾನವೇ ತತ್ತ್ವವೆಂಬುದು ಇದರ ಸಾರಾಂಶ. ಅಜ್ಞಾನದ ಮೂಲಕ ಈ ಪ್ರಪಂಚ ಬಂದಿದೆ. ಇದನ್ನು ನಿವಾರಿಸಲು ಜ್ಞಾನ ಉಪಾಯ. ಅದು ಆತ್ಮೈಕ್ಯಜ್ಞಾನ ಅಥವಾ ಬ್ರಹ್ಮಾತ್ಮೈಕ್ಯಜ್ಞಾನ. ಅದನ್ನು ಸಾಧಿಸಿಕೊಳ್ಳಲು ಸಾಧನಚತುಷ್ಟಯಗಳನ್ನು ಸಂಪಾದಿಸಿಕೊಂಡು 'ತತ್ತ್ವಮಸಿ' ಮೊದಲಾದ ಮಹಾ ವಾಕ್ಯವನ್ನು ಕೇಳಿ ಚಿತ್ತಶುದ್ಧಿ ಪಡೆಯುವನು. ಅಂಥವನಿಗೆ 'ಅಹಂ ಬ್ರಹ್ಮಾಸ್ಮಿ' ಎಂಬ ಅಪರೋಕ್ಷಜ್ಞಾನ ಬರುವುದು. ಶ್ರವಣ ಮನನ ನಿದಿಧ್ಯಾಸಗಳು ಈ ಮಹಾವಾಕ್ಯ ಗಳಿಗನ್ವಯಿಸುವುವು. ಹೀಗೆ ಬ್ರಹ್ಮಾದ್ವೈತ ಸಾಕ್ಷಾತ್ಕಾರಮಾಡಿಕೊಂಡವರು ಜೀವ ನ್ಮುಕ್ತರೆನಿಸುವರು. ಹೀಗೆ ಅದ್ವೈತದರ್ಶನ ವೇದೋಪನಿಷತ್ತುಗಳ ಆಧಾರದ ಮೇಲೆ ಪ್ರತಿಪಾದಿಸಲ್ಪಟ್ಟಿದೆ.

ವಿಶಿಷ್ಟಾದ್ವೈತಕ್ಕೂ ಈ ಅದ್ವೈತಕ್ಕೂ ಬಹಳ ವೈಲಕ್ಷಣ್ಯಗಳಿವೆ. ಮೊಟ್ಟಮೊದ ಲಾಗಿ ಸ್ವರೂಪಾದ್ವೈತವನ್ನು ವಿಶಿಷ್ಟಾದ್ವೈತ ಒಪ್ಪುವುದಿಲ್ಲ. ಶ್ರುತಿಗಳಲ್ಲಿ ಅನೇಕಶಃ ದ್ವೈತತತ್ತ್ವದ ನಿರೂಪಣೆ ಇದೆ. 'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ' ಮೊದಲಾದ ವಾಕ್ಯಗಳು ಈಶ್ವರನಿಗೂ ಜೀವರಿಗೂ ಪ್ರಕೃತಿಗೂ ಭೇದವನ್ನು ಸ್ಥಾಪಿಸು ತ್ತವೆ. ಅದ್ವೈತಶ್ರುತಿ ದ್ವೈತಶ್ರುತಿಯನ್ನು ಬಾಧಿಸುವುದಿಲ್ಲ. ಶ್ರುತಿಗಳಲ್ಲಿ ಪರಸ್ಪರ ವಿರೋಧವಿಲ್ಲ ಎಂಬುದು ವಿಶಿಷ್ಟಾದ್ವೈತದ ನೆಲೆ. ಶ್ರುತಿಗಳೆಲ್ಲಕ್ಕೂ ಸಮಂಜಸವಾದ ಅರ್ಥವನ್ನು ಮಾಡಬೇಕೆಂದೂ ಘಟಕಶ್ರುತಿಗಳು ಭೇದಶ್ರುತಿಗಳನ್ನೂ ಅಭೇದಶ್ರುತಿ ಗಳನ್ನೂ ಕೂಡಿಸುವ ತಂತುಗಳೆಂದೂ ವಿವರಿಸಿ ಈ ದರ್ಶನ ದ್ವೈತಭಾವವನ್ನೂ ಅದ್ವೈತ

acharya.org

ಭಾವವನ್ನೂ ಸಾಧಿಸುತ್ತದೆ. ಚೇತನ ಮತ್ತು ಅಚೇತನ ತತ್ತ್ವಗಳನ್ನೊಳಗೊಂಡ ಈಶ್ವರನೊಬ್ಬನೇ ತತ್ತ್ವವೆಂದು ಈ ದರ್ಶನ ಹೇಳಿ ವಿಶಿಷ್ಟಾದ್ವೈತವನ್ನು ನಿರೂಪಿಸುತ್ತದೆ. ಶ್ರುತಿಗಳಲ್ಲಿ ಪರಸ್ಪರ ವಿರೋಧವಿಲ್ಲವೆಂದು ಅಂಗೀಕರಿಸಿ ಈ ನಿರ್ಣಯವನ್ನು ಈ ದರ್ಶನ ಮುಟ್ಟಿದೆ.

ಪರಬ್ರಹ್ಮವಸ್ತು ಅವಿದ್ಯೆಯಿಂದ ಕೂಡಿ ಈಶ್ವರನಾಗುವುದೆಂದೂ ಮುಂದೆ ಅದೇ ಜೀವನಾಗುವುದೆಂದೂ ಹೇಳುವ ಅದ್ವೈತಸಿದ್ಧಾಂತದ ವಾದವನ್ನು ವಿಶಿಷ್ಟಾದ್ವೈತ ಒಪ್ಪುವುದಿಲ್ಲ. ಬ್ರಹ್ಮವಸ್ತುವಿಗೆ ಅವಿದ್ಯಾಸಂಬಂಧವುಂಟಾಗದೆಂಬುದೇ ಇದರ ಸಿದ್ಧಾಂತ. ಅವಿದ್ಯೆಯ ಸಂಬಂಧ ಉಂಟಾದರೆ ಅದು ಹೋಗಲಾರದೆಂಬುದು ಇದರ ನೆಲೆ. ಈ ಸಂದರ್ಭ ದಲ್ಲಿ ಏಳು ಬಗೆಯ ಅನುಪಪತ್ತಿಗಳನ್ನು ಈ ದರ್ಶನ ಹೇಳಿ ಅವಿದ್ಯಾಸಂಬಂಧವನ್ನು ನಿರಾಕರಿಸಿದೆ. ಅದ್ವೈತದರ್ಶನ ನಿಂತಿರುವುದು ಅವಿದ್ಯೆಯ ಆಧಾರದ ಮೇಲೆ. ಆ ಅವಿದ್ಯೆ ಸಂಭವಿಸದೆಂಬುದು ವಿಶಿಷ್ಟಾದ್ವೈತದ ನೆಲೆ. ತಿರೋಧಾನಾನುಪಪತ್ತಿ, ಸ್ವರೂಪಾನುಪಪತ್ತಿ, ಪ್ರಮಾಣಾನುಪಪತ್ತಿ, ನಿವೃತ್ತ್ಯನುಪಪತ್ತಿ, ನಿವರ್ತಕಾನುಪಪತ್ತಿ ಮೊದಲಾದವುಗಳು ಪ್ರಬಲವಾದ ಆಕ್ಷೇಪಗಳಾಗಿವೆ. ಉಪನಿಷತ್ತುಗಳ ವಾಕ್ಯಗಳಿಗೆ ಪರಸ್ಪರ ಹೊಂದಿಕೆಯಾಗುವಂತೆ ಅರ್ಥವಿದೆಯೆಂದೂ ಅದನ್ನಂಗೀಕರಿಸಿದರೆ ಈ ತೊಂದರೆ ಬರುವುದಿಲ್ಲವೆಂದೂ ಇಲ್ಲಿ ಹೇಳಿದೆ.

ಅಪರಬ್ರಹ್ಮ, ಪರಬ್ರಹ್ಮ ಎಂಬ ಭೇದವನ್ನು ವಿಶಿಷ್ಟಾದ್ವೈತ ಒಪ್ಪುವುದಿಲ್ಲ. ಆ ಪರಬ್ರಹ್ಮವೇ ಈಶ್ವರನೆಂಬುದು ಇದರ ನೆಲೆ. ಅನಂತರಾದ ಜೀವರುಗಳಿಗೆ ಅವರವರ ಕರ್ಮಾನುಸಾರವಾಗಿ ಶರೀರಾದಿಗಳುಂಟಾಗುವುದು ಸೃಷ್ಟಿ. ಈಶ್ವರನು ಸರ್ವರಿಗೂ ನಿಯಾಮಕನಾಗಿ ಅಂತರ್ಯಾಮಿಯಾಗಿ ಆತ್ಮನಾಗಿದ್ದಾನೆಂಬ ಸೂತ್ರದಿಂದ ಆತ್ಮೈಕ್ಯ ಸಾಧನೆಯಾಗುತ್ತದೆ ಎಂದು ಇದರ ಅಭಿಪ್ರಾಯ. ವಿವರ್ತವಾದನನ್ನು ಈ ಸಿದ್ಧಾಂತ ಒಪ್ಪುವುದಿಲ್ಲ. ಜಗತ್ತು ಮಿಥ್ಯೆಯಲ್ಲ. ಇದು ಎಲ್ಲ ಅವಸ್ಥೆಗಳಲ್ಲಿಯೂ ನಿಜವಾದುದೇ. ಸ್ವಾಪ್ನಜ್ಞಾನವೂ ನಿಜ. ಸ್ವಾಪ್ನಪದಾರ್ಥಗಳು ಬಾಧಿತವಾಗುವುದರಿಂದ ಮಿಥ್ಯೆ. ಇಲ್ಲಿ ಪ್ರಪಂಚಕ್ಕೆ ಬಾಧೆ ಇಲ್ಲದ ಕಾರಣ ಮಿಥ್ಯೆಯಲ್ಲವೆಂದು ಈ ದರ್ಶನದ ಮತ.

ನಿರ್ಗುಣಬ್ರಹ್ಮವನ್ನು ಈ ಸಿದ್ಧಾಂತ ಒಪ್ಪುವುದಿಲ್ಲ, ಈಶ್ವರನು ಅನಂತ ಕಲ್ಯಾಣಗುಣಗಳಿಗೆ ಆಸ್ಪದನೆಂಬುದು ಇದರ ಸಿದ್ಧಾಂತ. ನಿರ್ಗುಣಶ್ರುತಿ ಹೇಯಗುಣ ರಾಹಿತ್ಯವನ್ನು ಹೇಳುವುದೆಂದು ಇದರ ನಿಶ್ಚಯ. ಶುದ್ಧಜ್ಞಾನವೇ ಬ್ರಹ್ಮವೆಂಬ ವಾದ ವನ್ನು ವಿಶಿಷ್ಟಾದ್ವೈತ ಒಪ್ಪುವುದಿಲ್ಲ. ಜ್ಞಾನಯುತನಾದವನು ಪರಬ್ರಹ್ಮನೆಂಬುದು ಇದರ ವಾದ.

ಜಗತ್ಸತ್ಯತ್ವವನ್ನು ಎಲ್ಲ ಹಂತಗಳಲ್ಲಿಯೂ ಹೇಳುವುದು ವಿಶಿಷ್ಟಾದ್ವೈತ. ಇಲ್ಲ ದಿದ್ದರೆ ಜಗತ್ತಿನ ವ್ಯವಹಾರವನ್ನು ವಿವರಿಸುವುದಕ್ಕಾಗುವುದಿಲ್ಲ. ನಿರ್ವಿಶೇಷಚೈತನ್ಯವೇ

acharya.org

ತತ್ತ್ವವಾದದಲ್ಲಿ ಜಡವಾದ ಅಂತಃಕರಣಕ್ಕೆ ಸುಖದುಃಖಾದಿಗಳನ್ನು ಹೇಳುವುದಕ್ಕಾಗುವುದಿಲ್ಲ.

ಜ್ಞಾನಕ್ಕೆ ಕರ್ಮ ವಿರೋಧಿಯಲ್ಲವೆಂಬುದು ಈ ದರ್ಶನದ ನಿಶ್ಚಯ. ಕರ್ಮಕಾಂಡ ಭಗವಂತನನ್ನು ಸೇವಿಸುವ ವಿವಿಧ ರೂಪಗಳನ್ನು ಉಪದೇಶಿಸುತ್ತದೆ. ಅದರಿಂದ ಯಾವ ಬಾಧಕವೂ ಇಲ್ಲ. ಮೋಕ್ಷೋಪಾಯದ ವಿಚಾರದಲ್ಲಿ ಕೇವಲ ಜ್ಞಾನದಿಂದ ಮೋಕ್ಷವಾಗದೆಂದೂ ಉಪಾಸನಾತ್ಮಕವಾದ ಜ್ಞಾನದಿಂದ ಮೋಕ್ಷವೆಂದೂ ವಿಶಿಷ್ಟಾದ್ವೈತ ಸಾಧಿಸುತ್ತದೆ. ಭಕ್ತಿ ಪ್ರಪತ್ತಿಗಳು ಮೋಕ್ಷೋಪಾಯಗಳೆಂದೂ ಕರ್ಮಜ್ಞಾನಗಳು ಅದಕ್ಕೆ ಸಹಕಾರಿಗಳೆಂದೂ ಇದರ ಉಪದೇಶ. ಜೀವನ್ಮುಕ್ತಿಯನ್ನು ಈ ದರ್ಶನ ಒಪ್ಪುವುದಿಲ್ಲ. ದೇಹವಿರಬೇಕಾದರೆ ಕೆಲವು ಕರ್ಮಸಂಬಂಧಗಳು ಉಳಿದುಬಂದಿವೆ ಎಂದು ಒಪ್ಪಬೇಕು. ಶರೀರಪಾತದ ಅನಂತರ ಪರಬ್ರಹ್ಮನನ್ನು ಸೇರಿ ಭಗವದಾನಂದದ ಅನುಭವವನ್ನು ಯಾವದಾತ್ಮಭಾವಿಯಾಗಿ ಹೊಂದುವುದು ಮೋಕ್ಷವೆಂದು ಈ ದರ್ಶನದ ಸಿದ್ಧಾಂತ. ಹೀಗೆ ಉಪನಿಷತ್ತನ್ನೇ ಆಧಾರವಾಗಿ ಹೊಂದಿದ್ದರೂ ದೃಷ್ಟಿಭೇದದಿಂದ ವಿಶಿಷ್ಟಾದ್ವೈತ ಅದ್ವೈತದರ್ಶನಕ್ಕಿಂತ ಬೇರೆಯಾಗಿದೆ.

ಅದ್ವೈತದರ್ಶನದ ಪ್ರಕಾರಗಳಾದ ಭಾಸ್ಕರಮತ, ಯಾದವಪ್ರಕಾಶರ ಮತ ಮತ್ತು ಶಾಂಕರಮತ ಇವುಗಳನ್ನೆಲ್ಲಾ ವಿಶಿಷ್ಟಾದ್ವೈತದರ್ಶನ ನಿರಾಕರಿಸಿದೆ. ಶಂಕರರ ವಿವರ್ತವಾದವನ್ನು ನಿರಾಕರಿಸಿರುವಂತೆ ಭಾಸ್ಕರರ ಔಪಾಧಿಕ ಭೇದಾಭೇದವಾದವನ್ನೂ ಈ ದರ್ಶನ ಖಂಡಿಸಿದೆ. ಈಶ್ವರನು ನಿಜವಾದ ಉಪಾಧಿಯ ಸಂಬಂಧದಿಂದ ಜೀವನಾಗಿದ್ದಾನೆಂಬ ವಾದ ಭಾಸ್ಕರರದು. ಲೋಕದ ಸುಖದುಃಖಗಳೆಲ್ಲಾ ಈಶ್ವರನಿಗೇ ಅನ್ವಯಿಸುವ ಕಾರಣ ಈ ಸತ್ಯವಾದ ಉಪಾಧಿಯ ವಾದ ಅಸಾಧುವೆಂದು ವಿಶಿಷ್ಟಾದ್ವೈತ ಭಾವಿಸುತ್ತದೆ. ಅದ್ವೈತದ ಹಾನಿಯೂ ಇದರಿಂದ ಆಗುತ್ತದೆ. ಬ್ರಹ್ಮವಸ್ತು ಮತ್ತು ಉಪಾಧಿ ಎಂಬ ಎರಡು ಪದಾರ್ಥಗಳ ಸತ್ಯತ್ವವನ್ನು ಒಪ್ಪಬೇಕಾಗುತ್ತದೆ. ಈ ಉಪಾಧಿ ಎಂದೆಂದೂ ಹೋಗಲಾರದೆಂಬುದು ಮತ್ತೊಂದು ಆಕ್ಷೇಪ. ಯಾದವಪ್ರಕಾಶರ ಮತದಂತೆ ಬ್ರಹ್ಮವಸ್ತುವೇ ಚಿದಚಿದೀಶ್ವರರಾಗಿ ಪರಿಣಾಮ ಹೊಂದಿದೆ. ಈ ವಾದವೂ ಅಸಂಗತವೆಂದು ವಿಶಿಷ್ಟಾದ್ವೈತದ ಭಾವನೆ. ಜೀವನ ಮತ್ತು ಪ್ರಕೃತಿಯ ದೋಷಗಳೆಲ್ಲಾ ಬ್ರಹ್ಮವಸ್ತುವಿಗೇ ಸಂಬಂಧಿಸುವುದು. ಹೀಗೆ ಅದ್ವೈತದರ್ಶನದ ಪರೀಕ್ಷೆ ಮಾಡಿ ವಿಶಿಷ್ಟಾದ್ವೈತ ಅದಕ್ಕಿಂತ ಬೇರೆಯಾದ ರೀತಿಯಲ್ಲಿ ತತ್ತ್ವಹಿತ ಪುರುಷಾರ್ಥಗಳ ನಿರೂಪಣೆಯನ್ನು ಮಾಡಿದೆ.

ವಿಶಿಷ್ಟಾದ್ವೈತವೂ ಶಕ್ತಿವಿಶಿಷ್ಟಾದ್ವೈತದರ್ಶನವೂ

ಶಕ್ತಿವಿಶಿಷ್ಟಾದ್ವೈತದರ್ಶನ ಶಿವೋತ್ಕರ್ಷವನ್ನು ಹೇಳುತ್ತದೆ. ಪರಶಿವನೊಬ್ಬನೇ

acharya.org

ತತ್ತ್ವವೆಂಬುದು ಈ ದರ್ಶನದ ಸಾರ. ಬ್ರಹ್ಮವಸ್ತು ಸಗುಣವೇ ವಿನಾ ನಿರ್ಗುಣವಲ್ಲ. ಪತಿ, ಪಶು, ಪಾಶ ಎಂದು ಮೂರು ವಿಧವಾಗಿ ವಿಭಾಗಮಾಡಿದ್ದಾರೆ ಇವರು. ಶಿವನು ಶಕ್ತಿಯಿಂದ ಕೂಡಿದ್ದಾನೆ. ಆ ಶಕ್ತಿಯ ಸಂಕ್ಷೋಭೆಯಿಂದ ಶಿವತತ್ತ್ವ ಅಂಗ, ಲಿಂಗ ಎಂದು ಎರಡಾಗುತ್ತದೆ. ಅಂಗ ಜೀವನಿಗೂ, ಲಿಂಗ ಶಿವನಿಗೂ ಅನ್ವಯಿಸುತ್ತದೆ. ಹೀಗೆ ಏಕೋತ್ತರಶತಸ್ಥಲದ ವರೆಗೆ ಇದು ವಿಸ್ತಾರವಾಗಿ ಬೆಳೆಯುವುದು. ಶಕ್ತಿತತ್ತ್ವವೂ ಎರಡಾಗಿ ಕಲಾ ಮತ್ತು ಭಕ್ತಿ ಎಂದಾಗುತ್ತದೆ. ಒಂದು ಬಂಧಕವಾದರೆ ಮತ್ತೊಂದು ಮೋಚಕವಾಗಿದೆ. ಇವರಲ್ಲಿ ಮೂವತ್ತಾರು ತತ್ತ್ವಗಳನ್ನು ಅಂಗೀಕರಿಸುತ್ತಾರೆ. ಭಕ್ತಿಯನ್ನನುಷ್ಠಿಸಿ ಜೀವನು ಸಾಧನೆಮಾಡಿ ಶಿವನೇ ಆಗುತ್ತಾನೆ. ಈ ದರ್ಶನದಲ್ಲಿ ಭೇದ ಮತ್ತು ಅಭೇದಗಳೆರಡಕ್ಕೂ ಅವಕಾಶಕೊಟ್ಟಿದೆ. ಒಂದೇ ಆದ ಶಿವತತ್ತ್ವವೇ ಜಗದ್ರೂಪವಾಗಿ ಪರಿಣಮಿಸಿದೆ. ಜೀವರುಗಳೆಲ್ಲ ಶಿವಸ್ವರೂಪರೇ. ಆದರೆ ತಾವು ಶಿವಸ್ವರೂಪವೆಂಬುದನ್ನವರು ಅರಿತಿಲ್ಲ. ಅನಾದಿಯಾದ ಮಾಯೆಯಿಂದ ತೊಳಲುತ್ತಿದ್ದಾರೆ. ಇವರು ಜಗತ್ಸತ್ಯತ್ವವಾದಿಗಳು. 'ಬ್ರಹ್ಮ ಸತ್ಯಂ ಜಗತ್ ಸತ್ಯಂ ಜೀವೋ ಬ್ರಹ್ಮೈವ ನಾಪರಃ' ಎಂಬುದು ಇವರ ನೆಲೆ. ಸಾಧನಾವಸ್ಥೆಯಲ್ಲಿ ದ್ವೈತವೂ ಸಿದ್ಧಾವಸ್ಥೆಯಲ್ಲಿ ಅದ್ವೈತವೂ ಸಿದ್ಧಿಸುವುದೆಂದು ಇವರ ಮತ. ಇವರು ಹೇಳುವ ಸಾಧನಸ್ವರೂಪವೂ ವಿಶಿಷ್ಟವಾಗಿದೆ. ಜ್ಞಾನಕರ್ಮಸಮುಚ್ಚಯವಾದ ಇವರದು. ಕರ್ಮದಿಂದ ಭೇದ ವಾಸನೆಯನ್ನು ಕಳೆದು ಜ್ಞಾನದಿಂದ ಅಭೇದವನ್ನು ಸಾಧಿಸಬೇಕೆಂದು ಇವರು ಹೇಳುವರು. ಷಟ್‌ಸ್ಥಲವನ್ನು ವಿಶೇಷವಾಗಿ ಈ ದರ್ಶನ ಪುರಸ್ಕರಿಸುತ್ತದೆ. ಭಕ್ತಿಸ್ಥಲ, ಮಹೇಶ, ಪ್ರಾಣಲಿಂಗಿ, ಪ್ರಸಾದ, ಶರಣ ಮತ್ತು ಐಕ್ಯಸ್ಥಲವೆಂಬ ಆರು ಸ್ಥಲಗಳು ಸೋಪಾನತ್ರಯದಲ್ಲಿ ಸಾರುವುವು. ಸಾಧಕ ಭೇದದಿಂದ ಅಭೇದವನ್ನು ಈ ಕ್ರಮದಲ್ಲಿ ಮುಟ್ಟುತ್ತಾನೆ. ಕೊನೆಗೆ ಶಿವೈಕ್ಯನಾಗುತ್ತಾನೆ ಜೀವ. ಅದು ಮುಕ್ತಿಯ ಅವಸ್ಥೆ.

ಈ ದರ್ಶನಕ್ಕೂ ವಿಶಿಷ್ಟಾದ್ವೈತಕ್ಕೂ ಬಹಳ ವ್ಯತ್ಯಾಸವಿದೆ. ವಿಶಿಷ್ಟಾದ್ವೈತ ಪರಬ್ರಹ್ಮನನ್ನು ನಾರಾಯಣನೆನ್ನುತ್ತದೆ. ಜಗತ್ಸತ್ಯತ್ವವನ್ನೂ ಬ್ರಹ್ಮವಸ್ತುವಿನ ಸಗುಣತ್ವವನ್ನೂ ಇಬ್ಬರೂ ಸಮಾನವಾಗಿ ಒಪ್ಪುತ್ತಾರೆ. ಜೀವನ್ಮುಕ್ತಿಯನ್ನು ಇವರಿಬ್ಬರೂ ಒಪ್ಪುವುದಿಲ್ಲ. ಭಕ್ತಿಗೆ ಪ್ರಾಧಾನ್ಯಕೊಟ್ಟಿರುವುದನ್ನು ವಿಶಿಷ್ಟಾದ್ವೈತ ಒಪ್ಪುತ್ತದೆ. ಆದರೆ ಶಿವನೇ ಜೀವನಾಗಿದ್ದಾನೆಂಬುದನ್ನಾಗಲೀ ಮುಕ್ತ್ಯವಸ್ಥೆಯಲ್ಲಿ ಶಿವೈಕ್ಯನಾಗುವನೆಂಬುದನ್ನಾಗಲೀ ಈ ದರ್ಶನ ಒಪ್ಪುವುದಿಲ್ಲ. ಷಟ್‌ಸ್ಥಲವನ್ನೂ ಈ ದರ್ಶನ ಅಂಗೀಕರಿಸುವುದಿಲ್ಲ. ಈ ದರ್ಶನಗಳಿಗೆ ಹೀಗೆ ವೈಲಕ್ಷಣ್ಯವಿದೆ.

ವಿಶಿಷ್ಟಾದ್ವೈತ ಮತ್ತು ದ್ವೈತ

ಇವೆರಡು ದರ್ಶನಗಳಲ್ಲಿ ಅನೇಕ ಸಾಮ್ಯಗಳಿವೆ. ಇವೆರಡೂ ಜಗತ್ಸತ್ಯತ್ವವನ್ನು

acharya.org

ಸಾಧಿಸುತ್ತವೆ. ನಿತ್ಯರೂ ಅನಂತರೂ ಆದ ಜೀವರುಗಳು, ಪ್ರಕೃತಿ ಮತ್ತು ಪರಮಾತ್ಮ ನೆಂಬ ತತ್ತ್ವಗಳನ್ನಿವರು ಸಮಾನವಾಗಿ ಅಂಗೀಕರಿಸುತ್ತಾರೆ. ಇವೆರಡು ದರ್ಶನಗಳಲ್ಲಿಯೂ ಶ್ರೀಮನ್ನಾರಾಯಣನು ಪರತತ್ತ್ವವಾಗಿದ್ದಾನೆ. ಜೀವರುಗಳು ತಮ್ಮ ಅನಾದಿಯಾದ ಕರ್ಮದ ಕಾರಣ ಈ ಲೋಕದಲ್ಲಿ ಜನಿಸಿದ್ದಾರೆಂದೂ ಭಗವಂತನಲ್ಲಿ ಭಕ್ತಿ ಮಾಡುವ ಮೂಲಕ ಅವರು ಮೋಕ್ಷವನ್ನು ಸಾಧಿಸಬಹುದೆಂದೂ ಇವೆರಡು ದರ್ಶನಗಳೂ ಒಪ್ಪು ತ್ತವೆ. ಮುಕ್ತಿಯಲ್ಲಿ ಭಗವಂತನ ಅನುಭವ ದೇಶವಿಶೇಷವಾದ ವೈಕುಂಠದಲ್ಲಿ ಆಗುವುದೆಂಬುದನ್ನು ಇವೆರಡು ದರ್ಶನಗಳೂ ಒಪ್ಪುತ್ತವೆ. ಚೇತನ, ಅಚೇತನ ಮತ್ತು ಈಶ್ವರ ಇವರ ಸ್ವರೂಪ ಸ್ವಭಾವ ಭೇದಗಳನ್ನು ಇವರು ಅಂಗೀಕರಿಸುತ್ತಾರೆ. ಹೀಗಾಗಿ ಅನೇಕಾಂಶಗಳಲ್ಲಿ ಇವೆರಡು ದರ್ಶನಗಳಲ್ಲಿ ಸಾಮ್ಯವಿದೆ.

ಆದರೆ ಹಲವಾರು ಅಂಶಗಳಲ್ಲಿ ಇವುಗಳೆರಡರಲ್ಲಿ ವೈಲಕ್ಷಣ್ಯವೂ ಇದೆ. ದ್ವೈತದರ್ಶನ ಭೇದಕ್ಕೆ ಪ್ರಾಧಾನ್ಯ ಕೊಡುತ್ತದೆ. ಪಂಚಭೇದವನ್ನು ಈ ದರ್ಶನ ಅಂಗೀಕರಿಸುತ್ತದೆ. ಜೀವ ಜೀವರುಗಳಲ್ಲಿ ಭೇದ, ಜೀವ ಪ್ರಕೃತಿಗಳಲ್ಲಿ ಭೇದ, ಪ್ರಕೃತಿ ಪ್ರಕೃತಿಗೆ ಭೇದ ಜೀವೇಶ್ವರರಲ್ಲಿ ಭೇದ, ಪ್ರಕೃತಿ ಈಶ್ವರರಲ್ಲಿ ಭೇದ ಈ ರೀತಿಯಾಗಿ ಐದು ವಿಧವಾದ ಭೇದಗಳನ್ನಿವರು ಹೇಳುತ್ತಾರೆ. ಈ ವಿಧವಾದ ಪಂಚಭೇದವನ್ನು ವಿಶಿಷ್ಟಾದ್ವೈತ ಒಪ್ಪುವುದಿಲ್ಲ. ಜೀವರುಗಳೆಲ್ಲರೂ ಜ್ಞಾನಾಕಾರರಾಗಿ ಸಮರೆಂದು ಈ ದರ್ಶನ ಸಾರು ತ್ತದೆ. ಕರ್ಮಕೃತವಾಗಿ ಅವರಲ್ಲಿ ವ್ಯತ್ಯಾಸಗಳು ಬಂದಿವೆಯೆಂದೂ ಮುಕ್ತಿದೆಶೆಯಲ್ಲಿ ಎಲ್ಲ ಜೀವರುಗಳೂ ಸಮಾನರಾಗಿ ಅಸಂಕುಚಿತಜ್ಞಾನಾಕಾರರಾಗಿರುವರೆಂದೂ ವಿಶಿಷ್ಟಾ ದ್ವೈತದರ್ಶನ ಸಾರುತ್ತದೆ. ಆದರೆ ಜೀವರಿಗೂ ಪ್ರಕೃತಿಗೂ ಪರಬ್ರಹ್ಮವಸ್ತುವಿಗೂ ಭೇದವನ್ನು ಹೇಳಲಾಗಿದೆ. ಜೀವರಲ್ಲಿ ಯೋಗ್ಯಜೀವ, ಅಯೋಗ್ಯಜೀವ ಎಂಬ ಭೇದವನ್ನು ವಿಶಿಷ್ಟಾದ್ವೈತ ಒಪ್ಪುವುದಿಲ್ಲ.

ವಿಶಿಷ್ಟಾದ್ವೈತಕ್ಕನುಗುಣವಾಗಿ ಲಕ್ಷ್ಮೀದೇವಿಯು ವಿಭುವಾಗಿ ಭಗವಂತನೊಡನೆ ನಿತ್ಯಯೋಗ ಹೊಂದಿರುವವಳಾಗಿ ಲೋಕಕ್ಕೆ ಶೇಷಿಯಾಗಿದ್ದಾಳೆ. ದ್ವೈತದರ್ಶನ ಕ್ಕನುಸಾರ ಲಕ್ಷ್ಮೀದೇವಿ ಚೇತನಳು ಮತ್ತು ಅಣುಸ್ವರೂಪಿಯು. ದ್ವೈತದರ್ಶನ ಕ್ಕನುಸಾರವಾಗಿ ಕೆಲವರು ಜೀವರುಗಳು ನಿತ್ಯನಾರಕಿಗಳಾಗಿರುವರು. ಅವರಿಗೆ ಮುಕ್ತಿಯ ಸಂಭವವೇ ಇರುವುದಿಲ್ಲ. ವಿಶಿಷ್ಟಾದ್ವೈತದರ್ಶನ ಈ ನೆಲೆಯನ್ನು ಒಪ್ಪುವು ದಿಲ್ಲ. ಎಲ್ಲರಿಗೂ ಮುಕ್ತಿಗೆ ಯೋಗ್ಯತೆ ಇದೆಯೆಂದೂ ಕೆಲವರು ಮುಕ್ತಿಯನ್ನು ಹೊಂದದೆ ಇರುವಂಥ ಕರ್ಮಪಾಶಗಳಿಗೊಳಗಾಗಬಹುದೆಂದೂ ಹೇಳುತ್ತದೆಯೇ ವಿನಾ ಕೆಲವರು ಜೀವರುಗಳು ಸ್ವರೂಪತಃ ಮುಕ್ತ್ಯನರ್ಹರೆನ್ನುವುದಿಲ್ಲ. ಭಕ್ತಿಗೆ ಪ್ರಾಧಾನ್ಯವನ್ನು ವಿಶಿಷ್ಟಾದ್ವೈತ ದರ್ಶನ ಕೊಟ್ಟರೂ ಪ್ರಪತ್ತಿಯಿಂದ ಮೋಕ್ಷವು ಲಭ್ಯವೆಂದು ಸಮರ್ಥಿಸುತ್ತದೆ. ಪ್ರಪತ್ತಿ ಭಕ್ತಿಗೆ ಅಂಗವೆಂದು ದ್ವೈತದರ್ಶನ ಸೂಚಿಸಿದರೂ ಪ್ರಪತ್ತಿಗೆ

acharya.org

ನೇರವಾಗಿ ಮೋಕ್ಷೋಪಾಯತ್ವವನ್ನು ಹೇಳುವುದಿಲ್ಲ. ಮುಕ್ತಿದೆಶೆಯು ನಿರೂಪಣೆಯಲ್ಲಿಯೂ ಇವೆರಡು ದರ್ಶನಗಳಲ್ಲಿ ವ್ಯತ್ಯಾಸವಿದೆ. ವಿಶಿಷ್ಟಾದ್ವೈತದರ್ಶನಕ್ಕನುಸಾರವಾಗಿ ಮುಕ್ತರೆಲ್ಲರೂ ಸಮನಾಗಿ ಆನಂದವನ್ನನುಭವಿಸುವರೆಂದರೆ ದ್ವೈತದರ್ಶನ ಮುಕ್ತರಿಗೆ ಆನಂದಾನುಭವದಲ್ಲಿ ತಾರತಮ್ಯವನ್ನು ಹೇಳುತ್ತದೆ. ಭಗವಂತನಿಗೆ ಜಗತ್ತು ಅತ್ಯಂತ ಪರತಂತ್ರವಾಗಿದೆ ಎಂಬುದನ್ನು ದ್ವೈತದರ್ಶನ ಬಿಂಬಪ್ರತಿಬಿಂಬಭಾವದ ಮೂಲಕ ಸಮರ್ಥಿಸುತ್ತದೆ. ವಿಶಿಷ್ಟಾದ್ವೈತದರ್ಶನ ಶೇಷಶೇಷಿಭಾವದಿಂದ ಈ ಪಾರತಂತ್ರ್ಯವನ್ನು ಸಾಧಿಸುತ್ತದೆ. ವಿಶಿಷ್ಟಾದ್ವೈತದರ್ಶನ ಶರೀರಾತ್ಮಭಾವದ ನಿರೂಪಣೆಯ ಮೂಲಕ ಅದ್ವೈತವನ್ನು ಸಾಧಿಸಿ ಪರಮಾತ್ಮನೊಬ್ಬನೇ ತತ್ತ್ವವೆಂದೂ ಚೇತನಾಚೇತನಗಳು ಅವನಿಗೆ ವಿಶೇಷಣಗಳು ಅಥವಾ ಪ್ರಕಾರಗಳೆಂದೂ ಸಾಧಿಸಿ ಅದ್ವೈತಶ್ರುತಿಗಳಿಗೆ ಅರ್ಥನಿರೂಪಣೆ ಮಾಡುತ್ತದೆ. ಆದರೆ ದ್ವೈತದರ್ಶನ ಅಭೇದಶ್ರುತಿಗಳಿಗೆ ಅರ್ಥ ಹೇಳುವಾಗ ದ್ವೈತಭಾವದ ಸಮರ್ಥನೆಯನ್ನೇ ಮಾಡಲು ಯತ್ನಿಸಿದೆ. ಒಟ್ಟಿನಲ್ಲಿ ಮುಖ್ಯವಾದ ಅಂಶಗಳಲ್ಲಿ ಇವೆರಡು ದರ್ಶನಗಳಲ್ಲಿ ಸಾಮ್ಯವಿದೆ. ಕೆಲವು ತತ್ತ್ವಗಳ ನಿರೂಪಣೆಯಲ್ಲಿ ಮತ್ತು ವಿವರಣೆಗಳಲ್ಲಿ ಮಾತ್ರ ಕೆಲವು ವೈಲಕ್ಷಣ್ಯಗಳಿವೆ.

acharya.org

೨೩

ಉಪಸಂಹಾರ

ವೇದಾಂತ ದರ್ಶನದ ಪ್ರಕಾರಗಳಲ್ಲಿ ವಿಶಿಷ್ಟಾದ್ವೈತವು ಪ್ರಮುಖವಾದ ಒಂದು ವಿಭಾಗ. ಇದು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಶ್ರುತಿಗಳಿಗೆಲ್ಲಾ ಮುಖ್ಯಾರ್ಥ ಹೇಳುವ ಈ ಸಂಪ್ರದಾಯ ಭೇದ ಮತ್ತು ಅಭೇದ ದರ್ಶನಗಳೆರಡಕ್ಕೂ ಮಧ್ಯಸ್ಥವಾಗಿದೆ. ಸಗುಣಬ್ರಹ್ಮ, ಪರಿಣಾಮವಾದ, ಭಕ್ತಿಯೋಗ ಮತ್ತು ವಿದೇಹಮುಕ್ತಿ ಇವುಗಳನ್ನು ಈ ದರ್ಶನ ಮುಖ್ಯವಾಗಿ ಪ್ರತಿಪಾದಿಸುತ್ತದೆ. ಈ ದರ್ಶನದ ದೃಷ್ಟಿಯಲ್ಲಿ ಐಹಿಕ ಜಗತ್ತು ಸತ್ಯ; ಹಾಗೆಯೇ ಭಗವಲ್ಲೋಕವೂ ಸತ್ಯ. ಸತ್ಯಭೂತರಾದ ಜೀವರು ಭಗವಂತನನ್ನು ಸೇರಿ ಯಾವದಾತ್ಮಭಾವಿಯಾದ ಬ್ರಹ್ಮಾನುಭವವನ್ನು ಮಾಡುವುದೂ ಸತ್ಯ. ಅನಾದಿಯಾದ ಕರ್ಮದ ಕಾರಣ ಬಂದ ಸಂಸಾರಬಂಧನವನ್ನು ಕಿತ್ತೊಗೆಯುವ ಅವಕಾಶ ಎಲ್ಲ ಜೀವಿಗಳಿಗೂ ಇದೆ. ವಿವೇಕವನ್ನು ಪಡೆದುಕೊಂಡು ಸಾಧನೆಗಳನ್ನನುಷ್ಠಿಸಿ ಮೇಲು ಕೀಳೆಂಬ ಭಾವವಿಲ್ಲದೆ ಯಾರು ಬೇಕಾದರೂ ಆತ್ಮೋನ್ನತಿಯನ್ನು ಸಾಧಿಸಬಹುದೆಂಬುದು ಈ ದರ್ಶನದ ಉಪದೇಶ. ವಿಧವಿಧವಾಗಿ ನಮಗೆ ತೋರುತ್ತಿರುವ ಬಗೆ ಬಗೆಯ ಜೀವರುಗಳು ಸ್ವರೂಪತಃ ಜ್ಞಾನಾಕಾರರಾಗಿ ಏಕರೂಪರಾಗಿರುವರೆಂಬುದನ್ನು ಈ ದರ್ಶನ ಸಮರ್ಥಿಸುತ್ತದೆ. ಕರ್ಮಲೇಪವನ್ನು ತೊಳೆದುಕೊಂಡ ಪರಿಶುದ್ಧಜೀವರು ಜ್ಞಾನಾಕಾರದಲ್ಲಿ ಪರಮಾತ್ಮಸಮರೆಂಬುದನ್ನೂ ಈ ದರ್ಶನ ಹೇಳುತ್ತದೆ. ಇಂಥ ಜೀವರು ಹಾಗೂ ಜಗತ್ತು ಪರಮಾತ್ಮನಿಗೆ ಅಧೀನವಾಗಿ ಅವನಿಗೆ ಶೇಷಭೂತವಾದವರೆಂಬುದು ಈ ದರ್ಶನದ ಸಿದ್ಧಾಂತ. ಸರ್ವಾಂತರ್ಯಾಮಿಯೂ ಸರ್ವಾತ್ಮನೂ ಆದ್ದರಿಂದಲೇ ಸಕಲಶಬ್ದವಾಚ್ಯನೂ ಆದ ಪರಮಾತ್ಮನೇ ಪರಮಕರ್ತನೂ ಪರಮಭೋಕ್ತೃವೂ ಆಗಿರುವನೆಂಬುದನ್ನೂ, ಆದುದರಿಂದ ಎಲ್ಲರೂ ತಮ್ಮ ಎಲ್ಲಾ ಬಗೆಯ ವ್ಯಾಪಾರಗಳಿಂದ ಆ ಪರಮಶೇಷಿಯ ಅನುಗ್ರಹವನ್ನು ಪಡೆಯುವಂತೆ ಸರ್ವಭೂತಹಿತೇರತರುಗಳಾಗಿ ವರ್ತಿಸಬೇಕೆಂಬುದನ್ನೂ ಈ ದರ್ಶನ ಒತ್ತಿ ಹೇಳುತ್ತದೆ.

ಆತ್ಮೋನ್ನತಿಯನ್ನು ಸಾಧಿಸಿಕೊಳ್ಳುವುದಕ್ಕೆ ಎಲ್ಲರಿಗೂ ಅಧಿಕಾರವಿದೆ. ಶಕ್ತರಾದವರು ಜ್ಞಾನ, ಕರ್ಮ ಭಕ್ತಿಯೋಗಾದಿಗಳನ್ನಾಚರಿಸಬಹುದು, ಆದರೆ ಅಶಕ್ತರಾದವರು ಅನನ್ಯಭಾವದಿಂದ ಭಗವಂತನಲ್ಲಿ ಪ್ರಪತ್ತಿ ಮಾಡಿ ತಮ್ಮ ಉದ್ಧಾರವನ್ನು ಸಾಧಿಸಿಕೊಳ್ಳ

acharya.org

ಬಹುದೆಂದು ಈ ದರ್ಶನ ಸಾರಿಹೇಳಿ ಎಲ್ಲರಿಗೂ ಸಮಾನವಾದ ಅವಕಾಶಗಳನ್ನು ಒದಗಿಸಿ ಕೊಡುತ್ತದೆ. ಜಾತಿ ಗುಣ, ಕರ್ಮ ಮೊದಲಾದುವಗಳ ಭೇದವಿಲ್ಲದೆ ಎಲ್ಲ ಮಾನವರೂ ಆತ್ಮೋನ್ನತಿಯನ್ನು ಸಾಧಿಸಬಹುದೆಂಬ ಉಪದೇಶವನ್ನು ಈ ದರ್ಶನ ನೀಡಿದೆ.

ಈ ದರ್ಶನದ ಪ್ರಕ್ರಿಯೆಗಳನ್ನು ಇದುವರೆಗೆ ಸಂಗ್ರಹವಾಗಿ ಇಲ್ಲಿ ನಿರೂಪಿಸಲಾಗಿದೆ. ತತ್ತ್ವಹಿತಪುರುಷಾರ್ಥಗಳ ನಿಶ್ಚಿತಜ್ಞಾನ ಅನುಷ್ಠಾನದಲ್ಲಿ ಪರ್ಯವಸಾನವಾಗಬೇಕು. ಭಗವಂತನ ಶರೀರವೆನಿಸಿದ ಲೋಕಕ್ಕೆ ಸೇವೆ ಸಲ್ಲಿಸಿ ಆ ಭಗವಂತನನ್ನು ಮೆಚ್ಚಿಸಬಹುದೆಂಬುದನ್ನು ಈ ದರ್ಶನ ಸೂಚಿಸುತ್ತದೆ. ಐಹಿಕವನ್ನು ತಳ್ಳಿಹಾಕದೆ ಅದನ್ನು ಪಾರಲೌಕಿಕಕ್ಕೆ ಅನುಗುಣವಾಗಿ ರೂಪುಗೊಳಿಸಕೊಳ್ಳಬೇಕೆಂಬ ಸಂದೇಶ ಎಲ್ಲರಿಗೂ ಅನ್ವಯಿಸುವುದಾಗಿದೆ. ಜ್ಞಾನ, ಭಕ್ತಿ, ಕರ್ಮಗಳ ನಿರೂಪಣೆ ಹಾಗೂ ಪ್ರಪತ್ತಿಯ ಮಹತ್ತ್ವವನ್ನು ಈ ದರ್ಶನ ಮಾಡಿರುವ ಬಗೆ ಸರ್ವರಿಗೂ ಉಪಾದೇಯವಾಗಿದೆ. ಇಲ್ಲಿ ವಿವರಿಸಿರುವ ಸಿದ್ಧಾಂತಗಳು ಅನೇಕರೀತಿಯಲ್ಲಿ ಎಲ್ಲರಿಗೂ ಅನ್ವಯಿಸುವುದಾಗಿದೆ. ವೇದಾಂತದರ್ಶನದ ಪ್ರಮುಖಪ್ರಕಾರಗಳಲ್ಲಿ ಒಂದಾಗಿ ವಿಶಿಷ್ಟಾದ್ವೈತದರ್ಶನ ಹೀಗೆ ರೂಪುಗೊಂಡಿದೆ.

acharya.org

೧

ಅನುಬಂಧ

ವಿಶಿಷ್ಟಾದ್ವೈತವೂ ಆಗಮಗಳೂ

ಅನಾದಿಕಾಲದಿಂದ ಸಂಪ್ರದಾಯಸಿದ್ಧವಾಗಿ ಬಂದಿರುವ ವೈದಿಕ ಶಾಸ್ತ್ರಸಂದರ್ಭಗಳಲ್ಲಿ ತಂತ್ರಗಳೂ ಸೇರಿವೆ. ವೇದ, ಇತಿಹಾಸ ಮತ್ತು ಪುರಾಣಗಳಂತೆ ಈ ತಂತ್ರಗಳೂ ಪ್ರಮಾಣಭೂತವಾಗಿ ವೈದಿಕ ಸಂಸ್ಕೃತಿಯ ಮತ್ತು ಸನಾತನ ಧರ್ಮದ ಸ್ವರೂಪವನ್ನು ಪ್ರತಿನಿಧಿಸುತ್ತವೆ. ಈ ತಂತ್ರಗಳಿಗೆ ಆಗಮ ಎಂಬುದು ಮತ್ತೊಂದು ಹೆಸರು. ಇವು ಶೈವ, ಶಾಕ್ತ ಮತ್ತು ವೈಷ್ಣವ ಎಂದು ಮೂರು ಬಗೆ. ಕಾಪಾಲ, ಕಾಲಾಮುಖ, ಪಾಶುಪತ, ಶೈವ ಎಂದು ಶೈವಾಗಮದಲ್ಲಿ ಪ್ರಭೇದಗಳಿವೆ. ಶಿವಪಾರಮ್ಯ ಮತ್ತು ಶಿವಪೂಜೆಯನ್ನು ಇವು ವಿಧಿಸುತ್ತವೆ. ಶಾಕ್ತಾಗಮ ದಕ್ಷಿಣಾಚಾರ ಮತ್ತು ವಾಮಾಚಾರ ಎಂದು ಎರಡು ಬಗೆ. ವೈದಿಕಮಾರ್ಗವನ್ನು ದಕ್ಷಿಣಾಚಾರ ಅನುಸರಿಸುವುದು. ವಾಮಾಚಾರ ವೈದಿಕ ಮಾರ್ಗವನ್ನು ಬಿಟ್ಟಿದೆ. ಇವೆರಡೂ ಶಕ್ತಿಪಾರಮ್ಯ ಮತ್ತು ಶಕ್ತಿಪೂಜೆಯನ್ನು ಪ್ರತಿಪಾದಿಸುತ್ತವೆ. ವೈಷ್ಣವಾಗಮ ವೈಖಾನಸ ಮತ್ತು ಪಾಂಚರಾತ್ರ ಎಂದು ಎರಡು ಬಗೆ. ಇವು ವಿಷ್ಣುಪಾರಮ್ಯವನ್ನೂ ವಿಷ್ಣುಪೂಜೆಯನ್ನೂ ವಿಧಿಸುತ್ತವೆ.

ಈ ವೈಷ್ಣವಾಗಮಗಳು ವಿಶಿಷ್ಟಾದ್ವೈತದ ಮೇಲೆ ತಮ್ಮ ಪ್ರಭಾವ ಬೀರಿವೆ. ಭಗವಾನ್ ವಿಖನಸರು ತಮ್ಮ ಸೂತ್ರಗಳಲ್ಲಿ ಶ್ರೀಮನ್ನಾರಾಯಣನ ಪೂಜೆಯನ್ನು ಪ್ರತಿಪಾದಿಸಿದ್ದಾರೆ.

'ವೈಖಾನಸಮುಷಿರ್ದೇವಿ ಬ್ರಹ್ಮಣೋ ನಖನಿಃಸೃತಃ ।
ಹಿಮವಚ್ಛಿಖರೇ ರಮ್ಯೇ ಗಂಗಾದ್ವಾರೇ ತಪಸ್ಯತಿ ॥
ಪಾಂಚರಾತ್ರಸಮಂ ಶಾಸ್ತ್ರಂ ಮತ್ಪೂಜಾರ್ಥಂ ಕರಿಷ್ಯತಿ ।'

ಎಂದು ಪ್ರಶ್ನಸಂಹಿತೆಯಲ್ಲಿ ಹೇಳಿದೆ. ಇದನ್ನವಲಂಬಿಸಿ ಭೃಗು, ಮರೀಚಿ ಮೊದಲಾದ ಮಹರ್ಷಿಗಳು ಆಗಮಗ್ರಂಥಗಳನ್ನು ರಚಿಸಿದರು. ಭೃಗುಸಂಹಿತೆ, ಮರೀಚಿಪಟಲ, ಆನಂದಸಂಹಿತೆ ಮುಂತಾದವು ವೈಖಾನಸಾಗಮಗ್ರಂಥಗಳು. ಪಾಂಚರಾತ್ರಾಗಮವು ವೇದಮೂಲವೆಂದೂ ಪ್ರಮಾಣಭೂತವಾದುದೆಂದೂ

'ಶ್ರುತಿಮೂಲಮಿದಂ ಶಾಸ್ತ್ರಂ ಪ್ರಮಾಣಂ ಕಲ್ಪಸೂತ್ರವತ್'

ಎಂದೂ,

acharya.org

'ಶ್ರುತಿಮೂಲಾನಿ ತಾನ್ಯೇವ ಪಾಂಚರಾತ್ರಾಣಿ ಪಂಕಜ

ಎಂದೂ,

ವೇದಮೂಲತಯಾ ತಂತ್ರಂ ಅಪ್ತಮೂಲತಯಾಪಿ ಚ |
ಪುರಾಣವತ್ ಪ್ರಮಾಣಂ ಸ್ಯಾತ್ ತಥಾ ಮನ್ವಾದಿವಾಕ್ಯವತ್ ||'

ಎಂದೂ ಹೇಳಲಾಗಿದೆ. ಶಾಂಡಿಲ್ಯರು ಭಗವಾನ್ ಸಂಕರ್ಷಣನಿಂದ ಸಾತ್ವತ, ಪೌಷ್ಕರ, ಜಯಾಖ್ಯ ಮತ್ತು ಪಾಂಚರಾತ್ರ ಸಂಹಿತೆಗಳನ್ನು ಪಡೆದುಕೊಂಡರಂತೆ.

ರಹಸ್ಯಾಮ್ನಾಯ ಅಥವಾ ಏಕಾಯನ ವೇದ ಋಗ್ಯಜುಸ್ಸಾಮವೇದಗಳ ಜೊತೆಗೆ ಇದ್ದಿತೆಂದೂ ಇದಕ್ಕೆ 'ಪಾಂಚರಾತ್ರಶ್ರುತಿ' 'ಪಾಂಚರಾತ್ರೋಪನಿಷತ್' ಎಂಬ ಹೆಸರು ರೂಢಿಯಲ್ಲಿದ್ದಿತೆಂದೂ, ಇದನ್ನೇ ಭಗವಾನ್ ಸಂಕರ್ಷಣನು ಬ್ರಹ್ಮದೇವನಿಗೆ ಉಪದೇಶಿಸಿದನೆಂದೂ ಹೇಳಿದೆ.

'ಸಾಕ್ಷಾತ್ಸಂಕರ್ಷಣಾದ್ವ್ಯಕ್ತಾತ್ ಪ್ರಾಪ್ತ ಏಷ ಮಹತ್ತರಃ |
ಏಷ ಏಕಾಯನೋ ವೇದಃ ಪ್ರಖ್ಯಾತಃ ಸಾತ್ವತೋ ವಿಧಿಃ ||
ದುರ್ವಿಜ್ಞೇಯೋ ದುಷ್ಕರಶ್ಚ ಪ್ರತಿಬುದ್ಧೈಃ ನಿಷೇವ್ಯತೇ |
ಮೋಕ್ಷಾಯನಾಯ ವೈ ಪಂಥಾ ಏತದನ್ಯೋ ನ ವಿದ್ಯತೇ ||'

ಎಂದೂ

'ವೇದಮೇಕಾಯನಂ ನಾಮ ವೇದಾನಾಂ ಶಿರಸಿ ಸ್ಥಿತಮ್ |
ತದರ್ಥಕಂ ಪಾಂಚರಾತ್ರಂ ಮೋಕ್ಷದಂ ತತ್ಕ್ರಿಯಾವತಾಮ್ ||
ಯಸ್ಮಿನ್ನೇಕೋ ಮೋಕ್ಷಮಾರ್ಗೋ ವೇದೇ ಪ್ರೋಕ್ತಃ ಸನಾತನಃ |
ಮಹಾರಾಧನರೂಪೇಣ ತಸ್ಮಾದೇಕಾಯನಂ ಭವೇತ್ ||'

ಎಂದೂ ಈ ಅಂಶವನ್ನು ನಿರೂಪಿಸಿದೆ.

ಮಹಾಭಾರತದಲ್ಲಿ

'ಇದಂ ಮಹೋಪನಿಷದಂ ಚತುರ್ವೇದಸಮನ್ವಿತಮ್ |
ಸಾಂಖ್ಯಯೋಗಕೃತಾಂತೇನ ಪಂಚರಾತ್ರಾನುಶಬ್ದಿತಮ್ ||
ವೇದಾಂತೇಷು ಯಥಾಸಾರಂ ಸಂಗೃಹ್ಯ ಭಗವಾನ್ ಹರಿಃ |
ಭಕ್ತಾನುಕಂಪಯಾ ವಿದ್ವಾನ್ ಸಂಚಿಕ್ಷೇಪ ಯಥಾಸುಖಮ್ ||'

ಎಂದು ತಿಳಿಸಿ ಪಾಂಚರಾತ್ರಾಗಮ ಭಗವದುಪದಿಷ್ಟವಾದುದೆಂದು ಪ್ರತಿಪಾದಿಸಿದೆ.

ಪಾಂಚರಾತ್ರಶಬ್ದಾರ್ಥ

ಈ ಶಬ್ದವನ್ನೂ ಅನೇಕರೀತಿಯಲ್ಲಿ ವಿವರಿಸಿದ್ದಾರೆ. ಅವುಗಳಲ್ಲಿ ಇವು ಕೆಲವು :—

(1) ಒಂದು ಅಹೋರಾತ್ರವನ್ನು ಅಭಿಗಮನ, ಉಪಾದಾನ, ಇಜ್ಯಾ, ಸ್ವಾಧ್ಯಾಯ ಮತ್ತು ಯೋಗ ಎಂದು ಭಗವದಾರಾಧನಕ್ಕೆ ಅರ್ಹವಾಗುವಂತೆ ವಿಭಾಗ ಮಾಡಿದೆ. ಈ ಪಂಚಕಾಲಪ್ರಕ್ರಿಯೆಯ ಪ್ರತಿಪಾದನ ಈ ಶಾಸ್ತ್ರದ ಅಸಾಧಾರಣವಾದ ವಿಶೇಷವಾದ ಕಾರಣ ಇದಕ್ಕೆ ಪಾಂಚರಾತ್ರವೆಂಬ ಹೆಸರು ಬಂದಿತು.

acharya.org

'ಪಂಚಕಾಲವ್ಯವಸ್ಥಿತ್ಯೈ ವೇಂಕಟೇಶವಿಪಶ್ಚಿತಾ ।
ಶ್ರೀಪಾಂಚರಾತ್ರಸಿದ್ಧಾಂತವ್ಯವಸ್ಥೇಯಂ ಸಮರ್ಥಿತಾ ॥'

ಎಂಬ ಪಾಂಚರಾತ್ರರಕ್ಷೆಯ ವಚನದಲ್ಲಿ ಇದನ್ನು ಕಾಣಬಹುದು.

(2) ಶಾಂಡಿಲ್ಯ, ಔಪಗಾಯನ, ಮೌಂಜ್ಯಾಯನ, ಕೌಶಿಕ ಮತ್ತು ಭರದ್ವಾಜ ಎಂಬ ಐದು ಮಂದಿ ಆಚಾರ್ಯರುಗಳು ಐದು ರಾತ್ರಿಗಳಲ್ಲಿ ಪಾಂಚರಾತ್ರಾಗಮ ಸಿದ್ಧಾಂತಗಳನ್ನು ತಮ್ಮ ಶಿಷ್ಯರುಗಳಿಗೆ ಉಪದೇಶಿಸಿದ ಕಾರಣ ಇದಕ್ಕೆ ಈ ಹೆಸರು ಬಂದಿದೆ ಎಂದು ಈಶ್ವರಸಂಹಿತೆಯಲ್ಲಿ ಹೇಳಿದೆ.

(3) ಈ ಆಗಮಗಳಲ್ಲಿ ಪರ, ವ್ಯೂಹ, ವಿಭವ, ಅರ್ಚಾ ಮತ್ತು ಅಂತರ್ಯಾಮಿ ಎಂಬ ಭಗವಂತನ ಪಂಚವ್ಯೂಹಗಳ ಪ್ರತಿಪಾದನೆಯು ಇರುವ ಕಾರಣ ಇದಕ್ಕೆ ಪಾಂಚರಾತ್ರಾಗಮವೆಂಬ ಹೆಸರು ಬಂದಿತೆಂದು ಅಹಿರ್ಬುಧ್ನ್ಯಸಂಹಿತೆಯಿಂದ ಗೊತ್ತಾಗುತ್ತದೆ.

(4) 'ರಾತ್ರ' ಎಂಬ ಶಬ್ದಕ್ಕೆ ಜ್ಞಾನವೆಂಬ ಅರ್ಥವಿರುವುದರಿಂದಲೂ ಐದು ಬಗೆಯಾದ ಜ್ಞಾನವನ್ನು ಉಪದೇಶಿಸಿರುವ ಕಾರಣ ಈ ಶಾಸ್ತ್ರಕ್ಕೆ ಪಾಂಚರಾತ್ರವೆಂಬ ಹೆಸರು ಬಂದಿತೆಂದೂ ಹೇಳಿದೆ.

'ರಾತ್ರಂ ಚ ಜ್ಞಾನವಚನಂ ಜ್ಞಾನಂ ಪಂಚವಿಧಂ ಸ್ಮೃತಮ್ ।
ತೇನೇದಂ ಪಾಂಚರಾತ್ರಂ ಹಿ ಪ್ರವದಂತಿ ಮನೀಷಿಣಃ ॥'

ಎಂದು ನಾರದಪಾಂಚರಾತ್ರದಲ್ಲಿ ಈ ಅಂಶವನ್ನು ತಿಳಿಸಿದೆ. ಈ ಐದು ಜ್ಞಾನಗಳನ್ನು

'ಪ್ರಥಮಂ ಬ್ರಹ್ಮರಾತ್ರಂ ತು ದ್ವಿತೀಯಂ ಶಿವರಾತ್ರಕಮ್ ।
ತೃತೀಯಂ ಇಂದ್ರರಾತ್ರಂ ತು ಚತುರ್ಥಂ ನಾಗರಾತ್ರಕಮ್ ॥
ಪಂಚಮಂ ಋಷಿರಾತ್ರಂ ತು ಪಂಚರಾತ್ರಮಿತಿ ಸ್ಮೃತಮ್ ॥'

ಎಂದು ಭರಧ್ವಾಜಸಂಹಿತೆಯು ತಿಳಿಸುತ್ತದೆ.

(5) ಲೌಕಿಕವಾದ ಇಂದ್ರಿಯಾರ್ಥಜ್ಞಾನಕ್ಕೆ ರಾತ್ರಿ ಎಂಬರ್ಥವನ್ನು ಹೇಳಿ ಈ ಬಗೆಯಾದ ಅರಿವು ಯಾವ ಪರಜ್ಞಾನದ ಕಾರಣ ನಿರಸ್ತವಾಗುವುದೋ ಎಂದರೆ ಯಾವುದರಿಂದ ಅಜ್ಞಾನವು ಹೋಗುವುದೋ ಅದು ಪಾಂಚರಾತ್ರವೆಂದು ವಿಶ್ವಾಮಿತ್ರ ಸಂಹಿತೆಯಲ್ಲಿ

'ಸಾಂಖ್ಯಯೋಗಾದಯಃ ಪಂಚ ರಾತ್ರ್ಯಾಯಂತೇಽಸ್ಯ ಸನ್ನಿಧೌ ।
ತಸ್ಮಾದ್ವಾ ಪಂಚರಾತ್ರಾರ್ಥಃ ಪ್ರೋಚ್ಯತೇ ಸೂರಿಸತ್ತಮೈಃ ॥'

ಎಂದು ವರ್ಣಿಸಿದೆ.

(6) 'ಪಾಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ನಾರಾಯಣಃ ಸ್ವಯಮ್'

ಎಂದೂ

acharya.org

'ಪಂಚಾಪಿ ಪೃಥಗೇಕೈಕದಿವಾರಾತ್ರಂ ಜಗತ್ಪ್ರಭುಃ ।
ಅಧ್ಯಾಪಯಾಮಾಸ ಯತಸ್ತದೇತನ್ಮುನಿಪುಂಗವಾಃ ॥
ಶಾಸ್ತ್ರಂ ಸರ್ವಜನೈರ್ಲೋಕೇ ಪಾಂಚರಾತ್ರಮಿತೀರ್ಯತೇ ॥'

ಎಂದೂ ಹೇಳಿರುವಂತೆ ಐದು ಅಹೋರಾತ್ರಿಗಳು ಭಗವಂತನೇ ಇದನ್ನು ಉಪದೇಶಿಸಿದ ಕಾರಣ ಇದಕ್ಕೆ ಪಾಂಚರಾತ್ರವೆಂಬ ಹೆಸರು ಬಂದಿದೆ.

ಪಾಂಚರಾತ್ರಾಗಮಗಳ ಸಂಖ್ಯೆ

ಪಾಂಚರಾತ್ರಾಗಮಕ್ಕೆ ಸೇರಿದ ಗ್ರಂಥಗಳು ಅನೇಕವಾಗಿವೆ. ಇವು 225ಕ್ಕೂ ಹೆಚ್ಚಾಗಿವೆ. ಇವುಗಳ ಹೆಸರುಗಳನ್ನು ಪಾದ್ಮ, ಮಾರ್ಕಂಡೇಯ, ಕಪಿಂಜಲ, ಭರದ್ವಾಜ, ಹಯಶೀರ್ಷ ಮೊದಲಾದ ಸಂಹಿತೆಗಳಲ್ಲಿ ಉಲ್ಲೇಖಿಸಿದೆ. ಇವುಗಳಲ್ಲಿ ಪ್ರಧಾನತಮವಾದ ಕೆಲವು ಅಗಸ್ತ್ಯಸಂಹಿತೆ, ಅಹಿರ್ಬುಧ್ನ್ಯಸಂಹಿತೆ, ಈಶ್ವರಸಂಹಿತೆ, ಕಣ್ವಸಂಹಿತೆ, ಜನಾರ್ದನ, ಜಯಾಖ್ಯ, ಪಾರಮೇಶ್ವರ, ಪಾರಾಶರ್ಯ, ಪುಂಡರೀಕಾಕ್ಷ, ಮಾಹೇಶ್ವರ, ಯೋಗರಹಸ್ಯತಂತ್ರ, ಲಕ್ಷ್ಮೀತಂತ್ರ, ವಿಷ್ಣುಸಂಹಿತೆ ಮುಂತಾದವಾಗಿವೆ. ವೇದಾಂತ ದೇಶಿಕರು ಚಿತ್ರಶಿಖಂಡಿಸಂಹಿತಾ, ಜಯತ್ಸೇನ, ತೇಜೋದ್ರವಿಣ, ಸಾತ್ಯಕಿತಂತ್ರ, ಸೌಮಂತವ ಮುಂತಾದವನ್ನು ಪಾಂಚರಾತ್ರರಕ್ಷೆಯಲ್ಲಿ ಉದಾಹರಿಸಿದ್ದಾರೆ.

ಪಾಂಚರಾತ್ರಪ್ರಾಮಾಣ್ಯ

ಪಾಂಚರಾತ್ರ ಆಗಮವೂ ವೇದಮೂಲವಾದ ಕಾರಣ ಮತ್ತು ವೇದಗಳ ಉಪದೇಶಕ್ಕೆ ವಿರುದ್ಧವಾದ ಯಾವ ಅಂಶವನ್ನೂ ಹೊಂದಿಲ್ಲದ ಕಾರಣ ಸಮಗ್ರವಾಗಿ ಪ್ರಮಾಣವೆಂದು ಭಗವಾನ್ ಭಾಷ್ಯಕಾರರು ಸಾಧಿಸಿದ್ದಾರೆ. ಪಾಂಚರಾತ್ರಪ್ರಕ್ರಿಯೆ ಬಹಳ ಪ್ರಾಚೀನವಾದುದು. ಬ್ರಹ್ಮಸೂತ್ರಗಳಲ್ಲಿ ಭಗವಾನ್ ಬಾದರಾಯಣರು ಇತರ ಸಿದ್ಧಾಂತಗಳಾದ ಪೂರ್ವಮೀಮಾಂಸಾ, ಸಾಂಖ್ಯ, ನ್ಯಾಯ, ಜೈನ, ಬೌದ್ಧ, ಪಾಶುಪತ ಮೊದಲಾದವುಗಳನ್ನು ಪರೀಕ್ಷಿಸಿ ನಿರಾಕರಣಮಾಡಿದ ಮೇಲೆ ಉತ್ಪತ್ತ್ಯಸಂಭವಾಧಿಕರಣದಲ್ಲಿ ಪಾಂಚರಾತ್ರದ ಬಗೆಗೆ 'ಉತ್ಪತ್ತ್ಯಸಂಭವಾತ್' 'ನ ಚ ಕರ್ತುಃ ಕರಣಮ್' ಎಂಬ ಸೂತ್ರಗಳಿಂದ ಪೂರ್ವಪಕ್ಷಮಾಡಿ, 'ವಿಜ್ಞಾನಾದಿಭಾವೇ ತದಪ್ರತಿಷೇಧಃ' ಮತ್ತು 'ವಿಪ್ರತಿಷೇಧಾಚ್ಚ' ಎಂಬ ಸೂತ್ರಗಳಿಂದ ಆಕ್ಷೇಪ ಪರಿಹಾರ ಮಾಡಿ ಪಾಂಚರಾತ್ರದ ಪ್ರಾಮಾಣ್ಯವನ್ನು ಸ್ಥಾಪಿಸಿದ್ದಾರೆ.

ಈ ಸೂತ್ರದ ಮೇಲೆ ಭಾಷ್ಯ ಬರೆಯುತ್ತಾ ಶಂಕರಾಚಾರ್ಯರು ಪಾಂಚರಾತ್ರ ಆಗಮಗಳ ಸ್ವರೂಪವನ್ನು ನಿರೂಪಿಸುತ್ತಾ ಹೀಗೆ ಹೇಳುತ್ತಾರೆ—

"ತತ್ರ ಭಾಗವತಾ ಮನ್ಯಂತೇ ಭಗವಾನೇವೈಕೋ ವಾಸುದೇವೋ ನಿರಂಜನಜ್ಞಾನಸ್ವರೂಪಃ ಪರಮಾರ್ಥತತ್ತ್ವಂ, ಸ ಚತುರ್ಧಾತ್ಮಾನಂ ಪ್ರವಿಭಜ್ಯ ಪ್ರತಿಷ್ಠಿತೋ ವಾಸುದೇವವ್ಯೂಹರೂಪೇಣ ಸಂಕರ್ಷಣವ್ಯೂಹರೂಪೇಣ ಪ್ರದ್ಯುಮ್ನವ್ಯೂಹರೂಪೇಣ ಅನಿ-

acharya.org

ರುದ್ಧ ವ್ಯೂಹರೂಪೇಣ ಚ| ವಾಸುದೇವೋ ನಾಮ ಪರಮಾತ್ಮೋಚ್ಯತೇ । ಸಂಕರ್ಷಣೋ ನಾಮ ಜೀವಃ। ಪ್ರದ್ಯುಮ್ನೋ ನಾಮ ಮನಃ। ಅನಿರುದ್ಧೋ ನಾಮಾಹಂಕಾರಃ| ತೇಷಾಂ ವಾಸುದೇವಃ ಪರಾ ಪ್ರಕೃತಿರಿತರೇ ಸಂಕರ್ಷಣಾದಯಃ ಕಾರ್ಯಮ್ । ತಮಿತ್ಥಂಭೂತಂ ಪರಮೇಶ್ವರಂ ಭಗವಂತಂ ಅಭಿಗಮನ,ಉಪಾದಾನ,ಇಜ್ಯಾ,ಸ್ವಾಧ್ಯಾಯಯೋಗೈರ್ವರ್ಷಶತಂ ಇಷ್ಟ್ವಾ ಕ್ಷೀಣಕ್ಲೇಶೋ ಭಗವಂತಮೇವ ಪ್ರತಿಪದ್ಯತ ಇತಿ। ತತ್ರ ಯತ್ತಾವದುಚ್ಯೇತ ಯೋಽಸಾ ನಾರಾಯಣಃ ಪರಃ ಅವ್ಯಕ್ತಾತ್ಪ್ರಸಿದ್ಧಃ ಪರಮಾತ್ಮಾ ಸರ್ವಾತ್ಮಾ ಸ ಆತ್ಮನಾತ್ಮಾನಂ ಅನೇಕಧಾ ವ್ಯೂಹ್ಯಾವಸ್ಥಿತ ಇತಿ ತನ್ನ ನಿರಾಕ್ರಿಯತೇ, ಸ ಏಕಧಾ ಭವತಿ, ತ್ರಿಧಾ ಭವತಿ, ಇತ್ಯಾದಿಶ್ರುತಿಭ್ಯಃ ಪರಮಾತ್ಮನೋ ಅನೇಕಧಾ ಭಾವಸ್ಯ ಅಧಿಗತತ್ವಾತ್। ಯದಪಿ ತಸ್ಯ ಭಗವತೋ ಅಭಿಗಮನಾದಿಲಕ್ಷಣಮಾರಾಧನಂ ಅಜಸ್ರಂ ಅನನ್ಯಚಿತ್ತತಯಾ ಅಭಿಪ್ರೇಯತೇ, ತದಪಿ ನ ಪ್ರತಿಷಿಧ್ಯತೇ | ಶ್ರುತಿಸ್ಮೃತ್ಯೋಃ ಈಶ್ವರಪ್ರಣಿಧಾನಸ್ಯ ಪ್ರಸಿದ್ಧತ್ವಾತ್ ।'

ಇದರಿಂದ ಪಾಂಚರಾತ್ರಸಿದ್ಧಾಂತದ ಪ್ರಾಚೀನತೆಯೂ ಪ್ರಾಮಾಣ್ಯವೂ ಸುವ್ಯವಸ್ಥಿತವಾಗುವುವು. 'ಸಂಕರ್ಷಣೋ ನಾಮ ಜೀವೋ ಜಾಯತೇ' ಎಂಬ ವಾಕ್ಯ ಜೀವನಿಗೆ ಉತ್ಪತ್ತಿ ಹೇಳುವುದೆಂದು ಆಶಂಕಿಸಿ ಪಾಂಚರಾತ್ರದ ಪ್ರಾಮಾಣ್ಯದ ಮೇಲೆ ಆಕ್ಷೇಪ ಬಂದಿದೆ. ಇಲ್ಲಿ ಜೀವನ ಉತ್ಪತ್ತಿಯನ್ನು ಈ ವಾಕ್ಯ ಹೇಳುವುದಿಲ್ಲ. ಆದರೆ ಜೀವ, ಮನಸ್ಸು ಮತ್ತು ಅಹಂಕಾರ ತತ್ತ್ವಗಳ ಅಧಿಷ್ಠಾತೃದೇವತೆಗಳಾದ ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧರನ್ನು ಜೀವಾದಿಶಬ್ದಗಳಿಂದ ಹೇಳಿರುವ ಕಾರಣ ಜೀವೋತ್ಪತ್ತಿಯನ್ನು ಇದು ಹೇಳುತ್ತಿಲ್ಲ. 'ತತ್ರ ಜೀವಮನೋಹಂಕಾರತತ್ತ್ವಾನಾಂ ಅಧಿಷ್ಠಾತಾರಸ್ಸಂಕರ್ಷಣಪ್ರದ್ಯುಮ್ನಾನಿರುದ್ಧಾ ಇತಿ ತೇಷಾಮೇವ ಜೀವಾದಿಶಬ್ದೈಃ ಬ್ರಹ್ಮಣೋಭಿಧಾನಮ್' ಎಂದು ರಾಮಾನುಜರು ಈ ಅಂಶವನ್ನು ವಿವರಿಸಿದ್ದಾರೆ. ಅದೇ ಪಾಂಚರಾತ್ರಾಗಮ ಮುಂದೆ ಜೀವಾತ್ಮಸ್ವರೂಪವನ್ನು ಹೇಳುವಾಗ

'ಸ ಹ್ಯನಾದಿರನಂತಶ್ಚ ಪರಮಾರ್ಥೇನ ನಿಶ್ಚಿತಃ' ಎಂದು ಜೀವನ ನಿತ್ಯತ್ವವನ್ನೂ ಅನಾದಿತ್ವವನ್ನೂ ಹೇಳುತ್ತದೆ. ಇವೆಲ್ಲವನ್ನೂ ಕ್ರೋಢೀಕರಿಸಿ ಜಯಂತಭಟ್ಟರು ನ್ಯಾಯಮಂಜರಿಯಲ್ಲಿ,

'ಪಾಂಚರಾತ್ರೇಽಪಿ ತೇನೈವ ಪ್ರಾಮಾಣ್ಯಮುಪವರ್ಣಿತಮ್ ।
ಅಪ್ರಾಮಾಣ್ಯನಿಮಿತ್ತಂ ಹಿ ನಾಸ್ತಿ ತತ್ರಾಪಿ ಕಿಂಚನ ॥'

ಎಂದೂ ಅಭಿಪ್ರಾಯ ಪಟ್ಟಿದ್ದಾರೆ.

ವಿಶಿಷ್ಟಾದ್ವೈತವೂ ಪಾಂಚರಾತ್ರವೂ

ವಿಶಿಷ್ಟಾದ್ವೈತ ಸಿದ್ಧಾಂತ ವೈಖಾನಸಾಗಮ ಹಾಗೂ ಪಾಂಚರಾತ್ರಾಗಮದ ಪ್ರಮಾಣ್ಯವನ್ನು ಅಂಗೀಕರಿಸಿದೆ. ಒಂದು ಸಿದ್ಧಾಂತ ಅಂಗೀಕಾರಾರ್ಹವೇ ಇಲ್ಲವೇ ಎಂಬುವುದಕ್ಕೆ ನಾವು ಮಾಡಬೇಕಾದ ಪರೀಕ್ಷೆ ಅದು ವೇದೋಪದೇಶಕ್ಕೆ ಅನುಗುಣ

ವಾಗಿದೆಯೇ ಇಲ್ಲವೇ ಎಂದು ನೋಡತಕ್ಕದ್ದು. ಯಾವ ಅಂಶ ವೇದಕ್ಕೆ ವಿರುದ್ಧವಲ್ಲವೋ ಅದು ಗ್ರಾಹ್ಯ; ಯಾವುದು ವೇದಕ್ಕೆ ವಿರುದ್ಧವೋ ಅದು ತ್ಯಾಜ್ಯ. ಈ ದೃಷ್ಟಿಯಿಂದ ನೋಡಿದಾಗ ಪಾಂಚರಾತ್ರಾಗಮ ವೇದವಿರುದ್ಧವಾದ ಅಂಶವನ್ನು ಹೊಂದಿಲ್ಲವಾದ ಕಾರಣ ಪರಮಗ್ರಾಹ್ಯವೆನಿಸುವುದು. 'ಯಥಾಗಮಂ ಯಥಾನ್ಯಾಯಂ ನಿಷ್ಠಾ ನಾರಾಯಣಃ ಪ್ರಭುಃ' ಎಂದು ಹೇಳಿರುವಂತೆ ವೇದಶಾಸ್ತ್ರವನ್ನು ಪರಿಶೀಲಿಸಿದಾಗ ಶ್ರೀಮನ್ನಾರಾಯಣನೇ ಸಕಲಶಾಸ್ತ್ರತಾತ್ಪರ್ಯವೆಂದು ಗೊತ್ತಾಗುತ್ತದೆ. ವೇದಾಂತವೇದ್ಯನೂ ಪರಬ್ರಹ್ಮವಸ್ತುವೂ ಆದ ನಾರಾಯಣನೇ ಪಾಂಚರಾತ್ರವನ್ನು ಹೇಳಿದವನೆಂದ ಮೇಲೆ ಇದರಲ್ಲಿ ಅಪ್ರಾಮಾಣ್ಯಗಂಧವೂ ಇಲ್ಲ. ಆದುದರಿಂದಲೇ ಈಸಿದ್ಧಾಂತ ಪಾಂಚರಾತ್ರಾಗಮಕ್ಕೆ ಪ್ರಧಾನವಾದ ಸ್ಥಾನವನ್ನಿತ್ತಿದೆ. 'ಸಾಂಗೇಷು ವೇದೇಷು ನಿಷ್ಠಾಂ ಅಲಭಮಾನಃ ಶಾಂಡಿಲ್ಯಃ ಪಾಂಚರಾತ್ರಶಾಸ್ತ್ರಮಧೀತವಾನ್' ಎಂದು ಹೇಳಿರುವುದನ್ನು ಪುರಸ್ಕರಿಸುತ್ತದೆ. ಇದರಿಂದ ಪಾಂಚರಾತ್ರ ವೇದಕ್ಕೆ ವಿರುದ್ಧವಲ್ಲವೆಂದೂ ಆದರೆ ವೇದದ ಅರ್ಥವನ್ನು ಇತಿಹಾಸ ಪುರಾಣಗಳಂತೆ ವಿಶದೀಕರಿಸುವುದೆಂದೂ ತಿಳಿಯಬೇಕು. ಪಾಂಚರಾತ್ರಶಾಸ್ತ್ರವನ್ನು ಅಭ್ಯಾಸಮಾಡುವವರಿಗೆ ವೇದವಾಕ್ಯಗಳ ಅರ್ಥ ಶಾಂಡಿಲ್ಯನಿಗೆ ಸ್ಪಷ್ಟವಾಗಲಿಲ್ಲವೆಂಬದು ಮೇಲಿನ ವಾಕ್ಯದ ತಾತ್ಪರ್ಯ. ವೇದಾಂತದೇಶಿಕರು ಇದನ್ನೇ ಎರಡು ರೀತಿಯಲ್ಲಿ ಸರ್ವಾರ್ಥ ಸಿದ್ಧಿಯಲ್ಲಿ,

"ಇತಿಹಾಸಪುರಾಣವದರ್ಥವೈಶದ್ಯಾದಿತ್ಯೇಕಾ. ಶಾಂಡಿಲ್ಯಸ್ಯ ಪಂಚರಾತ್ರಶಾಸ್ತ್ರಾಭ್ಯಾಸಪರ್ಯಂತಂ ವೇದವಾಕ್ಯಾರ್ಥಪ್ರತಿಪತ್ತಿಃ ವಿಶದಾ ನಾಭೂದಿತ್ಯಪರಾ."

ಎಂದು ವಿವರಿಸಿದ್ದಾರೆ. ಹೀಗೆ ವಿಶಿಷ್ಟಾದ್ವೈತ ಸಿದ್ಧಾಂತದ ಆಧಾರಗ್ರಂಥಗಳಲ್ಲಿ ಪಾಂಚರಾತ್ರಾಗಮವೂ ಸೇರಿದೆ.

ವಿಶಿಷ್ಟಾದ್ವೈತಕ್ಕೆ ಆಗಮಗಳ ಕೊಡುಗೆ

ಪಾಂಚರಾತ್ರಶಾಸ್ತ್ರವನ್ನು ಸಂಹಿತೆ, ಉಪನಿಷತ್ ಮತ್ತು ತಂತ್ರ ಎಂದೂ ಕರೆಯುವುದುಂಟು. ಇವುಗಳು ಜ್ಞಾನ, ಯೋಗ, ಕ್ರಿಯಾ ಮತ್ತು ಚರ್ಯಾ ಎಂಬ ನಾಲ್ಕು ಪಾದಗಳನ್ನು ಹೊಂದಿವೆ. ನಾಲ್ಕು ವ್ಯೂಹಗಳ ಸ್ವರೂಪವನ್ನೂ ಅವುಗಳ ಕಾರ್ಯವನ್ನೂ ಜ್ಞಾನಪಾದ ನಿರೂಪಿಸುವುದು. ಯೋಗಪಾದದಲ್ಲಿ ಉಪಾಸನಾಪ್ರಕಾರಗಳ ನಿರೂಪಣೆ ಇದೆ. ಆಲಯಾರ್ಚೆ ಮತ್ತು ವಿಗ್ರಹನಿರ್ಮಾಣಪ್ರಕಾರ ಇವು ಕ್ರಿಯಾಪಾದದವಿಷಯ. ಚರ್ಯಾಪಾದದಲ್ಲಿ ಆರಾಧನವಿಧಿಯನ್ನು ವಿವರಿಸಿದೆ. ಈ ಆಗಮಗಳೂ ಸಹ ಪರಬ್ರಹ್ಮಸ್ವರೂಪವನ್ನೂ, ಮೋಕ್ಷಸ್ವರೂಪವನ್ನೂ, ಮೋಕ್ಷೋಪಾಯಸ್ವರೂಪವನ್ನೂ ತಮ್ಮದೇ ಆದ ರೀತಿಯಲ್ಲಿ ನಿರೂಪಿಸಿವೆ. ಇವುಗಳ ಪ್ರಭಾವ ವಿಶಿಷ್ಟಾದ್ವೈತದ ಮೇಲೆ ಪರಿಣಾಮಕಾರಿಯಾಗಿ ಆಗಿದೆ. ಆಗಮಗಳಲ್ಲಿ ಅಸಾಧಾರಣವಾಗಿ ಪ್ರತಿ

acharya.org

ಪಾದಿಸಿರುವ ಅನೇಕ ಅಂಶಗಳನ್ನು ವಿಶಿಷ್ಟಾದ್ವೈತಸಿದ್ಧಾಂತದಲ್ಲಿ ನಾವು ಕಾಣಬಹುದು. ಇವುಗಳಲ್ಲಿ ಪ್ರಧಾನವಾದವು ಈ ಅಂಶಗಳು :—

(ಅ) ಪರತತ್ತ್ವವು ಶ್ರೀಮನ್ನಾರಾಯಣ

ಪರಬ್ರಹ್ಮವಸ್ತು ಲಕ್ಷ್ಮೀನಾರಾಯಣಾತ್ಮಕವಾದುದೆಂದು ಸಿದ್ಧಾಂತ. ದಿವ್ಯದಂಪತಿಗಳಿಬ್ಬರೂ ಸೇರಿ ತತ್ತ್ವ ಒಂದೇ ಎಂಬುದನ್ನು 'ಉಭಯಾಧಿಷ್ಠಾನಂ ಚೈಕಂ ಶೇಷಿತ್ವಂ' ಎಂದು ತಿಳಿಸಿದ್ದಾರೆ. ಲಕ್ಷ್ಮೀಪತಿತ್ವ ಭಗವಂತನ ಅಸಾಧಾರಣ ಲಕ್ಷಣ. ಶ್ರೀದೇವಿ ಭಗವಂತನೊಡನೆ ನಿತ್ಯಯೋಗವನ್ನು ಹೊಂದಿದ್ದಾಳೆ. 'ಪತ್ನೀವಿಶಿಷ್ಟ ಏವೈಕಃ' ಎಂದು ಈ ಅಂಶ ಹೇಳಿದೆ. 'ಬ್ರಹ್ಮಣಿ ಶ್ರೀನಿವಾಸೇ' ಎಂದು ರಾಮಾನುಜರೂ ಹೇಳುತ್ತಾರೆ. ಬ್ರಹ್ಮವಸ್ತು ಲಕ್ಷ್ಮೀನಾರಾಯಣಾತ್ಮಕವಾದುದೆಂಬ ಅಂಶ ಪಾಂಚರಾತ್ರಾಗಮದಲ್ಲಿ ಸ್ಪಷ್ಟವಾಗಿದೆ.

> 'ಭವನ್ನಾರಾಯಣೋ ದೇವೋ ಭಾವೋ ಲಕ್ಷ್ಮೀರಹಂ ಪರಾ ।
> ಲಕ್ಷ್ಮೀನಾರಾಯಣಾಖ್ಯಾತಂ ಅತೋ ಬ್ರಹ್ಮ ಸನಾತನಮ್ ॥'

ಎಂದು ಲಕ್ಷ್ಮೀತಂತ್ರದಲ್ಲಿ ಈ ಅಂಶ ಹೇಳಿದೆ. ಶ್ರೀದೇವಿ ಭಗವಂತನ ಶಕ್ತಿ ಎಂದು,

> 'ವಿಷ್ಣೋಃ ಸರ್ವಾಂಗಸಂಪೂರ್ಣಾ ಭಾವಾಭಾವಾನುಗಾಮಿನೀ ।
> ಶಕ್ತಿರ್ನಾರಾಯಣೀ ದಿವ್ಯಾ ಸರ್ವಸಿದ್ಧಾಂತಸಮ್ಮತಂ ॥
> ದೇವಾಚ್ಛಕ್ತಿಮತೋ ಭಿನ್ನಾ ಬ್ರಹ್ಮಣಃ ಪರಮೇಷ್ಠಿನಃ ।
> ಏಷ ಚೈಷಾ ಚ ಶಾಸ್ತ್ರೇಷು ಧರ್ಮಧರ್ಮಿಸ್ವಭಾವತಃ ॥
> ಭವದ್ಭಾವಸ್ವರೂಪೇಣ ತತ್ತ್ವಮೇಕಮಿವೋದಿತಾ ।'

ಎಂದು ಅಹಿರ್ಬುಧ್ನ್ಯಸಂಹಿತೆಯಲ್ಲಿ ಹೇಳಿದೆ. ಲಕ್ಷ್ಮೀದೇವಿಯೂ ನಾರಾಯಣನೂ ಸೇರಿ ಒಂದೇ ತತ್ತ್ವ ಎಂಬುದು ಪಾಂಚರಾತ್ರ ಸಿದ್ಧಾಂತ.

> 'ಅನ್ಯೋನ್ಯೇನಾವಿನಾಭಾವಾತ್ ಅನ್ಯೋನ್ಯೇನ ಸಮನ್ವಯಾತ್ ।
> ತಾದಾತ್ಮ್ಯಂ ವಿದ್ಧಿ ಸಂಬಂಧಂ ಮಮ ನಾಥಸ್ಯ ಚೋಭಯೋಃ ॥'

ಎಂಬ ಲಕ್ಷ್ಮೀತಂತ್ರದ ವಾಕ್ಯ ಇದನ್ನು ಇನ್ನೂ ಸ್ಪಷ್ಟಪಡಿಸುವುದು. ಆಗಮಗಳನ್ನು ಬಿಟ್ಟರೆ ಇತರ ಕಡೆ ಈ ತತ್ತ್ವವನ್ನು ಹೀಗೆ ವಿಶದಪಡಿಸಿಲ್ಲ. ವಿಶಿಷ್ಟಾದ್ವೈತ ಸಿದ್ಧಾಂತ ಈ ಅಂಶವನ್ನು ಆಗಮಗಳ ಆಧಾರದಿಂದ ಪಡೆದಿದೆಯೆಂದು ಹೇಳಬಹುದು.

(ಆ) ವ್ಯೂಹಗಳು

ಆಗಮಗಳಲ್ಲಿ ವಿಶದವಾಗಿ ಬರುವ ಪರ, ವ್ಯೂಹ, ವಿಭವ, ಹಾರ್ದ ಮತ್ತು ಅರ್ಚಾ ಎಂಬ ಪಂಚವ್ಯೂಹಗಳ ನಿರೂಪಣೆ ವಿಶಿಷ್ಟಾದ್ವೈತಕ್ಕೆ ಅಪೂರ್ವ ಕೊಡುಗೆಯಾಗಿದೆ. ಶ್ರುತಿಸ್ಮೃತಿಗಳಲ್ಲಿ ವ್ಯೂಹಸಿದ್ಧಾಂತದ ವಿವರಣೆ ಎಲ್ಲಿಯೂ ಸ್ಪಷ್ಟವಾಗಿಲ್ಲ. ಈ ವಿಚಾರ

acharya.org

ವನ್ನು ಆಗಮಗಳು ವಿವರವಾಗಿ ವಿವೇಚಿಸಿವೆ. ವಿಭವಾವತಾರಗಳ ವೈಭವವನ್ನು ಶ್ರುತಿಸ್ಮೃತೀತಿಹಾಸಗಳಲ್ಲಿ ನಾವು ಕಾಣುತ್ತೇವೆ. ಆದರೆ, ಈ ಸಿದ್ಧಾಂತವನ್ನು ಸಕ್ರಿಯವಾಗಿ ಮತ್ತು ಸುದೃಢವಾಗಿ ಪ್ರತಿಪಾದಿಸಿರುವುವು ಆಗಮಗಳೇ. ಅರ್ಚಾವತಾರದ ವೈಶಿಷ್ಟ್ಯವನ್ನು ವಿಶಿಷ್ಟಾದ್ವೈತಸಿದ್ಧಾಂತ ಎತ್ತಿಹಿಡಿದಿದೆ. ಆಳ್ವಾರರುಗಳು ಅರ್ಚೆಯಲ್ಲಿಯೇ ಪ್ರಪತ್ತಿ ಮಾಡಿದ್ದಾರೆಂಬುದನ್ನು ನಾವು ಇಲ್ಲಿ ನೆನೆಯಬೇಕು. ಪಂಚವ್ಯೂಹಗಳ ಸಿದ್ಧಾಂತವು ಹೇಗೋ. ಹಾಗೆ ವ್ಯೂಹದ ನಾಲ್ಕು ಪ್ರಕಾರಗಳಾದ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಇವರ ನಿರೂಪಣೆಯೂ ಆಗಮಗಳ ವೈಶಿಷ್ಟ್ಯವೆಂದು ಹೇಳಬಹುದು. ವಿಶಿಷ್ಟಾದ್ವೈತ ಸಿದ್ಧಾಂತ ಇವನ್ನೆಲ್ಲಾ ಅಂಗೀಕಾರ ಮಾಡಿದೆ.

(ಇ) ಷಾಡ್ಗುಣ್ಯನಿರೂಪಣೆ

ಉಪನಿಷತ್ತುಗಳಲ್ಲಿ ಬ್ರಹ್ಮವಸ್ತುವಿನ ಗುಣಗಣಗಳನ್ನು ಅನೇಕವಿಧವಾಗಿ ನಿರೂಪಿಸಿದೆ. 'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ' ಎಂದೂ 'ನಿರ್ಗುಣಂ' 'ಅಮಲಂ' 'ಆನಂದಂ' ಎಂದೂ ಶ್ರುತಿಗಳು ಕೊಂಡಾಡುತ್ತವೆ. ಬ್ರಹ್ಮವಸ್ತು ದೋಷದೂರವಾಗಿ ಸಕಲ ಕಲ್ಯಾಣಗುಣಗಳಿಗೆ ಏಕಾಶ್ರಯವಾಗಿದೆ. ವಿಶಿಷ್ಟಾದ್ವೈತಸಿದ್ಧಾಂತ ಬ್ರಹ್ಮವಸ್ತುವಿನ ಉಭಯಲಿಂಗತ್ವವನ್ನು ಸಮರ್ಥಿಸುತ್ತದೆ. 'ಅಪಹತಪಾಪ್ಮಾ ವಿಜರೋ ವಿಮೃತ್ಯುಃ ವಿಶೋಕಃ ವಿಜಿಘಿತ್ಸಃ ಅಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ' ಎಂದೂ ಉಭಯಲಿಂಗತ್ವವನ್ನು ಶ್ರುತಿ ನಿರೂಪಿಸುತ್ತದೆ. ಭಗವಂತನ ಸ್ವರೂಪವನ್ನು ವಿಷ್ಣುಪುರಾಣ ನಿರೂಪಿಸುವಾಗ ಷಾಡ್ಗುಣ್ಯವನ್ನು ಪ್ರತಿಪಾದಿಸುತ್ತದೆ—

'ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಾಂಸ್ಯಶೇಷತಃ ।
ಭಗವಚ್ಛಬ್ದವಾಚ್ಯಾನಿ ವಿನಾ ಹೇಯೈರ್ಗುಣಾದಿಭಿಃ ॥'

ಎಂದು. ಈ ಗುಣಗಳೊಂದೊಂದರ ವಿವರವಾದ ಲಕ್ಷಣವನ್ನು ಆಗಮಗಳು ಪ್ರಭಾವಯುತವಾಗಿ ಮಾಡುತ್ತವೆ. 'ಷಾಡ್ಗುಣ್ಯಾದ್ವಾಸುದೇವಃ' ಎಂದೂ ಇತರ ಮೂರು ವ್ಯೂಹಗಳಲ್ಲಿ ಎರಡೆರಡು ಗುಣಗಳು ಪ್ರಧಾನವಾಗಿಯೂ ಉಳಿದವು ಅಪ್ರಧಾನವಾಗಿಯೂ ಇರುವುವೆಂದು ಆಗಮಗಳು ಮಾಡುವ ನಿರೂಪಣೆಯನ್ನು ವಿಶಿಷ್ಟಾದ್ವೈತ ಪೂರ್ಣವಾಗಿ ಅಂಗೀಕರಿಸಿದೆ. ಷಾಡ್ಗುಣ್ಯದ ನಿರೂಪಣೆ ಆಗಮಗಳ ಕೊಡುಗೆ.

(ಈ) ಮೋಕ್ಷೋಪಾಯನಿರೂಪಣೆ

ಪಾಂಚರಾತ್ರದಲ್ಲಿ ಯೋಗಪಾದದಲ್ಲಿ ಯಮನಿಯಮಾದಿ ಅಷ್ಟಾಂಗಗಳನ್ನುಳ್ಳ ಯೋಗವೇ ಮೋಕ್ಷೋಪಾಯವೆಂದು ಹೇಳಿದೆ. ಈ ಯೋಗಕ್ಕೆ ಭಗವಂತನೇ ಆಲಂಬನವೆಂಬುದನ್ನು ದೃಢಪಡಿಸುತ್ತವೆ ಆಗಮಗಳು. ಕರ್ಮಯೋಗದಿಂದ ಮನೋನೈರ್ಮಲ್ಯವನ್ನು ಸಂಪಾದಿಸಿ ಸಾಂಖ್ಯಯೋಗದಿಂದ ಇದನ್ನು ಸಾಧಿಸಬೇಕೆಂದು ಹೇಳಿದೆ. ಈ

acharya.org

ಉಪಾಸನೆಗೆ ಶಕ್ತನಲ್ಲದವನು 'ಶರಣಾಗತಿ' ಅಥವಾ 'ಪ್ರಪತ್ತಿ' ಯನ್ನು ಅನುಷ್ಠಿಸಬೇಕೆಂದು ಪಾಂಚರಾತ್ರ ವಿಧಿಸುತ್ತದೆ.

'ಉಪಾಯಾಪಾಯಸಂತ್ಯಾಗೀ ಮಧ್ಯಮಾಂ ವೃತ್ತಿಮಾಶ್ರಿತಃ ।
ಮಾಮೇಕಂ ಶರಣಂ ಪ್ರಾಪ್ಯ ಮಾಮೇವಾಂತೇ ಸಮಶ್ನುತೇ ॥
ಷಡಂಗಂ ತಮುಪಾಯಂ ಚ ಶೃಣು ಮೇ ಪದ್ಮಸಂಭವೇ ।
ಆನುಕೂಲ್ಯಸ್ಯ ಸಂಕಲ್ಪಃ ಪ್ರಾತಿಕೂಲ್ಯಸ್ಯ ವರ್ಜನಮ್ ॥'
ರಕ್ಷಿಷ್ಯತೀತಿ ವಿಶ್ವಾಸಃ ಗೋಪ್ತೃತ್ವವರಣಂ ತಥಾ ।
ಆತ್ಮನಿಕ್ಷೇಪಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ ॥'

ಎಂದು ಪ್ರಪತ್ತಿಯನ್ನೂ, ಪ್ರಪತ್ತಿಯ ಅಂಗಗಳನ್ನೂ ಲಕ್ಷ್ಮೀತಂತ್ರದಲ್ಲಿ ವಿಧಿಸಿದೆ. ಅಹಿರ್ಬುಧ್ನ್ಯಸಂಹಿತೆಯಲ್ಲಿ

'ಅಹಮಸ್ಮ್ಯಪರಾಧಾನಾಂ ಆಲಯೋऽಕಿಂಚನೋऽಗತಿಃ ।
ತ್ವಮೇವೋಪಾಯಭೂತೋ ಮೇ ಭವೇತಿ ಪ್ರಾರ್ಥನಾಮತಿಃ ॥
ಶರಣಾಗತಿರಿತ್ಯುಕ್ತಾ ಸಾ ದೇವೇऽಸ್ಮಿನ್ ಪ್ರಯುಜ್ಯತಾಮ್ ॥'

ಎಂದು ನಿರೂಪಿಸಿದೆ. ಶರಣಾಗತನ ಮಹಿಮೆ ಅಪಾರವಾದುದೆಂದು

'ಸತ್ಕರ್ಮನಿರತಾಃ ಶುದ್ಧಾಃ ಸಾಂಖ್ಯಯೋಗವಿದಸ್ತಥಾ ।
ನಾರ್ಹಂತಿ ಶರಣಸ್ಥಸ್ಯ ಕಲಾಂ ಕೋಟಿತಮೀಮಪಿ ॥

ಎಂದು ಕೊಂಡಾಡಿದೆ.

ವಿಶಿಷ್ಟಾದ್ವೈತಸಿದ್ಧಾಂತದಲ್ಲಿ ಪ್ರಪತ್ತಿಯು ಸ್ವತಂತ್ರವಾದ ಮೋಕ್ಷೋಪಾಯವಾಗಿದೆ. ವೇದಗಳಲ್ಲಿ ಮತ್ತು ಇತಿಹಾಸ ಪುರಾಣಗಳಲ್ಲಿ ಪ್ರಪತ್ತಿಯ ಉಲ್ಲೇಖವಿದೆ. ಭಗವದ್ರಾಮಾನುಜರು 'ಶರಣಾಗತಿಗದ್ಯ' ದಲ್ಲಿ ಭಗವಂತನಲ್ಲಿ ಪ್ರಪತ್ತಿ ಮಾಡಿದ್ದಾರೆ. ಮೋಕ್ಷಕ್ಕೆ ಪ್ರಪತ್ತಿಯು ಸ್ವತಂತ್ರವಾದ ಉಪಾಯವೆಂದು ಆಚಾರ್ಯರು ಗದ್ಯತ್ರಯದಲ್ಲಿ ನಿರೂಪಿಸಿದ್ದಾರೆ. ಪ್ರಪತ್ತಿಯನ್ನು ಶಾಸ್ತ್ರ ವಿಧಿಸಿದ್ದರೂ ಅದರ ಅಂಗಗಳು ಮತ್ತು ಸ್ವರೂಪ ಸ್ಪಷ್ಟವಾಗುವುದು ಆಗಮಗಳಿಂದ. ಪ್ರಪತ್ತ್ಯುಪಾಯದ ವಿವರಗಳನ್ನೂ ಪರಿಕರಗಳನ್ನೂ ಆಗಮಗಳು ತಿಳಿಸುತ್ತವೆ. ಇವುಗಳನ್ನು ಈ ಸಿದ್ಧಾಂತ ಪೂರ್ಣವಾಗಿ ಅಂಗೀಕರಿಸಿದೆ. ಇದೂ ಸಹ ಆಗಮಗಳು ವಿಶಿಷ್ಟಾದ್ವೈತಕ್ಕೆ ಮಾಡಿರುವ ಮುಖ್ಯವಾದ ಕೊಡುಗೆ ಎನ್ನಬಹುದು.

(ಉ) ಮೋಕ್ಷಸ್ವರೂಪ

ಅಪ್ರಾಕೃತದೇಶವಿಶೇಷಪ್ರಾಪ್ತಿಪೂರ್ವಕವಾದ ಪರಿಪೂರ್ಣ ಬ್ರಹ್ಮಾನುಭವವೇ ಮೋಕ್ಷವೆಂಬುದು ಪಾಂಚರಾತ್ರಸಮಯ. ಆ ಅಪ್ರಾಕೃತದೇಶದ ವರ್ಣನೆ ಲಕ್ಷ್ಮೀತಂತ್ರದಲ್ಲಿ ಹೀಗಿದೆ—

acharya.org

'ಸೂರ್ಯಕೋಟಿಪ್ರತೀಕಾಶಾಃ ಪೂರ್ಣೇಂದುಯುತಸನ್ನಿಭಾಃ ।
ಯಸ್ಮಿನ್ಪದೇ ವಿರಾಜಂತೇ ಮುಕ್ತಾಃ ಸಂಸಾರಬಂಧನೈಃ ॥
ಇಂದ್ರಿಯಚ್ಛಿದ್ರವಿಧುರಾಃ ದ್ಯೋತಮಾನಾಶ್ಚ ಸರ್ವಶಃ ।
ಅನಿಷ್ಯಂದಾ ಅನಾಹಾರಾಃ ಷಾಡ್ಗುಣ್ಯತನವೋಽಮಲಾಃ ॥'
ಏಕಾಂತಿನೋ ಮಹಾಭಾಗಾಃ ಯತ್ರ ಪಶ್ಯಂತಿ ನೌ ಸದಾ ॥

ಇದು 'ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ' ಎಂಬ ಶ್ರುತಿಗನುಸಾರವಿದೆ. ಅಲ್ಲಿ ವಿರಾಜಿಸಿರುವ ಭಗವಂತನನ್ನು

'ತತ್ರ ದಿವ್ಯವಪುಃ ಶ್ರೀಮಾನ್ ದೇವದೇವೋ ಜನಾರ್ದನಃ ।
ಅನಂತಭೋಗಪರ್ಯಂಕೇ ನಿಷಣ್ಣಃ ಸುಸುಖೋಜ್ಜ್ವಲೇ ॥
ಆಸ್ತೇ ನಾರಾಯಣಃ ಶ್ರೀಮಾನ್ ವಾಸುದೇವಃ ಸನಾತನಃ ।
ಸುಕುಮಾರೋ ಯುವಾ ದೇವಃ ಶ್ರೀವತ್ಸಕೃತಲಕ್ಷಣಃ ॥
ಚತುರ್ಭುಜೋ ವಿಶಾಲಾಕ್ಷಃ ಕಿರೀಟೀ ಕೌಸ್ತುಭಂ ವಹನ್ ।
ಹಾರನೂಪುರಕೇಯೂರಕಾಂಚೀಪೀತಾಂಬರೋಜ್ಜ್ವಲಃ ॥'

ಎಂದು ವರ್ಣಿಸಿದೆ.

ಇಂಥ ಭಗವಂತನನ್ನು ಎಡೆಬಿಡದೆ ಇರುವಳು ಶ್ರೀದೇವಿ. ಇವರಿಬ್ಬರನ್ನೂ ಸೇರಿದ ಮುಕ್ತನು ಯಾವದಾತ್ಮಭಾವಿಯಾದ ಭಗವದನುಭವವನ್ನು ಪಡೆಯುತ್ತಾನೆ.

ವಿಶಿಷ್ಟಾದ್ವೈತ ಸಿದ್ಧಾಂತವು ಈ ಅಂಶವನ್ನೆಲ್ಲಾ ಪರಿಗ್ರಹಿಸಿದೆ.

ವಿಶಿಷ್ಟಾದ್ವೈತಸಿದ್ಧಾಂತವನ್ನು ರೂಪಿಸುವುದರಲ್ಲಿ ಆಗಮಗಳೂ ಮುಖ್ಯವಾದ ಪಾತ್ರವನ್ನು ವಹಿಸಿವೆ ಎಂಬುದನ್ನು ಇದರಿಂದ ತಿಳಿಯಬಹುದು. ಯಾಮುನರು 'ಆಗಮಪ್ರಾಮಾಣ್ಯ' ಗ್ರಂಥವನ್ನು ನಿರ್ಮಾಣಮಾಡಿ ಪಾಂಚರಾತ್ರಾಗಮದ ಮಹತ್ತ್ವವನ್ನು ತೋರಿದ್ದಾರೆ. ಭಗವದ್ರಾಮಾನುಜರ ಮೇಲೆ ಆಗಮಗಳ ಪ್ರಭಾವ ಅಪಾರವಾಗಿ ಆಗಿರಬೇಕು. ವಿಶಿಷ್ಟಾದ್ವೈತಸಿದ್ಧಾಂತದಲ್ಲಿ ಮಾನ್ಯಮಾಡಿರುವ ಶ್ರೀಮನ್ನಾರಾಯಣತತ್ತ್ವ, ಪಂಚವ್ಯೂಹಗಳು ಅದರಲ್ಲಿಯೂ ಅರ್ಚೆಯ ಮಹತ್ತ್ವ, ಷಾಡ್ಗುಣ್ಯನಿರೂಪಣೆ, ಪ್ರಪತ್ತ್ಯುಪಾಯದ ಪರಿಕರಾದಿವಿವರಗಳು—ಇವು ಆಗಮಮೂಲವಾಗಿ ಬಂದಿರುವ ಅಂಶಗಳು.

acharya.org

೨ ಅನುಬಂಧ

ವಿಶಿಷ್ಟಾದ್ವೈತವೂ ದ್ರಾವಿಡ ಪ್ರಬಂಧಗಳೂ

ಶ್ರೀವೈಷ್ಣವ ಧರ್ಮದ ಇತಿಹಾಸದಲ್ಲಿ ಆಳ್ವಾರ್ರವರುಗಳದು ಅದ್ವಿತೀಯವಾದ ಸ್ಥಾನ. ಭಗವಂತನ ಆಳವಾದ ಅನುಭವವನ್ನು ಪಡೆದ ಈ ಮಹಾನುಭಾವರುಗಳು ತಮ್ಮ ಆನಂದವನ್ನು ತಮ್ಮ ದೇಶಭಾಷೆಯಾದ ತಮಿಳಿನಲ್ಲಿ ಗಾನರೂಪದಲ್ಲಿ ಅಭಿವ್ಯಕ್ತ ಗೊಳಿಸಿದ್ದಾರೆ. ಇವರು ಹಾಡಿದ ಈ ಹಾಡುಗಳು 'ಸಿರಿಬಾಯ ನುಡಿ' ಅಥವಾ 'ತಿರು ವಾಯ್ಮೊಳಿ' ಎಂದು ಪ್ರಸಿದ್ಧವಾಗಿವೆ. ವಾಯ್ಮೊಳಿ ಎಂದಲ್ಲಿ ಸತ್ಯನುಡಿ] ಎಂಬ ಅರ್ಥ. ಈ 'ಸತ್ಯ'ವು ಭಗವಂತ. ಸತ್ಯದ ನುಡಿ ಎಂದರೆ, ಭಗವಂತನ ನುಡಿ, ಭಗವಂತ ನುಡಿಸಿದ ಮಾತುಗಳು 'ತನ್ನೈತ್ತಾನ್ ಪಾಡಿ' 'ಮಾಯಕ್ಕವಿಯಾಯ್'ವನ್ದು' ಎಂದೆಲ್ಲ ನಮ್ಮಾಳ್ವಾರ್ರವರು ತಿಳಿಸಿದ್ದಾರೆ. ಈ ಅನುಭವಾಮೃತದ ಸಾಹಿತ್ಯ 4000 ಪದ್ಯಗಳನ್ನು ಒಳಗೊಂಡಿದೆ. ಎಲ್ಲ ಆಳ್ವಾರರುಗಳ ಪಾಶುರ ಅಥವಾ ಪದ್ಯಗಳು ಇದರಲ್ಲಿ ಸೇರಿವೆ. ಈ ಆಳ್ವಾರರುಗಳಲ್ಲಿ ನಮ್ಮಾಳ್ವಾರ್ ಅವರಿಗೆ ಪರಮ ಪ್ರಾಧಾನ್ಯವಿದೆ. ಅವರನ್ನು 'ಪ್ರಪನ್ನ ಜನ ಕೂಟಸ್ಥ'ರೆಂದು ಕರೆದು ಗೌರವಿಸುತ್ತಾರೆ. ಅವರ 'ಗಾಥಾಸಹಸ್ರ'ಕ್ಕೆ ಅನೇಕ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಹಾಗೆಯೇ ಇತರ ಆಳ್ವಾರರುಗಳ ಪಾಶುರಗಳಿಗೂ ವ್ಯಾಖ್ಯಾನಗಳೂ ವಿವರಣೆಗಳೂ ಬಂದಿವೆ. ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಈ 'ದ್ರಾವಿಡ ಪ್ರಬಂಧ'ಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಇದನ್ನು ತಮಿಳು ವೇದವೆಂದೂ ಆಳ್ವಾರರು ಗಳನ್ನು ದೃಷ್ಟಾರರೆಂದೂ ಕರೆಯುತ್ತಾರೆ. ಸ್ವಾಮಿ ದೇಶಿಕರು ಪಾದುಕಾಸಹಸ್ರದಲ್ಲಿ ಆಮ್ನಾಯಾನಾಂ ಪ್ರಕೃತಿಮಪರಾಂ ಸಂಹಿತಾಂ ದೃಷ್ಟವಂತಂ—ಎಂದು ಇದನ್ನು ಹೇಳಿದ್ದಾರೆ. ಪ್ರಸ್ಥಾನತ್ರಯ ಮತ್ತು ದ್ರಾವಿಡಪ್ರಬಂಧ ಇವು ಕೂಡಿ 'ಉಭಯ ವೇದಾಂತ'ವಾಗಿವೆ. ಇವೆರಡಕ್ಕೂ ಸಮಸಮವಾದ ಪ್ರಾಧಾನ್ಯವನ್ನು ಈ ಸಿದ್ಧಾಂತ ಕೊಡುತ್ತಾ ಬಂದಿದೆ.

ವಿಶಿಷ್ಟಾದ್ವೈತಸಿದ್ಧಾಂತವನ್ನು ಸಾಧಿಸುವ ಸಮಯದಲ್ಲಿ ಭಗವದ್ರಾಮಾನುಜರು ಕೇವಲ ಪ್ರಸ್ಥಾನತ್ರಯದ ಪ್ರಮಾಣಗಳನ್ನೂ ಸಂಸ್ಕೃತದಲ್ಲಿರುವ ಇತಿಹಾಸ ಪುರಾಣಗಳ ಹಾಗೂ ಆಗಮಗಳ ಪ್ರಮಾಣಗಳನ್ನೂ ಬಳಸಿರುವುದು ಗಮನಾರ್ಹವಾದ ಅಂಶ.

acharya.org

ದ್ರಾವಿಡಪ್ರಬಂಧಗಳನ್ನು ಅವರು ಎಲ್ಲಿಯೂ ಉಲ್ಲೇಖಿಸಿಲ್ಲ. ಇಷ್ಟರಿಂದಲೇ ಆಚಾರ್ಯ ರಿಗೆ ದ್ರಾವಿಡ ಪ್ರಬಂಧಗಳ ಪರಿಚಯ ಇರಲಿಲ್ಲವೆಂದು ಹೇಳುವುದಕ್ಕಾಗದು. ಇತರ ಸಿದ್ಧಾಂತಗಳವರು ಅಂಗೀಕರಿಸಿದ್ದ ಪ್ರಮಾಣಗಳನ್ನೇ ತಾವೂ ಬಳಸಿ ಅವರ ಸಿದ್ಧಾಂತ ಗಳನ್ನು ಖಂಡಿಸಿ ತಮ್ಮ ಸಿದ್ಧಾಂತವನ್ನು ಸ್ಥಾಪಿಸಿದರು ರಾಮಾನುಜರು. ಸರ್ವರೂ ಅಂಗೀ ಕರಿಸದ, ಕೇವಲ ತಮ್ಮ ಗೋಷ್ಠಿಯಲ್ಲಿ ಮಾತ್ರ ಹೆಚ್ಚಳವನ್ನು ಹೊಂದಿದ್ದ ಪ್ರಮಾಣ ಗಳನ್ನು ಉಲ್ಲೇಖಿಸುವುದು ಸರ್ವಸಂಪ್ರತಿಪನ್ನವಾಗದು. ಅಂಥ ಪ್ರಮಾಣವಾಕ್ಯಗಳು ಸರ್ವಸಮ್ಮಾನ್ಯವಾಗಲಾರವು. ಈ ದೃಷ್ಟಿಯಿಂದಲೇ ಭಗವದ್ರಾಮಾನುಜರು ಇತರರು ಅಂಗೀಕರಿಸಿ ತೋರಿಸಿದ ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಗಳ ವಾಕ್ಯಗಳನ್ನು ಉದಾ ಹರಿಸಿ, ಅವುಗಳ ಅರ್ಥವಿವರಣೆಯನ್ನು ಮಾಡಿ, ಅವೆಲ್ಲವೂ ತಮ್ಮ ಸಿದ್ಧಾಂತವನ್ನೇ ಪೋಷಿಸುವುವೆಂಬುದನ್ನು ಖಚಿತವಾಗಿ ತೋರಿಸಿಕೊಟ್ಟಿದ್ದಾರೆ. ಭಗವದ್ರಾಮಾನುಜರು ಮಾಲಾಧರರಿಂದ ದ್ರಾವಿಡಪ್ರಬಂಧಗಳ ರಹಸ್ಯಾರ್ಥಗಳನ್ನು ಕಲಿತರು. ಈ ಪ್ರಬಂಧ ಗಳಲ್ಲಿ ಅವರಿಗೆ ಅಪಾರವಾದ ಪ್ರೇಮ ಗೌರವಗಳಿದ್ದವು. ಭಗವಂತನ ಅರ್ಚಾಕ್ರಮದಲ್ಲಿ ದ್ರಾವಿಡ ಪ್ರಬಂಧಗಳಿಂದಲೂ ಭಾಗಗಳನ್ನು ಆರಿಸಿ ಅನುಸಂಧಾನಮಾಡಲು ಅವರು ವ್ಯವಸ್ಥೆಗೊಳಿಸಿದರು. ಈ ದ್ರಾವಿಡಪ್ರಬಂಧಗಳ ಪಾಶುರಗಳಿಗೆ ಅವರು ತಮ್ಮ ಅಂತಃ ಸ್ಫೂರ್ತಿಯಿಂದ ಅಪೂರ್ವವಾದ ಅರ್ಥವಿವರಣೆ ಮಾಡಿದರು. ತಮ್ಮ ಶಿಷ್ಯರಾದ ತಿರುಕ್ಕು ರಹೈ ಪ್ಪಿರಾನ್ ಪಿಳ್ಳಾನ್ ಅವರ ಮೂಲಕ ನಮ್ಮಾಳ್ವಾರ್‌ರವರ ಗಾಥಾಸಹಸ್ರಕ್ಕೆ 'ಆರಾಯಿರಪ್ಪಡಿ' ಎಂಬ ವ್ಯಾಖ್ಯಾನವನ್ನು ಬರೆಯಿಸಿ ಯಾಮುನರ ಅಭೀಷ್ಟವನ್ನು ಪೂರ್ತಿಗೊಳಿಸಿದರು.

ವಿಶಿಷ್ಟಾದ್ವೈತವನ್ನು ವಿಮರ್ಶೆಮಾಡುವ ವಿದ್ವಾಂಸರು ಈ ಸಿದ್ಧಾಂತಕ್ಕೆ ದ್ರಾವಿಡಪ್ರಬಂಧಗಳು ಆಧಾರವಾಗಿರುವ ಕಾರಣ ಇದು ತಾಂತ್ರಿಕವೇ ವಿನಾ ವೈದಿಕ ವಲ್ಲವೆಂಬ ಮಾತನ್ನು ಕೆಲವೊಮ್ಮೆ ಹೇಳುತ್ತಾರೆ. ಇದು ಸತ್ಯದೂರವಾದ ಸಂಗತಿ ಎಂದು ಹೇಳಬೇಕಾಗಿದೆ. ಭಗವದ್ರಾಮಾನುಜರೂ ಮತ್ತು ಇತರ ಆಚಾರ್ಯರುಗಳೂ ವಿಶಿಷ್ಟಾದ್ವೈತಸಿದ್ಧಾಂತನಿರೂಪಣೆ ಮಾಡುವಾಗ ವೈದಿಕ ಪ್ರಮಾಣಗಳನ್ನೇ ಮುಂದಿಟ್ಟು ಸಿದ್ಧಾಂತ ಮಾಡಿದ್ದಾರೆಂದು ಮೇಲೆಯೇ ಸೂಚಿಸಿದೆ. ವೈದಿಕಸಿದ್ಧಾಂತದ ಸಾರಾರ್ಥ ಪ್ರಕಾಶಕವಾದುದೂ ಭಗವದನುಭವದಿಂದ ಹೊಮ್ಮಿದ ಪರಭಕ್ತಿ ಪ್ರವಾಹದ ಪರೀ-ವಾಹರೂಪವಾದುದೂ, ಸಕಲಜನೋಜ್ಜೀವನಾರ್ಥವಾದುದೂ, ಸರ್ವಾಧಿಕಾರಿಯೋಗ್ಯ ವಾದುದೂ ಆದ ದ್ರಾವಿಡ ಗಾಥಾವಾಙ್ಮಯ ವೇದವಿರುದ್ಧವಾದ ಅಂಶವನ್ನು ಎಲ್ಲಿಯೂ ಹೊಂದದ ಕಾರಣದಿಂದಲೂ ನೇರವಾಗಿ ಭಗವದನುಭವದ ಮಹದಾನಂದವನ್ನೊದಗಿಸು ವುದರಿಂದಲೂ ಪ್ರಮಾಣವೆಂದು ಅಂಗೀಕರಿಸಿದ ಮಾತ್ರಕ್ಕೆ ಸಿದ್ಧಾಂತದ ವೈದಿಕತ್ವಕ್ಕೆ ಎಳ್ಳಷ್ಟೂ ಚ್ಯುತಿಯಾಗದು.

acharya.org

ಈ ಸಿದ್ಧಾಂತವನ್ನನುಸರಿಸುವವರೆಲ್ಲರೂ ಈ ದ್ರಾವಿಡಪ್ರಬಂಧಗಳಿಗೆ ಪರಮ ಮಾನ್ಯತೆಯನ್ನು ನೀಡುತ್ತಾರೆ. ಇವರಲ್ಲಿ ಕೆಲವರು ಪ್ರಸ್ಥಾನತ್ರಯಕ್ಕಿಂತಲೂ ಮೇಲಿನ ಸ್ಥಾನವನ್ನು ದ್ರಾವಿಡಪ್ರಬಂಧಗಳಿಗೆ ನೀಡುತ್ತಾರೆ. ಮತ್ತೆ ಕೆಲವರು ಪ್ರಸ್ಥಾನತ್ರಯಕ್ಕೆ ಸಮನಾದ ಅಥವಾ ಸ್ವಲ್ಪ ಕಡಿಮೆಯಾದ ಸ್ಥಾನವನ್ನಿತ್ತು ಇವುಗಳನ್ನು 'ವೇದೋಪ-ಬೃಂಹಣ'ಗಳೆಂದು ಹೇಳುತ್ತಾರೆ. 'ವೇದಗಳಲ್ಲಿ ತಿಳಿಯದ ರಹಸ್ಯಗಳನ್ನು ಇಲ್ಲಿ ನಾವರಿತೆವು' ಎಂದು ಆಚಾರ್ಯರುಗಳು ಇದರ ಮಹತ್ವವನ್ನು ಸಾರಿರುವುದುಂಟು.

ಈ ದ್ರಾವಿಡ ಪ್ರಬಂಧಗಳು ವಿಶಿಷ್ಟಾದ್ವೈತಕ್ಕೆ ವೇದಗಳಲ್ಲಿಲ್ಲದ ಯಾವ ಯಾವ ಅಂಶಗಳನ್ನು ಕೊಡುಗೆಯಾಗಿ ಕೊಟ್ಟಿದೆ ಎಂಬುದನ್ನು ಇನ್ನೂ ವಿಮರ್ಶಿಸಬೇಕಾಗಿದೆ. ದ್ರಾವಿಡಪ್ರಬಂಧಗಳು ವಿಶಿಷ್ಟಾದ್ವೈತಸ್ವರೂಪವನ್ನು ಹೇಗೆ ನಿರೂಪಿಸಿವೆ ಎಂಬುದನ್ನು ಆಳವಾಗಿ ಅಧ್ಯಯನ ಮಾಡಬೇಕಾಗಿದೆ. ಪ್ರಸ್ಥಾನತ್ರಯದಲ್ಲಿ ಸ್ಥಾಪಿಸಿರುವುದಕ್ಕಿಂತ ಯಾವ ಯಾವ ಅಧಿಕಾಂಶಗಳು ಇವುಗಳಲ್ಲಿವೆ ? ಇವು ಶ್ರುತಿವಾಕ್ಯಗಳ ಅರ್ಥನಿರೂಪಣೆಗೆ ಹೇಗೆ ಸಹಾಯ ಮಾಡಿವೆ ? ರಾಮಾನುಜರು ಮಾಡಿರುವ ನಿರೂಪಣೆಗಳಲ್ಲಿ ಇವುಗಳ ಪ್ರಭಾವವಿದೆಯೋ ? ಇದ್ದರೆ ಎಷ್ಟರಮಟ್ಟಿಗೆ ಇದೆ ? ಈ ಪ್ರಶ್ನೆಗಳಿಗೆ ಉತ್ತರನೀಡಲು ಪ್ರಸ್ಥಾನತ್ರಯವನ್ನೂ ದ್ರಾವಿಡ ಪ್ರಬಂಧಗಳನ್ನೂ ತುಲನಾತ್ಮಕದೃಷ್ಟಿಯಿಂದ ಆಳವಾಗಿ ಅಧ್ಯಯನ ಮಾಡಬೇಕು. ಈ ಕೆಲಸವನ್ನು ಇನ್ನೂ ಯಾರಾದರೂ ಕೈಕೊಳ್ಳಬೇಕಾಗಿದೆ.

ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ನಾವು ನೆನಪಿನಲ್ಲಿಡಬೇಕು. ದ್ರಾವಿಡ ಪ್ರಬಂಧಗಳಿಗೆ ಈಗ ಉಪಲಬ್ಧವಾಗಿರುವ ವ್ಯಾಖ್ಯಾನಗಳೆಲ್ಲಾ ಭಗವದ್ರಾಮಾನುಜರ ಕಾಲಕ್ಕಿಂತ ಈಚಿನವು. ಆದುದರಿಂದ ಅವುಗಳೆಲ್ಲದರ ಮೇಲೆ ರಾಮಾನುಜರ ಕೃತಿರತ್ನಗಳ ಪ್ರಭಾವಮುದ್ರೆ ಬಿದ್ದಿದೆ. 'ಆರಾಯಿರಪ್ಪಡಿ' ವ್ಯಾಖ್ಯಾನ ಇದಕ್ಕೆ ಉತ್ತಮ ನಿದರ್ಶನ. ರಾಮಾನುಜರ ವಿಚಾರಧಾರೆಯ ವಿವರಣೆ ಈ ಪ್ರಬಂಧಗಳ ಮೂಲಕ ಗಮನಾರ್ಹವಾಗಿ ಆಗಿರಬಹುದು. ಆದುದರಿಂದ ಈ ಪ್ರಬಂಧಗಳಲ್ಲಿ ಯಾವ ಭಾಗಗಳು ರಾಮಾನುಜರ ವಿವರಣೆಗೆ ಸ್ಫೂರ್ತಿಯಿತ್ತವೆಂಬುದನ್ನು ಬಹಳ ಎಚ್ಚರಿಕೆಯಿಂದ ಸಂಶೋಧಿಸಬೇಕಾಗಿದೆ. ಸಿದ್ಧಾಂತದ ಅಸಾಧಾರಣ ವಿವರಣೆಗಳಿಗೆ ಇವುಗಳಲ್ಲಿ ಎಲ್ಲಿ ಮೂಲವಿದೆಯೆಂಬುದನ್ನು ತಿಳಿಯಬೇಕಾಗಿದೆ.

'ವೇದವನ್ನು ತಮಿಳಿನಲ್ಲಿ ತಂದ ಮಾಟಿನ್' ಎಂದು ನಮ್ಮಾಳ್ವಾರರನ್ನು ಮಧುರಕವಿಗಳು ಸ್ತುತಿಸಿದ್ದಾರೆ. ವೇದಗಳಲ್ಲಿ ಪ್ರತಿಪಾದ್ಯವಾದ ಅಂಶಗಳನ್ನು ಈ ಪ್ರಬಂಧಗಳಲ್ಲಿ ಹೇಳಿವೆ ಎಂಬುದನ್ನು ಅಂಗೀಕರಿಸಿದರೆ ಇವು ಇತಿಹಾಸ ಪುರಾಣಗಳಂತೆ ವೇದೋಪಬೃಂಹಣಗಳಾಗುತ್ತವೆ. ಈ ಪ್ರಬಂಧಗಳನ್ನು ತಮಿಳಿನಲ್ಲಿ ಹಾಡಿದ ಆಳ್ವಾರರುಗಳು ಲೋಕಕ್ಕೆ ಮಹೋಪಕಾರ ಮಾಡಿದ್ದಾರೆ. ಏಕೆಂದರೆ ಸಂಸ್ಕೃತದ ಜ್ಞಾನವಿಲ್ಲದವರೂ ಹಾಗೂ ವೇದಗಳನ್ನು ಅಧ್ಯಯನ ಮಾಡಲು ಅಶಕ್ತರಾದವರೂ ಆದ ಮಾನವಕೋಟಿ

acharya.org

ತನ್ನ ಉದ್ಧಾರಕ್ಕಾಗಿ ಅರಿಯಬೇಕಾದ ತತ್ತ್ವ, ಹಿತ ಮತ್ತು ಪುರುಷಾರ್ಥ ಸ್ವರೂಪ ವನ್ನು ಆಳ್ವಾರರುಗಳು ಎಲ್ಲರೂ ಅರಿಯುವ ತಮಿಳುಭಾಷೆಯಲ್ಲಿ ನಿರೂಪಿಸಿದ್ದಾರೆ ಈ ಪ್ರಬಂಧಗಳಲ್ಲಿ. ಇವುಗಳ ವೈಶಿಷ್ಟ್ಯ ಇದು :—

(ಅ) ಜೀವನ ಪರಮಪುರುಷಾರ್ಥವನ್ನು ಇವು ತಿಳಿಸುತ್ತವೆ.

(ಆ) ಆಳ್ವಾರರುಗಳು ಭಗವದನುಭವದಲ್ಲಿ ಪರವಶರಾದಾಗ ಹೊರಹೊಮ್ಮಿದ ಆನಂದಾಮೃತದ ಪರಿವಾಹ ಇವು.

(ಇ) ವೇದಗಳ ಹೃದಯವನ್ನರಿತ ಶಿಷ್ಟರಿಂದ ಪರಿಗೃಹೀತವಾದವು ಇವು.

(ಈ) ಸಂಸಾರದಲ್ಲಿ ಉದ್ವಿಗ್ನರಾದವರಿಗೆ ಪರಮ ತತ್ತ್ವವನ್ನಿವು ತಿಳಿಸುತ್ತವೆ.

(ಉ) ಮಾನವಕೋಟಿಗೆ ಪರಮಪ್ರಾಪ್ಯನಾದ ಶ್ರೀಮನ್ನಾರಾಯಣನೇ ಇವು ಗಳಲ್ಲಿ ಪ್ರತಿಪಾದ್ಯವಾದ ವಸ್ತು.

(ಊ) ಭಗವಂತನ ನಿತ್ಯಕೈಂಕರ್ಯದ ಪ್ರಾಪ್ತಿಯ ರುಚಿಯನ್ನಿವು ಉಂಟುಮಾಡು ತ್ತವೆ.

(ಋ) ಎಲ್ಲರೂ ಅರಿಯುವ ದೇಶಭಾಷೆಯಲ್ಲಿ ಇವು ರಚಿತವಾಗಿವೆ.

(ೠ) ಜಾತಿಮತಗಳ ಭೇದವಿಲ್ಲದೆ ಸಮಸ್ತ ಮಾನವಕೋಟಿಗೂ ಜ್ಞಾನ ಯೋಗ್ಯತೆಯನ್ನೂ, ಉಪದೇಶಯೋಗ್ಯತೆಯನ್ನೂ ಇವು ಹೊಂದಿವೆ.

(ಎ) ಭಗವದ್ಭಕ್ತಿಯ ಉತ್ಪತ್ತಿ, ಅಭಿವೃದ್ಧಿ ಮತ್ತು ಅನುಭವದ ಆನಂದ ವನ್ನಿವು ಉಂಟುಮಾಡುವುವು.

(ಏ) ಮಾನವಕೋಟಿ ಉದ್ಧಾರವಾಗಬೇಕಾದರೆ, ಭಗವಂತನ ನಿತ್ಯಕೈಂಕರ್ಯ ವನ್ನು ಪಡೆಯಬೇಕಾದರೆ ಅವನ ಪಾದಕಮಲಗಳಲ್ಲಿ ಶರಣಾಗತಿ ಯನ್ನನುಷ್ಠಿಸಬೇಕೆಂದು ತಿಳಿಸುವುವು ಇವು.

ಹೀಗೆ ಈ ದ್ರಾವಿಡ ಪ್ರಬಂಧಗಳು ವಿಶಿಷ್ಟವಾದ ರೀತಿಯಲ್ಲಿ ತತ್ತ್ವಹಿತಪುರು ಷಾರ್ಥಗಳನ್ನೂ, ಅರ್ಥಪಂಚಕ ಸ್ವರೂಪವನ್ನೂ ಉಪದೇಶಿಸಿವೆ.

ವಿಶಿಷ್ಟಾದ್ವೈತಸಿದ್ಧಾಂತದಲ್ಲಿ ಪ್ರಧಾನವಾಗಿ ಪ್ರತಿಪಾದಿಸಿರುವ ಕೈಂಕರ್ಯದ ತತ್ತ್ವ ದ್ರಾವಿಡಪ್ರಬಂಧಗಳ ವಿಶಿಷ್ಟ ಕೊಡುಗೆಯೆಂದು ಕಾಣುತ್ತದೆ. ಇಲ್ಲಿ ಈ ಅಂಶ ವನ್ನು ಅತಿಸ್ಪಷ್ಟವಾಗಿ ಪ್ರತಿಪಾದಿಸಿದೆ. ಕೆಳಗಿನವು ಕೆಲವು ಉದಾಹರಣೆಗಳು—

'ತನಕ್ಕೇಯಾಹ ಎನ್ನೈ ಕೊಳ್ಳುಮೀದೇ'
'ಪಿರಿಯಾ ಅಡಿಮೈ ಎನ್ನೈಕ್ ಕ್ಕೊಂಡಾಯ್'
'ಉನಕ್ಕೇ ಆಳಾಹುಮ್'
'ಅಂದಮಿಲ್ ಅಡಿಮೈ ಅಡೈಂದೇನ್ ವಿಡುವೇನೋ'
'ಒೞಿವಿಲ್ ಕಾಲಂ ಎಲ್ಲಾಂ ಉಡನಾಯ್ ಮನ್ನಿ, ವೞುವಿಲಾ
ಅಡಿಮೈ ಶೆಯ್ಯವೇಂಡು ನಾಮ್'

ಇಂಥ ಅನೇಕ ಬೇಡಿಕೆಗಳು ಮಾನವನ ಪರಮಪುರುಷಾರ್ಥ ಭಗವಂತನ ನಿತ್ಯಕೈಂಕರ್ಯ ವೆಂಬುದನ್ನು ಸ್ಪಷ್ಟಪಡಿಸುತ್ತವೆ. ರಾಮಾನುಜರು ತಮ್ಮ ಶರಣಾಗತಿಗದ್ಯದಲ್ಲಿ 'ನಿತ್ಯಕೈಂಕರ್ಯಪ್ರಾಪ್ತ್ಯಪೇಕ್ಷಯಾ ಭಗವಚ್ಚರಣಾರವಿಂದಶರಣಾಗತಿಃ ಯಥಾವಸ್ಥಿತಾ ಅವಿರತಾ ಅಸ್ತು ಮೇ' ಎಂದು ಪ್ರಾರ್ಥಿಸಿರುವುದನ್ನು ನಾವು ಗಮನಿಸಬಹುದು. ಶ್ರೀಮನ್ನಾರಾಯಣನೇ ಪರದೈವವೆಂಬುದನ್ನು ಅತ್ಯಂತ ಪ್ರಭಾವಯುತವಾಗಿ ಪ್ರಬಂಧಗಳು ಸಾರಿವೆ. ವಿಶಿಷ್ಟಾದ್ವೈತಸಿದ್ಧಾಂತಕ್ಕೆ ಇದೂ ಮುಖ್ಯವಾದ ಒಂದು ಕೊಡುಗೆ ಎನ್ನಬಹುದು. ರಾಮಾನುಜರು ತಮ್ಮ ಕೃತಿರತ್ನಗಳಲ್ಲಿ ಶ್ರೀಮನ್ನಾರಾಯಣನೇ ಪರತತ್ತ್ವವೆಂದು ಪ್ರಭಾವಯುತವಾಗಿ ಪ್ರತಿಪಾದಿಸಿದ್ದಾರೆ.

ವಿಷ್ಣು, ವಾಸುದೇವ ಮುಂತಾದ ಇತರ ವ್ಯಾಪಕಗಳಾದ ಅಭಿಧಾನಗಳಿಂದ ಪರತತ್ತ್ವವನ್ನು ಹೇಳಬಹುದಾಗಿದ್ದರೂ ಆಳ್ವಾರರುಗಳು 'ಶ್ರೀಮನ್ನಾರಾಯಣ' ಎಂಬ ವಾಚಕವನ್ನೇ ಹೇಳುತ್ತಾರೆ. ಪರತತ್ತ್ವದ ಸ್ವರೂಪನಿರೂಪಕ ಧರ್ಮಗಳನ್ನೆಲ್ಲಾ ಈ ಪದ ತಿಳಿಸುವುದು.

> 'ನಾರಾಯಣನಾಮ್ನಸ್ತು ವ್ಯಾಖ್ಯಾಧ್ಯಾಹಾರಾದ್ಯನಪೇಕ್ಷಯಾ ಜ್ಞಾತವ್ಯಸಕಲಾರ್ಥ–
> ಪ್ರತಿಪಾದಕತ್ವಂ ಇತಿ ಅಯಮರ್ಥೋಽ ರಹಸ್ಯತ್ರಯೇ ಅಭಿಹಿತಃ'

ಎಂದು ಈ ಅಂಶವನ್ನು ತಿಳಿಸಿದ್ದಾರೆ.

ಭಗವದ್ಗುಣಾನುಭವಕ್ಕೆ ಮೀಸಲಾಗಿರುವ ದಿವ್ಯ ಪ್ರಬಂಧಗಳ ಮಾಧುರ್ಯ ಅನುಪಮವಾದದು. 'ರಸೋ ವೈ ಸಃ' ಎಂಬಂತೆ ರಸಸ್ವರೂಪನಾದ ಭಗವಂತನ ದಿವ್ಯಾನುಭವವನ್ನುಂಟುಮಾಡಿಕೊಡುವ ರಸಪ್ರವಾಹ ಇವು. ದೇಶಿಕರವರು ಇದನ್ನು 'ಸಾರಸ್ವತಾನಾಂ ಸಾರಂ' 'ಶಾಂತಿಶುದ್ಧಾಂತಸೀಮಾ' ಎಂದು ಕರೆದಿದ್ದಾರೆ. ಅವರು ನಮ್ಮಾಳ್ವಾರ್ರವರ ಗೀತೆಗಳನ್ನು 'ಶಠಜಿದುಪನಿಷತ್'ಎಂದು ಕರೆದಿದ್ದಾರೆ. ವೇದ, ಇತಿಹಾಸ, ಪುರಾಣಗಳೆಲ್ಲಾ ಸೇರಿ ಮಾಡುವ ಕೆಲಸವನ್ನು ಈ ಪ್ರಬಂಧಗಳು ಮಾಡುವುವೆಂಬುದನ್ನು ಅವರು

> ಯತ್ತತ್ಕೃತ್ಯಂ ಶ್ರುತೀನಾಂ ಮುನಿಗಣವಿಹಿತೈಃ ಸೇತಿಹಾಸೈಃ ಪುರಾಣೈಃ ।
> ತತ್ರಾಸೌ ಸತ್ತ್ವಸೀಮ್ನಃ ಶಠಮಥನಮುನೇಃ ಸಂಹಿತಾ ಸಾರ್ವಭೌಮೀ ॥

ಎಂದು ನಿರೂಪಿಸುತ್ತಾರೆ. ಶಾರೀರಕಮೀಮಾಂಸೆ ಎಂದು ಪ್ರಖ್ಯಾತವಾದ ಬ್ರಹ್ಮಸೂತ್ರಗಳ ಅರ್ಥಗಳನ್ನೆಲ್ಲಾ ನಮ್ಮಾಳ್ವಾರ್ರವರು ತಮ್ಮ ಗಾಥಾಸಹಸ್ರದ ಮೊದಲ ಇಪ್ಪತ್ತೊಂದು ಪಾಶುರಗಳಲ್ಲಿ ತಿಳಿಸಿದ್ದಾರೆಂದು ದೇಶಿಕರು ಪ್ರತಿಪಾದಿಸಿದ್ದಾರೆ.

ಈ ದಿವ್ಯಪ್ರಬಂಧಗಳಲ್ಲಿ ಸೂಕ್ಷ್ಮವಾದ ಮತ್ತು ಸೂಚ್ಯವಾದ ಅರ್ಥವಿಶೇಷಗಳಿವೆ ಎಂಬುದನ್ನು ಅಂಗೀಕರಿಸಲಾಗಿದೆ. ಅವುಗಳನ್ನು ನಿರೂಪಿಸಲು ವಿಸ್ತಾರವಾದ ಅನೇಕಾನೇಕ ವ್ಯಾಖ್ಯಾನಗಳು ನಿರ್ಮಾಣವಾಗಿವೆ.

acharya.org

ಹೀಗೆ ದ್ರಾವಿಡಪ್ರಬಂಧಗಳು ವಿಶಿಷ್ಟಾದ್ವೈತ ಸಿದ್ಧಾಂತದ ಪ್ರವರ್ತನದಲ್ಲಿ ಪ್ರಮುಖಪಾತ್ರ ವಹಿಸಿವೆ. ಶ್ರುತಿಗಳಿಂದ, ಸ್ಮೃತೀತಿಹಾಸಗಳಿಂದ ಸ್ಥಾಪಿತವಾದ ವಿಶಿಷ್ಟಾದ್ವೈತಸಿದ್ಧಾಂತದ ಪ್ರಮೇಯಗಳನ್ನು ಮಂಜುಳವೂ ಸರಳವೂ ಆದ ಭಾಷೆಯಲ್ಲಿ ತಿಳಿಯಪಡಿಸುತ್ತಿವೆ ಇವು. ವಾಚ್ಯವಾಗಿ ಸೂಚ್ಯವಾಗಿ ಅನೇಕಾನೇಕ ಅರ್ಥವಿಶೇಷಗಳನ್ನು ಇವು ಪ್ರತಿಪಾದಿಸಿವೆ. ಇವುಗಳನ್ನು ಕೇಳುವಾಗಲೇ ಹೇಳುವಾಗಲೇ ಭಗವದ್ಭಕ್ತಿಯ ಭಾವದಲ್ಲಿ ನಾವು ನಮ್ಮನ್ನೇ ಮರೆಯುತ್ತೇವೆ. ತತ್ಕ್ಷಣದಲ್ಲಿ ಭಗವತ್ಸಂಶ್ಲೇಷದ ಅನುಭವ ಭಾವುಕರಿಗೆ ಉಂಟಾಗುವುದು.

ಇಂಥ ಮಹತ್ತ್ವ ಇವುಗಳಿಗೆ ಇರುವುದರಿಂದಲೇ- ಇವುಗಳು ತಮಿಳು ವೇದಗಳೆನಿಸಿ ಉಭಯವೇದಾಂತದಲ್ಲಿ ಸೇರಿದವು.

acharya.org

೩

ಅನುಬಂಧ

ಅಷ್ಟಾದಶಭೇದಗಳು

ತೆನ್‌ಕಲ್ಲೆ ಮತ್ತು ವಡಗಲ್ಲೆ ಸಂಪ್ರದಾಯಗಳಲ್ಲಿ ಹದಿನೆಂಟು ಅಂಶಗಳಲ್ಲಿ ಭೇದವಿದೆ. ಅವು ಕೆಳಗೆ ಕಂಡಂತಿವೆ.

(1) ಸ್ವಾಮಿಕೃಪಾ

ತೆಂಕಲ್ಲೆ

ಕೃಪೆ ನಿರ್ಹೇತುಕವಾಗಿ ಪುರುಷಾರ್ಥ ಕೊಡುತ್ತದೆ. ಅದಕ್ಕೊಂದು ಕಾರಣ ಬೇಕಾದರೆ ಭಗವಂತನ ಅವಾಪ್ತ ಸಮಸ್ತ ಕಾಮತ್ವಕ್ಕೆ ಹಾನಿ. ದೇವನು ಮೋಕ್ಷ ಕೊಡ ಬಯಸಿದರೆ ಪುರುಷನು ನಿವಾರಣ ಮಾಡದಿದ್ದರೆ ಸಾಕು. ಸ್ವಾಮಿ ತನ್ನ ವಸ್ತುವನ್ನು ತಾನೇ ರಕ್ಷಿಸಿಕೊಳ್ಳುತ್ತಾನೆ. ಒಡವೆ ರಕ್ಷಾಪೇಕ್ಷೆಯನ್ನು ವ್ಯಕ್ತ ಮಾಡುವುದಿಲ್ಲ. ಆದುದರಿಂದ ಭಗವಂತನ ಕೃಪೆ ನಿರ್ಹೇತುಕವಾದುದು.

ವಡಗಲ್ಲೆ

ಭಗವಂತನ ಕೃಪೆ ನಿರ್ಹೇತುಕವೇ. ಎಂದರೆ ನಾವು ಮಾಡುವ ಭಕ್ತಿ ಪ್ರಪತ್ತಿಗಳು ನಮಗೆ ಲಭಿಸುವ ಫಲಕ್ಕೆ ತಕ್ಕ ಕಾರಣಗಳಾಗವು. ಅವನು ಭಕ್ತಿ ಪ್ರಪತ್ತಿಗಳ ವ್ಯಾಜವನ್ನು ಅವಲಂಬಿಸಿಯೇ ದಯೆ ತೋರುವನು. ಇಲ್ಲದಿದ್ದರೆ ಸರ್ವಮೋಕ್ಷಪ್ರಸಂಗವು ಬಂದೀತು. ಇದರಿಂದ ಅವನ ಕೃಪೆಗೆ ಹಾನಿಯೂ ಇಲ್ಲ. ಕಲ್ಪತರು ಅರ್ಥಿಗಳಿಗೆ ಮಾತ್ರ ಬೇಡಿದುದನ್ನು ಕೊಟ್ಟರೂ ಇತರರಿಗೆ ಕೊಡದಿದ್ದರೂ ಅದರ ಸ್ವರೂಪಕ್ಕೆ ಹಾನಿ ಇಲ್ಲ.

(2) ಫಲ ಎಂದರೆ ಮೋಕ್ಷ

ಭಕ್ತಿಯೋಗನಿಷ್ಠರಿಗೆ ಭಗವದನುಭವ ಫಲ. ಪ್ರಪತ್ತಿನಿಷ್ಠರಿಗೆ ಭಗವತ್ಕೈಂಕರ್ಯ, ತತ್ಕ್ರತುನ್ಯಾಯದಂತೆ ಇದರ ವ್ಯವಸ್ಥೆ. ಫಲದಲ್ಲಿ ಇವರಿಬ್ಬರಿಗೂ ಭೇದವುಂಟು.

ಭಕ್ತನೂ ಪ್ರಪನ್ನನೂ ಮುಕ್ತರೇ ಆಗುವ ಕಾರಣ ಭಗವದನುಭವವೂ ತತ್ಕೈಂಕರ್ಯವೂ ಇಬ್ಬರಿಗೂ ಫಲವಾಗಿ ಬರುತ್ತದೆ. ಮುಕ್ತಿತಾರತಮ್ಯವಾದ ನಮ್ಮದಲ್ಲ. ಇಲ್ಲಿ ತತ್ಕ್ರತುನ್ಯಾಯಕ್ಕೆ ವಿರೋಧವಿಲ್ಲ. ಉಪಾಸನೆಯಲ್ಲಿ ಯಾವ ವಿಷಯಗಳಿವೆಯೋ ಅವು ಫಲದೆಶೆಯಲ್ಲಿಯೂ ಇರುತ್ತವೆ ಎಂದು ಹೇಳುವುದೇ ವಿನಾ ಇತರ ಅಂಶಗಳ ಅಭಾವವನ್ನು ತತ್ಕ್ರತು ನ್ಯಾಯ ಹೇಳುವುದಿಲ್ಲ. ಆದ್ದರಿಂದ ಇಬ್ಬರಿಗೂ ಎರಡೂ ಫಲವಾಗುತ್ತವೆ.

acharya.org

(3) ಅನ್ಯಗತಿ :—ಪ್ರಪತ್ತಿಗೆ ವ್ಯತಿರಿಕ್ತವಾದ ಮೋಕ್ಷೋಪಾಯ

ಮೋಕ್ಷೋಪಾಯ ನಾಲ್ಕು ಬಗೆ. ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ, ಆಚಾರ್ಯಾಭಿಮಾನಯೋಗ ಎಂದು. ಒಂದೊಂದೂ ಮತ್ತೊಂದರ ಅಪೇಕ್ಷೆ ಇಲ್ಲದೆ ಮೋಕ್ಷಸಾಧಕವಾಗುತ್ತದೆ.

ಪ್ರಪತ್ತಿ ವ್ಯತ್ತಿರಿಕ್ತವಾದ ಮೋಕ್ಷೋಪಾಯ ಭಕ್ತಿಯೋಗ ಒಂದೇ. ಕರ್ಮಯೋಗ ಜ್ಞಾನ ಯೋಗಗಳು ಭಕ್ತಿಯೋಗಕ್ಕೆ ಅಂಗಗಳಾಗಿ ಪರಂಪರೆಯಾ ಸಾಧನಗಳು. ಆಚಾರ್ಯಾಭಿಮಾನ ಯೋಗವೆಂಬುದು ಪ್ರಪತ್ತಿಯೋಗದ ಭೇದ.

(4) ಶ್ರೀವ್ಯಾಪ್ತಿ

ಶ್ರೀದೇವಿ ಸ್ವರೂಪತಃ ಅಣುವೇ ವಿನಾ ವಿಭುವಲ್ಲ, ಜೀವಕೋಟಿಯಲ್ಲಿಯೇ ಅವಳು ಅಂತರ್ಭವಿಸುವಳು. ಈಶ್ವರ ಕೋಟಿಯಲ್ಲಿ ಅಲ್ಲ. ಇಲ್ಲದಿದ್ದರೆ ಈಶ್ವರದ್ವಿತ್ವಪ್ರಸಂಗವುಂಟಾಗುವುದು.

ಶ್ರೀ ದೇವಿಯೂ ವಿಭುವೇ ವಿನಾ ಅಣುವಲ್ಲ. ಅವಳೂ ಈಶ್ವರ ಕೋಟಿಯಲ್ಲಿಯೇ ಸೇರುತ್ತಾಳೆ. ಶ್ರೀವಿಶಿಷ್ಟವಾದ ತತ್ತ್ವ ಒಂದೇ ಆದಕಾರಣ ಈಶ್ವರದ್ವಿತ್ವ ಪ್ರಸಂಗವಿಲ್ಲ.

(5) ಶ್ರೀದೇವಿಯ ಉಪಾಯತ್ವ

ಭಗವಂತನಿಗೇ ಮೋಕ್ಷೋಪಾಯತ್ವ. ಶ್ರೀದೇವಿಗಿಲ್ಲ. ಪುರುಷಕಾರಳಾಗಿ ಪರಂಪರಯಾ ಮೋಕ್ಷೋಪಾಯಳೇ ವಿನಾ ನೇರವಾಗಿ ಮೋಕ್ಷೋಪಾಯಳಲ್ಲ. ಇಲ್ಲದಿದ್ದರೆ ಉಪಾಯದ್ವಿತ್ವ ಪ್ರಸಂಗ ಬಂದೀತು.

ಭಗವಂತನಂತೆಯೇ ಶ್ರೀದೇವಿಯೂ ಮೋಕ್ಷೋಪಾಯಳು. ಮೋಕ್ಷ ಪ್ರದತ್ವದಲ್ಲಿ ಶ್ರೀವಿಶಿಷ್ಟನಾದ ಭಗವಂತನಿಗೆ ಹೇಗೆ ಅನ್ವಯವೋ ಹಾಗೆಯೇ ಮೋಕ್ಷೋಪಾಯತ್ವದಲ್ಲಿಯೂ ಶ್ರೀದೇವಿ ಅವಿನಾಭಾವದಿಂದ ಕೂಡಿರುವುದರಿಂದ ಉಪಾಯದ್ವಿತ್ವ ಪ್ರಸಂಗವಿಲ್ಲ.

(6) ವಾತ್ಸಲ್ಯ

ವಾತ್ಸಲ್ಯಕ್ಕೆ ದೋಷ ಭೋಗ್ಯತ್ವ ಎಂದು ಅರ್ಥ. ಮಾಲೆ ಚಂದನಗಳನ್ನು ಹೇಗೋ ಹಾಗೆ ಭಗವಂತನು ಪ್ರಪನ್ನರ ದೋಷಗಳನ್ನು ಸ್ವೀಕರಿಸುತ್ತಾನೆ.

ವಾತ್ಸಲ್ಯವೆಂದರೆ ದೋಷ ಅದರ್ಶಿತ್ವವೇ ವಿನಾ ಭೋಗ್ಯತ್ಯವಲ್ಲ- 'ಅವಿಜ್ಞಾತಾ' ಎಂದು ಅದಕ್ಕೇ ಹೇಳಿದ್ದಾರೆ ಅವನನ್ನು-ಭಕ್ತದೋಷಗಳನ್ನು ಅವನು ಕಾಣುವುದಿಲ್ಲವೆಂದು ಅರ್ಥ. ಇಲ್ಲದಿದ್ದರೆ ಭಕ್ತನು ದೋಷವನ್ನೇ ಸಂಪಾದಿಸಬೇಕಾಗುತ್ತದೆ ಹಾಗೂ ಪ್ರಾಯಶ್ಚಿತ್ತ ವಿಧಿಗಳೆಲ್ಲ ವ್ಯರ್ಥವಾಗುತ್ತವೆ.

acharya.org

(7) ದಯಾ

ದಯೆಯೆಂದರೆ ಪರದುಃಖದುಃಖಿತ್ವ. ಇನ್ನೊಬ್ಬರ ದುಃಖದಲ್ಲಿ ತಾನೂ ದುಃಖಿಸುವುದೇ ದಯೆ. ಶ್ರೀರಾಮನ ಗುಣವರ್ಣನೆಯಲ್ಲಿ ಇದು ಸ್ಪಷ್ಟವಾಗಿದೆ. 'ಭೃಶಂ ಭವತಿ ದುಃಖಿತಃ' ಎಂಬಲ್ಲಿ.

ದಯೆ ಎಂಬುವುದು ಪರದುಃಖ ಅಸಹಿಷ್ಣುತ್ವವೇ ವಿನಾ ದುಃಖಿತ್ವವಲ್ಲ. ಇದು ಅವರ ದುಃಖವನ್ನು ನಿರಾಕರಣೆ ಮಾಡುವ ಇಚ್ಛಾಪರ್ಯಂತವಾಗುತ್ತದೆ. ನಿರಾಕರಣೆಯಲ್ಲಿಯೂ ಫಲಿಸುತ್ತದೆ. ಇಲ್ಲದಿದ್ದರೆ ಭಗವಂತನು ನಿತ್ಯದುಃಖಿ ಆಗಬೇಕಾಗುತ್ತದೆ. ಏಕೆಂದರೆ ಲೋಕದಲ್ಲಿ ಅನಂತ ಜೀವರುಗಳು ಪ್ರಾಯಃ ದುಃಖಿಗಳಾಗಿದ್ದಾರೆ. ರಾಮನದು ದುಃಖ ಅಭಿನಯ ಮಾತ್ರ ಎಂದುತಿಳಿಯಬೇಕು.

(8) ನ್ಯಾಸಃ ಅಥವಾ ಪ್ರಪತ್ತಿ

ಭಗವಂತನು ರಕ್ಷೋನ್ಮುಖನಾಗಿರುವಾಗ ಅವನನ್ನು ತಡೆಯದೆ ಇರುವುದಾಗಲೀ, ಅವನಿಗೇ ನಾವು ಪರತಂತ್ರರೆಂಬ ನಿಶ್ಚಯ ಜ್ಞಾನವನ್ನು ಹೊಂದಿರುವುದಾಗಲೀ ಪ್ರಪತ್ತಿ ಎನ್ನಿಸುವುದು. ಆತ್ಮಸಮರ್ಪಣ ರೂಪವಾದ ಮಾನಸೀ ಕ್ರಿಯೆ ಅದಲ್ಲ. ಅತ್ಯಂತ ಪರತಂತ್ರನಾದವನು ಯಾವ ಅನುಷ್ಠಾನವನ್ನೂ ಮಾಡುವುದಕ್ಕೆ ತಕ್ಕವನಲ್ಲ. ಒಡೆಯನು ತನ್ನದೇ ಆದ ವಸ್ತುವನ್ನು ಕಾಪಾಡಿಕೊಳ್ಳುವುದರಲ್ಲಿ ಉನ್ಮುಖನಾಗಿರುವಾಗ ನಮ್ಮ ಅನುಷ್ಠಾನ ವ್ಯರ್ಥ.

ಆತ್ಮವಸ್ತುವನ್ನು ಭಗವಂತನಿಗೆ ಒಪ್ಪಿಸುವ ಅನುಷ್ಠಾನವೇ ಪ್ರಪತ್ತಿ. ಕೇವಲ ಪಾರತಂತ್ರ್ಯ ಜ್ಞಾನವಲ್ಲ. ರಕ್ಷಾಪೇಕ್ಷೆಯನ್ನು ನಾವು ವ್ಯಕ್ತಪಡಿಸಬೇಕೆಂದು ವಿಧಿಸಿದೆ. ಶರಣು ಹೊಂದಬೇಕು ಎಂದು ಶ್ರುತಿ ವಿಧಿಸುತ್ತಿದೆ. ಅನಿವಾರಣ ಮಾತ್ರವೇ ನ್ಯಾಸವಲ್ಲ. ಏಕೆಂದರೆನಿವಾರಣಮಾಡಲು ಸಾಮರ್ಥ್ಯವಿಲ್ಲದ ಅಚಿತ್ತುಗಳಿಗೆ ನಿತ್ಯಮುಕ್ತತ್ವ ಉಂಟಾಗಬೇಕಾಗುವುದು. ಚೇತನರೂ ನಿವಾರಣ ಮಾಡಲು ಶಕ್ತರಿಲ್ಲದಿದ್ದಾಗ ನಿದ್ರಾವಸ್ಥೆ ಮುಂತಾದುವಲ್ಲಿ ಮೋಕ್ಷವುಂಟಾಗಬೇಕಾಗುತ್ತದೆ.

(9) ನ್ಯಾಸಕರ್ತಾ

ಗೀತೆಯಲ್ಲಿ ವಿವಿಧ ಧರ್ಮಗಳನ್ನು ಭಕ್ತಿಗೆ ಅಂಗವಾಗಿ ವಿಧಿಸಿ ಕೊನೆಗೆ ಸರ್ವಧರ್ಮಪರಿತ್ಯಾಗದ ಮೂಲಕ ಭಕ್ತಿಯಲ್ಲಿ ವಿಶ್ವಾಸ ಮಾಂದ್ಯವುಂಟಾಗುವಂತೆ ಮಾಡಿದೆ. ಅಂತು ವಿಶ್ವಾಸಮಾಂದ್ಯವನ್ನುಳ್ಳವನೇ ಪ್ರಪತ್ತಿಗೆ ಅಧಿಕಾರಿ. ಪ್ರಪತ್ತಿಯನ್ನು ಪ್ರತಿಪಾದಿಸುವ ದ್ರಾವಿಡ ವೇದಾಂತಾಧ್ಯಾಯಿಯು ಪ್ರಪನ್ನ ಇತರನಲ್ಲ.

ಅನನ್ಯಗತಿಯೂ ಅಕಿಂಚನನೂ ವಿಳಂಬವನ್ನು ಸಹಿಸಲಾರದವನೂ ಪ್ರಪತ್ತಿಗೆ ಅಧಿಕಾರಿ. ಜ್ಞಾನವಿರಕ್ತ್ಯಾದಿಗಳುಳ್ಳವನೂ ವಿಲಂಬಕ್ಷಮನೂ ಭಕ್ತಿಗೆ ಅಧಿಕಾರಿ. ಭಕ್ತಿಯಲ್ಲಿ ವಿಶ್ವಾಸ ಮಾಂದ್ಯ ಪ್ರಪತ್ತಿಗೆ ಅಧಿಕಾರವಲ್ಲ. ಪ್ರಪತ್ತಿಗರ್ಭಿತವಾದ ಸೂಕ್ತಿಪಠಣದಿಂದ ಯಾರೂ ಪ್ರಪನ್ನನಾಗುವುದಿಲ್ಲ. ಆಕಿಂಚನ್ಯಾದಿ ವಿಶಿಷ್ಟನೇ ಪ್ರಪತ್ತಿಗೆ ಅಧಿಕಾರಿ.

acharya.org

(10) ಧರ್ಮತ್ಯಾಗ

‘ಸರ್ವಧರ್ಮಾನ್ಪರಿತ್ಯಜ್ಯ’ ಎಂಬ ಶ್ಲೋಕದಲ್ಲಿ ಎಲ್ಲ ಧರ್ಮಗಳನ್ನೂ ತ್ಯಜಿಸಬೇಕೆಂಬ ವಿಧಿ ಇರುವುದರಿಂದ ಪ್ರಪನ್ನರು ಕಾಮ್ಯಕರ್ಮಗಳನ್ನು ಹೇಗೋ ಹಾಗೆ ನಿತ್ಯನೈಮಿತ್ತಿಕ ಕರ್ಮಗಳನ್ನೂ ತ್ಯಾಗಮಾಡಬೇಕು. ಸರ್ವಧರ್ಮತ್ಯಾಗ ಪ್ರಪತ್ತ್ಯಂಗಕ್ಕೆ ವಿಧಿಸಲ್ಪಟ್ಟಿರುವುದರಿಂದ ಪ್ರಪತ್ತಿಯು ಫಲಿಸಲು ನಿತ್ಯನೈಮಿತ್ತಿಕ ಕರ್ಮಗಳನ್ನು ಅವಶ್ಯವಾಗಿ ಪರಿತ್ಯಜಿಸಬೇಕು.

ನಿತ್ಯನೈಮಿತ್ತಿಕ ಕರ್ಮಗಳು ವಿಹಿತವಾಗಿರುವುದರಿಂದಲೂ, ಮಾಡದಿದ್ದರೆ ಪಾಪ ಸಂಭವಿಸುವುದರಿಂದಲೂ ಇವುಗಳನ್ನು ಬಿಡಕೂಡದು. ದೇವತಾಂತರ ಸಾಂಕರ್ಯ ಈ ಕರ್ಮಗಳಿಂದ ಉಂಟಾಗುವುದೆಂಬ ಭ್ರಮೆ ಕೂಡದು. ಏಕೆಂದರೆ ‘ಸಾಕ್ಷಾದಪ್ಯವಿರೋಧಂ ಜೈಮಿನಿಃ’ ಎಂಬುವ ಸೂತ್ರದಂತೆ ಎಲ್ಲ ಕರ್ಮಗಳೂ ಭಗವತ್ಪರವಾಗಿವೆ ಎಂದು ಹೇಳಬಹುದು. ಸರ್ವಧರ್ಮಪರಿತ್ಯಾಗ ಫಲತ್ಯಾಗವನ್ನು ಸೂಚಿಸುವುದಾಗಿದೆ.

(11) ವಿರೋಧಃ

ಭಗವಂತನಿಗೆ ಶೇಷಭೂತರಾದ ನಮಗೆ ಉಪಾಸನೆ ಸ್ವರೂಪವಿರುದ್ಧವಾದುದು. ಆದುದರಿಂದ ಅದರಲ್ಲಿ ಪ್ರವೃತ್ತಿ ಕೂಡದು. ಜ್ಞಾನಶಕ್ತ್ಯಾದ್ಯಭಾವದಿಂದ ಉಪಾಸನ ಕೂಡದೆಂಬುದಿಲ್ಲ.

ಉಪಾಸನ ಸ್ವರೂಪವಿರುದ್ಧವಲ್ಲ. ಆತ್ಮಯಾಥಾತ್ಮ್ಯಜ್ಞಾನವುಳ್ಳವರಿಗೆ ಉಪಾಸನ ವಿಹಿತವೇ ಆದುದು. ಉಪಾಸನ ಆಕಿಂಚನ್ಯವಿರುದ್ಧವೇ ವಿನಾ ಸ್ವರೂಪವಿರುದ್ಧವಲ್ಲ.

(12) ಸ್ವವಿಹಿತವ್

ನಮ್ಮನ್ನುದ್ದೇಶಿಸಿ ವಿಧಿಸಿರುವ ವರ್ಣಾಶ್ರಮ ಧರ್ಮಗಳು ಲೋಕಸಂಗ್ರಹಕ್ಕಾಗಿಯೇ ವಿನಾ ಅವಶ್ಯಕರ್ತವ್ಯಗಳಲ್ಲ. ಪ್ರಪನ್ನ ಅವುಗಳನ್ನು ತ್ಯಜಿಸಬೇಕೆಂದು ಶಾಸ್ತ್ರ ವಿಧಿಸಿಯೇ ಇದೆ. ಇವುಗಳನ್ನಾಚರಿಸುವುದು ನಿಷ್ಫಲ. ಪಾತಕವನ್ನು ಹೇಗೋ ಹಾಗೆ ಅವುಗಳ ಸವಾಸನ ತ್ಯಾಗ ಮಾಡಬೇಕು.

ವೈದಿಕಾಚಾರವನ್ನು ಮನೀಷಿ ಮನಸ್ಸಿನಿಂದಲೂ ಮೀರಬಾರದು ಎಂದಿದೆ. ವರ್ಣಾಶ್ರಮ ಧರ್ಮ ಆಚರಿಸದೆ ಇದ್ದರೆ ಅಪರಾಧವಾಗುವುದು. ಆದುದರಿಂದ ಅವುಗಳು ಅನುಷ್ಠೇಯವೇ ವಿನಾ ಪರಿತ್ಯಾಜ್ಯವಲ್ಲ.

(13) ನ್ಯಾಸಾಂಗಾನಿ

ಆನುಕೂಲ್ಯಸಂಕಲ್ಪಾದಿಗಳು ನ್ಯಾಸಕ್ಕೆ ಅಂಗಗಳು ಎಂದು ಹೇಳಿದ್ದರೂ ಅವುಗಳನ್ನು ಪ್ರಪನ್ನ ಅನುಷ್ಠಿಸಬೇಕಾದ ಅವಶ್ಯಕತೆ ಇಲ್ಲ. ಯಥಾಸಂಭವ ಅವು ಗ್ರಾಹ್ಯಗಳು. ಕಾಮ್ಯಕರ್ಮಗಳಲ್ಲಿ ಸಾಂಗಾನುಷ್ಠಾನ ಅವಶ್ಯಕ. ಮುಮುಕ್ಷುಗಳಿಗೆ ಫಲಾಭಿಸಂಧಿ

ಅಂಗಗಳು ವಿಹಿತವಾದ ಕಾರಣ ನಿಯಮೇನ ಇವುಗಳನ್ನನುಷ್ಠಿಸಲೇಬೇಕು. ಪ್ರಧಾನ ಫಲ ಎಂಬ ಅಭಿಸಂಧಿಯನ್ನು ತ್ಯಜಿಸಬೇಕೆಂಬುವುದಕ್ಕಾಗಿ ಫಲಸಂಗ ತ್ಯಾಗ ಬಂದಿದೆ. ಆದರೆ ಭಗವದನುಭವ ಮತ್ತು ಕೈಂಕರ್ಯ ಮೊದಲಾದ ಫಲಸಂಬಂಧ ತಪ್ಪಿದುದಲ್ಲ. ಅಂಥ

acharya.org

ಇಲ್ಲದೆ ಇರುವ ಕಾರಣ ಈ ಅಂಗಗಳು ನಿಯಮೇನ ಅನುಷ್ಠಿಸಬೇಕಾದವು ಎಂಬುದು ಸಲ್ಲದು. ಫಲಾವಾಪ್ತಿಗಾಗಿ ಸಾಂಗಪ್ರಪದನಾನುಷ್ಠಾನ ಆವಶ್ಯಕವೇ ಆಗಿದೆ.

(14) ನ್ಯಾಸದ ಹೇತುತ್ವ

'ನಾಯಮಾತ್ಮಾ ಪ್ರವಚನೇನ ಲಭ್ಯಃ' ಮೊದಲಾದಶ್ರುತಿಗನುಸಾರವಾಗಿ ಸಿದ್ಧೋಪಾಯನಾದ ಭಗವಂತನೇ ಸಾಧನ. ಪ್ರಪತ್ತಿಗೆ ಆ ಕಾರಣದಿಂದಲೇ ಉಪಾಯತ್ವ ಇಲ್ಲ. ಅಧಿಕಾರಿವಿಶೇಷಣವಾಗಿ ಅದು ಅಪೇಕ್ಷಿತ. ಅಷ್ಟೇ.

ಪ್ರಪದನಕ್ಕೂ ಸಾಧನತ್ವ ಉಂಟು. 'ಉಪಾಯಃ ಸುಕರಶ್ಚಾಯಂ ದುಷ್ಕರಶ್ಚ ಮತೋ ಮಮ' ಎಂದು ಇದನ್ನು ಸೂಚಿಸಿದೆ. 'ನಾಯಮಾತ್ಮಾ' ಎಂಬ ಶ್ರುತಿಯ ತಾತ್ಪರ್ಯ ಸಿದ್ಧೋಪಾಯಕ್ಕೆ ಪ್ರಾಧಾನ್ಯ ಹೇಳುವುದೇ ಆಗಿದೆ. ಇತರೋಪಾಯ ನಿಷೇಧವಲ್ಲ. ಸಾಧನ ದ್ವಿತ್ವದಿಂದ ದೋಷವಿಲ್ಲ. ಶಾಸ್ತ್ರದಲ್ಲಿ ಇದನ್ನು ಹೇಳಿಯೇ ಇದೆ. ಪ್ರಪತ್ತಿಗೆ ಉಪಾಯತ್ವ ಇಲ್ಲವೆಂದರೆ ಭಕ್ತಿಗೂ ಉಪಾಯತ್ವವಿಲ್ಲವೆಂದಾಗುತ್ತೆ. ಜ್ಯೋತಿಷ್ಟೋಮಾದಿಗಳಿಗೂ ಉಪಾಯತ್ವ ತಪ್ಪಿಹೋಗುತ್ತದೆ. ಎಲ್ಲವೂ ಭಗವಂತನ ಪ್ರಸಾದದ್ವಾರಾ ಫಲಪ್ರದವಾಗುವ ಕಾರಣ, ಅಯಾ ಕರ್ಮಗಳಿಂದ ಆರಾಧಿತನಾದ ಭಗವಂತ ಫಲಪ್ರದಾನ ಮಾಡುವನೆಂಬುದು ಸಿದ್ಧಾಂತ.

(15) ಪ್ರಾಯಶ್ಚಿತ್ತವಿಧಿ

ಪ್ರಪನ್ನ ಬುದ್ಧಿಪೂರ್ವಕ ಪಾಪ ಮಾಡಿದರೂ ಭಗವಂತನ ದಯೆಯೇ ಪ್ರಾಯಶ್ಚಿತ್ತ ಸ್ಥಾನದಲ್ಲಿ ನಿಂತು ಪಾಪವನ್ನು ಕಳೆಯುತ್ತದೆ. ಕೃಚ್ಛ್ರ ಚಾಂದ್ರಾಯಣಾದಿಗಳನ್ನು ಮಾಡಬೇಕಾದುದಿಲ್ಲ. 'ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ' ಎಂಬ ಸೂಕ್ತಿಯ ಸರ್ವಶಬ್ದ ಪೂರ್ವಾಘದಂತೆ ಉತ್ತರಾಘವನ್ನೂ ಸೂಚಿಸುತ್ತೆ. ಹೀಗಿದ್ದರೂ ಪ್ರಾಯಶ್ಚಿತ್ತ ಮಾಡಬೇಕೆಂಬ ಆಸೆ ಉಂಟಾದರೂ ಆಗ ಪುನಃ ಪ್ರಪತ್ತಿ ಮಾಡಬೇಕಷ್ಟೆ. ಸ್ಮೃತಿಗಳಲ್ಲಿ ಹೇಳಿರುವ ಪ್ರಾಯಶ್ಚಿತ್ತ ಮಾಡಬೇಕಾದುದಿಲ್ಲ.

ಬುದ್ಧಿಪೂರ್ವಕವಾದ ಉತ್ತರಾಘ ಸಂಭವಸಿದರೆ ಶಕ್ತಿಗನುಸಾರ ಸ್ಮೃತ್ಯುಕ್ತವಾದ ಪ್ರಾಯಶ್ಚಿತ್ತ ಮಾಡಲೇಬೇಕು. ಶಕ್ತಿ ಇಲ್ಲದವನಿಗೆ ಪ್ರಪತ್ತಿಯೇ ವಿಧಿಸಿದೆ. ಹಾಗಿಲ್ಲದೆ ಹೋದರೆ ಸ್ಮೃತಿಗಳಲ್ಲಿ ವಿಧಿಸಿರುವ ಪ್ರಾಯಶ್ಚಿತ್ತಾದಿಗಳು ವ್ಯರ್ಥವೇ ಆದಾವು. ಮುಂದೆ ಉಂಟಾಗುವ ಪಾಪವನ್ನು ಕಳೆಯಲು ಮೊದಲೇ ಪ್ರಪತ್ತಿ ಮಾಡಿದೆ ಎಂದು ಹೇಳುವುದಕ್ಕಾಗುವುದಿಲ್ಲ.

acharya.org

(16) ತದೀಯಂ ಭಜನಮ್

'ನ ಶೂದ್ರಾ ಭಗವದ್ಭಕ್ತಾಃ' 'ವಿಪ್ರಾಃ ಭಾಗವತಾಃ ಸ್ಮೃತಾಃ' 'ಚಂಡಾಲಮಪಿ ವೃತ್ತಸ್ಥಂ ತಂ ದೇವಾ ಬ್ರಾಹ್ಮಣಂ ವಿದುಃ' ಮೊದಲಾದ ಶಾಸ್ತ್ರಗಳಿಂದ ಭಾಗವತರಾದ ಶೂದ್ರ ಚಂಡಾಲರೂ ಸಹ ವಿಪ್ರರಿಂದ ವಂದನಾದಿಗಳಿಂದ ಪೂಜಿಸಲ್ಪಡಬೇಕು. ಅನಾದರಣೆ ಮಾಡಲ್ಪಡಬಾರದು.

ಶೂದ್ರಾದಿಗಳು ಭಾಗವತರಾಗಿದ್ದರೂ ವಂದನೀಯರಲ್ಲ. ಆಶೀರ್ವಚನ, ಸಾದರ ಸಂಭಾಷಣ ಮೊದಲಾದವುಗಳಿಂದ ಸಂತೋಷಣೀಯರು. ದೇಹಾಶ್ರಿತವಾದ ಜಾತಿ ಶರೀರ ಬೀಳುವವರೆಗೂ ಇದ್ದೇ ಇರುತ್ತದೆ. ಭಾಗವತ ಶೂದ್ರರು ಇತರ ಶೂದ್ರರಿಗಿಂತ ಉತ್ತಮರೇ ಸರಿ. ಆದರೂ ಶಾಸ್ತ್ರ ಮತ್ತು ಅಧಿಕಾರ ಇವುಗಳಿಗನುಗುಣವಾಗಿ ಅವರು ಗೌರವಕ್ಕೆ ಪಾತ್ರರು.

(17) ಅಣುವ್ಯಾಪ್ತಿಃ

ಅಣುವಾದ ಜೀವನಲ್ಲಿ ಪರಮಾತ್ಮನು ಹೇಗೆ ವ್ಯಾಪಿಸಿರಬಹುದು ? ಜೀವನು ನಿರವಯವವಾದ್ದರಿಂದ 'ಅಂತಃಪ್ರವಿಷ್ಟಃ ಶಾಸ್ತಾ ಜನಾನಾಂ ಸರ್ವಾತ್ಮಾ' ಎಂಬುವುದಕ್ಕನುಸಾರ ಹೇಗೆ ಅಂತಃಪ್ರವೇಶವಾಗಬಹುದು ಎಂದರೆ ಈಶ್ವರನ ಅಘಟನ ಘಟನಾ ಸಾಮರ್ಥ್ಯದಿಂದ ಅಂತಃಪ್ರವೇಶ ಶಕ್ಯವೆಂದು ಹೇಳಬೇಕು.

ಶಾಸ್ತ್ರಾರ್ಥ ನಿರ್ವಾಹ ಮಾಡುವಾಗ ಅಬಾಧಿತವಾದ ಅರ್ಥ ಹೇಳಬೇಕು. ಪರಪಕ್ಷದವರು ತಮ್ಮಲ್ಲಿನ ದೋಷಕ್ಕೆ ಹೀಗೆಯೇ 'ಅಘಟಿತ ಘಟನಾ ಶಕ್ತಿ' ಎಂದು ಹೇಳಿ ದೋಷವಿಲ್ಲವೆಂದು ಒಂದೊಂದಕ್ಕೂ ಹೇಳಬಹುದಷ್ಟೇ ? ಅಣುವಾದ ಜೀವನಲ್ಲಿ ಈಶ್ವರನ ವ್ಯಾಪ್ತಿ ಎಂದರೆ ದಶದಿಕ್ಸಂಬಂಧ ಎನ್ನಬೇಕು; 'ಸಪ್ರತಿಘತ್ವಮಂತರಾ ವ್ಯಾಪ್ತಿಃ' ಎಂದು ಹೇಳಬೇಕು. ಈಶ್ವರ ವ್ಯಾಪ್ತಿಯಿಂದ ರಹಿತವಾದ ಭಾಗ ಜೀವನದಲ್ಲಿ ಎಂದು ಹೇಳಬೇಕು.

(18) ಕೈವಲ್ಯಮ್

ಭಗವದನುಭವವಿಲ್ಲದ ಆತ್ಮಮಾತ್ರಾನುಭವ ಕೈವಲ್ಯ. ಇವರೂ ಪರಮಪದದ ಒಂದು ಮೂಲೆಯಲ್ಲಿರುವರು. ಅದು ನಿತ್ಯವಾದ ಸ್ಥಾನವೇ ಆಗಿದೆ. ಕೇವಲ ಜೀವೋಪಾಸಕರು ಅರ್ಚಿರಾದಿಯಲ್ಲಿ ಹೋಗಿ ಪುನರಾವೃತ್ತಿ ಇಲ್ಲದೆ ಇರುವರೆಂದು ಗೀತಾಭಾಷ್ಯದಲ್ಲಿ ನಿರೂಪಿಸಿದೆ. ಯಾವಾಗಲಾದರೂ ಮೋಕ್ಷೋಪಾಯದ ಅವಕಾಶ ಇರುವ ಸಂಸಾರಕ್ಕಿಂತ ಈ ಕೈವಲ್ಯ ಎಂದೆಂದಿಗೂ ಭಗವದನುಭವ ದೂರವಾಗಿ ನರಕಪ್ರಾಯವಾಗಿದೆ.

ಕೇವಲಾತ್ಮಾನುಭವ ಮಾಡುವವರು, ಪ್ರಕೃತಿ ಮಂಡಲದಲ್ಲಿಯೇ ಇರುವವರು. ಈ ಅನುಭವ ನಶ್ವರವೇ ಆದುದು. ಗೀತಾಭಾಷ್ಯದಲ್ಲಿ ಹೇಳಿರುವ ಆತ್ಮೋಪಾಸಕ ಬ್ರಹ್ಮಾತ್ಮಕ-ಸ್ವಾತ್ಮೋಪಾಸಕನೇ ವಿನಾ ಕೇವಲಾತ್ಮೋಪಾಸಕನಲ್ಲ. ಪಂಚಾಗ್ನಿವಿದ್ಯಾನಿಷ್ಠರಂತೆ ಇವರಿಗೆ ಅರ್ಚಿರಾದಿಗಮನ ಮತ್ತು ಅಪುನರಾವೃತ್ತಿ ಸಂಭವವುಂಟು. ಆತ್ಮಾನುಭವದಿಂದ ಮುಂದೆ ಇವರು ಉಪಾಸನೆ ಮಾಡಿ ಭಗವಂತನನ್ನು ಸೇರುತ್ತಾರೆ. ಈ ಕೇವಲನೂ ಬ್ರಹ್ಮೋಪಾಸಕನೇ ಆಗಿದ್ದಾನೆ. ಆದುದರಿಂದ ಈ ಅವಸ್ಥೆ ಕೈವಲ್ಯವೆಂದು ಹೇಳಲಾಗುವುದಿಲ್ಲ.

acharya.org

ಹೀಗೆ ಈ ಹದಿನೆಂಟು ಅಂಶಗಳಲ್ಲಿ ಈ ಎರಡು ಪಂಗಡಗಳಲ್ಲಿ ಭೇದವಿದ್ದರೂ ಪ್ರಧಾನ ಪ್ರತಿತಂತ್ರಸಿದ್ಧಾಂತದಲ್ಲಿ ಇವರಲ್ಲಿ ಪೂರ್ಣವಾದ ಒಮ್ಮತವೇ ಇದೆ ಎಂದು ತಿಳಿಯಬೇಕು.

acharya.org

೪

ಅನುಬಂಧ

ವಿಶಿಷ್ಟಾದ್ವೈತ ಸಿದ್ಧಾಂತವನ್ನರಿಯಲು ಅಧ್ಯಯನ ಮಾಡಬೇಕಾದ ಸಿದ್ಧಾಂತ ಗ್ರಂಥಗಳು.

೧ ಆಳ್ವಾರರುಗಳ ದ್ರಾವಿಡ ಪ್ರಬಂಧಗಳು.

೨ ಯಾಮುನರು— ಸಿದ್ಧಿತ್ರಯ
ಗೀತಾರ್ಥಸಂಗ್ರಹ
ಆಗಮಪ್ರಾಮಾಣ್ಯ
ಸ್ತೋತ್ರರತ್ನ
ಚತುಃಶ್ಲೋಕೀ

೩ ರಾಮಾನುಜರು— ಶ್ರೀಭಾಷ್ಯ
ವೇದಾಂತದೀಪ
ವೇದಾಂತಸಾರ
ಗೀತಾಭಾಷ್ಯ
ವೇದಾರ್ಥಸಂಗ್ರಹ
ಗದ್ಯತ್ರಯ
ನಿತ್ಯಗ್ರಂಥ

೪ ಪರಾಶರ ಭಟ್ಟರು— ವಿಷ್ಣುಸಹಸ್ರನಾಮ ಭಾಷ್ಯ

೫ ತಿರುಕ್ಕುರುಹೈಪ್ಪಿರಾನ್ ಪಿಳ್ಳಾನ್— ಆರಾಯಿರಪ್ಪಡಿ

೬ ನಡಾದೂರ್ ಅಮ್ಮಾಳ್— ತತ್ತ್ವಸಾರ

೭ ಸುದರ್ಶನ ಸೂರಿ— ಶ್ರುತಪ್ರಕಾಶಿಕಾ
ಶ್ರುತಪ್ರದೀಪಿಕಾ
ಶರಣಾಗತಿಗದ್ಯ ಭಾಷ್ಯ
ತಾತ್ಪರ್ಯದೀಪಿಕಾ

೮ ಆತ್ರೇಯ ರಾಮಾನುಜರು— ನ್ಯಾಯಕುಲಿಶ

೯ ಮೇಘನಾದಾರಿ ಸೂರಿ— ನಯದ್ಯುಮಣಿ

acharya.org

೯ ಪಿಳ್ಳೈಲೋಕಾಚಾರ್ಯರು— ಶ್ರೀವಚನಭೂಷಣ
ಮುಮುಕ್ಷುಪ್ಪಡಿ

೧೦ ಪೆರಿಯವಾಚ್ಚಾನ್ ಪಿಳ್ಳೈ— ಶರಣಾಗತಿ ಗದ್ಯಭಾಷ್ಯ
ದಿವ್ಯಪ್ರಬಂಧ ಭಾಷ್ಯ

೧೧ ವೇದಾಂತ ದೇಶಿಕರು— ನ್ಯಾಯಸಿದ್ಧಾಂಜನ
ನ್ಯಾಯಪರಿಶುದ್ಧಿ
ತತ್ತ್ವಮುಕ್ತಾಕಲಾಪ
ಸರ್ವಾರ್ಥಸಿದ್ಧಿ
ಶತದೂಷಣೀ
ತತ್ತ್ವಟೀಕಾ
ತಾತ್ಪರ್ಯಚಂದ್ರಿಕಾ
ಈಶಾವಾಸ್ಯ ಭಾಷ್ಯ
ಸ್ತೋತ್ರರತ್ನ ಭಾಷ್ಯ
ರಹಸ್ಯರಕ್ಷಾ
ಪಾಂಚರಾತ್ರರಕ್ಷಾ
ಸಚ್ಚರಿತ್ರರಕ್ಷಾ
ಅಧಿಕರಣಸಾರಾವಳೀ
ದ್ರವಿಡೋಪನಿಷತ್ಸಾರ
ದ್ರವಿಡೋಪನಿಷತ್ತಾತ್ಪರ್ಯ ರತ್ನಾವಳೀ
ರಹಸ್ಯತ್ರಯಸಾರ

೧೨ ನಯನಾಚಾರ್ಯ— ಅಧಿಕರಣಸಾರಾವಳೀ ಭಾಷ್ಯ

೧೩ ಪ್ರತಿವಾದಿಭಯಂಕರಂ ಅಣ್ಣನ್— ಚಂಡಮಾರುತ

೧೪ ವಡಕ್ಕು ತಿರುವೀಧಿಪಿಳ್ಳೈ— ಈಡುಮುಪ್ಪತ್ತಾರಾಯಿರಪ್ಪಡಿ

೧೫ ರಂಗರಾಮಾನುಜ ಮುನಿಗಳು— ದಶೋಪನಿಷದ್ಭಾಷ್ಯಗಳು
ವಿಷಯವಾಕ್ಯದೀಪಿಕೆ
ದ್ರಾವಿಡ ಪ್ರಬಂಧ ಭಾಷ್ಯ.

೧೬ ಅಭಿನವರಂಗನಾಥ ಪರಕಾಲ ಸ್ವಾಮಿಗಳು ತತ್ತ್ವಮುಕ್ತಾಕಲಾಪ ಭಾಷ್ಯ
ಗೂಢಾರ್ಥ ಸಂಗ್ರಹ

(ಅತಿಮುಖ್ಯವಾದ ಗ್ರಂಥಗಳನ್ನು ಮಾತ್ರ ಇಲ್ಲಿ ಹೆಸರಿಸಿದೆ)

acharya.org

ಶುದ್ಧಾಶುದ್ಧ ಪತ್ರಿಕೆ

ಪುಟ	ಸಾಲು	ಅಶುದ್ಧ	ಶುದ್ಧ
3	16	ಸಂಭಂಧ	ಸಂಬಂಧ
6	8	ಉದ್ಬರಿಸಿವೆ	ಉದ್ಧರಿಸಿವೆ
16	24	ಫುರುಪಾರ್ಥ	ಪುರುಷಾರ್ಥ
17	10	ಜ್ಞಾನಪವರ್ತಕ	ಜ್ಞಾನಪ್ರವರ್ತಕ
17	29	ಅವಾದಿ	ಅನಾದಿ
32	16	ಅಧ್ಯಯೇನ	ಅಧ್ಯಯನ
37	28	ತಂತ	ತಂತ್ರ
37	30	ಪ್ರಪ್ರ	ಪ್ರಪ
39	18	ಬ್ರಹಾತ್ಮೈ	ಬ್ರಹ್ಮಾತ್ಮೈಕ್ಯ
48	22	ಅಜಾರ್ಯ	ಅಚಾರ್ಯ
52	10	ಪ್ರವೃತ್ತಿ	ಪ್ರಪತ್ತಿ
59	11	ಸ್ವರೂಪವನೂ	ಸ್ವರೂಪವನ್ನೂ
73	4	ಪವಾರ್ಥ	ಪದಾರ್ಥ
74	26	ಜ್ಞಾನನಸ್ವರೂಪ	ಜ್ಞಾನಸ್ವರೂಪ
76	6	ಪ್ರಕತಿಗಿಂತ	ಪ್ರಕೃತಿಗಿಂತ
78	30	ಪ್ರತ್ರಭಿಜ್ಞೆ	ಪ್ರತ್ಯಭಿಜ್ಞೆ
81	27	ಧರ್ಮೆ	ಧರ್ಮಿ
81	29	ಆದೇಯತ್ವ	ಆಧೇಯತ್ವ
85	23	ಸಾದನಗಳು	ಸಾಧನಗಳು
87	12	ನಿಗುಣಬ್ರಹ್ಮ	ನಿರ್ಗುಣಬ್ರಹ್ಮ
94	10	ಚಿದಚಿದ್ವಿಶಿಷ್ಟತ	ಚಿದಚಿದ್ವಿಶಿಷ್ಟತ್ವ
102	24	ಮನಸ್ಸನು	ಮನಸ್ಸನ್ನು
105	24	ಅಭಿದಾನವಾಗಿ	ಅಭಿಧಾನವಾಗಿ
106	4	ಸ್ವಾಮಿತಮೌಚಿತ್ಯ	ಸ್ವಾಮಿತ್ವಮೌಚಿತ್ಯಂ
114	13	ತೃಕ್ತ್ವಾ	ತ್ಯಕ್ತ್ವಾ
124	19	ಯಥಾತ್ಮ್ಯನು	ಯಾಥಾತ್ಮ್ಯನು
128	9	ಸ್ಥಿತಪ್ರಜ್ಞತಾಖಿಂ	ಸ್ಥಿತಪ್ರಜ್ಞತಾಖ್ಯಾಂ
137	7	ಸಂಬಂಧಿಸಿದ	ಸಂಬಂಧಿಸದ
146	7	ಶೃಣ್ವತ್ವಾಂ	ಶೃಣ್ವತಾಂ
156	24	ಪಲ್ಯೈ	ಫಲ್ಯೈ
158	18	ಭಗನಂತ	ಭಗವಂತ
172	21	ಸೂಚಿತ್ತದೆ	ಸೂಚಿಸುತ್ತದೆ.

acharya.org

172	21	ಆದುದೆಂಬುದವ್ನು	ಆದುದೆಂಬುದನ್ನು
175	22	ಅತ್ರಕ್ಷಾ	ಅತ್ರ ರಕ್ಷಾ
179	19	ಪಾಸಿಷ್ಠ	ಪಾಪಿಷ್ಠ
211	13	ವ್ಯಾಪ್ತಕವಾಗಿ	ವ್ಯಾಪಕವಾಗಿ
214	30	ಯಸ್ಮಿನ್ಸ್ಮೀಚ್ಛೇಪಿ	ಯಸ್ಮಿನ್ಸ್ಮಲ್ಲೀಚ್ಛೇಪಿ
216	1	ಪೂಜಾದಿಗಳನು	ಪೂಜಾದಿಗಳನ್ನು
228	22	ಈಶ್ವರನನು	ಈಶ್ವರನನ್ನು
246	12	ವಿಶಿಷ್ಟ್ಯಾದ್ವೈತ	ವಿಶಿಷ್ಟಾದ್ವೈತ
250	13	ಸಂಪರ್ಷಣೋ	ಸಂಕರ್ಷಣೋ
258	25	ಮಜಿಧುರ	ಮಧುರ

acharya.org

ರಾಮಾನುಜ ದರ್ಶನ

ರಾಮಾನುಜದರ್ಶನದ ಸ್ವರೂಪವನ್ನಿಲ್ಲಿ ಅತಿಸಂಗ್ರಹವಾಗಿ ನಿರೂಪಿಸುವ ಪ್ರಯತ್ನ ಮಾಡಿದೆ. ಈ ದರ್ಶನವನ್ನು ಪ್ರವರ್ತನ ಮಾಡಿದ ಮಹಾನುಭಾವರ ಸೂಕ್ಷ್ಮ ಪರಿಚಯವನ್ನೂ, ಭಗವದ್ರಾಮಾನುಜರ ದಿವ್ಯ ಜೀವನವನ್ನೂ ಹಿನ್ನಲೆಯಾಗಿ ಇಲ್ಲಿ ನಿರೂಪಿಸಿದೆ. ಪ್ರಕೃತಿ, ಕಾಲ, ಧರ್ಮಭೂತಜ್ಞಾನ, ನಿತ್ಯವಿಭೂತಿ, ಜೀವಾತ್ಮರು, ಪರಮಾತ್ಮಾ ಇವರ ಸ್ವರೂಪವನ್ನೂ, ಮೋಕ್ಷೋಪಾಯವಾದ ಭಕ್ತಿ ಮತ್ತು ಪ್ರಪತ್ತಿಗಳ ಸ್ವರೂಪವನ್ನೂ, ಮೋಕ್ಷಸ್ವರೂಪವನ್ನೂ, ವೈಷ್ಣವಧರ್ಮದ ಸ್ವರೂಪವನ್ನೂ ಸ್ಥೂಲವಾಗಿ ವಿವೇಚಿಸಿ ಈ ದರ್ಶನಕ್ಕೂ ಇತರ ದರ್ಶನಗಳಿಗೂ ಇರುವ ಸಾಮ್ಯ ವೈಷಮ್ಯಗಳನ್ನು ಗುರುತಿಸುವ ಪ್ರಯತ್ನ ಮಾಡಿದೆ. ಇದರಿಂದ ರಾಮಾನುಜ ದರ್ಶನದ ಸ್ಥೂಲ ಪರಿಚಯ ಆಗಬಹುದೆಂದು ಆಶಿಸಲಾಗಿದೆ. ಹೆಚ್ಚಿನ ವಿವರಗಳನ್ನು ಇಲ್ಲಿ ನಿರೂಪಿಸುವುದಕ್ಕಾಗದೆ ಹೋದರೂ ಪ್ರಾಯಶಃ ಎಲ್ಲಾ ಮುಖ್ಯಾಂಶಗಳನ್ನೂ ಸೂಚಿಸಲಾಗಿದೆ. ಸಹೃದಯರಾದ ಕನ್ನಡಿಗರು ಇದನ್ನು ವಿಶ್ವಾಸದಿಂದ ಸ್ವೀಕರಿಸುವರೆಂದು ನಂಬಿದ್ದೇನೆ.

ಡಾ॥ ಎನ್. ಎಸ್. ಅನಂತರಂಗಾಚಾರ್ಯ

ಡಿ. ವಿ. ಕೆ. ಮೂರ್ತಿ : ಪ್ರಕಾಶಕರು : ಮೈಸೂರು–೪

acharya.org